# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೧೫

## ಪ್ರಸ್ತಾವನೆ

ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶ್ಲಾಘ್ಯ ಉಪಕ್ರಮವಾದ ಜಾನಪದ ಸಂಪುಟ ಸರಣಿ ಯೋಜನೆಯಡಿ ಸಿದ್ಧಪಡಿಸಲಾದ ಹತ್ತು ಯಕ್ಷಗಾನ ಸಂಪುಟಗಳಲ್ಲಿ ಪ್ರಸ್ತುತ ಸಂಪುಟವೂ ಒಂದು. ಈ ಸಂಪುಟದ ಸಂಪಾದಕನ ನೆಲೆಯಲ್ಲಿ ಕೆಲವು ಮಾತುಗಳು.

ಇಲ್ಲಿ, ಅಜಪುರ (ಬ್ರಹ್ಮಾವರ) ವಿಷ್ಣುಕವಿಯ ವಿರಾಟಪರ್ವ, ದೇವಿದಾಸನ ಕೃಷ್ಣ ಸಂಧಾನ - ಭೀಷ್ಮಪರ್ವ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ವಿರಚಿತ ಭೀಷ್ಮಾರ್ಜುನ, ದೇವಿದಾಸನ ಅಭಿಮನ್ಯು ಕಾಳಗ-ಸೈಂಧವ ವಧೆ, ಉಡುಪಿ ರಾಜಗೋಪಾಲಾಚಾರ್ಯ ರಚಿತ ದ್ರೋಣಪರ್ವ, ಪಾಂಡೇಶ್ವರ ವೆಂಕಟ ಕವಿಯ ಕರ್ಣಾರ್ಜುನ, ಗೆರೆಸೊಪ್ಪೆ ಶಾಂತಪ್ಪಯ್ಯನ ಕರ್ಣಪರ್ವ, ಅಜ್ಞಾತ ಕವಿ ವಿರಚಿತ ಗದಾಪರ್ವ ಮತ್ತು ಕೆ.ಪಿ. ವೆಂಕಟಪ್ಪಶೆಟ್ಟರ ಸಾಹಸಭೀಮ ವಿಜಯ-ಹೀಗೆ ಒಂಬತ್ತು ಯಕ್ಷಗಾನ ಪ್ರಸಂಗಗಳು ಸಂಕಲಿತವಾಗಿದ್ದು, ಮಹಾಭಾರತ ಕಥೆಯ ವಿರಾಟಪರ್ವ, ಉದ್ಯೋಗ ಪರ್ವ ಮತ್ತು ಯುದ್ಧ ಪಂಚಕದ ಕಥಾವಸ್ತುಗಳನ್ನು ಒಳಗೊಂಡಿವೆ. ಇವೆಲ್ಲವೂ ಯಕ್ಷಗಾನ ಕ್ಷೇತ್ರದಲ್ಲಿ ಪ್ರಸಿದ್ಧವಾದ ಕೃತಿಗಳಾಗಿದ್ದು, ರಂಗದಲ್ಲಿ ಅಸಂಖ್ಯ ಪ್ರದರ್ಶನಗಳ ಮೂಲಕ ಜನಪ್ರಿಯವಾಗಿವೆ. ಈ ಪೈಕಿ ಒಂದೆರಡನ್ನು ಬಿಟ್ಟರೆ, ಉಳಿದೆಲ್ಲ ಪ್ರಸಂಗಗಳು ಕಲಾವಿದರಿಗೆ, ಬಳಕೆಯ ಬಾಯಿಪಾಠ ಪ್ರಸಂಗಗಳಾಗಿವೆ.

**ಯಕ್ಷಗಾನ ಸಾಹಿತ್ಯ :**

ಕನ್ನಡ ಸಾಹಿತ್ಯದ ಒಂದು ವಿಶಿಷ್ಟವಾದ ಮತ್ತು ಸಮೃದ್ಧವಾದ ವಿಭಾಗ ಯಕ್ಷಗಾನ ಸಾಹಿತ್ಯ. ಇದು ಮೂರು ವಿಧ.

ವಿವಿಧ ಕಥೆಗಳನ್ನು ಹಾಡುಗಬ್ಬಗಳಾಗಿ ನಿರೂಪಿಸುವ ಯಕ್ಷಗಾನಗಳು ಅರ್ಥಾತ್ ಪ್ರಸಂಗ ಕಾವ್ಯ ಸಾಹಿತ್ಯವೊಂದು. ಈ ಕೃತಿಗಳ ಸ್ಥೂಲವಾದ ಆಧಾರದಲ್ಲಿ ರಂಗದಲ್ಲಿ ನಿರ್ಮಿತವಾಗುವ ಅರ್ಥಗಾರಿಕೆಯೆಂಬ ವಾಚಿಕಾಭಿನಯ ಸಾಹಿತ್ಯವೊಂದು. ಯಕ್ಷಗಾನಕ್ಕೆ ಸಂಬಂಧಿಸಿದ ಸಂಶೋಧನೆ, ವಿಮರ್ಶೆಗಳುಳ್ಳ ಯಕ್ಷಗಾನ ವಿಮರ್ಶಾ ಸಾಹಿತ್ಯಭಾಗ ಇನ್ನೊಂದು, ಹೀಗೆ ಮೂರು ಪ್ರಕಾರ. ಈ ಮೂರು ಪ್ರಕಾರಗಳು ಗಾತ್ರದಲ್ಲೂ, ಗುಣದಲ್ಲೂ ಸಮೃದ್ಧವಾಗಿದ್ದು, ಉನ್ನತ ವಾಙ್ಮಯ ಸಿದ್ಧಿಗಳಾಗಿ ಮಹತ್ತ್ವದ್ದಾಗಿವೆ.

ಪ್ರಕಟಿತ, ಅಪ್ರಕಟಿತ ಯಕ್ಷಗಾನ ಪ್ರಸಂಗಗಳ ಒಟ್ಟು ಸಂಖ್ಯೆ ಎರಡು ಸಾವಿರದಷ್ಟಿದೆ. ಪ್ರತಿಯೊಂದು ಪ್ರಸಂಗದಲ್ಲಿ ಸರಾಸರಿ ಕನಿಷ್ಠ ಇನ್ನೂರ ಐವತ್ತು ಪದ್ಯಗಳಿವೆ ಎಂದಿಟ್ಟುಕೊಂಡರೂ, ಒಟ್ಟು ಐದು ಲಕ್ಷ ಪದ್ಯಗಳಷ್ಟು ಇದೆ ಕನ್ನಡದ ಯಕ್ಷಗಾನ ಪದ್ಯ ಸಾಹಿತ್ಯ ! ಈಗಲೂ ಈ ಸಂಖ್ಯೆ ವೇಗದಿಂದ ಬೆಳೆಯುತ್ತಿದ್ದು, ದೊಡ್ಡ ಸಂಖ್ಯೆಯಲ್ಲಿ ಪ್ರಸಂಗಗಳ ರಚನೆ ಆಗುತ್ತಿದೆ. ಈ ಪ್ರಸಂಗಗಳ ಕಥೆ , ಕಥಾ ವಸ್ತುಗಳ ವ್ಯಾಪ್ತಿಯೂ ದೊಡ್ಡದು, ಪೌರಾಣಿಕ, ಜಾನಪದೀಯ, ಕಾಲ್ಪನಿಕ, ಐತಿಹಾಸಿಕ, ಕಾದಂಬರಿ ಆಧಾರಿತ, ಅಣಕ, ಸಾಂಕೇತಿಕ ಚಲನಚಿತ್ರ ಆಧಾರಿತ, ಸಮಕಾಲೀನ - ಹೀಗೆ ಹಲವು ವಸ್ತುಗಳು, ಹಲವು ಬಣ್ಣ ಬೆಡಗುಗಳಿಂದ ಕೂಡಿ ಪ್ರಸಂಗಗಳಾಗಿ ಬಂದಿವೆ. ಸಾಕಷ್ಟು ಗಟ್ಟಿಕಾಳೂ, ಬೇಕಷ್ಟು ಜೊಳ್ಳೂ ಇವೆ. ಎಂತಿದ್ದರೂ ಜೀವಂತಿಕೆ, ವಿಪುಲತೆಗಳು ಆಶ್ಚರ್ಯಕರವಾಗಿವೆ.

ಯಕ್ಷಗಾನ ಪ್ರದರ್ಶನಗಳ ಅರ್ಥವೆಂಬ ಮಾತುಗಾರಿಕೆಯು, ಒಂದು ಅಸಾಧಾರಣ ಪ್ರಕಾರ. ಅದು ಸಾಧಿಸಿದ ವಿಸ್ತಾರವೂ, ಎತ್ತರವೂ, ಯಾವುದೇ ಸಾಹಿತ್ಯ ವಾಙ್ಮಯ ಪ್ರಕಾರಗಳ ಪರಮೋಚ್ಚ ಸೃಜನಾತ್ಮಕ ಕೃತಿಗಳ ಜೊತೆ ಹೋಲಿಸಬಹುದಾದ ಅಂಶಗಳಿಂದ ಕೂಡಿದೆ. ಯಕ್ಷಗಾನದ ಮಾತು. ಕನ್ನಡಿಗರು ಹೆಮ್ಮೆಪಡುವ ಮಾತು. ವಿಮರ್ಶಾ ಪ್ರಕಾರದಲ್ಲೂ ಅನೇಕ ಗಣ್ಯ ಕೃತಿಗಳೂ, ಬರಹಗಳೂ ಬಂದಿದ್ದು ಕೃತಿಯ ವಿವಿಧ ಅಂಗೋಪಾಂಗಗಳ - ಸಂಗೀತ, ವೇಷ, ನೃತ್ಯ, ಮಾತು, ಪ್ರಸಂಗ, ರಂಗವಿಧಾನ, ಛಂದಸ್ಸು, ಸಂಘಟನೆ, ಮೊದಲಾದವುಗಳ - ಬಿಡಿ ಯಾ ಇಡಿ ಪರಿಶೀಲನೆಯನ್ನು ಸಮರ್ಥವಾಗಿ ನಡೆಸಿವೆ.

**ಯಕ್ಷಗಾನ – ಯಕ್ಷಗಾನ ಪ್ರಸಂಗ :**

ಯಕ್ಷಗಾನವೆಂಬುದು ಈಗ ನಾವು ಬಳಸುವಂತೆ, ಒಟ್ಟು ಒಂದು ಕಲೆಯ, ರಂಗಭೂಮಿಯ ಹೆಸರು. ಆದರೆ ಮೂಲತಃ ಇದೊಂದು ಸಾಹಿತ್ಯ ಪ್ರಕಾರದ ಹೆಸರು. ತೆಲುಗು, ಕನ್ನಡ, ತಮಿಳು, ಮಲಯಾಳಂ, ಮರಾಠಿ ಭಾಷೆಗಳಲ್ಲಿ ಈ ಪ್ರಕಾರ ಇದ್ದು, ತೆಲುಗು, ಕನ್ನಡ, ತಮಿಳುಗಳ ಯಕ್ಷಗಾನ ರಚನೆಗಳು ಸುಮಾರಾಗಿ ಒಂದೇ ತೆರನಾಗಿವೆ. ಯಕ್ಷಗಾನವೆಂದೇ ಈ ಪ್ರಕಾರಕ್ಕೆ ಮೂರೂ ಭಾಷೆಗಳಲ್ಲಿ ಹೆಸರು. ಈ ಸಾಹಿತ್ಯ ಕೃತಿಗಳನ್ನು ಆಧರಿಸಿ ನಡೆಯುವ ಪ್ರದರ್ಶನಕ್ಕೆ ಆಟ, ಬಯಲಾಟ, ದಶಾವತಾರ ಆಟ, ಕೇಳಿಕೆ, ಕಲಾಪ ನಾಟಕಂ, ಕೂತ್ತು, ಭಾಗವತಂ, ಭಾಗವತರಾಟ, ಭಾಗವತ ಮೇಳ ಮೊದಲಾದ ಬೇರೆ ಬೇರೆ ಹೆಸರುಗಳು. ಯಕ್ಷಗಾನವೆಂಬುದು ಸಾಹಿತ್ಯ ಪ್ರಕಾರದ ಹೆಸರೆಂಬುದಕ್ಕೆ - ಯಕ್ಷಗಾನ ವ ರಚಿಪೆ, ಯಕ್ಷಗಾನದಿ ಪೇಳ್ವೆ ಎಂಬ ಕವಿಗಳ ಮಾತುಗಳೂ, ಯಕ್ಷಗಾನ ಕೃಷ್ಣಸಂಧಾನ, ಯಕ್ಷಗಾನ ಗಿರಿಜಾಕಲ್ಯಾಣ - ಮೊದಲಾಗಿರುವ ಕೃತಿಗಳ ಹೆಸರುಗಳೂ ದೃಷ್ಟಾಂತ. ಇರಲಿ, ಅಂತೂ - ಸಾಹಿತ್ಯ ಪ್ರಕಾರದ ಹೆಸರೇ, ರಂಗದ ಹೆಸರಾಗಿ ರೂಢಿಗೆ ಬಂದಾಗ, ಸಾಹಿತ್ಯ ಕೃತಿಗಳಿಗೆ ಯಕ್ಷಗಾನ ಪ್ರಸಂಗ ಎಂಬ ಹೆಸರು ಬಳಕೆಯಾಯಿತು. ಪ್ರಸಂಗ ಎಂಬುದನ್ನೆ ಕಥಾ ಪ್ರಸಂಗ, ಆಖ್ಯಾನ, ಎಂದೂ ಕೆಲವೆಡೆ ಹೇಳುತ್ತಾರೆ. ಈಗ ಈ ಬಗೆಯ, ಪದ-ಪದ್ಯಮಯವಾದ ರಚನೆಗಳಿಗೆ ಪ್ರಸಂಗವೆಂಬ ನಾಮಧೇಯವೆ ವ್ಯಾಪಕವಾಗಿ ಸ್ವೀಕೃತವಾಗಿದೆ.

ಯಕ್ಷಗಾನ (ಆಟ ಮತ್ತು ಅದರ ಸಾಹಿತ್ಯ)ಕ್ಕೆ ಕನ್ನಡದಲ್ಲಿ ಆರೇಳು ಶತಮಾನಗಳ ಇತಿಹಾಸವಿದೆ. ಯಶೋಧರ ಚರಿತೆಯಲ್ಲಿ ಬರುವ ಕೇಳಿಕೆ ಯ ಪ್ರಸ್ತಾವ (ಉಲ್ಲೇಖ : ಕುಕ್ಕಿಲ ಕೃಷ್ಣಭಟ್ಟರು : ಕುಕ್ಕಿಲ ಸಂಪುಟ) ವೇ ಈ ಪೈಕಿ ಪ್ರಾಚೀನ. ಕೇಳಿಕೆಯು ನಾವೆನ್ನುವ ಆಟ, ಅಥವಾ ಈಗಿನ ರೂಢಿಯ ಯಕ್ಷಗಾನ ಪ್ರದರ್ಶನ. ೧೫೦೦ರ ಸುಮಾರಿಗೆ ಬಿಜಾಪುರದ ಆದಿಲ್ ಶಾಹಿ ಆಸ್ಥಾನಕ್ಕೆ ಶಿರಸಿ ಸೋದೆಯ ಯಕ್ಷಗಾನ ಮೇಳವು ಭೇಟಿನೀಡಿತ್ತೆನ್ನುವ ವಿಚಾರ (ಡಾ. ಜಿ.ಎಸ್. ಭಟ್ ಮೈಸೂರು ಇವರ ಮಾಹಿತಿ), ಪುರಂದರದಾಸರು (ಸು. ಕ್ರಿ.೧೫೫೦) ರಚಿಸಿದ ಅನಸೂಯಾ ಚರಿತ್ರೆ ಯಕ್ಷಗಾನ, ಇವುಗಳಿಂದ ಆಗಲೇ ಈ ಪ್ರಕಾರ ಪ್ರಸಿದ್ಧವಾಗಿದ್ದುದು ಖಚಿತ. ಯಕ್ಷಗಾನಗಳ ಮೊದಲ ಪ್ರಮುಖ ಕವಿ ಪಾರ್ತಿಸುಬ್ಬ (ಸು.ಕ್ರಿ. ೧೬೦೦) ನು ಸಮಗ್ರ ರಾಮಾಯಣವನ್ನು ಯಕ್ಷಗಾನ ರೂಪದಲ್ಲಿ ಬರೆಯಬೇಕಿದ್ದರೆ, ಆ ಪ್ರಕಾರವು ಆಗಲೇ ಸ್ಥಾಪಿತ ಪ್ರಕಾರವಾಗಿತ್ತೆಂಬುದೂ ಸ್ಪಷ್ಟ.

ಯಕ್ಷಗಾನವೂ, ತತ್ಸಮಾನವಾದ ಇತರ ಹಲವು ಭಾಷೆಗಳ ಪೌರಾಣಿಕ ಕಥನ ಕಾವ್ಯಗಳೂ ಸುಮಾರು ಹದಿನೆರಡನೆಯ ಶತಮಾನದಿಂದ ಉತ್ಕರ್ಷಕ್ಕೆ ಬಂದ ವೈಷ್ಣವ ಭಕ್ತಿ ಸಂಪ್ರದಾಯದ ಫಲಿತಗಳು, ಸಾಧನಗಳು. ಯಕ್ಷ್ - ಪೂಜಾಯಾಂ ಎಂಬುದರಿಂದ, ಇವು ದೇವಾಲಯಗಳಲ್ಲಿ ಬಳಕೆಗಿದ್ದ ಪೂಜಾ ಪ್ರಬಂಧಗಳು. ಇವು ಬಹುಶಃ ಮೊದಲು ವಾಚನ, ಗಾಯನಗಳಿಗಾಗಿ ರಚಿತವಾದ ಸೇವಾ ಪ್ರಬಂಧಗಳು. ಇವುಗಳಲ್ಲಿ ನಾಟಕೀಯತೆ ಇದ್ದರೂ, ರಚನಾ ಸ್ವರೂಪ ಕಥನವೇ. ಅಂದಿನಿಂದ ಇಂದಿನವರೆಗೂ ಯಕ್ಷಗಾನಗಳು ( ಎಂದರೆ ಪ್ರಸಂಗಗಳು) ಇರುವುದು, ಕಥೆಯನ್ನು ಮೂರನೆಯವನ (ಅಂದರೆ ಪ್ರಥಮ ಪುರುಷ) ನಿರೂಪಣೆಯಾಗಿ ಹೊರತು, ನಾಟಕ ಕೃತಿಯಾಗಿ ಅಲ್ಲ. ಕಾಲಕ್ರಮದಲ್ಲಿ ಇವು ಪ್ರದರ್ಶನಗಳಿಗೆ ಅಳವಡಿಸಲ್ಪಟ್ಟವು. ಆ ಬಳಿಕ ಅದಕ್ಕಾಗಿಯೆ ರಚಿತವಾಗಲಾರಂಭಿಸಿದುವು.

ಈ ಪ್ರಸಂಗಗಳಲ್ಲಿ ಕಂದ, ಭಾಮಿನಿ, ವಾರ್ಧಕ ಮೊದಲಾದ ಪದ್ಯ ಜಾತಿಗಳೂ, ಹಲವು ವೃತ್ತ ಜಾತಿಗಳೂ, ಸಾಂಗತ್ಯಗಳೂ ಅನೇಕ ವಿಧದ ಪದ್ಯ ಜಾತಿಗಳೂ ಸೇರಿರುತ್ತವೆ. ವೃತ್ತ, ಕಂದ, ಷಟ್ಪದಿಗಳು, ವಿತಾಲಗಾನಕ್ಕೂ, ಪದಗಳೆಂಬ ಹಾಡುಗಳು ಸತಾಲವಾಗಿಯೂ ಪ್ರಯೋಗವಾಗುವುವು. ಈ ಕನ್ನಡ ಯಕ್ಷಗಾನ ಪ್ರಸಂಗಗಳಲ್ಲಿ ಸುಮಾರು ಇನ್ನೂರರಷ್ಟು ವಿವಿಧ ಛಂದೋ ಬಂಧಗಳೂ, ಐನೂರರಷ್ಟು ಹಾಡುವ ಮಟ್ಟುಗಳೂ* ಇವೆಯೆಂದು ಸಂಶೋಧಕರು ಗುರುತಿಸಿದ್ದಾರೆ. (ಡಾ. ಎನ್. ನಾರಾಯಣಶೆಟ್ಟಿ, ಡಾ. ಕಬ್ಬಿನಾಲೆ ವಸಂತಭಾರಧ್ವಾಜ, ಶ್ರೀ ಹೊಸ್ತೋಟ ಮಂಜುನಾಥ ಭಾಗವತ ಇವರ ಶೋಧನೆಗಳು) ಯಕ್ಷಗಾನಗಳು ಕನ್ನಡ ಛಂದಸ್ಸುಗಳ, ಮಟ್ಟುಗಳ ನಿಧಿಯಂತಿವೆ. ಎರಡು ಪ್ರಾಸಗಳ ಚಿಕ್ಕ ಪದದಿಂದ ತೊಡಗಿ, ಹತ್ತಿಪ್ಪತ್ತು ಸಾಲುಗಳ ದೀರ್ಘವಾದ ಹಾಡುಗಳೂ ಇವೆ. ಹೆಚ್ಚಿನ ಪ್ರಸಂಗಗಳು, ಸರಳವಾದ, ಪರಿಣಾಮಕಾರಿಯಾದ ಭಾಷೆಯಲ್ಲಿ ರಚಿತವಾಗಿವೆ.

ಈ ಪ್ರಸಂಗ ಕಾವ್ಯಗಳು ಪ್ರದರ್ಶನಕ್ಕೆ ಆಧಾರ. ಇವುಗಳ ಹಾಡುಗಳನ್ನು ಅನುಸರಿಸಿ ಆಟ (ವೇಷ ನೃತ್ಯಸಹಿತ) ಮತ್ತು ಕೂಟ (ಅರ್ಥಾತ್ ತಾಳಮದ್ದಳೆ ಎಂಬ ವೇಷರಹಿತ, ಬೈಠಕ್ ರೂಪದ ಪ್ರದರ್ಶನ) ಗಳು ಸಾಗುವುವು. ಆಟದಲ್ಲಿ ಭಾಗವತನೆಂಬ ಹಾಡುಗಾರನು ಪ್ರಸಂಗಗಳ ಪದ್ಯಗಳನ್ನು, ಚೆಂಡೆ ಮದ್ದಲೆಗಳೆಂಬ ವಾದ್ಯಗಳ ಹಿಮ್ಮೇಳದ ನೆರವಿನೊಂದಿಗೆ ಹಾಡುತ್ತಿದ್ದಂತೆ ನೃತ್ಯ ಅಭಿನಯಗಳು ಸಾಗುತ್ತವೆ. ಪ್ರತಿ ಪದ್ಯದ ಬಳಿಕ, ಅದನ್ನಾಧರಿಸಿ ರಂಗದಲ್ಲಿ ಮಾತಿನ ನಾಟಕ ಪಾತ್ರಧಾರಿಗಳಿಂದ ಆಶುಭಾಷಣವಾಗಿ ರಚಿಸಲ್ಪಡುತ್ತದೆ.

**ಪ್ರಸಂಗ ಗುಣ**

ಯಕ್ಷಗಾನಗಳಲ್ಲಿರುವ ಕಥಾಭಾಗ ಮತ್ತು ಅದರ ರಚನಾ ರೂಪಕ್ಕೆ ಪ್ರಸಂಗ ಎಂದು ಹೆಸರು. ಇದು ಸ್ವಾರಸ್ಯಕರ. ಪ್ರಸಂಗವೆಂದರೆ, ಸನ್ನಿವೇಶ, ಸಂದರ್ಭ, ಘಟನೆ ಎಂದು ಅರ್ಥವಷ್ಟೆ. ಯಾವುದೇ ರಂಗಭೂಮಿಯು ಆಯ್ದುಕೊಳ್ಳುವುದು ಒಂದು ವಿಶಿಷ್ಟ ಪ್ರಸಂಗವನ್ನು ಯಾ ಘಟನೆಯನ್ನು ಹೊರತು ವ್ಯಕ್ತಿಗಳ ಜೀವನ ಚರಿತ್ರೆಯನ್ನಲ್ಲ. ಯಕ್ಷಗಾನ ಕವಿಗಳು ಒಂದು ವಿಶಿಷ್ಟ ಪ್ರಕರಣವನ್ನು (ಗಂಗೆ-ಗೌರಿ ಸಂವಾದ, ಗರುಡಗರ್ವ ಭಂಗ, ಸಮುದ್ರ ಮಥನ ಹೀಗೆ) ಇಡಿಯಾಗಿ ಒಂದು ಕಾವ್ಯವನ್ನು ಯಾ ಕಾವ್ಯಭಾಗವನ್ನು (ಉದಾ : ಕರ್ಣಪರ್ವ, ಕೃಷ್ಣಾರ್ಜುನ ಇತ್ಯಾದಿ) ಆರಿಸಿಕೊಳ್ಳುತ್ತಾರೆ. ಇತ್ತೀಚೆಗೆ ವ್ಯಕ್ತಿಜೀವನ ಆಧಾರಿತ ಸಮಗ್ರ ಪ್ರಸಂಗಗಳೂ ರಚನೆಯಾಗಿವೆ ಉದಾ : ಭೌಮಾಸುರ, ಮಗಧೇಂದ್ರ, ಸಮಗ್ರರಾವಣ, ಕಡುಗಲಿ ಕೌರವ ಮೊದಲಾದುವು.

ಯಕ್ಷಗಾನ ಪ್ರಸಂಗವೆಂಬುದು ಹೇಗೆ ಇದ್ದರೆ ಚೆನ್ನು, ಅದರಲ್ಲಿ ಅಪೇಕ್ಷಿತವಾದ ಗುಣಗಳು ಯಾವುವು ಎಂಬುದನ್ನು ಒಂದಿಷ್ಟು ನೋಡಬಹುದು. ಈ ಕುರಿತು ಎರಡು ಅಭಿಪ್ರಾಯಗಳನ್ನು ಇಲ್ಲಿ ಉದ್ಧರಿಸಿದೆ.

...... ಇವುಗಳೊಳಗೆ ತುಂಬಿದ ಜೀವಭಾವಗಳು ಹೇಗಿವೆ ಎಂಬುದೇ ಸಾಹಿತ್ಯಕ್ಕೆ ಸಂಬಂಧಪಡುವ ಮುಖ್ಯ ಪ್ರಶ್ನೆ. ಅದನ್ನು ಚರ್ಚಿಸುವಾಗ ಒಂದು ವಿಷಯವನ್ನಂತು ಮರೆಯಲೇ ಕೂಡದು. ಇವನ್ನು ಹೇಳಿದ ಕವಿಗಳು ಜಾನಪದ ಕವಿಗಳು. ಹೆಚ್ಚಾಗಿ ವಿದ್ವಾಂಸರಲ್ಲ. ಆದರೂ ಲೋಕಾನುಭವ ಚೆನ್ನಾಗಿದ್ದು.... ತಮ್ಮಂತಿರುವ ಜನಸಾಮಾನ್ಯರಿಗಾಗಿ ಬರೆದರು. ಜನರಿಗೆ ತಿಳಿಯುವಂಥ ಭಾಷೆಯಲ್ಲಿ ಬರೆದರು. ಅದೇನೇ ಗೀತನಾಟಕಗಳಲ್ಲಿರಬೇಕಾದ ಮುಖ್ಯ ಗುಣ. ಹಾಡುಗಬ್ಬಗಳಲ್ಲಿ ಒಮ್ಮೆ ಕೇಳಿದ ಮಾತ್ರಕ್ಕೆ ಅದು ಅರ್ಥವಾಗದೆ ಹೋದರೆ, ಹಾಡಿನ ಸೊಬಗೇ ವ್ಯರ್ಥವಾಗುತ್ತದೆ....... ವಿರಾಮದಲ್ಲಿ ಕುಳಿತು ಮೆಲುಕಾಡಿ ಆನಂದಿಸಬಹುದಾದ ಸಾಹಿತ್ಯದ ರೀತಿಯಾಗಲಿ, ಕಾವ್ಯ ಚಮತ್ಕಾರಗಳಾಗಲಿ ಗೀತನಾಟಕಗಳಿಗೆ ಒಪ್ಪಿದ್ದಲ್ಲ (ಶಿವರಾಮ ಕಾರಂತ, ಯಕ್ಷಗಾನ ಬಯಲಾಟ ೧೩೫-೧೩೬).

...... ಇದು ರಂಗಸಾಹಿತ್ಯವಾಗಿರುವುದರಿಂದ ಅದನ್ನು ನೋಡುವ, ವಿಶ್ಲೇಷಿಸುವ ದೃಷ್ಟಿಯಿಂದ ಕಾವ್ಯದಂತಹ ಸ್ವತಂತ್ರ ಸಾಹಿತ್ಯಪ್ರಕಾರಗಳನ್ನು ವಿವೇಚಿಸುವ ದೃಷ್ಟಿಯಿಂದ ಭಿನ್ನವಾಗಿರಬೇಕಾಗುತ್ತದೆ. ನಾಟಕ, ಗೀತನಾಟಕ, ನೃತ್ಯನಾಟಕ, ಕಥನಕವನ - ಈ ನಾಲ್ಕರ ಒಂದು ಪಾಕವೆಂಬಂತೆ ಪ್ರಸಂಗವು ರೂಪಿತವಾಗುತ್ತದೆ. ಗೀತನಾಟಕ, ನೃತ್ಯನಾಟಕಗಳಿಗಿಂತ ಭಿನ್ನವಾದ ಆಯಾಮವೊಂದು ಪ್ರಸಂಗಕ್ಕಿದೆ. ಪ್ರಸಂಗದ ಪದ್ಯಗಳಿಗೆ ಪಾತ್ರಧಾರಿಯು ಅರ್ಥವನ್ನು (ಅಂದರೆ ಮಾತುಗಳನ್ನು ತಾನೇ ರಚಿಸಿ, ಅಥವಾ ಮೂಡಲಪಾಯದಲ್ಲಿರುವಂತೆ ಸಿದ್ಧಪಡಿಸಿ ಬಾಯಿಪಾಠಮಾಡಿ) ಹೇಳುವುದಕ್ಕೆ ಇರುವುದರಿಂದ, ಪ್ರಸಂಗವು ಗೀತ ನೃತ್ಯಗಳಿಗಷ್ಟೆ ಅನುವು ಅವಕಾಶಗಳನ್ನು ಕಲ್ಪಿಸಿದರೆ ಸಾಲದು. ಅಷ್ಟನ್ನು ಒದಗಿಸುವುದರ ಜತೆಗೆಯೆ ಅದು ಅರ್ಥಗಾರಿಕೆಗೆ ದ್ರವ್ಯವನ್ನು ಒದಗಿಸಬೇಕು. (ಎಂ. ಪ್ರಭಾಕರ ಜೋಶಿ, ಕೇದಗೆ, ೧೯೮೬ : ೨೯)

ಗೇಯಪ್ರಬಂಧಗಳಾದ ಯಕ್ಷಗಾನ ಪ್ರಸಂಗಗಳಲ್ಲಿ - ಸ್ವಾರಸ್ಯಪೂರ್ಣ ಸರಳತೆ, ಗಾನ ನೃತ್ಯಗಳಿಗೆ ಆನುಕೂಲ್ಯ, ಉಕ್ತಿ ಸೌಂದರ್ಯ, ಛಂದೋಬಂಧ, ತಾಳಗಳ ಔಚಿತ್ಯ ಪೂರ್ಣ ವೈವಿಧ್ಯ, ಪಾತ್ರ ಪ್ರವೇಶ, ಸಂವಾದಗಳಿಗೆ ಒದಗುವ ರಚನೆ, ಯಕ್ಷಗಾನದ ಪಾತ್ರ ವೈವಿಧ್ಯಕ್ಕೆ ಆಸ್ಪದ, ಯೋಗ್ಯ ಆಶಯ ವಸ್ತು , ಹದವಾದ ವೇಗ, ನಾಟಕೀಯಗುಣ, ಅರ್ಥಗಾರಿಕೆಗೆ ಇಂಬು ನೀಡುವ ಅರ್ಥಪ್ರಸವಕ್ಷಮತೆ, ಒಟ್ಟು ರಚನೆಯ ಅಚ್ಚುಕಟ್ಟುತನ, ರಂಗಾನುಕೂಲ್ಯ - ಇವುಗಳು ನಿರೀಕ್ಷಿತ. ಈ ಪೈಕಿ ಹೆಚ್ಚಿನವು ಇದ್ದರೆ - (ಅಂದರೆ ಎಲ್ಲವೂ

ಸಂಭಾವ್ಯವಲ್ಲ. ಕೆಲವು, ಕತೆಗಳ ಕಾರಣದಿಂದಲೂ ನಿರೀಕ್ಷಿತವಲ್ಲ) - ಆ ಪ್ರಸಂಗವು ಯಶಸ್ವಿ ಅನ್ನಬಹುದು. ನಮ್ಮ ಅನೇಕ ಪ್ರಸಂಗಗಳಲ್ಲಿ ಈ ಗುಣಗಳನ್ನು ಕವಿಗಳು ಚೆನ್ನಾಗಿ ಅಳವಡಿಸಿ ಉಚ್ಚಮಟ್ಟದ ಗೀತ ಪ್ರಬಂಧಗಳನ್ನು ರಚಿಸಿದ್ದಾರೆ. ಹಲವು ಬಗೆಯ ಪ್ರಾಯೋಗಿಕತೆಗಳನ್ನೂ ತೋರಿಸಿದ್ದಾರೆ.

ಪ್ರಸಕ್ತ ಸಂಪುಟದಲ್ಲಿ ಅಳವಟ್ಟಿರುವ ಪ್ರಸಂಗಗಳಲ್ಲಿ ಇಂತಹ ಹಲವು ಅಂಶಗಳನ್ನು ಕಾಣುತ್ತೇವೆ. ಆಧುನಿಕ ಯುಗದಲ್ಲಿ, ಅಂದರೆ ಸುಮಾರು, ಕ್ರಿ. ೧೯೫೦ರ ಬಳಿಕ ಯಕ್ಷಗಾನ ಪ್ರಸಂಗ ಸಾಹಿತ್ಯವು ಹೊಸ ಹೊಸ ದಾರಿಗಳಲ್ಲಿ ಸಾಗುತ್ತಿದ್ದು, ಶ್ರೇಷ್ಠವೆನ್ನಬಹುದಾದ ಅನೇಕ ಕೃತಿಗಳು ಈ ಯುಗದಲ್ಲೂ ರಚಿತವಾಗಿವೆ. ಒಟ್ಟಿನಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯವು ಚಲನಶೀಲವೂ, ವಿಸ್ತಾರಮುಖಿಯೂ ಆಗಿ ಸಾಗಿಬಂದಿದೆ.

**ಪ್ರಸ್ತುತ ಸಂಪುಟ**

ಈಗ ಈ ಸಂಪುಟದಲ್ಲಿ ಸಂಕಲಿಕವಾದ ಒಂಬತ್ತು ಪ್ರಸಂಗಗಳ ಕಥೆ, ಕವಿ ಕಾವ್ಯ ವಿಚಾರಗಳನ್ನು ಸಂಕ್ಷಿಪ್ತ ದಿಗ್ದರ್ಶನ ಮಾತ್ರವಾಗಿ ನೋಡೋಣ.

**೧. ವಿರಾಟ ಪರ್ವ :** ಮಹಾಭಾರತದ ವಿರಾಟಪರ್ವದ ಕಥಾನಕವನ್ನು ಒಳಗೊಂಡ ಈ ಪ್ರಸಂಗವು ಬ್ರಹ್ಮಾವರದ ವಿಷ್ಣು ಕವಿಯದು. ಕೃತಿಯ ಕೊನೆಯಲ್ಲಿ ಕವಿಯೆ.. ಪೆಸರ್ವಡೆದ ರಾಮಾತ್ಮಜಂ ವಿಷ್ಣುವೆಂಬಣುಗನು... ಎಂದು ಹೇಳಿ....... ಅಜಪುರವಾಸಂ ಈಶಂ ಗಜಚರ್ಮಾಂಬರನೆ ಹರನೆ ರಕ್ಷಿಸು ಎಮ್ಮಂ... ಎಂಬ ಸ್ತುತಿಸಿದ್ದಾನೆ. ಪ್ರಸಿದ್ಧಿಯಿಂದಲೂ ಇದು ಬ್ರಹ್ಮಾವರ ವಿಷ್ಣು ಕವಿಯದೆಂದೆ ಜನಶ್ರುತಿ. ಕವಿಯನ್ನು ವಿಷ್ಣು ಭಾಗವತನೆಂದು ಪ್ರಕಾಶಕರಾದ ಪಾವಂಜೆ ಗುರುರಾಯರು ಉಲ್ಲೇಖಿಸಿರುವುದರಿಂದ ಕವಿಯು ಯಕ್ಷಗಾನ ಭಾಗವತನಾಗಿರಬಹುದು.

ಪ್ರಸಂಗದಲ್ಲಿ ಎರಡು ಸಂಧಿಗಳಿವೆ - ಕೀಚಕವಧೆ ಮತ್ತು ಉತ್ತರ ಗೋಗ್ರಹಣ. ರಚನೆಯು ಕಥಾಸರಣಿಯಲ್ಲೂ, ಪದ ಪ್ರಯೋಗಗಳಲ್ಲೂ ಕುಮಾರವ್ಯಾಸ ಭಾರತದ ವಿರಾಟ ಪರ್ವವನ್ನು ಅನುಸರಿಸಿದೆ. ಈ ಕವಿಯ ಕಾಲವು ಸು. ಕ್ರಿ. ೧೮೦೦.

**ಕಥಾಸಾರ :** ಸ್ತುತಿ. ವನವಾಸದ ಅವಧಿ ಮುಗಿದು ಪಾಂಡವರು ತಮ್ಮೊಳಗೆ ಸಮಾಲೋಚಿಸಿ, ಆಯುಧಗಳನ್ನು ಬನ್ನಿ ಮರದಲ್ಲಿಟ್ಟು ಮಾರುವೇಷಗಳಿಂದ ವಿರಾಟನಗರವನ್ನು ಪ್ರವೇಶಿಸಿ ವಿವಿಧ ಉದ್ಯೋಗಗಳಲ್ಲಿ ನೇಮಿತರಾಗುವರು. ಅಲ್ಲಿ ವಿರಾಟನ ರಾಣಿಯ ಸೈರಂಧ್ರಿಯಾಗಿದ್ದ ದ್ರೌಪದಿಗೆ ವಿರಾಟನ ಭಾವನೆಂಟನಾದ ಕೀಚಕನ ಬಾಧೆ, ರಾಣಿಯ ಇಕ್ಕಟ್ಟು, ದ್ರೌಪದಿಯ ದುಃಖ, ಭೀಮನ ಸಮಾಧಾನ, ಉಪಾಯಾಂತರದಿಂದ ನಾಟ್ಯ ಮಂದಿರಕ್ಕೆ ಕೀಚಕನು ಬರುವಂತೆ ಮಾಡಿ ಆತನ ವಧೆ.

*ಕೀಚಕನಿಂದ ದ್ರೌಪದಿಯ ವರ್ಣನೆ:*

**ಇವಳ್ಯಾವ ಲೋಕದ ಸತಿಯೋ | ಮತ್ತೀ |**
**ಯುವತಿಯ ಪಡೆದವಳೇನ್ ಪುಣ್ಯವತಿಯೋ |**
**ರತಿಯ ಸೌಂದರ್ಯವಂತಿರಲಿ | ಸುರ |**
**ಸತಿಯರ ಸೊಬಗು ತಾನಾಚೆಯೊಳಿರಲಿ |**
**ಪೃಥಿವಿಯೊಳಿನಿತು ರೂಪಿಲ್ಲ | ದ್ರುಪದ |**
**ಸುತೆಯ ಕಂಡರಿವೆ ಈ ಪರಿಯಂದವೆಲ್ಲ || ೧ ||**

*ಈ ಹಂತದ ಮೂರು ಪದ್ಯಗಳು, ಸಹಜ ಸರಳ ಸುಂದರ ಗೀತರಚನೆಯ ಮಾದರಿಗಳಂತಿದ್ದು ಯಕ್ಷಗಾನದ ಉತ್ತಮ ಪದ್ಯಗಳಲ್ಲಿ ಗಣನೆಗೆ ಬರುತ್ತವೆ.*

ವೇಷಧಾರಿಯಾಗಿ ಮಲಗಿದ್ದ ಭೀಮನು ಕೀಚಕನಿಗೊರೆದ ನುಡಿ :

**ಉಳಿದ ನಾರಿಯರಂದ | ವಲ್ಲೆನ್ನ ಬಗೆ ಬೇರೆ**
**ಇಳೆಯೊಳೆನಗೆ ಸೋ | ಲದವರಿಲ್ಲ ನರರು ||** ||೧||

**೨. ಕೃಷ್ಣ ಸಂಧಾನ (ಭೀಷ್ಮಪರ್ವ ಸಹಿತ) :** ಕವಿ ದಾಸ ಅಥವಾ ದೇವಿದಾಸನಿಂದ ರಚಿತವಾದ ಈ ಪ್ರಸಂಗವು ಯಕ್ಷಗಾನದ ಅತ್ಯಂತ ಪ್ರಸಿದ್ಧ ಪ್ರಸಂಗಗಳಲ್ಲಿ ಒಂದು. ಮಹಾಭಾರತದ ಉದ್ಯೋಗ ಪರ್ವ ಮತ್ತು ಭೀಷ್ಮಪರ್ವಗಳನ್ನು ಒಳಗೊಂಡ ಆಖ್ಯಾನ. ಕೃಷ್ಣ ಸಂಧಾನವು ವಿಸ್ತೃತ ಪ್ರಸಂಗ, ಭೀಷ್ಮಪರ್ವವು ಅದರ ಅನುಬಂಧದಂತಿರುವ ಸಂಕ್ಷಿಪ್ತ ಪ್ರಸಂಗ. ಕವಿಯು ಇಲ್ಲಿ ಎರಡು ಬಗೆಯ ಪ್ರಸಂಗಗಳ ರಚನೆಯ ಒಂದು ಪ್ರಯೋಗವನ್ನು ಪ್ರಸ್ತುತಪಡಿಸಿರುವಂತಿದೆ.

ಈ ಕೃತಿಯ ಕವಿ ದೇವಿದಾಸನ ಕಾಲ ಸು.ಕ್ರಿ.೧೮೦೦ (ಪ್ರಸಂಗದ ವಿಸ್ತೃತ ಅಧ್ಯಯನ : ಕೃಷ್ಣಸಂಧಾನ ಪ್ರಸಂಗ ಮತ್ತು ಪ್ರಯೋಗ : ಮಹಾಪ್ರಬಂಧ, ಎಂ. ಪ್ರಭಾಕರ ಜೋಶಿ ೧೯೯೯) ಈತನು ದೇವೀ ಮಹಾತ್ಮೆ, ಗಿರಿಜಾಕಲ್ಯಾಣ, ಚಿತ್ರಸೇನಕಾಳಗ, ದ್ರೌಪದೀ ಕಲ್ಯಾಣ ಮತ್ತು ಅಭಿಮನ್ಯು ಕಾಳಗ ( ಈ ಸಂಪುಟದಲ್ಲಿ ಸೇರಿದೆ) ಗಳನ್ನೂ ಬರೆದಿದ್ದು ಯಕ್ಷಗಾನದ ಓರ್ವ ಪ್ರಮುಖ ಕವಿಯೆನಿಸಿದ್ದಾನೆ.

ಈ ಕೃತಿಯು ಕುಮಾರವ್ಯಾಸಭಾರತದ ಉದ್ಯೋಗಪರ್ವ, ಭೀಷ್ಮಪರ್ವಗಳ ಸರಳೀಕೃತ ಸಂಕ್ಷಿಪ್ತ ಪ್ರಸಂಗೀಕರಣ. ಪರಮ ದೇವ ಕವಿಯ ತುರಂಗ ಭಾರತ (೧೭೭೮) ದ ಪ್ರಭಾವವೂ ಇದ್ದಂತಿದೆ.

ಈ ಪ್ರಸಂಗವು ಆಟ, ಕೂಟಗರಳೆರಡರಲ್ಲೂ ಬಹುಕಾಲದಿಂದ ಪ್ರಯುಕ್ತವಾಗಿದ್ದರೂ, ಕೃಷ್ಣಸಂಧಾನ ಭಾಗವು ತಾಳಮದ್ದಳೆಗಳಲ್ಲೂ, ಭೀಷ್ಮಪರ್ವ ಭಾಗವು ಆಟಗಳಲ್ಲೂ ಹೆಚ್ಚು ಪ್ರಸಿದ್ಧ. ಕೃಷ್ಣಸಂಧಾನವು, ನಿಸ್ಸಂದೇಹವಾಗಿಯೂ, ತಾಳಮದ್ದಳೆ ಕಲಾರೂಪದ ಅತಿಮುಖ್ಯ ಆಖ್ಯಾನ. ಮಾತುಗಾರಿಕೆಯ ವಿವಿಧ ವಿನ್ಯಾಸಗಳಿಗೆ ಇದರಲ್ಲಿ ವಿಪುಲ ಅವಕಾಶಗಳಿದ್ದು, ಆರಂಭಿಕ ಅಧ್ಯಯನಕ್ಕೂ, ಪ್ರೌಢಿಮೆಗೂ ಈ ಪ್ರಸಂಗವು ಮೌಲಿಕ ಪ್ರಸಂಗಗಳಲ್ಲಿ ಒಂದೆನಿಸಿದೆ.

ಕೀಚಕ ವಧೆಯ ಸುದ್ದಿ ತಿಳಿದ ದುರ್ಯೋಧನನಿಂದ, ಸುಶರ್ಮಾದಿ ಸಂಶಪ್ತಕರ ನೆರವಿನಿಂದ ವಿರಾಟರಾಜನ ರಾಜ್ಯಕ್ಕೆ ಆಕ್ರಮಣ, ಗೋಗ್ರಹಣ. ಮಾರು ವೇಷದ ಭೀಮನಿಂದ ಸುಶರ್ಮನ ಸೋಲು. ಉತ್ತರ ದಿಕ್ಕಿನಲ್ಲಿ ಪುನಃ ಗೋವುಗಳ ಅಪಹಾರ. ಈ ಸುದ್ದಿ ತಿಳಿದ ವಿರಾಟಪುತ್ರ). ಉತ್ತರಕುಮಾರನಿಂದ ಪೌರುಷವಾಣಿ. ನಾಟ್ಯ ಗುರುವಾಗಿದ್ದ ಬೃಹನ್ನಳೆ (ಅರ್ಜುನ) ಉಪಾಯದಿಂದ, ಉತ್ತರನ ಸಾರಥಿಯಾಗಿ ಬಂದು ಆತನನ್ನು ರಣರಂಗಕ್ಕೊಯ್ಯುವುದು. ಉತ್ತರನ ಹೇಡಿತನ, ಅರ್ಜುನನಿಂದ ನಿಜಬೋಧೆ. ಆ ಬಳಿಕ ಯುದ್ಧದಲ್ಲಿ ಉತ್ತರನ ಸಾರಥ್ಯದಲ್ಲಿ ಯುದ್ಧ. ಅರ್ಜುನನಿಂದ ಕೌರವಸೇನೆಯ ಪರಾಭವ, ಗೋವಿಮೋಚನೆ, ಪಾಂಡವರಿಂದ ವಿರಾಟನಿಗೆ ನಿಜ ದರ್ಶನ. ಮಂಗಲ - ಇಷ್ಟು ಕಥಾಸಾರ.

ವಿರಾಟಪರ್ವ ಕಥಾನಕದ ಮೇಲೆ ಇರುವ ಪ್ರಸಂಗ ಬಹುಶಃ ಇದೊಂದೆ. ಯಕ್ಷಗಾನದ ಅತ್ಯುತ್ತಮ ಕೃತಿಗಳಲ್ಲಿ ಒಂದಾಗಿರುವ ಇದು, ಕುಮಾರವ್ಯಾಸನನ್ನು ಅನುಸರಿಸಿಯೂ, ತನ್ನದಾದ ಪುನಾರಚನೆಯ ಕ್ರಮದಲ್ಲಿದ್ದು ಉತ್ತಮ ಗೀತಗುಣವನ್ನು ಹೊಂದಿದೆ. ಹಲವು ಕವಿಗಳಂತೆ, ವಿರಾಟಪರ್ವದ ಕರ್ತೃವೂ, ಕುಮಾರವ್ಯಾಸನ ಪ್ರೌಢಕಾವ್ಯದ ಶೈಲಿಯನ್ನು ಸರಳೀಕರಿಸಿ, ಅದರ ಭಾವವನ್ನು ಪ್ರಸಂಗೀಕರಿಸಿದುದು ಶ್ಲಾಘ್ಯವಾಗಿದೆ. ಪದ್ಯ ಬಂಧಗಳಲ್ಲಿ ವೈವಿಧ್ಯವಿದೆ. ಸಂಕೀರ್ಣತೆ ಅಥವಾ ಬೇಕೆಂದೇ ತಂದ ಕೃತಕತೆಗಳಿಲ್ಲ. ಹಾಡುವಿಕೆಗೆ ಸಹಜವಾಗಿ ಹೊಂದುವ ಪದಗಳಿಂದ ತುಂಬಿದ ಈ ಕೃತಿ, ರಂಗದಲ್ಲಿ ಬಹಳ ಯಶಸ್ವಿಯಾಗಿರುವ, ಈಗಲೂ ಜನಪ್ರಿಯವಾಗಿರುವ ಪ್ರಸಂಗ.

ವಿಷ್ಣು ಕವಿಯ ಸರಳ ಕಾವ್ಯ ಸೌಂದರ್ಯಕ್ಕೆ ಕೆಲವು ಉದಾಹರಣೆಗಳು :

ಅಜ್ಞಾತ ಕಾಲದಲ್ಲಿ ಭೀಮನಿಗೆ ಆಯುಧಗಳನ್ನು ನೀಡದಿರಿ ಎಂದು ಧರ್ಮರಾಜನು ದೇವತೆಗಳಲ್ಲಿ ಪ್ರಾರ್ಥಿಸಿದಾಗ ಭೀಮನ ಕೋಪ

**ಸೋದರರೊಳಗಾನಲ್ಲಾ | ದು | ರ್ಯೋಧನ ನಾನಾದೆನಲ್ಲಾ**

ಸ್ವಭಾವೋಕ್ತಿಯ ಸರಳ ಸೌಂದರ್ಯಕ್ಕೆ ಕೆಲವು ಉದಾಹರಣೆ :

ಕೃಷ್ಣನು ಕೌರವನೊಡನೆ ಹೇಳುವ ಮಾತು -

**ಅಡವಿಗಟ್ಟಿದರೇನು ಸಹಜಾತರೆಂದೆಂಬ |**
**ಒಡಲುರಿ ತಾನಡಗುವುದೆ |**
**ಕಡುಹಿತದಲಿ ನೀವನ್ಯೋನ್ಯರಾದರೆ ಬಲು |**
**ಬೆಡಗು ರಂಜಿಪುದು ರಾಜ್ಯದಲಿ ||**

*ಕೃಷ್ಣನು ಅರ್ಜುನ ಸಾರಥಿಯಾದ ಸಂದರ್ಭದಲ್ಲಿ ಕವಿಯ ನುಡಿ :*

**ಅರಸ ಕೇಳ್ ಬ್ರಹ್ಮಾಂಡ ಕೋಟಿಯ**
**ಧರಿಸಿ ಗರ್ಭದಿ ಮೆರೆವ ಚಿನ್ಮಯ**
**ನರಗೆ ಸಾರಥಿಯಾದ ಮೇಲುಳಿದವರ ಪಾಡೇನು ||**
**ಹರಹರಾ ಮನುಜಾತರಲಿ ಸಿತ**
**ತುರಗ ತಾನಿನ್ನೇಸು ಧನ್ಯನೊ**
**ಶರಣರಲಿ ಮಗುಳೆಂತು ದಯವೋ ಭಕ್ತವತ್ಸಲಗೆ ||**

*ಧರ್ಮರಾಜನ ಧನ್ಯತಾಭಾವ*

**ದೇವನೀ ಚಿತ್ತೈಸಿದೇನಯ್ಯ ನಿನ್ನ |**
**ಸೇವಕರ್ಮೇಲಾಯ್ತೆ ಪೂರ್ಣ ಕಾರುಣ್ಯ |**
**ನಾವೆ ಧನ್ಯರು ನಮಗಿನ್ನಾವ ಭವದ |**
**ನೋವಿಲ್ಲವೆನಲೆಂದ ಸಾಮಜವರದ ||**

*ಭೀಷ್ಮನಲ್ಲಿ ಧರ್ಮರಾಜನ ಬಿನ್ನಹ –*

**ನೀವು ನಮ್ಮಲಿ ಮುನಿದುನಿಂದರೆ |**
**ನಾವು ಬದುಕುವುದುಂಟೆ ನಮಗಿ |**

**ನ್ನಾವ ಗತಿಯೆಂದಳಲುತಿರೆ ಮ |**
**ತ್ತಾವಿವೇಕಿಯು ನುಡಿದನು ||**
**ಪೊಡವಿ ಲಾಭಕೆ ನಿಮ್ಮ ಧುರದಲಿ |**

**ಮಡುಹಿ ಸಿರಿತನವಾಳ್ವ ತನುವಿದ |**
**ಸುಡಲಿ ವಿಪಿನಕೆ ನಮಗನುಜ್ಞೆಯ**
**ಕೊಡಿಸಿರೆಂದ ||**
**ಕಾದಿರಲ್ಕೆ ಸುರಜಾಲಾ | ನಾ | ನೊಯ್ದರೆ ತಡೆಯಲಿ ಕಾಲ ||**

*ದ್ರೌಪದಿಯ ಎಚ್ಚರಿಕೆಗೆ ಕೀಚಕನ ಸರಳ ತಿರಸ್ಕಾರ:*

**ತೆಗೆಯೆ ನಿನ್ನ ರಮಣರ್ ಗಿಮಣರ್ ಬಗೆವನಲ್ಲ ನಾನು |**
**ಜಗದೊಳಧಿಕ ವೀರನೆಂಬುದ ಸುಗುಣೆಯರಿಯೆ ನೀನು ||**

ಈ ಪ್ರಸಂಗದ ಜನಪ್ರಿಯತೆಗೆ ಪ್ರಸಂಗದ ಯೋಗ್ಯತೆಯಷ್ಟೆ ಅದರ ವಸ್ತುವೂ ಕಾರಣ. ಭಾರತೇ ಸಾರಮುದ್ಯೋಗಃ- ಎಂಬುದು ಪ್ರಸಿದ್ಧ ಪ್ರಾಚೀನ ವಚನ. ಉದ್ಯೋಗಪರ್ವವು ಮಹಾಭಾರತದ ಕೇಂದ್ರ ಸ್ಥಾನದಲ್ಲಿದ್ದು ಹಿಂದಿನ ಘಟನೆಗಳಿಗೂ ಯುದ್ಧಕ್ಕೂ ಮಧ್ಯದಲ್ಲಿ ಸಮಾಲೋಚನ ಪರ್ವದಂತಿದೆ. ಇಲ್ಲಿ ಬರುವ ಕೃಷ್ಣನ ಪಾತ್ರದ ಮಹತ್ತ್ವ, ಪಾಂಡವ ಕೌರವರ ವಿವಾದದ ವಿವಿಧ ಕೋನಗಳ ವಿವೇಚನೆ, ವಿವಿಧ ಸಮಾಲೋಚನೆಗಳು, ಕೌಟುಂಬಿಕ ಆಶಯಗಳು, ಸಂಧಾನ-ಸಂಗ್ರಾಮ ಆಶಯಗಳ ಸಂಘರ್ಷ, ವಿದುರನ ಭಕ್ತಿ, ಭೀಮ ದ್ರೌಪದೀ ಸಂವಾದದ ವಿಶಿಷ್ಟ ಸ್ವರೂಪ, ಕೃಷ್ಣ ಕೌರವ ಸಂವಾದ - ಮುಂತಾದ ಅಂಶಗಳಿಂದ ಇದು ಸಾಮಾಜಿಕರಿಗೆ ಆಪ್ತವಾಗಿದೆ. ಹೀಗಾಗಿ - ಸಾಮಾನ್ಯವಾಗಿ ಪ್ರದರ್ಶನದ ಆಕರ್ಷಕ ಅಂಶಗಳೆನಿಸಿದ ಶೃಂಗಾರ, ಯುದ್ಧ, ಜಲಕೇಳಿ, ಹಾಸ್ಯ, ಬೇಟೆ, ನೃತ್ಯ ಪ್ರಾಧಾನ್ಯ, ರಾಕ್ಷಸ ಪಾತ್ರಗಳ ಅಬ್ಬರಗಳು ಇಲ್ಲದ, ನಾಟಕೀಯ ತಿರುವುಗಳಿಲ್ಲದ ಸರಳಗತಿಯ ಈ ಪ್ರಸಂಗವು, ಪ್ರತ್ಯೇಕತೆಯನ್ನೂ, ತನ್ನ ವಸ್ತುವಿನ ಗಟ್ಟಿತನವನ್ನೂ ಶಕ್ತಿಯನ್ನಾಗಿ ಹೊಂದಿದೆ.

**ಕಥಾಸಾರ :** ಸ್ತುತಿ, ಪಾಂಡವರ ಒಡ್ಡೋಲಗ, ದ್ರುಪದ ಪುರೋಹಿತ ದೌತ್ಯ, ದ್ವಾರಕೆಯಲ್ಲಿ ಕೃಷ್ಣನೊಂದಿಗೆ ದುರ್ಯೋಧನ, ಅರ್ಜುನರಿಂದ ಸಹಾಯಯಾಚನೆ, ಸುರಭಿ ಪ್ರಕರಣದಿಂದಾಗಿ ಬಲರಾಮನ ತೀರ್ಥಯಾತ್ರೆ. ಕೃಷ್ಣನ ಪಾರ್ಥಸಾರಥ್ಯ ಸ್ವೀಕಾರ. ಪಾಂಡವರಲ್ಲಿ ಆಗಮನ. ದುರ್ಯೋಧನನಿಗೆ ಗುರುಗಳ ನೀತಿ ಉಪದೇಶ. ಕರ್ಣನ ಕೋಲಾಹಲ. ಸಂಜಯ ದೌತ್ಯ, ಪಾಂಡವರ ಉತ್ತರ. ಧೃತರಾಷ್ಟ್ರನಿಗೆ ಸನತ್ಕುಮಾರನ ಉಪದೇಶ. ಪಾಂಡವ ಕೃಷ್ಣರ ಸಮಾಲೋಚನೆ. ಭೀಮ, ದ್ರೌಪದೀ ಸಂವಾದ. ಪುನಃ ಸಮಾಲೋಚನೆ. ಕೃಷ್ಣನ ಪ್ರಯಾಣ, ವಿದುರಾತಿಥ್ಯ. ಕೃಷ್ಣನಿಂದ ಸಭಾ ಪ್ರವೇಶ, ಸಿಂಹಾಸನ ಭಂಗ, ದೌತ್ಯ-ಕೃಷ್ಣ ಕೌರವ ಸಂವಾದ, ವಿಶ್ವರೂಪ ದರ್ಶನ, ಭಾನುಮತಿ ನೀತಿ. ಕೌರವನ ಆತ್ಮನಿವೇದನ ಭಾಷಣ, ಕೃಷ್ಣನಿಂದ ಕರ್ಣಭೇದ. ಪಾಂಡವರಿಗೆ ಸಂಧಾನದ ವರದಿ, ಯುದ್ಧ ಸಿದ್ಧತೆ. ಭೀಷ್ಮ ಸೇನಾಧಿಪತ್ಯ, ಕರ್ಣನ ಶಸ್ತ್ರತ್ಯಾಗ, ಗೀತೋಪದೇಶ, ಯುದ್ಧ, ಚಕ್ರಗ್ರಹಣ, ಭೀಷ್ಮನಿಂದ ಕೃಷ್ಣಸ್ತುತಿ, ಪಾಂಡವರಿಂದ ಶಿಬಿರದಲ್ಲಿ ಭೀಷ್ಮನ ಭೇಟಿ. ಭೀಷ್ಮನ ಪತನ, ಶರಮಂಚ ಶಯನ. ಮಂಗಲ - ಇಷ್ಟು ಪ್ರಸಂಗ ಸಂಕ್ಷೇಪ.

ಪ್ರಸಂಗವು ಸರಳವೂ, ಅಭಿವ್ಯಕ್ತಿಯಲ್ಲಿ ಪರಿಷ್ಕೃತವೂ ಆಗಿದೆ. ಸಂಕ್ಷೇಪ ಮತ್ತು ಸ್ವಭಾವೋಕ್ತಿ ಈ ಕಾವ್ಯದ ಹೆಗ್ಗುರುತುಗಳು. ಪದಬಂಧಗಳ ಭಾವವು ನಾಜೂಕಾಗಿದ್ದು, ಹಾಡುಗಾರಿಕೆಗೆ ತುಂಬ ಒಗ್ಗುತ್ತದೆ. ಛಂದೋವೈವಿಧ್ಯ ಹದವಾಗಿದೆ. ಕೃಷ್ಣಸಂಧಾನದ ಒಟ್ಟುರೂಪವು ರಂಗದ ಅಳವಡಿಕೆಗೆ ಅಷ್ಟು ಅನುಕೂಲವಾಗಿಲ್ಲ. ಕರ್ಣಭೇದದ ಭಾಗ ತೀರ ಸಾಮಾನ್ಯವಾಗಿದೆ. ಭೀಷ್ಮಪರ್ವ ಭಾಗವು ರಂಗ ದೃಷ್ಟಿಯಿಂದ ಹೆಚ್ಚು ಅನುಕೂಲಕರವಾಗಿದೆ. ಕಥೆಯ ನಡೆ ಮೊನಚಾಗಿದೆ.

ಯಕ್ಷಗಾನ ವಲಯದಲ್ಲಿ ಜನಜನಿತವಾಗಿದ್ದು ಮನೆ ಮನೆಯಲ್ಲಿ ಗುನುಗುನಿಸುವ ಪದಗಳು ಈ ಪ್ರಸಂಗದವು. ಉತ್ತಮವಾದ ಪದ್ಯ ಹಲವನ್ನೂ ಉದ್ಧರಿಸಬಹುದಾದರೂ, ಕೆಲವನ್ನೂ ಮಾತ್ರ *ಇಲ್ಲಿ ಸೂಚಿಸಿದೆ:*

*ಈ ಭಾವಗಳನ್ನು ಇನ್ನಷ್ಟು ಪರಿಣಾಮಕಾರವಾಗಿ ಹೇಳಲು ಅಸಾಧ್ಯವೆಂಬಷ್ಟು ಆರ್ದ್ರತೆ ಈ ಸರಳ ಪದ್ಯಗಳಲ್ಲಿ ಅಡಕವಾಗಿವೆ.*

*ಗೀತ ಸೌಂದರ್ಯ, ಅರ್ಥಗೌರವಗಳಿಗೆ ದೃಷ್ಟಾಂತವಾಗಿ ಕೆಲವು ತುಣುಕುಗಳು.*

**ಧರಣಿಗೋಸುಗ ನೀವು ನಿಜ ಸೋದರರು ಹಳಚುವಿರೇಕೆ.....**
**ವನವೇ ಸೌಖ್ಯ ರಣದಿ ಸೋಲ್ವುದರಿಂದ...**
**ಕೆಡಿಸದಿರಿ ಕಾರ್ಯವನು ರೋಷವ | ಬಿಡಿರಿಗುಣ ಮುಂದಿರ್ಪುದು...**
**ಕೋಮಲಾಂಗಿ ಕೇಳೇ | ಮದಗಜ | ಗಾಮಿನಿ ಪಾಂಚಾಲೆ.....**
**ಏನಯ್ಯ ಪವನಜನೆ | ಕೌರವರಿಗೆ ನಾನೆ ದುರ್ಜನಳಾದೆನೆ |.....**
***ಮರುಗುತ್ತ ಭೀಮನ ಕೊರಳಪ್ಪಿ ನಯನದ***
**ಶರದೊಳಂಗವ ತೊಳೆದು |**
**ವರಭಾಷೆಗಳ ತೀರ್ಚದಿರೆ ಪ್ರಾಣವಿಡಿಯೆನೆಂ**
**ಬರಸಿಗೆ ಮಗುಳೆಂದನು ||**

**ಪರದೇಸಿಗಳಿಗ್ಯಾಕೆ ಬವರ ಭೂಪರೊಳು..**
**ದೊರೆತನ ಸುಡಲಿನ್ನು ಬಡತನವೆನಗಕ್ಕು |**
**ಕುರುರಾಯ ಸುಖಿಯೆಂದು ಕೇಳ್ದರೆ ಸಾಕು ||**
**ನೀಮಾಡಿದಪರಾಧವ | ಕ್ಷಮಿಸುತಾ**
**ರಾಮದಲಿ ತಾಳ್ದದಣುವ**
**ತಾಮರೆತು ನಿನ್ನೊಳಿಂದು | ಕೂಡಿರ್ಪ |**
**ರಾ ಮಹಿಮರೆನಲೆಂದನು ||**

***ಪೊಡವಿಗೋಸುಗ ಬಳಗ ಸಹಿತಲಿ ನಡೆಯಬೇಡ ಕೃತಾಂತನಲ್ಲಿಗೆ....***
**ವರಪಾಂಡು ಸುತರೊಳಿಂದು | ಸಂಗರಬೇಡ**
**ಸೆರಗೊಡ್ಡಿ ಬೇಡುವೆನು ||....**

ಶ್ರೀ ಕೃಷ್ಣನ ಚಕ್ರಗ್ರಹಣ ಪ್ರಸಂಗದಲ್ಲಿ ಭೀಷ್ಮನು

ಹೇಳುವ – **ಶ್ರೀಮನೋಹರ ಸ್ವಾಮಿ ಪರಾಕು**
**ಪ್ರೇಮದೊಳೆನ್ನಯ ಮಾತ ಲಾಲಿಸಬೇಕು....**

ಎಂದು ಆರಂಭವಾಗುವ ಮೂರು ಪದ್ಯಗಳಂತೂ ಭಾವ, ಭಾಷೆ, ಪದ ಬಂಧದ ಅಂದಗಳ ಒಟ್ಟಂದದ ಅತಿ ಸುಂದರ ದೃಷ್ಟಾಂತಗಳಾಗಿವೆ. ಇವು ಯಕ್ಷಗಾನ ಪದ್ಯ ರತ್ನಗಳಾಗಿವೆ.

– ಕವಿಯು ಆಕರವೊಂದನ್ನು (ಗದುಗು ಭಾರತದ ಭೀಷ್ಮಪರ್ವ) ಕತೆಯ ಮೈಗೆಡಿಸದೆ ಎಷ್ಟು ಸೊಗಸಾಗಿ ಒಂದು ಗೀತ ಪ್ರಬಂಧವಾಗಿ ಬರೆಯಬಹುದು ಎಂಬುದಕ್ಕೂ ಭೀಷ್ಮಪರ್ವ ಪ್ರಸಂಗವೊಂದು ಉದಾಹರಣೆ.

**೩. ಭೀಷ್ಮಾರ್ಜುನ ಕಾಳಗ :** ತಾಳಮದ್ದಳೆಯ ಪ್ರಸಂಗವೆಂದೆ ಪ್ರಖ್ಯಾತವಾಗಿರುವ ಈ ಕೃತಿಯು ಬಹಳಷ್ಟು ಜನಪ್ರಿಯ, ಪ್ರಚಲಿತ. ಇದರ ಕವಿ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳು (ಸು. ೧೮೭೦-೧೯೪೫) ವಿದ್ವಾಂಸರು. ಕಲಾವಿದರೂ ಆಗಿದ್ದವರು. ತೀರ್ಥಹಳ್ಳಿ ಬಳಿಯ ಹಲಸಿನಹಳ್ಳಿಯವರು, (ಪನಸಾಪುರ)

**– ಪರಮ ತುಂಗಾತೀರ ಪನಸಾ | ಪುರದ ನಾಗೇಂದ್ರಾಖ್ಯತನುಜನು |**
**ನರಹರಿಯ ನಾಮಕನು ಗೆಯ್ದಿಹ | ಕೃತಿಗಳಿದನು ||**

ಎಂದು ಪ್ರಸಂಗದಲ್ಲಿ ತಿಳಿಸಿದ್ದಾರೆ.

ಶಾಸ್ತ್ರಿಗಳು ಓರ್ವ ಪ್ರಮುಖ ಪ್ರಸಂಗಕವಿ. ಇಪ್ಪತ್ತಕ್ಕೂ ಮಿಕ್ಕ ಕೃತಿಗಳನ್ನು ನೀಡಿದ್ದು, ಇವೆಲ್ಲವೂ ರಂಗದಲ್ಲಿ ಮೆರೆದ ಕೃತಿಗಳು, ಈಗಲೂ ಬಳಕೆಯಲ್ಲಿವೆ.

ಈ ಕೃತಿಗೆ ಆಕರ ವ್ಯಾಸ ಭಾರತದ ಭೀಷ್ಮಪರ್ವ. ಜೊತೆಗೆ ಕೃತಿಕಾರನ ಸ್ವಂತ ಕಲ್ಪನೆಯ ಸನ್ನಿವೇಶಗಳಿವೆ. ಗದುಗು ಭಾರತದ ಋಣ ಸ್ವಲ್ಪಮಾತ್ರ ಇದೆ.

**ಪ್ರಸಂಗ ಸಾರ :** ಸ್ತುತಿ. ಪಾಂಡವರ ಒಡ್ಡೋಲಗ, ಧರ್ಮರಾಜನು ಯುದ್ಧದ ಬಗ್ಗೆ ವ್ಯಥಿಸುವುದು, ಸೋದರರ ಅಸಮಾಧಾನ. ಕೃಷ್ಣ ಧರ್ಮರಾಜ ಸಂವಾದ. ಯುದ್ಧ ಸಿದ್ಧತೆ, ಭೀಷ್ಮ ದುರ್ಯೋಧನ ಸಂವಾದ, ಭೀಷ್ಮ ಸೇನಾ ಪಟ್ಟ. ಯುದ್ಧ ಸಿದ್ಧತೆ, ಧರ್ಮರಾಜನು ಪ್ರತಿಪಕ್ಷದ ಹಿರಿಯರಿಂದ ಆಶೀರ್ವಾದ ಪಡೆಯುವುದು. ಗೀತೋಪದೇಶ. ಕೌರವ ಧೃಷ್ಟದ್ಯುಮ್ನ, ಭೀಮ, ಭಗದತ್ತ, ಘಟೋತ್ಕಚ, ಅಭಿಮನ್ಯು ಇರಾವಂತ, ಶಲ್ಯ ಮೊದಲಾದವರ ಯುದ್ಧಗಳು.

ಭೀಷ್ಮ ಕೃಷ್ಣರಿಗೆ ಕರ್ಮ, ಕರ್ತವ್ಯಗಳ ಕುರಿತ ಸಂವಾದ. ಉಭಯರ ಪ್ರತಿಜ್ಞೆ. ಭೀಷ್ಮಾರ್ಜುನರ ಯುದ್ಧ. ಚಕ್ರಗ್ರಹಣ, ಭೀಷ್ಮನಿಂದ ಶ್ರೀಕೃಷ್ಣಸ್ತುತಿ, ಪಾಂಡವರಿಂದ ಭೀಷ್ಮನ ಶಿಬಿರ ಪ್ರವೇಶ. ಯುದ್ಧಗಳು. ಶಿಖಂಡಿ ಪ್ರವೇಶ. ಭೀಷ್ಮನ ಶರಶಯನ. ಕರ್ಣ, ಭೀಷ್ಮ ಸಂವಾದ. ಭೀಷ್ಮನ ಶರತಲ್ಪಯೋಗ. ಮಂಗಲ.

ಸರಳವಾದ ಸಲೀಸಿನ ಶೈಲಿ, ಅಪ್ರಯತ್ನ ಪ್ರಾಸ, ಶಬ್ದ ಜೋಡಣೆಗಳುಳ್ಳದ್ದು ಈ ಪ್ರಸಂಗ, ಛಂದೋವೈವಿಧ್ಯ ಮಿತ ಆದರೂ ಔಚಿತ್ಯವರಿತು ಪ್ರಯುಕ್ತವಾಗಿದೆ. ಶಾಸ್ತ್ರಿಗಳ ಇತರ ಪ್ರಸಂಗಗಳ ಹಾಗೆ ಇದು ಕೂಡ, ಪಾತ್ರಗಳ ಸಂವಾದಕ್ಕೊದಗುವ ರೀತಿಯಲ್ಲಿ ರೂಪಿತವಾಗಿದೆ. ಒಂದು ಸ್ತ್ರೀ ಪಾತ್ರವೂ ಇಲ್ಲ (ಇದಕ್ಕೆ ಕಥೆಯ ರೂಪ ಕಾರಣ) ದ ಪ್ರಸಂಗ ಬಹುಶಃ ಇದೊಂದೆ.

ಆರಂಭದಲ್ಲಿ ಧರ್ಮರಾಜನ ಚಿಂತೆ, ಕೃಷ್ಣನ ಯುದ್ಧ ಪ್ರೋತ್ಸಾಹದ ಸನ್ನಿವೇಶವಿದೆ. ಸೇನಾಧಿಪತ್ಯ ಸನ್ನಿವೇಶದಲ್ಲಿ ಭೀಷ್ಮ ಕೌರವರೊಳಗೆ ಸುದೀರ್ಘ ಸಂವಾದವಿದೆ. ಕರ್ಮಬಂಧನವೆಂದು ಪ್ರಸಿದ್ಧವಾಗಿ, ತಾಳಮದ್ದಳೆ ರಂಗದ ಒಂದು ಮುಖ್ಯ ಘಟ್ಟವೆನಿಸಿರುವ ಕೃಷ್ಣ-ಭೀಷ್ಮ ಸಂವಾದವಿದೆ. ಈ ಮೂರೂ ಕವಿಯ ಕಲ್ಪನೆಗಳಾಗಿದ್ದು, ಮೂರೂ ಸೊಗಸಾಗಿವೆ. ಭೀಷ್ಮಪರ್ವದ ಕತೆಯನ್ನು ಆಧರಿಸಿ ಒಂದು ಸ್ವತಂತ್ರ ಖಂಡಕಾವ್ಯವನ್ನು ರಚಿಸಿದಂತೆ ಹಿಂದಿನ ಕತೆಯ ಸಿಂಹಾವಲೋಕನಕ್ಕೂ ಅಲ್ಲಲ್ಲಿ ಅವಕಾಶಗಳೊದಗಿಸಿದೆ ಈ ರಚನೆ. ಯುದ್ಧದ ಪದ್ಯಗಳಲ್ಲಿ ಕೆಲವು ಅನವಶ್ಯ ಮತ್ತು ನೀರಸವೆನಿಸದಿರುವುದಿಲ್ಲ.

ಭಗವದ್ಗೀತೆಯನ್ನು ಇಪ್ಪತ್ತೊಂದು ಪದ್ಯಗಳಲ್ಲಿ ಸಂಗ್ರಹಿಸಿ ಒಂದು ಬಗೆಯಲ್ಲಿ ಪುನಾರಚಿಸಿರುವ ಕವಿ, ಅರ್ಜುನ ವಿಷಾದಕ್ಕೆ ಉತ್ತರವಾಗಿ, ಗೀತೆಯಲ್ಲಿ ಇಲ್ಲದ ವಿಚಾರವಾದ ಕೌರವರು ಅನ್ಯಾಯಗಾರರು ಆದುದರಿಂದ ವಧಾರ್ಹರು ಎಂಬುದನ್ನು ಹೀಗೆ ಅಳವಡಿಸಿದ್ದಾರೆ.

**ಅರಗಿನಾಲಯ ಗೆಯ್ದನು | ಎಲೆ ಪಾರ್ಥ | ಬೆರೆಸಿಮೆಲಿಸಿದ ವಿಷವನು |**
**ತರುಣಿಮಾನವ ಕಳೆದನು | ಧರೆಸೆಳೆದು | ಧುರಕೆ ಬಂದಿದಿರಾದನು || ೧ ||**

ಇದು ಕವಿಯ ಸೂಕ್ಷ್ಮಜ್ಞತೆಗೆ ಉದಾಹರಣೆ.

ಭೀಷ್ಮಸೇನಾಧಿಕಾರಕ್ಕೆ ಕರ್ಣನ ಆಕ್ಷೇಪ ಮತ್ತು ಬಹಿಷ್ಕಾರಗಳನ್ನು ಕವಿ ಜಾಣ್ಮೆಯಿಂದ ಬಿಟ್ಟಿದ್ದು, ಅದರ ಉಲ್ಲೇಖ ಮಾತ್ರ ಮುಂದಿನ ಸನ್ನಿವೇಶವೊಂದರಲ್ಲಿ ಬಂದಿದೆ. ಶರತಲ್ಪ ಪ್ರಕರಣದಲ್ಲಿ ಭೀಷ್ಮ-ಕರ್ಣ ಸಂವಾದವು ಭಾವಪೂರ್ಣವಾಗಿದ್ದು, ಈ ವಿವರಗಳು ಕವಿಯ ಒಲವನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಪ್ರಸಂಗದ ಕೆಲವು ಭಾವಪೂರ್ಣವಾದ ಪದ್ಯಗಳು :

**ಒಂದೇ ವಂಶಾವಳಿಯೊಳು ಪುಟ್ಟಿ ದುಷ್ಕರ್ಮ**
**ಬಂಧದಿ ಬಿಗಿವಡೆದು |**
**ಬಂಧುಬಾಂಧವ ಗುರುಹಿರಿಯರೊಳ್ ಕಲಹವ**
**ತಂದನು ಕೌರವನು || (ಧರ್ಮರಾಜನ ವ್ಯಥೆ)**

**ಧರೆಯ ಸಾಮದಿ ಕೊಡನು ಸಂಗರ | ವಿರಚಿಸುವುದೆಂದೆನುತ ಚಿನ್ಮಯ**
**ಗರುಹಿ ಕಳುಹಿದೆ ನೀನು ಮುಂದಣ | ಪರಿಯನರಿಯದೆ ತರಳನೆ ||**
**(ಭೀಷ್ಮ ದುರ್ಯೋಧನ ಸಂವಾದ)**

**ಸ್ಥಿರವಿದಾರಿಗೆ ಕೌರವ | ಗರ್ವಿಸಬೇಡ | ಬರಿದೆಯಸ್ಥಿರಭೋಗವ || (ಅದೇ)**
**ತರಳ ಕೇಳೆಲೊ ಕರುಣವೆಂತಾದಡಾಗಿರಲಿ | ಹಿರಿಯವನು**
**ಭೀಷ್ಮ ಬಾಳಿರ್ದು**

**ಧುರವಗೈಸಿದನೆಂಬ ನಿಂದೆಗಳು ಬರುತಿಹುದು | ಕುರುರಾಯ –**
**ತ್ಯಜಿಸೀಗ ಛಲವ || (ಅದೇ)**

**ಅರಿಗಳ ಜಯಿಸುವ ತೆರದಿ | ತವ | ತರಳರೊಳ್ ನೀವ್‌ದಯದಿ |**
**ಪರಸುವುದುಚಿತದಿ ಹಿರಿಯರೊಳಸ್ತ್ರವ | ಧರಿಸಿ ಮಾರ್ಮಲೆವುದ**
**ಕ್ಷಮಿಸುವುದೀಗಳು**
**(ಭೀಷ್ಮರಲ್ಲಿ ಧರ್ಮರಾಜನ ವಿನಂತಿ)**

ಅರ್ಥ, ಅಭಿನಯಗಳೆರಡಕ್ಕೂ ಒದಗುವ ಪದ್ಯಗಳ ಉದಾಹರಣೆ –

**ಧರಿಸಿದೆಯ ಮತ್ಸ್ಯಾದಿ ರೂಪುಗಳ ನೋಡೀಗ |**
**ನರನ ಸಾರಥಿಯಾದ ವಿಧಿಯನೇನೆಂಬೆ ||**
**ಕುರುಪತಿಯ ದುಷ್ಕರ್ಮವೇಕೆ ನಿಂದಿಪುದೀಗ |**
**ಧರೆ ಚತುರ್ದಶ ಪೊರೆವ ಮಹಿಮಗಿಂತಾಗೆ ||**
**(ಭೀಷ್ಮನು ಕೃಷ್ಣನಲ್ಲಿ ಮಂಡಿಸುವ ಜಿಜ್ಞಾಸೆ)**

ಇದೇ ರೀತಿಯಲ್ಲಿ ಭೀಷ್ಮಾರ್ಜುನ ಸಂವಾದ, ಭೀಷ್ಮನ ಕೃಷ್ಣಸ್ತವ ಮೊದಲಾದೆಡೆಗಳಲ್ಲೂ ಪದಬಂಧ, ಅರ್ಥದ ನಿಬಿಡತೆ, ಅಭಿನಯ ಪೋಷಕ ಪ್ರಯೋಗಗಳನ್ನು ನೋಡಬಹುದು.

ಕರ್ಣ ಭೀಷ್ಮ ಸಂವಾದದ ಏಳು ಪದ್ಯಗಳು, ಒಂದು ಸೊಗಸಾದ ಸಂವಾದವಾಗಿದೆ ;

ಇಂತಹ ಓರ್ವ ಸಮರ್ಥ ಕವಿಯು - ರಾಜರಾಜೇಶಿ, ಪಾಲಾಂಬುಧಿಶಯನ, ತ್ರಿಪುರೇಶಿ, – ಮೊದಲಾದ ಪದಗಳನ್ನು ಬಳಸಿರುವುದು ವಿಚಿತ್ರವಾಗಿದೆ.

ಭೀಷ್ಮಾರ್ಜುನವು ಮಾತುಗಾರಿಕೆಯಿಂದ ಬೆಳೆದು ನಿಂತಿರುವ ಪ್ರಸಂಗ. ತಾಳಮದ್ದಳೆ ರಸಿಕರಿಗೆ ಪ್ರಿಯವಾದ ಪ್ರಸಂಗ. ಇದರಲ್ಲಿ ಪಾಂಡವ ಕೌರವ ವಿವಾದದ ಚರ್ಚೆ, ಭಕ್ತಿ, ಆಧ್ಯಾತ್ಮ, ಭಾವನಾತ್ಮಕತೆಗಳು ಮೇಳೈಸಿವೆ.

**೪. ಅಭಿಮನ್ಯು ಕಾಳಗ – ಸೈಂಧವ ವಧೆ :**

*ಇದು ಯಕ್ಷಗಾನದ ಎಲ್ಲ ತಿಟ್ಟುಗಳಲ್ಲಿ ಬಳಕೆ ಇರುವ, ಬಹು ಪ್ರಸಿದ್ಧ ಪ್ರಸಂಗ, ವಿಶೇಷವಾಗಿ* ಪೂರ್ವಾರ್ಧವಾದ ಅಭಿಮನ್ಯುಕಾಳಗವು ರಂಗದಲ್ಲಿ ಅಸಂಖ್ಯ ಪ್ರದರ್ಶನಗಳನ್ನು ಕಂಡಿದೆ. ಇದಕ್ಕೆ ಅದರ ವಸ್ತು ಮತ್ತು ಪ್ರಸಂಗದ ಯೋಗ್ಯತೆ ಎರಡೂ ಕಾರಣವಾಗಿವೆ.

ಪ್ರಸಂಗ ಕವಿ ಈಗಾಗಲೇ ಪ್ರಸ್ತಾವಿಸಿದ ದೇವಿದಾಸ (ಸ. ಕ್ರಿ. ೧೮೦೦). ಕಥಾನಕವು ಗದುಗು ಭಾರತದ ಸಂಕ್ಷಿಪ್ತ ಪ್ರಸಂಗೀಕರಣವಾಗಿದೆ. ಅಭಿಮನ್ಯು ಕಾಳಗ, ಸೈಂಧವ ವಧೆ ಎಂಬ ಎರಡು ಸಂಧಿಗಳಿವೆ.

**ಪ್ರಸಂಗ ಸಾರ :** ದುರ್ಯೋಧನನ ಚಿಂತೆ, ದ್ರೋಣರಿಂದ ಧೈರ್ಯವಾಕ್ಯ, ಚಕ್ರವ್ಯೂಹ ರಚನೆ, ಅರ್ಜುನನಿಗೆ ಸಂಶಪ್ತಕರಿಂದ ಆಹ್ವಾನ. ಚಕ್ರವ್ಯೂಹದ ಕುರಿತು ಧರ್ಮಜನ ಚಿಂತೆ. ಅಭಿಮನ್ಯುವಿನ ಪ್ರವೇಶ, ವೀರವಚನ, ಧರ್ಮಜನಿಂದ ಅನುಮತಿ ನಿರಾಕರಣ, ಕೊನೆಗೆ ಒಪ್ಪಿಗೆ, ಸುಭದ್ರೆಯ ದುಃಖ, ಅಭಿಮನ್ಯುವಿನ ವೀರವಾಣಿ. ಯುದ್ಧರಂಗ ಪ್ರವೇಶ, ದ್ರೋಣ, ಕರ್ಣ, ಶಲ್ಯ, ದುಶ್ಶಾಸನರೊಂದಿಗೆ ಅಭಿಮನ್ಯುವಿನ ಪ್ರಚಂಡ ಯುದ್ಧ, ಕೌರವ ಪಡೆಯ ಪರಾಭವ, ದ್ರೋಣ ಸೂಚನೆಯಂತೆ ಕರ್ಣನಿಂದ ಅಭಿಮನ್ಯುವಿಗೆ ಪರಾಙ್ಮುಖಾಘಾತ, ನೆರವಿಗೆ ಬಂದ ಭೀಮಾದಿಗಳಿಗೆ ಜಯದ್ರಥನಿಂದ ತಡೆ. ಘೋರಯುದ್ಧದಲ್ಲಿ ಅಭಿಮನ್ಯು ವಿಕ್ರಮ, ದುಶ್ಶಾಸನ ಸುತನಿಂದ ಅಭಿಮನ್ಯುವಧೆ, ಕಾಳ್ಗಿಚ್ಚು ಉರಿದು ನಿಲುವಂತೆ ಅಭಿಮನ್ಯುವಿನ ವೀರಶಯನ.

ಪಾಂಡವ ಪಕ್ಷದಲ್ಲಿ ದುಃಖ, ಗೋಳು, ವೇದವ್ಯಾಸ, ಕೃಷ್ಣರಿಂದ ಸಮಾಧಾನ, ಸೈಂಧವವಧೆಗೆ ಅರ್ಜುನನ ಶಪಥ. ಭಯಗೊಂಡ ಸೈಂಧವನಿಗೆ ದ್ರೋಣರ ವ್ಯೂಹರಕ್ಷೆ, ಯುದ್ಧಗಳು. ಹರಿಯ ಮಾಯದಿಂದ ಹಗಲು ಕತ್ತಲೆಯಾಗಿ ಸೈಂಧವಧೆ. ಕೌರವಪಡೆಯ ಚಿಂತೆ, ಪಾಂಡವರಿಗೆ ಜಯ, ಮಂಗಲ.

ವೀರ ರೌದ್ರ, ಕರುಣಾರಸ ಪ್ರಧಾನವಾದ ಈ ಪ್ರಸಂಗದಲ್ಲಿ ಸನ್ನಿವೇಶ ವೈವಿಧ್ಯ, ರಂಗೋಚಿತ ದೃಶ್ಯಾವಳಿ, ಪಾತ್ರ ವೈವಿಧ್ಯಗಳಿದ್ದು, ಯಕ್ಷಗಾನ ರಸಿಕರು ನೋಡಿ ದಣಿಯದ ಪ್ರಸಂಗವೆನಿಸಿದೆ. ಸಂದರ್ಭೋಚಿತವಾದ ಪದ್ಯಗಳು, ಛಂದಸ್ಸು, ಪದ್ಯ ಸಂಖ್ಯೆಗಳಿಂದ ಕೂಡಿದ್ದು, ರಂಗದ ನಡೆಗೆ ಚೆನ್ನಾಗಿ ಒದಗುತ್ತದೆ. ರಚನೆ ಸರಳವಾಗಿ ಶಕ್ತಿಶಾಲಿಯಾಗಿದ್ದು, ಅಚ್ಚುಕಟ್ಟಾಗಿದೆ.

*ದೃಷ್ಟಾಂತವಾಗಿ ಕೆಲವು ಪದ್ಯಗಳು* –

ಯುಧಿಷ್ಠಿರನಲ್ಲಿ ಅಭಿಮನ್ಯುವಿನ ವೀರವಾಣಿ -

**ಬೊಪ್ಪನೆ ಬಿಡುಬಿಡು ಚಿಂತೆಯ ರಿಪುಗಳ |**
**ಸೊಪ್ಪರಿವೆನು ಬಿಡದೆ |**
**ತಪ್ಪದೆ ಚಕ್ರವ್ಯೂಹವ ತೆಗೆದಾ |**
**ನೊಪ್ಪಿಸುವೆನು ಯಮಗೆ ||**

*ಮಾರಿಗೆ ಹಬ್ಬ ವ ಮಾಡುವ ಕೌರವ –*

**ವೀರರ ತಲೆಗಡಿದು |**
**ಸೂರೆಗೊಂಬೆ ನಿಮಿಷಾರ್ಧದಿ ದುರ್ಗವ**
**ಪೌರುಷ ನೋಡೆಂದ ||**

*ಸುಭದ್ರೆಯ ದುಃಖ –*

**ಏತಕಿಂತು ಬುದ್ಧಿ ಬಂತು | ಕಂದ ಕಂದ | ನಿನಗೆ**
**ಪ್ರೀತಿಯೇನೋ ಮರಣದೊಸಗೆ | ಕಂದ ಕಂದ ||**
**ರೀತಿಯಲ್ಲ ಪೋಪುದಿಂದು ಕಂದಕಂದ | ಎನ್ನ |**
**ಘಾತಿಸಿ ನೀ ರಣಕೆ ಪೋಗು | ಕಂದ ಕಂದ |**

ಕಾಂಭೋಜಿ ಏಕತಾಳ ಬಂಧದ ಈ ಪದವು, ಮೂರು ಮಾತ್ರೆಯ ವರಣದೊಂದಿಗೆ ಭಾವಪುಷ್ಟಿಯಿಂದ ಹಾಡಲು ಒದಗುವಂತಹದು.

*ಅಭಿಮನ್ಯು ಸುಭದ್ರೆಯನ್ನು ಬೀಳ್ಕೊಂಡು ಹೊರಡುವುದು –*

**ಸುರಿವಕಂಬನಿಯನ್ನು ಸೆರಗಿಂ |**
**ದೊರೆಸಿ ಜನನಿಯ ಪಾದರಜವನು |**
**ಶಿರದೊಳಾಂತಾ ಪಾರ್ಥನಂದನ |**
**ಪೊರಟ ಧುರಕೆ ||**

*ಅಭಿಮನ್ಯುವನ್ನು ದುರ್ಯೋಧನನು ಮಾತಾಡಿಸುವ ರೀತಿ –*

**ಭಳಿರೆ ಪಾರ್ಥನಣುಗ ನಿನ್ನ | ಬಲುಹಿಗಿನ್ನು  ಸರಿಯದಾರು**
**ಹಲವರೇತಕೊಬ್ಬ ಸಾಕು ಕುಲಕೆ ರತ್ನನು |**
**ಉಗುಣನು ಕೃತಾರ್ಥನಾದ | ನೊಲಿದು ನಿನ್ನ ಪಡೆದ ಬಗೆಯೊ |**
**ಳಲಸದೆಂದ ಕೌರವೇಂದ್ರ | ತಲೆಯ ತೂಗುತ ||**

*ಅಭಿಮನ್ಯುವಿನ ಮರಣದ ಶಯ್ಯೆಯ ಸ್ಥಿತಿ –*

**ಕಾಳಗಿಚ್ಚೆದ್ದು ಭಡಾಳಿಸಿ ನಿಲುವಂತೆ | ಬಾಲಕನಸ್ರುತಲ್ಪದಲಿ**
**ತೋಳದಿಂಬಿನೊಳಿರೆ ಕೌರವಾತ್ಮಜರಂದು | ಕಾಲೆಡೆಯಲಿ ಕೆಡೆದಿರಲು ||**

**೫. ದ್ರೋಣಪರ್ವ :**

ಈ ಪ್ರಸಂಗವು ಹೆಚ್ಚು ಬಳಕೆಯಲ್ಲಿಲ್ಲದ ಕೃತಿ. ಇದರಲ್ಲಿ ಸೈಂಧವ ವಧಾನಂತರದ ದ್ರೋಣಪರ್ವದ ಕಥೆಯಿದೆ.  ಇದರ ಕರ್ತೃ ಉಡುಪಿ ರಾಜಗೋಪಾಲಾಚಾರ್ಯ. ಕಾಲ ಸು. ೧೯೦೦. ಉಡುಪಿ ಸೋದೆ ಮಠದಲ್ಲಿ ಉದ್ಯೋಗದಲ್ಲಿದ್ದ ವಿದ್ವಾಂಸರು, ಬಹುಶಃ ಅರ್ಥದಾರಿಯೂ ಆಗಿದ್ದವರು.

ಈ ಜಗದಿ ಗುರುರಾಜ ಸೇವಕ | ರಾಜಗೋಪಾಲಾಖ್ಯ ಎಂದು ತನ್ನ ಬಗೆಗೆ ತಿಳಿಸಿದ್ದಾರೆ.

**ಪ್ರಸಂಗ ಸಾರ :** ಸೈಂಧವ ವಧೆಯ ಬಳಿಕ ಪಾಂಡವರ ಒಡ್ಡೋಲಗ. ದುರ್ಯೋಧನನ ಚಿಂತೆ, ದ್ರೋಣನ ಅಭಯ ವಚನ, ದುರ್ಯೋಧನನ ಆಕ್ಷೇಪ, ದ್ರೋಣ ಪ್ರತಿಜ್ಞೆ, ಅರ್ಜುನ ಸುಭದ್ರೆ ಸಂವಾದ. ದ್ರೋಣಾರ್ಜುನ ಯುದ್ಧ. ಕೃಷ್ಣ-ದ್ರೋಣ ಸಂವಾದ. ಪುನಃ ಯುದ್ಧ, ಕರ್ಣನ ವೀರವಚನ, ಕರ್ಣಾರ್ಜುಯುದ್ಧ. ಘಟೋತ್ಕಚನ ಪ್ರವೇಶ, ಮಾಯಾಯುದ್ಧ, ಮಾರುವೇಷದಿಂದ ಕೌರವನಾಗಿ, ದ್ರೋಣನಾಗಿ, ಮೋಹಿಸುವುದು, ಕೌರವ-ಕರ್ಣ ವಿವಾದ, ಅಶ್ವತ್ಥಾಮನಿಂದ ಪರಿಹಾರ, ಮಾಯಾ ಯುದ್ಧ, ಕರ್ಣನ ಶಕ್ತ್ಯಾಯುಧದಿಂದ ಘಟ್ಕೋತ್ಕಚವಧೆ.

ಎರಡನೆಯ ಸಂಧಿಯಲ್ಲಿ - ಕರ್ಣಾರ್ಜುನ ಸಮರ. ದ್ರೋಣನಿಂದ ವಿರಾಟನ ವಧೆ, ದ್ರುಪದ ವಧೆ, ಸಪ್ತರ್ಷಿಗಳಿಂದ ದ್ರೋಣನಿಗೆ ಉಪದೇಶ. ಪಾಂಚಾಲರ ಯುದ್ಧ, ಅಶ್ವತ್ಥಾಮ ಗಜ ವಧೆ, ಭೀಮ-ದ್ರೋಣ ಕಾದಾಟ, ದ್ರೋಣಾರ್ಜುನ ಯುದ್ಧ, ದೃಷ್ಟದ್ಯುಮ್ನನ ಯುದ್ಧ, ಧರ್ಮರಾಜ ವಚನದಿಂದ ದ್ರೋಣನ ಚಿಂತೆ, ಜೀವನಾವಲೋಕನ, ದ್ರೋಣರ ದೇಹತ್ಯಾಗ, ದೃಷ್ಟದ್ಯುಮ್ನನಿಂದ ದ್ರೋಣ ಕಾಯ ಖಂಡನ. ದೃಷ್ಯದ್ಯುಮ್ನ ಅರ್ಜುನರ ವಿವಾದ, ಸಾತ್ಯಕಿ ದೃಷ್ಟದ್ಯುಮ್ನ ಕಲಹ, ಭೀಮನಿಂದ ಸಮಾಧಾನ ವಚನ, ಸಂಧಿ, ಕೃಪ ಅಶ್ವತ್ಥಾಮರ ಆಗಮನ. ಅರ್ಜುನ ಅಶ್ವತ್ಥಾಮ ಯುದ್ಧ. ನಾರಾಯಣಾಸ್ತ್ರ ಪ್ರಯೋಗ. ಕೃಷ್ಣನ ಉಪಾಯದಿಂದ ನಿವಾರಣ, ಅಶ್ವತ್ಥಾಮನ ಯುದ್ಧ ತ್ಯಾಗ. ವ್ಯಾಸೋಪದೇಶ. ಪಾಂಡವರ ವಿಜಯೋತ್ಸವ. ಮಂಗಲ.

ಇದು ವಿಶಿಷ್ಟ ಪ್ರಸಂಗ. ವ್ಯಾಸಭಾರತವನ್ನು ಆಶ್ರಯಿಸಿದ್ದು, ಘಟೋತ್ಕಚನು ವೇಷಾಂತರಗಳಿಂದ ಕೌರವಸೇನೆಯಲ್ಲಿ ಗೊಂದಲವನ್ನು ಹುಟ್ಟಿಸುವ ಪ್ರಕರಣ ಬೇರಾವುದೋ ಆಕರವನ್ನು ಆಧರಿಸಿದೆ. ಭಾಷೆಯು ಶಿಷ್ಟವೂ, ಗಂಭಿರವೂ ಆಗಿದ್ದರೂ, ಪದಪ್ರಯೋಗ ಪದ್ಯಬಂಧ ಸಲೀಸಾಗಿಲ್ಲ, ತುಸು ಕೃತಕವಾಗಿದೆ. ರಚನಾ ವೈಶಿಷ್ಟ್ಯದಿಂದಲೂ, ಭಾರತಯುದ್ಧದ ಸಮಗ್ರ ಕಥೆ ಈ ಸಂಪುಟದಲ್ಲಿ ಅಳವಡಿಸ ಬೇಕೆಂಬುದಕ್ಕಾಗಿಯೂ ಈ ಪ್ರಸಂಗವನ್ನು ಸೇರಿಸಿದೆ.

ಯುದ್ಧ ತುಸು ಹೆಚ್ಚಾಗಿ ಇದ್ದರೂ, ರಂಗಕ್ಕೆ ಬೇಕಾದ ವಸ್ತುವಿನ ಘನತೆ, ರಸಪರಿಪೋಷಣೆ ಈ ಕೃತಿಯಲ್ಲಿದೆ. ಮುಖ್ಯವಾದ ಕೆಲವು ಪದ್ಯ ಸಂದರ್ಭಗಳು :

*ದ್ರೋಣಾರ್ಜುನ ಸಂವಾದ:*

**ಬಲ್ಲೆ ಬಲ್ಲೆ ನಿನ್ನ ಸರಳ ನಿಲ್ಲು ಪಾರ್ಥನೆ | ಹುಲ್ಲು ವಿಪ್ರನೆಂತಲೆಣಿಸಬೇಡ ಸುಮ್ಮನೆ |**
**ನಿಲ್ಲು ಶರದಸವಿಯ ನೋಡಲಿಲ್ಲವೇನೆಲಾ | ಬಿಲ್ಲವಿದ್ಯೆ ಗುರುಗಳೆಂದು ಮರೆತೆಯೇ ಭಲಾ ||**
**ಸರಳ ಸವಿಯನೋಡಲಿಕ್ಕೆ ತರಳನಲ್ಲವೆ | ಗರಳಕೊಟ್ಟ ದುರುಳ ಭೂಪ ನರುಹನಲ್ಲವೆ |**
**ಗುರುಗಳೆಂಬ ಭಾವ ತಳೆದು ಶರವಪಿಡಿಯದೆ | ಚರಣಪಿಡಿದು ಬೇಡಿದಾಗ ಮರೆತಿರಲ್ಲವೆ ||**

*ಕೃಷ್ಣನಲ್ಲಿ ದ್ರೋಣನ ಪ್ರಶ್ನೆ :*

**ನರನ ಸಾರಥಿಯಾಗಿ ಸರ್ವರ | ಧುರದಿ ಕೊಲಿಸುವುದಾವನೀತಿಯು**
**ಶರಣರಲಿ ನೀಚೋಚ್ಚ ಭಾವವು | ಮೆರೆವುದೇನೈ ||**
**ಭಕ್ತನಲ್ಲವೆ ನಿನಗೆ ನಾ ಪರ | ಮಾತ್ಮ ನೀನಾಗಿರಲು ಶಿಷ್ಟರ**
**ಪೊತ್ತವನು ತಾನೆಂಬ ಬಿರುದುಗ | ಳೆತ್ತ | ತೆಗೆದೆ ||**

*ಅಂತ್ಯಕಾಲದಲ್ಲಿ ದ್ರೋಣನ ಒಳಗುದಿ :*

**ಬಡತನದೊಳಾತ್ಮಜಗೆ ಕ್ಷೀರವ | ಕೊಡಲು ದಾರಿದ್ರ್ಯದಲಿ ಗೋವ್ಗಳ**
**ಹುಡುಕುತಲಿ ಬರೆ ಹಸ್ತಿನಾಪುರದ ಬಳಿಗೆಂದು**
**ಪೊಡವಿಪತಿ ಧೃತರಾಷ್ಟ್ರ ಭೀಷ್ಮರು | ನಡತೆಗಳ ನೋಡುತಲಿ ತನ್ನಯ**
**ಹುಡುಗನಿಗೆ ಕ್ಷೀರಾನ್ನ ಮೋದದಿ | ಕೊಡುತ ಸಲಹಿದರು ||**

ಇಲ್ಲಿ ದ್ರೋಣನ ಧರ್ಮಸಂಕಟ, ಅಸಹಾಯಕತೆ, ನಿಷ್ಠೆ, ಕಿಂಕರ್ತವ್ಯತೆಗಳನ್ನು ಚಿತ್ರಿಸಲು ಅವಕಾಶವಿದೆ.

**೬. ಕರ್ಣಾರ್ಜುನರ ಕಾಳಗ :**

*ಇದು ಯಕ್ಷಗಾನದ ಬಡಗುತಿಟ್ಟಿನ ಅತ್ಯಂತ ಪ್ರಸಿದ್ಧ ಪ್ರಸಂಗಳಲ್ಲಿ ಒಂದು. ಪ್ರಸಂಗ ರಚನೆಯಲ್ಲಿ ತೆಂಕು, ಬಡಗು ವಿಧಾನಗಳಿಲ್ಲವಾದರೂ, ಬಳಕೆಯಲ್ಲಿ ಒಂದೊಂದು ಕಾವ್ಯ ಒಂದೊಂದು ಕಡೆ ರೂಢಿಯಿದೆ. ಇದು ಪ್ರಯೋಗ ಪರಂಪರೆಯಲ್ಲಿ, ರಂಗಕೃತಿಯಲ್ಲಿ ಪ್ರೌಢವಾದ ಎತ್ತರಕ್ಕೆ ಏರಿದ ಕಥಾನಕ. ಕರ್ಣನ ಪಾತ್ರವೂ ಅರ್ಥಧಾರಿ / ವೇಷಧಾರಿಯ ಒಂದು ನಿಕಷ, ಕಥೆ ಭಾರತದ ಕರ್ಣಪರ್ವದ್ದು.*

*ಈ ಪ್ರಸಂಗದ ಕರ್ತೃ ಪಾಂಡೇಶ್ವರ ವೆಂಕಟ, ಕಾಲ ಸು.ಕ್ರಿ. ೧೭೫೦.*

**ಈ ತೆರದಿಂದುತ್ತಮ ಕಥೆಯಂ |**
**ಕೋಟದ ಸೀಮೆಯ ಪಾಂಡೇಶ್ವರದಾ |**
**ಮಾತೆಯು ಪುಟ್ಟಮ್ಮನವರ**
**ದ್ವಿತೀಯ ಜಾತ ಬಾಲ ವೆಂಕಟ ವರ್ಣಿಸಿದಂ**

ಎಂದು ಕವಿ ಹೇಳಿಕೊಂಡಿರುತ್ತಾನೆ. ಪ್ರಸಂಗವು ಪೂರ್ತಿಯಾಗಿ ಗದುಗು ಭಾರತವನ್ನು ಅನುಸರಿಸಿ ರಚಿತವಾಗಿದ್ದು, ಅಭಿಜಾತ ಕಾವ್ಯದ ಪ್ರಸಂಗೀಕರಣವು ಯಶಸ್ವಿಯಾಗಿರುವ ಒಂದು ಉತ್ತಮ ದೃಷ್ಟಾಂತವು ಈ ಕೃತಿ.

ನಟರಿಗೂ, ಭಾಗವತರಿಗೂ, ರಸಿಕರಿಗೂ ಮೆಚ್ಚಿನ ಪ್ರಸಂಗಗಳಲ್ಲಿ ಒಂದಾಗಿದ್ದು, ಭಾಗವತಿಕೆ ಕಲಿಕೆಯ ಪ್ರಸಂಗಗಳಲ್ಲೂ ಮುಖ್ಯವೆನಿಸಿದೆ.

**ಪ್ರಸಂಗಸಾರ :** ದ್ರೋಣವಧಾನಂತರ ಪಾಂಡವರ ಓಲಗ. ಜಯದ ಸಂತಸ. ದುರ್ಯೋಧನನ ಸಭೆ, ದ್ರೋಣಮರಣ ವಾರ್ತೆ, ಚಿಂತೆ, ಕರ್ಣನಿಗೆ ಸೇನಾಪತಿತ್ವ ಅಭಿಷೇಕ. ಯುದ್ಧದಾರಂಭ, ಭೀಮನಿಂದ ಕ್ಷೇಮಧೂರ್ತನ ವಧೆ. ಧರ್ಮರಾಜನಿಂದ ದುರ್ಯೋಧನನ ಪರಾಭವ, ಶಿಬಿರದಲ್ಲಿ ಕೌರವನ ಚಿಂತೆ, ಕರ್ಣನಿಂದ ಶಲ್ಯನ ಸಾರಥ್ಯದ ಪ್ರಸ್ತಾವ, ಮತ್ತು ಅದಕ್ಕೆ ಹೇತುವಾದ ಪರಶುರಾಮ ಶಾಪದ ಕಥನ, ಕೌರವ ಶಲ್ಯ ಸಂವಾದ, ಶಲ್ಯನ ಕ್ರೋಧ, ಕೌರವನ ಸಮಾಧಾನ, ಶಲ್ಯನಿಂದ ಸಾರಥ್ಯ ಸ್ವೀಕಾರ. ಮರುದಿನ ಕರ್ಣನ ರಣರಂಗ ಪ್ರವೇಶ, ವೀರವಚನ, ಶಲ್ಯ ಕರ್ಣರ ಉಪಾಲಂಭ, ಕೌರವನಿಂದ ಸಂಧಿ, ಸಂಶಪ್ತಕರ ಪ್ರವೇಶ. ದ್ರೌಪದಿಗೆ ಕೃಷ್ಣನಿಂದ ಅಭಯಪ್ರದಾನ. ಕರ್ಣ ಧರ್ಮರಾಜ ಯುದ್ಧ, ಧರ್ಮಜನ ಸೋಲು, ಶಿಬಿರಪ್ರವೇಶ, ಕೃಷ್ಣಾರ್ಜುನರ ಆಗಮನ. ಗಾಂಡೀವನಿಂದೆಗೆ ಅರ್ಜುನನ ಕೋಪ. ಕೃಷ್ಣನಿಂದ ಪ್ರತ್ಯಾಮ್ನಾಯ ರೂಪದಿಂದ ಅರ್ಜುನನ ಪ್ರತಿಜ್ಞೆಯ ರಕ್ಷಣೆ, ಸಮಾಧಾನ, ಭೀಮನಿಂದ ದುಶ್ಯಾಸನ ವಧೆ, ವೇಣೀಸಂಹಾರ, ಕರ್ಣ ಪುತ್ರ ವೃಷಸೇನನ ಅರ್ಜುನನಿಂದ ಮರಣ, ಕರ್ಣನ ದುಃಖ, ಪ್ರತಿಜ್ಞೆ, ಕರ್ಣಾರ್ಜುನ ಯುದ್ಧ, ಸರ್ಪಾಸ್ತ್ರ ಪ್ರಕರಣ, ಶಲ್ಯನಿಂದ ಸಾರಥ್ಯತ್ಯಾಗ, ಅರ್ಜುನನ ಕರುಣೆ, ಕೃಷ್ಣನ ಪ್ರಚೋದನೆ, ಕರ್ಣನ ಶೋಕ, ಕುಂಡಲದಾನ. ಕರ್ಣ ದುರಂತ. ಪಾಂಡವ ವಿಜಯ.

ಶಲ್ಯಸಾರಥ್ಯ, ಶಿಬಿರ ಪ್ರಕರಣ, ದುಶ್ಯಾಸನ ವಧೆ, ಕರ್ಣಾವಸಾನ ಎಂಬ ನಾಲ್ಕು ಘಟ್ಟಗಳಿರುವ ಈ ಪ್ರಸಂಗವು ಆಟ ಕೂಟಗಳಲ್ಲಿ ಪ್ರಸಿದ್ಧ, ಮಾತು, ರಂಗ ವಿಧಾನಗಳಿಗೆ, ಅವಕಾಶವಿರುವ, ಕರ್ಣನ ವ್ಯಕ್ತಿತ್ವದಿಂದ ಜನಜನಿತ ಕಥಾನಕವುಳ್ಳ ಆಖ್ಯಾನ. ರಚನೆ ಒಳ್ಳೆಯ ಮಟ್ಟದಲ್ಲಿದೆ.

ಕೆಲವು ಪ್ರಮುಖ ಸಂದರ್ಭಗಳು, ಪದ್ಯಗಳು : *ಕರ್ಣನು ಧರ್ಮರಾಜನನ್ನು ವಿಚಾರಿಸುವುದು*

**ಸಿಕ್ಕಿದೆಯಾ ಧರ್ಮರಾಯ | ನಮ | ಗಕ್ಕರವಾಯ್ತು ಕಾಣಯ್ಯ |**
**ರಕ್ಕಸಾರಿಯ ಕೈಯ ಪಂಜರದರಗಿಣಿ | ಛಕ್ಕನೆ ಹಾರಿ ಬಂದೆನ್ನ ಕೈಯೊಳಗಿಂದು ||**
**ನದಿಯೊಳು ಸ್ನಾನವ ರಚಿಸಿ | ಬಹು | ವಿಧ ಜಪಗಳನನುಕರಿಸಿ.......**
**ಹಲವು ಶಾಸ್ತ್ರಂಗಳನರಿತು | ಎನ್ನ | ನೆಲೆಯರಿಯದೆ ಮೆಯ್ಯಮರೆತು.....**

ಈ ಪದ್ಯಗಳು ಹಾಡುಗಾರಿಕೆಗೂ, ಅನ್ಯೋಕ್ತಿಯ ಅರ್ಥಸೃಷ್ಟಿಗೂ ಒದಗುವಂತಹವು.

*ಇದೇ ರೀತಿ –*

**ಕೊಂದನೇ | ಭೀಮ | ಕೊಂದನೇ –** (ದ್ರೌಪದಿ)

**ಕುರುರಾಯ ಕೇಳೆನ್ನ ಮಾತ** (ಅಶ್ವತ್ಥಾಮ ನೀತಿ)

**ಏನಯ್ಯ ಶಲ್ಯ ಭೂಪ | ನಿನ್ನಂಗವಿ | ದೇನಯ್ಯ ಮದನ ರೂಪ** (ಶಲ್ಯ-ಕೃಷ್ಣಸಂವಾದ)

***ಯಾದವೋತ್ತಮ ಲಾಲಿಸಿ ಕೇಳು | ಈ | ರಾಧೇಯನಾರೆಂಬ ನಿಜವನು ಪೇಳು ***

*(ಅರ್ಜುನನ ಅಂತರಂಗ ನಿವೇದನೆ)*

***ಶಿವ ಶಿವ ಸಮರದೊಳು ಕೈಸೋತೆನಲ್ಲ...*** *(ಕರ್ಣನ ಶೋಕ) ಈ ಪದ್ಯಗಳು ಬುಲುಸೊಗಸಾದ ಗೀತರಚನೆಗಳು. ಹಾಡುಗಾರರ ಅಚ್ಚು ಮೆಚ್ಚಿನ ಪದಗಳು.*

**೭. ಕರ್ಣ ಪರ್ವ :**

ಇದು ಕರ್ಣಾರ್ಜುನದಂತೆಯೆ ಪ್ರಖ್ಯಾತ ಪ್ರಸಂಗ. ತೆಂಕುತಿಟ್ಟು ಯಕ್ಷಗಾನ ರಂಗದಲ್ಲಿ ಇದು ಬಳಕೆಯಲ್ಲಿದೆ. ಇದು ಕವಿ ಗೇರುಸೊಪ್ಪೆ ಸಾಂತಪ್ಪಯ್ಯನ ರಚನೆ. ಕಾಲ ಸು. ೧೮೮೦. ಮಂಗಳೂರಲ್ಲಿ ನ್ಯಾಯಾಧಿಕಾರಿಯಾಗಿದ್ದವರು. ಪ್ರಸಂಗವು ಮೇಲೆ ಹೇಳಿದ ಕರ್ಣಾರ್ಜುನದಂತೆ, ಕುಮಾರವ್ಯಾಸ ಭಾರತದ ಪ್ರಸಂಗೀಕರಣ. ಒಳ್ಳೆಯ ಪದ್ಯಗಳಿಂದ, ಛಂದೋವೈವಿಧ್ಯದಿಂದ ಕೂಡಿದ್ದು ಗಾಯನಕ್ಕೂ, ರಂಗಕ್ಕೂ ಅನುಕೂಲವಾಗಿದೆ.

ಈ ಪ್ರಸಂಗದಲ್ಲಿ - ಕರ್ಣನ ಪೂರ್ವ ವೃತ್ತಾಂತದ ಸಂದರ್ಭದ ಚಿತ್ತವಿಸು ಕುರುಕುಲಾಂಬುಧಿ - ಎಂಬ ಆರು ಪದ್ಯಗಳು. ಕರ್ಣನಿಗೆ ಶಲ್ಯನ ಸೂಚನೆಯ ಎಲೆಭಾನುಜಾತ ಕೇಳಸ್ತ್ರದ ಮಹಿಮೆ ಎಂಬ ಎರಡು ಪದ್ಯಗಳು, ಕರ್ಣನ ಶೋಕದ ಶಿವ ಶಿವ ಸಮರದೊಳು ಕೈಸೋತೆನಲ್ಲ ಎಂಬಲ್ಲಿ ನಾಲ್ಕು ಪದ್ಯಗಳು, ಪಾಂಡೇಶ್ವರ ವೆಂಕಟನ ಪ್ರಸಂಗದ ಪದ್ಯಗಳೇ ಆಗಿವೆ ಎಂಬುದು ವಿಶೇಷ. ಸಮರ್ಥ ಕವಿಯಾದ ಶಾಂತಪ್ಪಯ್ಯ ಈ ಸನ್ನಿವೇಶಗಳಿಗೆ, ಇನ್ನೊಬ್ಬ ಕವಿಯ ಪದ್ಯಗಳನ್ನು ತದ್ವತ್ತಾಗಿ ಎತ್ತಿಕೊಂಡದ್ದೂ ವಿಚಿತ್ರವೇ.

*ಕೆಲವು ಹೃದ್ಯ ಪದ್ಯಗಳು –*

**ಖತಿಯಿದೇನೈ ಮಾವ ನೀನೇಗತಿಯೆನುತ ನಾ ಬಂದಡೆ... (ಕೌರವನ ವಿನಂತಿ)**

**ಕಲಿ ಕರ್ಣನೆಂದನೀ | ದಳನಿಕಾಯದೊಳೆನಗೆ | ಫಲುಗುಣನ ಕುರುಹುಗಳ...**

**(ಕರ್ಣನ ವೀರಭಾಷಣ)**

***ವಿಜಯೊನೊಡನಾಹವದೊಳಿದಿರಾಗಿ ಪಾರ್ಥನೊಳ್... (ಅದೇ)***

ಈ ಪದ್ಯ ಸರಣಿಗಳು ಬಲು ಸುಂದರ.

*ಧರ್ಮರಾಜನನ್ನು ಕೃಷ್ಣನು ಸಂತೈಸುವ ಈ ಸರಳ ಪದ್ಯದ ಅಸಾಧಾರಣ ಭಾವಸ್ರೋತವನ್ನು ನೋಡಿ –*

**ಆ ಸಮಯದಲಿ ಬಂದು ಲಕ್ಷ್ಮಿನಿ |**
**ವಾಸ ಹತ್ತಿರ ಕುಳಿತು ಭೂಪನ |**
**ತಾ ಸರಾಗದೊಳಮೃತ ಹಸ್ತದಿ ತನುವ ತಡವರಿಸಿ ||**
**ಏಸು ನೊಂದ್ಯೆ ತಂದೆ ನಿನ್ನನು |**
**ಘಾಸಿ ಮಾಡಿದರೇ ಕಠೋರರು**
**ಮೋಸದವರವರೆಂದು ಕಂಬನಿದುಂಬಿದನು ಕೃಷ್ಣ ||**

ಸದಾ ನಗುವ ಕೃಷ್ಣನಿಗೂ ಕಂಬನಿ ! ಈ ಪದ್ಯದಲ್ಲಿ ಈ ಪ್ರಸಂಗದ ಕವಿ ಕುಮಾರವ್ಯಾಸನ ಮಟ್ಟಕ್ಕೆ ಹೋಗಿದ್ದಾನೆ. ಈ ಪ್ರಕರಣವಿಡೀ ರಸಾರ್ದ್ರವಾಗಿ ಉಚಿತ ಪದ್ಯಗಳಿಂದ ಚಿತ್ರಿತವಾಗಿದೆ.

ಕರ್ಣಾರ್ಜುನ ಸಂವಾದದ

**ಎಲವೊ ಸೂತನ ಮಗನೇ |...** ಎಂಬ ನಾಲ್ಕು ಪದ್ಯಗಳಲ್ಲಿ, ಕವಿಯು ವಿವರಗಳಿಗೆ ಹೋಗದೆ, ಸೂಚಕತೆಯನ್ನು ಬಳಸಿ ಅರ್ಥಪ್ರಸವವನ್ನು ಸಾಧಿಸಿದ್ದಾನೆ.

**೮. ಗದಾ ಪರ್ವ :**

ತುಂಬಾ ಪ್ರಸಿದ್ಧ ಮತ್ತು ಯಶಸ್ವೀ ಪ್ರಸಂಗ. ಅಜ್ಞಾತ ಕವಿ ಕರ್ತೃಕ. ಪ್ರಸಂಗದ ಆರಂಭದಲ್ಲೂ ಸ್ತುತಿಸಿ ಕೊನೆಯಲ್ಲಿ ಕವಿಯು

**ವಿಠಲಪುರ ಪಂಚಲಿಂಗೇಶ ನಿರತ ರಕ್ಷಿಪನು**

ಎಂದು ಹೇಳಿರುವುದರಿಂದ, ಬಂಟ್ವಾಳ ತಾಲೂಕಿನ ವಿಟ್ಲ ಪ್ರದೇಶದವನಿರಬಹುದು. ಮಂಗಲದಲ್ಲಿ ಶೃಂಗಪುರೇಶನ ಸ್ತುತಿಯೂ ಇದೆ. ಪ್ರಸಂಗದ ನಡೆಯು ಗದುಗು ಭಾರತಕ್ಕೆ ಅನುಸಾರವಾಗಿದ್ದು, ಶಲ್ಯಪರ್ವ, ಗದಾಪರ್ವಗಳೆರಡರ ಕತೆಯನ್ನೊಳಗೊಂಡಿದೆ. ಕಲುಷಗಾಮಿನಿ, ಜಗಳಗ್ರಂಥಿ, ಕರಂಡಕಾಸುರರ ಕತೆ, ಬೇರೆ ಆಕರದ್ದು.

**ಪ್ರಸಂಗ ಸಾರ :**

ಶಲ್ಯನಿಗೆ ಸೇನಾನಾಯಕತ್ವ, ಪ್ರತಿಭಟನಾಗಿ ಧರ್ಮರಾಜನ ಪ್ರವೇಶ. ಯುದ್ಧಾರಂಭ, ಧರ್ಮರಾಜನಿಂದ ಶಲ್ಯವಧೆ, ದುರ್ಯೋಧನನಿಂದ ಯುದ್ಧ ಮುಂದುವರಿಕೆ. ಭೀಮ ಕೌರವರ ಯುದ್ಧ, ಕೌರವನ ಪರಾಭವ. ಸಂಶಪ್ತಕ - ಭೀಮರಯುದ್ಧ. ಸಂಶಪ್ತಕರ ಸೋದರಿಯರಾದ

ಕಲುಷಗಾಮಿನಿ, ಜಗಳಗ್ರಂಥಿಯರ ಪ್ರವೇಶ. ಹನುಮಂತನಿಂದ ಅವರ ವಧೆ. ಸಂಶಪ್ತಕರ ಅಳಿಯನಾದ ಕರಂಡಕಾಸುರ ಅರ್ಜುನರಯುದ್ಧ. ಹನುಮಂತನಿಂದ ಕರಂಡಕಾಸುರನ ವಧೆ.

ದುರ್ಯೋಧನನ ದುಃಖ. ಸಂಜಯನ ಆಗಮನ ದುರ್ಯೋಧನ ಸಂಜಯ ಸಂವಾದ, ಕೌರವನ ದ್ವೈಪಾಯನ ಸರೋವರ ಪ್ರವೇಶ. ಅಶ್ವತ್ಥಾಮನಿಂದ ಕೌರವನಿಗೆ ಪ್ರಚೋದನೆ. ಕೌರವನ ತಿರಸ್ಕಾರ. ದುರ್ಯೋಧನನನ್ನು ಕಾಣಲಾಗದೆ ಧರ್ಮರಾಜನ ದುಃಖ. ಕಿರಾತ ದೂತರ ಮೂಲಕ ಭೀಮನಿಗೆ ದುರ್ಯೋಧನನ ಸುಳಿವು. ಪಾಂಡವರೂ ಕೃಷ್ಣನೂ ಸರೋವರದೆಡೆಗೆ ಬಂದು, ಕೌರವನನ್ನು ಜರೆಯುವುದು. ತಡಿಗಡರಿದ ಕೌರವನಿಂದ ಪಂಥಾಹ್ವಾನ, ಬಲರಾಮನ ಆಗಮನ. ಭೀಮ ದುರ್ಯೋಧನರ ಗದಾಯುದ್ಧ, ಜರೆದಾಟ, ದುರ್ಯೋಧನನ ಪತನ, ಭೀಮನಿಂದ ದುರ್ಯೋಧನನ ದಂತಭಂಗ, ಮುಕುಟಭಂಗ, ಬಲರಾಮನ ಕೋಪ, ಕೃಷ್ಣನಿಂದ ಸಾಂತ್ವನ, ಅಶ್ವತ್ಥಾಮನ ರೌದ್ರ, ಪಾಂಡವಸೇನಾ ಸಂಹಾರ, ಉಪಪಾಂಡವರ ಕೊಲೆ, ದ್ರೌಪದಿಯ ದುಃಖ, ಅಶ್ವತ್ಥಾಮನ ತೃಣಾಸ್ತ್ರ ಪ್ರಯೋಗ, ಕೃಷ್ಣನಿಂದ ಉಪಶಮನ, ಧೃತರಾಷ್ಟ್ರಾಲಿಂಗನ. ಭೀಮ ವಿಗ್ರಹ ಭಂಜನ, ಧರ್ಮರಾಜನ ಪಟ್ಟಾಭಿಷೇಕ.

ಸಮಗ್ರ ಶಲ್ಯ ಗದಾಪರ್ವಗಳ ಕತೆಯನ್ನು ಸೊಗಸಾಗಿ, ಒಳ್ಳೆಯ ಭಾಷೆ, ಭಾವಪ್ರವಣ ಶೈಲಿಯಲ್ಲಿ ವಿವಿಧ ರೀತಿಯ ಪದ್ಯಗಳಲ್ಲಿ ರಚಿಸಿದ ಕವಿಯ ಪ್ರಸಂಗರಚನಾ ಸಾಮರ್ಥ್ಯ ಮೇಲ್ಮಟ್ಟದ್ದು. ರಂಗದಲ್ಲಿ ಪ್ರಯೋಗದ ದೀರ್ಘ ಇತಿಹಾಸವುಳ್ಳ ಕೃತಿಯಿದು. ತಾಳಮದ್ದಳೆಯಲ್ಲೂ ಪ್ರಮುಖ ಪ್ರಸಂಗ. ಇದರ ಕವಿ ಯಾರೆಂದು ತಿಳಿಯದಿರುವುದು ಖೇದಕರ.

ಸನ್ನಿವೇಶ ಚಿತ್ರಾಣದಲ್ಲಿ ಕವಿಗಿರುವ ಹಿಡಿತಕ್ಕೆ ಧರ್ಮರಾಜನ ರಣರಂಗ ಪ್ರವೇಶ, ಹನುಮಂತನ ಯುದ್ಧ ಪ್ರಕರಣ, ಕರಂಡಕಾಸುರ ವೃತ್ತಾಂತ, ಸಂಜಯ ಕೌರವ ಸಂವಾದ, ಪಾಂಡವರ ಮೂದಲೆ, ಗದಾಯುದ್ಧದ ಸಂವಾದಗಳು, ಮೂದಲಿಕೆಗಳು ಮೊದಲಾದ ಎಲ್ಲೆಡೆಗಳಲ್ಲಿ ಉದಾಹರಣೆಗಳನ್ನು ಕಾಣುತ್ತೇವೆ. ಗದುಗು ಭಾರತದ ಸನ್ನಿವೇಶಗಳನ್ನು ಪ್ರಸಂಗದಲ್ಲಿ, ಓರಣವಾಗಿ ಸಂಕ್ಷೇಪಿಸಿ ಪುನಾರಚಿಸಿ, ರಂಗಕ್ಕೊಪ್ಪುವಂತೆ ಕೆಲವು ವಿಷಯಗಳನ್ನು ಹಿಂದೆ ಮುಂದೆ ಮಾಡಿರುವುದೂ, ಹ್ರಸ್ವ, ಲೋಪಗೊಳಿಸಿದ್ದೂ ಉಚಿತವಾಗಿದೆ. ಈ ಕವಿಯು ಈರ್ವರು ರಕ್ಕಸಿಯರನ್ನೂ, ಕರಂಡಾಸುರನನ್ನೂ ಕತೆಗೆ ಅಳವಡಿಸಿ ಬಣ್ಣದ ವೇಷ (ರಾಕ್ಷಸ)ಕ್ಕೆ ಅವಕಾಶ ಕಲ್ಪಿಸಿದ್ದಾನೆ. ಸನ್ನಿವೇಶಗಳ ಆನುಪೂರ್ವಿ, ತಾರತಮ್ಯ ಕಲ್ಪನೆ ಕೆಲವಡೆ ಚೆನ್ನಾಗಿದೆ. ಸೌಪ್ತಿಕ ಪರ್ವ (ಅಶ್ವತ್ಥಾಮ ಕೋಲಾಹಲ) ದ ಭಾಗ ಅಷ್ಟು ಸಶಕ್ತವಾಗಿ ಬಂದಿಲ್ಲ. ಆಕರದ ಸೂಚನೆಗಳಲ್ಲಿ ಕವಿಯು ಕೆಲವೆಡೆ ವಿಭಿನ್ನ ರೀತಿಯಲ್ಲಿ ಬೆಳೆಸಿದ್ದಾನೆ - ಉದಾ : ದುರ್ಯೋಧನನು ಪಾಂಡವರನ್ನು ಆಹ್ವಾನಿಸುವುದು, ಬಿದ್ದ ಭೀಮನನ್ನು ಹೀಯಾಳಿಸುವ ಸಂದರ್ಭ ಇತ್ಯಾದಿ.

ಗದಾಪರ್ವ ಪ್ರಸಂಗದ ಕೆಲವು ಸುಂದರ ಪದ್ಯ ಸರಣಿಗಳು -

**ಮರುತಸಂಭವನಿಂತು ಮೂದಲಿಸಿ ಬರುತಿರಲು ...**

**ಪೇಳಲೇನದ ಛತ್ರ ಚಾಮರಾದಿಗಳ ಬೀಳುಗೊಟ್ಟುರೆ ದುಗುಡದಿಂದ** (ಕೌರವನ ಏಕಾಂಗಿತನ)

**ಪೊಡವಿಪಾಲಕ ಭಾಗ್ಯದಾಯಕ ನುಡಿಯದೆಲ್ಲಿಗೆ ನಡೆವೆ ಮೆಲ್ಲಗೆ |** (ಸಂಜಯನ ಕಕ್ಕುಲತೆ)

**ತಂದೆಗತಿ ಧೈರ್ಯವನು ತಾರತಮ್ಯದಿ ಪೇಳು........** (ದುರ್ಯೋಧನನ ಎಚ್ಚರಿಕೆ)

**ನಿನ್ನಯ ಬಲುಹೇನು | ಮಾರುತಿಯನ್ನು ನಿರೀಕ್ಷಿಪೆನು ....** (ಕೌರವನ ಮೂದಲೆ )

**ನೋಡಿರಿ ಧರ್ಮಜ ಫಲುಗುಣಾದಿಗಳು.......** (ಭೀಮನನ್ನು ಹಿಯಾಳಿಸುವುದು)

**ಭೂಪ ಏನಾಯ್ತು ಪ್ರತಾಪ.... | ಯಾರಿಲ್ಲದೆ ಪಾಪ |**

ಇಲ್ಲೆಲ್ಲ ಸಂದೊರ್ಭೋಚಿತ, ರಸೋತ್ಕಟವಾದ ಪದ್ಯ ರಚನೆಯನ್ನು ಕಾಣುತ್ತೇವೆ.

**೯. ಸಾಹಸ ಭೀಮ ವಿಜಯ : (ಗದಾಯುದ್ಧ)**

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಇದು, ತನ್ನ ಆಕರದ ಕಾರಣದಿಂದಲೂ, ರಚನಾ ವಿಶೇಷದಿಂದಲೂ, ವಿಭಿನ್ನ ರೀತಿಯ ಕೃತಿ. ಹೀಗಾಗಿಯೇ ಇದನ್ನು ಪ್ರಸ್ತುತ ಸಂಪುಟದಲ್ಲಿ ಅಳವಡಿಸಿದೆ.

ಇದರ ಕವಿ ಕೆ.ಪಿ. ವೆಂಕಪ್ಪಶೆಟ್ಟರು, ಪಕೀರ ಶೆಟ್ಟರೆಂದೂ ಪ್ರಸಿದ್ಧರು. ಇವರ ಕಾಲ : ೧೮೮೫ - ೧೯೫೫. ಇವರು ಯಕ್ಷಗಾನ ತಾಳಮದ್ದಳೆಯ ಅಗ್ರಗಣ್ಯ ಅರ್ಥದಾರಿಗಳಾಗಿ ಪ್ರಸಿದ್ಧರಾದವರು.

೧೯೨೦-೧೯೫೫ರ ಅವಧಿಯಲ್ಲಿ ಜರಗಿದ ತಾಳಮದ್ದಲೆ ರಂಗದ ನವೋದಯದ ಅಗ್ರಣಿಗಳು.

(ಅರ್ಕುಳ ಸುಬ್ರಾಯಾಚಾರ್ಯ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ನಾರಾಯಣಕಿಲ್ಲೆ, ಕೀರಿಕ್ಕಾಡು ವಿಷ್ಣುಭಟ್, ಕುಬಣೂರು ಬಾಲಕೃಷ್ಣರಾವ್, ಬಡಕ್ಕಿಲ ವೆಂಕಟರಮಣ ಭಟ್, ಬಿ. ರಂಗಪ್ಪಯ್ಯ - ಮೊದಲಾದವರು ಈ ನವೋದಯದ ಇತರ ಪ್ರಮುಖರು) ಶೆಟ್ಟರು ಯಕ್ಷಗಾನದ ಭಾಗವತಿಕೆ, ವಾದನ, ಪ್ರಸಂಗರಚನೆ ಎಂಬ ವಿವಿಧ ಅಂಗಗಳಲ್ಲಿ ಪರಿಣತರಾಗಿದ್ದರು. ವಿಶಾಲ ಶಿಷ್ಯವರ್ಗ ಅವರಿಗಿದ್ದಿತು. ಆಯುರ್ವೇದ ವೈದ್ಯರಾಗಿಯೂ ಪ್ರಸಿದ್ಧರು. ರಾಜಸಿಂಹ, ಭರತೇಶ ವೈಭವ ಮೊದಲಾದ ಪ್ರಸಂಗಗಳನ್ನೂ ಇವರು ಬರೆದಿದ್ದಾರೆ.ಶ್ರೀ ವೆಂಕಪ್ಪಶೆಟ್ಟರಿಗೆ ಹಳಗನ್ನಡ ಕಾವ್ಯಗಳಲ್ಲಿ ವಿಶೇಷವಾದ ಒಲವು. ಅದರ ಫಲವೇ ಈ ಕೃತಿ. ಇದು ಕವಿ ರನ್ನನ ಸಾಹಸ ಭೀಮ ವಿಜಯದ ಪ್ರಸಂಗೀಕರಣ, ಅಭಿಜಾತ ಸಂಸ್ಕೃತ ನಾಟಕಗಳ ಸಂಪ್ರದಾಯದಂತೆ ಇದನ್ನು ಸಂಧಿ (ಅಂಕ) ಗಳಾಗಿ ವಿಂಗಡಿಸಿ ಬರೆದು, ಮುಖ, ಪ್ರತಿಮುಖ, ಗರ್ಭ, ಅವಮರ್ಶ, ನಿರ್ವಹಣವೆಂಬ ಐದು ಸಂಧಿಗಳಾಗಿ ರಚಿಸಿದ್ದಾರೆ. ಪ್ರಸಂಗದ ಆರಂಭದಲ್ಲೂ, ಕೊನೆಯಲ್ಲೂ ಕವಿಯ ಇಷ್ಟದೇವನಾದ ಕಣ್ವಪುರ (ಕುಂಬಳೆ) ಗೋಪಾಲಕೃಷ್ಣನ ಸ್ತುತಿಯಿದೆ.

**ಪ್ರಸಂಗಸಾರ :** ಪಾಂಡವರ ಒಡ್ಡೋಲಗ - ಭೀಮನ ಪ್ರತಿಜ್ಞೆ, ಭೀಮ ದ್ರೌಪದೀ ಸಂವಾದ, ಭೀಮನ ಸಂಕಲ್ಪ ಕಥನ. ದುರ್ಯೋಧನ ಸಂಜಯ ಸಂವಾದ. ಪೂರ್ವ ಪ್ರಸಂಗಗಳ ವಿಮರ್ಶೆ ಸಂಜಯನೀತಿ ದುರ್ಯೋಧನ ತಿರಸ್ಕಾರ, ಧೃತರಾಷ್ಟ್ರ ಗಾಂಧಾರಿಯರ ದುಃಖ. ಸಂಜಯನ ಸಾಂತ್ವನ ದುರ್ಯೋಧನನಿಗೆ ತಂದೆ ತಾಯಿಯರ ಉಪದೇಶ. ದುರ್ಯೋಧನನ ನಿರಾಕರಣ.

ರಣರಂಗದಲ್ಲಿ ಕೌರವ - ಮರುಳ್ಗಳ ಸಂವಾದ. ಅಭಿಮನ್ಯು, ದುಶ್ಯಾಸನ, ಕರ್ಣರ ಬಗೆಗೆ ಕೌರವನ ದುಃಖ, ಭೀಷ್ಮರ ಭೇಟಿ. ಉಪದೇಶ, ತಿರಸ್ಕಾರ. ಸರೋವರ ಪ್ರವೇಶಕ್ಕೆ ಸಲಹೆ ಸ್ವೀಕಾರ.

ಧರ್ಮರಾಯ-ಕೃಷ್ಣಸಂವಾದ. ಯುದ್ಧ ವಿಮರ್ಶೆ ಗಾಂಧಾರಿ-ಭೀಮಸಂವಾದ, ಬಿರುನುಡಿಗಳು, ಕಿರಾತರಿಂದ ಭೀಮನಿಗೆ ಕೌರವನ ವಾರ್ತೆ. ಧರ್ಮರಾಜನಿಗೆ ಭೀಮನಿಂದ ವಿಚಾರ ತಿಳಿಸುವಿಕೆ. ಕೃಷ್ಣ ಸಹಿತ ಪಾಂಡವರು ಕೊಳದ ಬಳಿಬಂದು, ಮೂದಲಿಸುವುದು, ಭೀಮನ ಮೂದಲಿಗೆ ಕೌರವನ ಹೊರಡುವಿಕೆ, ಭೀಮ ಕೌರವ ಸಂವಾದ ಗದಾಯುದ್ಧನಿರ್ಣಯ, ಬಲರಾಮನ ಆಗಮನ, ಆಕ್ಷೇಪ. ಕೃಷ್ಣ ಬಲರಾಮ ಸಂವಾದ.

ಗದಾಯುದ್ಧಾರಂಭ, ಪರಸ್ಪರ ಮೂದಲಿಕೆ ಭೀಮನ ಪತನ. ಕೌರವನ ಅಟ್ಟಹಾಸ. ಭೀಮನ ಚೇತರಿಕೆ, ಊರುಭಂಗ. ಬಲರಾಮನ ಕೋಪ, ಕೃಷ್ಣನ ಸಮಾಧಾನ, ಬಲರಾಮನ ನಿರ್ಗಮನ, ದ್ರೌಪದಿಯ ಹರ್ಷ. ವೇಣೀಸಂಹಾರ.

ಅಶ್ವತ್ಥಾಮನ ಪ್ರವೇಶ, ಅಶ್ವತ್ಥಾಮ - ಲಕ್ಷ್ಮೀ ಸಂವಾದ, ಲಕ್ಷ್ಮೀ ನಿರ್ಗಮನಕ್ಕೆ ಅಶ್ವತ್ಥಾಮನ ಆಕ್ಷೇಪ, ಪ್ರತ್ಯುತ್ತರ, ಕೌರವ ಅಶ್ವತ್ಥಾಮ ಸಂವಾದ. ಶಿಬಿರದಲ್ಲಿ ಅಶ್ವತ್ಥಾಮನ ಕೋಲಾಹಲ, ಉಪಪಾಂಡವರ ವಧೆ, ದುರ್ಯೋಧನನ ಆಕ್ಷೇಪ.

ಭೀಮಸೇನನಿಗೆ ಪಟ್ಟಾಭಿಷೇಕ. ಮಂಗಲ.

ಕವಿಯು ರನ್ನನ ಕಾವ್ಯವನ್ನು ಪ್ರಸಂಗಕ್ಕೆ ಆಕರವಾಗಿಸಿದ್ದು ಪ್ರಸಂಗ ಸಾಹಿತ್ಯದಲ್ಲಿ ಒಂದು ಹೊಸ ವಿಧಾನ, ಮಾರ್ಗದರ್ಶಿ ಉಪಕ್ರಮ. ಪ್ರಸಂಗದ ಭಾಷೆ ನಿರ್ದುಷ್ಟವಾಗಿದ್ದು, ರನ್ನನ ಕಾವ್ಯದ ಸೊಗಸು ಆದಷ್ಟು ಸರಳವಾಗಿ ಓದುಗರಿಗೆ ಸಿಗುವಂತೆ, ಕೆಲವೆಡೆ ಅದೇ ಪದ ಪ್ರಯೋಗಗಳನ್ನು ಅಳವಡಿಸಿ ಬರೆಯಲಾಗಿದೆ. ಛಂದೋಬಂಧಗಳ ಆಯ್ಕೆ ಬಳಕೆ ವೈವಿಧ್ಯಯುತವಾಗಿದೆ. ರಸೋಚಿತವಾಗಿದೆ. ಆದರೆ ಪದ್ಯಗಳ ಭಾಷೆ, ಶೈಲಿ ಸಾಮಾನ್ಯ ಪ್ರಸಂಗ ಸಾಹಿತ್ಯದಂತೆ ಸರಳವಾಗಿ, ಸಲೀಸಾಗಿ ಇಲ್ಲ. ಪ್ರೌಢ ಮತ್ತು ಬಿಗಿತದಿಂದ ಕೂಡಿದೆ.

*ಉದಾ:* **ಬಿಡಲಾರದೆ ನಿನ್ನಡಿಯಂ | ಪೊಡಮಟ್ಟುರು ಭಕ್ತಿಯೊಳ್ನುತಿಸುವರ್ಗೆಂದುಂ**
**ಕುಡುಮೆಯ ಕೊಡುಗೈ ನೀಡುವ | ....**
**– ಅಮೃತಕರಕುಲಸೋಮನಲ್ಲಿಗೆ | ವಿಮಲ ಸುರಕುಜ ಸಮರ**
**ಸಾಹಸ | ಸಮಿತಭೂಭುಜ**
**ನಿನ್ನಂತೆ ನಿಜ ಭುಜದೆ ಮುನ್ನಾಂತರಾರಿಲ್ಲ | ಪೊನ್ನಾಯ್ತು...**
**– ಅರಿಗಿಂಬಾಯ್ತುಳಿವಾದುದು | ಮರುತ್ಸುತಂಗರ್ಜುನಾದಿಗಳುಳಿದ ಮೂರ್ತಿ...**

ಕವಿಯು ಅರ್ಥದಾರಿಯಾದುದರಿಂದ, ಪ್ರಸಂಗವು ಮುಖ್ಯವಾಗಿ ಮಾತುಗಾರಿಕೆಗೆ ವಿಷಯವನ್ನು ಒದಗಿಸುವ ಹಾಗೆ, ವಿಷಯಗಳು ಒತ್ತೊತ್ತಾಗಿ ಬರುವಂತೆ ರಚಿಸಿರುವುದು ಕಾಣುತ್ತದೆ.

*ಪ್ರಸಂಗದ ಕೆಲವು ವಿಶಿಷ್ಟ ಪದ್ಯಗಳು :*

**ಆವನ ಚಿತ್ರಭಾವಳಿಯ ತೇಜದೊಳೀ ಭುವನಂಗಳಾವಗಂ**
**ಭಾವತರಂಗದೊಳ್ನಿಲಸಲೂರ್ಜಿತ ಶಕ್ತಿಯನಿತ್ತ ಕೃಷ್ಣನಂ**
**ಪಟ್ಟದಾನೆಯನೇರಿ ವಿಭವದಿ | ನೆಟ್ಟನೆತ್ತಿರ್ದದವಳ ಛತ್ರದ**
**ಮಟ್ಟಕೆಸೆಯುವ ಶುಭ್ರಚಾಮರ | ದೊಟ್ಟಿಗೈತಹ ಭಾಗ್ಯವಾ | ಬಿಟ್ಟೆಯೇನೈ**
**(ಕೌರವನಲ್ಲಿ ಭೀಷ್ಮರ ನುಡಿ)**

**ಸದ್ದಿದಿಲ್ಲ ಎದ್ದು ಬಾರ | ಗೆದ್ದನೆನ್ನ ಬದ್ಧವೈರಿಗೆ**
**ಪೊದ್ದಲೇಕೆ ಮುದ್ದೆಗೂಳ | ಮೆದ್ದಬೇಕು ಕುನ್ನಿಗೆ**
**(ಬಿದ್ದ ಭೀಮನಿಗೆ ಕೌರವನ ಜರೆತ)**

**ಸಂಪಾದನ ವಿಧಾನ**

ಈ ಸಂಪುಟದಲ್ಲಿರುವ ಒಂಬತ್ತು ಪ್ರಸಂಗಗಳಲ್ಲಿ ಎಂಟು ಪ್ರಸಂಗಗಳು ಉಡುಪಿಯ ಪಾವಂಜೆ ಗುರುರಾವ್ ಎಂಡ್ ಸನ್ಸ್‌ರವರ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದ ಪ್ರತಿಗಳನ್ನು ಆಧರಿಸಿದ್ದು, ಅತ್ಯವಶ್ಯವಿರುವಲ್ಲಿ ಸಂಪಾದಕನ ಅನುಭವದ ಆಧಾರದಲ್ಲಿ, ಪರಿಷ್ಕರಿಸಿದ್ದು, ಮೂಲದ ಮುದ್ರಣ ದೋಷ, ಅಕ್ಷರಲೋಪಾದಿಗಳನ್ನು ಸರಿಪಡಿಸಿದೆ. ಕೊನೆಯದಾದ ಸಾಹಸಭೀಮ ವಿಜಯವು, ಉಡುಪಿಯ ದಿ| ಹೊನ್ನಯ್ಯಶೆಟ್ಟರ ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ದವರಿಂದ ೧೯೫೧ರಲ್ಲಿ ಪ್ರಕಟಿತವಾದ ಪ್ರತಿ.

**ದಿ. ಪಾವಂಜೆ ಗುರುರಾವ್ ಮತ್ತು ಅವರ ಬಳಿಕ ಅವರ ಪುತ್ರರಾದ ಸೇತು ಮಾಧವರಾಯರು ಯಕ್ಷಗಾನ ಪ್ರಸಂಗ ಸಾಹಿತ್ಯ ಪ್ರಕಾಶನ ದಲ್ಲಿ ಮಾಡಿದ ಸೇವೆಯು ಅನುಪಮವಾದದು, ಸದಾ ಸ್ಮರಣಿಯವಾದುದು. ಅವರ ಆಸಕ್ತಿಯಿಂದಲೆ, ಲಾಭಕರವಲ್ಲವಾದರೂ ಪ್ರಸಂಗ**

**ಪ್ರಕಾಶನವನ್ನು ಅವರು ನಡೆಸಿದರು. ಸುಮಾರು ಐವತ್ತು ಪ್ರಸಂಗಗಳು ಉತ್ತಮ ಪ್ರತಿಗಳಾಗಿ ಪ್ರಕಾಶಿತವಾದುವು. ಅವರ ಪ್ರಕಾಶನಕ್ಕೆ ಕಾಲಕಾಲದಲ್ಲಿ,**

**ದಿ| ಬೈಂದೂರು ಬಾಡಶೇಷಭಟ್ಟರು, ಕವಿ, ಕಲಾವಿದರಾದ ದಿ | ಕಡಂದಲೆ ರಾಮರಾಯರು ಮತ್ತು ಶ್ರೀ ಮಟ್ಟಿ ಸುಬ್ಬರಾಯರು (ಕೊಟೆ ಸುಬ್ಬರಾಯರು) ಸಂಪಾದನ ಕಾರ್ಯದಲ್ಲಿ ನೆರವಿತ್ತವರು.**

ಈ ಸಂಪುಟದಲ್ಲಿ ಬಳಸಿದ ಪ್ರತಿಗಳ ವಿವರ :

ವಿರಾಟಪರ್ವ ೧೯೮೫
ಕೃಷ್ಣಸಂಧಾನ ೧೯೪೯
ಭೀಷ್ಮಾರ್ಜುನರ ಕಾಳಗ ೧೯೬೨
ಅಭಿಮನ್ಯು ಕಾಳಗ-ಸೈಂಧವ ವಧೆ ೧೯೫೬
ದ್ರೋಣಪರ್ವ ೧೯೫೧
ಕರ್ಣಾರ್ಜುನ ಕಾಳಗ ೧೯೮೪
ಕರ್ಣಪರ್ವ ೧೯೫೭
ಗದಾಪರ್ವ ೧೯೬೭
ಸಾಹಸಭೀಮ ವಿಜಯ ೧೯೫೧

ಮುದ್ರಣದಲ್ಲಿ ಛಂದೋರೂಪವು ಕಾಣುವಂತೆಯೂ, ಸ್ಥಳ ಉಳಿತಾಯವಾಗುವಂತೆಯೂ ಸಾಲುಗಳನ್ನು ರೂಪಿಸಿದೆ.

**ಅರಿಕೆ – ನೆನವರಿಕೆ**

ಈ ಪ್ರಸಂಗಗಳನ್ನು ರಚಿಸಿದ ಕವಿಗಳ ಪುಣ್ಯಸ್ಮರಣೆಗೆ ಆದರದ ನಮನಗಳು. ಪ್ರಕಾಶಕರಿಗೆ ಉಪಕಾರ ಸ್ಮರಣೆ.

ಈ ಸಂಪುಟ ಸರಣಿಯ ಸತ್ಕಾರ್ಯದಲ್ಲಿ ಭಾಗಿಯಾಗುವ ಅವಕಾಶಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಗೆ, ಪ್ರಧಾನ ಸಂಪಾದಕರಿಗೆ ಮತ್ತು ಪರಿಶೀಲಕರಿಗೆ ಕೃತಜ್ಞತೆಗಳು.

ಸಲಹೆ ಸೂಚನೆ, ಸಹಕಾರಗಳಿಗಾಗಿ ಡಾ. ಕೆ. ಚಿನ್ನಪ್ಪಗೌಡ, ಡಾ. ಪಾದೆಕಲ್ಲು ವಿಷ್ಣುಭಟ್ಟ, ಪ್ರೊ. ಅಮೃತಸೋಮೇಶ್ವರ, ಡಾ.ಕೆ. ಪದ್ಮನಾಭ ಕೇಕುಣ್ಣಾಯ ಮತ್ತು ಸೇರಾಜೆ ಸೀತಾರಾಮ ಭಟ್, ಇವರಿಗೆ ಆಭಾರಿಯಾಗಿದ್ದೇನೆ.

ನ್ಯೂನಾತಿರೇಕಗಳಿದ್ದಲ್ಲಿ ಅಭಿಜ್ಞರು ಮನ್ನಿಸಿ ತಿಳಿಸಬೇಕಾಗಿ ಅರಿಕೆ.

***ಡಾ.ಎಂ. ಪ್ರಭಾಕರ ಜೋಶಿ***

# ಹೊನ್ನುಡಿ

**ಹೆಚ್.ಡಿ. ಕುಮಾರಸ್ವಾಮಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು ೫೬೦ ೦೦೧

ದಿನಾಂಕ ೦೩-೧೦-೨೦೦೬

**ಹೊನ್ನುಡಿ**

ಕನ್ನಡ ನಾಡಿನ ಜಾನಪದ ಜಗತ್ತು ಅತ್ಯಂತ ವಿಸ್ತಾರವಾದುದು, ಸಮೃದ್ಧವಾದುದು ಮತ್ತು ವೈವಿಧ್ಯಮಯವಾದುದು. ಜನಪದ ಗೀತ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಶಿಲ್ಪಕಲೆಗಳಿಂದ ಕಿಕ್ಕಿರಿದಿರುವ ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ - ವಿಜ್ಞಾನಗಳ ಮೂಲ ನಡವಳಿಕೆ.

ಯಾವುದೇ ದೇಶದ ಜಾನಪದ ಸಂಪತ್ತು ಆ ದೇಶದ ಸಾಂಸ್ಕೃತಿಯ ತೋರುದೀವಿಗೆ, ಪಾರಂಪರಿಕವಾಗಿ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದ ಈ ಸಂಪತ್ತು ದೇಶದ ಅಮೂಲ್ಯ ಆಸ್ತಿ. ನಮ್ಮ ಹಿರಿಯರ ಜ್ಞಾನ ವಿವೇಕ ಸಾಹಿತ್ಯಕ ಸಾಧನೆಗಳನ್ನು ಪರಿಚಯಿಸುವ ತಿಳವಳಿಕೆಯನ್ನು ಹೊರಹೊಮ್ಮಿಸುವ ಮಣ್ಣಿನ ಮಕ್ಕಳ ಸಾಹಿತ್ಯವಾದ ಜಾನಪದವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬರದಿದ್ದರೆ ಅದು ದೇಶಕ್ಕಾಗುವ ದೊಡ್ಡ ನಷ್ಟವೇ ಸರಿ.

ಕನ್ನಡ ನಾಡಿನ ಜಾನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೯ನೇ ಶತಮಾನದ ಗದ್ಯ ಗ್ರಂಥವಾದ ವಡ್ಡಾರಾಧನೆಯು ಕನ್ನಡದ ಪ್ರಪ್ರಥಮ ಜನಪದ ಕಥಾ ಸಂಕಲನವೆನಿಸುತ್ತದೆ. ಇದುವರೆಗೂ ಅಸಂಖ್ಯಾತ ವಿದ್ವಾಂಸರು ಈ ಸಾಹಿತ್ಯವನ್ನು ಹೊರತರಲು ಶ್ರಮಿಸಿರುತ್ತಾರೆ. ಆದರೂ ಕರ್ನಾಟಕ ಜನಪದ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಒಟ್ಟಾಗಿ ಕೂಡಿಸಿ ಜಗತ್ತಿಗೆ ಪರಿಚಯಿಸುವ ಸದ್ದುದೇಶದಿಂದ ಕರ್ನಾಟಕ ಸರ್ಕಾರವು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯನ್ನು ಹಮ್ಮಿಕೊಂಡು ಈ ಸಮೃದ್ಧ ಸಾಹಿತ್ಯ ರಾಶಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತಿದೆ. ಈ ಯೋಜನೆಯಲ್ಲಿ ಜನಪದ ಪದ್ಯ, ಗದ್ಯ ರಂಗಭೂಮಿ ಮತ್ತು ಭಾಷಿಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈ ಸಾಹಿತ್ಯಮಾಲೆಯ ಕೃತಿ ಸಂಪುಟಗಳನ್ನು ಸಹೃದಯ ಓದುಗರು ಆಸ್ವಾದಿಸಿದರೆ ಕರ್ನಾಟಕ ಪ್ರಜಾ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಪ್ರೊ. ಹಿ.ಶಿ. ರಾಮಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ಜಾನಪದ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಸ್ಮರಿಸುತ್ತಾ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ಸುವರ್ಣ ಕರ್ನಾಟಕ ವರ್ಷದ ಈ ಸುಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಕನ್ನಡ ಜನತೆಗೆ ಸಮರ್ಪಿಸುತ್ತಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ - ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ

ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ - ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

**– ೨ –**

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

‘ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು’. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

‘.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

‘ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

‘ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ’.
**(ಕರ್ನಾಟಕ ಜನಪದ ಸಾಹಿತ್ಯ ೧೯೫೬)**

**ಬೆಟಗೇರಿ ಕೃಷ್ಣಶರ್ಮ**

‘ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ’.

**(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

‘ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ ‘ವಿಶ್ವಕೋಶ’ವೇ ಆಗಬಹುದೆಂದು ಹೇಳಬಹುದು’.
**(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ

ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ - ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: ‘ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ,

ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ - ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ - ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ

ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ - ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೮೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು

ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಂಕಾಲೀನ ಜ್ಞಾನ - ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಯಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ - ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ

ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಆರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ

ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಿಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**

**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ

ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು….. ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೮ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಪ್ರಕಾಶಕರ ಮಾತು

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿವೆ. ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದವೇ ಮೂಲ ಆಕರವಾಗಿದೆ. ಈ ದಿಸೆಯಲ್ಲಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಅನೇಕ ಪ್ರಾತಃಸ್ಮರಣೀಯರು ಜನಪದ ಮತ್ತು ಯಕ್ಷಗಾನ ಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಆಸಕ್ತ ಜಾನಪದ ವಿದ್ವಾಂಸರು ಬಿಡಿಬಿಡಿಯಾಗಿ ಪ್ರಕಟಿಸಿರುತ್ತಾರೆ. ಇವರನ್ನೆಲ್ಲಾ ಈ ಹೊತ್ತಿನಲ್ಲಿ ನೆನೆಯುತ್ತಾ, ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಢೀಕರಿಸಿ, ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಬೃಹತ್ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡನವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ವಿವೇಕ ರೈ, ಡಾ. ತೀ. ನಂ. ಶಂಕರನಾರಾಯಣ, ಡಾ. ಸಿದ್ಧಲಿಂಗಯ್ಯ, ಶ್ರೀ ಕೆರೆಮನೆ ಶಂಭು ಹೆಗಡೆ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಪತ್ರಾಧಿಕಾರಿಗಳು ಸದಸ್ಯರಾಗಿಯೂ, ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರನ್ನು ಸಂಚಾಲರಾಗಿರುವಂತೆ ಸಮಿತಿಯನ್ನು ರಚಿಸಲಾಯಿತು.

ಈ ಬೃಹತ್ ಯೋಜನೆ ಕಾರ್ಯರೂಪಕ್ಕಿಳಿಸಲು ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರ ಶ್ರಮ ಮತ್ತು ಸಹಕಾರ ಹೆಚ್ಚಿನದು. ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಶ್ರದ್ಧೆ ಸಹಕಾರಗಳು ಅಮೂಲ್ಯವಾದುವು. ಈ ಎಲ್ಲ ಮಹನೀಯರಿಗೆ ಇಲಾಖೆಯ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಈ ಸಂಪುಟಗಳ ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದ ಶ್ರೀ ಪ.ಸ. ಕುಮಾರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿಗೆ ನನ್ನ ನೆನಕೆಗಳು.

ಈ ಯೋಜನೆಯನ್ನು ಆಗುಮಾಡಿದ ಇಲಾಖಾ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಮತ್ತು ಈಗಿನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೆ ಇಲಾಖೆಯ ವಂದನೆಗಳು. ಈ ಸಂಪುಟಗಳನ್ನು ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ರವರಿಗೆ ನಮ್ಮ ಧನ್ಯವಾದ

ಸುವರ್ಣ ಕರ್ನಾಟಕದ ವರ್ಷದ ಸಂದರ್ಭದಲ್ಲಿ ನಿರ್ದೇಶನಾಲಯ ಹೊರತರುತ್ತಿರುವ ಈ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಕೆ.ಆರ್. ನಿರಂಜನ್)**
ಆಯುಕ್ತರು

# ಯಕ್ಷಗಾನ ವಿರಾಟಪರ್ವ

## ಪಾತ್ರಗಳು

| | | | | | |
|---|---|---|---|---|---|
| ಪಾಂಡವರು | ವಿರಾಟರಾಜ | ಸುದೇಷ್ಣೆ | ಕೀಚಕ | ಉಪಕೀಚಕರು | ದುರ್ಯೋಧನ |
| ಕರ್ಣ | ಅಶ್ವತ್ಥಾಮ | ಸುಶರ್ಮ | ಸಖಿಯರು | ದೂತರು | ಕೌರವ |
| ಭಟರು | ದ್ರೌಪದಿ | ಗೋಪಾಲಕರು | ಉತ್ತರ | ಉತ್ತರೆ | ಸೂರ್ಯದೂತ |
| ಭೀಷ್ಮ | ದ್ರೋಣ | ಕೃಪ | ಭಟರು | ದೇವೇಂದ್ರ | ದೇವತೆಗಳು |
| ಉತ್ತರನ ಲಲನೆ | | | | | |

# ಯಕ್ಷಗಾನ ವಿರಾಟಪರ್ವ

**(ಮೊದಲನೆಯ ಸಂಧಿ : ಕೀಚಕವಧೆ)**

**ಕಂದ**

ಶ್ರೀಲಕ್ಷ್ಮೀಕಾಂತಂ ವನ |
ಮಾಲಾ ವೃಂದಾರಕೇಂದ್ರವಂದಿತಪಾದಂ ||
ಬಾಲಾರ್ಕಾಮಿತಭಾಸಂ |
ನೀಲನಿಭಾಂಗಂ ಕಟಾಕ್ಷದಿಂ ಪೊರೆಗೆಮ್ಮಂ || || ೧ ||

**ರಾಗ ಸಾವೇರಿ ಆದಿತಾಳ**

ಜಯ ಜಯ ಜಯ ಜಯ ಗಜವಕ್ತ್ರ | ಜಯ ಜಯ ಕಮಲಜ ನುತಿಪಾತ್ರ || ೨ ||
ಪರಶುಪಾಶಾಂಕುಶಧರ ಪನ್ನಗಭೂಷ | ಶರಣಾಗತಪೋಷ ತರಣಿಪ್ರಭಾಸ || ೩ ||
ಕರುಣಾಕರ ಗುಣಶರಧಿಗಂಭೀರ | ಪುರಹರವರಪುತ್ರ ಮುರಹರಮಿತ್ರ || ೪ |

**ವಾರ್ಧಕ**

ಹರನಂ ಭಜಕಪಾಲನಂ ಕಾಲಕಾಲನಂ |
ಗಿರಿಸಂಭವಾಲೋಲನಂ ರುಂಡ ಮಾಲನಂ |
ವರ ಗಜಾಜಿನಚೇಲನಂ ಧೃತಕಪಾಲನಂ ಈಶನಂ ಫಣಿಭೂಷನಂ ||
ದುರುಳದಾನವಭಂಗನಂ ವೃಷತುರಂಗನಂ |
ನಿರತ ಸುಜನರ ಸಂಗನಂ ವಿಧೃತ ಗಂಗನಂ |
ಪರಮಕರುಣಾಪಾಂಗನಂ ಮಹಾಲಿಂಗನಂ ಸ್ಮರಿಸುವೆಂ ಮನ್ಮನದೊಳುಂ || ೫ ||

**ಭಾಮಿನಿ**

ಗಿರಿಜೆ ಸಿರಿ ಸರಸ್ವತಿಯರಂಘ್ರಿಗೆ |
ಪರಮಭಕ್ತಿಗಳಿಂದ ನಮಿಸುತ |
ಸುರಪ ಮುಖ್ಯಾಮರರಿಗೆರಗುತ ಕವಿಗಳಂ ನೆನೆದು ||
ಗುರುವಿನಡಿದಾವರೆಗೆ ವಂದಿಸಿ |
ವರಮಹಾಭಾರತಪುರಾಣದೊ |
ಳೊರೆವೆ ಧರೆಗೆ ವಿರಾಟಪರ್ವವ ಯಕ್ಷಗಾನದಲಿ || || ೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಜನಪ ಜನಮೇಜಯಗೆ ತೋಷದಿ | ಮುನಿಪ ವೈಶಂಪಾಯ ಭಾರತ |
ಘನ ಕಥಾಸಾರವನು ಪೇಳ್ತಿರೆ | ವಿನಯದಿಂದ || ೭ ||

ಋಷಿತಿಲಕಗೆಂದನು ಧರಾಧಿಪ | ಅಸಮ ಬಲ ಪಾಂಡವರು ತಮ್ಮಯ |
ಪೆಸರನಡಗಿಸಿ ಗುಪಿತ ವಾಸದೊ | ಳೆಸೆದರೆಂತು || ೮ ||

ದುರುಳ ಕೀಚಕನೆಂಬ ಖಳ ಯಮ | ಪುರಕೆ ತೆರಳಿದನೆಂದೆ ಭೀಮನ |
ಕರಹತಿಯೊಳೆಂತವ ಮಡಿದನೆನ | ಗೊರೆವುದಾರ್ಯ || ೯ ||

ಎನಲು ಕೇಳುತ ನೃಪನ ವಚನಕೆ | ಮನದಿ ಸಂತಸವೆತ್ತು ಯತಿಪತಿ |
ವನಧಿಶಯನನ ಪಾದಕಮಲವ | ನೆನೆದುಸಿರ್ದ || ೧೦ ||

**ವಾರ್ಧಕ**

ಧರಣಿಪಾಗ್ರಣಿ ಪರೀಕ್ಷಿತಜಾತ ಲಾಲಿಸೈ |
ಧರೆಯನುಂ ದ್ಯೂತಮುಖದಿಂ ಸೋತು ಪಾಂಡವರು |
ತರುಣಿ ದ್ರೌಪದಿ ಸಹಿತಮಾರಣ್ಯವಾಸಮಂ ಕಳೆದುಮವನೀಸುರರನು ||
ಮರಳಿ ನೀವೆಂದೆನುತಲನುಜರಂ ಸಹಿತಲಾ |
ತರಣಿಜಸುತಂ ಮರುತಸಖಗೆ ಬಲವಂದೆರಗಿ |
ಹರಿಯನುಂ ಮನದೊಳಗೆ ಧ್ಯಾನಿಸುತಲೊಂದು ವಟಕುಜದ ನೆಳಲಂ ಸಾರ್ದರು || ೧೧ ||

**ಕಂದ**

ಇಂತಾ ವಟಕುಜದೆಡೆಯೊಳ್ |
ಕೌಂತೇಯಂನಿಂದು ಮನದೊಳಾಲೋಚಿಸುತಂ |
ತಾಂ ತವಕದೊಳನುಜರನುಂ |
ಚಿಂತೆಯೊಳಂ ಕರೆದುಸಿರ್ದ ನಮ್ರತೆಯಿಂದಂ || ೧೨ ||

**ರಾಗ ನೀಲಾಂಬರಿ ರೂಪಕತಾಳ**

ಅನುಜಾತರಿರ ಕೇಳಿ ವನವಾಸದವಧಿಗೆ | ದಿನ ಸಂದುದೀ ನೆಲೆಗಿನ್ನು |
ಮನುಜರರಿಯದಂತೆ ಗುಪಿತದೊಳಿರುವರೆ | ಮನೆಯೆಲ್ಲಿ ದೊರಕೊಂಬುದೆಮಗೆ || ೧೩ ||

ಎಲ್ಲಿ ನೋಡಿದಡಾ ಕೌರವಗಂಜಿ ನಡೆವವ | ರಲ್ಲದಿಲ್ಲವನಿಪರೊಳಗೆ |
ಇಲ್ಲ ನಮಗಿಹರೆ ಠಾವೆನೆ ಕೇಳಿ ಪಾರ್ಥ ತಾ | ಮೆಲ್ಲನೆ ಪೇಳ್ದನಗ್ರಜಗೆ || ೧೪ ||

ಅಣ್ಣ ಚಿಂತಿಪುದೇಕೆ ರಣರಂಗದೊಳಗಗ್ರ | ಗಣ್ಯನಾಗಿಹನು ಕೀಚಕನು |
ಕಣ್ಣೆತ್ತಿ ನೋಡರಾ ಕಡೆಯ ಕೌರವರಲ್ಲಿ | ಮಿಣ್ಣನಿರುವ ಒಂದು ವರುಷ || ೧೫ ||

ಕುರುಪತಿಯನು ಮಿಕ್ಕ ಭಟನು ಕೀಚಕನಾತ | ನಿರುವ ಕಾರಣ ಮತ್ಸ್ಯಭೂಪ |
ತರಣಿಜಾದಿಗಳಿಂಗೆ ಬೆದರ ನಾವೀಗಲ್ಲಿ | ಮರೆಯಿಂದ ಕಳೆವ ವತ್ಸರವ || ೧೬ ||

**ಭಾಮಿನಿ**

ಅರಸ ಕೇಳೈ ಪಾರ್ಥನೆಂದುದ |
ಧರಣಿಪತಿ ಕೇಳುತ್ತ ಮನ ನಿ |
ರ್ಧರಿಸಿದನು ಪಶ್ಚಿಮದಿ ನಿರ್ಭಯವಾಹುದೆಂಬುದನು ||
ವರುಷವೊಂದನು ಗುಪಿತದಿಂದಾ |
ಚರಿಸುವೆವು ಎಂದೆನುತ ಮನದಲಿ |
ಮರುಗಿ ಮಾರುತ್ತರವ ಕಾಣದೆ ಪೇಳ್ದನವರೊಡನೆ || ೧೭ ||

**ರಾಗ ಯರಕಲ ಕಾಂಭೋಜಿ ಝಂಪೆತಾಳ**

ಕೇಳಿರನುಜಾತರಿರ ಪೇಳ್ವೆ ನಾನೆಂತು | ಕೀಳುವಲರೊಳು ಸೇವಿಸುವ ಕಾಲಬಂತು || ಪ ||

ಪಿರಿದಾಗಿ ಬಳಲಿದಿರಿ ವನದೊಳಗೆ ಹನ್ನೆರಡು | ವರುಷವೆನ್ನೊಡನೆ ಬಲು ಬಗೆಯಿಂದಲಿ |
ಧರೆಯೊಳೆನ್ನಂಥ ಪಾಪಿಗಳ್ಯಾರು ನಿಮಗಿನ್ನು | ಪರ ಸೇವೆಯನು ಮಾಡಿರೆಂಬೆ ನಾನೆಂತು || ೧೮ ||

ರಾಯ ಚಿಂತಿಪುದೇಕೆ ಬೇರುಂಟೆ ಮತವೆಮಗೆ | ಛಾಯೆಯೈಸಲೆ ನಿಮ್ಮ ಕಾಯಕಾವು ||
ಜೀಯ ನೀವ್ಯಾವ ವೇಷದಿ ಇರುವಿರೆಂಬೀ ಉ | ಪಾಯವನು ಪೇಳ್ದೆಮ್ಮ ಕರುಣದಿಂ ಸಲಹೈ || ೧೯ ||

**ರಾಗ ಕೇದಾರಗೌಳ ಅಷ್ಟತಾಳ**

ಎಂದ ಮಾತನು ಕೇಳುತಂದು ಮನದಿ ಧರ್ಮ | ನಂದನ ದುಗುಡದಿಂದ |
ಇಂದು ನಾ ಭೂಸುರವೇಷದೊಳಿಹೆ ಕಂಕ | ನೆಂದು ಪೆಸರು ತನಗೆ || ೨೦ ||

ಎನಲಾ ಮಾತನು ಕೇಳುತನಿಲಸಂಭವ ಬಾಣ | ಸಿನ ಮನೆ ಸ್ಥಿರವೆನಗೆ |
ಜನರಿಗೆ ವಲಲನೆಂದೆನಿಪ ನಾಮದೊಳಿರ್ಪೆ | ನೆನೆ ಪಾರ್ಥನಿಂತೆಂದನು || ೨೧ ||

ಎನಗಮರಾವತಿಯೊಳಗಾದ ಕೊರತೆಯುಂ | ಟನುಕರಿಸುವೆನದರ |
ಜನಪಾಲಾಗ್ರಣಿ ನಿನ್ನ ಸತ್ಯವಿದ್ದರೆ ಗೆಲ್ವೆ | ನೆನೆ ಯಮಳರು ಪೇಳ್ದರು || ೧೧ ||

ಪಶುರಕ್ಷೆ ಹಯದ ಪಾಲನೆಯೊಳಿರುವೆವೆನು | ತುಸಿರಲು ದ್ರುಪದಜೆಯು |
ಎಸೆದಿರ್ಪೆ ಸೈರಂಧ್ರಿ ವೇಷದೊಳೆನೆ ಕೇಳು | ತಸಮ ಸಾಹಸರೈವರು || ೧೩ ||

ಮಡದಿಯನೊಡಗೊಂಡು ಪಶ್ಚಿಮಮುಖವಾಗಿ | ನಡೆತಂದು ಮತ್ಸ್ಯೇಶನ |
ಪೊಡವಿಯ ಕಂಡೊಂದು ವನಕೆ ಬಂದಚ್ಯುತ | ನಡಿಯ ಧ್ಯಾನಿಸಿ ನಿಂದರು ||೧೪||

**ರಾಗ ಸಾಂಗತ್ಯ ರೂಪಕತಾಳ**

ಧನುಶರಾಯುಧಗಳ ವರ ಬನ್ನಿಮರಕಾಗ | ಮನುಜರು ತಿಳಿಯದಂದದಲಿ |
ಹೆಣನಾಕಾರದಲಿ ಚರ್ಮದಿ ಸುತ್ತಿ ಬಿಗಿದು ಜ | ನ್ನುಣಿಯರ್ಗೆ ನಮಿಸಿ ಧರ್ಮಜನು || ೧೫ ||

ಗುಪಿತದೊಳಿಹೆವೊಂದು ವರುಷದ ಪರಿಯಂತ | ಕಪಟದಿಂದಾರ್ ಮುಟ್ಟದಂತೆ |
ಕೃಪೆಯಿಂದ ಕಾಯ್ದು ರಕ್ಷಿಸಬೇಕು ನೀವೆಂದು | ನೃಪತಿ ಪೇಳಿದ ಕೈಯ ಮುಗಿದು || ೧೬ ||

ಅವಧಿಯೊಳಗೆ ಪಾರ್ಥ ಬಂದೊರ್ವ ಕೇಳಿದ | ರವಗೀವುದಲ್ಲದೆ ಬೇರೆ |
ಪವನಸಂಭವ ಮೂರ್ಖನಾತಗೀಯದಿರೆಂದು | ಅವನೀಶನಮರರ್ಗೆ ಮಣಿದ || ೧೭ ||

**ಕಂದ**

ಭೂಮಿಪನೆಂದೀ ಪರಿಯಲಿ |
ಈ ಮಾರುತಸುತಗೀಯದಿರೆನಲುಂ ಕೇಳ್ದಾ ||
ಭೀಮಂ ತಾ ಲಯದಂತ್ಯದ |
ಕಾಮಾರಿಯೆನಲ್ಕೆ ರೋಷದೊಳಗಿಂತೆಂದಂ || ೧೮ ||

**ರಾಗ ಭೈರವಿ ಏಕತಾಳ**

ಸೋದರರೊಳಗಾನಲ್ಲಾ | ದು | ರ್ಯೋಧನ ನಾನಾದೆನಲ್ಲಾ |
ಕಾದಿರಲ್ಕೈ ಸುರಜಾಲ | ನಾ | ನೊಯ್ದರೆ ತಡೆಯಲಿ ಕಾಲ || ೧೯ ||

ಧರಣಿಯ ಕೊಡೆನೆಂದಿರಲಿ | ಪುರ | ಹರ ಕೈಯಿಕ್ಕದಿರೆನಲಿ |
ಕುರುಬಲವನು ಮುಂಗೊಂಡು | ಹೊಯ್ | ದೊರೆಸುವೆ ಕೈದುವ ಕೊಂಡು || ೨೦ ||

ಗದೆಯಿಂ ಕೌರವರೆದೆಯ | ಮುರಿ | ದೊದೆವೆನು ಉಳಿದವರ್ ಪಡೆಯ |
ಕದನದೊಳೆಂಬೀ ಮಾತ | ಕೇ | ಳಿದು ಪೇಳ್ದನು ಭೂನಾಥ || ೨೧ ||

**ರಾಗ ಕೇದಾರಗೌಳ ಆದಿತಾಳ**

ತಮ್ಮ ಬಾ ಬಾ ಕೋಪವಿದೇನು | ಒಮ್ಮೆ ಸೈರಿಸಿನ್ನು |
ಧರ್ಮ ಕೆಟ್ಟರೇನು ಸ್ವಾರ್ಥ | ನಮ್ಮ ಕಷ್ಟ ವ್ಯರ್ಥ || ೩೧ ||

ಅರಿಯದಾತನಲ್ಲ ನೀನು | ಮರೆಯ ಮಾತಿನ್ನೇನು |
ಮರುಳಾಟ ಸಾಕು ಬಾರೆಂದು | ಕರೆದಪ್ಪಿದನಂದು || ೩೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಭೀಮನನೊಡಬಡಿಸಿ ಶ್ರೀ | ಕಾಂತನನು ಧ್ಯಾನಿಸುತ ಧರ್ಮಜ |
ಸಂತಸದಿ ಸಂನ್ಯಾಸಿವೇಷವ | ನಾಂತು ನಡೆದ || ೩೪ ||

ಬಂದು ಮತ್ಸ್ಯನ ಪುರವರಕೆ ನಲ | ವಿಂದ ನಗರವನೀಕ್ಷಿಸುತಲ |
ಯ್ತಂದು ಬಾಗಿಲ ಚರರ ಕಂಡಿಂ | ತೆಂದನಾಗ || ೩೫ ||

ದ್ವಾರಪಾಲರು ಕೇಳಿ ನಿಮ್ಮಯ | ಭೂರಮಣನೊಳು ಪೇಳಿ ಭೂಸುರ |
ನೋರುವನು ಬಂದಿರುವನೆಂಬೀ | ವಾರತೆಯನು || ೩೬ ||

**ಕಂದ**

ಎನೆ ಕೇಳುತಲಾ ಚರನುಂ |
ಘನ ವೇಗದೊಳಯ್ದಿ ಭೂಪನನು ಕಾಣುತ್ತಂ ||
ಮನದೊಳ್ ನಸುಬೆದರುತಮಾ |
ಜನಪಾಲಾಗ್ರಣಿಗೆ ಕರವ ಮುಗಿದಿಂತೆಂದಂ || ೩೭ ||

**ರಾಗ ಕಲ್ಯಾಣಿ ಅಷ್ಟತಾಳ**

ಲಾಲಿಸು ಮತ್ಸ್ಯಭೂಪ | ಕೀರ್ತಿಕಲಾಪ | ಲಾಲಿಸು ಮತ್ಸ್ಯಭೂಪ || ಪಲ್ಲವಿ ||

ಪುರವಲಯದೊಳೊರ್ವನು | ಕಾರಣಿಕ | ಪುರುಷ ಸಂನ್ಯಾಸಿ ತಾನು |
ಭರದಿಂದ ಬಂದು ನಿಂದಿರುವನಾತನಿಗೆ ನಾ | ನರುಹುವ ಮಾತೇನು | ಕರುಣಿಸು ಧೊರೆನೀನು ||೩೮||

ಎನಲು ಕೇಳುತ ಮತ್ಸ್ಯನು | ಧಿಮ್ಮನೆ ಸಿಂಹಾ | ಸನದಿಂದಲೆದ್ದು ತಾನು |
ವಿನಯದೊಳಯ್ತಂದು ತದ್ವಿಪ್ರನಂಘ್ರಿಗೆ | ವಿನಮಿತನಾಗಿ ಭಕ್ತಿಯಲಿ ಮನ್ನಿಸುತೆಂದ || ||೩೯||

**ರಾಗ ಭೈರವಿ ಝಂಪೆತಾಳ**

ಕರುಣಾಳು ನೀವೆಮ್ಮ | ಪುರಕೆ ಬಿಜಯಂ ಗೆಯ್ದು |
ಪರಿಯನರುಹೆನಲೆಂದ | ನರಸಗಾ ಪಾರ್ವ || ೪೦ ||

ಅವನಿಪತಿ ಕೇಳು ಪಾಂ | ಡವರ ಸೇರಿರ್ದೆ ನಾ |
ನವರಿಗಾಯ್ತುಡವಿ ಮ | ತ್ತೆಮಗೆ ಸಂಚರಣೆ || ೪೧ ||

ದೊರಕಿತದರಿಂದಲೀ | ಪುರಕೆ ಬರವಾಯ್ತೆಮಗೆ |
ನರರು ಕಂಕನೆನುತ್ತ | ಕರೆವರೆನ್ನುವನು || ೪೨ ||

ಎನಲು ಕೇಳ್ದು ವಿರಾಟ | ಮನದಿ ಸಂತಸ ತಾಳ್ದು |
ಅನುಮಾನವೇನೆನ್ನ | ಮನೆಯೊಳಿಹುದೆಂದ || ೪೩ ||

**ವಾರ್ಧಕ**

ಇತ್ತಲುಂ ಧರ್ಮಜಂ ಕಂಕನೆಂದಿರುತಿರೆ ಮ |
ರುತ್ತಸುತನತ್ತಲುಂ ಬಾಣಸಿನ ಭವನದೊಳ್ |
ವರ್ತಿಸಿದನಾಚೆಯೊಳ್ ಪಾರ್ಥನರೆವೆಣ್ಣಾಗಿ ಸಾರ್ದಿರೆ ನೃಪಾಲಯವನು ||
ಮತ್ತೆ ನಕುಲಂ ಹಯದ ಪೋಷಣೆಯೊಳಿರ್ದನವ |
ನೊತ್ತಿನನುಜಂ ಪಶುಸಮೂಹ ರಕ್ಷಕನಾಗಿ |
ಮತ್ತಗಜಗಮನೆ ಸೈರಂಧ್ರಿ ವೇಷವನಾಂತುಮಯ್ತುಂದಳೇಂ ಪೊಗಳ್ವೆನು || ೪೪ ||

**ರಾಗ ದೇಶಿ ಅಷ್ಟತಾಳ**

ಏನೆಂಬೆ ದ್ರುಪದಜೆಯ ಬರವನೀಗ | ಮೀನಕೇತನನಾನೆಯಂದದಿ
ಮಾನಿನೀ ಮಣಿಬಂದಳು || ಏನೆಂಬೆ || ೪೫ ||

ಕಡಗ ಕಂಕಣಗಳು ಝಣ ಝಣರೆನು | ತಡಿಯಿಡುವ ವೇಳೆಯಲಿ ನೂಪುರ |
ವಡಿಗಡಿಗೆ ಮೊಳಗುತ್ತಲೆ || ಏನೆಂಬೆ || ೪೬ ||

ಮಡದಿರನ್ನಳೆ ವಿಟರಕ್ಷಿಮೃಗವ ಪೊಂ | ಗೊಡಮೊಲೆಯ ಕೂರಂಬಿನೊಳಗಡ |
ಗೆಡಹುತೊಯ್ಯನೆ ಬಂದಳು || ಏನೆಂಬೆ || ೪೭ ||

**ವಾರ್ಧಕ**

ಮಡದಿಯತಿ ವೇಗದಿಂ ತಡೆಯದನುರಾಗದಿಂ |
ನಡೆಯಲವಳಂ ಕಂಡು ನಲಿದು ಬೆಂಬಳಿಗೊಂಡು |
ನುಡಿಗೆ ಗಿಣಿ ಸೋಲ್ಬುದಂ ನಡೆಗಂಚೆ ನಿಲ್ಬುದಂ ಮೆಲ್ಲನಡಿಯಿಡುವ ಭರಕೆ ||
ಕೊಡಮೊಲೆಯು ಕುಣಿವುದಂ ನಡುವಳ್ಕಿ ದಣಿವುದಂ |
ಕುಡಿನೋಟದಂದಮಂ ಬಿಡುಮುಡಿಯ ಚಂದಮಂ |
ಬಿಡದೆ ಈಕ್ಷಿಪಜನರ್ ತಡೆದು ನಿಟ್ಟಿಪ ಮನರ್ ತಾವಾಗಿ ನೋಡುತಿರಲು || ೪೮ ||

**ಕಂದ**

ಇಂತಾ ದ್ರುಪದಜೆಯುಂ ನಲ |
ವಿಂ ತಾ ಸ್ಯೆರಂಧ್ರಿವೇಷದಿಂದಯ್ತುರಲಾ ||
ಕಾಂತೆಯನೀಕ್ಷಿಸಿ ಮತ್ಸ್ಯನ |
ಕಾಂತೆಯುಮತಿ ಹರುಷದಿ ಸಖಿಯರೊಳಿಂತೆಂದಳ್ || ೪೯ ||

**ರಾಗ ಕಲ್ಯಾಣಿ ಅಷ್ಟತಾಳ**

ಯಾರೆ ಬಂದವಳು | ನೀರೆ ನೀ ಕೇಳಿ | ನ್ಯಾರೆ ಬಂದವಳು |
ಮಾರನ ಮದದಾನೆಯಂತೆ ನೋಳ್ಪರ ಕಣ್ಗೆ |
ತೋರುತ್ತಲಿರುವ ಶೃಂಗಾರದ ಸತಿಯಿವಳ್ || ಯಾರೆ | || ೫೦ ||

ಸುರರ ಕನ್ನಿಕೆಯೊ ಮೇಣು | ಪನ್ನಗವಧುವೊ | ನರರೊಳಿನಿತು ರೂಪಳು |
ತರುಣಿಯರೊಳು ಕಾಣೆನಾದರಾಕೆಯನಿಲ್ಲಿ |
ಕರೆ ಕೇಳ್ವೆ ತಾನೆಲ್ಲಿ ಇರುವಳೆಂಬುದನೀಗ || ಯಾರೆ || ೫೧ ||

**ಆರ್ಯ, ಏಕತಾಳ**

ಇಂತೆನೆ ಕೇಳ್ದತಿ ಸಂತಸದಿಂ ಸಖಿ | ತಾಂ ತತುಕ್ಷಣದೊಳಗಯ್ತುಂದುಂ ||
ಕೌಂತೇಯರರಸಿಯ ತನ್ನರಸಿಯಳಾ | ಮುಂತೆ ನಿಲಿಸಲವಳಿಂತೆಂದಳ್ || ೫೨ ||

**ರಾಗ ಯರಕಲ ಕಾಂಭೋಜಿ ಝುಂಪೆತಾಳ**

ತರುಣಿ ನೀನ್ಯಾರೆಂಬುದರುಹೆನ್ನೊಳು | ಹರಿಣಾಂಕವದನೆ ಕೋಮಲೆ ಕುಂದರದನೆ ||
ತರುಣಿ || ಪಲ್ಲವಿ ||

ಜಲಜಾಕ್ಷಿ ನೀನಿರುವ ಸ್ಥಳವೆಲ್ಲಿ ವರನ್ಯಾರು |
ಮಲಿನ ವೃತ್ತಿಯಿದೇನು ಚೆಲುವೆ ನೀನು |
ಬಲು ಭರದೊಳಿಂದೆಮ್ಮ ನಿಲಯಕ್ಯಾತಕೆ ಬಂದೆ |
ತಿಳಿಯಪೇಳೆನಲೆಂದಳತಿ ಸೊಬಗಿನಿಂದ || || ೫೩ ||

ಅರಸಿ ಕೇಳ್ ಗಂಧರ್ವರುರುಬಲಾನ್ವಿತರೈವ |
ರಿರುತಿಹರು ಪತಿಗಳೆನ್ನಯ ಮನಕೆ ಖತಿಯ |
ಬರಿಸಿದುದರಿಂದಲವದಿರ ಬಿಡುವೆ ನಾನೊಂದು |
ವರುಷವೆಂದೆನುತ ಪಾಂಡವರ ಸತಿಯ ಸೇರ್ದೆ || || ೫೪ ||

ವನಿತೆ ಸಹಿತವರಿಗಾಯ್ತುಡವಿಯದರಿಂದೆನಗೆ |
ಇರುವರೆ ಠಾವಿಲ್ಲದಿರೆ ಬಂದೆನೆನಲು |
ಮನದಿ ಹರುಷಿಸಿ ವಿಲಾಸಿನಿಯರೊಡನಿಹುದೆಂದು |
ಜನಪನರ್ಧಾಂಗಿಯವಳನು ಮನ್ನಿಸಿದಳು || ೫೫ ||

**ಭಾಮಿನಿ**

ಅರಸ ಕೇಳಿಂತಾ ಮಹಾತ್ಮರಿ |
ಗಿರಲು ಘಟಿಸಿತು ಮತ್ಸ್ಯಭೂಪನ |
ಪುರದೊಳಿನ್ನುಳಿದವರ ಪಾಡೇನಂಬುಜಾಸನನ ||
ಬರಹವನು ತಾ ಮೀರ್ವನೆಂದರೆ |
ಪುರಹರಗೆ ತೀರದು ಕಣಾ ನೃಪ |
ವರರಿಗಾಯಿತು ಪರರ ಸೇವೆಯೊಳಿರುವ ದಿನವೆಂದ || ೫೬ ||

**ಕಂದ**

ಈ ಪರಿಯಿಂದಾ ಪಾಂಡವ |
ರಾಪುರದೊಳ್ ನಿಜವನೊರ್ವರರಿಯದ ತೆರದಿಂ ||
ರೂಪವನಡಗಿಸಿ ಕಳೆದರು
ಶ್ರೀಪತಿಯ ಕಟಾಕ್ಷದಿಂದ ದಶಮಾಸವನುಂ || ೫೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳೈ ನುಡಿದ ವರುಷಕೆ | ತೆರಳೆ ದಶಮಾಸಂಗಳೈವರ |
ತರುಣಿಗಾದಾಯಾಸವೇನೆಂ | ದೊರೆವೆ ನಾನು || ೫೮ ||

ಜನಪ ಮತ್ಸ್ಯೇಶ್ವರನ ಮಾನಿನಿ | ಯನುಜ ಕೀಚಕನೆಂಬ ದುರುಳನು |
ಮನದೊಳಗ್ರಜೆಯನು ನಿರೀಕ್ಷಿಪ | ನೆನಹಿನಿಂದ || ೫೯ ||

ಒಂದು ದಿನ ಸೊಬಗಿಂದ ತನ್ನಯ | ಮಂದಿರವ ಪೊರಮಟ್ಟು ಘನಮದ |
ದಿಂದಲವನಯ್ತಂದನತುಳಾ | ನಂದದಿಂದ || ೬೦ ||

ತರುಣಿಯರ ಮಧ್ಯದಲಿ ಕುಳಿತಿಹ | ಹಿರಿಯಳನು ಕಂಡೆರಗಲುನುಜನ |
ಶಿರವ ನೆಗಹುತಲಪ್ಪಿ ಮುದ್ದಿಸಿ ಹರುಷದಿಂದ || ೬೧ ||

ತಮ್ಮ ಬಂದೈ ಕುಳಿರು ಬಾ ಬಾ | ರೆಮ್ಮ ಭಾಗ್ಯದ ಕಣಿಯೆ ಬಾರೆನೆ |
ಸುಮ್ಮದದಿ ಮಂಡಿಸಿದನಾಕೆಯ | ಸಮ್ಮುಖದೊಳು || ೬೨ ||

**ಭಾಮಿನಿ**

ದುರುಳನಿಂತಗ್ರಜೆಯ ಕೆಲದಲಿ |
ಸುರುಚಿರಾಸನವೇರ್ದು ಕುಳಿತಾ |
ಧರಿಸಿ ನೋಡಿದನೊಯ್ಯನಬಲಾವಾರವನು ಬಳಿಕ ||
ಅರಸ ಕೇಳಾ ನಡುವೆ ರತುನದ |

ಸರದೊಳಿರ್ಪ ಶಿಖಾಮಣಿಯವೋಲ್ |
ಮೆರೆವ ದ್ರುಪದಾತ್ಮಜೆಯ ಕಾಣುತ ಮನದೊಳಿಂತೆಂದ || ೬೩ ||

**ವಾರ್ಧಕ**

ಸರಸಿರುಹನೇತ್ರದಿಂ ಕನಕಾಭಗಾತ್ರದಿಂ |
ಮಿರುಗುತಿಹ ನಾಸ್ಯದಿಂ ವಿಧುಮಂಡಲಾಸ್ಯದಿಂ |
ತರಣಿಸಂಕಾಶದಿಂ ಸೌಂದರ್ಯವೇಷದಿಂ ಮೌಕ್ತಿಕಾಭರಣದಿಂದ ||
ಮೆರೆದಿಹ ಕಪೋಲದಿಂದರ್ಧೇಂದುಫಾಲದಿಂ |
ಗುರುಪಯೋಧರಗಳಿಂದಲಕುತಿಹ ಸರಗಳಿಂ |
ಹರಿಯಕ್ಷಮಧ್ಯದಿಂ ವಿಟರಿಗತಿ ಜೋದ್ಯದಿಂದಿರುವಳಿವಳಾವ ಸತಿಯೊ || ೬೪ ||

**ಕಂದ**

ಇಂತಾ ದ್ರುಪದಾತ್ಮಜೆಯಂ |
ಸಂತಸದಿ ನೋಡಿ ದಣಿದವನತಿ ಭ್ರಮೆಯಿಂದಂ ||
ಕಂತುವಿಗಂಗವನೊಪ್ಪಿಸಿ |
ಸಂತಾಪದೊಳಳುತಗ್ರಜೆಯೊಡನಿಂತೆಂದಂ || ೬೫ ||

**ರಾಗ ಕಾಂಭೋಜಿ ಝಂಪೆತಾಳ**

ಸಹಜಾತೆ ಕೇಳು ಸತಿಯರ ನಡುವೆ ತಾರಾನಿ | ವಹದೊಳು ಶಶಾಂಕ ಮೆರೆವಂತೆ |
ಬಹಳ ಪ್ರಕಾಶದಿಂ ತೋರ್ಪಳೀ ಚೆಲುವಿಕೆಯು | ಮಹಿಯೊಳಿಲ್ಲಬಲೆಯರೊಳಿನಿತು || ೬೬ ||

ಮೂರು ಲೋಕದಿ ನೋಡಲೀ ರೂಪು ಸೌಂದರ್ಯ | ವ್ಯಾರಿಗುಂಟಮಮ ಸತಿಯರೊಳು |
ಮಾರನರಗಿಣಿಯಂತೆ ತೋರುವಳು ಕಣ್ಗೆ ಇವ | ಳ್ಯಾರೆಂಬುದರುಹಬೇಕೆನಗೆ || ೬೭ ||

ಆರಾದಡೇನವಳ ಪತಿಗಳು ಬಲಾಢ್ಯರತಿ | ವೀರ ಗಂಧರ್ವರುಗಳಿವಳು |
ಸೇರುವವಳಲ್ಲ ನೀ ಮರಳೆಂದು ಕಳುಹಿದಳು | ಮಾರಚೇಷ್ಟಿತನನ್ನು ಮನೆಗೆ || ೬೮ ||

**ಭಾಮಿನಿ**

ಎಲೆ ಪರೀಕ್ಷಿತಸೂನು ಕೇಳಾ |
ಖಳನು ಪೊರಟಯ್ತುರುತ ಮನದಲಿ |
ಹಲವ ಹಂಬಲಿಸುತ್ತೆ ಬಂದನು ತನ್ನ ಮಂದಿರಕೆ ||
ಬಳಲಿದನು ಬಾಡಿದನು ರಾತ್ರಿಯ |
ಕಳೆವುಪಾಯವ ಕಾಣದಯ್ವುರ |
ಲಲನೆಯನು ನೆನೆನೆನೆದು ಮರುಗಿದನುದಯ ಪರಿಯಂತ || ೬೯ ||

**ಕಂದ**

ಖಳನೀ ತೆರದಿಂ ನಿಶಿಯಂ |
ಕಳೆದುದಯದೊಳೆದ್ದುವಮಳನೀಕ್ಷಿಪ ಭರದಿಂ ||
ಘಳಿಲನೆ ಬರೆ ಸಹಜಾತೆಯ |
ನಿಳಯದ ಬಾಗಿಲೊಳ್ ಕಂಡನು ದ್ರುಪದಾತ್ಮಜೆಯಂ || ೭೦ ||

**ರಾಗ ಭೈರವಿ ಝಂಪೆತಾಳ**

ಕಂಡು ಸತಿಯಳ ಭ್ರಾಂತು | ಗೊಂಡು ಕಳವಳಿಸುತ್ತ |
ಚಂಡ ಭುಜಬಲನೆಂದ | ಲಂಡತನದಿಂದ || ೭೧ ||

ಎಲಗೆ ಸೈರಂಧ್ರಿ ನಿ | ಲ್ಲಳುಪಿದೆನು ನಿನಗೆ ಸ್ಮರ |
ನುಳಿಸನೆನ್ನನು ಬರಿದೆ | ಬಳಲಿಸದಿರಿನ್ನು || ೭೨ ||

ಸೋತು ಬಂದವನೊಡನೆ | ಮಾತನಾಡದೆ ಪೋಪು |
ದ್ಯಾತರ ಗುಣಾಂಶವಿದು | ನೀ ತಿಳಿಯದವಳೆ || ೭೩ ||

ಇನ್ನು ನಾ ನಿಲಲರಿಯೆ | ಎನ್ನ ಮೋಹದಿ ಕರೆಯೆ |
ತಿಣ್ಣ ಮೊಲೆಯಿಂದಿರಿಯೆ | ಚೆನ್ನಾಗಿ ನೆರೆಯೆ || ೭೪ ||

ಎಂದೆನಲು ಬೆದರುತ್ತ | ಮಂದಮತಿ ಈ ದುರುಳ |
ಮುಂದುವರಿವನೆನುತ್ತ | ನಿಂದು ಪೇಳಿದಳು || ೭೫ ||

**ರಾಗ ಧನ್ಯಾಸಿ ಏಕತಾಳ**

ಯಾಕೆಲೊ ನಿನಗಿಂಥ ಮಾತು | ಸಾಕೆನ್ನೊಡನಿನಿತು |
ಜೋಕೆಯಿಂದಲಯ್ದು ಮನೆಗೆ | ಕಾಕನಾಡದಿನಿತು || ೭೬ ||

ಪರನಾರಿಯರ್ಗಳುಪಿ ಯಮನಂ | ಡಲೆಗೆ ಸಿಲುಕಿ ವ್ಯರ್ಥ |
ನರಕದಲ್ಲಿ ಕ್ರಿಮಿಗಳಂತೆ | ಉರುಳ್ವುದೇನೊ ಸ್ವಾರ್ಥ || ೭೭ ||

ತರವಲ್ಲನ್ಯಸತಿಯರ್ಬೇಟೆ | ಕುಲಕೆ ಮೃತ್ಯುವ ತಾರದೆ |
ಮರುಳೆ ಸುಮ್ಮನೆ ತೆರಳು ಮನೆಗೆ | ಬರಿ ಬಯಲಾಸೆಯೊಳಿರದೆ || ೭೮ ||

ಸುಲಲಿತಾಂಗಿ ಎನ್ನೊಳಿನಿತು | ಕರುಣವಿಲ್ಲ ನಿನಗೆ |
ಲಲನೆ ನಿನ್ನ ಬಲೆಗೆ ಸಿಲುಕಿ | ಪೋಪೆನೆಂತು ಮನೆಗೆ || ೭೯ ||

ಮಲಯಜಗಂಧಿ ನಿನ್ನೊಡನೆ | ರಮಿಸದುಳಿಯೆನ್ನೈಸೆ |
ಚೆಲುವೆ ಜೀವದ ಮೇಲೆ ಸರಸ | ವೇನೆ ಚಂಪಕನಾಸೆ || ೮೦ ||

ಎಲೆ ಖೂಳ ಪ್ರಾಣವನ್ಯಾಕೆ | ಕಳಗೊಂಬೆಣಿಕೆ ಬೇಡ |
ಕೊಲುವರೆನ್ನ ಪತಿಗಳು ಕೇ | ಳಿದರೆ ನಿನ್ನ ಗಾಢ || ೮೧ ||

ಬಲು ಧೀರ ಗಂಧರ್ವರೈವ | ರುಗಳವರಾಯುಧಕೆ |
ತಲೆಯತೆರುವೆಯದು ಸಿದ್ಧ ಸಾ | ರಿದೆನು ಗಮಿಸಾಲಯಕೆ || ೮೨ ||

ತೆಗೆಯೆ ನಿನ್ನ ರಮಣರ್ ಗಿಮಣರ್ | ಬಗೆವನಲ್ಲ ನಾನು |
ಜಗದೊಳಧಿಕ ವೀರನೆಂಬುದ | ಸುಗುಣೆಯರಿಯೆ ನೀನು || ೮೩ ||

ಮೃಗಧರ ಮುನಿದೆಡೊಮ್ಮೆ | ನಿಲುವೆ ನಾನಾಹವಕೆ |
ಮುಗುಳಂಬನಾನೆ ನೀ ದಯದಿ | ತೋಷಬಡಿಸು ಮನಕೆ || ೮೪ ||

ದುರುಳ ಕೆಡಬೇಡೆಲವೊ ಜಗದೊ | ಳಿದಿರಿಲ್ಲೆಂಬೆ ನಿನಗೆ |
ಧುರದೊಳಧಿಕ  ಶೌರ್ಯರೆನ್ನ | ರಮಣರಾಹವದೊಳಗೆ || ೮೫ ||

ಹರಿ ಹರ ಬ್ರಹ್ಮೇಂದ್ರರನ್ನು | ಸರಕು ಮಾಡರು ನೀನು |
ಶಿರವನವರಿಗೀವೆ ತೃಣವ | ಮುರಿದು ಸಾರ್ದೆ ನಾನು || ೮೬ ||

ಎಲಗೆ ನೀರೆ ಮರುಳೆ ತಾನಾ | ರೆಂಬುದರಿಯೆ ಇನ್ನು |
ಬಲವೈರಿ ಮುಖ್ಯರನು ಗೆಲುವೆ | ಕಲಹದಲ್ಲಿ ನಾನು || ೮೭ ||

ಬಲವಿಹೀನರ್ ನಿನ್ನ ರಮಣರ್ | ಗಿಮಣರೆಲ್ಲಿ ತೋರು |
ಕೊಲುವೆನವರಂತಿರಲಿ ನಾ ಕೈ | ಮುಗಿವೆ ನೀ ದಯೆದೋರು || ೮೮ ||

**ಭಾಮಿನಿ**

ಭೂಪ ಕೇಳಾ ಖಳನ ವಚನವ |
ನಾ ಪತಿವ್ರತೆ ಕೇಳ್ದು ಬಿಡನೀ |
ಪಾಪಿ ತಾನಿಲ್ಲಿರುವುದನುಚಿತವೆಂದು ಪಿಂತಿರುಗಿ ||
ಪೋಪಳನು ಕಾಣುತ್ತ ಮದನನ |
ತಾಪಕಂಗವನಿತ್ತು ಬೆದೆಬೆಂ |
ದಾ ಪರಾಕ್ರಮಿ ಬಂದು ನಮಿಸಿದನಗ್ರಜೆಯ ಪದಕೆ | ||೮೯||

**ಕಂದ**

ಎರಗಿದ ಸಹಭವನಂ ಘನ |
ಹರುಷದಿ ಪಿಡಿದೆತ್ತುತಧಿಕ ಪ್ರೇಮದಿನಾಗಳ್ ||
ಪರಿಕಿಸಿ ಮುಖದಂಗವನುಂ |
ಸ್ಮರಶರಹತಿಯಿಂ ಬಳಲುವುದರಿದಿಂತೆಂದಳ್ || ೯೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನು ಬಂದೈ ತಮ್ಮ ನುಡಿ ನಿ | ನ್ನಾನನದ ಸಿರಿ ಕುಂದಿದೇತಕೆ |
ಮಾನಿನಿಯ ಕೆಣಕಿದೆಯೊ ಬುದ್ಧಿವಿ | ಹೀನನಾಗಿ || ೯೧ ||

ಕುಲವ ಕೆಡಿಸಿದೆ ಪಾಪಿ ವ್ಯರ್ಥದಿ | ಗಳಿಸಿಕೊಂಡೆಯಧೋಗತಿಯ ಪರ |
ಲಲನೆಯರ ಬೇಟೆಯದು ಪುರುಷಗೆ | ಸಲುವುದೇನೈ || ೯೨ ||

ಆದುದಾಗಲಿ ನಿನ್ನ ಮನಕೆ ವಿ | ನೋದವಾದುದ ಪೇಳು ಕೇಳ್ವೆನು |
ಭೇದ ಬೇಡೆನಲುಸಿರ್ದ ವಿಗತಾ | ಮೋದನಾಗಿ || ೯೩ ||

**ರಾಗ ಕೇದಾರಗೌಳ ಆದಿತಾಳ**

ಅಕ್ಕ ಕೇಳೆಂಬುದಿನ್ನೇನು | ಮಿಕ್ಕನೆನ್ನ ಸ್ಮರನು |
ಫಕ್ಕನೆಚ್ಚನಾತನುರಕೆ | ಸಿಕ್ಕಿದೆನಾ ಶರಕೆ || ೯೪ ||

ನಿನ್ನ ಗೆಳತಿಯರ ನಡುವೆ | ಕನ್ನೆಯೊರ್ವಳಿಹಳು |
ಇನ್ನೇನೆಂಬೆ ಸೂರೆಗೊಂಡ | ಳೆನ್ನ ಮನವನವಳು || ೯೫ ||

ಮರಳಿ ಮಾತಿನ್ನೇನು ಜೀವ | ಕರಗುವುದಿನ್ನವಳ |
ನೆರೆಯದುಳಿಯೆನೆಂತಾದರೀ | ಹರಣವ ನೀ ಸಲಹೆ || ೯೬ ||

**ರಾಗ ನೀಲಾಂಬರಿ ರೂಪಕತಾಳ**

ಎಲೆ ಪಾಪಿ ಕೆಡಬೇಡ ಕುಲಕೆ ಮಾರಿಯ ತಂದೆ | ಸಲುವುದೆ ಪರರ ನಾರಿಯರ |
ಚೆಲುವನಂಗೀಕರಿಸುವೆನೆಂದಡಂತಕ ತಾನು | ಮುಳಿದು ನರಕಕಿಕ್ಕದಿಹನೆ || ೯೭ ||

ಜಯಸಿರಿಯು ತೊಲಗುವಳ್ ಭುಜಲಕ್ಷ್ಮಿ ಹಿಂಗುವಳ್ | ಲಯವಕ್ಕು ಸಕಲ ಸಂಪದವು |
ಬಯಲಾಸೆ ಬೇಡ ಪೂರ್ವದಲಿ ರಾವಣನು ಸೀ | ತೆಯನೊಯ್ದ ಕಥೆಯ ಕೇಳ್ದರಿಯ || ೯೮ ||

ಬಲವಂತರವಳ ಕಾಂತರು ಗಂಧರ್ವರು ನಿನ್ನ | ತಲೆಯ ಕೊಂಬರು ಕೇಳ್ದ ಕ್ಷಣದಿ ||
ಛಲ ಬೇಡ ಬದಲವಳಿಂದ ಸೌಂದರ್ಯದ | ಲಲನೆಯ ಮದುವೆ ಮಾಡುವೆನು || ೯೯ ||

ಮರುಳಾದೆಯೇನೆ ಕೇಳಕ್ಕ ಇನ್ನೇನೆನ್ನ | ಹರಣವಾಕೆಯ ವಶವಾಯ್ತು |
ಬರಿದಾದ ಡಿಂಬಕ್ಕೆ ಮದುವೆಯ ಮಾಳ್ಪೆನೆಂ | ದರೆ ಸೊಗಸಹುದೆ ಪೇಳೆನಗೆ || ೧೦೦ ||

ಹಲವು ಮಾತಿನ್ನೇನಾ ಲಲನೆಯ ಭೋಗಿಸ | ದುಳಿಯದು ಪ್ರಾಣವಿಂದೆನಗೆ |
ಸಲಿಸೊಂದು ಬಯಕೆಯೇನಾದಡಗಾಲಿ ಮುಂದೆ | ಉಳಿಸಿಂದೀಗೆನುತೆರಗಿದನು || ೧೦೧ ||

**ಕಂದ**

ಅಡಿಗೆರಗುತಲತಿ ದುಃಖದಿ |
ಬಿಡದಳಲುತ್ತಲಿ ಬಳಲ್ವುದನೀಕ್ಷಿಸುತವನಂ ||
ಬಿಡಲಾರದೆ ಮನಮರುಗುತ |
ಮಡದಿಯರತಿದೇವಿ ನುಡಿದಳನುಜನೊಳಗಾಗಳ್ || ೧೦೨ ||

**ರಾಗ ಕೇದಾರಗೌಳ ಝಂಪೆತಾಳ**

ತಮ್ಮ ಶೋಕಿಸದಿರಿನ್ನು | ನಡೆ ಸುಮ್ಮ | ನೊಮ್ಮೆ ಮಂದಿರಕೆ ನೀನು |
ಕಮ್ಮಗೋಲನ ಬಾಧೆಗೆ | ಸಿಲುಕಿ ನೀ | ನುಮ್ಮಳಿಸಬಹುದೆ ಹೀಗೆ || ೧೦೩ ||

ಜಾಲ ಮಾತಲ್ಲ ಕೇಳು | ಪರಸತಿಯ | ಮೇಳ ಸೊಗಸಹುದೆ ಪೇಳು |
ಕಾಳು ಮಾಡಿದೆ ಕುಲವನು | ಸಾರಿದೆನು | ನಾಳೆ ಕಳುಹುವೆನವಳನು || ೧೦೪ ||

ಮನೆಗಯ್ದು ನಡೆಯೆನ್ನುತ | ಕಳುಹಿಸಲು | ಘನ ಹರುಷವನು ತಾಳುತ |
ವನಿತೆ ತನಗಾಹಳೆನುತ | ಗಮಿಸಿದನು | ಮನದೊಳಗೆ ಗುಡಿಗಟ್ಟುತ || ೧೦೫ ||

**ಭಾಮಿನಿ**

ಎಲೆ ಪರೀಕ್ಷಿತಸೂನು ಕೇಳಾ |
ಖಳನು ಸಂತಸವೆತ್ತು ತನ್ನಯ |
ನಿಳೆಯಕಯ್ದಿದನಿತ್ತ ರವಿ ಜಾರಿದನು ಪಶ್ಚಿಮದ ||
ಜಲಧಿಗಾ ರಾತ್ರಿಯನು ತಾಪದಿ |
ಕಳೆದನಾ ಖಳನುದಯದಲಿ ನೃಪ |
ಲಲನೆಯಿತ್ತಲು ಕರೆದು ನುಡಿದಳು ದ್ರುಪದನಂದನೆಗೆ || ೧೦೬ ||

**ರಾಗ ತೋಡಿ ಅಷ್ಟತಾಳ**

ವನಿತೆ ಸೈರಂಧ್ರಿ ಕೇಳನುಜನ ಮನೆಗಯ್ದಿ | ವಿನಯದಿ ಮಧುವ ನೀನು |
ಘನ ಬೇಗ ತಾ ಹೋಗೆಂದೆನೆ ಕೇಳ್ದು ಭಯದಿಂದ | ವನಜಲೋಚನೆ ಪೇಳ್ದಳು || ೧೦೭ ||

ಅಮ್ಮ ಕೇಳಿನ್ನೇನನುಸುರುವೆ ನಿಮ್ಮಯ | ತಮ್ಮ ಕೇವಲ ದುಷ್ಟನು |
ಹೆಮ್ಮೆಯಿಂ ಕೈಯಿಕ್ಕದಿರನಿನ್ನೊರ್ವಳು ಪೋಗ | ಲಮ್ಮೆನಲ್ಲಿಗೆ ನಾ ದೇವಿ || ೧೦೮ ||

ಅನುಪಮಬಲರೆನ್ನವರು ನಿಮ್ಮ ಅನುಜಗೆ | ಹನನವಪ್ಪುದು ತನ್ನಿಂದ |
ಎನಗಪಕೀರ್ತಿ ಬರುವುದು ಕಂಡುದ ಪೇಳ್ದೆ | ನೆನಲು ಝೇಂಕಿಸುತೆಂದಳು || ೧೦೯ ||

ಎಲಗೆ ನಿನ್ನವರಿಂದಲಹುದೇನು ಎನ್ನೊಳು | ಸಲುಗೆಯೆ ನಿನಗಿನಿತು ||
ಲಲನೆ ನಿನ್ನಿಂದಾಹ ಬಳಲಿಕೆಯನು ಕಾಂಬೆ | ಫಳಿಲನೆ ನಡೆಯೆಂದಳು || ೧೧೦ ||

ಎಂದ ಮಾತನು ಕೇಳಿ ನೊಂದು ಪಾಂಚಾಲನ | ನಂದನೆ ಮಧುವಿಗೆಂದು |
ಹೊಂದಳಿಗೆಯ ಕೊಂಡು ನಿಂದಳಲುತ ಶ್ರೀಗೋ | ವಿಂದ ರಕ್ಷಿಪುದೆಂದಳು || ೧೧೧ ||

**ವಾರ್ಧಕ**

ಜನಮೇಜಯ ಕ್ಷಿತಿಪ ಲಾಲಿಸೈ ಪಾಂಡವರ |
ವನಿತೆಯಾಲೋಚಿಸಿದಳಾ ಖಳಂ ಬಿಡನೆನ್ನ |
ನೆನುತಲತಿ ಭಕ್ತಿಯಿಂ ತಪನನಂ ಭಜಿಸಿದಳು ನಿರುಪಮ ಸ್ತೌತ್ಯದಿಂದ ||
ಇನನವಳ ನುತಿಗೊಡಂಬಟ್ಟೋರ್ವ ದೂತನಂ |
ವಿನಯದಿಂ ಕರೆದೈವರರಸಿಯಂ ಸಲಹಿಂದಿ |
ಗೆನೆ ಕೇಳುತಾ ಘೋರ ದಾನವಂ ನರರರಿಯದಂತೆ ಬೆಂಬಲಮಾದನು || ೧೧೨ ||

**ಕಂದ**

ಇಂತಿನಚರನುಂ ಬಂದುದ |
ನುಂ ತಿಳಿಯದೆ ದ್ರುಪದಾತ್ಮಜೆ ಬೆದರುತ್ತಾಗಳ್ ||
ಎಂತಯ್ದುವೆನಾ ಖಳನಾ |
ಮುಂತೆನುತಲಿಯಧಿಕ ದುಗುಡದಿಂದಯ್ತುಂದಳ್ | || ೧೧೩ ||

**ರಾಗ ಮಧುಮಾಧವಿ ಏಕತಾಳ**

ಏನೆಂಬೆನು ದುಮ್ಮಾನದೊಳಯ್ತುಹ | ಮಾನಿನಿಯಳ ಸೊಬಗ |
ತಾನಯ್ತುಂದಳು ನೋಡುವ ವಿಟರ ವಿ | ತಾನವ ಮರುಗಿಸುತ || ೧೧೪ ||

ಸೆಳೆನಡು ಬಳುಕುತ್ತಳುಕುತ ಮೆಲ್ಲನೆ | ತಳಿರಡಿಗಳನಿಡುತ |
ಕಲಶಕುಚದ ಕೋಮಲೆ ಬಂದಳು ಸ್ಮರ | ನಲಗೆಂಬಂದದಲಿ || ೧೧೫ ||

ಕಳೆದಳೊ ನಮ್ಮನು ತುಳಿದಳೊ ಹೃದಯವ | ನೆಳೆದಳೊ ಧೈರ್ಯವನು ||
ಸೆಳೆದಳೊ ಕಂಗಳ ಮುಳಿದುರೆ ಪ್ರಾಣವ | ನಳಿದಳೆನುತ ವಿಟರು || ೧೧೬ ||

**ಕಂದ**

ಸರಸಿಜಮುಖಿಯೀ ಪರಿಯಿಂ |
ಭರದಿಂ ಕೀಚಕನ ಬಳಿಗೆ ಬರುತಿರೆ ಮತ್ತಾ ||
ತರುಣಿಯ ದೂರದೊಳೀಕ್ಷಿಸಿ |
ಬೆರಗಾಗುತ್ತವನುಸಿರ್ದ ತನ್ನಯ ಮನದೊಳ್ || || ೧೧೭ ||

**ರಾಗ ಕಾಪಿ ಅಷ್ಟತಾಳ**

ಇವಳ್ಯಾವ ಲೋಕದ ಸತಿಯೋ | ಮತ್ತೀ |
ಯುವತಿಯ ಪಡೆದವಳೇಂ ಪುಣ್ಯವತಿಯೊ | ಇವಳ್ಯಾವ || ಪ ||

ರತಿಯ ಸೌಂದರ್ಯವಂತಿರಲಿ | ಸುರ | ಸತಿಯರ ಸೊಬಗು ತಾನಾಚೆಯೊಳಿರಲಿ |
ಪೃಥಿವಿಯೊಳಿನಿತು ರೂಪಿಲ್ಲ | ದ್ರುಪದ | ಸುತೆಯ ಕಂಡರಿವೆ ಈ ಪರಿಯಂದವಲ್ಲ || || ೧೧೮ ||

ಏನು ಸುಕೃತವ ಮಾಡಿದೆನೊ | ಮತ್ತೀ | ಮೀನಾಂಕನೃಪನೆನ್ನ ದಯದಿ ನೋಡಿದನೊ |
ಈ ನಾರಿ ಕೃಪೆಯಾದಳೆನಗೆ | ತಾನಿ | ನ್ನೇನು ಧನ್ಯನೊ ಈಕೆ ಬಂದಳೆನ್ನೆಡೆಗೆ || || ೧೧೯ ||

ಇವಳಂಗಸಂಗವೈಭವವ | ಅನು | ಭವಿಸಿದ ಮೇಲ್ಹೋಗಲಿ ಜೀವ ||
ಯುವತಿಗೆ ಸರಿಯಿಲ್ಲ ಸಿದ್ಧ | ಎನು | ತವಿಳಂಬದಿಂಖಳ ತಾನಿದಿರೆದ್ದ || || ೧೨೦ ||

**ಕಂದ**

ಧಿಮ್ಮನೆ ನಿಂದಾ ದುರುಳಂ |
ಸುಮ್ಮಾನದಿನಾ ಲತಾಂಗಿಯನು ಕಾಣುತ್ತಂ ||
ಹಮ್ಮಿನೊಳಿರಲೀ ಸತಿಯುಂ |
ಸಮ್ಮುಖದಿ ಬಂದು ನಿಲಲವ ನಗುತಿಂತೆಂದ || || ೧೨೧ ||

**ರಾಗ ಭೈರವಿ ಝಂಪೆತಾಳ**

ಬಾರೆ ಭಾಮಾಮಣಿಯೆ | ಬಾರೆ ಸ್ಮರನರಗಿಣಿಯೆ |
ಬಾರೆ ಮುದ್ದಿನ ಕಣಿಯೆ | ಬಾರೆ ಗುಣಮಣಿಯೆ || ೧೨೨ ||

ಮದನನೆಂಬ ದುರಾತ್ಮ | ನೊದೆದನೆನ್ನಸುವೆ ನೀ |
ಚದುರೆ ಬೆಂಬಲವಾಗಿ | ಬದುಕಿಸೀ ತನುವ || ೧೨೩ ||

ಅನುಮಾನವೇನೆನ್ನ | ಮನವ ಸಂತಸಬಡಿಸು |
ವನಿತೆ ಕುಳ್ಳಿರು ಎನಲು | ಕನಲಿ ಪೇಳಿದಳು || ೧೨೪ ||

ಎಲವೊ ಪಾತಕಿ ಬಾಯ | ಹುಳವಪ್ಪುದೀ ಮಾತು |
ಸಲುಗೆಯೇ ನಿನಗೆ ಪರ | ಲಲನೆಯರೊಳಿನಿತು || ೧೨೫ ||

ಮರಣ ಬೇಕೆಂಬಾಸೆ | ಇರೆ ಶೂಲದಲಿ ಬಿದ್ದು |
ಹರಣವನು ಕೊಡು ಯಮಗೆ | ಬರಿದೆ ಗಳಹದಿರು || ೧೨೬ ||

ತರುಣಿ ನಿನ್ನಯ ಮಾತು | ಕರಗಿಸದು ಎನ್ನುವನು |
ಕರುಣಿಸೊಮ್ಮೆಯೆನುತ್ತ | ಕರವಿಡಿದನವನು || ೧೨೭ ||

**ಭಾಮಿನಿ**

ದುರುಳನೀ ಪರಿಯಿಂದಲಾಕೆಯ |
ಕರವಿಡಿಯಲೊಡೆ ಮುರುಚಿ ಭಯದಿಂ |
ದಿರದೆ ಬಾಗಿಲ ದಾಂಟಿ ಸಭೆಗೋಡುವಳನೀಕ್ಷಿಸುತ ||
ತರಳೆ ಪೋಪೆಯದೆಲ್ಲಿ ನಿಲ್ಲೆನು |
ತುರವಣಿಸಿ ಬೆಂಬತ್ತುತಾ ಖಳ |
ತುರುಬ ಹಿಡಿಯುತ ಕುಸುಬಿದನು ಕೆಡಹಿದನು ಹುಡಿಯೊಳಗೆ || ೧೨೮ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಖೂಳನೀ ಪರಿಯಿಂದಲೈವರ | ಮೇಳದಬಲೆಯನೊದೆಯಲವನಿಗೆ |
ಬೀಳುತಲಿ ಬಾಯ್ಬಿಡುತ ಪೊರಳಿದ | ಳಾ ಲತಾಂಗಿ || ೧೨೯ ||

ಹುಡಿಯೊಳ್ ಹೊರಳುವ ಸತಿಯ ನಾಸಿಕ | ದೆಡೆಯೊಳೊಸರುವ ರಕ್ತವನು ಕಂ |
ಡೊಡನೆ ಭಾಸ್ಕರನಿತ್ತ ದೂತನು | ಘುಡುಘುಡಿಸುತ || ೧೩೦ ||

ಫಡ ಫಡೆನುತಾರ್ಭಟಿಸಿ ಭುಜಗಳ | ನೊದರುತಯ್ತಂದಾ ದುರಾತ್ಮನ |
ಕೆಡೆಯೆನುತ ಕುಸುಬಿದನು ತಿವಿದನು | ಕಡುಹಿನಿಂದ || ೧೩೧ ||

ಕರಹತಿಗೆ ಡೆಂಡಣಿಸುತಾ ಖಳ | ನುರುಳಿ ಧರೆಯೊಳು ಪೊರಳಿ ಮೆಲ್ಲನೆ |
ತರಹರಿಸುತೊರಲುತ್ತ ಬಂದನು | ಮರಳಿ ಮನೆಗೆ || ೧೩೨ ||

**ಕಂದ**

ಖಳನೀ ತೆರದಿಂ ಬಿದ್ದೆ |
ದ್ದಳುತೈತಲ್ಕಾಣುತವನಿಪತಿಯೋಲಗದೊಳ್ ||
ಕುಳಿತವರೆಲ್ಲರ್ ಭಯಮಂ |
ತಳೆದಿರಲಾ ಲಲನೆ ಗೋಳಿಡುತಮತಿ ದುಃಖಿಸಿದಳ್ || ೧೩೩ ||

**ರಾಗ ನೀಲಾಂಬರಿ ಏಕತಾಳ**

ಅಕಟಕಟೆನ್ನಯ ವಿಧಿಯೆ | ಶಕುತಿಯೊಳಾ ಖಳನೊದೆಯೆ ||
ಸಕಲರು ನೋಡುವರಿದನು | ಲಕುಮೀಯಾಳ್ದನೆ ನೀನು || ೧೩೪ ||

ಕರುಣದಲಿ ಸಲಹೆನ್ನ | ಎರೆಯರು ಬಿಟ್ಟರು ಮುನ್ನ |
ಹರ ಹರ ಈ ಶೋಕವದು | ವರರಿಗೆ ತಾಗಲಿ ಇಂದು || ೧೩೫ ||

ಯಾರಿಗೆ ಪೇಳುವೆನಿನ್ನು | ಯಾರು ವಿಚಾರಿಪರಿದನು |
ಭೂರಿ ಜನರುತಾವಿಹ ಸಭೆಯು | ಆರಣ್ಯವಾಯ್ತುಯ್ಯಯ್ಯೋ || ೧೩೬ ||

**ರಾಗ ಆನಂದಭೈರವಿ ಅಷ್ಟತಾಳ**

ಈ ತೆರದಿಂದಂಬುಜಾಕ್ಷಿ | ಭೀತಿಯಿಂದಲಧಿಕ ಶೋಕ |
ತಾಳುತ್ತ | ಧರೆಗೆ ಬೀಳುತ್ತ || ೧೩೭ ||

ಕೆಡೆದು ಹುಡಿಯೊಳ್ ಹೊರಳುತ್ತಡಿ | ಗಡಿಗೆ ಮನದಿ ಮರುಗಿ ಗೋಳಿ |
ಟ್ಟಳಲಿದೋ | ಬಹು | ಬಳಲಿದೋ || ೧೩೮ ||

ಮರಳಿ ಮೆಲ್ಲನೆದ್ದು ಬಿಕ್ಕಿ | ಬಿರಿದಳುತ್ತಲಾಗ ಸಭೆಯ |
ನೋಡುತ್ತ | ಧರೆಗೆ | ಬೀಳುತ್ತ || ೧೩೯ ||

**ಭಾಮಿನಿ**

ಎಲೆ ಧರಾಧಿಪ ಲಾಲಿಸಿಂತಾ |
ಲಲನೆ ಬಾಯ್ಬಿಡುತಿರಲು ಹಿಮಕರ |
ಕುಲ ಶಿರೋಮಣಿ ಸಮಯವಲ್ಲೆನುತುಸಿರದಿರುತಿರಲು ||
ಕಲಿಮರುತ್ತನುಜಾದಿಗಳು ಭುಜ |
ಬಲವ ಮೆರೆವಡೆ ವೇಳೆಯಲ್ಲೆನು |
ತುಳುಕದಿರೆ ಶೋಕಿಸುತ ಮತ್ತಿಂತೆಂದಳುಬುಜಾಕ್ಷಿ || ೧೪೦ ||

**ರಾಗ ಕಾಂಭೋಜಿ ಆದಿತಾಳ**

ಶಿವನೇ ಇನ್ನ್ಯಾರಿಗೆಂಬೆ ನಾನು | ಖಳನುಪದ್ರವನು | ಶಿವನೇ ಇನ್ನ್ಯಾರಿಗೆಂಬೆ ನಾನು || ಪ ||

ಸುಮ್ಮನೆ ಕಂಡರಿವರೆಲ್ಲ | ಆತನೆನ್ನವನಿಗೆ ಕೆಡಹಿ ಪೋದನಲ್ಲ || ಅ.ಪ ||

ಎಲೆ ಕಂಕಸಂನ್ಯಾಸಿ ನೀ ಕಾಂಬೆ | ಸತ್ಯಾತ್ಮನೀನು | ಹಲವು ಧರ್ಮವ ಬಲ್ಲೆನೆಂಬೆ |
ಸಭೆಯಿದಿರೊಳೆನ್ನ | ಖಳನೊದ್ದು ಪೋದುದ ನೀ ಕಾಂಬೆ | ಬಡವರ್ಗೆ ಬಡವ |
ರೊಲವಾಗಬೇಕು ಬದ್ಧವೈಸೆ || ೧೪೧ ||

**ವಾರ್ಧಕ**

ಯುವತಿಯೀ ಪರಿಯಿಂದಲಳವುದಂ ಕಾಣುತಂ |
ಪವನಜಂ ನೊಂದಳಕಟಕಟ ಸತಿಯೆಂದೆನುತ |
ತವಕದಿಂ ಕೋಪದಿಂ ಕಂಡಂ ನೃಪಾಲಯದ ಮುಂದಣ ಮಹಾತರುವನು ||
ಅವನಿಗಿವಳಂ ಕೆಡಹಿದಧಮನಂ ಮುರಿವೆ ಮ |
ತ್ತವನ ವಂಶವನರೆವೆಯರಿತರಾದರೆ ಕೌರ |
ವರ ವೃಂದಮಂ ತರಿವೆಯಣ್ಣನಾಜ್ಞೆಯ ಮೀರ್ವೆನೆನುತುಬ್ಬಿದಂ ಭೀಮನು || ೧೪೨ ||

**ರಾಗ ಕೇದಾರಗೌಳ ಅಷ್ಟತಾಳ**

ಮರುತನಂದನನಿಂತು ಮರವನೀಕ್ಷಿಸಲು ಕಂ | ಡರಿತವನಿಂಗಿತವ |
ಧರಣಿಪಾಗ್ರಣಿ ಧರ್ಮಸುತನೆಂದ ಮತ್ತೊರ್ವ | ರರಿಯದ ತೆರದೊಳಂದು || ೧೪೩ ||

ಮರುಳಾದೆಯೇನಯ್ಯ ವಲಲ ಈ ಮರವಿದು | ನರರಿಗಾಶ್ರಯವಪ್ಪುದು |
ಮುರಿವುದುಚಿತವಲ್ಲ ನಿನಗೆ ಬಾಣಸಿನ ಮಂ | ದಿರಕೆ ಮತ್ತುಂಟು ಬೇರೆ || ೧೪೪ ||

ಕಡಿಯದಿರೈ ಧರ್ಮಮಯದ ತರುವ ನಮ್ಮ | ನುಡಿ ಕೇಳೆಂದೆನೆ  ಲಾಲಿಸಿ |
ಬಿಡನೀತನೇಂಗೆಯ್ವೆನೆಂದು ಮರುಗುತೆದ್ದು | ನಡೆದನಾಚೆಗೆ ಭೀಮನು || ೧೪೫ ||

ಮರುತಜನಯ್ದೆ ಭೂಮಿಪ ಮನಮರುಗುತ್ತ | ಪರರಿಗೆ ಪೇಳ್ವಂದದಿ |
ಅರುಹಿದನೆಲೆ ನೀರೆ ಏಕೆ ದುಃಖಿಸುವೆ ನೀ | ದುರುಳನಧಿಕ ಶೌರ್ಯನು || ೧೪೬ ||

ಬಗೆಯನಾತನು ಮತ್ಸ್ಯಭೂಪನ ನಿನ್ನಲ್ಲಿ | ಹೊಗದು ದೋಷವು ಲಾಲಿಸು |
ಮೃಗವಿಲೋಚನೆ ಧರ್ಮವಿದು ನೀ ದುಃಖಿಸದಿರು | ದುಗುಡವ ಬಿಡು ಸುಮ್ಮನೆ || ೧೪೭ ||

**ಕಂದ**

ಭೂಮಿಪನಿಂತೆನೆ ಕೇಳ್ದುಂ |
ಭಾಮಾಮಣಿ ಯೋಚಿಸಿದಳಿವಂ ಧರ್ಮಾತ್ಮಂ ||
ಭೀಮನೊಳೀಕ್ಷಿಪೆನೆನುತಾ |
ಭಾಮೆಯು ಬಂದಳು ಅಳುತ್ತಲೊಡತಿಯ ಬಳಿಗಂ  || ೧೪೮ ||

**ರಾಗ ಆನಂದಭೈರವಿ ಅಷ್ಟತಾಳ**

ಕಂಡಳೀಕೆಯ ನೃಪನರ್ಧಾಂಗಿ | ಪುಂಡರೀಕಾಕ್ಷಿಯಳಲುತ ಬಳಲುತ ಬರೆ ||
ಕಂಡಳು    || ಪಲ್ಲವಿ ||

ಏನಾಯಿತೆಲೆ ನೀರೆ ಏಕೆ ದುಃಖಿಸುವೆ ನಿ | ನ್ನಾನನದ ಸಿರಿ ಕಂದಿತೇತಕೆ ಇಂಥಾ |
ಹಾನಿ ಯಾರಿಂದಾಯಿತು | ಮಂಡೆಯಲಿ ಧೂ |
ಳೀನಿದೆಲ್ಲಿಂದ ಬಂತು | ಪೇಳೆನ್ನೊಳು ನಿ |
ಧಾನವನೆನೆಲೆಂದಳತಿ ದುಃಖದಿಂದ  || ೧೪೯ ||

ಅರಿಯಿರಿ ನೀವ್ ಧೊರೆತನದ ಮೇಲಿರುವಾಗ | ಮರವೆಯಪ್ಪುದು ಬಡವರ ಮಾತದೇನುಂಟು |
ದುರುಳ ನಿಮ್ಮಯ ತಮ್ಮನು || ಬಲು  ಬಗೆಯಿಂದ | ಮರುಗಿಸಿದನು ತನ್ನನು | ಅನ್ಯಾಯವಿ |
ನ್ನರಸಿಗೊಪ್ಪಿಗೆಯಾಗೆ ಪೇಳುವುದ್ಯಾರಿಗೆ  || ೧೫೦ ||

ತಿರುಕೂಳಿಗಳು ನಾವು ಮೊದಲೆ ನಮ್ಮನು ಈ | ಪರಿಯ ನಿರ್ಬಂಧ ಪಡಿಸಿದರೆಂತಿರುವೆವು |
ಕರೆಸಿ ನೀವಿನ್ನಾದರು || ಬುದ್ಧಿಯ ತಮ್ಮ | ಗರುಹಿ ಮತ್ತೆಂದಾದರು | ಮಾನದೊಳೆನ್ನ |
ಪೊರೆದರಿರ್ಪೆನಲ್ಲದಿರೆ ಪೋಪೆ ಕಳುಹಿಸಿ | ಸಾಕವ್ವ ನಿಮ್ಮ ಸೇವೆಯು ಮುಂದೆಮಗೆ || ೧೫೧ ||

**ಭಾಮಿನಿ**

ಅಳಲಬೇಡಿನ್ನಬಲೆ ಸತ್ಯವ |
ನಳಿದವರ ಕೊಲಿಸುವೆನು ಪರಸತಿ |
ಗಳುಪಿದವ ನನ್ನನುಜನೇನು ಸುದೇಷ್ಣೆಯೆನೆ ಕೇಳ್ದು ||
ಲಲನೆ ನುಡಿದಳು ನೀವಿದೇತಕೆ |
ಕೊಲಿಸುವಿರಿ ತನ್ನವರು  ಕೀಚಕ |
ಕುಲವ ತೀರ್ಚುವರೆನಗೆ ಪಾತಕವಿಲ್ಲ ಸಾರಿದೆನು || || ೧೫೨ ||

**ಕಂದ**

ಎಂದಾ ಸತಿಯಂ ಬೀಳ್ಗೊಂ |
ಡಂದಾ ಪಾಂಡವರ ರಾಣಿಯತಿ ಭೀತಿಯೊಳಂ ||
ಮಂದಿರಕಯ್ತರಲುಂತಾ |
ನಂದಳಲುತ ದಿವವನುಳಿದುಸಿರ್ದಳ್ ಮನದೊಳ್ || ೧೫೩ ||

**ರಾಗ ಯರಕಲಕಾಂಭೋಜಿ ಅಷ್ಟತಾಳ**

ಎಂತು ತಾಳುವೆನು | ಈ ವಿಧದೊಳಿ | ನ್ನೆಂತು ಬಾಳುವೆನು  || ಪಲ್ಲವಿ ||

ಬಂದೆಲ್ಲರಿದಿರಿನೊಳು | ಮೆಟ್ಟಿದನೆನ್ನ | ನಿಂದು ಖೂಳನು ಕಾಲೊಳು ||
ಮಂದಮತಿಯು ನಾಳೆ | ಬಂದು ಪಿಡಿದರೇವೆ | ಮುಂದೇನು ಗತಿ ತನಗೆ | ಹೀಗಾಗೆ || ಎಂತು || ೧೫೪ ||

ಯಾರಿಗುಸಿರುವೆನು | ಈ ಶೋಕವನು ತಾ | ನ್ಯಾರು ಕೇಳುವರಿದನು |
ಧಾರಿಣಿಯೊಳು ಹೆಣ್ಣು | ಜನ್ಮವ ಸುಡಲಿನ್ನು | ಭೂರಿ ಬಾಧೆಗೆ ಸಂದೆನು | ಇನ್ನೇನು || ಎಂತು || ೧೫೫ ||

ರಮಣರ್ಗೆ ಪೇಳುವೆನೊ | ಎಂದರೆ ತಾನು | ಯಮಜ ಧರ್ಮದೊಳಿಹನು ||
ಅಮರೇಂದ್ರಸುತನಾತ | ನೊಳಗಿಹ ಮಿಕ್ಕಿನ | ಯಮಳರಿಂದಲಿ ತೀರದು | ತಾನಿಂದು  || ಎಂತು || ೧೫೬ ||

ಇವರೆಲ್ಲರೊಳು ಭೀಮನು | ಎನ್ನಯ ಕಾಮಿ | ತವ ಸಲಿಸುವ ಕಾಂತನು ||
ಅವಗೆದೂರುವೆನಾತ | ನೊಳಗಾಗದಿರಲು ವಿ | ಷವನೆ ಕುಡಿವೆನೆಂದಳು | ಶೋಕದೊಳು || ಎಂತು  || ೧೫೭ ||

**ಭಾಮಿನಿ**

ಅರಸ ಕೇಳಾ ದ್ರುಪದಸುತೆಯೀ |
ಪರಿಯ ಶೋಕದೊಳೆದ್ದು ಭೀಮಂ |
ಗರುಹಿ ನೋಡುವೆನೆನುತ ರಾತ್ರಿಯೊಳೊರ್ವರರಿಯದೊಲು ||
ತರಳೆ ಬಂದಳು ಬಾಣಸಿನ ಮಂ |
ದಿರದೆ ಪಾಕಂಗೈದು ಬಳಲಿದು |
ಭರದ ನಿದ್ರೆಯೊಳಿರ್ಪ ಭೀಮನ ಕಂಡಳಾ ಕಾಂತೆ ||೧೫೮||

**ರಾಗ ಶಂಕರಾಭರಣ ತ್ರಿವುಡೆತಾಳ**

ಬಾಲೆ ಕಂಡಳು ಮರುತಜನ ನಿ | ದ್ರಾಲತಾಂಗಿಯ ಸುರತಸುಖದಿಂ |
ದೇಳದೊರಗಿರೆ ಮನದಿ ನುಡಿದಳು | ಲೋಲನಯನೆ ||೧೫೯||

ಎಬ್ಬಿಸಿದರಿನ್ನೇನನೆಂಬನೊ | ಗಬ್ಬಿಹೆಣ್ಣಿವಳೆಂದು ಬೈವನೊ |
ತುಬ್ಬಹುದು ನಾ ಬಂದುದಿವಸ | ದ್ದಬ್ಬರಿಸಲು ||೧೬೦||

ಏನು ಮುನಿದರು ಮುನಿಯಲೆಂದವ | ನಾನನದ ವಸನವನು ತೆಗೆದಾ |
ಮಾನಿನೀಮಣಿ ಗಲ್ಲಪಿಡಿದು ನಿ | ಧಾನದಿಂದ ||೧೬೧||

ಅಲುಗಿ ಮುದ್ದಿಸುತಿರಲು ಭೀಮನು | ಘಳಿಲನೆಚ್ಚರಿತೆದ್ದು ಮುಂದಿಹ |
ಲಲನೆಯನು ಕಾಣುತ್ತಲೆಂದನು | ತಳುವದಂದು ||೧೬೨||

**ರಾಗ ಕಲ್ಯಾಣಿ ಅಷ್ಟತಾಳ**

ಮಾನಿನಿರನ್ನಳೆ | ಬಂದುದಿ | ದೇನು ಕಾರ್ಯ ಪೇಳೆ |
ಮಾನವಂತೆ ನಿನ್ನಾನನವೇತಕೆ | ಮ್ಲಾನವಾಗಿರುವುದಿದೇನೆ ಲತಾಂಗಿ || ಮಾನಿನಿ ||೧೬೩||

ಇಲ್ಲಿಹನಾರಿಯರು | ತಿಳಿಯುವರ್ | ಖುಲ್ಲರುಳಿದ ಜನರು |
ನಿಲ್ಲದಿರೆಲೆ ದೇಶಿಗರಾವೆಂಬುದ | ಬಲ್ಲೆ ಬಂದುದ ತಳುವಿಲ್ಲದುಸುರು ನಡೆ || ಮಾನಿನಿ ||೧೬೪||

**ರಾಗ ಯರಕಲ ಕಾಂಭೋಜಿ ಅಷ್ಟತಾಳ**

ಪೇಳಲೇನಾನಿನ್ನು | ಎನ್ನಳಲನು | ಪೇಳಲೇನಾನಿನ್ನು ||ಪಲ್ಲವಿ||

ನಿನ್ನೆ ಕೀಚಕನು | ಎಂದೆನಿಪೋರ್ವ | ಕುನ್ನಿಯೊದೆದನೆನ್ನನು ||
ಬೆನ್ನ ಬಿಡನು ಪಾಪಿ | ಯಾ ಖೂಳ ನುಪಟಳ | ವಿನ್ನೆಂತು ತಾಳುವೆನು | ಬಾಳುವೆನು || ಪೇಳ ||೧೬೫||

ನಿನ್ನಂಥ ವಲ್ಲಭರು | ಇದ್ದರು ನಾನು | ಬನ್ನಬಡುವುದಾದರು ||
ಇನ್ನು ಪ್ರಾಣವ ಕಳೆ | ಕೊಂಬೆನೀ ಪಾತಕ | ನಿನ್ನ ತಟ್ಟುವುದೆಂದಳು | ಶೋಕದೊಳು || ಪೇಳು ||೧೬೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎನಲು ಕೇಳುತ ಖತಿಯೊಳನಿಲಸು | ತನು ನುಡಿದನೀ ಗಂಡುತನವನು |
ವನಿತೆ ಸುಡು ಪೇಳದಿರು ತನ್ನೊಳು | ಮನೆಗೆ ತೆರಳು || ೧೬೭ ||
ಉಳಿದ ನಾಲ್ವರು ರಮಣರೊಳು ಪೇಳ್ | ಸಲಿಸುವರು ನಿನ್ನಿಷ್ಟವನು ನಡೆ |
ಯಳಲದಿರ್ ನಾವ್ ಭೀತರಣ್ಣಗೆ | ಜಲಜಗಂಧಿ || ೧೬೮ ||

**ಕಂದ**

ಎಂದಾ ಭೀಮಂ ಚಿತ್ತದಿ |
ನೊಂದೀ ತೆರದಿಂ ಪರಸ್ಪರದೊಳೆನೆ ಕೇಳ್ದುಂ ||
ಚಂದಿರಮುಖಿಯಂದುಂ ಬೆದೆ |
ಬೆಂದಳುತೆಂದಳು ಮನದೊಳಿರ್ದುದ ಶೋಕದೊಳಂ || ೧೬೯ ||

**ರಾಗ ನೀಲಾಂಬರಿ ರೂಪಕತಾಳ**

ಶಿವ ಶಿವ ಪೂರ್ವಜನ್ಮದೊಳು ನಾನೇನು ಪಾ | ಪವ ಮಾಡಿದೆನೊ ತನಗಿಂದು |
ಬವಣೆಯಾಯ್ತೀ ಪುರುಷರಿಗೆ ತಾ ಸತಿಯಾದ | ದಿವಸಾರಭ್ಯವೀವರೆಗೆ || ೧೭೦ ||

ಧರೆಯೊಳೊರ್ವಳಿಗೊರ್ವ ಪುರುಷನಾದರು ತನ್ನ | ತರುಣಿಯ ನಾರೈವನವಳ |
ಹರಿಬವ ಕಂಡರೆ ಹರಣವನಿತ್ತಾದ | ರರಸಿಯ ಸಲಹುವ ಜಗದಿ || ೧೭೧ ||

ಪತಿಗಳೈವರು ತನಗಿಹರೊರ್ವರೊರ್ವರ | ಪ್ರತಿಮ ಸಾಹಸರು ನೋಡುವರೆ |
ಸತಿಯಳೊರ್ವಳ ಸಲಹದ ನಾಣಗೇಡಿಗಳ್ | ಕ್ಷಿತಿಯೊಳಿನ್ನುಂಟೆ ಇಂಥವರು || ೧೭೨ ||

ಮೊದಲೊಂದು ಬಾರಿ ಕೌರವರು ಮಾನವ ಕೊಂಡ | ರೊದೆದನಿಂದೀ ಪಾಪಿ ಖಳನು |
ಬದಲು ಮಾತಿನ್ನೇನು ತುದಿಗಾಲ ಬಂತೆನ | ಗಿದು ಸಿದ್ಧ ಕೊಲುವಿರಿ ನೀವು || ೧೭೩ ||

**ರಾಗ ಮುಖಾರಿ ಅಷ್ಟತಾಳ**

ಮಾನಿನಿಯಳಲದಿರೆ | ಮಾನವ ಸುರ | ದಾನವರೊಳಗೆ ನೀರೆ |
ತಾನಾರೆನ್ನಯ ಮಾನ | ವನು ಕಳೆವಾತನ | ಪೆಸರದೇನುಂಟು ಪೇಳೆ | || ೧೭೪ ||

ಈ ಷಂಡರೊಡನೆ ನಾನು | ಪುಟ್ಟಿದ ಮೇಲೆ | ಮೀಸೆಯುಳ್ಳವನೆ ಇನ್ನು |
ರೋಷವಿಲ್ಲೆನಗೆ ನೀ | ಮನಕೆ ಬಂದುದ ಪೇಳು | ಈಸೊಂದು ಬೆದರದಿರೆ || ೧೭೫ ||

ಲಲನೆ ನೀನರಿಯೆಯೇನೆ | ಎನ್ನಯ ಭುಜ | ಬಲವ ನೀನೆಂಬುದೇನೆ ||
ಕೊಲುವೆ ಪಾಪಿಗಳನೆಂ | ದರೆ ಬಿಡನಣ್ಣನು | ಸಿಲುಕಿಹೆನವನಾಜ್ಞೆಗೆ || ೧೭೬ ||

ಮಿಕ್ಕ ಗಂಡರಿಗುಸಿರು | ನಿನ್ನಯ ಮನ | ದಕ್ಕರೆ ಸಲಿಸುವರು ||
ಸಿಕ್ಕೆವು ನಾವಿಂಥಾ | ನಾಣ್ಗೇಡಿಗಳಿಗೆ ನೀ | ದುಃಖಿಸಬೇಡವಿಲ್ಲಿ || ೧೭೭ ||

ಇಂದಿನಾರಭ್ಯವಿನ್ನು | ಕಾಂತರುನಾಲ್ವ | ರೆಂದು ಭಾವಿಸಿಕೊ ನೀನು |
ಮಂದಗಮನೆ ನಿನ್ನ | ದಂದುಗವನು ಬಿಟ್ಟೆ | ನೆಂದಿಗು ಮುಂದೆ ನಾನು || ೧೭೮ ||

**ಭಾಮಿನಿ**

ಕಲಿ ಮರುತ್ಸುತನಿಂತೆನಲಿಕಾ |
ಲಲನೆ ದುಃಖಂಬಡುತ ಬಿಸಿಲಿನ |
ಜಳಕೆ ಬಾಡಿದ ಬಳ್ಳಿಯಂದದಿ ಬಳುಕುತಡಿಗಡಿಗೆ ||
ಬಳಲುತೊಯ್ಯನೆ ಕೊರಳ ಸೆರೆಬಿಗಿ |
ದೊಳಸರಿಯೆ ಮಾತುಗಳು ತನ್ನೊಳು |
ಹಲವು ಹಂಬಲಿಸುತ್ತ ಮರುಗುತ್ತೆಂದಳಬುಜಾಕ್ಷಿ || ೧೭೯ ||

**ರಾಗ ಯರಕಲ ಕಾಂಭೋಜಿ ಆದಿತಾಳ**

ಯಾರಿಗುಸಿರುವೆನು | ಈ ಶೋಕವ | ನಾರು ಕೇಳುವರಿನ್ನು |
ಯಾರ ನಾನು ಪೂರ್ವಜನ್ಮದಿ | ಭೂರಿ ಭಂಗವ ಪಡಿಸಿದೆನೊ | ಇ |
ನ್ನಾರು ಮುನ್ನೆನ್ನಂತೆ ನವೆದರು ನಾರಿಯರೊಳೆನಗೇನು ಗತಿಯೊ || ಯಾರಿಗುಸಿರುವೆನು || ೧೮೦ ||

ಧರಣಿಪ ದ್ರುಪದನಲ್ಲಿ | ಜನಿಸಿ ಮತ್ತೆ | ಸುರನರೋರಗರಿಂದಲಿ |
ಧುರದಿ ಸೋಲದಧಟ್ಟರಿಂಗೇ | ತರುಣಿಯಾಗೀ ಮತ್ಸ್ಯಭೂಪನ |
ಅರಸಿ ಸೇವೆಗೆ ದೊರಕಿ ದಾಸಿಯ | ತೆರದೊಳಾಕೆಯ ಕಾಲನೊತ್ತುವ |
ಪರಿಗೆ ಸಂದೆನುಯಿವದಿರಿಂಥಾ | ವರರು ಬೇಡಿನ್ನೇಸು ಜನ್ಮಾಂ |
ತರಕೆನುತೆ ಮತ್ತವನೊಳೆಂದಳು || ಯಾರಿಗುಸಿರುವೆನು | || ೧೮೧ ||

ಪಗೆಗೆ ರಾಜ್ಯವನಿತ್ತಿರಿ | ಭಂಗಕೆ ನಿಮ್ಮ | ಪೆಗಲನಿತ್ತಾನುವಿರಿ |
ಮಿಗಿಲ ಮಾತಿನ್ನೇತಕೆನ್ನನು | ಮುಗಿಸಲೋಸುಗವೀಗ ನಿಮ್ಮಯ
ಬಗೆಯಲೀ ಧರ್ಮದಲಿ ಸಿಲುಕಿದ | ಮುಗುದೆಯೊರ್ವಳ ತೀರ್ಚಿದಿರಿ ಈ |
ವಿಗಡತನವಾರ್ಗುಂಟು ಪೇಳಾ |ಶುಗತನುಜ ತನಗಿತ್ತೆಯಾ ಸಾ |
ವಿಗೆ ನಿರೂಪವನಕಟಕಟ ಇ || ನ್ಯಾ ರಿ ಗುಸಿರುವೆನು || ೧೮೨ ||

**ಭಾಮಿನಿ**

ಎರೆಯ ಕೇಳೈ ಎನ್ನ ಮರಣವು |
ಹರುಷವಾಯಿತೆ ನಿನಗೆ ನೀವಿ |
ನ್ನರಸನಾಜ್ಞೆಯ ಮೀರದಿಹುದಯ್ವರುಗಳೊಂದಾಗಿ ||
ಹರ ಹರಾ ತಾನೇಕೆ ನಿಮ್ಮಯ |
ತರುಣಿಯಾದೆನೊ ಭೀಮ ಕೊಡಿಸೈ |
ಮರಣಕಪ್ಪಣೆಯೆನುತಲೆರಗಿದಳಾಗ ಕಮಲಾಕ್ಷಿ || ೧೮೩ ||

**ರಾಗ ಭೈರವಿ ಝುಂಪೆತಾಳ**

ಎನಲು ಕೇಳುತ ಭೀಮ | ಮನಮರುಗುತಯ್ದೆ ಕಂ |
ಬನಿದುಂಬಿ ಕರೆದನಾ | ವನಜಲೋಚನೆಯ || ೧೮೪ ||

ತರುಣಿಯಳ ಕಣ್ಣೀರ | ನೊರೆಸಿ ಮೊಗವನು ತನ್ನ |
ಕರದಿಂದ ತೊಡಸಿದನು | ಕುರುಳ ನೇವರಿಸಿ || ೧೮೫ ||

ಕನ್ನೆ ನೀನಳಲದಿರು | ಇನ್ನು ಸಂತಸ ತಾಳು |
ನಿನ್ನಾಣೆ ಮೀರ್ದೆ ನಾ | ನಣ್ಣನಾಜ್ಞೆಯನು || ೧೮೬ ||

ಬಡಿವೆ ಕೀಚಕಕುಲವ | ತಡೆದರೆ ವಿರಾಟನನು |
ಕೆಡೆದು ಹರಹುವೆನವನ | ಪಡೆಸಹಿತ ಭರದಿ || ೧೮೭ ||

ಅರಿತರಾದರೆ ಕೌರ | ವರ ತರಿವೆನಲ್ಲಿಂದ |
ಡುರುಹುವೆನು ನಾಕವನು | ತೊರೆದೆ ನೀತಿಯನು || ೧೮೮ ||

**ವಾರ್ಧಕ**

ತರುಣಿ ಬಿಡು ಶೋಕಮಂ ಮೃಗರಾಜವನಿತೆಯಂ |
ನರಿ ಕೆಣಕಿ ಬದುಕುವುದೆ ನೋಡೆನ್ನ ಸಾಹಸಂ |
ಮರುಗದಿರ್ ಮುಳಿದೆನಾದರೆ ಬಗೆಯೆನಗ್ರಜನ ಧರ್ಮಗಿರ್ಮಂಗಳನ್ನು ||
ತೆರಳಿ ನೀನಾ ಖೂಳನೆಡೆಗೆ ನಾಟಕದ ಮಂ |
ದಿರಕೆ ಬಾರೆಂದು ಸೂಚನೆ ಪೇಳ್ದಡಾನೊರ್ವ |
ರರಿಯದಂದದೊಳೈದಿ ಖಳನ ಬಸಿರಂ ಬಗಿವೆನಂಜದಿರ್ ನಡೆಯೆಂದನು || ೧೮೯ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಇಂತೆಂದ ಮಾತನು ಕೇಳುತ್ತ | ಗುಣ | ವಂತೆ ದ್ರೌಪದಿ ತೋಷ ತಾಳುತ್ತ ||
ಚಿಂತೆಯ ಬಿಡಿಸಿದ ಭೀಮನು | ತನ | ಗಿಂಥಾ ಮೋಹದ ಕಾಂತರ್ ಯಾರಿನ್ನು || ೧೯೦ ||

ಎಂದು ಬೇಗದಿ ಪೊರಮಟ್ಟಳು | ತಾನು | ಬಂದು ಮನೆಗೆ ರಾತ್ರಿ ಕಳೆದಳು ||
ವೃಂದಾರಕಾಧಿಪದೆಸೆಯೊಳು | ಅರ | ವಿಂದಾಪ್ತ ಭರದಿಂದುದಯಿಸಲು || ೧೯೧ ||

ದುರುಳ ಕೀಚಕನು ಆ ದಿವಸದಿ | ಕಂ | ದರವಿಂದಾಕ್ಷಿಯನು ಸಂತಾಪದಿ ||
ಕರವ ಪಿಡಿಯಲಂಜಿ ನುಡಿದನು | ನೀರೆ | ಕರುಣವಿಲ್ಲೆನ್ನೊಳು ನಿನಗಿನ್ನು || ೧೯೨ ||

ಇರುಳೊಂದು ಯುಗವಾಗಿ ಕಳೆದೆನು | ಪಾಪಿ | ಸ್ಮರನು ಅಂತಕನಾಗಿ ಕೊಲುವನು ||
ತರುಣಿ ನೀನೇ ಬಲ್ಲೆ ಇನ್ನೇನು | ಸಲಹು | ಹರಣವೆನುತ ಕೈಯ ಮುಗಿದನು || ೧೯೩ ||

ಎಲೆ ಪಾಪಿ ಕೆಡಬೇಡ ಸಾರಿದೆ | ನಿನ್ನ | ತಲೆಯನೆನ್ನವರಿಗೆ ಮಾರಿದೆ ||
ನೆಲನಿಂಥಾ ಪಾಪಿಯ ಹೊರುವುದೆ | ಪರ | ಲಲನೆಗಳುಪಿ ಕೀರ್ತಿ ಇರುವುದೆ || ೯೪ ||

**ಭಾಮಿನಿ**

ಎಲವೊ ಪಾತಕಿ ಕೇಳು ನಿನ್ನಯ |
ಕುಲವ ತೀರ್ಚಿದೆಯಾದಡಾಗಲಿ |
ಗಳಹದಿರು ನೀನಿನ್ನು ರಾತ್ರಿಯೊಳೊರ್ವರರಿಯದೊಲು ||
ಘಳಿಲನಯ್ತುಹೆ ನಾನು ನಾಟ್ಯದ |
ನಿಳೆಯಕಲ್ಲಿರು ನೀನು ತನ್ನವ |
ರುಳಿಸರರಿತರೆ ನಿನ್ನ ಮಂದಿರಕೈದು ಬೇಗದಲಿ || ೯೫ ||

**ಕಂದ**

ಇಂತೆನೆ ಕೇಳ್ದಾ ದುರುಳಂ |
ಸಂತಸವೆತ್ತಯ್ದಿದ ತಾ ಮಂದಿರಕಾಗಲ್ ||
ಕಾಂತಾಮಣಿಯಿತ್ತಂ ಮನೆ |
ಗಂ ತಾಂ ಬಂದಿರಲುಮಸ್ತಮಿಸಿದಂ ತಪನಂ || || ೯೬ ||

**ವಾರ್ಧಕ**

ತರಣಿಯೀ ತೆರದೊಳಂ ಶರಧಿಗಿಳಿಯಲ್ ಕಾಣು |
ತಿರದೈವರರಸಿಯುಂ ಹರುಷದಿಂದೆದ್ದುಮತಿ |
ಭರದಿಂದ ಚರಣನೂಪುರ ಝಣತ್ಕಾರದಿಂ ಮಿರುಪ ಕೋಮಲಕಾಯದ ||
ಪರಿಮಳಕೆ ಮರುಳಾಗಿ ಬರುವ ಭ್ರಮರಂಗಳಿಂ |
ಕಿರುನಗೆಯ ಸುರುಚಿರಂ ಧರೆಯನಾವರಿಸಲಾ |
ಕರಿಗಮನೆ ಮರುತಸುತನಿರುವಲ್ಲಿಗಯ್ತಂದಳರಸಂಚೆಯಾನದಿಂದ || ೯೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದು ಭೀಮನಿಗೆರಗಿ ನುಡಿದಳು | ಮಂದಮತಿಗಾನೆಂದೆ ನಾಟ್ಯದ |
ಮಂದಿರದೊಳಿಹುದೆಂದು ನೀ ಪೇ | ಳ್ದಂದದಿಂದ || ೯೮ ||

ಎರೆಯ ಕೇಳಿನ್ನೇಕೆ ಕುಳಿತಿಹೆ | ದುರುಳನುರವನು ಬಗಿದು ಕರುಳನು |
ಮರುಳುಗಳಿಗುಣಲಿಕ್ಕಿ ದಯೆಯಿಂ | ಪೊರೆವುದೆನ್ನ || ೯೯ ||

ಎನಲು ಕೇಳುತಲೆದ್ದು ಭೀಮನು | ಘನಮದಾಂಧನ ಕೊಲುವೆನೆಂದಾ |
ಮನದಿ ಕಟಿಯನು ಬಿಗಿಯೆ ಕಂಡಾ | ವನಜಗಂಧಿ || ೧೦೦ ||

ತಲೆಯ ಬೈತಲೆಯಿಂದ ಬಾಚಿದು | ಲಲನೆಯಂದವ ಮಾಡಿ ವರನನು |
ಖಳನ ಜಯಿಸೆಂದೆನುತ ಪಣೆಯೊಳು | ತಿಲಕವಿಡಲು || ೧೦೧ ||

**ಕಂದ**

ಇಂತುಸಿರಿದ ಭಾಮಿನಿಯಂ |
ಸಂತಸದಿಂದಪ್ಪಿ ನೀ ತೆರಳು ಮನೆಗೆನುತಂ ||
ತಾಂ ತಳುವದೆ ಭೀಮ ಬಂ |
ದಂತರಿಸದೆ ಪೊಕ್ಕನು ನೃತ್ಯಮಂದಿರಮಂ || ೧೦೨ ||

**ರಾಗ ಕಾಂಭೋಜಿ ಝಂಪೆತಾಳ**

ಅರಸ ಕೇಳಿತ್ತ ಕೀಚಕನು ತನ್ನಯ ಗೃಹದಿ | ಹರುಷದಿಂದೆದ್ದು ನಿಶಿಯೊಳಗೆ |
ಪರಿಪರಿಯಲಂಕಾರದಿಂ ರಾಜಿಸುತ ಬಂದ | ತಿರುಹುತ್ತ ಖಡ್ಗವನು ಭರದಿ || ೧೦೩ ||

ಜನರನುಳಿದೊರ್ವನಯ್ತಂದ ಬಯಸಿದು ಕೃತಾಂ | ತನ ಬಾಯ ಹೋಗುವಂತೆ ಮುದದಿ |
ಅನುಮಾನಿಸದೆ ಪೊಕ್ಕನಾ ನಾಟ್ಯನಿಲಯವನು | ಘನ ಮದಾಂಧತೆಯಿಂದಲಾಗ || ೧೦೪ ||

ಬಂದು ಮಣಿಪರಿಯಂಕದೆಡೆಗೆ ನುಡಿಸಿದನೆಲಗೆ | ಇಂದುಮುಖಿ ಬಗೆಬಗೆಯ ಸುಮವ |
ತಂದೆನಿದೊ ಗಂಧ ಕಸ್ತೂರಿಗಳ ಸಹಿತ ಕೊ | ಳ್ಳೆಂದು ಮತ್ತಿಂತೆಂದನಾಗ || ೧೦೫ ||

ತರುಣಿ ಕೇಳೆನ್ನಂಥ ಪುರುಷರಿನ್ನುಂಟೆ ಸರ | ಸಿರುಹಭವ ನಿರ್ಮಿಸಿದ ಜಗದಿ |
ಸುರರ ಪಿರಿಯರ ಮಿಕ್ಕ ನರರು ಪಾಡಲ್ಲೆನಗೆ | ಸರಿ ನಿನಗೆ ತಾನಲ್ಲದಿಲ್ಲ || ೧೦೬ ||

ನಿನ್ನಾಣೆ ಪುಸಿಯದಿರು ಎನ್ನ ಪೋಲುವ ಚೆಲುವ | ರನ್ನು ನೀ ಕಂಡರಿವೆಯೇನೆ |
ನಿನ್ನಂದದಬಲೆಯರು ಎನ್ನನೇ ಬಯಸುವರು | ಎನ್ನಲನಿಲಜನೆಂದನಾಗ || ೧೦೭ ||

**ರಾಗ ಸಾವೇರಿ ರೂಪಕತಾಳ**

ಎಲವೊ ಕೀಚಕ ಕೇಳು | ಚೆಲುವ ನೀನಹುದೆಂದು |
ಒಲಿದು ಬಂದೆನು ನಾನು | ಬಲು ಧೀರನೆಂದು || ೧೦೮ ||

ಉಳಿದ ನಾರಿಯರಂದ | ವಲ್ಲೆನ್ನ ಬಗೆ ಬೇರೆ |
ಇಳೆಯೊಳೆನಗೆ ಸೋಲ | ದವರಿಲ್ಲ ನರರು || ೧೦೯ ||

ಹಲವು ಮಾತೇನು ನಿನ | ಗೆಣೆ ನಾನು ನೋಡರೆ |
ಗಳಿಗೆ ತೋರುವೆನೆನ್ನ | ಲಲನೆಯಂದವನು || ೧೧೦ ||

ಎನಲು ಕೀಚಕನುಬ್ಬಿ | ವನಿತೆ ಬಾರೆಂದು ಭೀ |
ಮನ ಮೈಯ ತಡವರಿಸೆ | ಸ್ತನವಿಲ್ಲದಿರಲು || ೧೧೧ ||

ಮನದಿ ಬೆಚ್ಚುತಲೆಂದ | ನೆಲೆ ನೀರೆಕೋಮಲ |
ತನುವೇಕೆ ಕಲ್ಲಂತಾ | ಯ್ತೆನಲೆಂದ ನಗುತ || ೧೧೨ ||

**ಕಂದ**

ಎಲೆ ಖೂಳನೆ ಕೇಳ್ ಪರಸತಿ |
ಗಳುಪಿದ ಪಾತಕಿಗಳಿಗಮೃತವು ವಿಷಮಕ್ಕುಂ ||
ಬಲುಕರ್ಕಶಮಕ್ಕುಂಕೋ |
ಮಲವೆನುತೆದ್ದೊಡನೆ ತುಡುಕಿದಂ ಮುಂದಲೆಯಂ || ೧೧೩ ||

**ರಾಗ ಶಂಕರಾಭರಣ ಮಟ್ಟೆತಾಳ**

ಮುಂದಲೆಯನು ಪವನತನುಜ ಪಿಡಿಯಲಾತನು |
ನಿಂದು ಚಪಳೆ ಫಡ ಫಡೆನುತ ಕರವ ಪಿಡಿದನು ||
ಮಂದಮತಿಯನೆಲ್ಲಿ ಬಿಡುವೆನೆಂಮ ಭೀಮನು |
ಹೊಂದಿ ಬದಿಯ ಬಡಿದು ಪಿಡಿದನವನ ತುರುಬನು || ೧೧೪ ||

ತುರುಬು ಹಿಡಿಯಲುರುಬಿ ಭಯದೊಳಾ ದುರಾತ್ಮನು |
ತರುಣಿಯಲ್ಲ ಕಪಟವೆಂದರಿದು ಖತಿಯನು ||
ಧರಿಸಿ ಪೊಕ್ಕು ಭೀಮನೊಡನೆ ಧಡ ಧಡೆನುತಲಿ |
ಭರದಿ ಹೊಡೆವುತಿರಲು ಧಪ್ಪ ಧಿಪ್ಪೆನುತ್ತಲಿ || ೧೧೫ ||

ಸರಸಿಜಾಕ್ಷಿ ದ್ರುಪದತನುಜೆ ನಿಂದು ದೂರದಿ |
ಭರದಿ ತಿವಿಗಳನ್ನು ಕೇಳುತಿರಲು ತೋಷದಿ ||
ದುರುಳನಿತ್ತ ಸತ್ತ್ವದಿಂದ ಮರುತಸುತನನು |
ಉರವ ತಿವಿಯೆ ಮಂಡಿಯಿಂದ ತರಹರಿಸಿದನು || ೧೧೬ ||

ಭರಿತರೋಷನಾಗಿ ಭೀಮನೌಡುಗಚ್ಚುತ |
ಉರಿಯನುಗುಳುತೆದ್ದು ಮುಷ್ಟಿಯಿಂದ ಗಜರುತ ||
ದುರುಳ ಕೆಡೆಯೆನುತ್ತ ಭಾರಿ ಬಾಹುಬಲದಲಿ |
ಉರವ ತಿವಿಯೆ ಸಿಡಿಲು ಗಿರಿಗೆ ಬಡಿದ ತೆರದಲಿ || ೧೧೭ ||

**ಭಾಮಿನಿ**

ಕರಹತಿಗೆ ಕೀಚಕನ ತನು ಜ |
ರ್ಝರಿತವಾದುದು ಕರುಳನುಗುಳುತ |
ಧರೆಗುರುಳೆ ಕಂಡನಿಲಸುತ ಮುದುಡಿಸಿದ ಖಳವೆಣನ ||
ಕರೆದು ತರುಣಿಗೆ ತೋರಿಸಲು ಬಂ |

ದಿರದೆ ಬಿಗಿಯಪ್ಪಿದಳು ಕಾಂತನ |
ಹರುಷದಲಿ ಹಿಗ್ಗುತ್ತ ಮುಂಡಾಡಿದಳು ಮುದ್ದಿಸುತ || || ೧೧೮ ||

**ಕಂದ**

ಬಿಗಿಯಪ್ಪಿದ ಸತಿಯಂ ಕಂ |
ಡೊಗುಮಿಗೆಯಾನಂದದಿಂದೆ ನಡೆ ಮನೆಗೆನುತಂ ||
ನಗುತಾ ಭೀಮಂ ತಿರುಗಲ್ |
ಮುಗುದೆಯುಮಾ ಗರಡಿಯ ಕಾವಲವರೊಳೆಂದಳ್ || ೧೧೯ ||

**ರಾಗ ಭೈರವಿ ಝುಂಪೆತಾಳ**

ಚರರು ಲಾಲಿಸಿರೆನ್ನ | ದುರುಳ ಪಿಡಿದೆಳೆಯೆ ಕಂ |
ಡರಿತರೆನ್ನವರುಬಡಿ | ದುರುಳಿಚಿದರವನ || ೧೨೦ ||

ಪೋಗಿ ನೋಡುವುದೆನಲು | ಬೇಗಲವದಿರು ಬಂದು |
ನೀಗಿದುಸಿರಿನ ಖಳನ | ನಾಗಲೀಕ್ಷಿಸುತ || ೧೨೧ ||

ಭರದೊಳಯ್ತಂದವನ | ಕಿರಿಯರೊಳು ಪೇಳೆ ಬಂ |
ದಿರದೆ ನೂರ್ರೈವರುರೆ | ಮರುಗಿ ಬಾಯ್ ಬಿಡುತ || ೧೨೨ ||

ಬಂದು ತಮ್ಮಗ್ರಜನ | ಹೊಂದಿದಸುವಿನ ಶವದೊ |
ಳಂದು ಬಿದ್ದುರುಳಿ ಗೋ | ಳೆಂದೊರಲುತಿರಲು || ೧೨೩ ||

ತರುಣಿ ದೂರದಿ ನಿಂತು | ಹರುಷಿಸಲು ಕಂಡಿವರು |
ಮರಣವಿವಳಿಂದಿವಗೆ | ದೊರಕಿತೆಂದರಿತು || ೧೨೪ ||

**ವಾರ್ಧಕ**

ಇವಳಿಂದ ಮರಣವಾಯ್ತೆಮ್ಮಣ್ಣಗಯ್ಸೆ ನಾ |
ವಿವಳನೀ ಶವದೊಡನೆ ಸುಡುವೆವೆನುತವದಿರಂ |
ದವನೀಶನೊಳ್ ನೇಮಗೊಂಡಧಿಕ ಕೋಪದಿಂದಾಕೆಯಂ ಪಿಡಿದು ತಂದು ||
ಯುವತಿ ನಗುಯೆನುತಲಾ ಖಳವೆಣನಕಾಲ್ದೆಸೆಯೊ
ಳವಳಂಬಿಗಿಸಲರ್ಧರಾತ್ರೆಯೊಳ್ ಕೂಗುತಾ |
ಹವಸಮರ್ಥರಹ ಗಂಧರ್ವರಿರೆ ಕಾವರಿಲ್ಲೆನಲು ಕೇಳಿದ ಭೀಮನೂ || || ೧೨೫ ||

**ರಾಗ ಮಾರವಿ ಏಕತಾಳ**

ಕೇಳುತ ಭೀಮನು ಬಾಲಕಿಯಳಲನು | ಖೂಳರಿಂಗೆ ತುದಿಗಾಲ ಬಂದುದೊ ಎನು |
ತಾಲೋಚಿಸುತಲಿ ಕಾಳಮೂಳರ ಯಮ | ನಾಳಿಗೊಪ್ಪಿಸುವೆನೀ ವೇಳೆಯೊಳೆನುತ || ಬಂದನಾಗ || ೧೧೬ ||

ಬರುತೊಂದು ಮಹಾ ಮರವನು ಕಾಣುತ | ಮುರಿದದ ಕೊಂಡಬ್ಬರಿಸುವ ಮೂರ್ಖರ |
ನೆರವಿಯ ಹೊಯ್ದೆನುತುರವಣಿಸುತಲಾ | ದುರುಳರ ತಂಡವ ಧರೆಗುರುಳಿಸಿದ || ಕೋಪದಿಂದ || ೧೧೭ ||

ಅರರೆ ಗಂಧರ್ವರ ತರುಣಿಯಿವಳ ಬಿಡು | ದುರಕೆ ಬಂದರಿವಳೆರೆಯರು ತಮ್ಮಲಿ |
ಹರಿಯದೆನುತ ಪಾಯ್ವರ ಕಂಡನಿಲಜ | ಮರದಿಂ ಪೊಯ್ದನಿಬರನೊರಗಿಸಿದನು || ಖಾತಿಯಿಂದ || ೧೧೮ ||

**ಭಾಮಿನಿ**

ಮರುತಸುತನೀ ತೆರದಿ ನೂರೈ |
ವರನು ಬಿಡದುರುಳಿಚಿದು ಮಿಣ್ಣನೆ |
ಮರಳಿ ತಾನಯ್ತಂದು ಪೊಕ್ಕನು ಪಾಕಮಂದಿರವ ||
ತರುಣಿಯಿತ್ತಲು ಮಿಂದು ನಗುತು |
ಬ್ಬರದ ಹರುಷದಿ ಬಂದಳೊಯ್ಯನೆ |
ಗುರುಕುಚದ ಭಾರದಲಿ  ಬಡ ನಡು ಬಳುಕೆ ನಲವಿನಲಿ || ೧೧೯ ||

**ರಾಗ ಕೇದಾರಗೌಳ ಅಷ್ಟತಾಳ**

ಲಲನೆಯೀ ತೆರದೊಳು ಬರುತ ಕಂಡಳು ಪಾಕ | ನಿಲಯದಿ ಭೀಮನನು |
ಬಲು ಧೀರ ಗಂಧರ್ವರಿಗೆ ನಮೋ ಎಂದಳು | ತಳಿವಾಗಿಲಲಿ ತೋಷದಿ || ೧೨೦ ||

ತರುಣಿಯೀ ತೆರದಿ ಮಂದಿರಕಯ್ದಲಿತ್ತಲು | ತರಣಿಯಂಬರಕಡರೆ |
ದುರುಳನ ಮರಣವಾರ್ತೆಯು ಗುಜುಗುಜಿಸಿತು | ಪುರದೊಳೆಲ್ಲರ ಬಾಯೊಳು || ೧೨೧ ||

ಧರಣಿಪ ಮತ್ಸ್ಯನೀ ಸುದ್ದಿಯ ಕೇಳುತ್ತ | ಮರುಗುತ್ತ ಮನದಿ ತನ್ನ |
ತರುಣಿಯ ಕರೆದೆಂದನೆಲೆ ನೀರೆ ಪೊರಡಿಸು | ದುರುಳೆ ಸೈರಂಧ್ರಿಯನು || ೧೨೨ ||

ವರನ ಮಾತನು ಕೇಳುತ್ತನುಜಾದಿಗಳಲುತ್ತ | ಕರೆದು ಸೈರಂಧ್ರಿಯನು |
ಅರುಹಿದಳೆಲೆ ಮಹೋತ್ತಮೆ ಕೇಳು ನಿನ್ನೊಳು | ಒರೆಯಲಂಜುವೆವು ನಾವು || ೧೨೩ ||

ಕರವ ಮುಗಿವೆ ನಮ್ಮ ಹರಣವನುಳುಹಿದು | ತೆರಳು ನಿನ್ನಯ ಠಾವಿಗೆ |
ಸರಸಿಜಾಂಬಕಿ ನಿಲ್ಲದಿರು ನಡೆಯೆನೆ ಕೇಳಿ | ಮರಳಿ ದ್ರೌಪದಿ ಪೇಳ್ದಳು || ೧೨೪ ||

**ರಾಗ ಕೇದಾರಗೌಳ ಝಂಪೆತಾಳ**

ಏಕೆನ್ನ ಜರೆವೆ ದೇವಿ | ನಿಮ್ಮನುಜ | ತಾ ಖೂಳನಧಮಜೀವಿ |
ಕಾಕುತನವನು ಮಾಡಿದ | ಅದರಿಂದ | ನಾಕದವರನು ಕೂಡಿದ || ೧೨೫ ||

ಒರೆದೆ ನಾ ಮೊದಲೆ ನಿಮಗೆ | ಎನ್ನಕಾಂ | ತರು ಧೀರರೆನುತಲವಗೆ |
ಅರುಹಿ ಕಂಡರು ತನ್ನಲಿ | ಪಾತಕವು | ಹೊರದು ಮುನಿಯೆವು ನಿಮ್ಮಲಿ || ೧೩೬ ||

ಎನಲೆಂದಳೆಲಗೆ ನಿನ್ನ | ನೋಡಿದರೆ | ಮನಕೆ ಭಯವಹುದು ಮುನ್ನ |
ಮನೆಯೊಳಿರಬೇಡ ನೀನು | ಸಾಕಿನಿತು | ವನಿತೆ ನಡೆ ಪೋಗು ನೀನು || ೧೩೭ ||

ಅವನೀಶನರಸಿ ಕೇಳು | ಹದಿಮೂರು | ದಿವಸವಿಹೆವೀ ಎಡೆಯೊಳು |
ತವಕದಲಿ ನಮ್ಮ ನೀವು | ನೂಕಿಸಿದ | ರವಧಿಯೊಳು ಪೋಗೆವಾವು || ೧೩೮ ||

ಮುಂದೆ ನೀವೇ ನನ್ನನು | ಇರು ಎಂದ | ಡೊಂದು ದಿನವಿರೆನು ನಾನು |
ಚಂದವಹುದಿನ್ನು ನಿಮಗೆ | ಬೆದರದಿರಿ | ಎಂದು ತೆರಳಿದಳು ಮನೆಗೆ ||೧೩೯||

**ಭಾಮಿನಿ**

ಎಲೆ ಧರಾಧಿಪ ಕೇಳು ಕೀಚಕ |
ನಳಿದನೀ ಪರಿಯಿಂದ ಭೀಮನ |
ಕಲಹದಲಿ ಸಂಶಯ ನಿವೃತ್ತಿಯದಾಯ್ತೆ ನಿನಗೆನಲು ||
ತಿಳಿದೆನೀ ಪರಿಯಂತವೆಲೆ ಮುನಿ |
ತಿಲಕ ಮುಂದಣ ಕಥೆಯ ಪೇಳಿದು |
ಸಲಹು ತನ್ನನೆನುತ್ತ ಪದಕೆರಗಿದನು ಧರಣೀಶ || ೧೪೦ ||

***ಮೊದಲನೆಯ ಸಂಧಿ ಕೀಚಕವಧೆ ಮುಗಿದುದು***

*** * ***

**ಎರಡನೆಯ ಸಂಧಿ : ಉತ್ತರಗೋಗ್ರಹಣ**

**ವಾರ್ಧಕ**

ಧರಣೀಶ ಜನಮೇಜಯಕ್ಷಿತಿಪ ಲಾಲಿಸೀ |
ಪರಿಯಿಂದಲವರಿರ್ದರಿತ್ತಲುಂ ಹಸ್ತಿನಾ |
ಪುರವರದೊಳಂ ಕೌರವಂ ಪಾಂಡವರನರಸಿ ತಿಳಿದು ತನಗೊರೆವುದೆಂದು ||
ಚರರನಟ್ಟಿದಲವದಿರುಂ ಧರೆಯನುಂ ತೊಳಲಿ |
ಅರಿಯದಾ ಕೌಂತೇಯರಿರವನಯ್ತಂದು ತ |
ಮ್ಮರಸನೊಡ್ಡೋಲಗಂಗೊಟ್ಟೊಪ್ಪಿರಲ್ ಕಂಡು ಕಾಲ್ಗೆರಗುತಿಂತೆಂದರು || ೧೪೧ ||

**ರಾಗ ಕಲ್ಯಾಣಿ ಆದಿತಾಳ**

ಕುರುಭೂಪ ಲಾಲಿಸಯ್ಯ | ನಾವೆಂಬುದಿ | ನ್ನರಿಕೆಯಾಗಿರಲಿ ಜೀಯ |
ಧರಣಿಯೊಳಿಲ್ಲ ಪಾಂಡವರು | ಹುಸಿ ನುಡಿಯ ನಾ |
ವರುಹೆವು ತಿರೆಯೆಲ್ಲ | ತಿರುಗಿ ನೋಡಿದೆವಯ್ಯ || ಕುರುಭೂಪ || || ೧೪೧ ||

ಸುರಲೋಕದೊಳಗಿಹರೊ | ಮತ್ತಲ್ಲದೆ | ಉರಗನೂರೊಳಗಿಹರೊ |
ಅರಿಯೆವು ನಾವಿನ್ನಂ | ತಿರಲರಿಗಳ ಮಾತು |
ಧೊರೆಯೆ ಕೇಳೊಂದ್ಹೊಸ | ಪರಿ ವಾರ್ತೆ ಕೇಳ್ದೆವು || ಕುರುಭೂಪ || || ೧೪೨ ||

ಗಂಧರ್ವವಧುವೋರ್ವಳು | ಮತ್ಸ್ಯನ ಸತಿ | ಪೊಂದಿ ಸೇವಿಸುತಿರಲು |
ಬಂದು ಕೀಚಕ ಪಿಡಿ | ದೆಳೆಯವಳೆರೆಯರು |
ಕೊಂದರಾತನನು ತ | ಮ್ಮಂದಿರು ಸಹವಾಗಿ || ಕುರುಭೂಪ || || ೧೪೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧರಣಿಪತಿ ಚರರೆಂದುದನು ಕೇ | ಳ್ದರಿತನಿದು ಪಾಂಡವರ ವೇಷದ |
ಪರಿಯೆನುತ ಕರ್ಣಾದಿ ಸುಭಟರ | ಕರೆದುಸಿರ್ದ || ೧೪೫ ||

ಧುರಸುಭಾಗ್ಯರು ಕೇಳಿ ಪಾಂಡವ | ರಿರುವರಾ ಠಾವಿನಲಿ ಸೇವಿಪ |
ತರುಣಿ ದ್ರೌಪದಿ ಕೀಚಕನ ಶಿರ | ವರಿದ ಭೀಮ || ೧೪೬ ||

ನುಡಿಯಿದಕೊ ಹುಸಿಯಲ್ಲ ವೈರಿಗ | ಳಡಗಿಹರು ನಾವಿನ್ನು ಕುಳಿತಿರೆ |
ಕೆಡುವುದೆಮ್ಮಯ ಭಾಷೆ ಸೈನ್ಯವು | ನಡೆಯಲಿನ್ನು || ೧೪೭ ||

ಭರದಿ ನಡೆದಾ ಮತ್ಸ್ಯಭೂಪನ | ತುರುಗಳನು ಸೆರೆವಿಡಿಯಲಾಳ್ದನ |
ಹರಿಬಕೋಸುಗ ತೆರಳಿ ನಮ್ಮೊಳು | ಧುರಕೆ ಬಹರು || ೧೪೮ ||

ವರುಷದವಧಿಯೊಳವರನೀಕ್ಷಿಸಿ | ಮರಳಿ ವನಕಟ್ಟುವೆನು ಹದಿಮೂರ್ |
ವರುಷವೆಂದೆನೆ ಭೂಪಗಹುದೆಂ | ದರು ಸುಭಟರು || ೧೪೯ ||

**ವಾರ್ಧಕ**

ಧರಣಿಪತಿಯೆಂದುದಂ ಕೇಳ್ದಾ ಸುಶರ್ಮನೆಂ |
ಬುರು ಪರಾಕ್ರಮಿಯೆಂದನೆಲೆ ಭೂಪ ಕೇಳ್ ಭೀಷ್ಮ |
ಗುರು ಕೃಪಾದ್ಯರ ಮತವನರಿದು ಎಸಗಲು ಕಾರ್ಯವಹುದೆನಲ್ ಕೇಳುತಂದು ||
ಕುರುರಾಯನವರ್ಗಳಿಂಗೆರಗುತೊಡಬಡಿಸಿ ಮ |
ತ್ತಿರದೆ ಭೀಷ್ಮಾದಿಗಳನೊಡಗೊಂಡು ಸೈನ್ಯಮಂ |
ಬರಿಸಿ ಏಕಾದಶಕ್ಷೌಹಿಣಿಯನುಂ ನೆರಹಿ ಪೊರವಂಟನಿಭಪುರವನುಂ || ೧೫೦ ||

**ರಾಗ ಮಾರವಿ ಏಕತಾಳ**

ಕುರುಪತಿಯಿಂತೀ | ಪರಿಯಲಿ ಗಜರಥ |
ತುರಗ ಪದಾತಿಯು | ಭರದಿ ನಡೆಯುತಿರೆ |
ಧರಣಿಯದುರಿತಂ | ಬರ ಬಿರಿಯಿತು ದಿ |
ಕ್ಕರಿಗಳೊದರಿದವು | ಭರಿತ ಭರದಲಿ || ನಡೆದರಾಗ || ೨೫೦ ||

ಪರಶು ಭುಸುಂಡಿ ತೋ | ಮರವಸಿ ಕುಂತ ಮು |
ದ್ಗರ ಪಟ್ಟಿಸ ಗದೆ | ಪರಿಘವು ಧನು ಶರ |
ಉರುತರಾಯುಧಗಳ | ಧರಿಸಿಯಾರ್ಭಟಿಸುತ |
ಮೊರೆವುತ ಗಜರಿ ಬೊ | ಬ್ಬಿರಿವುತ ಭಟರು || ಬಂದರಾಗ || ೨೫೧ ||

ಭರದಿಂ ಬಂದಾ | ಧರಣಿಪ ಮತ್ಸ್ಯನ |
ಧರೆಯಂ ಕಾಣುತ | ಕುರುಪತಿ ಸೈನ್ಯವ |
ನೆರಡು ಮಾಡಿ ಬೊ | ಬ್ಬಿರಿದು ಸುಶರ್ಮನ |
ಕರೆದಟ್ಟಿದ ಬಲ | ವೆರಸಿದ ಕ್ಷಣಕೆ || ಏನನೆಂಬೆ || ೨೫೨ ||

ಆಳ್ದನ ನೇಮವ | ತಾಳ್ದತಿ ಗರ್ವವ |
ನಾಲ್ದೆಸೆ ಕಂಪಿಸ | ಲೂಳ್ದು ಕಿಡಿಯ ಖತಿ |
ಯೋಳ್ ದಕ್ಷಿಣ ದೆಸೆ | ಗಾಳ್ ಮರೆಯಲು ಭರ |
ದೋಳ್ದಾಳಿಯಲಿ ಕಾಳಗಕೆನುತಲೆ | ನಡೆದರಾಗ || ೨೫೪ ||

ಕರಿ ಹಯ ರಥ ಪದ | ಚರಸಂಕುಲ ಸಹಿ |
ತುರವಣಿಸುತಲ | ಬ್ಬರಿಸಿ ವಿರಾಟನ |
ತುರುಗಳ ಸೆರೆವಿಡಿ | ದಿರದೆ ಗೋಪಾಲರ |
ನೆರವಿಯ ಸದೆಬಡೆ | ದುರುಳಿಚಿ ಧರೆಗೆ | ಕೋಪದಿಂದ || ೨೫೫ ||

**ಭಾಮಿನಿ**

ಅರಸ ಕೇಳಿಂತಾ ಸುಶರ್ಮನು |
ಸುರಭಿ ಗೋವ್ಗಳ ಸೆರೆವಿಡಿಯೆ ಕಂ |
ಡರಿತು ಕಂಗೆಡುವಧಟ ಗೋಪಾಲಕರನೀಕ್ಷಿಸುತ ||
ನೊರಜುಗಳಿಗಂಜುವುದೆ ಗಿರಿ ಫಡ |
ಮರುಳೆ ಹೋಗೆನುತಾ ಸುಶರ್ಮನು |
ಶಿರವನಂಬರಕಡರಲೆಚ್ಚನು ಗೋಪಸಂಕುಲವ || ೨೫೬ ||

**ಕಂದ**

ಸರಳಿರಿತಕೆ ನಿಲಲಾರದೆ |
ತುರುಗಾವಲೊಳಿಹ ಸುಭಟರು ಬೆದರುತ ಭರದಿಂ ||
ಧರಣಿಪ ಮತ್ಸ್ಯನ ಬಳಿಗಂ |
ಪರಿತದಾಂಗ ನೃಪತಿಗೆಂದರು ಭೀತಿಯೊಳಂ || ೧೫೭ ||

**ರಾಗ ಮುಖಾರಿ ಆದಿತಾಳ**

ಧರಣೀಶ ಲಾಲಿಸೆಮ್ಮ ಮಾತ | ಲೋಕಪ್ರಖ್ಯಾತ || ಧರಣೀಶ || ಪಲ್ಲವಿ ||

ಅರುಹಲಂಜುವೆವು ಕೇಳಯ್ಯ | ಬಂದಿದೆ ಸಪ್ತ | ಶರಧಿಯಂದದಿ ಸೈನ್ಯ ಜೀಯ |
ಒರೆಯಲಿನ್ನೇನೆಮ್ಮ | ನುರುಳಿಚಿ ಭರದಿಂ | ದರುವತ್ತು ಸಾವಿರ | ತುರುಗಳನವದಿರು |
ಸೆರೆವಿಡಿದೊಯ್ದರು | ಧೊರೆ ಯಾರೆಂಬುದ | ನರಿಯೆವುನಾವೆಂ | ದೆರಗಿದರಂದು || ಧರಣೀಶ || ೧೫೮ ||

**ರಾಗ ಭೈರವಿ ಝಂಪೆತಾಳ**

ಎಂದ ಮಾತನು ಕೇಳು | ತಂದು ಮನದಿ ವಿರಾಟ |
ನೊಂದು ಕೀಚಕನಳಿದ | ನೆಂದು ಕೆಲ ಬಲನ || ೧೫೯ ||

ಪರಿಕಿಸಲು ಕಂಡು ಬೊ | ಬ್ಬಿರಿದು ಭಟರೆಂದರೆಲೆ |
ಧರಣೀಶ ಕಳುಹೆಮ್ಮ | ಧುರಕೆ ಬೇಗೆನುತ || ೧೬೦ ||

ರಾವುತರು ಜೋದರರು | ಸಾವಂತಮನ್ನೆಯರು |
ತೀವಿದುರು ನಿಸ್ಸಾಳ | ರಾವದಿಂ ಭರದಿ || ೧೬೧ ||

ಧುರಕೆ ನಡೆಯಲು ಯುಧಿ | ಷ್ಠಿರನಿತ್ತಲನುಜರನು |
ಕರೆದು ಪೇಳಿದನೋರ್ವರರಿಯದಂದದಲಿ || ೧೬೨ ||

**ವಾರ್ಧಕ**

ಅನುಜರಾಲಿಸಿರೆಮ್ಮನರಿಯಲೋಸುಗವೆ ಕುರು |
ಜನಪನಯ್ತಂದವಂ ನಾವಿನ್ನು ಸುಮ್ಮನಿಹು |
ದನುಚಿತಂ ನಾಂ ಪೋಪೆನೊಡನೆ ನೀ ಬಂದಿರುವುದೆಂದನಿಲಜಗೆ ಸೂಚಿಸಿ ||
ವಿನಯದಿಂ ತಾ ಭೂಪನೊಡನೆ ರಥವೇರಿ ಬರ |
ಲನಿತರೊಳು ಕದನಕುರವಣಿಸಿ ತಾ ಮತ್ಸ್ಯನೃಪ |
ಕನಲಿ ಕೋಲ್ಗರೆವುತ್ತಯ್ತರೆ ಸುಶರ್ಮಂ ಕಾಣುತಲೆ ತಿರುಗಿದಂ ಖತಿಯೊಳು || ೧೬೩ ||

**ರಾಗ ಶಂಕರಾಭರಣ ಮಟ್ಟೆತಾಳ**

ತಿರುಗುತಾ ಸುಶರ್ಮ ಕೋಪದಲಿ ಶರೌಘವ |
ಸುರಿದು ಶಿರವ ತರಿದನಂದು ಪರಬಲೌಘವ ||
ಧರಣಿಪತಿ ವಿರಾಟನವದಿರುಬ್ಬಿ ಖತಿಯೊಳು |
ಧುರಕೆ ನಿಂದರರಿವರೂಥಿನಿಯೊಳು ಬಲದೊಳು || ೧೮೪ ||

ಕುರುನೃಪಾಲನಾಳ್ಗಳಿರದೆ ನಿಖಿಳ ಶಸ್ತ್ರದಿ |
ತರಿತರಾರ್ದು ಪೊಕ್ಕರಾ ವಿರಾಟಸೈನ್ಯದಿ |
ಮುರಿದು ಮತ್ಸ್ಯನವರುಕೆದರೆ ಕೆಂಡ ಮೈಯಲಿ |
ಹರಿವುದನ್ನು ಕಂಡು ತನ್ನ ರಥವ ಖತಿಯಲಿ || ೧೮೫ ||

ನೂಕಿ ಮುಂದೆ ನಡೆಸಿ ವೈರಿಭಟರ ಶಿರವನು |
ನಾಕಕಡರಲೆಸೆವುತಿರ್ದನತಿ ಬಲಾಢ್ಯನು |
ನಾಕು ಮೈಯೊಳೌಕುವಾನೆ ಕುದುರೆ ತೇರ್ಗಳ |
ಸೋಕಗೊಡದೆ ತರಿದು ಪೊರಡಿಸಿದನುಸಿರ್ಗಳ || ೧೮೬ ||

ಧುರಸುಭಾಗ್ಯರೆಸುಗೆಗಾನಲಾರದವದಿರು |
ಸುರಿವ ಕರುಳನೊತ್ತಿ ಪಿಡಿದು ಮರಳಿ ಪೊಯ್ದರು |
ಮುರಿದು ಬರುವ ಬಲವ ಕಾಣುತಾ ಸುಶರ್ಮನು |
ಕರದೊಳಭಯ ಕೊಡುತೆ ತಾನೆ ಧುರಕೆ ನಿಂತನು || ೧೮೭ ||

ಫಡ ವಿರಾಟ ಭಳಿರೆ ಧನುವ ಪಿಡಿಯಲರಿತಿಹೆ |
ಪಡೆ ಬೆದರ್ದರುಬ್ಬಬೇಡ ನಿಲ್ಲುತಾನಿಹೆ |
ಕಡಿವೆ ನಿನ್ನ ಮೊದಲು ಮತ್ತೆ ಮುರಿವೆ ಬಲವನು |
ಮೃಡನು ಬಂದು ಬೇಡಿಕೊಳಲು ಬಿಡೆನು ತುರುವನು || ೧೮೮ ||

ಎನುತಲಾರ್ದು ಬಾಣವೃಷ್ಟಿಗರೆಯೆ ಕಾಣುತ |
ಜನಪ ವಿಧವಿಧಸ್ತ್ರದಿಂದಲೆಚ್ಚ ಗಜರುತ |
ಕನಲುತಾ ಸುಶರ್ಮ ಮತ್ಸ್ಯನೇರ್ದ ರಥವನು |
ಕಿನಿಸಿನಿಂದ ತರಿದು ಕಡಿದ ಕರದ ಧನುವನು || ೧೮೯ ||

**ಭಾಮಿನಿ**

ಮುರಿಯೆ ಧನು ಖಡ್ಗಾದಿ ಶಸ್ತ್ರದೊ |
ಳುರುಬುವರಸನ ಕಂಡು ಕದನದಿ |
ಜರಿದನಿವನಿನ್ನೇಕೆ ತಡವೆನುತಾ ಸುಶರ್ಮಕನು ||
ಉರವಣಿಸಿ ಪಿಡಿದೆಂದ ನೆಲವೋ |
ತಿರುಕುಳನೆ ನಿನಗೇಕೆ ಕೀಚಕ |
ಮುರಿದ ಮೇಲ್ ಧುರವೆಂಬ ನುಡಿಕೇಳಿಸಿತು ಧರ್ಮಜಗೆ || ೧೯೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲೆ ಮರುತಸುತ ಕೇಳು ವೈರಿಗ | ಳೊಳಗೆ ಸಿಲುಕಿಹ ಮತ್ಸ್ಯನೃಪತ |
ಧ್ಬಲವನಾಯಕವಾಯ್ತು ಬಿಡಿಸಾ | ಬಲುಭುಜನನು || ೧೭೧ ||

ಎನೆ ಹಸಾದವೆನುತ್ತಲಾಶುಗ | ತನುಜನಾಲದ ಮರವ ಕಂಡೆಂ |
ದನು ಯುಧಿಷ್ಠೀರ ಕೇಳು ಮತ್ತೀ | ಬಿನುಗರನ್ನು || ೧೭೨ ||

ಈ ಮಹಾಮರದಿಂದ ಬಡಿವೆನು | ಸಾಮಜಾಶ್ವ ವರೂಥಗಳು ಸಹಿ |
ತೀ ಮದಾಂಧರನೆನಲುಸಿರ್ದನು | ಭೂಮಿಪಾಲ || ೧೭೩ ||

ಮರನ ಮುರಿವ ಬಲಾಢ್ಯ ಭೀಮನೆ | ಹೊರತು ಬೇರಿಲ್ಲೋರ್ವನೆಂಬುದ |
ನರಿತಿಹರು ಬಹಿರಂಗವಹುದೀ | ತರುವಿನಿಂದ || ೧೭೪ ||

**ರಾಗ ಶಂಕರಾಭರಣ ಮಟ್ಟೆತಾಳ**

ಪೇಳ್ದ ಮಾತನು | ಕೇಳ್ದು ಭೀಮನು ||
ತಾಳ್ದು ಖತಿಯ ಮುಂದೆ ನಡೆದು | ಸೀಳ್ದು ಗಜವನು || ೧೭೫ ||

ಬಡಿದು ರಥವನು | ಕೆಡೆದು ಹಯವನು ||
ಕಡುಗಿ ತಡೆವ ಭಟರನೊದೆದು | ಘುಡುಘುಡಿಸಿದನು || ೧೭೬ ||

ಫಡ ಫಡೆನುತಲಿ | ನಡೆದು ಭರದಲಿ ||
ತಡೆದು ತಾ ಸುಶರ್ಮಕನನು | ಬಿಡಿಸಿ ನೃಪನನು || ೧೭೭ ||

ತುಡುಕಿ ಪಗೆಯನು | ಪಿಡಿದು ತಂದನು ||
ಪೊಡವಿಪತಿ ವಿರಾಟ ತೋಷ | ಬಡುತಲೆಂದನು || ೧೭೮ ||

**ಭಾಮಿನಿ**

ಭಳಿರೆ ವಲಲನೆ ಭಾಪು ವೀರನೆ |
ಸಲಹಿದ್ಯೆ ತನ್ನಸುವನೆನುತಾ |
ಬಲುಭುಜನು ಮನ್ನಿಸುತಲವ ಸಹಿತಾ ಸುಶರ್ಮಕನ ||
ಎಳೆದು ತರೆ ನಿಜರಥಕೆ ಕಂಕನು |
ತಿಳುಪಿ ನೀತಿಯನವನ ಬಿಡಿಸಲು |
ಬಳಿಕಲಿತ್ತಲು ಮತ್ಸ್ಯ ತಿರುಗಿದ ತುರುವ ಮರಳಿಚುತ || ೧೭೯ ||

ಒಡೆಯನನು ಕಾಣುತ್ತ ಗೋವುಗ | ಳೊಡನೆ ತೋಷಂಬಡೆದು ಪಾದದಿ |
ಪೊಡವಿಯನು ಕೆದರುತ್ತ ಹೂಂಕರಿಸುತ್ತ ಕುಣಿಕುಣಿದು |

ನಡೆವುತಿರೆ ಕೆಂಧೂಳ್ಗಳಂಬರ | ಕಡರೆ ಮತ್ಸ್ಯನು ನಗುತ ತನ್ನಯ |
ಪಡೆವೆರಸುತಯ್ತಂದನೊದರುವ ವಾದ್ಯ ಘೋಷದಲಿ || ೧೮೦ ||

**ವಾರ್ಧಕ**

ನಿಜವನರಿಯಿಸದಾ ದಿನಕೆ ಪಾಂಡುನಂದನರ್ |
ವಿಜಯಿಗಳು ತಾವಾದರಿತ್ತಲು ಸುಶರ್ಮಕಂ |
ಗಜಬಜಿಸುತತ್ತಲುಂ ತಿರುಗಿ ಪಾಳೆಯದೊಡನೆ ಪೊಕ್ಕನಾ ನೃಪಬಲವನು ||
ಗಜರುತಾ ಕೌರವಂ ಕೋಪಿಸಲ್ ಬೆದರುತಂ |
ಬುಜಸಖನು ತಾನಪರಜಲಧಿಗಿಳಿದಿರಲು ಬಲು |
ಭುಜ ಪಾರ್ಥನನುವರಂ ತನಗೇಕೆ ಭಯಮೆನುತಡರ್ದನುದಯಾಚಲವನು || ೧೮೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತರಣಿಯುದಯದೊಳೆದ್ದು ಕೌರವ | ಧರಣಿಪತಿ ಕೋಪದಲಿ ಗಂಗಾ |
ತರಳ ಗುರು ಕರ್ಣಾದಿ ಸುಭಟರ | ಕರೆದುಸಿರ್ದ || ೧೮೨ ||

ಕೇಳಿ ಭಟರು ವಿರಾಟ ನಮ್ಮಯ | ಮೇಲೆ ಬಂದನು ಪೂತು ಮಝು ಬಿ |
ಲ್ಲಾಳಹನು ತಪ್ಪಲ್ಲ ನೀವಿ | ನ್ನೇಳಿ ಭರದಿ || ೧೮೩ ||

ಉತ್ತರದ ದಿಶೆಯೊಳಗೆ ತುರುಗಳ | ಮೊತ್ತವನು ಸೆರೆವಿಡಿದು ತಹುದೆನೆ |
ಪತ್ತಿಹಯಸಂಕುಲದಿ ನಡೆದರು | ಮತ್ತೆ ಭಟರು || ೧೮೪ ||

**ರಾಗ ಭೈರವಿ ತ್ರಿವುಡೆತಾಳ**

ಬರುತ ಕರ್ಣಾದ್ಯಖಿಳ ಸುಭಟರು | ಧರಣಿಪಾಲ ವಿರಾಟಭೂಪನ |
ತುರುಗಳನು ಸೆರೆವಿಡಿಯೆ ಕಾಣುತ | ತರುಬಿದರು ಗೋಪಾಲಕರು ಬಿಡು |
ಸರಳಗರೆವುದ ಕಂಡು ಭೀಷ್ಮಾ | ದ್ಯುರು ಭಟರು ತದ್ಗೋಪನೆರವಿಯ |
ಶಿರವನಂಬರ ಕಡರಲೆಸೆವುತ | ಬರಲು ತೆಗೆದೋಡಿದರು ಗೋವಳ |
ರೇನನೆಂಬೆ | ನಾನಿ | ನ್ನೇನನೆಂಬೆ || ೧೮೫ ||

ತುರುಗಳನು ಬಿಟ್ಟೋಡುವವದಿರ | ಕುರುಪತಿಯ ಭಟರೀಕ್ಷಿಸುತ ಮ |
ತ್ತುರವಣಿಸಿ ಗೋಪಾಲನೋರ್ವನ | ಭರದಿ ಪಿಡಿದತಿ ರೋಷದಿಂದಲಿ |
ಬರೆದು ಸುಣ್ಣವನವನ ಮೂಗಿಗೆ | ಕರೆದು ಪೇಳಿದರೆಲವೊ ನಿಮ್ಮಯ |
ದೊರೆಯ ಕದನಕೆ ಕರೆದು ತಾ  ಹೋ | ಗಿರದೆಯೆನುತಟ್ಟಿದರು ಸಾಹಸ |
ವೇನನೆಂಬೆ | ನಾನಿ | ನ್ನೇನನೆಂಬೆ  || ೧೮೬ ||

**ಭಾಮಿನಿ**

ಉಳಿದೆನಿಂದಿಗೆನುತ್ತಲಾ ಗೋ |
ವಳನು ನಡುಗುತ್ತಳುತ ಮೈಯಿಂ |
ದಿಳಿವ ರಕುತವ ಬಳಿವುತಯ್ದಿದನೊಡೆಯನಿದ್ದೆಡೆಗೆ ||
ಬಳಿಕಲಿತ್ತಲು ಭದ್ರಪೀಠದಿ |
ಗೆಲವಿನಲಿ ಗಣಿಕಾಸಮೂಹದ |
ಬಳಸಿನಲಿ ಮೆರೆದಿರಲು ಕಂಡನು ಗೋಪನುತ್ತರನ || || ೧೮೭ ||

**ಕಂದ**

ಕಂಡಾ ಧರಣಿಪಸುತಗಂ |
ಮಂಡೆಯನುಂ ಮಣಿಯಲವನ ಮುಖದಂಗವನುಂ ||
ಕಂಡುತ್ತರನಾ ಸತಿಯರ |
ತಂಡವನೀಕ್ಷಿಸುತಲೆಂದನಾ ಗೋಪನೊಳಂ || ೧೮೮ ||

**ರಾಗ ಕಾಂಭೋಜಿ ಝಂಪೆತಾಳ**

ಎಲವೊ ಡಗೆಯಿಂದೇಕೆ ಬಂದೆ ಮೂಗಿನ ಮೇಲೆ | ಬಿಳುಪಾಗಿ ತೋರುವುದಿದೇನು ||
ಕಲಹದಲಿ ನಿನ್ನೆ ಮತ್ತಿತ ಗೆಲಿದುದೇನಾಯ್ತು | ತಿಳುಪಂಜಬೇಡೆನಲುಸಿರ್ದ || ೧೮೯ ||

ಜೀಯ ಬಂದಿದೆ ಕೌರವೇಶ್ವರನ ಸೈನ್ಯ ಸಮು | ದಾಯವದು ಬಡಗು ದಿಕ್ಕಿನಲಿ |
ನೋಯಿಸಿದರೆಮ್ಮ ತುರುಗಳನು ಕೋಳ್ವಿಡಿದರವ | ರಾಯುಧವ ನೋಡಲರಿದೆಮಗೆ || ೧೯೦ ||

ಎತ್ತ ನೋಡಿದರು ಗಜ ಹಯ ರಥ ಪದಾತಿಗಳ | ಮೊತ್ತವಲ್ಲದೆ ಬೇರೆ ಕಾಣೆ |
ಬಿತ್ತರಿಸಲಿನ್ನೇನು ಕರೆ ದೊರೆಯ ಕದನಕೆನು | ತಿತ್ತ ಕಳುಹಿದರೆನ್ನನುಳುಹಿ || ೧೯೧ ||

ಬಲವೆನಿತು ಬಂದಡದು ನಿಮಗೆ ದೊಡ್ಡಿತೆ ನಿನ್ನೆ | ಕಲಹದಲಿ ಮುರಿದೋಡಿದವರು |
ನಿಲುವುದರಿದಿನ್ನೇಕೆ ತಳುವ ಮಾಡದೆ ಏಳು | ಬಲ ಸಹಿತಲನುವರಕೆ ಭರದಿ || ೧೯೨ ||

**ಕಂದ**

ಎನಲುಬ್ಬುತಲುತ್ತರನುಂ |
ಮನದೊಳು ತಾಂ ಧೀರನೆಂಬಹಂಕೃತಿಯಿದಂ ||
ಕೊನೆಮೀಸೆಯನುಂ ತಿರುಹುತೆ |
ವನಿತೆಯರಂ ನೋಡಿ ನಗುತಲಿಂತೆಂದನವಂ || ೧೯೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಕೌರವ ಪಾಂಡುಸುತರನು | ಹಳುವಕಟ್ಟಿದೆನೆಂಬ ಹಮ್ಮಿಲಿ |
ಕಲಹಕಂಗಯ್ಸಿದನು ತನ್ನಲಿ | ಗೆಲುವೆನೆಂದು || ೧೯೪ ||

ಬಡನೃಪಾಲರ ಬಡಿದು ಕೆಡಹಿದ | ಕಡುಹನೆನ್ನಲಿ ತೋರಬಂದನು |
ಕಡೆಯ ಮಾತೇನಿನ್ನು ಕೆಟ್ಟನು | ಪಡೆಯು ಸಹಿತ || ೧೯೫ ||

ತುರುವ ಸೆರೆವಿಡಿದಧಮನನು ಹೊ | ಯ್ದೊರಸಿ ಮರಳಿಚಿ ಗೋವುಗಳನಿಭ |
ಪುರಕೆ ಧಾಳಿಯನಿಡುವೆ ಕೊಂಬೆನು | ಧರೆಯನವನ || ೧೯೬ ||

ಮರುಳರೈ ಕೌರವರು ತನ್ನಯ | ಪರಿಯನರಿಯದೆ ಕೆಣಕಿದರು ಬಲ |
ವೆರಸಿ ಮರಣವು ದೊರಕಿತಾ ನರ | ಕುರಿಗಳಿಂಗೆ || ೧೯೭ ||

ಕಾದುವೆನು ಯಾರೊಡನೆ ಯೌವನ | ಮಾದವರು ಕುಲವಿಲ್ಲದವದಿರು |
ಭೂದಿವಿಜರಲ್ಲದೆ ಪರಾಕ್ರಮಿ | ಯಾದ ಭಟರ ||೧೯೮||

ಕಾಣೆನಾತನ ಬಲದೊಳಗೆ ಮ | ತ್ತೇನು ಧೈರ್ಯದಿ ಬಂದನೆನುತಲಿ |
ಮಾನಿನಿಯರನು ನೋಡುತೆಂದಸು | ಮ್ಮಾನದಿಂದ ||೧೯೯||

**ರಾಗ ಕಾಪಿ ಅಷ್ಟತಾಳ**

ಕುರುರಾಯ ಮರುಳಾದ ಸಿದ್ಧ | ತನ್ನ | ಶಿರವನೆನ್ನಂಬಿಗೆ ಮಾರಿದ ಬದ್ಧ || ಕುರುರಾಯ ||ಪಲ್ಲವಿ||

ದೊರೆಗಳ ನಡತೆ ಈ ಪರಿಯೆ | ಬಂದು | ತುರುಗಳ ಪಿಡಿವುದು ಭಟರಿಗೆ ಸರಿಯೆ |
ದುರುಳತನವನು ಮಾಡಿದನು | ಇನ್ನು | ತರಿದು ಹಾಯ್ಕದೆ ಪೋಗಲೀವೆನೆ ನಾನು || ಕುರುರಾಯ || ೨೦೦ ||

ತೋಡುವೆನವನ ಕರುಳನು | ಇನ್ನು | ನೋಡಬಹುದು ಎನ್ನುತಾ ಸೂಳೆಯರನು |
ನೋಡುತುತ್ತರನು ಇಂತೆಂದ | ಬೇಕು | ಬೇಡೆಂಬರಿಲ್ಲದೆ ನೆಣಗೊಬ್ಬಿನಿಂದ || ಕುರುರಾಯ || ೨೦೧ ||

ಫಲವೇನು ಬಾಯೊಳಾಡಿದರೆ | ನಿನ್ನೆ | ಕಲಹದಿ ಸಾರಥಿ ಮಡಿದನಲ್ಲದಿರೆ ||
ಹುಲು ನೃಪಾಲರಿಗಂಜೆ ನಾನು | ತನ್ನ | ಬಲುಮೆಗೆ ತಕ್ಕ ಸೂತನ ಕಾಣೆನಿನ್ನು || ಕುರುರಾಯ || ೨೦೨ ||

ಸೂತನ ಶಿವ ಕೊಟ್ಟರಿಂದು | ವೈರಿ | ವ್ರಾತವ ಗೋಳುಗುಟ್ಟಿಸುವೆ ತಾನೆಂದು |
ಜಾತಿಪೆಣ್ಣುಗಳನೀಕ್ಷಿಸುತ | ಭೂ | ನಾಥನಣುಗ ಖಡ್ಗವನು ಝಳಪಿಸುತ || ಕುರುರಾಯ || ೨೦೩ ||

**ಕಂದ**

ಎಂದಾ ಕುವರಂ ಬಾಯಿಗೆ |
ಬಂದಂದದಿ ಗಳಹುತಿಹುದನುಂ ಕಲಿಪಾರ್ಥಂ ||
ನಿಂದಾಲಿಸುತಂ ನಸುನಗೆ |
ಯಿಂದಾ ದ್ರೌಪದಿಯನಯ್ದೆ ಕರೆದಿಂತೆಂದಂ || ೨೦೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಡದಿ ಕೇಳೆಮ್ಮುವನು ತಿಳಿಯಲು | ಪಡೆವರಸಿ ಬಂದಿಹನು ಕೌರವ |
ನಡುಗಲೇಕವಗಿನ್ನು ಸರಿಯಿತು | ನುಡಿದ ವರುಷ || ೩೦೫ ||

ಧುರಕೆ ತಾನಯ್ದುವೆನು ನೀನು | ತ್ತರೆಯೊಡನೆ ಪೇಳೀ ಬೃಹನ್ನಳೆ |
ನರನ ಸಾರಥಿಯೆಂದು ತನ್ನನು | ಕರೆಸು ಬೇಗ || ೩೦೬ ||

ಎನಲು ದ್ರುಪದಜೆ ಕೇಳ್ದು ಮತ್ಸ್ಯನ | ತನುಜೆಗುಸಿರಿದಳೀ ಬೃಹನ್ನಳೆ |
ಘನ ಪರಾಕ್ರಮಿ ನರನ ಸಾರಥಿ | ಯೆನಲಿಕಂದು || ೩೦೭ ||

ಕೇಳಿ ಹರುಷಿತೆಯಾಗಿ ಮತ್ತಾ | ಬಾಲೆ ತಾನಯ್ತಂದಳಗ್ರಜ |
ನೋಲಗಕೆ ಬಂದೆಂದಳಣ್ಣನ | ಕಾಲಿಗೆರಗಿ || ೩೦೮ ||

**ರಾಗ ಕೇದಾರಗೌಳ ಅಷ್ಟತಾಳ**

ಹರುಷದಿ ಕೇಳಣ್ಣ ಸುರಪನ ವನವನ್ನು | ಉರುಹುವ ವೇಳೆಯಲಿ |
ನರಗೆ ಸಾರಥಿಯಾದನಂತೆ ಬೃಹನ್ನಳೆ | ಪರಮ ಸಾಹಸಿಕನಂತೆ || ೩೦೯ ||

ಎನಲುಬ್ಬುತೆಂದ ಎನ್ನನುಜೆ ಶಾಭಾಸೆನ್ನ | ಘನ ನಿನ್ನಿಂದುಳಿಯಿತಿನ್ನು |
ನಿನಗೆ ಪೇಳ್ದವರ್ಯಾರು ಕರೆತಾರಾತನ ನೀನೆ | ವನಿತೆ ಪೋಗೆನೆ ಕೇಳುತ || ೩೧೦ ||

ಬಂದುಳುತ್ತರೆನೋಳ್ಪ ಮಂದಿಯಿಟ್ಟಡೆಯಾಗೆ | ಕಂದರ್ಪನಾನೆಯಂತೆ ||
ಅಂದುಗೆಗಳು ಝಣರೆನೆ ಪಾರ್ಥನೆಡೆಗೆ ಸಾ | ನಂದದಿ ವೇಗದಲಿ || ೩೧೧ ||

ಬರವ ಕಾಣುತ ಫಲುಗುಣ ಹರುಷದಿ ಹಿಗ್ಗಿ | ಕರೆದು ಮತ್ಸ್ಯನ ಸುತೆಯ |
ತರುಣಿ ನೀ ಭರದೊಳೇತಕೆ ಬಂದೆಯೆನೆ ಪಾದ | ಕೆರಗುತಿಂತೆಂದಳಾಗ || ೩೧೨ ||

**ರಾಗ ಮಾರವಿ ಏಕತಾಳ**

ಕೇಳು ಬೃಹನ್ನಳೆ ಬಡಗಲು ಕುರುಭೂ | ಪಾಲನು ಪಡೆವೆರಸಿ |
ದಾಳಿಯೊಳಯ್ತಂದು ಲಕ್ಷ ಪಶುಗಳನು | ಕೋಳುವಿಡಿದನಂತೆ || ೩೧೩ ||

ತಡೆದು ಮರಳಿಚುವರಣ್ಣನ ಸಾರಥಿ | ಮಡಿದ ನಿನ್ನಿನ ಧುರದಿ ||
ನುಡಿಯ ಕೇಳಿದೆ ನೀನು ನರನ ಸಾರಥಿಯೆಂದು | ನಡೆತಂದೆನು ಬಳಿಗೆ || ೩೧೪ ||

ಇನ್ನೇನೆಂಬೆನದೆನ್ನಯ ಮಾತನು | ಮನ್ನಿಸೆನುತ ನಮಿಸೆ |
ಕನ್ನೆಯೇಳೇಳ್ ನಿನ್ನ ಮಾತನು ಮೀರ್ವೆನೆ | ಮುನ್ನವೆ ತಾ ಬಹೆನು  || ೩೧೫ ||

ನಡೆ ನೀ ಮುಂದೆನುತವಳನು ಕಳುಹಿ ಮ | ತ್ತೊಡನೆ ತಾನಯ್ತರಲು ||
ಪೊಡವಿಪ ಮತ್ಸ್ಯನಣುಗ ಕಾಣುತವನೊಳು | ನುಡಿದನು ಗರ್ವದೊಳು || ೩೧೬ ||

**ರಾಗ ಭೈರವಿ ಝುಂಪೆತಾಳ**

ಭಳಿರೆ ಬಂದ್ಯೆ ಬೃಹ | ನ್ನಳೆ ಕೇಳು ತನಗಿಂದು |
ಕಲಹ ದೊರಕಿದುದು ವೆ | ಗ್ಗಳೆಯರೊಡನೆಂದು || ೩೧೭ ||

ಅಳಿದನ್ಯೆ ಸೂತ ನೀ | ತಳೆದು ಸಾರಥಿತನವ |
ನುಳಿಸೆನ್ನ ನಿನ್ನ ಧುರ | ದಲಿ ಮೆಚ್ಚಿಸುವೆನು || ೩೧೮ ||

ಎನಲು ನಗುತೆಂದನೆಲೆ | ಜನಪಸುತ ಕೇಳ್ ಭರತ |
ದನುಭವದೊಳಿಹೆನು ಮರೆ | ತೆನು ಸೂತತನವ  || ೩೧೯ ||

ವೈರಿಗಳು ಭೀಷ್ಮಾದಿ | ವೀರರವರಿದಿರೆನ್ನ |
ಸಾರಥ್ಯವಹುದೆ ರಣ | ಸೂರೆಯಲ್ಲೆನಲು || ೩೨೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲೆ ಬೃಹನ್ನಳೆಯೇಕೆ ಬೆದರುವೆ | ಮುಳಿದು ಪಗೆಗಳದೇನ ಮಾಳ್ಪರು |
ನಿಲುವೆ ತಾನ್ಯಾರೆಂಬುದನು ನೀ | ತಿಳಿಯದಾದೆ || ೩೨೧ ||

ತಾನರಿಯದವನೇ ನದೀಸುತ | ಭಾನುಜಾದ್ಯರ ಪೇಳದಿರು ಮ |
ತ್ತಾ ನಪುಂಸಕರಿಂದಲಾಗುವು | ದೇನು ನಮಗೆ || ೩೨೨ ||

ಎಂದುದನು ಕೇಳ್ದಹುದಲೇ ನೀ | ನೆಂದೆ ಹರೆಯಕೆ ತಕ್ಕ ನುಡಿಯನು |
ಸ್ಯಂದನವ ತರಿಸಾದಡೆನೆ ಕೇ | ಳ್ದಂದು ಭರದಿ || ೩೨೩ ||

**ಭಾಮಿನಿ**

ಅರಸ ಕೇಳುತ್ತರನು ರಥವನು |
ತರಿಸೆ ಕಾಣುತ ನರನು ತನ್ನಯ |
ತ್ವರಿತಕೊದಗುವ ಕುದುರೆಗಳ ತಾನಾಯ್ದು  ಲಾಯದಲಿ ||
ಭರದಿ ತೇರ್ಗಳವಡಿಸೆ ಕಂಡಾ |
ತರಳನತಿ ತೋಷದಲಿ ದಿವ್ಯಾ |
ಭರಣಭೂಷಿತನಾಗಿ ಕೊಟ್ಟನು ಕವಚವನು ನರಗೆ || ೩೨೪ ||

**ಕಂದ**

ಇತ್ತಂಗಿಕೆಯಂ ಕೊಂಡದ |
ನತ್ತಿತ್ತಲು ಮಗುಚುತರ್ಜುನಂ ತೊಡೆ ಕಂಡಾ ||

ವೃತ್ತಸ್ತನೆಯರು ನಗುತಂ |
ಉತ್ತರನಂ ನೋಡುತೆಂದರತಿ ಮುದದಿಂದಂ || ೩೧೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಂಗಿಕೆಯ ತೊಡಲರಿಯದವ ರಣ | ರಂಗಕಿವ ಸಾರಥಿಯೆ ಪಗೆಗಳ |
ಸಂಗರಕೆ ಲೇಸಾದುದೀತನ | ಸಂಗ ನಿನಗೆ || ೩೧೬ ||

ಎಂದ ಮಾತನು ಕೇಳುತರ್ಜುನ | ನಂದು ನಾಚಿದ ತೆರದಿ ಬಾಗಿರೆ |
ಬಂದು ಮತ್ಸ್ಯಕುಮಾರನದಕೇ | ನೆಂದು ತಾನೇ || ೩೧೭ ||

ತೊಡಿಸಿದನು ಕವಚವನು ನರಗವ | ನೊಡನೆ ರಥವೇರಿದನು ತಾನತಿ |
ಸಡಗರವ ಪೊಗಳಿಕೆಯ ಪಾಠಕ | ಗಡಣದಿಂದ || ೩೧೮ ||

ಧರಣಿಯದುರುವ ವಾದ್ಯಘೋಷದಿ | ಧುರಕೆ ಪೋಪಣ್ಣನನು ಕಂಡು |
ತ್ತರೆಯು ನಗುತಿಂತೆಂದಳುಬ್ಬುತ | ನರನೊಳಂದು || ೩೧೯ ||

ಎಲೆ ಬೃಹನ್ನಳೆ ಕೇಳು ಪಗೆಗಳ | ಗೆಲುವ ಕಲಹದೊಳಣ್ಣ ನೀನಾ |
ಬಲುತರದ ಭೂಷಣವ ತಾರೆನೆ | ಕಳಕಳಿಸುತ || ೩೨೦ ||

**ಭಾಮಿನಿ**

ತರುವೆನೆನುತಾ ಸತಿಗೆ ಪೇಳಿದು |
ನರನು ನಗುತ ವರೂಥವನು ತ |
ತ್ಪುರುವ ಪೊರಡಿಸಿ ನೂಕಿದನು ತೇಜಿಗಳನಬ್ಬರಿಸಿ ||
ನೆರೆದ ಬಲ ಕಂಡೇನಿದಿವಹೊಸ |
ಪರಿಯ ಸೂತನಲಾ ಎನುತ ಪಿಂ |
ತಿರಲು ರಥವನು ಹಾರಿಸಿದನನಿಲನನು ಪಿಂದುಳುಹಿ || ೩೨೧ ||

**ರಾಗ ಮಾರವಿ ಏಕತಾಳ**

ಧರಣಿಯನೊದೆದು | ಪ್ಪರಿಸುವ ಹಯಗಳ | ಖುರದ ಹೊಯ್ಲಿಗಿಳೆ |
ಬಿರಿಯೆ ಧೂಳ್ಗಳಂ | ಬರಕಡರುತ್ತಿತಿ | ಭರದೊಳು ರಥವನು |
ಹರಿಸಿದ ಅರಿಮೋ | ಹರಕೆ ವಿಜಯನು | ಸೂಠಿಯಿಂದ || ೩೨೨ ||

ಕಾಣುತ ಕೌರವ | ಸೇನೆಯನುತ್ತರ | ಏನಿದು ಗರಳಂ |
ಭೋನಿಧಿಯಂದದಿ | ಸೈನಿಕವಿರುವುದಿ | ದೇನದ್ಭುತವೆನು |
ತಾ ನರಗೆಂದನು | ತಾ ನಡನಡುಗಿ | ಭೀತಿಯಿಂದ || ೩೨೩ ||

ಎಲೆಲೆ ಬೃಹನ್ನಳೆ | ಕೊಲುವೆಯೇಕೆನ್ನನು | ಕಲಹಕೆ ಬಂದಿದೆ |
ಜಲಧಿಯ ತೆರದಲಿ | ಬಲವಿನಿತಿದಿರಾಗೆ | ನಿಲುವ ಮಾತೆಲ್ಲಿ ಕಂ |
ಗಳು ನಿನಗಿಲ್ಲವೆ | ತಿಳಿಯದಿದೇಕೈ | ಮರುಳೆ ನೀನು || ೩೩೪ ||

ಎಲ್ಲಿ ನೋಡಿದರೆದೆ | ತಲ್ಲಣಿಪುದು ರಣ | ಮಲ್ಲಸುಯೋಧನ |
ನಲ್ಲದಿನ್ನುಂಟೇ | ನಿಲ್ಲು ರಥವನಿ | ನ್ನೆಲ್ಲಿಗೆ ನಡೆಸುವೆ |
ಇಲ್ಲವೆ ಕರುಣವೆ | ನ್ನಲ್ಲಿಷ್ಟು ನಿನಗೆ | ತರವೆ ನೋಡೆ || ೩೩೫ ||

**ರಾಗ ಕಾಂಭೋಜಿ ಝಂಪೆತಾಳ**

ಎನಲೆಂದನೆಲೆ ಮತ್ಸ್ಯನಣುಗ ಕೇಳ್ ಕ್ಷತ್ರಿಯರೊಳ್ | ಜನಿಸಿ ಸಂಗರಕಂಜಬಹುದೆ |
ವನಿತೆಯರ ಮುಂದುಬ್ಬಿದಂತಲ್ಲ ಪಿಡಿ ಧನುವ | ನೆನುತ ಮುಂದರಿಸಿದನು ರಥವ || ೩೩೬ ||

ಎಲೆ ಪಾಪಿ ಸೂತ ಗಂಟಲ ಕೊಯ್ವೆಯೇಕೆ ಹೆ | ಬ್ಬುಲಿಯ ಹಿಂಡನು ಮುದದಿ ಪೊಗುವ ||
ಎಳೆಗರುವಿನಂತಾದೆ ಉಳಿಸೆನ್ನ ನಿನ್ನ ನಾವ್ | ಸಲಹಿದುದ ಮರೆತೆಯೇನಯ್ಯ || ೩೩೭ ||

ಎಂದುದನು ಕೇಳ್ದು ನಗುತಂದು ನರನಾ ರಥವ | ಮುಂದೆ ಪತ್ತಡಿಯನಯ್ದಿಸಲು |
ಕೊಂದನೀ ಘಾತಕಿಯೆನುತ ಮೇಲ್ಸೆರಗ ಬಿಗಿದು | ಹಿಂದೆ ಧುಮ್ಮಿಕ್ಕುತೋಡಿದನು || ೩೩೮ ||

**ಭಾಮಿನಿ**

ಧರೆಗೆ ಪಾಯ್ದೋಡುವನ ಕಾಣುತ |
ಕುರುಪತಿಯ ಭಟರತ್ತ ನಗುತಿರೆ |
ಸುರಪಸುತನಾ ಕ್ಷಣದಿ ಬೆಂಬತ್ತಿದನು ಮತ್ಸ್ಯಜನ ||
ಭರದೊಳೆರಡೈವತ್ತು ಹೆಜ್ಜೆಯ |
ಹರಿದು ಪಿಡಿಯಲು ನಡನಡುಗಿ ಹಲು |
ಗಿರಿವುತುಳಿಸೆಂದೆರಗಿದುತ್ತರನೊಡನೆ ನರ ನುಡಿದ || ೩೩೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನರಗುರಿಯೆ ಪಾರುವೆಯದೆಲ್ಲಿಗೆ | ಶಿರವನರಿವೆನು ಪೋದರೆಲವೋ |
ದೊರೆ ಕುಮಾರಕನಂಜಬಹುದೇ | ಧುರಕೆ ನೀನು || ೩೪೦ ||

ನೋಡು ನಾವು ನಪುಂಸರಾದರು | ಹೇಡಿತನ ನಮಗುಂಟೆ ಸತಿಯರೊ |
ಳಾಡಿದೈ ಹೆಮ್ಮೆಯಲಿ ಮತ್ತಿ | ನ್ನೋಡಲೇಕೆ || ೩೪೧ ||

ನೀನು ಬಲು ಭಟನಹೆ ಬೃಹನ್ನಳೆ | ತಾ ನಪುಂಸಕನೈಸೆ ತನ್ನಯ |
ಪ್ರಾಣಗೊಂಬೆಯದೇಕೆ ಕಂಗಳು | ಕಾಣವೇನೈ || ೩೪೨ ||

ಒಡೆಯರಲ್ಲವೆ ನಿಮಗೆ ನಾವ್ ನ | ಮ್ಮೊಡನೆ ಘಾತಕತನವೆ ನೀನೇ |
ಕಡಿವೆಯೆನ್ನಯ ಕೊರಳನೇತಕೆ | ಬಿಡು ಬಿಡೆನಲು || ೩೪೩ ||

ನರ ನುಡಿದನೆಲೆ ಕುವರ ರಣದಲಿ | ಹರಣವಳಿದರೆ ಸುರರ ಸತಿಯರು |
ದೊರಕುವರು ಇಂದ್ರಾದಿಭೋಗವು | ಬರುವುದೆನಲು || ೩೪೪ ||

ಮರುಳು ಸಾರಥಿ ಬಿಡು ಬಿಡೆನ್ನನು | ಹರಣವುಳಿದರೆ ಸಾಕು ನಮ್ಮಯ |
ದೊರೆತನವು ನಮ್ಮರಮನೆಯ ಸತಿ | ಯರುಗಳೆನಗೆ || ೩೪೫ ||

**ವಾರ್ಧಕ**

ಎನಲೆಂದನೆಲೆ ಕುವರ ಲಾಲಿಸೈ ನಿಲುವೆ ನಾ |
ನನುವರಕ್ಕಂಜದಿರು ನೀನೆ ಸಾರಥಿತನವ |
ನನುಕರಿಪುದೆನೆ ಕೇಳುತವನೆಂದನೆಲೆ ಬೃಹನ್ನಳೆ ಕೇಳ್ದೆ ಪೊಸ ಕಥೆಯನು ||
ಜನಪಸುತನೆನಗಳವಡದ ಧುರಂ ತೀರುವುದೆ |
ನಿನಗೆನಲ್ ಮರುಳೆ ನೋಡಾದಡೆನುತರ್ಜುನಂ |
ಘನ ಪರಾಕ್ರಮದಿಂದಲಾತನಂ ತಂದಾ ವರೂಥಮನ್ನಡರಿಸಿದನು || ೩೪೬ ||

**ಕಂದ**

ಎಂದುತ್ತರಗತಿ ಧೈರ್ಯವ |
ನಂದದಿ ಪೇಳ್ದಸ್ತ್ರವಿಹ ಶಮೀಮರದೆಡೆಗಂ ||
ಬಂದಾ ರಥದಿಂದಿಳಿದೈ |
ತಂದರ್ಜುನ ಮತ್ಸ್ಯಜಾತನೊಡನಿಂತೆಂದಂ || ೩೪೭ ||

**ರಾಗ ಕೇದಾರಗೌಳ ಅಷ್ಟತಾಳ**

ಧರಣಿಪಸುತ ಕೇಳು ಮರದೊಳಿರ್ಪುದು ಪಾಂಡ | ವರು ಪಿಡಿದಸ್ತ್ರಂಗಳು ||
ಭರದಿ ನೀನೇರ್ದದನೆನಗೀವುದೆನೆ ಕೇಳಿ | ಮರಳಿ ಮತ್ತವನೆಂದನು || ೩೪೮ ||

ಅರಸು ಮಕ್ಕಳು ನಾವು ಮರವನೇರೆವು ಮೇಲೆ | ಪರಿಕಿಸೆ ಶವವಿರ್ಪುದು ||
ಕರದಿ ಮುಟ್ಟೆವು ನೀನು ಮರುಳಾದೆ ಶಸ್ತ್ರವೆ | ಲ್ಲಿರುವುದೆನಲು ಪೇಳ್ದನು || ೩೪೯ ||

ಶವವಲ್ಲ ಕೇಳು ಚರ್ಮದಿ ಸುತ್ತಿದಾಯುಧ | ವವು ತಾರೆಂದೆನೆ ಲಾಲಿಸಿ ||
ಕುವರನಾ ಮರವೇರ್ದು ಪರಿಕಿಸಿ ಬಿಗಿದ ಚ | ರ್ಮವ ಬಿಚ್ಚೆ ಕಂಡಂಜುತ || ೩೫೦ ||

ಅರರೆ ಸಾರಥಿ ಕಣ್ಣಿಕ್ಕಲು ತೀರದೆನಗೆ ದ | ಳ್ಳುರಿಯಂತೆ ಸುಡುತಿದೆನ್ನ |
ಧರೆಗಿಳಿಸೆನಲೆಂದ ನರನ ನೆನೆದು ತೆಗೆ | ಬರುವುದೆನುತ ಪಾರ್ಥನು || ೩೫೧ ||

ಎಂದುದ ಕೇಳ್ದಿಂದ್ರನಂದನನನು ನೆನೆ | ದಂದುತ್ತರನು ಸತ್ತ್ವದಿ |
ಒಂದೊಂದಾಯುಧಗಳ ತೆಗೆದಿತ್ತನಾ ಮರ | ದಿಂದ ಲೆಕ್ಕಿಸಿ ಪಾರ್ಥಗೆ || ೩೫೧ ||

**ಕಂದ**

ಮರದಿಂದೀ ಪರಿಯಿಂದು |
ತ್ತರನು ಸಕಲ ಶಸ್ತ್ರಮಂ ತೆಗೆದಿತ್ತುಂ ||
ಭರದಿಂದುಸಿರಿಕ್ಕುತೆ ತಾಂ |
ಧರೆಗಿಳಿದನುಳಿದೆನಿಂದಿಂಗೆನುತಿಂತೆಂದಂ || ೩೫೩ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಏನು ಸಾರಥಿ ಚಾಪವಿದನಾ | ನಾನಲಾಪೆನೆ ಭಳಿರೆ ಧನುವಿದು |
ತಾನದಾರದೊ ಪಿಡಿವವನ ತೋ | ಳೇನು ಸತ್ವವೋ ಶಿವಯೆನೆ || ೩೫೪ ||

ನರ ನುಡಿದನೆಲೆ ಕುವರ ಕೇಳೈ | ಧುರವಿಜಯ ಪಾರ್ಥನದು ಧನುವಿದು |
ಸುರನರೋರಗರಿಂಗೆ ಮಣಿಯದು | ಧುರದೊಳೆಂದುತ್ತರನೊಳು || ೩೫೫ ||

**ಭಾಮಿನಿ**

ಕೇಳಿ ಮತ್ತೆಂದನು ಬೃಹನ್ನಳೆ |
ಪೇಳು ತನಗುಳಿದಸ್ತ್ರ ವಹ್ನಿ |
ಜ್ವಾಲೆಯಂದದಿ ತೋರ್ಪುದಾರದೆನುತ್ತಲಾ ಕುವರ ||
ಕೇಳಲರ್ಜುನ ನಗುತಲಾಯುಧ |
ಜಾಲವನು ವಿಂಗಡಿಸಿ ಧರ್ಮನೃ |
ಪಾಲಚಾಪವ ಭೀಮಸೇನನ ಗದೆಯಿದೇಯೆನುತ || ೩೫೬ ||

ವೀರ ಸಹದೇವನದು ಧನುವಿದು | ಧೀರನದು ಕೋದಂಡ ನಕುಲನ |
ವೀರಸುರಪನ ಸೂನು ಶಸ್ತ್ರಾಸ್ತ್ರಗಳ ನೋಡೆಂದು ||
ಬೇರೆ ಬೇರೆಲ್ಲವನು ವಿವರಿಸಿ | ತೋರೆ ಬೆರಗಾಗುತ್ತ ಮತ್ಸ್ಯಜ |
ವೀರನಹುದೆಂದೆನುತನಿಶ್ಚಯದಿಂದಲಿಂತೆಂದ || ೩೫೭ ||

**ರಾಗ ಮಧುಮಾಧವಿ ಆದಿತಾಳ**

ಆರೊ ಸಾರಥಿ ನೀನು ಪೇಳಿನ್ನು ತನಗೆ |
ಶೂರ ನೀನಹುದೆಣೆಗಾಣೆ ನಾ ನಿನಗೆ || ಪಲ್ಲವಿ ||

ಧುರಧೀರರಹ ಪಾಂಡವರ ಶಸ್ತ್ರಗಳನು |
ಅರಿವೆಯೆಂತೈ ನೀನು ಮರೆಯೊಳಿರ್ಪುದನು ||

ಸರಿಯಿಲ್ಲ ನಿನಗೆ ನೀನಾರೆಂಬ ನಿಜವ |
ಅರುಹೆನಲವಗೆಂದ ನರನು ತಮ್ಮೊಳವ || ೩೫೮ ||

ಆದರಾಲಿಸು ಮತ್ಸ್ಯಜನೆ ಪಾರ್ಥ ತಾನು |
ಸಾಧುವಾಗಿಹ ಕಂಕನವನೆ ಧರ್ಮಜನು |
ಕಾದಿ ಕೀಚಕನ ಕೊಂದವ ಭೀಮ ತಾನು |
ಹೋದ ಮಾನವ ನಿನ್ನೆ ಉಳುಹಿದನವನು || ೩೫೯ ||

ತುರಗರಕ್ಷಕನಾತ ನಕುಲನೆಂಬವನು |
ತುರುವ ಸಲಹುವಾತ ಸಹದೇವನವನು |
ತರುಣಿ ಸೈರಂಧ್ರಿಯಾದವಳೈವರರಸಿ |
ಕುರುರಾಯ ನಮಗಾಗಿ ಬಂದ ಬಲವೆರಸಿ || ೩೬೦ ||

ವರುಷವಜ್ಞಾತವೆನ್ನುವ ಭಾಷೆ ನಮಗೆ |
ಹರಿಯ ಕರುಣದಿಂದ ಕಳೆದೆವೀ ನೆಲೆಗೆ |
ಸರಿಯಾಯ್ತು ನುಡಿದ ವತ್ಸರ ನಿಮ್ಮ ಪುರದಿ |
ಧುರಕೆ ತಾನಯ್ದುವೆನೆನೆ ಕೇಳಿ ಭರದಿ || ೩೬೧ ||

ಹರ ಹರ ಎನುತಲುತ್ತರನು ಭೀತಿಯಲಿ |
ಶಿರವ ಚಾಚಿದನಂದು ನರನ ಪಾದದಲಿ ||
ಕರವ ಮುಗಿವೆ ನಾನು ಜರೆದೆ ನಿನ್ನುವನು |
ಮರೆದು ರಕ್ಷಿಸೆನುತ್ತ ಮಗುಳೆರಗಿದನು || ೩೬೨ ||

ಎರಗಿದುತ್ತರನನು ಪಿಡಿದೆತ್ತಿ ನರನು |
ತರಳ ನಿನ್ನೊಳು ಮುನಿಸಿಲ್ಲೆನುತ ಪೇಳಿದನು ||
ಅರುಹೆ ಕೇಳುತ ಮತ್ಸ್ಯಜಾತನಾ ಕ್ಷಣದಿ |
ಕರವ ಮುಗಿವುತೆಂದ ನರಗಂದು ಭರದಿ || ೩೬೩ ||

ಕುವರನ ಬಿನ್ನಹವನು ಲಾಲಿಸಯ್ಯ |
ವಿವರವಿಂದೆನಗೆ ದಶನಾಮ ಪೇಳಯ್ಯ ||
ಎನಲು ಕೇಳುತಲೆಂದ ನರ ಸವ್ಯಸಾಚಿ |
ವರಪಾರ್ಥ ಫಲ್ಗುಣಅರ್ಜುನ ಧನಂಜಯನು || ೩೬೪ ||

ಕಿರೀಟಿ ಸಿತವಾಹನ ಬೀಭತ್ಸು ಜಿಷ್ಣು |
ಸುರಪನಸುತ ವಿಜಯ ಮತ್ತವೆಂದೆನುತ ||
ಕೇಳಿ ಹರುಷಿತನಾಗುತಾಗ ಮತ್ಸ್ಯಜನು |
ಕಾಲಿಗೆರಗಿದನಂದು ಸಂತಸದಿಂದವನು || ೩೬೫ ||

**ವಾರ್ಧಕ**

ಎರಗಿದುತ್ತರನಂ ನಿರೀಕ್ಷಿತಲರ್ಜುನಂ |
ತರಳ ನೀನಂಜಬೇಡೆನುತವನನುಪಚರಿಸಿ |
ತರೆವೆಣ್ಣುತನವನುಂ ತ್ಯಜಿಸಿ ಪುರುಷಾಂಗಮಂ ತಳೆದಾಗ ಮತಿಧೃತಿಯೊಳು ||
ಭರದಿಂದ ತನ್ನ ಮುನ್ನಿನ ರಥಕಡರ್ದು ಕಪಿ |
ವರನನುಂ ನೆನೆಯಲವ ಮಂಡಿಸೆ ಧ್ವಜಾಗ್ರದೊಳ್ |
ಧುರಕೆ ತಾಂ ಧನುವನೊದರಿಸುತಲಯ್ತಂದನುತ್ತರನ ಸೂತತ್ವದಿಂದ || ೩೬೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕರದ ಬಿಲುರವ ದೇವದತ್ತದ | ವರ ನಿನಾದದ ಆರ್ಭಟೆಯು ಸಹಿ |
ತಿರದೆ ಮೊಳಗಿದವಮಮ ಸಿಡಿಲಿನ | ಗರುಡಿಯೆನಲು || ೩೬೭ ||

ಕುರುಪತಿಯ ಭಟರೀಕ್ಷಿಸುತ ತರ | ಹರಿಸಿ ಭೀತಿಯೊಳಿರಲಿಕಿತ್ತಲು |
ತಿರುಗಿ ಬಿದ್ದನು ರಥದ ಮೇಲು | ತ್ತರನು ಭರದಿ || ೩೬೮ ||

ಆತನನು ಬೋಳಯ್ಸಿ ನರ ನಿ | ರ್ಭೀತಿಯೊಳಗಾ ರಥವ ಕೌರವ |
ಚಾತುರಂಗದ ಮೇಲೆ ನೂಕಿದ | ತಾ ತವಕದಿ || ೩೬೯ ||

ವರವರೂಥವ ಕಂಡು ಪಾರ್ಥನು | ಧುರಕೆ ಬಂದನೆನುತ್ತ ಭಯದಿಂ |
ದಿರದೆ ಗಂಗಾತನುಜಗೆಂದನು | ಗರಡಿಯಧಿಪ || ೩೭೦ ||

ನೋಡು ಭೀಷ್ಮನೆ ಧುರಕೆ ಮತ್ಸ್ಯಜ | ಗೂಡಿ ಬಂದನು ಪಾರ್ಥ ನಾವಿ |
ನ್ನಾಡಲೇಕವಗಾಯಿತರಿಗಳೊ | ಳಾಡಿದವಧಿ || ೩೭೧ ||

**ಭಾಮಿನಿ**

ಧುರವಿಜಯ ನೀನೀಕ್ಷಿಸಾತನ |
ಕರದ ಕಾರ್ಮುಕವನ್ನು ಶಂಖದ |
ಭರಿತ ನಾದವನಾ ರಥಾಗ್ರದಿ ಕುಳಿತ ಕಪಿವರನ ||
ಹರಿನಿನಾದದ ರವದ ಬೊಬ್ಬೆಗೆ |
ಇರದೆ ಬೆದರುವುದೆಮ್ಮ ಬಲವಿದು |
ಧುರವಿಜಯನಹುದೆಂದು ಪೊಗಳಲು ಕರ್ಣ ಖಾತಿಯಲಿ || ೩೭೨ ||

**ರಾಗ ಭೈರವಿ ಅಷ್ಟತಾಳ**

ರಣದಿ ನಿಂತರಿಗಳನ್ನು | ಪೊಗಳ್ವುದು | ಗುಣ ನಿಮ್ಮ ಬಳಗಕಿನ್ನು |
ಉಣುವಿರಿ ಕೌರವನೊಡವೆಯನಾತಗೆ | ದಣುವನೆ ಬಯಸುವಿರಿ || ೩೭೩ ||

ಧುರಕೆ ತಾನಿಹೆ ಪಾರ್ಥನ | ಲೆಕ್ಕಿಸುವೆನೆ | ಕರೆಸು ಭಾರ್ಗವರಾಮನ |
ಸರಿವೆನೆ ಹಿಂದಕ್ಕಂತಿರಲಿ ನಿಮ್ಮೊಡನೇನಂ | ದರಸನಿಂಗಿಂತೆಂದನು || ೩೭೪ ||

ಭೂಪ ನೀ ಲಾಲಿಸಿನ್ನು | ನಂಬದಿರಿಂಥ | ಕಾಪುರುಷರ ಮಾತನು ||
ಈ ಪಾರ್ಥನನೊರಗಿಸುವೆನೆಂದೆನೆ ಕೇಳಿ | ಕೋಪದಿ ಕೃಪನೆಂದನು || ೩೭೫ ||

ಅವನೀಶ ಕೇಳು ನೀನು | ರಾಧೆಯ ಮಗ | ನಿವ ಬಗುಳಿದರಿಂದೇನು |
ಬವರದಿ ಪಾರ್ಥಗಿದಿರು ನಿಲುವಧಟರು | ಭುವಿಯೊಳಗಿಲ್ಲವಯ್ಯ || ೩೭೬ ||

ಹರನೊಳು ಕಾದಿದನು | ಹಿರಣ್ಯಕ | ಪುರದ ದೈತ್ಯರ ಕೊಂದನು ||
ಅರಸುಗಳಿಗೆ ಮಣಿಯದ ಕೋದಂಡವ ನಿನ್ನಿ | ದಿರಲಿ ಮುರಿದನಲ್ಲಯ್ಯ || ೩೭೭ ||

**ರಾಗ ಕಾಂಭೋಜಿ ಝಂಪೆತಾಳ**

ಇಂತರಸಗುಸಿರಿ ಮತ್ತಿನಜನೊಳು ಪೇಳ್ದನೆಲೆ | ಭ್ರಾಂತ ಕೇಳ್ ನಿನ್ನ ಪೆಸರೇನು ||
ಬಂತು ನಿನಗಿಷ್ಟು ಕೌರವ ಸಲುಗೆಗೊಟ್ಟುದಕೆ | ಇಂತೆನಲು ಕರ್ಣಕೋಪದಲಿ || ೩೭೮ ||

ಎಂದನೆಲೆ ಕೃಪ ಕೇಳು ಬರಲಿ ಸಮರಕೆ ಭರ್ಗ | ನೊಂದುಬಾರಿಗೆ ನಿಲುವೆ ನಾನು ||
ಇಂದಿಗೀ ನರ ನಿಮಗೆ ಘನವಾಗಿಹನು ಸುಭಟ | ರಂದವನು ತಿಳಿಯಿರೈ ನೀವು || ೩೭೯ ||

ಹಾರುವರು ನೀವು ನಿಮ್ಮಧಟು ಬಹು ಶ್ರುತಿ ಶಾಸ್ತ್ರ | ಸಾರದೊಳಗಲ್ಲದೀ ಧುರದಿ ||
ಧೀರತನ ನಿಮಗೆಲ್ಲಿಹುದು ನೀವು ನಿಲ್ಲುವರೆ | ಪೌರಾಣವಲ್ಲವಿದು ರಣವು || ೩೮೦ ||

ಎಂಬುದಿನ್ನೇನು ಕೌರವನ ಮಂದಿರದಿ ಧನ | ವಂ ಬಾಚಿದಿರಿ ಬಗೆಬಗೆಯಲಿ |
ಗಂಭೀರದಿಂ ಡೊಳ್ಳ ತುಂಬುವಂದದಿ ತಿರುಗು | ತುಂಬ ಸೊಗಸಲ್ಲವಿದು ಸಮರ || ೩೮೧ ||

ಹಣೆಗೆ ಬೂದಿಯ ಬಡಿದು ಬೆರಳ್ಗೆ ದರ್ಭೆಯ ಬಿಗಿದು | ಘನತರದ ಡೊಳ್ಳ ತೋರಿಸುತ |
ಉಣಲು ಬಲ್ಲಿರಿ ಹೊರತು ಬೇರೇನ ಕಾಣೆ ನಾ | ರಣವಿಚಾರವಿದೇಕೆ ನಿಮಗೆ || ೩೮೨ ||

**ಕಂದ**

ಎಂದಾ ಕರ್ಣಂ ಗುರು ಕೃಪ |
ರಂ ದೂಷಿಸಿ ನುಡಿಯಲ್ ಕೇಳುತಲಾಯೆಡೆಗಂ ||
ಬಂದಶ್ವತ್ಥಾಮನು ಖತಿ |
ಯಿಂದೆಂದಂ ತರಣಿತನಯನೊಡನತಿ ಭರದಿಂ || ೩೮೩ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಸೂತನಣುಗ ಬಗುಳ್ವೆ ಏಕೆ ಗರ್ವದಿ |
ತಲೆಯು ಬೆಳೆಯಿತೀಗ ನಿನಗೆ ಧೊರೆಯ ಪ್ರೇಮದಿ ||

ಸಲುಗೆಯಿಂದ ಗುರುಗಳನ್ನು ಜರೆದು ಪೇಳಿದೆ |
ಕುಲಕೆ ತಕ್ಕ ಮಾತನೆಂದೆ ಭಳಿರೆ ಮೆಚ್ಚಿದೆ || ೩೮೪ ||

ನಾವು ವಿಪ್ರರಹೆವು ಸಹಜ ನಮ್ಮ ಜರೆದೆಲಾ |
ಯಾವ ದೊರೆಕುಮಾರ ನೀನು ಎನಗೆ ಪೇಳೆಲಾ |
ಭೂವರೇಣ್ಯನನ್ನು ಪಿಡಿಯೆ ಚಿತ್ರಸೇನನು |
ಯಾವನಯ್ಯ ಬಿಡಿಸಿದಾತ ನಮ್ಮ ದೊರೆಯನು || ೩೮೫ ||

ಗುರುಗಳನ್ನು ಜರೆದೆ ಪಾಪಿ ನಿನ್ನ ಶಿರವನು |
ತರಿವೆನೆನುತಲುಗಿದನಸಿಯ ಗುರುತನೂಜನು ||
ತರಣಿಜಾತ ಕಂಡು ತೆಗೆದನುರುಕಠಾರಿಯ |
ಭರದೊಳಾತನಿದಿರು ನಿಂದ ಧರಿಸಿ ಖಾತಿಯ || ೩೮೬ ||

**ಭಾಮಿನಿ**

ಅರಸ ಕೇಳೀ ಪರಿಯ ಕಾಣುತ |
ಕುರುನೃಪಾಲನು ಬಂದು ಭಟರಿ |
ಬ್ಬರ ನಡುವೆ  ನಿಂದೆಂದನೇಕೀ ಕಲಹ ನಿಮ್ಮೊಳಗೆ ||
ಧುರಕೆಬಂದಿಹ ಪಾರ್ಥನಿದಿರಲಿ |
ಮೆರೆಸಿ ನಿಮ್ಮ ಪರಾಕ್ರಮವನೆಂ |
ದರಸನವದಿರ ನಿಲಿಸಿ ಗಂಗಾಸುತನೊಳಿಂತೆಂದ || ||೩೮೭||

**ರಾಗ ಕೇದಾರಗೌಳ ಝಂಪೆತಾಳ**

ಕೇಳಿ ಭೀಷ್ಮರು ಬಂದವ | ನರನಾದ | ರಾಳಿಸುವೆನಿನ್ನು ವನವ ||
ಮೇಲಿಹುದು ಪೇಳಿದವಧಿ | ಬಂದನಿವ ಕಾಳಗಕೆ ಘನಗರ್ವದಿ || ೩೮೮ ||

ಕಡೆಗೆ ಸತ್ಯವನುಳಿದರು | ಪಾಂಡವರು | ಪೊಡವಿಯಾಸೆಯ ತೊರೆದರು |
ನುಡಿದ ವರುಷದೊಳಿವರನು | ಕಂಡು ಮ | ತ್ತಡವಿಗಟ್ಟುವೆನು ನಾನು || ೩೮೯ ||

ಎನಲೆಂದನೆಲೆ ಪೌತ್ರನೆ | ಪಾಂಡವರ | ಜನಪ ಸತ್ಯವ ಮರೆವನೆ ||
ಎನಿತು ನೀನೆಂದರೇನು | ಆಯ್ತುವರಿ | ಗಿನಿತರೊಳಗವಧಿಯಿನ್ನು || ೩೯೦ ||

ಅವರಿಂದ ಕೊರತೆಯಿಲ್ಲ | ನೀ ನಿನ್ನ | ಕವಲು ಮನವನು ಬಿಡುವೆಲಾ ||
ನವೆದರೀ ದಿನದವರೆಗೆ | ಇನ್ನಾದರವನಿಯನು ಕೊಡಿಸವರಿಗೆ || ೩೯೧ ||

ಏಕೆ ಹಗೆತನವವರಲಿ | ಜಯ ನಮಗೆ | ಸೋಕಲರಿದವರಿದಿರಲಿ ||
ಸಾಕು ಧುರ ವಿಹಿತವಲ್ಲ | ನರ ಕೊಲಲು | ಬೇಕು ಬೇಡೆಂಬರಿಲ್ಲ || ೩೯೨ ||

**ಭಾಮಿನಿ**

ಎಂದು ಪೇಳಿದ ಮುತ್ತಯನ ನುಡಿ |
ಯಂದವನು ಕೇಳುತ್ತ ಕುರುಪತಿ |
ನೊಂದು ಸುಯ್ಯುತಲಕಟ ಬಾಳ್ವೆನೆ ನಿಮ್ಮ ನಿರ್ದಯದಿ ||
ಮುಂದೆ ನೀವೇ ಬಲ್ಲಿರೆನುತ ವ |
ಸುಂಧರಾಪತಿ ಮತ್ತೆ ಮಣಿಯಲಿ |
ಕೆಂದ ಭೀಷ್ಮನು ತುರುಸಹಿತ ನೀನಯ್ದು ಪುರಕೆನುತ || ೩೯೩ ||

**ಕಂದ**

ಎಂದಾ ಕೌರವನಂ ಪಶು |
ವೃಂದವನೊಡಗೊಂಡು ನೀ ತೆರಳ್ ಮನೆಗೆನುತಂ ||
ಮುಂದಟ್ಟಿಯೆ ತಾ ಧುರಕಂ |
ನಿಂದಿರೆ ಕಂಡುತ್ತರನೊಳುಸಿರ್ದಂ ಪಾರ್ಥಂ || ೩೯೪ ||

**ರಾಗ ಶಂಕರಾಭರಣ ರೂಪಕತಾಳ**

ನೋಡು ಮತ್ಸ್ಯಜಾತ ಭೀಷ್ಮ | ಮಾಡಿದೆತ್ನ ನಮಗೆ ಲೇಸು |
ರೂಢಿಪಾಲ ಕೋಳುಗೊಂಡು | ಓಡುತಿಹನಲ್ಲೈ |
ಆಡಲವಧಿಯಿಲ್ಲ ತಿರುಹು | ಗಾಢ ರಥವನವನ ಕರುಳ |
ತೋಡಿ ತರುವ ಮರಳಿಚುವೆನು | ಹೇಡಿಗೊಳದಿರು || ೩೯೫ ||

ಎಂದ ಮಾತ ಕೇಳ್ದು ಹಯವ | ನಂದು ನೂಕೆ ಪೊಯ್ದುವಮಮ |
ನಿಂದ ಭಟರಗಣಿಸದಾರ್ದು | ಮುಂದೆ ನಿಗುಚುತ |
ಪಿಂದಕೇಕೆ ಪಾಯ್ವೆನೃಪತಿ | ನಿಂದು ನೋಡು ನೋಡು ಪಾರ್ಥ |
ಬಂದ ಕುರುಕುಲಾದ್ರಿವಜ್ರ | ನೆಂದನುತ್ತರ || ೩೯೬ ||

ಎನಲು ಭಟರು ಕೇಳುತರರೆ | ಜನಪನೆದುರು ನಡೆವ ಪಾರ್ಥ |
ನೆನುತ ಮುತ್ತಿಕೊಂಡರಾಗ | ಇನಸುತಾದ್ಯರು ||
ಕಿನಿಸಿನಿಂದ ವಿಜಯನವರ | ಧನುರಥಾಶ್ವ ಸಹಿತ ತರಿದು |
ಜನಪನೊಡನೆ ನುಡಿದ ತನ್ನ | ಮನದೊಳುಬ್ಬುತ || ೩೯೭ ||

ಅರಸ ಬಂದೆ ಪಾರ್ಥ ನಾನು | ಕರೆಸು ಜೂಜಿನವರನೆನುತ |
ಜರೆವುತವನ ಬಲವ ತರಿದ | ನುರು ಮಹಾಸ್ತ್ರದಿ ||
ಶರವಿಘಾತಕೊರಲಿ ಭಟರು | ಹರಣವುಳಿಯೆ ಸಾಕೆನುತ್ತ |
ತುರುಗಳನ್ನು ಬಿಟ್ಟು ಪಾರ್ದರಿರದೆ ಭಯದಲಿ || ೩೯೮ ||

**ಭಾಮಿನಿ**

ತುರುಗಳನು ಬಿಟ್ಟೋಡುವವದಿರ |
ಪರಿಕಿಸುತ ಗೋವಳರು ವೇಗದಿ |
ಕರೆದು ಸನ್ನೆಯೊಳಿರದೆ ತಿರುಗಿಸಿದರು ಪಶುವ್ರಜವ ||
ಪುರಕೆ ಮುಖವಾಗುತ್ತ ಕೆಚ್ಚಲ |
ಭರದೊಳೋಲಾಡುತ್ತ ನಡೆದಾ |
ತುರುಗಳನು ಕಾಣುತ್ತಲುತ್ತರತೋಷಮನನಾದ || ೩೯೯ ||

**ಕಂದ**

ತುರುಗಳ ಮರಳಿಚಿ ಪಾರ್ಥನು |
ಶರಸಂಧಾನವ ಗೆಯ್ದು ಗಾಂಡೀವದೊಳಂ ||
ಧುರಲಂಪಟರಿದಿರು ಬರಲೆನು |
ತುರವಣಿಸಲು ಕೇಳ್ದಾ ಕೌರವನಿಂತೆಂದಂ || ೪೦೦ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಂದ ನರನ ನುಡಿಯ ಕೇಳಿ ಕುರುಕುಲೇಶನು |
ನೊಂದು ಮನದಿ ಸುಯ್ದು ಭಟರನಂದು ಜರೆದನು |
ಬಂದು ಮಹಾರಥರು ರೋಷದಿಂದ ಪಾರ್ಥನ |
ಮುಂದೆ ನಿಂದು ಕೋಲಮಳೆಯ ಕರೆದರಾ ಕ್ಷಣ || ೪೦೧ ||

ಬರುವ ಶರವ ತರಿದು ನರನು ಮರಳಿ ಶರವನು |
ಧರಣಿ ಯಾವುದಭ್ರವಾವುದೆನಲು ಸುರಿದನು |
ಮುರಿದು ಶಕುನಿ ಮತ್ತೆ ಸೈಂಧವಾದಿ ವೀರರು |
ಧರಣಿಗುರುಳೆ ಕಂಡು ಕೆರಳಿ ತರಣಿಜಾದ್ಯರು || ೪೦೨ ||

ಮರಳಿ ಮರಳಿ ಮೇಲೆ ಕವಿವ ಸೈನ್ಯ ಶರಧಿಯ |
ಸರಳ ವಡಬಗಿತ್ತನಾಗ ಬಿಡಿಸಿ ಭೀತಿಯ ||
ಕರಿ ವರೂಥ ತುರಗ ಪಾದಚರರ ಬಲವನು |
ಧರಣಿ ರಕ್ತಮಯವದಾಗೆ ತರಿದು ಬಿಸುಟನು || ೪೦೩ ||

ಕರಿ ವರೂಥ ತುರಗ ಪತ್ತಿವೆರಸಿ ಭರದಲಿ |
ಸುರಪಸುತನ ಮುತ್ತಿಕೊಂಡರಧಿಕ ಖತಿಯಲಿ |
ಬರುವ ಬಲವ ಕಂಡು ಪಾರ್ಥನುಬ್ಬಿ ತೋಷದಿ |
ಶಿರವನಭ್ರಕಡರಲೆಚ್ಚ ಮತ್ತೆ ರೋಷದಿ || ೪೦೪ ||

**ವಾರ್ಧಕ**

ಶರದಿರಿತಕುಡಿದಿರ್ಪ ಶಿರಗಳಿಂ ಕರಗಳಿಂ |
ಧರಣಿಯೊಳು ಪೊರಳುತಿಹ ರುಂಡದಿಂ ಮುಂಡದಿಂ |
ಧುರದೊಳುಂ ಮುರಿವ ರಥಚಯಗಳಿಂ ಹಯಗಳಿಂದರುಣಜಲಶರಧಿಯಿಂದ ||
ಪರಿದೊಗುವ ನೆತ್ತರಲಿ ಕೊರಳ್ಗಳಿಂ ಕರುಳ್ಗಳಿಂ |
ಸುರಪನಂದನನ ಗಾಂಡೀವದಿಂ ರಾವದಿಂ |
ಪೊರಟರಿಗಳಸುಗೊಂಬ ಸರಳ್ಗಳಿಂ ಮರುಳ್ಗಳಿಂ ಮೆರೆದುದಾ ಸಮರಭೂಮಿ || ೪೦೫ ||

ಸರಳಿರಿತದಿಂ ನೊಂದು ಸೇನೆ ಜಾಲ್ವರಿಯಲುಂ |
ಕುರುಭೂಪನದ ಕಂಡು ಭರದಿಂದಲೈತಂದು |
ಗುರುನದೀಜರ ಬಳಿಗೆ ತುರುಗಳಂ ಬಿಟ್ಟು ತಾ ನಡೆತಂದನುಂ ಮೌನದಿ ||
ಸುರಪಸುತನಾಜ್ಞೆಯಿಂದಾಗ ಗೋವ್ಗಳು ಪುರಕೆ |
ತೆರಳಿದವು ಹರುಷದಿಂದಿತ್ತಲಾ ಫಲುಗುಣಂ |
ಧುರಕಿದಿರು ನಿಲುವ ವೀರರು ಬಪ್ಪುದೆಂದೆನುತ ತಾ ನುಡಿದ ನಸುನಗುತಲೆ || ೪೦೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದ ನುಡಿಯನು ಕೇಳುತಲೆ ಭಟ | ವೃಂದ ಕೋಪದೊಳೆದ್ದು | ಕುರು ಭೂ |
ಮೀಂದ್ರನಿಂಗೆರಗುತ್ತ ನರನಿದಿ | ರ್ನಿಂದು ಭರದಿ || ೪೦೭ ||

ತುರುಗಳನು ತೆರಳಿಚಿದೆನೆನುತವೆ | ಭರದೊಳ್ ನೀ ಹಿಗ್ಗದಿರು ನಿನ್ನಯ |
ಶರವ ತರಿವೆವು ನಾವು ನಮ್ಮೊಳು | ಧುರವು ಬೇಡ || ೪೦೮ ||

ಸುರುಚಿರದ ಚಾಣಾಕ್ಷ ಹೆಂಗುಸ | ನಿರುಳು ಕದ್ದೊಡೆ ಧೀರತನವೇ |
ಗೊರವನೊಳು ಕಾದಿದರೆ ಸಮರದಿ | ವೀರನಹುದೆ || ೪೦೯ ||

ಕುರುನೃಪಾಲನ ಭಟರು ನಮ್ಮನು | ಧುರದಿ ಸೋಲಿಸು ಎನಲು ಕೇಳುತ |
ಸುರಪಸುತ ನಸುನಗುತಲೆಂದನು | ಚರರಿಗಂದು || ೪೧೦ ||

ನೀವು ವೀರರು ಸಮರದೊಳು ಇ | ನ್ನಾವ್ ನಪುಂಸರು ಧುರದೊಳೆಮ್ಮಯ |
ಭಾವವನು ತಾಳ್ಯೆನುತಲೆಚ್ಚನು | ತೀವಿದಲಗ || ೪೧೧ ||

**ವಾರ್ಧಕ**

ಸರಳಿರಿತದಿಂ ಭಟರು ಧರಣಿಯಲಿ ಕೆಡಹೆ ಮ |
ತ್ತಿರದೆ ಸೈಂಧವ ಶಲ್ಯನೊಡನೈದು ಸಾವಿರವ |
ತರಣಿಜಾತನೊಳೆಂಟು ಸಾವಿರವ ಕೆಡಹಿದಂ ಗುರು ನದೀಜರ ಬಳಿಯೊಳು ||
ಧುರದಿಂ ಸಹಸ್ರಂಗಳಿಂ ಕೆಡಹಿ ಗುರುಸುತನ |

ಕರದ ಧನುವಂ ಕೆಡಹಿ ದುರ್ಯೋಧನಾದಿಗಳೊ |
ಳರಸುಬಲದೊಳು ಹತ್ತು ಸಾವಿರವ ಕೆಡಹಿದಂ ಸುರಪಸುತನುಂ ರಣದಲಿ || ೪೧೨ ||

**ಕಂದ**

ಈ ಪರಿಯಿಂದಾ ಸೈನ್ಯವ |
ನಾ ಪಾರ್ಥಂ ಸವರಿದುದನು ತಾ ಕಾಣುತ್ತಂ ||
ಕೋಪದೊಳಶ್ವತ್ಥಾಮಂ |
ತಾ ಪಂಥದಿ ಬಂದು ಮತ್ತಿನಜಾತಂಗೆಂದಂ || ೪೧೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನು ಕರ್ಣ ಮಹಾಪರಾಕ್ರಮಿ | ನೀನಿರಲು ಕೌರವನ ಸೈನ್ಯಕೆ |
ಹಾನಿಯುಂಟೇ ಎಂದು ಕೇಳ್ದ ನಿ | ಧಾನದಿಂದ || ೪೧೪ ||

ತುರುವ ಮರಳಿಚಿದನು ಬಲೌಘವ | ನರಿದ ಪಾರ್ಥನು ಬಿಟ್ಟೆ ಯಾತಕೆ |
ದೊರೆಯಲಾ ಕೌರವನು ನೀ ನಿ | ಷ್ಕರುಣಿಯಾದೈ || ೪೧೫ ||

ಧುರದೊಳರಿಗಳನೆಲ್ಲನೀಕ್ಷಣ | ಭರದಿ ಸವರುವೆನೆಂದೆನುತ್ತಲು |
ಬ್ಬರದ ಮಾತಿನ ಮೇಲೆ ಬಾಚಿದೆ | ಸರುವವನ್ನು || ೪೧೬ ||

ನಾಯ್ಗಳಂದದಿ ನೀನು ಸುಮ್ಮನೆ | ಬಾಯ್ಗೆ ಬಂದುದ ಬಗುಳಿದೆಯಲಾ |
ಸೂರ್ಯನಾತ್ಮಜ ಕರ್ಣ ನೀನೇ | ಶೌರ್ಯನಹುದೋ || ೪೧೭ ||

**ಭಾಮಿನಿ**

ಗುರುತನುಜನೆಂದುದನು ಕೇಳುತ |
ತರಣಿಜಾತನು ಕೋಪದಿಂದಾ |
ಶರಧನುವ ಪಿಡಿದಾಗ ನಿಂದನು ಸಿಂಹನಾದದಲಿ ||
ಸುರಪಜಾತನೆ ನಿಲು ನಿಲಿತ್ತಲು |
ಗುರುನದೀಜರೊಳ್ ಸಮರವ್ಯಾತಕೆ |
ಶಿರವನರಿವೆನು ನಿನ್ನ ನೀ ಕ್ಷಣವೆನಲು ನರನುಡಿದ || ೪೧೮ ||

**ರಾಗ ಶಂಕರಾಭರಣ ಮಟ್ಟೆತಾಳ**

ಶಿರವನರಿವೆ ಕರ್ಣ ನೀನು | ಕುರುನೃಪಾಲ ಸೈನ್ಯದೊಳಗೆ |
ಧುರಸಮರ್ಥನಹುದೊ ನಿನ್ನ | ಶಿರವನೀ ಕ್ಷಣ
ಬಲಿಯ ಕೊಡುವೆ ಭೂತಗಣಕೆ | ತಳುವದೀಗ ನಿಲ್ಲು ರಣದೊ |
ಳಳುಕದೋಡದಿಹುದು ಪಿಂತೆ | ಕಲಿತ ವಿದ್ಯದಿ || ೪೧೯ ||

ಎನಲು ಕೇಳುತಾಗ ಕರ್ಣ | ಧನುವನೊದರಿಸುತ್ತ ನರನೊ |
ಳನುವರಕ್ಕೆನಿಂದು ನುಡಿದ | ಕಿನಿಸಿನಿಂದಲಿ
ಮನದಿ ಪಾರ್ಥ ಬೆಚ್ಚಬೇಡ | ದಿನಪಜಾತ ಬಂದೆ ನಾನು |
ಕಣೆಯ ಕಳುಹು ನಿಲ್ಲೆನುತ್ತ | ಕನಲುತೆಚ್ಚನು  || ೪೨೦ ||

ಎಚ್ಚಶರವ ನರನು ನಡುವೆ | ಕೊಚ್ಚಿ ಕರ್ಣಗೆಸೆಯೆ ಸರಳು |
ಮುಚ್ಚಿಕೊಂಡನವನು ತನುವ | ಬೆಚ್ಚದಿರೆನೆ ||
ಚುಚ್ಚಿ ರುಧಿರಸಹಿತ ಕರುಳ | ಕಚ್ಚಿ ಪಾಯ್ದ ಸರಳುಗಳನು |
ಬಿಚ್ಚಿ ಕಂಗಳರುಣ ಕಾರು | ತಚ್ಚರೀಯೊಳು  || ೪೨೧ ||

ಕೆರಳಿ ಕರ್ಣನವನ ಶರವ | ತರಿವುತೆಸೆಯೆ ಪಾರ್ಥನೆಂಬ |
ತರಣಿಬಿಂಬವಡಗಿತವನ | ಸರಳಮೋಡದಿ |
ಭರದಿ ಮುಗಿಲನೊಡೆವುತೇಳ್ವ | ಸರಸಿಜಾಪ್ತನಂತೆ ಪಗೆಯ |
ಶರವನೊರಸಿ ಪಾರ್ಥನೆಚ್ಚ | ನುರು ಮಹಾಸ್ತ್ರದಿ || ೪೨೨ ||

ತರಣಿಬಿಂಬ ಒಡೆವ ತೆರದಿ | ಭರದಿ ಬಂದುದಾಗ ಕರ್ಣ |
ಇರುವೆಯಂದದಿಂದ ಮೈ | ಯುರಿಸಿ ಕೀಲಿಸಿ |
ಸುರಪಜಾತನೆಚ್ಚ ಶರವ | ತರಣಿಜಾತ ಖಂಡಿಸಿ ಮ |
ತ್ತಿರದೆ ಶರವನೆಚ್ಚು ಫಲುಗು | ಣನ್ನ ಮುಸುಕಿದ  || ೪೨೩ ||

ದುರಿಯೋಧನನು ಕಂಡ ಭಳಿರೆ | ತರಣಿಜಾತ ಮಡಿದನೆಂದು |
ಒರೆದ ಭಟನದಾವ ಬಾಯ | ನಿರದೆ ಹೊಯ್ಸನೆ
ಧುರಸಮರ್ಥನಾಗ ಬಹಳ | ಶರವನೆಲ್ಲ ತರಿದು ಮತ್ತೆ |
ಧನುವ ಕೊಂಡು ಪಾರ್ಥನೆಚ್ಚ | ನುರುಮಹಾಸ್ತ್ರವ || ೪೨೪ ||

ತುರಗವಳಿದು ವರ ವರೂಥ | ಮುರಿದು ಚಾಪವುಡಿದು ಮೌನ |
ವೆರೆಸಿ ವಿರಥನಾಗೆ ಕರ್ಣ | ತಿರುಗೆ ಕಾಣುತ
ಗುರುತನೂಜನದನು ಕಂಡು | ಜರೆದು ನುಡಿದನೆಲವೊ ಕರ್ಣ
ಧುರದಿಕಾದಿ ಪಾಯ್ವೆ ಸಮರ | ಸಹಸಿಯಹುದೆಲೈ || ೪೨೫ ||

**ಭಾಮಿನಿ**

ಗುರುಸುತನು ತಾನೀ ಪರಿಯೊಳಾ |
ತರಣಿಜಾತನ ಜರೆಯೆ ಕಾಣುತ |
ಗಿರಿಜೆಧವಸುತನಾಗ ನಿಂದನು ಸಮರಕನುವಾಗಿ ||
ಧುರದೊಳಗೆ ನಾವ್ ಕಾದುವರೆ ವಿ |
ಪ್ರರಿಗಧಟುತನವೆಲ್ಲಿಹುದು ನೀ |
ತರಣಿರಜನ ಗೆಲಿದಾ ಪರಾಕ್ರಮವೊಡನೆ ತೋರೆಂದ || ೪೨೬ ||

**ರಾಗ ಭೈರವಿ ಮಟ್ಟೆತಾಳ**

ವಂದನಂ ಬಿನ್ನಹ ಮಾಳ್ಪೆ | ಇಂದು ನಿಮ್ಮೊಳು ||
ನಿಂದು ಕಾದಿ ಧುರದಿ ನಿಮ್ಮ | ಜೈಸಲಾಪೆನೆ || ಪ ||

ಧುರದೊಳ್ ನಿಮ್ಮ ವಿಶಿಖಗಳನು | ಆನಲಾಪೆನೆ ||
ಕರುಣದಿಂದ ರಕ್ಷಿಸೆಂ | ದೆನುತಲೆಚ್ಚನು || ೪೧೭ ||

ಎಚ್ಚ ಶರವನಾಗ ದ್ರೋಣ | ಕೊಚ್ಚಿ ಬಿಸುಟನು ||
ಮತ್ತೆ ಪಾರ್ಥಗೊಂದು ಶರವ | ನೆಚ್ಚ ದ್ರೋಣನು || ೪೧೮ ||

ಸುರಪಜಾತನದರಕಂಡು | ಭೇದಿಸಿದನು ||
(ನರನು ನಗುತಲೊಂದು ಶರದಿ | ಸಾರಥಿಯನು ||)
ಭರದಿನೋಯಿಸಲ್ಕೆ ತೆರಳ್ದ | ಗರಡಿಯಧಿಪನು ||
ತಂದೆ ಸೋತುದನ್ನು ಕಂಡು | ಕಂದ ಕೋಪದಿ |
ನಿಂದು ನುಡಿದನಾಗ ಇಂದ್ರ | ಸುತಗೆ ಗಾತದಿ || ೪೧೯ ||

**ಭಾಮಿನಿ**

ಧುರದಿ ತಾತನ ಗೆಲಿದೆ ತರಣಿಜ |
ಚರರ ಸವರಿದೆ ತನ್ನೊಳಿದಿರಾ |
ಗಿರದೆಯೆನುತತಿ ಖಾತಿಯಿಂದಸ್ತ್ರವನು ಗುರುಸುತನು ||
ತರಣಿಜಾತನ ತನುಜನನು ಜನ |
ಭರದಿ ಭೇದಿಸೆ ಧನುವಿಡಿದು ಉರು |
ತರದ ಶರವನು ಕಂಡು ಫಲುಗುಣನೆಚ್ಚ ಪ್ರತ್ಯಸ್ತ್ರ || ೪೨೦ ||

**ರಾಗ ಪಂತುವರಾಳಿ ಮಟ್ಟೆತಾಳ**

ಸುರಪಸುತನ ಶರವನಾಗ ಕೋಪದಿಂದಲೆ |
ಭರದಿ ಸೇದಿ ಶರವನೆಚ್ಚ ಗುರುತನೂಜನು || ೪೨೧ ||

ಭರದಿ ಖಂಡಿಸಿದನು ಸವ್ಯಸಾಚಿ ರೋಷದಿ |
ಸುರರು ಮೆಚ್ಚಲಾಗಸದಿ ಕಾದಿದರು ರೋಷದಿ || ೪೨೨ ||

ಸರಳು ಸೇರೆ ಗುರುತನೂಜನಾಗ ಮೌನದಿ |
ತಿರುಗೆ ಕಂಡು ಕೃಪನು ನಿಂದ ಮನದ ಹರುಷದಿ || ೪೨೩ ||

ಗುರು ತನುಜನ ಗೆಲಿದೆನೆಂದು ಹರುಷ ಬೇಡೆಲಾ |
ಧುರದಿ ಧೀರನಾದರೆನ್ನ ಇದಿರು ನಿಲ್ಲೆಲಾ || ೪೨೪ ||

ನೀವು ಗುರುಗಳ್ ನಿಮ್ಮೊಳಾನು ಆನಲಾಪೆನೆ |
ಕಾವುದೆನ್ನನೆಂದೆನುತ್ತ ನಗುತಲೆಚ್ಚನು || ೪೩೫ ||

ಎಚ್ಚ ಶರವ ಖಂಡಿಸಿದನು ಕೃಪನು ನಗುತಲೆ |
ಮುಚ್ಚಿದನು ಶರೌಘದಿಂದ ನರನನಾಗಳೆ || ೪೩೬ ||

ಕೆರಳಿ ವಿಜಯನರ್ಧಚಂದ್ರ ಶರದೊಳವನನು |
ವರವರೂಥ ಹಯವ ಕರದ ಧನುವ ಕಡಿದನು || ೪೩೭ ||

**ಭಾಮಿನಿ**

ಧರಣಿಪತಿ ಕೇಳಿಂತು ಕೃಪನನು |
ವಿರಥನಂ ಮಾಡುತಿರೆ ಮೌನದಿ |
ಸುರಪಸುತನಾ ಧುರದಿ ಪಾಯ್ದುದು ಸೇನೆ ನಿಮಿಷದಲಿ ||
ವರನದೀಜನು ಬಂದು ಪಾರ್ಥನ |
ನುರವಣೆಯ ತಡೆದಾಗ ಸೈನಿಕ |
ವೆರಸಿ ಬೆಂಬಲವಾಗೆ ಭೀಷ್ಮನು ನುಡಿದ ಫಲುಗುಣಗೆ || ೪೩೮ ||

**ಕಂದ**

ಅಕ್ಷೌಹಿಣಿ ಬಲವಳಿದುದ |
ನೀಕ್ಷಿಸುತತಿರಥರ ಮನದ ದುಗುಡವನಾಗಳ್ ||
ರಕ್ಷಿಸಬೇಕೆನುತಲಿ ಘಾ |
ಲಾಕ್ಷನ ತೆರದೊಳ್ ಭೀಷ್ಮಂ ನರನೊಡನೆಂದಂ || ೪೩೯ ||

**ರಾಗ ಮಾರವಿ ಅಷ್ಟತಾಳ**

ಭಳಿರೆ ಪಾರ್ಥನಹುದೊ ಲೋಕ | ದೊಳಗೆ ಖ್ಯಾತನಾದೆ ಕಂದ |
ಕಲಹದಲ್ಲಿ ಗುರುಮುಖ್ಯರನು | ಗೆಲಿದೆ ಇನ್ನೇನು || ೪೪೦ ||

ಕಿರಿದು ಸತ್ತ್ವದವರು ನಾವು | ಪರಿಕಿಸೆಮ್ಮಸರಳನೆಂದು |
ಸರಳ ವೃಷ್ಟಿಗರೆದನೆಂಬಂ | ತಿರದೆ ಭೀಷ್ಮನು || ೪೪೧ ||

ತರಿದು ಪಾರ್ಥನಾಗಳೆಂದ | ಧುರಕೆ ನಿಮ್ಮೊಳಾಳೆ ನಾನು |
ಕರುಣವೊಂದಿದ್ದರೆ ನಮಗೆ | ಸರಿಯು ಬಪ್ಪುದು || ೪೪೨ ||

ಚರಣಕೆರಗುತಾಗ ಪಾರ್ಥ | ಶರಧನುಗಳ ಪಿಡಿದುಕೊಂಡ |
ಸರಳನೆಸೆದ ಭೀಷ್ಮನಂಗ | ಕಿರದೆ ನಗುತಲೆ || ೪೪೩ ||

**ವಾರ್ಧಕ**

ಸುರಪನಂದನನೆಚ್ಚ ಬಾಣಮಂ ತರಿದು ಮ |
ತ್ತಿರದೆ ಗಾಂಗೇಯನುತ್ತರಗೆರಡು ಶರವೆಸೆದು |
ವರಕಪಿವರಂಗೈದು ಶರವೆಚ್ಚು ಚೂಣಿಯೊಳ್ ಕಿನಿಸಿನಿಂದಾಕ್ಷಣದೊಳು ||
ನರನ ಕವಚವ ಮೂರು ಬಾಣದಿಂ ತರಿಯೆ ಕಪಿ |
ವರನು ನೆನೆದಂ ರಾವಣೇಶ್ವರನ ಹಾಯೆಂದು |
ತ್ತರ ಮೂರ್ಛೆಯೊಳಗಿದ್ದನದ ಕಂಡು ಫಲುಗುಣಂ ಸೆರಗಿನಿಂದಲಿ ಬೀಸಿಯೆ || ೪೪೪ ||

ಭರದಿ ಮೂಗಿನ ಬೆರಳನಾಡಿಸುತ್ತಲೆ ಪಾರ್ಥ |
ವರ ಮತ್ಸ್ಯಕುವರನನ್ನೆತ್ತಿ ತಾನೆಂದನೆಲೆ |
ತರಳ ಸರಳೊಂದು ನಿನ್ನಯ ಮೈಯೊಳ್ ನಾಟಿದಲ್ಲದೆ ಮೂರ್ಛೆಯೊಳ್ ಬಿದ್ದೆಯ ||
ಧುರದಸ್ತ್ರ ಬಪ್ಪುದಂ ಕಂಡು ಕಣ್ಣೊಡೆದು ನಾ |
ಧರೆಯೊಳುಂ ಬಿದ್ದೆನ್ನೈ ಕೊಂಬೆ ನೀನೆನ್ನ ನೆಂ |
ದರೆ ಪಾರ್ಥ ಸಂತಯ್ಸಿ ಮತ್ತಿರದೆ ರಥವೇರಿ ಧನುಶರವ ಝೇಗೈದನು || ೪೪೫ ||

**ರಾಗ ಶಂಕರಾಭರಣ ಮಟ್ಟೆತಾಳ**

ನಿಂದು ರೋಷದಿಂದಲೀರೈದು ಶರವನು |
ಗಂಗೆಸುತನ ಸಮ್ಮುಖಕ್ಕೆಸೆದ ನಾತನು || ೪೪೬ ||

ನೊಂದು ಮುಂದುಗೆಟ್ಟ ಭೀಷ್ಮನಾಗ ಖತಿಯೊಳು |
ನಿಂದು ಆರು ಶರವನೆಚ್ಚು ಖಂಡಿಸಿದನು || ೪೪೭ ||

ಭರದೊಳಂಬುವೈದಿ ನರನ ಫಣೆಗೆ ನಾಂಟಲು |
ದುರುದುರಿಸಿ ರಕ್ತದರುಣಮಯವದಾಗಲು || ೪೪೮ ||

ನೊಂದು ಪಾರ್ಥನೆಚ್ಚನಾಗ ಮಹಾಶರವನು |
ಕಂಡು ಭೀಷ್ಮ ಕೋಪದಿಂದ ಖಂಡಿಸಿದನು || ೪೪೯ ||

ಸುರಪಜಾತನೆಚ್ಚನಾಗ ಅಗ್ನಿಶರವನು |
ಸುರನದೀಜ ವರುಣಬಾಣ ಪಸರಿಸಿದನು || ೪೫೦ ||

ರೋಷದಿಂದಲಾಗ ಬಹಳ ಶಸ್ತ್ರವೆಸೆದನು |
ಗಾಸಿ ಮಾಡಿ ಛೇದಿಸಿದನಾಗ ಭೀಷ್ಮನು || ೪೫೧ ||

**ವಾರ್ಧಕ**

ಸರಳಿರಿತಘಾತಿಯಿಂದುರೆ ನೊಂದು ಭೀತಿಯಿಂ |
ತರಹರಿಸಿದುತ್ತರಂ ಬಸಿದು ಮೈನೆತ್ತರಂ |
ಪಿರಿದಾಗಿ ಬೆದರಿದಂ ಮೇಲೆ ಕಪಿಯೊರಲಿದಂ ನದೀಜಾರ್ಜುನರ ಧುರದೊಳು ||
ಮರಳಿ ಘನ ಕೋಪದಿಂ ಗಾಂಡೀವಚಾಪದಿಂ |
ಶರವನೆಸೆದಂ ನರಂ ಪೊಸತಾದುದೀ ಧುರಂ |
ಪರಿಕಿಸುವಡರಿಯದಾ ಮೂಜಗಂ ತಲ್ಲಣಿಸೆ ಅಮರಪತಿ ನಸುನಗುತಲೆ || ೪೫೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿರೈ ದಿಗುಪಾಲಕರು ಗಾಂ | ಗೇಯ ಫಲುಗುಣರುಗಳ ಧುರವನು |
ಧೀರರಿವರೆಂದೆನುತ ಸುರಪತಿ | ನುಡಿದನಾಗ || ೪೫೩ ||

ಈತಗಳು ಮುನ್ನುದಿಸೆ ಧರೆಯಲಿ | ಸೀತೆ ವನದಲಿ ನವೆಯುತಿರ್ದಳೆ |
ಭೂತಳವ ಖಳ ಕೊಂಡುಪೋಪನೆ | ಎನಲು ಸುರರು || ೪೫೪ ||

ಇತ್ತ ಫಲುಗುಣ ನಗುತಲೆಂದನು | ಉತ್ತರನೆ ಕೇಳೆಲವೊ ಭೀಷ್ಮನು |
ಕಾರ್ತವೀರ್ಯಾರಿಯನುಗೆಲಿದಸ | ಮರ್ಥನಿವನು || ೪೫೫ ||

ಮುನಿದು ಮಲೆತರೆ ಧುರದೊಳಿವನನು | ಗೆಲುವ ಬಗೆಯೆನಗಿಲ್ಲ ಈತನು |
ಕರುಣದಲಿ ಕಾದಿದನು ಎಂದೆನು | ತಿರಲಿಕಾಗ || ೪೫೬ ||

**ರಾಗ ಭೈರವಿ ಏಕತಾಳ**

ಸುರರಚ್ಚರಿಪಡುತಿರಲು | ಧುರ | ಸರಿಸಮನಾಗುತ ಬರಲು |
ಭರದಿಂ ಪತ್ತುಂಬಿನಲಿ | ನರ | ನಿರದೆಚ್ಚನು ಕೋಪದಲಿ || ೪೫೭ ||

ಶರಹತಿಯಿಂದೆದೆ ಬಿರಿಯೆ | ಕಣ್ | ತಿರುಗಿ ಭೀಷ್ಮನು ಮೈ ಮರೆಯೆ |
ಪರಿಕಿಸಿ ಬಲ ಮೊರೆಯಿಡಲು | ಕೇ | ಳ್ದರಸನು ತಾನೆ ಭರದೊಳು || ೪೫೮ ||

ನಡೆದು ಧುರಕೆ ಪಾರ್ಥನಲಿ | ತಾ | ನುಡಿದನು ಘನ ಗರ್ವದಲಿ |
ಫಡ ಫಡ ನರ ಮೈದೋರು | ಬಿಲ್ | ಪಿಡಿ ಕೈ ಚಳಕವ ತೋರು || ೪೫೯ ||

ಅಡವಿಯಲ್ಲದೆ ನಿಮಗಿನ್ನು | ನಾ | ಕೊಡುವೆ ಸಮರಭೂಮಿಯನು |
ಬಿಡು ಬಾಣವನೆಂದೆನುತ | ನೃಪ | ನುಡಿಯಲು ನರ ನಸುನಗತ || ೪೬೦ ||

ನಿಲು ನಿಲು ಕುರುಪತಿ ನೀನು | ಕರೆ | ಕಲಿಕೆಯ ಜೂಜಿನವರನು |
ಕಲಹದಿ ನಿನ್ನುದರವನು | ಬಗಿ | ದಿಳೆಯಾಳುವೆ ನೋಡಾನು || ೪೬೧ ||

ಎನುತೆರಡಂಬಿಲಿ ನೃಪನ | ಉರ | ವನು ಕೀಲಿಸಲಿಂದ್ರಜನ ||
ಮೊನೆಗಣೆಗರಸ ಮೈ ಮರೆದ | ತೇ | ರನು ಸಾರಥಿ ತೊಲಗಿಸಿದ || ೪೬೧ ||

**ವಾರ್ಧಕ**

ಮರಳಿದ ವರೂಥಮಂ ಪರಿಕಿಸಿ ಧನಂಜಯಂ |
ಜರೆಯೆ ಕೇಳ್ದಾ ನೃಪಂ ತಿರುಗಿದಂ ಕೋಪದಿಂ |
ಭರದಿ ಕೂಡಿತು ಮತ್ತೆ ಶರಧಿಗೆಣೆಯೆನೆ ಬಲಂ ಮೊರೆಯೆ ಬಹು ವಾದ್ಯಂಗಳು ||
ಗುರು ಭೀಷ್ಮ ಕೃಪ ಕರ್ಣರುರುತರಾಸ್ತ್ರಂಗಳಿಂ |
ನರನ ರಥಮಂ ಮುಸುಕೆ ತರಿವುತ ಶರಂಗಳಿಂ |
ಕೆರಳಿ ಸಮ್ಮೋಹನಾಸ್ತ್ರವ ತೆಗೆದು ವೈರಿಮೋಹರಕೆಚ್ಚನಾ ಪಾರ್ಥನು || ೪೬೨ ||

**ರಾಗ ಭೈರವಿ ತ್ರಿವುಡೆತಾಳ**

ಎಸೆಯೆ ಸಮ್ಮೋಹನದ ಶರವನು | ಪಸರಿಸಿತು ಪರಸೈನ್ಯದಲಿ ಭಟ |
ರುಸಿರಿಡುತಲೊರಲುತ್ತ ನಿದ್ರೆಯ | ಮುಸುಕಿನಲಿ ಮೈಮರೆದು ಗಜಹಯ |
ವಿಸರಸಹಿತೊರಗಿದರದೇಂ ಸಾ | ಹಸಿಯೊ ಪಾರ್ಥನೆನುತ್ತ ಸುರಪತಿ |
ಹೊಸಹರೆಯದಬಲೆಯರ ಕರದಿಂ | ಕುಸುಮವೃಷ್ಟಿಯ ಕರೆದರಾಲಿಸು |
ಭೂಪ ನೀನು | ನರನ ಪ್ರ | ತಾಪವನ್ನು || ೪೬೪ ||

ಬಲು ಭಟರು ಸಹ ಮಲಗೆ ಕಾಣುತ | ಫಲುಗುಣನು ಮತ್ಸ್ಯಜನೊಳವದಿರ |
ಸುಲಲಿತಾಭರಣಗಳ ತೆಗೆಯೆನೆ | ಇಳಿದು ರಥದಿಂ ಕೌರವಾದ್ಯರ |
ತಲೆಯ ಮುಕುಟವ ಕೊಂಡು ಭೂಷಣ | ಗಳನು ತೆಗೆದವನದರೆ ತೇರನು |
ಬಳಿಕ ತಮ್ಮಾಯುಧವ ಮುನ್ನಿನ | ವೊಲು ಮರದೊಳಿರಿಸಿದ ವಿಜಯ ಕೇಳ್ |
ಭೂಪ ನೀನು | ನರನ ಪ್ರ | ತಾಪವನ್ನು || ೪೬೫ ||

**ವಾರ್ಧಕ**

ಎಲೆ ಭೂಪ ಲಾಲಿಸೈ ಪಾರ್ಥಂ ಮಹಾರಥವ |
ನಿಳಿದು ಮುನ್ನಯ್ತಂದ ರಥಮೇರ್ದು ತಿರುಗಿದಂ |
ಬಳಿಕಿತ್ತಲೆದ್ದು ಕೌರವ ಮಾನಭಂಗದಿಂ ಮರಳಿದಂ ನಿಜನಗರಿಗೆ ||
ಫಲುಗುಣಂ ಬರುತೆಂದನುತ್ತರನೊಳರಿಗಳಂ |
ಗೆಲಿದೆನೆಂದಟ್ಟು ದೂತರನಯ್ಯನೆಡೆಗೆಮ್ಮ |
ತಿಳುಹದಿರೆನಲ್ ಮರುಗುತವನುಸಿರ್ದಡಾಂ ಪೇಳ್ವೆನೆನಲಟ್ಟಿದಂ ಭಟರನು || ೪೬೬ ||

ಇಳೆಯಧಿಪ ಮತ್ಸ್ಯನಿತ್ತಂ ಮನೆಗೆ ಬಂದು ಬಲು |
ಗಲಹವಾರ್ತೆಯನರಿತು ಸುತನ ಯೋಚಿಸುತಿರಲ್ |
ಗೆಲಿದರಿಗಳನ್ನುತ್ತರಂ ಬರ್ಪ ನೀನಿದಿರ್ ಕೊಳಲೇಳೆಂದುಸಿರೆ ಚರರು ||

ನಲಿದು ಮತ್ತಾನೃಪಂ ಕಂಕನೊಳ್ ದ್ಯೂತದಿಂ |
ಕುಳಿತಣುಗನರಿಗಳಂ ಗೆಲಿದನೆನೆ ಸೂತನಿಂ |
ಗೆಲವಾಯಿತೆಂದಿವಂ ವಾದಿಸಲ್ ನೃಪತಿ ಕನಕದ ಸಾರಿಯಿಂದಿಟ್ಟನು || ೪೬೭ ||

ಪಣೆಯೊಡೆದು ಸುರಿವ ರುಧಿರಕೆ ಕರವನೊಡ್ಡಿ ಯಮ |
ತನುಜನಿನಿಯಳನೀಕ್ಷಿಸಲ್ಕೆ ಸೆರಗಿಂದಲಾ |
ವನಿತೆ ನೃಪತಿಯ ಲಲಾಟವನೊತ್ತಿ ಶೋಣಿತಂ ಧರೆ ಗಿಳಿಯದಂತೆ ಪಿಡಿಯೆ ||
ಮನದಿ ಮತ್ಸ್ಯಂ ಸಂಶಯದೊಳಗಿರಲಿತ್ತಲುಂ |
ತನುಜನೈತಹ ವಾದ್ಯಘೋಷಮಂ  ಕೇಳ್ದು ಮ |
ತ್ತಣುಗನಂ ಕಾಂಬ ಕಡುತವಕದಿಂದಂ ಮರೆದನಾಗಲಾ ಸಂಶಯವನು || ೪೬೮ ||

ಅರಸ ಕೇಳಿತ್ತಲುತ್ತರನಧಿಕ ದುಗುಡದಿಂ |
ದರಮನೆಗೆ ಬರೆ ಕಂಡು ಮತ್ಸ್ಯನತಿ ತೋಷದಿಂ |
ಧುರದಿ ಭೀಷ್ಮಾದ್ಯರಂ ಗೆಲಿದೆಯೇನೆನೆ ತೋರ್ಪೆ ಗೆಲಿದವನನುದಯಕೆನುತ ||
ತರಳನಾಲಯಕಯ್ದಲಾ ದಿನಂ ಪಾಂಡವರು |
ಹರುಷದಿಂದಿರ್ದುದಯದೊಳ್ ತಮ್ಮ ನಿಜವನುಂ |
ಧರಣಿಪ ವಿರಾಟನಿಗೆ ತೋರಿಸಿಯೆ ಸಂತೋಷಜಲಧಿಯೊಳು ಮುಳುಗಿಸಿದರು || ೪೬೯ ||

ಮತ್ತೆ ಮುರರಿಪುವಂ ಬರಿಸಿ ತತ್ಪುರಕೆ ಮತ್ಸ್ಯ |
ನಿತ್ತಣುಗೆಯಂ ಪಾರ್ಥಸುತಗೆ ಸತಿಯೆನಿಸಿ ಪುರು |
ಷೋತ್ತಮನ ಕರುಣದಿಂದಾ ನಗರದೊಳ್ ಪಾಂಡುಸುತರಿರ್ದರನುವರವನು ||
ಚಿತ್ತದೊಳ್ ಬಯಸುತೆಲೆ ಜನಮೇಜಯನೆ ಲಾಲಿ |
ಸುತ್ತಮರ ಚರಿತೆಯಂ ಪೇಳ್ದೆ ನಾ ನಿನಗೆ ಮನ |
ವಿತ್ತು ಕೇಳುವ ಪುರುಷರನು ಪೊರೆವನನುದಿನಂ ಸತ್ಯಭಾಮಾರಮಣನು || ೪೭೦ ||

ಇಂತಾ ನೃಪಂಗೆ ವೈಶಂಪಾಯಮುನಿವರಂ |
ಸಂತೋಷದಿಂದೊರೆದ ಕಥನವಧರಾಮರರ |
ಸಂತತಿಯೊಳುದಯಿಸಿ ಪೆಸರ್ವಡೆದ ರಾಮಾತ್ಮಜಂ ವಿಷ್ಣುವೆಂಬಣುಗನು ||
ಕಂತುಸಂಹಾರನಂ ನೆನೆದೆಕ್ಷಗಾನದೊಳ್ |
ತಾಂ ತವಕದಿಂದುಸಿರ್ದಮರಚರಿತವ ಕೇಳ್ದ |
ವಂ ತಿಳಿಯದವನೆಂದು ಜರೆಯದೀ ಪುಣ್ಯ ಕಥೆಯಂ ಲಾಲಿಪುದು ಸುಜನರು || ೪೭೧ ||

**ಕಂದ**

ಅಜವಿನುತಂ ಸುಜನನುತಂ |
ಭುಜಗಾಭರಣಂ ಸುರೇಶವಂದಿತಚರಣಂ ||
ಅಜಪುರವಾಸಂ ಈಶಂ |
ಗಜಚರ್ಮಾಂಬರನೆ ಹರನೆ ರಕ್ಷಿಸು ಎಮ್ಮಂ || ೪೭೨ ||

**ರಾಗ ಸೌರಾಷ್ಟ್ರ ಏಕತಾಳ**

ಮಂಗಳಂ ಜಯ ಮಂಗಳಂ || ಪಲ್ಲವಿ ||

ಸುರನುತಚರಣಗೆ ಪುರಹರಗೆ | ಕರುಣಾಕರನಿಗೆ ಶಂಕರಗೆ ||
ಮುರಹರಮಿತ್ರಗೆ ಮನುಮುನಿಸ್ತೋತ್ರಗೆ | ಪರಮೇಶಗೆ ಫಾಲಾಕ್ಷನಿಗೆ || ಮಂಗಳಂ || ೪೭೩ ||

ಇಂದುಧರಗೆ ಕಾಲಾಂತಕಗೆ | ಕಂದುಗೊರಳನಿಗೆ ನಿರ್ಮಲಗೆ |
ಕಂದರ್ಪಾರಿಗೆ ಕಪಾಲಧರನಿಗೆ ನಂದಿವಾಹನಗೆ ದಿಗಂಬರಗೆ || ಮಂಗಳಂ || ೪೭೪ ||

ಉರಗಕುಂಡಲಧಾರಗೆ ಶಿವಗೆ | ಭರಿತವಿನೋದಗೆ ಭರ್ಗನಿಗೆ |
ಸರಸಿಜಭವನಪುರವಾಸಗೆ ಈಶಗೆ | ಗಿರಿಜೇಶನಿಗೆ ಮಹಲಿಂಗನಿಗೆ || ಮಂಗಳಂ || ೪೭೫ ||

*ಎರಡನೆಯ ಸಂಧಿ ಉತ್ತರಗೋಗ್ರಹಣ ಮುಗಿದುದು*
*ಯಕ್ಷಗಾನ ವಿರಾಟಪರ್ವ ಮುಗಿದುದು*

# ಯಕ್ಷಗಾನ ಅಭಿಮನ್ಯು ಕಾಳಗ ಮತ್ತು ಸೈಂಧವ ವಧೆ

## ಪಾತ್ರಗಳು

**ಸಂಧಿ ೧ : ಅಭಿಮನ್ಯು ಕಾಳಗ**

ಧರ್ಮರಾಯ, ದುರ್ಯೋಧನ, ದ್ರೋಣಾಚಾರ್ಯ, ಜಯದ್ರಥ (ಸೈಂಧವ)
ಸಮಸಪ್ತಕರು (ಸಂಶಪ್ತಕರು), ಅರ್ಜುನ, ನಕುಲ, ಸಹದೇವ, ಶ್ರೀಕೃಷ್ಣ
ಸುಭದ್ರೆ, ಲಕ್ಷಣಾದಿಗಳು, ಅಭಿಮನ್ಯು, ಅಭಿಮನ್ಯುವಿನ ಸಾರಥಿ, ಕರ್ಣ
ಶಲ್ಯ, ಕೃಪಾಚಾರ್ಯ, ದುಶ್ಯಾಸನ, ವೃಷಧ್ವಜ, ಭೀಮಸೇನ
ದುಶ್ಯಾಸನ ಕುಮಾರ, ದೇವೇಂದ್ರ, ಚಾರಕರು, ಪುರಸ್ತ್ರೀಯರು, ಅಪ್ಸರಸ್ತ್ರೀಯರು

**ಸಂಧಿ ೨ : ಸೈಂಧವ ವಧೆ**

ಪಾಂಡವರು, ಸುಭದ್ರೆ, ವೇದವ್ಯಾಸರು, ಶ್ರೀಕೃಷ್ಣ, ಜಯದ್ರಥ (ಸೈಂಧವ)
ಚಾರಕರು, ಕೌರವನ ಸಹೋದರರು, ದುರ್ಯೋಧನ, ದ್ರೋಣಾಚಾರ್ಯ
ಶ್ರುತಾಯುಧ, ಸಾತ್ಯಕಿ, ಭೀಮಸೇನ, ಕರ್ಣ, ಭೂರಿಶ್ರವ

# ಯಕ್ಷಗಾನ ಅಭಿಮನ್ಯು ಕಾಳಗ ಮತ್ತು ಸೈಂಧವ ವಧೆ

## ಮೊದಲನೆಯ ಸಂಧಿ : ಅಭಿಮನ್ಯು ಕಾಳಗ

**ರಾಗ ನಾಟಿ ಝಂಪೆತಾಳ**

ಜಯ ಮಹಾಗಣನಾಥ | ಜಯ ರಾಮಸುಪ್ರೀತ |
ಜಯತು ಸದ್ಗುಣಯೂಥ | ಜಯ ಬಹು ಖ್ಯಾತ || ಜಯತು ಜಯ ಜಯತು || ಪ ||

ಗಜನಿಭಾಕೃತಿವದನ | ಘನಯೋಗಿಹೃತ್ಸದನ |
ಅಜಮುಖ್ಯಸುರನಮಿತ | ಅಖಿಲ ಗುಣಭರಿತ ||
ಭುಜಗಭೂಷಣ ದೇವ | ಭುವನಜನಸಂಜೀವ |
ತ್ರಿಜಗಧೀಶಾನಂತ ವರ ಏಕದಂತ || ಜಯತು ಜಯ ಜಯತು || ೧ ||

ವಿಘ್ನಭುಜಗಸುಪರ್ಣ ವಿಮಲ ಶೂರ್ಪಾಕರ್ಣ |
ವಿಘ್ನವಿಪಿನಕುಠಾರ | ವಿಶ್ವಾಧಿಕಾರ ||
ವಿಘ್ನಗಜ ಜೀಮೂತ | ವಿದಳಿತಾಘವ್ರಜ |
ವಿಘ್ನರಾಜ ಮುಕುಂದ | ಸಕಲ ಗುಣವೃಂದ | ಜಯತು ಜಯ ಜಯತು || ೨ ||

ಶರಪುರಸ್ಥಿರವಾಸ | ಶರಭ ಲಿಂಗೋಲ್ಲಾಸ |
ಕರಧೃತಮಹಾಪಾಶ | ಕಲುಷಾಬ್ಧಿನಾಶ |
ಶರಣಜನ ಪರಿಪಾಲ | ನಿರತ ಗಾನವಿಲೋಲ |
ವರದ ಶ್ರೀವಿಘ್ನೇಶ | ವಿನುತಜನ ಪೋಷ | ಜಯತು ಜಯ ಜಯತು || ೩ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಕ್ಷೀರಸಾಗರಕನ್ಯೆ ಲೋಕಪ್ರಸನ್ನೆ ಶ್ರೀ | ಲಕ್ಷ್ಮೀದೇವಿ | ಮುದ್ದು |
ನಾರಾಯಣನುರಚಿಹ್ನೆ ಸನ್ಮೋಹನ್ನೆ | ಲಕ್ಷ್ಮೀದೇವಿ ||
ಭೂರಿ ಸನ್ಮತಿ ಭಾಗ್ಯವಿತ್ತೆನ್ನ ರಕ್ಷಿಸೆ | ಲಕ್ಷ್ಮೀದೇವಿ | ಬಂದು |
ಸೇರಿದೆ ನಿನ್ನಯ ಪಾದಪದ್ಮಂಗಳ | ಲಕ್ಷ್ಮೀದೇವಿ || ೪ ||

**ವಾರ್ಧಕ**

ವರ ಮಹಾಬ್ರಹ್ಮಾಣಿಯಂ ಭುಜಗವೇಣಿಯಂ |
ತರಣಿಶತಸಂಕಾಶೆಯಂ ಸುಜನಪೋಷೆಯಂ |
ಸುರುಚಿರಾಲಂಕಾರೆಯಂ ಶುಭಾಕಾರೆಯಂ ಧೀರೆಯಂ ಗುಣಸಾರೆಯಂ ||
ಶರದಿಂದುನಿಭವಕ್ತ್ರೆಯಂ ಘನಚರಿತ್ರೆಯಂ |

ದುರಿತಸಂತತಿ ಶಮನೆಯಂ ದ್ವಿರದಗಮನೆಯಂ |
ಸರಸವಿದ್ಯಾರೂಪೆಯಂ ಸತ್ಕಲಾಪೆಯಂ ನುತಿಸಿ ಮತಿಯಂ ಪಡೆವೆನು || ៷ ||

ದಶವದನಮದಭಂಗನಂ ಸುವಜ್ರಾಂಗನಂ |
ಅಸಮಕೀರ್ತಿಕಲಾಪನಂ ರೌದ್ರರೂಪನಂ |
ಅಸುರಕುಲವಿಧ್ವಂಸನಂ ಪರಮಹಂಸನಂ ಶಾಂತನಂ ಹನುಮಂತನಂ ||
ವಸುದೇವಜಾಧೀನನಂ ಭೀಮಸೇನನಂ |
ಋಷಿಕುಲಶಿರೋರನ್ನನಂ ಸುಮತಿಪೂರ್ಣನಂ |
ಎಸೆವ ಮಧ್ವಾಚಾರ್ಯನಂ ಗುರುಕುಲಾರ್ಯನಂ ಭಜಿಸಿ ಕೃತಿಯಂ ಪೇಳ್ವೆನು || ೬ ||

ಗಿರಿಜಾವಿಲೋಲನಂ ಶರಣಜನಪಾಲನಂ |
ತರಣಿಶತಭಾಸನಂ ಕರಿಚರ್ಮವಾಸನಂ |
ಉರಗೇಂದ್ರಹಾರನಂ ದುರಿತೌಘದೂರನಂ ತ್ರ್ಯಕ್ಷನಂ ಸ್ಮರಶಿಕ್ಷನಂ ||
ಹರಿಣಾಂಕಚೂಡನಂ ವರವೃಷಾರೂಢನಂ |
ಗುರುಕುಲೋತ್ತುಂಗನಂ ಗಂಗೋತ್ತಮಾಂಗನಂ |
ಶರಪುರಾಧೀಶನಂ ಶರಭಲಿಂಗೇಶನಂ ಸ್ಮರಿಸಿಮತಿಯಂ ಪಡೆವೆನು || ೭ ||

**ಭಾಮಿನಿ**

ಅಜ ಭವಾದಿ ಸಮಸ್ತ ದಿವಿಜ |
ವ್ರಜಕೆ ತಲೆವಾಗುತಲೆ ವಾಣಿಯ |
ಭಜಿಸಿ ಭಕ್ತಿವಿಶೇಷದಲಿ ವ್ಯಾಸರನು ಕೊಂಡಾಡಿ ||
ನಿಜಗುರು ಮರುತ್ಸುತನ ಹೃತ್ಸರ |
ಸಿಜದಿ ನೆಲೆಗೊಳಿಸುತಲೆ ಪಾದಾಂ |
ಬುಜಕೆ ಮಣಿಯುತ ಗುರು ಜನರನಾರಾಧಿಸುತ ಬಿಡದೆ || ೮ ||

**ಕಂದ**

ಶ್ರೀಮತ್ಕುಡುಮಪುರೀಶಂ |
ಸಾಮಜದನುಜಹರಂ ಸರ್ವಾರ್ಥ ಪ್ರದಾತಂ ||
ಕಾಮಿತಫಲವಿಂದೆಮಗಂ |
ಪ್ರೇಮದೊಳಿತ್ತಪುದು ಮಂಜುನಾಥನೆ ದಯದಿಂ || ೯ ||

**ದ್ವಿಪದಿ**

ಗುರು ವಾದಿರಾಜಸ್ವಾಮಿಗಳಡಿಯ ಭಜಿಸಿ |
ವರಪುರಂದರದಾಸರಂಘ್ರಿಗಳ ಸ್ಮರಿಸಿ || ೧೦ ||

ಭೂರಿ ಗ್ರಂಥಗಳಲಿ ವಿಶೇಷದಲಿ ಮೆರೆವ |
ಭಾರತಪುರಾಣದಿ ಕಿರೀಟಿಸುತನೆನುವ || ೧೧ ||

ಅಭಿಮನ್ಯು ಚಕ್ರವ್ಯೂಹವ ಪೊಕ್ಕ ಕಥೆಯ |
ಅಭಿವರ್ಣಿಸುವೆನು ಮೇಲಾದ ಸಂಗತಿಯ || ೧೨ ||

ಕನ್ನಡದ ನುಡಿಗಳಿಂದೆಕ್ಷಗಾನದಲಿ |
ವರ್ಣಿಸುವೆ ಮಧ್ವಪತಿ ಕೃಷ್ಣನೊಲವಿನಲಿ || ೧೩ ||

ಕೇಳಿ ಕವಿ ಜನರು ತಪ್ಪಿರಲು ತಿದ್ದುವುದು |
ಶೀಲ ಗುಣನಿಧಿಗಳವಧರಿಸಿ ಮೆರೆಸುವುದು || ೧೪ ||

**ವಚನ**

ಇಂತೀ ಸಕಲ ಗುರುದೇವ ಋಷಿಕವಿಗಳಂ ಕೊಂಡಾಡುತ್ತ ಸಂತೋಷದಿಂದೀ ಕಥೆಯನುಂ ಪೇಳ್ವೆನದೆಂತೆನೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದಯದಿ ವೈಶಂಪಾಯ ಜನಮೇ | ಜಯಗೆ ಭಾರತಕಥೆಯನೊಲಿದತಿ |
ನಯದಿ ವರ್ಣಿಸುತಿರಲು ಕೇಳುತ | ಪ್ರಿಯದೊಳೆಂದ || ೧೫ |

ಯತಿಕುಲೋತ್ತಮ ಕೇಳು ಪಾರ್ಥನ | ಸುತನು ನಿರುಪಮ ಚಕ್ರವ್ಯೂಹದೊ |
ಳತಿರಥರೊಳವನೆಂತು ಕಾದಿದ | ವಿತರಣದಲಿ || ೧೬ ||

ಚಂಡಭುಜಬಲ ಸೈಂಧವನ ತಲೆ | ಗೊಂಡನೆಂತು ಧನಂಜಯನು ಶ್ರೀ |
ಪುಂಡರೀಕಾಕ್ಷನ ಚರಿತ್ರೆಯ | ಕಂಡುದುಸಿರೈ || ೧೭ ||

ಎಂದು ಭಕ್ತಿಯೊಳರಸನೆನಲಾ | ನಂದದಲಿ ಭೂಪತಿಯ ತಳ್ಕಿಸಿ |
ಸಿಂಧುಶಯನನ ನೆನೆದು ಪೇಳ್ದ ಮು | ನೀಂದ್ರ ಮುದದಿ || ೧೮ ||

**ರಾಗ ಭೈರವಿ ಝಂಪೆತಾಳ**

ರಾಜಾಧಿರಾಜ ಜನ | ಮೇಜಯನೆ ಕೇಳ್ಳೈ ಸ |
ರೋಜಾಕ್ಷಕಥೆ ಕಲ್ಪ | ಭೂಜ ಸಜ್ಜನಕೆ  || ೧೯ ||

ದುರಿತಾಂಬುನಿಧಿಯನು | ತ್ತರಿಸುವಡೆ ನಾವೆಯಿದ |
ಹರಿಸು ನಿಮ್ಮವರ ಶುಭ | ಚರಿತೆಗಳನೊಲಿದು  || ೨೦ ||

ಹರಿಚಮತ್ಕ ತಿಯಿಂದಲಾ | ಧುರದಿ ಭೀಷ್ಮನನು ಸಲೆ |
ಸರಳಮಂಚವ ಮಾಡಿ | ನರನು ಮಲಗಿಸಲು  || ೨೧ ||

ಸುರನದಿಯ ಸುತನ ಕಂ | ಡರಿಭಯಂಕರ ದ್ರೋಣ |
ಗಿರದೆ ಪಟ್ಟವ ಕಟ್ಟಿ | ಕುರುರಾಯನಿರಲು || ೧೧ ||

ವರ ದ್ರೋಣ ಧರ್ಮಜನ | ಸೆರೆವಿಡಿಯೆ ಬಳಿಕ ಸಂ |
ಗರದಿ ಹರಿ ಬಿಡಿಸಿಕೊಂ | ಡರಿಭಟರ ಗೆಲಿದ || ೧೩ ||

ಇಂತಚ್ಯುತನ ದಯದಿ | ಕೌಂತೇಯರಿರಲಿತ್ತ |
ಚಿಂತಿಸಿದ ಕುರುರಾಯ | ನಂತರಂಗದೊಳು || ೧೪ ||

**ರಾಗ ಸಾವೇರಿ ರೂಪಕತಾಳ**

ಏನ ಮಾಡುವುದಿನ್ನು ಪಾಂಡವರ ಸೋಲಿಪಡೆ |
ದಾನವಾಂತಕನವರ್ಗೆ ಸಾರಥಿಯಾಗಿಹನು || ಏನ || ಪಲ್ಲವಿ ||

ಬಲರಾಮನಿಹನೆಂದು ಬಹಳ ಧೈರ್ಯವ ತಾಳ್ದೆ |
ನಿಳೆಯ ಪ್ರದಕ್ಷಿಣೆಯಾಯ್ತುವಗಂದು || || ೧೫ ||

ಛಲದಂಕ ಭೀಷ್ಮಂಗೆ ಸರಳ ಮಂಚವದಾಯ್ತು |
ಬಿಲುಮುರಿದು ವಿದುರನು ಮೊದಲೆ ಜಾರಿದನು || || ೧೬ ||

ಮೊದಲೊಂದು ಬಾರಿ ಕುಂಭದ ಕುವರ ಕಟ್ಟಿದಡೆ |
ಇದಿರಾಗಿ ಯಮಜನ ಯದುಪತಿ ಬಿಡಿಸಿದನು || || ೧೭ ||

ಇದರ ಮೇಲಿನ್ನು ಯತ್ನವ ಕಾಣೆ ಪಾಂಡವರ |
ಕದನದಿ ಗೆಲುವಂಥ ಕಲಿಗಳಾರುಂಟು || || ೧೮ ||

**ಭಾಮಿನಿ**

ಧರೆಯಧಿಪ ಕೇಳಿಂತು ಕೌರವ |
ರರಸ ಚಿಂತಾಭಾರದಲಿ ತರ |
ಹರಿಸುತಿರಲಾ ವೇಳೆಯಲಿ ಕಲಶಜನು ನಡೆತಂದು ||
ಅರುಹಿದನು ಬಲು ಕ್ಲೇಶಲತೆಯನು |
ತರಿದು ಕಳೆ ಸಲೆ ಧೀರನಾಗಿರು |
ಪರಿಕಿಸೆನ್ನ ಪರಾಕ್ರಮಾಂಕುಶ ಮೊನೆಯನೆಂದೆನುತ || ೧೯ ||

**ರಾಗ ಕಾಪಿ ಅಷ್ಟತಾಳ**

ಕುರುಕುಲಾಗ್ರಣಿಯೆ ಕೇಳಯ್ಯ | ನಾಳೆ |
ಪರಿಕಿಸು ತನ್ನಯ ಶೌರ್ಯದ ಬಗೆಯ || ಕುರು || ಪ ||

ಅರ್ಜುನನೊಬ್ಬ ತಪ್ಪಿದರೆ | ಮಿಕ್ಕ | ಧೂರ್ಜಟಿ ಮೊದಲಾದವರೆನಗಿದಿರೆ |
ಊರ್ಜಿತ ಚಕ್ರವ್ಯೂಹವನು | ಮಾಡಿ | ಗರ್ಜಿಸಿ ಕಟ್ಟುವೆ ಧರ್ಮಪುತ್ರನನು || || ೩೦ ||

ಉರಗಭೂಷನ ವರವುಂಟು | ಇನ್ನು | ಸರಿಯಾರು ಸೈಂಧವನೃಪನಿಗೆ ಗಂಟು |
ಸರಕುಮಾಡನು ನಾಲ್ವರನ್ನು | ಕಾ | ದಿರುವನು ಪದ್ಮವ್ಯೂಹದ ದ್ವಾರವನ್ನು || || ೩೧ ||

**ವಾರ್ಧಕ**

ಗರಡಿಯಾಚಾರ್ಯನಿಂತೆನುತ ಘನಶೌರ್ಯಮಂ |
ಕುರುರಾಯನೊಡನುಸಿರುತಾ ಕ್ಷಣವೆ ನಿಲಿಸಿದಂ |
ಕರಿಘಟೆಗಳಂ ಶತಸಹಸ್ರಮಂ ರಥಗಳಯ್ವತ್ತು ಸಾವಿರಗಳೊಡನೆ ||
ತುರಗವಕ್ಷೌಹಿಣಿಗಳಂ ಸಾಲುಸಾಲಿನಿಂ |
ವರಪದಾತಿಗಳಯ್ದು ಲಕ್ಷಮಂ ಪಙ್ಕ್ತಿಯಿಂ |
ಪರುಠವಿಸಿ ಬಾಗಿಲೊಳಗಾ ಜಯದ್ರಥನ ನಿಲ್ಲೆಂದನಾ ದ್ರೋಣನಂದು || ೩೨ ||

**ಭಾಮಿನಿ**

ಅವನಿಪತಿ ಕೇಳಿಂತಬುಜವ್ಯೂ |
ಹವನು ರಚಿಸಲು ಕಾಣುತಾ ಕೌ |
ರವನು ಹಿಗ್ಗಲು ಬಳಿಕ ಸಮಸಪ್ತಕರು ಸಂಗರದಿ ||
ದಿವಿಜಪತಿನಂದನನೊಡನೆ ಕಾ |
ದುವೆವು ಬಿಡೆವೆಂದೆನುತ ಗರ್ಜಿಸ |
ಲವರಿಗಿತ್ತನು ವೀಳೆಯವ ನೃಪ ಹೊನ್ನಬಟ್ಟಲಲಿ || ೩೩ ||

**ರಾಗ ಭೈರವಿ ಆದಿತಾಳ**

ಭರದಿಂ ವೀಳ್ಯವ ಕೊಳುತ | ಹುಂ | ಕರಿಸಿ ಪರಾಕ್ರಮವೆನುತ |
ಕುರುರಾಯನಿಗರುಹಿದರು | ಸಲೆ | ಹರುಷದಿ ಸಮಸಪ್ತಕರು || ೩೪ ||

ಗೋತ್ರಾರಿಯ ನಂದನಗೆ | ಮೊಗ | ವೆತ್ತಲು ಬಿಡೆವೀ ಕಡೆಗೆ |
ಮತ್ತಾ ನಾಲ್ವರಗೆಲಿದು | ನಿ | ನ್ನರ್ತಿಯ ಸಲಿಸಿಕೊ ಒಲಿದು || ೩೫ ||

ತಂದೆಯ ಕೊಂದಾತನನು | ಎಂ | ದೆಂದಿಗು ಬಿಡೆ ವೈರವನು ||
ಮುಂದಾಗುವ ಕಾರ್ಯವನು | ಮಾ | ಡೆಂದು ಕರೆದು ದೂತರನು || ೩೬ ||

ಕೇಳಿರೊ ಭಟರರ್ಜುನಗೆ | ನೀವ್ | ಪೇಳಿರೊ ಸಂಗರದೊಳಗೆ ||
ನೀಲಾಂಗನ ಬಿಟ್ಟೀಗ | ಶಶಿ | ಮೌಳಿಯ ಕರೆಸಿಕೊ ಬೇಗ || ೩೭ ||

ಎಂದಾತನ ಬಳಿ ನಿಂದು | ನೀವ್ | ಕುಂದದೆ ಸೆರಗನು ಪಿಡಿದು ||
ಮುಂದಲಸದೆ ಬಹುದೆನುತ | ಬಲು | ಮಂದಮತಿಗಳಿರಲಿತ್ತ || ೩೮ ||

**ಕಂದ**

ಈ ತೆರವೆಂದುದ ಕೇಳ್ದಾ |
ದೂತರು ನಡೆತಂದರ್ಜುನನಿದಿರೊಳ್ ಭರದಿಂ ||
ಭೀತಿಯನುರೆ ಬಿಟ್ಟಾಗಲ್ |
ಕಾತರದಿಂದುಸಿರಿದರೊಡೆಯರ್ ಬೆಸಸಿದುದಂ || || ೩೯ ||

**ರಾಗ ಮುಖಾರಿ ಏಕತಾಳ**

ಲಾಲಿಸಿ ಕೇಳಿಂದ್ರ ಸಂಜಾತ | ಆಲಸ್ಯ ಮಾಡ | ದೇಳು ಸಂಗರಕೆ ಲೋಕವಿಖ್ಯಾತ || ಪ ||

ನಂದಗೋಪಜನ ಬಿಟ್ಟು ಬೇಗ | ಕರೆಸಿಕೊ ಧುರ | ಕಿಂದು ಮೌಳಿಯ ಬೆಂಬಲಕೀಗ |
ಇಂದು ರಣಾಗ್ರದಿ ಬದುಕಿದರೆಯು ನೀ | ನೆಂದೆಂದಿಗಾದರು ಬದುಕಿದ ಗಡ |
ಮುಂದಪ್ಪುದನೆಲ್ಲ ಶಿವನೇ ಬಲ್ಲ | ನಿಂದಿರು ನಿಂದಿರು ಧೈರ್ಯವ ಕುಂದದೆ || ೪೦ ||

ಗೋವಳ ಸಾರಥಿ ನಿನ್ನ ರಥಕೆ | ಅಡವಿಗಳಲ್ಲಿ | ಜೀವಿಪ ಕಪಿಯು ನಿನ್ನ ಧ್ವಜಕೆ ||
ಈ ವಿಧಿಯೇನೆಂಬೆವು ನಡೆನಡೆ ರಣ | ಕೋವಿದರಿಹರೆಮ್ಮಲ್ಲಿ ನೀನವರೊಳು |
ಜೀವಿಸಿದರೆ ನಿನ್ನವ್ವೆಗೆ ಕುವರನು | ಭಾವಿಸೆನುತ ಮಿಗೆ ಹಿಡಿದರು ಸೆರಗನು || ೪೧ ||

**ಭಾಮಿನಿ**

ಚರರ ನುಡಿಯನು ಕೇಳಿ ನಗುತಲೆ |
ನರನು ಪೇಳ್ದನು ನಲವಿನಿಂದಲಿ |
ಬರುವೆವೈ ಸಂಗರಕೆ ಬೇಕಾದವರನೊಡಗೊಂಡು ||
ಭರದಿ ನಿಮ್ಮೊಡೆಯರಿಗೆ ಸೂಚಿಸಿ |
ತೆರಳಿ ನೀವೆಂದವರ ಕಳುಹಲು |
ಶರದ ಪಂಡಿತನಾಳ್ಗಳೈತಂದೊರೆದರರ್ಜುನಗೆ || ೪೨ ||

**ರಾಗ ಸಾರಂಗ ಅಷ್ಟತಾಳ**

ಕೇಳು ಧರ್ಮಾನುಜಾತ | ಸಂಗರಕೆ ಬೇ | ಗೇಳು ಮೂಲೋಕಖ್ಯಾತ || ಪ ||

ಕಲಿಘಟೋತ್ಕಚಗರಿದು | ಭೀಮನಿಗಸ | ದಳವಾಗಿ ತೋರುವುದು |
ಒಳಹೊಗಲರಿದು ಮಾದ್ರೇಯರಿಗಿಂದಿನ | ನಳಿನವ್ಯೂಹದ ಕೋಟೆಯ ಬಲುಸೇನೆಯ || ೪೩ ||

ಶಿವನೊಳ್ ಬೇಡಿದ ಶರವ | ನೀ ತೆಗೆ ಗಾಂಡೀ | ವವ ಬಾಗಿ ಕುಲದೈವವ |
ತವಕದಿ ಬೇಡಿಕೊ ಅವರಿವರಂತಲ್ಲ | ಅವಗಡಿಸಲು ಗುರುವಿಂಗಿದಿರ್ ಯಾರುಂಟು || ೪೪ ||

**ಭಾಮಿನಿ**

ಅರಸ ಕೇಳರ್ಜುನನ ದೂತರು |
ಜರೆದು ನುಡಿಯಲ್ಕವರ ಕಳುಹುತ |
ಕರವ ಮುಗಿದಸುರಾಂತಕಂಗರುಹಿದನು ಭಕ್ತಿಯಲಿ ||
ಚರಣಚಿತ್ತವದಾವ ತಟ್ಟಿನೊ |
ಳಿರುವದಿಂದಿನ ಸಮರವೆನಲಂ |
ಬುರುಹನಾಭನು ಮನದಿ ನಿಶ್ಚಯಿಸಿದನು ನಸುನಗುತ || ೪೫ ||

**ರಾಗ ಕಾಂಭೋಜಿ ಝಂಪೆತಾಳ**

ಅಳಿಯನೀ ಮೋಹರದೊಳುಳಿದರಿನ್ನವಗೆ ಮುಂ | ದಳಿವಿಲ್ಲ ಕಲಿಯುಗದೊಳೆನುತ ||
ತಿಳಿದು ಫಲುಗುಣಗೆಂದನೇಳು ಸಮಸಪ್ತಕರೊ | ಳಳವಿಗೊಡಲಿಂದು ಬೇಗದಲಿ || ೪೬ ||

ಬಗೆವನೇ ನಿನ್ನಯ ಕುಮಾರನೀ ಸಮರವನು | ತೆಗೆಯದೇತಕೆ ಭಂಡತನವು ||
ಹಗಲರಸನಾರೋಗಣೆಗೆ ಸೊಡರು ಬೇಕೆ ಮಿಗೆ | ಖಗರಾಜನಂಜುವನೆ ಫಣಿಗೆ || ೪೭ ||

ಎಂದಾಗ ಕಪಟನಾಟಕ ರಥವ ತಿರುಹುತಲಿ | ಬಂದನರ್ಜುನನನೊಡಗೊಂಡು ||
ನಿಂದು ಸಮಸಪ್ತಕರೊಳಳವಿಯನು ಕೊಟ್ಟನು ಪು | ರಂದರಾತ್ಮಜನು ಶೌರ್ಯದಲಿ || ೪೮ ||

**ರಾಗ ಶಂಕರಾಭರಣ ಮಟ್ಟೆತಾಳ**

ನರನು ಗಾಂಢೀವಧನುವ ಝೇಂಕರಿಸುತಲಿ | ಸರಳ ಮಳೆಯ ಕರೆದನಾಗ ಫಡ ಫಡೆನುತಲಿ ||
ಸುರಪಸುತನ ಮಾರ್ಗಣಗಳ ತರಿವುತುಗ್ರದಿ | ದುರುಳ ಖಳರನೇಕಶರವ ಬಿಡಲು ಶೀಘ್ರದಿ ||೪೯||

ಅತುಳಬಲ ಕಿರೀಟಯದನು ಕಡಿಯಲೆಂದರು | ಪಿತನು ಪೋದ ಠಾವ ನಿನಗೆ ತೋರ್ಪೆವೆಂದರು |
ಸುತರು ಪೋಪುದುಚಿತ ಜನಕರಿರುವ ಲೋಕವ | ಹಿತದಿ ತೋರ್ಪೆನೆನುತ ನರನು ಕವಿದನಸ್ತ್ರವ ||೫೦||

ಪಾರ್ಥಮೋಹನಾಸ್ತ್ರಕಿದಿರು ನಿಲ್ಲದಧಟರು | ಧಾತ್ರಿಗೊರಗೆ ನಿದ್ರೆಯಿಂದ ಬಳಿಕಲಿಬ್ಬರು |
ಮತ್ತೆ ಮೂದಲಿಸುತ ಕರೆದರಾ ರಣಾಗ್ರದಿ | ದೈತ್ಯರನ್ನು ಜರೆವುತಾಗ ಘನ ವಿಲಾಸದಿ || ೫೧ ||

**ವಾರ್ಧಕ**

ಹರಿಧನಂಜಯರಿತ್ತ ಕಾದುತಿರಲಿತ್ತ ಸಂ |
ಗರಕೆ ಧೃಷ್ಟದ್ಯುಮ್ನ ಕಲಿ ಘಟೋತ್ಕಚ ನಕುಲ |
ಧುರವಿಜಯ ಸಾತ್ಯಕಿ ವಿರಾಟ ಕುಂತೀಭೋಜ ಮುಖ್ಯರಾ ದುರ್ಗವನ್ನು ||

ಮುರಿಯಲಾರದೆ ಗಾಯವಡೆದು ತಿರುಗುತ್ತಿರಲು |
ಮರುತಜಂ ಕಾದಿ ಮರಳಿದನೆಂದು ಧರ್ಮಜಂ |
ಬೆರಳ ಮೂಗಿನೊಳಿಟ್ಟು ಚಿಂತೆಯಂ ತಾಳಿ ತನ್ನೊಡನೆ ತಿಳಿದಿಂತೆಂದನು || ೫೧ ||

**ಭಾಮಿನಿ**

ಕಾಮಪಿತನಿದ ಬಲ್ಲನಾ ಬಲ |
ರಾಮನರಿವನು ಪಾರ್ಥ ತಿಳಿವನು |
ಭೂಮಿಯಲಿ ಸುರಪತಿಯ ಮೊಮ್ಮನು ಬಲ್ಲ ಹೋಗಲಿಕೆ ||
ಕ್ಷೇಮದಲಿ ಬರಲರಿಯನವನೀ |
ಸೀಮೆಯಲಿ ಮಿಕ್ಕವರ ಕಾಣೆನು |
ಹಾ ಮಹಾದೇವೆನುತ ಚಿಂತಿಸುತಿರ್ದನವನೀಶ  || ೫೩ ||

**ರಾಗ ಮಾರವಿ ಏಕತಾಳ**

ಇಂತು ಚಿಂತಿಸುವುದನರಿತಭಿಮನ್ಯು ಮ | ಹಾಂತ ಪರಾಕ್ರಮದಿ ||
ನಿಂತು ಮುಂಗೈಸರಪಣಿಯನು ಸರಿಸುತ | ಪಂಥದಿ ಪಿತಗೆಂದ || ೫೪ ||

ಬೊಪ್ಪನೆ ಬಿಡು ಬಿಡು ಚಿಂತೆಯ ರಿಪುಗಳ | ಸೊಪ್ಪರಿವೆನು ಬಿಡದೆ |
ತಪ್ಪದೆ ಚಕ್ರವ್ಯೂಹವ ಪೊಕ್ಕಧಟರ | ನೊಪ್ಪಿಸುವೆನು ಯಮಗೆ || ೫೫ ||

ಬಲ್ಲೆನು ನಾನಾ ವ್ಯೂಹದಿ ಸೆಣಸುವು | ದೆಲ್ಲ ಚಮತ್ಕೃತಿಯ ||
ನಿಲ್ಲದೆ ವೀಳ್ಯವನೆನಗಿತ್ತು ಕಳುಹಿಸು | ತಲ್ಲಣಗೊಳದೀಗ || ೫೭ ||

ಮಾರಿಗೆ ಹಬ್ಬವ ಮಾಡುವೆ ಕೌರವ | ವೀರರ ತಲೆಗಡಿದು ||
ಸೂರೆಗೊಂಬೆ ನಿಮಿಷಾರ್ಧದಿ ದುರ್ಗವ | ಪೌರುಷ ನೋಡೆಂದ || ೫೭ ||

**ಭಾಮಿನಿ**

ವಸುಧೆಪತಿ ಕೇಳಾಗ ಧರ್ಮಜ |
ಪಸರಿಸುವ ಚಿಂತೆಗಳ ಬಿಟ್ಟು |
ಲ್ಲಸದಿ ಮಗುವನು ತೆಗೆದು ಬಿಗಿದಪ್ಪುತಲೆ ಮುಂಡಾಡಿ ||
ಶಿಶುವು ನೀನೆಲೆ ಮಗನೆ ಸಂಗರ |
ವಸದಳವು ಧುರಧೀರ ಷಡುರಥ |
ರೆಸುಗೆಯನು ನೀನೆಂತು ಸೈರಿಸಲಾಪೆ ಹೇಳೆಂದ  || ೫೮ ||

**ರಾಗ ತೋಡಿ ಆದಿತಾಳ**

ಮಗನೆ ಕೇಳ್ ಕಾಲಾಗ್ನಿಯ ಹೊಗಬಹುದಹಿಪನ | ಝುಗಝುಗಿಸುವ ಪೆಡೆಯೊಳು ನಲಿದಾಡಬಹುದು |
ವಿಗಡ ಮೃತ್ಯುವಿನ ಬಾಯೊಳು ಹೊಕ್ಕು ಬರಬಹುದು | ಪೊಗುವಡಸಾಧ್ಯವು ಚಕ್ರವ್ಯೂಹವನು |
ಎಂತು ಪೋಪೆಯೊ ಮಗನೆ | ಚಕ್ರವ್ಯೂಹಕಿ |
ನ್ನೆಂತು ಪೋಪೆಯೋ ಮಗನೆ || ೫೯ ||

**ರಾಗ ಭೈರವಿ ಮಟ್ಟೆತಾಳ**

ಬಿಡು ಬಿಡಾ ಮಹಾ | ಸಿಂಹರಾಜನ | ತುಡುಕಿ ಕರಿಗಳು | ಬದುಕಲಾಪವೆ |
ತಡೆಯದೆನ್ನನು | ಕಳುಹಿ ಪರಿಕಿಸು | ಕೊಡನ ಕುವರನ | ಕುಟಿಲಕಂಜೆನು || ೬೦ ||

**ರಾಗ ತೋಡಿ ಆದಿತಾಳ**

ಕಂದ ಕೇಳಶ್ವತ್ಥಾಮ ಗುರು ಕೃಪಾದಿತ್ಯಸುತ | ರೊಂದಾಗಿರ್ಪರು ನವಗ್ರಹರೊಗ್ಗಾದಂತೆ ||
ಇಂದುಧರಗೆ ಒಳಪೊಕ್ಕು ಜೀವಿಸಲರಿದು | ಸಂದೇಹವುಂಟೆ ರಣ ಸಾಮಾನ್ಯವಲ್ಲ ||
ಎಂತು ಪೋಪೆಯೊ ಮಗನೆ  || ೬೧ ||

**ರಾಗ ಭೈರವಿ ಮಟ್ಟೆತಾಳ**

ಗಾಳಿ ಬೆವರುವು | ದುಂಟೆ ವಹ್ನಿಯ | ಜ್ವಾಲೆ ತುಹಿನಕೆ | ಬೆದರಿ ಪೋಪುದೆ |
ಬಾಲನೆಂದೆನ್ನ | ಚಿಂತೆ ಮಾಡದೆ | ಕಾಳಗಕ್ಕಿಂದು | ಕಳುಹುಬೇಗದಿ || ೬೨ ||

**ರಾಗ ತೋಡಿ ಆದಿತಾಳ**

ಮಾಣದೆ ಭೀಮ ಬಂದಾ ನಕುಲ ಸಾತ್ಯಕಿಯರ | ಪ್ರಾಣ ಮಾತ್ರದಿ ಬಿಟ್ಟರರಿಭಟರಿಂದು ||
ತ್ರಾಣವುಳ್ಳ ವಿರಾಟ ದ್ರುಪದರುಮ್ಮಹವಲ್ಲಿ | ಕಾಣದೆಯಡಗಿತು ಕಾಳಗದೊಳಗೆ ||
ಎಂತು ಪೋಪೆಯೊ ಮಗನೆ || ೬೩ ||

**ರಾಗ ಭೈರವಿ ಮಟ್ಟೆತಾಳ**

ಹಲವು ಪುಷ್ಪದ | ವಾಸನೆಗಳ | ಕೊಳಲು ಸಂಪಿಗೆ | ಯರಳ ಪರಿಮಳ |
ಅಳಿಕುಲಕ್ಕದು | ಪಥ್ಯವಪ್ಪುದೆ | ತಿಳಿಯದೆನ್ನನು | ಕೆಣಕಿ ನೋಡಲಿ || ೬೪ ||

**ಭಾಮಿನಿ**

ಇಳೆಯರಸ ಕೇಳಿಂತು ಕುವರನ |
ಛಲದ ನುಡಿಗುರೆ ಹಿಗ್ಗುತಲೆ ಬೆಂ |
ಬಲಕೆ ಮೋಹರಸಹಿತ ಬಹೆವೆಂದಾಗ ವೀಳೆಯವ ||
ಘಳಿಲನಿತ್ತಭಿಮನ್ಯು ವೀರನ |

ಕಳುಹಲಾ ವಾರ್ತೆಯನು ಕೇಳುತ |
ನಳಿನಮುಖಿ ಸೌಭದ್ರೆ ಬಂದಳು ಕುವರನೆಡೆಗಳುತ || ೬೫ ||

**ರಾಗ ಕಾಂಭೋಜಿ ಏಕತಾಳ**

ಏತಕಿಂಥ ಬುದ್ಧಿ ಬಂತು | ಕಂದ ಕಂದ | ನಿನಗೆ |
ಪ್ರೀತಿಯೇನೊ ಮರಣದೊಸಗೆ | ಕಂದ ಕಂದ || ೬೬ ||

ನೀತಿಯಲ್ಲ ಪೋಪುದಿಂದು | ಕಂದ ಕಂದ | ಎನ್ನ |
ಘಾತಿಸಿ ಪೋಗಯ್ಯ ರಣಕೆ | ಕಂದ ಕಂದ || ೬೭ ||

ಸರಸವಲ್ಲ ಸಮರವಿಂದು | ಕಂದ ಕಂದ | ಕಲಶ |
ತರಳನ ಗೆಲಲಾ ಭವಗರಿದು | ಕಂದ ಕಂದ || ೬೮ ||

ಹಿರಿಯ ತಂದೆಯಂಜರ್ ಯಾಕೊ | ಕಂದ ಕಂದ | ಮುಂದೆ |
ಬರುವ ಹಾನಿ ವೃದ್ಧಿಯೆಂತೊ | ಕಂದ ಕಂದ || ೬೯ ||

**ಭಾಮಿನಿ**

ಪೊಡವಿಪತಿ ಕೇಳಿಂತು ಕುವರನ |
ಪಿಡಿದು ತಕ್ಕಯ್ಸುತಲೆ ಶೋಕದ |
ಕಡಲೊಳಾಳುತ್ತಿರ್ದಳಂದಿಲಿ ಹಲುಬುತಾ ಜನನಿ ||
ತಡೆವರೇ ಎಲೆ ತಾಯೆ ಈ ಪರಿ |
ನುಡಿವರೇ ರಣವನ್ನು ಜಯಿಸೆಂ |
ದೊಡನೆ ಕಳುಹದೆ ಮರುಗುವರೆ ನೀನೆಂದನಭಿಮನ್ಯು || ೭೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುರಿವ ಕಂಬನಿಯನ್ನು ಸೆರಗಿಂ | ದೊರಸಿ ಜನನಿಯ ಪಾದರಜವನು |
ಶಿರದೊಳಾಂತಾ ಪಾರ್ಥನಂದನ | ಪೊರಟಧುರಕೆ || ೭೧ ||

ಭಾರಿ ಖತಿಗೊಂಡಾ ಕ್ಷಣವೆ ರಣ | ಧೀರ ಖಡ್ಗವ ಝಳಪಿಸುತ್ತಲು |
ಬ್ಬೇರಿ ನಡೆತರೆ ಕಂಡು ಸುಮನಸ | ವಾರ ಮರುಗೆ || ೭೨ ||

ಧರಣಿಪತಿ ನಿರ್ದಯನಲಾಯೆಳೆ | ಗರುವ ನೂಕುವರುಂಟೆ ವ್ಯಾಘ್ರನ |
ಜರಿಗೆ ದೊರೆತನ ಸುಡು ಸುಡೆಂದರು | ನೆರೆದ ಜನರು || ೭೩ ||

ಝಳಪಿಸುವ ಗಂಡುಡುಗೆ ಝೇಂಪಿಸೆ | ಹೊಳೆವ ಹೊನ್ನ ಕಠಾರಿಯಾಯುಧ |
ಗಳ ಸಮಗ್ರವನಾಂತು ನಗುಮೊಗ | ಚೆಲುವ ಪೊರಟ || ೭೪ ||

ಅರಸನಂಘ್ರಿಗೆ ನಮಿಸಿ ನಕುಲಾ | ದ್ಯರಿಗೆ ವಂದಿಸಿ ಭೂಮಿ ದಿವಿಜರ |
ಹರಕೆಗೊಂಡೇರಿದನು ಮಣಿರಥ | ವಿರದೆ ಬಳಿಕ || ೭೫ ||

ಮೊಳಗಿದುವು ಬಲು ವಾದ್ಯ ನಾಲ್ದೆಸೆ | ಗಳನು ಕಂಪಿಸೆ ಛತ್ರ ಚಾಮರ |
ಗಳು ವಿರಾಜಿಸಲಖಿಳಬಲ ಬೆಂ | ಬಳಿಯೆ ಬರಲು || ೭೬ ||

**ಭಾಮಿನಿ**

ಅರಸ ಕೇಳೈ ಸೂರ್ಯರಥವೇ |
ಧರಣಿಗಿಳಿವಂದದಲಿ ಪಟುಭಟ |
ರರಸನಮಲ ವರೂಥ ಬರೆ ಕಂಡಾಗ ಕಾಂತೆಯರು ||
ಕರಗುತಿರ್ದರು ಶಿವ ಶಿವಾ ಮೋ |
ಹರದ ದುರ್ಗವನೆಂತು ಪೊಗುವನೊ |
ತರಳತನವಲ್ಲೆಂದು ಕಂಬನಿದುಂಬುತುಸಿರಿದರು || ೭೭ ||

**ರಾಗ ನೀಲಾಂಬರಿ ಏಕತಾಳ**

ಆಡುವ ಬಾಲನಲ್ಲೆ | ಅಭಿಮನ್ಯುವಿನ | ನೋಡಿತ್ತ ಪೋಗದೆ ನಿಲ್ಲೆ |
ರೂಢಿಪ ಚಕ್ರವ್ಯೂಹಕೆ | ಈ ಸಣ್ಣ ಮಗುವ | ದೂಡುವರಲ್ಲೆ ಯುದ್ಧಕೆ || ೭೮ ||

ಎಂತು ಕಾದುವನೊ ಈತ | ಷಡುರಥರೊಳು | ಕಂತುಸ್ವರೂಪ ಜಾತ ||
ಪಂಥವ ಬಿಡಲೊಲ್ಲನು | ಹೇಗಾಗುವುದೊ | ಅಂತಕಾಂತಕ ಬಲ್ಲನು || ೭೯ ||

ತಂದೆಯಿಲ್ಲದ ವೇಳ್ಯದಿ | ಈ ಸಣ್ಣ ಶಿಶುವ | ಮುಂದಕಟ್ಟುವರ್ ಭರದಿ ||
ಮಂದಮತಿಯಾದಳೇನೆ | ಸುಭದ್ರಾದೇವಿ | ಯಿಂದೆಂತು ಬಿಟ್ಟಳೊ ಜಾಣೆ || ೮೦ ||

**ವಾರ್ಧಕ**

ಮಕ್ಕಳಂ ಪಡೆದ ಗುಣಶೀಲೆಯರ್ ಬಾಲೆಯರ್ |
ಕಕ್ಕುಲಿತೆಗೊಳುತ ಮಾತಾಡುತಂ ನೋಡುತಂ |
ದುಃಖರಸಶರಧಿಯೊಳಗಾಳುತಂ ಏಳುತಂ ಬೆರಗಾಗಿ ಬೆಂಡಾದರು ||
ಒಕ್ಕಣಿಸಲೇನಿತ್ತಲಭಿಮನ್ಯು ಧನುವನುಂ |
ಫಕ್ಕನುರೆ ಝೇಂಕರಿಸೆ ನರಲೋಕ ಸುರಲೋಕ |
ಮುಕ್ಕುಳಿಸಲಾ ಧನುರ್ನಾದದಿಂ ಭೇದದಿಂ ರಿಪುದುರ್ಗ ತಲ್ಲಣಿಸಲು || ೮೧ ||

ತೊಲತೊಲಗು ರಿಪುಗಜ ಮೃಗೇಂದ್ರನಿದೊ ಬರುತಲಿದೆ |
ತೊಲತೊಲಗು ರಿಪುವನಕುಠಾರವದು ಬರುತಲಿದೆ |
ತೊಲತೊಲಗು ಕುರುಕುಲೋರಗದುಷ್ಟಸಂತತಿಗೆ ಖಗರಾಜ ಬರುತಲಿದಕೊ ||
ತೊಲತೊಲಗು ಶತ್ರುಮೇಘಸಮೀರ ಬರುತಲಿದೆ |

ತೊಲತೊಲಗು ಪರಬಲಾಚಲವಜ್ರ ಬರುತಲಿದೆ |
ತೊಲತೊಲಗು ಪಾಂಡವರ ಕುಲದೀಪ ಬರುತನೆಂದೊದರೆ ಕಹಳಾವಳಿಗಳು || ೮೨ ||

**ರಾಗ ಕೇದಾರಗೌಳ ಅಷ್ಟತಾಳ**

ಎಂದು ಕಹಳೆಗಳ್ ಭೋರ್ಗುಡಿಸಲು ಪಾರ್ಥನ | ನಂದನನಾ ರಥವು ||
ಮುಂದುವರಿದು ಬರೆ ಸಾರಥಿಯಭಿಮನ್ಯು ವಿ | ಗೆಂದನೊಂದುತ್ತರವ || ೮೩ ||

ಕಟಕ ನೋಡಿದುವೆ ಬಾಲಕನೆ ಈ ಸಮರ ಧೂ | ರ್ಜಟಿಯಾತ್ಮಭವನಿಗಿಂದು ||
ಘಟಿಸಲಸಾಧ್ಯ ನೀನಿದಕುಬ್ಬಿ ಬಹರೆ ಕೇಳ್ | ಭಟ ನಿನ್ನ ಮನವೇನಯ್ಯ || ೮೪ ||

ಕೊರಳಿನ ಬಲುಹ ನೋಡದೆ ತಾ ಮಹಾದ್ರಿಯ | ಹೊರಿಸಲಂಘೈಸುವರೆ ||
ಗುರು ಕೃಪಾಶ್ವತ್ಥಾಮ ಕರ್ಣಾದಿ ಭಟರೆಲ್ಲ | ಸುರರನ್ನು ಲೆಕ್ಕಿಪರೆ || ೮೫ ||

ಅರರೆ ಮೆಚ್ಚಿದೆನು ನಿನ್ನಯ ಶೌರ್ಯಕೆಂದು ಕೈ | ಬೆರಳ ಮೂಗಿನೊಳಿಡುತ ||
ಶಿರವ ತೂಗಲು ಕಂಡು ಸೂತನೊಳಿಂತೆಂದ | ನರನ ಕುವರ ನಗುತ || ೮೬ ||

**ರಾಗ ಕಾಂಭೋಜ ಝಂಪೆತಾಳ**

ಮರುಳೆ ಸಾರಥಿ ಕೇಳು ನಮ್ಮ ನಾವೇ ಪೊಗಳಿ | ಮೆರೆಯಲಾಗದು ಸುಪ್ರಸಿದ್ಧ ||
ಗುರು ಕೃಪಾಶ್ವತ್ಥಾಮ ಕರ್ಣ ಸೈಂಧವ ಶಕುನಿ | ನೊರಜು ಈ ನರರ ಪಾಡೇನು || ೮೭ ||

ಧುರದೊಳ್ ಕಪರ್ದಿಯಾನನದಿ ಶ್ರಮಜಲಬಿಂದು | ಸುರಿಸುವೆನು ರಣದಿ ಭಾರ್ಗವನ ||
ಗರುವವನ್ನೀಗಿ ವೃತ್ರಾರಿಯನು ಬರೆದು ಸಂ | ಚರಣೆ ನಿಲಿಸುವೆನು ಕೃತಾಂತಕನ || ೮೮ ||

ಅವರಿವರೊಳೇನು ಸಾರಥಿ ಕೇಳು ತನ್ನನು | ದ್ಭವಿಸಿದ ಪರಾಕ್ರಮಿಯು ಪಾರ್ಥ ||
ಬವರದೊಳಗಿದಿರಾಗಿ ನಿಂದಡೊಮ್ಮೆಗೆ ಗೆಲುವೆ | ತವಕದಿಂ ರಥವ ಹರಿಸೆಂದ || ೮೯ ||

**ರಾಗ ಭೈರವಿ ತ್ರಿವುಡೆತಾಳ**

ಅರಸ ಕೇಳಾ ಚಾಪನಾದಕೆ | ತರಹರಿಸಿ ಕುರುಸೇನೆ ಗಜರಥ |
ತುರಗಗಳ ಮುಂದಿರಿಸಿ ಬಾಗಿಲೊ | ಳುರವಣಿಸುತಲೆ ತಡೆದು ನಿಲ್ಲಲು |
ಹರಿಯಳಿಯನದ ಬಲ್ಲನೇ ಹೊ | ಕ್ಕಿರಿದು ರಥವನು ನೂಕಿ ರಿಪುಗಳ |
ಶಿರವ ಚೆಂಡಾಡಿದನು ಕೊಳವನು | ಕರಿಯು ಕದಡಿದ ತೆರದಿ ನಿಮಿಷದೊ |
ಳೇನನೆಂಬೆ | ಸಾಹಸ | ವೇನನೆಂಬೆ || ೯೦ ||

ಘುಡುಘುಡಿಸುತಲೆ ಕಲಿ ಜಯದ್ರಥ | ತಡೆದು ನಿಲ್ಲಲು ತವಕದಿಂದಲಿ |
ಫಡ ಫಡಿದಿರಲಿ ತೊಲಗೆನುತ ಮು | ಕ್ಕಡಿಯ ಮಾಡಿದನವನ ರಥವನು |
ಬಿಡದೆ ಸಾರಥಿಸಹಿತ ಚಾಪವ | ಕಡಿದು ಸೌಬಲ ಮುಖ್ಯರನು ಜವ |

ಗೆಡಿಸಿದನು ಕಾಲಾಗ್ನಿರುದ್ರನ | ಪಡಿಯಲಾ ಅಭಿಮನ್ಯು ಸಮರವ ||
ನೇನನೆಂಬೆ | ಸಾಹಸ | ವೇನನೆಂಬೆ || ೯೧ ||

ರಥ ಮುರಿಯೆ ಮನಗುಂದಿ ಸುಮಹಾ | ರಥರು ಹಿಮ್ಮೆಟ್ಟಿದರು ಕ್ಷಣದಲಿ |
ವಿತರಣಾಗ್ರಣಿ ವೀರ ಪಾರ್ಥನ | ಸುತನು ರಿಪುಗಳನೊದೆದು ಹೊಕ್ಕನು |
ಅತಿರಥರ ಬಾಣಾವಳಿಗಳನು | ಮಥಿಸಿದನು ಮುಂದೊತ್ತುತಿಹ ಗಜ |
ರಥ ತುರಂಗ ಪದಾತಿಗಳನೊರೆ | ಸುತ ಭಯಂಕರದೋರಿ ನಡೆದನು ||
ಏನನೆಂಬೆ | ಸಾಹಸ | ವೇನನೆಂಬೆ || ೯೨ ||

**ವಾರ್ಧಕ**

ಕರಿ ತುರಗ ಕೋಟ್ಯಾನುಕೋಟಿಗಳನೊರೆಸಿದಂ |
ತರುಬುವತಿರಥ ಮಹಾರಥರ ಸಂಹರಿಸಿದಂ |
ಬೆರಸಿ ಕಾಲಾಳ್ಗಳ ಕರುಳ್ಗಳಂ ಸುರಿಸಿದಂ ಕೂರ್ಗಣೆಯೊಳಗಣಿತದಲಿ ||
ಅರಸ ಕೇಳ್ ಮಕ್ಕಳಾಟಿಕೆ ಮಾರಿಯಾಯ್ತೆಂದು |
ಕುರುಬಲದಿ ಕಾದುವರ ಕಾಣೆ ರಣದೊಳ್ಸಿಂದು |
ಸುರಪತಿಯ ಮೊಮ್ಮನ ಪರಾಕ್ರಮಕೆ ಮನದಂದು ದಿವಿಜಸಂತತಿ ಪೊಗಳಲು || ೯೩ ||

**ರಾಗ ಭೈರವಿ ಏಕತಾಳ**

ಇನ್ನೇನೆಂಬೆ ರಣದಲಿ | ಅಭಿ | ಮನ್ಯುವಿನಸ್ತ್ರಂಗಳಲಿ ||
ಚೂರ್ಣವಾದುದು ಗಜರಥವು | ಬಲು | ಜೀರ್ಣವಾದುದು ಕುರುಬಲವು || ೯೪ ||

ಪಥಗಾಣದೆ ಮುಂದೆ ಸಿಕ್ಕಿ | ಅತಿ | ರಥರಿಳೆಯೊಳು ಧುಮ್ಮಿಕ್ಕಿ ||
ಅತಿ ಭಯದಲಿ ನಡುಗಿದರು | ಬಲು | ಸ್ತುತಿಸುತ ಪದಕೆರಗಿದರು || ೯೫ ||

ಕೊರಳನು ಕಾಯೆಂದೆನುತ | ತಮ್ಮ | ಬೆರಳನು ಬಾಯೊಳಗಿಡುತ ||
ಶರಚಾಪವನಿಕ್ಕಿದರು | ನಿಜ | ಕರದಿ ತೃಣವ ಕಚ್ಚಿದರು || ೯೬ ||

**ಭಾಮಿನಿ**

ಅರಸ ಕೇಳಭಿಮನ್ಯು ಝಡಿತಕೆ |
ಜರಿದುದಬುಜವ್ಯೂಹ ಕರಿಘಟೆ |
ತುರಗ ಕಾಲಾಳುಗಳು ನುಗ್ಗಾಯ್ತಪರಿಮಿತವಾಗಿ ||
ತರಣಿಸುತ ದ್ರೋಣಾದಿಗಳು ಕೈ |
ಮರೆದರರ್ಜುನನಣುಗನುಗ್ರಕೆ |
ಕುರುಕುಲಾಗ್ರಣಿ ಕಂಡು ಬೆರಗಾಗುತ್ತಲಿಂತೆಂದ || ೯೭ ||

**ರಾಗ ಪಂಚಾಗತಿ ಮಟ್ಟೆತಾಳ**

ಭಳಿರೆ ಪಾರ್ಥನಣುಗ ನಿನ್ನ | ಬಲುಹಿಗಿನ್ನು ಸರಿಯದಾರು |
ಹಲವದೇತಕೊಬ್ಬ ಸಾಕು | ಕುಲಕೆ ರತುನನು ||
ಫಲುಗುಣನು ಕೃತಾರ್ಥನಾದ | ನೊಲಿದು ನಿನ್ನ ಪಡೆದ ಬಗೆಯೊ |
ಳಲಸದೆಂದ ಕೌರವೇಂದ್ರ | ತಲೆಯ ತೂಗುತ || ೯೮ ||

ಎನುತ ಭಾರಿ ಧನುವ ಕೊಂಡು | ಕನಲಿ ಮನ್ನೆಯರನು ಜರೆದು |
ತನಯನೊಡನೆ ತರುಬಿನಿಂದ | ರಣಸಮರ್ಥನು |
ಅಣುಗ ನೀನು ಕೆಡಲು ಬೇಡ | ಗುಣದಿ ಪೋಗು ಪೋಗೆನುತ್ತ |
ಕಣೆಯ ಮಳೆಯ ಕರೆದನಾಗ | ಳೆಣಿಕೆಯಿಲ್ಲದೆ || ೯೯ ||

ನಾನು ಅಣುಗನಾದಡೆನ್ನ | ಬಾಣಗಳಿಗೆ ಬಾಲತನವೆ |
ಹೂಣಿ ನೋಡಿರೆನುತಲೆಚ್ಚ | ನಾಣೆಶರಗಳ |
ಕ್ಷೊಣಿಪತಿಗೆ ಗಾಯವಾಗಿ | ಕ್ಷೀಣವಾಯ್ತು ರಥವು ಧುರದಿ |
ತ್ರಾಣಗುಂದಲೀಕ್ಷಿಸಿದನು | ದ್ರೋಣ ನೃಪನನು || ೧೦೦ ||

**ಭಾಮಿನಿ**

ಅರಸ ಸಿಕ್ಕಿದನಕಟ ಬಾ ಬಾ |
ತರಣಿಸುತ ಸೌಬಲ ಕೃಪಾದ್ಯರು |
ಧರಿಸಿ ಶಸ್ತ್ರಾಸ್ತ್ರಗಳನೆನುತೊದರಿದನು ಕಲಿ ದ್ರೋಣ ||
ಹರಿವುತತಿರಥರಾ ಕ್ಷಣವೆ ಕುರು |
ವರನ ತೊಲಗಿಸಿದರು ಕಿರೀಟಿಯ |
ತರಳನನು ಮುಸುಕುತ್ತ ಮತ್ತಾ ದ್ರೋಣನಿಂತೆಂದ || ೧೦೧ ||

**ರಾಗ ಮಾರವಿ ಏಕತಾಳ**

ಸೋತೆವು ನೀ ಗೆದ್ದವ ಶಿಶುಹತ್ಯದ | ಪಾತಕಕಂಜುವೆವು |
ಆತುಕೊಳೆಂದು ದ್ರೋಣ ಮಹಾಶರ | ವ್ರಾತವ ಮುಸುಕಿದನು || ೧೦೨ ||

ಶಿಶುತನದಲಿ ಶಂಬರನೆಂಬಸುರನ | ಅಸುಗೊಳ್ಳನೆ ಸ್ಮರನು ||
ಶಶಿಧರಸುತ ಗುಹ ತಾರಕ ದೈತ್ಯನ | ಉಸಿರನು ತೊಲಗಿಸನೆ || ೧೦೩ ||

ಶಿಶುವೇ ಪಾರ್ಥಕುಮಾರಕ ರಿಪುಭಟ | ರೆಸೆದಸ್ತ್ರಾವಳಿಯ |
ಕುಶಲದಿ ತರಿವುತ ಷಡುರಥರನು ಮಿಗೆ | ದೆಸೆಗೆಡಿಸಿದನಂದು || ೧೦೪ ||

**ವಾರ್ಧಕ**

ಗುರುಸುತನ ನೋಯಿಸಿ ರಣಾಗ್ರದೊಳ್ ಶಲ್ಯನಂ |
ಮುರಿದೆಚ್ಚು ಕೃಪನುಗ್ರಮಂ ನಿಲಿಸಿ ಕೃತವರ್ಮ |

ನುರವಣೆಯೊಳೆಸೆದು ದುಶ್ಯಾಸನನ ಗರ್ವಮಂ ಮುರಿದನೊಂದೇ ಕ್ಷಣದೊಳು ||
ದುರುಳ ಬಾಹ್ಲಿಕ ಸೋಮದತ್ತರಂ ಸದೆಬಡೆದು |
ಧುರದೊಳ್ ಮಹಾರಥರನೊಬ್ಬನೇ ಶಿಶು ಗೆಲಿದ |
ನರರೆ ಕೌತುಕವೆಂದು ಕಂಡು ಕರ್ಣಂ ಬಂದು ತಡೆದನಾ ಬಾಲಕನನು || ೧೦೫ ||

**ರಾಗ ಭೈರವಿ ಅಷ್ಟತಾಳ**

ಎಲವೊ ಬಾಲಕನೆ ಕೇಳು | ನಮ್ಮಯ ಕುರು | ಬಲವ ನೀ ಸಮರದೊಳು ||
ಗೆಲಿದೆನೆನುತ ಹಿಗ್ಗಬೇಡವೆಂದೆಚ್ಚನು | ಬಲುತರ ಶರಗಳನು || ೧೦೬ ||

ನಾವು ಬಾಲಕರಹುದು | ನಮ್ಮಸ್ತ್ರಕೆ | ನೀವು ಜೀವಿಸಿಕೊಂಬುದು |
ಠೀವಿಯ ನೋಳ್ಪೆನೆಂದೆಚ್ಚನು ಅಭಿಮನ್ಯು | ಹಾವಳಿಯೇನೆಂಬೆನು || ೧೦೭ ||

ಮೂರಾರು ಮಾರ್ಗಣದಿ | ಕರ್ಣನ ಎದೆ | ಡೋರುಗಳೆದನುಗ್ರದಿ ||
ಗಾರುಗೊಂಡೆದೆಯಾರಿ ಸೊರಗಿದ ರಣದಲಿ | ಪೂರಾಯ ಗಾಯದಲಿ || ೧೦೮ ||

ರವಿಜ ಮೈಮರೆಯಲಾಗ | ಕಾಣುತ ಶಲ್ಯ | ನವಘಡಿಸುತಲೆ ಬೇಗ ||
ಕುವರ ನೀ ಫಡ ಹೋಗೆಂದೆಚ್ಚನು ಶರಗಳು | ಕವಿದುದು ಸಮರದೊಳು || ೧೦೯ ||

ಬಾಲನೆಂದುಸಿರಬೇಡ | ಎನ್ನಸ್ತ್ರಕೆ | ಬಾಲತ್ವವುಂಟೆ ನೋಡಾ ||
ಆಳಿನಂಗವನೇನ ಬಲ್ಲೆಯೆಂದಭಿಮನ್ಯು | ಕೀಲಿಸಿದಸ್ತ್ರವನು || ೧೧೦ ||

ನರಜನ ಬಾಣಗಳ | ಖಂಡಿಸಿ ಶಲ್ಯ | ನುರುತರದಂಬುಗಳ |
ಸುರಿಯಲು ತರಿವುತ ಪದಿನೈದು ಬಾಣದೊ | ಳೊರಗಿಸಿದನು ಧುರದಿ || ೧೧೧ ||

**ವಾರ್ಧಕ**

ಅರಸ ಕೇಳ್ ಶಲ್ಯ ಮೈಮರೆಯಲವನನುಜ ಹುಂ |
ಕರಿಸುತಭಿಮನ್ಯುವಂ ಧುರದೊಳಡಹಾಯ್ವುತಿರ |
ಲೆರಡು ಶರದಿಂದವನ ಶಿರವನಿಳುಹಲು ಬಳಿಕ ಕಾದುವಧಟರ ಕಾಣೆನು ||
ಮುರಿದು ಮಾದ್ರೇಶಮೋಹರವು ಹಿಮ್ಮೆಟ್ಟುತಿರ |
ಲರಿಭಯಂಕರ ದ್ರೋಣನರಿತು ಕೃಪನಿಂಗೆ ವಿ |
ಸ್ತರಿಸಿದಂ ಫಣೆಗಣ್ಣ ಹರನೀತ ಶಿಶುವೆ ಸಂಗರದೊಳಸದಳವೆಂದನು || ೧೧೨ ||

**ರಾಗ ಕೇದಾರಗೌಳ ಅಷ್ಟತಾಳ**

ಗರುಡಿಯಾಚಾರ್ಯನ ನುಡಿ ಕೇಳಿ ಕೌರವ | ರರಸನು ಕಿಡಿಯಿಡುತ |
ಕರೆದು ಕರ್ಣನಿಗೆ ಮೆಚ್ಚಿಸುತಿರ್ದನಿವರು ಬಾ | ಹಿರರೆಂದು ಬಯ್ಯುತಲೆ || ೧೧೩ |

ಬಿಡದರಿಭಟನ ಪೊಗಳುವರು ನೋಡೆಮ್ಮ | ಕಡೆಯವರಂಜುವಂತೆ |
ಕಡು ಖೂಳರೆಂಬೆನೆ ಗುರುಗಳು ನಾವಿಂತು | ಪಡೆದ ಸುಕೃತವೆಂದನು || ೧೧೪ ||

ನುಡಿಯ ಕೇಳ್ದನುಜ ದುಶ್ಯಾಸನನುಗ್ರದಿ | ಘುಡುಘುಡಿಸುತಲೆಂದನು |
ಬಿಡು ಚಿಂತೆ ವಿಪ್ರರ ನಡತೆಗಳೈಸೆನ್ನ | ಬಿಡು ಸಂಗರಕೆ ಬೇಗದಿ || ೧೧೫ ||

ದೇವದಾನವರ ಸಮಾನವು ನೋಡೆನ್ನ | ಠೀವಿಯ ಸಂಗರದಿ |
ತೀವಿದ ರಿಪುಭಟನನು ತಲೆಗಡಿವೆನೆಂ | ದಾ ವೀರ ಪೊರವಂಟನು || ೧೧೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೇರಿ ಶಂಖ ನಗಾರಿಗಳು ಮಿಗೆ | ಭೋರಿಡುತ ನಾಲ್ದೆಸೆಯು ಕಂಪಿಸೆ |
ಭೂರಿ ಬಿರುದುಗಳಿಂದ ಪೊರಟನು | ದಾರ ಭಟನು || ೧೧೭ ||

ಭಾರಿ ಬಲ ಸಹ ಬರಲಿಕಿತ್ತಲು | ಸಾರಥಿಗೆ ಸೂಚಿಸಿದನಾ ರಣ |
ಧೀರ ಪಾರ್ಥಜ ಭುಜವನೊದರಿಸು | ತಾರುಭಟಿಸಿ || ೧೧೮ ||

ಕೇಳು ಸಾರಥಿಯೆರಡು ಶರದಲಿ | ಸೀಳಿ ಬೆನ್ನಲಿ ಕರುಳ ತೆಗೆವೆನು |
ಖೂಳನನು ನೀ ನೋಡು ಮಮ ಕ | ಟ್ಟಾಳು ತನವ || ೧೧೯ ||

ಎನುತ ಕೊನೆಮೀಸೆಗಳ ತಿರುಹುತ | ಧನುವ ಝೇಂಕರಿಸಲು ಜಗತ್ತ್ರಯ |
ಘನ ಪರಾಕ್ರಮಕದುರೆ ಕೌರವ | ನನುಜಗೆಂದ || ೧೨೦ ||

ಭೀಷಣನು ನೀನಹುದೆಲವೊ ದು | ಶ್ಯಾಸನನೆ ಕೇಳ್ ನಿನ್ನ ಭಂಗಿಸ |
ದೀಸಕಂಜಿದರೆನಗೆ ಶರಸಂ | ನ್ಯಾಸವಿನ್ನು || ೧೨೧ ||

**ರಾಗ ಮಾರವಿ ಮಟ್ಟೆತಾಳ**

ಎಂದ ಮಾತಿಗೆ | ಕೌರವಾನುಜ |
ನಿಂದು ನೂರು ಶರವನೆಚ್ಚ | ನಂದು ನರಜಗೆ || ೧೨೨ ||

ಭೀಮ ಫಲುಗುಣ | ರೆಂಬವರೊಳು ಸಂ |
ಗ್ರಾಮಗೊಡುವುದುಚಿತ ನೀನು | ಹುಡುಗನಾದೆಲಾ || ೧೨೩ ||

ಕೊಳಚೆ ನೀರನು | ದಾಟಲರಿಯದೆ |
ಜಲಧಿ ಕಾಲಹೊಳೆಯಿದೆಂಬ | ಶೌರ್ಯವೇತಕೆ || ೧೨೪ ||

ಭೀಮಪಾರ್ಥರ | ಗೊಡವೆಯೇತಕೊ |
ನೀನು ಮೊದಲು ಸೆಣಸಿ ಜೀವಿ | ಸೆನ್ನ ಕೈಯಲಿ || ೧೨೫ ||

ಎನುತನೇಕ ಮಾ | ರ್ಗಣಗಳಿಂದಲಿ |
ಕನಲಿ ಕವಿಯಲೆಂಟು ದೆಸೆಯು | ಕಾಣದಿದ್ದುವು || ೧೨೬ ||

**ವಾರ್ಧಕ**

ಅಭಿಮನ್ಯು ಬಿಟ್ಟ ಪ್ರತಿಕೂಲ ಶರಜಾಲ ರಿಪು |
ಸುಭಟನ ಶತಾಸ್ತ್ರಮಂ ತಡೆಗಡಿದು ಸದೆಬಡಿದು |
ಇಭ ಘಟೆ ತುರಂಗ ಕಾಲಾಳ್ಗಳಂ ಸಾಲ್ಗಳಂ ಸವರಿ ಬಲು ಸೈನಿಕವನು ||
ರಭಸಿದಿಂದೆದ್ದಾಗ ಕೊಚ್ಚಿದವು ಮುಚ್ಚಿದವು |
ಅಭಿನವೋದ್ಭಾಸದಿಂ ಬೀರಿದವು ತೂರಿದವು |
ನಭಕಡರುವಂದದಿ ವರೂಥಗಳ ಯೂಥಗಳನಚ್ಚರಿಯನೇನೆಂಬೆನು || ೧೨೭ ||

**ಭಾಮಿನಿ**

ರಾಯ ಕೇಳಭಿಮನ್ಯುಬಾಣನಿ |
ಕಾಯವನು ತಡೆಗಡಿದು ಬಹುತರ |
ಸಾಯಕವ ಬಿಡಲದನು ಖಂಡಿಸಿ ಪಾರ್ಥಸುತನೆಂದ ||
ತಾಯಿಗವಮಾನವನು ಮಾಡಿದ |
ನಾಯೆ ನಿನ್ನನು ಕೊಲುವೆನೆಂದರೆ |
ವಾಯುಪುತ್ರನ ಭಾಷೆಗಂಜುವೆನೆಂದು ತೆಗೆದಚ್ಚ || ೧೨೮ ||

**ರಾಗ ಸಾಂಗತ್ಯ ರೂಪಕತಾಳ**

ರಾಯ ಜನಮೇಜಯ ಕೇಳಿತ್ತಲಭಿಮನ್ಯು | ಸಾಯಕದಲಿ ದುಶ್ಯಾಸನನು |
ಗಾಯವಡೆದು ಗರ್ವಗುಂದಿ ಮೂರ್ಛಿತನಾಗ | ಲಾಯೆಡೆಯಲಿ ಕರ್ಣ ತಡೆದ || ೧೨೯ ||

ಮಗುವೆಂದು ಒಮ್ಮೆ ನಾ ಬಿಟ್ಟರೆ ಗರ್ವದಿ | ಮಿಗುವರಿದೆಮ್ಮಯ ಬಲವ ||
ಹಗರಣಗೊಳಿಸಿದೆ ಫಡ ಫಡೆಂದಡಹಾಯ್ದು | ತೆಗೆದಚ್ಚನಸ್ತ್ರಸಂಕುಲವ || ೧೩೦ ||

ಬಲ್ಲೆ ನೀ ಬಾಯಬಡಕನೆಂದು ನಿನ್ನನು | ಕೊಲ್ಲಲು ಪಿತ ಕೋಪಿಸುವನು ||
ನಿಲ್ಲು ನಿಲ್ಲಾದರೆಂದೆನುತೆಂಟು ಶರದಿಂದ | ಬಿಲ್ಲ ಖಂಡಿಸಿ ಛೀಕರಿಸಿದ || ೧೩೧ ||

ಶರಹತಿಯಲಿ ನಿರಾಯುಧನಾಗಿ ಭಯಗೊಂಡು | ತರಹರಿಸಿದ ಕರ್ಣ ನೊಂದು ||
ಸುರಿವ ರಕ್ತದಿ ತೇರು ತೋಯ್ದುದು ಸಾರಥಿ | ತಿರುಗಿಸಿದನು ಬೇಗ ರಥವ || ೧೩೨ ||

ಪಿತನಿಂತು ಗಾಯವಡೆದನೆಂಬುದರಿತಾಗ | ಸುತ ವೃಷಧ್ವಜ ಬಂದು ತಡೆದ |
ಅತಿರಥನೊಡನಾತ ಕಾದಲೈದಂಬಿಲಿ | ಮಥಿಸಿದ ಕರ್ಣನಂದನನ || ೧೩೩ ||

**ಭಾಮಿನಿ**

ಕೆಲಬರೀ ಪರಿಯಿಂದ ಮಡಿದರು |
ಕೆಲಬರತಿ ಗಾಯದಲಿ  ನೊಂದರು |
ಕೆಲಬರಾಯುಧಗಳನು ಬಿಸುಟೋಡಿದರು ಸಮರದಲಿ ||
ನಿಲದೆ ಕುರುಸೇನಾ ಸಮುದ್ರವು |
ಕಲಕಿತಭಿಮನ್ಯುವಿನ ಝಡಿತಕೆ |
ವಿಲಯಭೈರವನೆನಿಸಿ ತೋರಿದನಾ ಮಹಾಹವದಿ || ೧೩೪ ||

**ರಾಗ ಮಾರವಿ ಝಂಪೆತಾಳ**

ಇತ್ತಲಭಿಮನ್ಯು ಷಡುರಥರೊಡನೆ ಕಾದುತಿರ | ಲತ್ತ ಧರ್ಮಜ ಮನದಿ ಚಿಂತಿಸುತಲೆಂದ ||
ಪುತ್ರನೊಬ್ಬನೆ ಪೋಗಿ ಏನಾದನೋ ಕಾಣೆ | ಸತ್ತ್ವಾತಿಶಯ ಭೀಮ ಪೋಗಯ್ಯ ರಣಕೆ || ೧೩೫ ||

ಸಕಲ ಸೈನಿಕ ಸಹಿತ ತೆರಳಿ ಬೆಂಬಲಮಾಗಿ | ಸುಕುಮಾರಕನ ಬಿಡಿಸಿಕೊಂಡು ಬಾರಯ್ಯ ||
ನಕುಲ ಧೃಷ್ಟದ್ಯುಮ್ನ ದ್ರುಪದನು ವಿರಾಟ ಸಾ | ತ್ಯಕಿ ಸಹಿತ ಪೋಗಿರೈ ತಡಮಾಡದೀಗ ||೧೩೬||

ಕರಿ ತುರಗ ರಥ ಸಹಿತ ಸೈನಿಕರನೊಡಗೊಂಡು | ಪೊರಟರರಸಗೆ ನಮಿಸಿ ಪರುಠವಣೆಯಿಂದ ||
ಮೊರೆದುವಗಣಿತ ವಾದ್ಯ ಭೇರಿ ತಮ್ಮಟೆ ಕಹಳೆ | ತರತರದಿ ನೆಲನದುರುವಂತೆ ಘೋಷದಲಿ ||೧೩೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಗದೆಯ ತಿರುಹುತ ಸಿಂಹನಾದದೊ | ಳೊದರಿ ಮಗನಾವೆಡೆಯೆನುತ ಬಲು |
ಕದನಕಲಿಗಳ ದೇವ ಭೀಮನು | ಮೊದಲು ನಡೆದ || ೧೩೮ ||

ಪೃಥವಿ ಕಂಪಿಸೆ ಭೀಮಸೇನನ | ರಥದ ವಹಿಲಕೆ ಬರಲು ಬಾಗಿಲೊ |
ಳತಿರಥರ ತಡೆದನು ಜಯದ್ರಥ | ಖತಿಯೊಳಿರದೆ || ೧೩೯ ||

ತೆರಹುಗೊಡು ಫಡ ಫಡ ಜಯದ್ರಥ | ಹೊರತೆಗೆದು ನಿಲ್ಲೆಂದು ಹೂಣಿಗ |
ರುರುಬಿದಡೆ ಮಾರಾಂತುನಿಂದನು | ಹರನ ವರದಿ || ೧೪೦ ||

ಖೂಳ ನಿನಗೀ ಗರ್ವವೇಕೆಲೊ | ಬೋಳುಗೆಯ್ದುದನರಿಯೆ ತೊಲಗೆಂ |
ದಾಳು ಬಿಂಕದಿ ಕೊಟ್ಟ ಬಲುತರ | ಕಾಳಗವನು || ೧೪೧ ||

ತೆರಹುಗೊಡೆನಿಂದಿನಲಿ ನಡೆ ನಡೆ | ಮರೆದು ಕಳೆಯಭಿಮನ್ಯುವನು ಶಶಿ |
ಧರನ ಕಾರುಣ್ಯಾವಲೋಕನ | ವಿರುವುದೆನಗೆ || ೧೪೨ ||

ನರಹೊರತು ನಿಮ್ಮೀಗ ನಾಲ್ವರ | ಸರಕುಮಾಡುವನಲ್ಲ ಹೋಗೆಂ |
ದುರುತರಾಸ್ತ್ರವ ಕವಿಯಲನಿಲಜ | ನರಿತು ನುಡಿದ || ೧೪೩ ||

**ಭಾಮಿನಿ**

ಎಲೆ ಜಯದ್ರಥ ಕೇಳು ನಿನ್ನಯ |
ತಲೆಯ ಕೊಂಬನು ನಾಳೆ ಫಲುಗುಣ |
ತಿಳಿದುಕೋ ಎಂದಬ್ಬರಿಸುತಲ್ಲಿಂದ ಮರಳಿದನು ||
ಉಳಿದ ಸುಭಟರು ಕಾದಲಾರದೆ |
ಕಳವಳಿಸಿ ತಿರುಗಿದರು ದುರ್ಗದೊ |
ಳಳವಿಗೊಡುತಭಿಮನ್ಯು ಮೆರೆದನು ನರನ ಪ್ರತಿಗಾಗಿ || ೧೪೪ ||

**ವಾರ್ಧಕ**

ಅವನಿಪತಿ ಕೇಳಿತ್ತಲಭಿಮನ್ಯು ಸಮರದೊಳ್ |
ಸವರಿದಂ ಪದಿನೆಂಟು ಸಾವಿರ ಗಜಂಗಳಂ |
ವಿವರಿಸಲ್ಕಯ್ವತ್ತು ಸಾವಿರ ತುರಂಗ ಮೂವತ್ತು ಸಾವಿರ ರಥಿಕರ ||
ಬವರದೊಳ್ ಗೆಲಿದು ಲಕ್ಷಪದಾತಿಗಳನೊರೆಸಿ |
ತವಕದಿಂ ವೀರ ಶಲ್ಯಕುಮಾರನಂ ಮುರಿಯ |
ಲವಗಡಿಸಿದರ್ ಲಕ್ಷಣಾದಿ ದುರ್ಯೋಧನಾತ್ಮಜರು ಸಖನಳಿದನೆಂದು || ೧೪೫ ||

**ರಾಗ ಶಂಕರಾಭರಣ ಮಟ್ಟೆತಾಳ**

ಸುರಪಸುತಕುಮಾರ ಕೇಳು ಶಲ್ಯಸುತನನು |
ಮುರಿದೆನೆಂಬ ಗರ್ವ ಬೇಡ ನಿನ್ನವೊಡಲನು ||
ಭರದಿ ಸೀಳಿ ತೆಗೆವೆವೀಗ ನಮ್ಮ ಸಖನನು |
ಪರಿಕಿಸೆನುತ ಕರೆದರಾಗ ಸರಳ ಮಳೆಯನು || ೧೪೬ ||

ಅಹುದು ನಿಮಗೆ ಮಿತ್ರನಾದಡಾತನೊಗ್ಗಿಲಿ |
ವಿಹಿತದಿಂದ ಪವಡಿಸುವುದೆನುತ್ತ ಭರದಲಿ |
ಗಹಗಹಿಸುತಲೆರಡು ಶರದಿ ಲಕ್ಷಣಾದ್ಯರ |
ಸಹಿತ ಕೆಡಹಿದನು ತ್ರಿಪಂಚಶರದೊಳೆಲ್ಲರ || ೧೪೭ ||

ಇಂತು ಕುವರಸಂತತಿಯನು ಸಂಹರಿಸಿದನು |
ಚಿಂತಿಸುತಲೆ ಕೌರವೇಂದ್ರ ಕಾಣುತೆಂದನು ||
ಪಂಥ ಸುಡು ಸುಡಿವರ ಬಂದು ಪೊಕ್ಕ ಮನೆಗಳು |
ಎಂತು ಹಾಳುಬೀಳದಿಹುದೆ ದ್ರೋಣಕಲಿಗಳು || ೧೪೮ ||

**ರಾಗ ಘಂಟಾರವ ಧ್ರುವತಾಳ**

ಇಕ್ಷುಚಾಪನಂತೆ ತೋರ್ಪ | ಲಕ್ಷಣ ಹಾ ಮಗನೆ |
ಅಕ್ಷಿಗಳ ತೆರೆದೀಗೆನ್ನ | ನೀಕ್ಷಿಸಿ ಮಾತಾಡು || ೧೪೯ ||

ಷಡುರಥರಿದ್ದೆನ್ನ ಸುತರ | ಬಿಡದೆ ವೈರಿ ಭಟನ ||
ಜಡಿವಾಯುಧಕಾಹುತಿಯ ಕೊಟ್ಟು | ಮಿಡುಕದಿರುವರಲ್ಲ || ೧೫೦ ||

ಸಾಲದೆ ಪಾಂಡರ ಕುಲಕೆ | ಬಾಲನೀತನೊಬ್ಬ ||
ಖೂಳರಿವರ ಮಾತಕೇಳಿ | ಮೂಲವಳಿದುದಕಟ || ೧೫೧ ||

**ರಾಗ ಕಾಂಭೋಜಿ ಝಂಪೆತಾಳ**

ಆಳಿದನ ಮೂದಲೆಯ ಗಾಳಿ ಬರೆ ಖತಿಶಿಖಿ ಚ | ಡಾಳಿಸಿತು ಸುಭಟರೆಲ್ಲರಿಗೆ ||
ಡಾಳಿಸುವ ಶಸ್ತ್ರಾಸ್ತ್ರಗಳ ಧರಿಸಿ ಮುತ್ತಿದರು | ಬಾಲಕನ ಮೇಲೆ ಮೇಲ್ವಾಯ್ದು || ೧೫೨ ||

ರವಿತನಯ ಶಲ್ಯ ಗೌತಮಿ ಕೌರವನ ತಮ್ಮ | ತವಕಿಸುತ ದ್ರೋಣಸುತ ಸಹಿತ ||
ಇವರು ಷಡುರಥದೊಂದುಗೂಡಿ ಮುತ್ತಿದರು ವಾ | ಸವನ ಮೊಮ್ಮನ ರಣಾಂಗಣದಿ || ೧೫೩ ||

ಎಲವೊ ಮಗುವೆಂದು ಬಿಟ್ಟೆವು ಎರಡು ಬಾರಿ ಕೇಳ್ | ತಿಳಿಯದುಮ್ಮಹದಿಂದ ಕುಣಿವೆ ||
ಫಲುಗುಣನ ಕರೆಸಿಕೋ ಬೆಂಬಲಕೆ ಕೆಡದಿರೆಂ | ದಲಘು ಭಟರೆಚ್ಚರಸ್ತ್ರಗಳ || ೧೫೪ ||

ಪಾರ್ಥ ಪರಿಯಂತೇಕೆ ಗೋಗ್ರಹಣದಲಿ ಬಲು ಸ | ಮರ್ಥಿಕೆಯ ತೋರಿದವರಹುದು |
ವ್ಯರ್ಥ ಕೌರವನ ದ್ರವ್ಯವ ತಿಂದು ಜೀವಿಸುವ | ಧೂರ್ತರೆಂದೆಚ್ಚನಭಿಮನ್ಯು || ೧೫೫ ||

ಭಳಿರೆ ಬಿಲ್ಲಾಳುತನ ಬಿಂಕದಲಿ ಶಿವ ನೀನು | ಇಳೆಯೊಳೆಣೆಯಿಲ್ಲೆಂದು ಪೊಗಳಿ ||
ಕಲಶಭವನೆಚ್ಚಡಾ ಶರವನೆಲ್ಲವ ತರಿದು | ತಲೆಗೆಳಗು ಮಾಡಿದನು ಕ್ಷಣದಿ || ೧೫೬ ||

ಇಂತು ಷಡುರಥರು ಹಿಮ್ಮೆಟ್ಟುತಿರಲಾ ದ್ರೋಣ | ನಂತರಂಗದಿ ರವಿಜಗೆಂದ ||
ನಿಂತಿವನ ಕೂಡೆ ಕಾದುವಡರಿದು ಚಾಪವಿರ | ಲಂತಕಾಂತಕಗೆ ಸಮ್ಮುಖದಿ || ೧೫೭ ||

ರೂಪುಗಾಣಿಸದೆ ಬೆಂಗಡೆಯಲ್ಲಿ ನಿಂತವನ | ಚಾಪವನು ಮುಕ್ಕಡಿಯ ಮಾಡು ||
ಭೂಪತಿಯ ಕಾರ್ಯವೆನೆ ಮನಗುಂದಲೆಂದನೀ | ಪಾಪ ನಿನಗಿಲ್ಲೆನುತ ದ್ರೋಣ || ೧೫೮ ||

**ಭಾಮಿನಿ**

ಹಿಂದೆ ರವಿಸುತ ಕೃಪ ನೃಪಾನುಜ |
ರೊಂದು ಕಡೆಯಲಿ ಕಾದಿದರುಮಿಗೆ |
ಮುಂದೆ ದ್ರೋಣನು ಸುತಸಹಿತ ರಿಪುಭಟನ ಕೆಣಕಿದರು ||
ನಿಂದು ದಿವ್ಯಾಸ್ತ್ರದಲಿ ಚಾಪವ |
ನಂದು ಮುಕ್ಕಡಿಯಾಗಿ ಕಡಿಯಲು |
ಮಂದಹಾಸದಿ ತಿರುಗಿ ಕರ್ಣನ ಕಂಡನಭಿಮನ್ಯು || ೧೫೯ ||

**ರಾಗ ಮಧ್ಯಮಾವತಿ ಅಷ್ಟತಾಳ**

ಧೀರನಹುದಹುದೊ | ಕರ್ಣನೆ ರಣ | ಶೂರನಹುದಹುದೊ |
ಧಾರಿಣಿಯೊಳಗಿದಿರಿಲ್ಲ ನೀ ಕಪಟದಿ || ಧೀರನಹುದಹುದೊ || ಪಲ್ಲವಿ ||

ಚೋರನಂದದಿ ಹಿಂದೆ ನಿಂತೆ | ರೂಪು | ದೋರದೆ ಬಾಣವನಾಂತೆ |
ಓರೆಯೊಳ್ ಧನುವ ಖಂಡಿಸಿದೆಯೀ ವಿದ್ಯವ |
ನಾರುಕಲಿಸಿದರಯ್ಯ | ಲೋಕದಿಕೀರ್ತಿ
ಸಾರವ ಪಡೆದೆಯಯ್ಯ | ಕ್ಷತ್ರಿಯರೊಳು |
ದಾರನೆಂದಾದೆಯಯ್ಯ || ಕರ್ಣನೆ ರಣ | ಧೀರನಹುದಹುದೊ ||೧೬೦|

ಕರದ ಚಾಪವು ಪೋದರೇನು | ಖಡ್ಗ | ವಿರಲು ಶೌರ್ಯವ ನೋಡು ನೀನು |
ಶಿರವ ಚೆಂಡಾಡಿ ಶಾಕಿನಿ ಡಾಕಿನಿಯರಿಗೆ |
ಪರಿತೋಷಬಡಿಸುವೆನು | ಸಂಗರದಿ ನೆ |
ತ್ತರವನೆ ಕುಡಿಸುವೆನು | ಉಳಿದವರೆಮ |
ಪುರಕೀಗ ನಡೆಸುವೆನು | ಕರ್ಣನೆ ರಣ | ಧೀರನಹುದಹುದೊ || ೧೬೧ ||

**ಭಾಮಿನಿ**

ಎನಲು ಲಜ್ಜಿತನಾಗಿ ಕರ್ಣನು |
ಧನು ಮುರಿಯೆ ದ್ರೋಣಾದಿ ನಾಯಕ |
ರನುವರದಿ ರಥ ಟೆಕ್ಕೆ ಸಾರಥಿ ಸಹಿತ ಕೆಡಹುತಲಿ |
ಕಣೆಗರೆಯಲತಿ ಧೈರ್ಯದಲಿ ನರ |
ತನಯ ಖಡ್ಗವ ಕೊಂಡು ರಿಪುಕಾ |
ನನವ ಸವರುತ ಬೀದಿವರಿದನು ಕಣನ ಚೌಕದಲಿ || ೧೬೨ ||

**ರಾಗ ಪಂಚಾಗತಿ ಮಟ್ಟೆತಾಳ**

ವೀರ ಪಾರ್ಥನಣುಗ ಖಡ್ಗ | ಧಾರೆಯಲಿ ವಿರೋಧಿಭಟರ |
ಸೂರೆಗೊಂಡು ಬೆರಸಿ ಪೊಯ್ದು | ಬೇರೆ ರಥಿಕರ |
ಆರುಭಟೆಗೆ ನಿಲ್ಲದಹಿತ | ವಾರ ಬೆದರುತಿರಲು ಕಂಡು |
ಕೌರವೇಂದ್ರ ಜರೆದ ಸಮರ | ಶೂರರೆಲ್ಲರ || ೧೬೩ ||

ಸೋತನೆಂದು ಹೆಮ್ಮೆ ನುಡಿವಿ | ರೀತನಾರು ನಮ್ಮ ಸುಭಟ |
ವ್ರಾತವನ್ನು ಸವರಿ ಬರುವ | ಭೀತಿಯಿಲ್ಲದೆ |
ಏತಕಿನ್ನು ನಿಮಗೆ ಶೌರ್ಯ | ವಾತಗೆರಗಿರೆನಲು ಭುಜಬ |
ಲಾತಿಶಯರು ಮತ್ತೆ ಗಜ ವ | ರೂಥವಡರುತ || ೧೬೪ ||

ಘಡ ಘಡೆನುತ ವೀರ ಕರ್ಣ | ನಡೆಸಿ ಬರೆ ರಥಾಶ್ವಗಳನು |
ಜಡಿವುತಪ್ಪಳಿಸಲು ಕಂಡು | ಕಡಿದನಸಿಯನು ||

ಒಡನೆ ಗದೆಯ ಕೊಂಡು ರಥ ನೂ | ರಡಿಯ ನೂಕಿ ಪೊಯಿದಡಿನಜ |
ಕಡುಗಿ ದಿವ್ಯಶರದಿ ಕರವ | ಪೊಡವಿಗಿಳುಹಿದ || ೧೭೫ ||

ಮರುಳು ಸೂತತನುಜ ಕೇಳು | ಕರವು ಪೋದಡೇನು ಭುಜದ |
ಸಿರಿಗೆ ಕೊರತೆ ಬಪ್ಪುದುಂಟೆ | ಪರಿಕಿಸೆನುತಲಿ ||
ಭರದಿ ರಥದ ಚಕ್ರಗೊಂಡು | ತಿರುಹುತಿನಜಗೆರಗಿ ಬೊ |
ಬ್ಬಿರಿದು ರಥ ತುರಂಗಮವ ನು | ಗ್ಗರಿದ ನಿಮಿಷದಿ || ೧೭೬ ||

**ವಾರ್ಧಕ**

ಮೆಟ್ಟಿದಂ ಗಜ ರಥ ತುರಂಗ ಕಾಲಾಳ್ಗಳಂ |
ವಟ್ಟಿದಂ ಕಾದುತಿಹ ರಿಪುಗಳಾಯುಧಗಳಂ |
ಕುಟ್ಟಿದಂ ಷಡುರಥರನಡಹಾಯ್ದು ಸಮರದೊಳ್ ಗಜರಿ ವೀರಾವೇಶದಿ ||
ಹೆಟ್ಟಿದಂ ಕುರುಪತಿಯ ಸೇನಾಧಿನಾಯಕರ |
ನೊಟ್ಟಿದಂ ನುಗ್ಗರಿವುತೆಮಪುರಕೆ ರಿಪುಬಲವ |
ನಟ್ಟಿದಂ ಭೂಪ ಕೇಳದ್ಭುತವನಮರತತಿ ಬೆರಗಾಗಿ ನೋಡುತಿರಲು || ೧೭೭ ||

**ಭಾಮಿನಿ**

ಅರರೆ ಹರಿಯ ರಥಾಂಗವೆನಲ |
ಬ್ಬರಿಸಿ ಹೊಯ್ದಡೆ ಮತ್ತೆ ಕರ್ಣನು |
ತರುಬುತಿಪ್ಪತ್ತೈದು ಬಾಣದೊಳೆಚ್ಚನರಿಭಟನ ||
ಶರಮಯವು ಸರ್ವಾಂಗದಿಂದಿರ |
ಲರಿಯದಭಿಮನ್ಯುವಿಗೆ ಝಡಿತಕೆ |
ಮರಣವನು ನೆನೆವಂತೆ ದುಶ್ಯಾಸನನ ಸುತ ತಡೆದ || ೧೭೮ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲವೊ ಪಾರ್ಥನ ಸುತ ಕೇಳಿಂದು | ನಿನ್ನ | ತಲೆಯ ಕೊಂಬೆನು ನಿಮಿಷದೊಳೆಂದು ||
ಪೊಳೆವ ಖಡ್ಗವ ಕೊಂಡು ಬರಲಾಗ | ಆತ | ನೊಳ ಪೊಕ್ಕು ಕಾದಿದನತಿ ಬೇಗ || ೧೭೯ ||

ಕರಹತಿಯೊಳಗೆ ಡೆಂಡೆಣಿಸುತ | ಧರೆ | ಗುರುಳಿ ಧಿಮ್ಮನೆ ಮತ್ತೆ ತಿರುಗುತ ||
ಸರಿಯಾಗಿ ಹೆಣಗಿದರಿಬ್ಬರು | ಕಂಡು | ಸುರರಾಗ ಭಳಿಭಳಿರೆಂದರು || ೧೮೦ ||

ಅರಿಯ ಕೃಪಾಣದ ಗಾಯದಿ | ತರ | ಹರಿಸುತಲೆದ್ದತಿ ಶೌರ್ಯದಿ ||
ಶಿರಕೆರಗಲು ಧರೆಗುರುಳಿದ | ಕಂಡು | ಸುರಪನಮೊಮ್ಮ ವಿಶ್ರಮಿಸಿದ || ೧೮೧ ||

**ರಾಗ ಸಾಂಗತ್ಯ ರೂಪಕತಾಳ**

ಕಾಳಗಿಚ್ಚೆದ್ದು ಛಡಾಳಿಸಿ ನಿಲುವಂತೆ | ಬಾಲಕನಸ್ತ್ರತಲ್ಪದಲಿ ||
ತೋಳದಿಂಬಿನೊಳಿರೆ ಕೌರವಾತ್ಮಜರಂದು | ಕಾಲೆಡೆಯಲಿ ಕೆಡೆದಿರಲು || ೧೭೨ ||

ಬಿಗಿದ ಹುಬ್ಬಿನ ಬಿಟ್ಟ ಕಂಗಳತ್ಯುಗ್ರದಿ | ಹೊಗರು ಮೋರೆಯ ಹೊಸಪರಿಯ ||
ವಿಗಡ ಭಟಾಗ್ರಣಿ ಶಸ್ತ್ರಶಯನದಲ್ಲಿ | ಝುಗಝುಗಿಸುತಲಿರ್ದನಂದು || ೧೭೩ ||

ಸಾವ ಹರೆಯವೆ ಬಾಲಗೆ ಶಿವ ಶಿವಯೆಂದು | ದೇವಾಳಿ ಮರುಗೆ ವಾಸವನ ||
ಸಾವಿರಾಲಿಗಳಲ್ಲಿ ಒರತೆ ಪುಟ್ಟಿತು ಪೌತ್ರ | ಭಾವ ಮೋಹದೊಳಳಲಿದನು || ೧೭೪ ||

ಷಡುರಥರೊಂದಾಗಿಕೊಂಡೊಬ್ಬ ಹಸುಳೆಯ | ಹೊಡೆದರು ಹೇಸಿಕೆಗೊಳದೆ ||
ಸುಡು ಸುಡು ಕೌರವಾದಿಗಳಾವ ವೀರರೆಂ | ದಡಿಗಡಿಗಾಡಲು ಸುರರು || ೧೭೫ ||

ಹಲವು ಗಜವೊಂದಾಗಿ ಸಿಂಹನ ಮರಿಯನ್ನು | ಕೊಲುವಂತಾಯಿತು ಎಂದ ಇಂದ್ರ |
ಇಳುಹಿದನಪ್ಸರ ಸ್ತ್ರೀಯರ ಬೇಗದಿ | ಹೊಳೆವ ವೀರನ ಕರೆತರಲು || ೧೭೬ ||

**ವಾರ್ಧಕ**

ಶರದಿಂದುಮುಖಸಾಂದ್ರಭಾಸದಿಂ ತೋಷದಿಂ |
ಸುರಚಿರಾಮಯ ರತ್ನ ಹಾರದಿಂ ಪೂರದಿಂ |
ಪರಿಮಳಿಪ ದಿವ್ಯತರ ಗಂಧದಿಂ ಚಂದದಿಂ ಪೊಂಗಲಶಕುಚಭಾರದಿ ||
ಮೆರೆವಯೆಳೆಲತೆಯಂತೆ ಬಳುಕುತಂ ತುಳುಕುತಂ |
ಕಿರುನಗೆಯ ಮೊಗದ ಗುಣಶೀಲೆಯರ್ ಬಾಲೆಯರ್ |
ಮೊರೆವ ಘನವಾದ್ಯರವಭರಿತದಿಂ ತ್ವರಿತದಿಂ ಸುರಗಣಿಕೆಯರ್ ಬಂದರು || ೧೭೭ ||

**ವಚನ**

ಈ ರೀತಿಯಿಂದ ಸುರಗಣಿಕೆಯರ್ ಬಂದಭಿಮನ್ಯುವಿನ ಕಂಡು ತಮ್ಮೊಳುತಾವೆ ಮಾತನಾಡುತಿರ್ದರ ದೆಂತೆನೆ -

**ರಾಗ ನಾದನಾಮಕ್ರಿಯ ಆದಿತಾಳ**

ತಂಗಿ ನೋಡೀ ಬಾಲನಂಗಸೌಂದರ್ಯವ | ಶೃಂಗಾರದಲಿ ಕಾಮನಲ್ಲೆ ||
ಹಿಂಗಿತೀತನಿಗಾಗಿ ಸುರಪನ ಸಾವಿರ | ಕಂಗಳೊಳೊರತೆ ಪುಟ್ಟಿದವು || ೧೭೮ ||

ಹಸುಳೆಯೊಬ್ಬನನೆಂತು ಕಳುಹಿದ ಯಮಜಾತ | ನಸಮಸಾಹಸರುಳ್ಳಾ ಹವಕೆ ||
ಎಸೆವ ಮೆಯ್ಯೊಳು ನೋಡಲಿಂಬಿಲ್ಲ ಕಣೆಗಳು | ಮುಸುಕಿ ನಟ್ಟಿರುವ ಗಾಯಗಳು || ೧೭೯ ||

ಎನುತ ಮಾತಾಡುತ್ತಲಭಿಮನ್ಯುವೀರನ | ವಿನಯದಿ ಕರೆದೊಯ್ದು ಬೇಗ ||
ಅನಿಮಿಷೇಂದ್ರನ ಸಭೆಯೊಳಗೆ ನಿಲಿಸಿದರು | ಘನ ಪರಾಕ್ರಮಿಯನ್ನು ಮುದದಿ || ೧೮೦ ||

ನೋಡಿ ದೇವೇಂದ್ರನು ಪೌತ್ರಸ್ನೇಹದಲಿ ಕೊಂ | ಡಾಡಿ ಪರಾಕ್ರಮಗಳನು ||
ರೂಢಿಯೊಳೆಣೆಗಾಣೆನೆನುತ ಗದ್ದುಗೆಯೊಳು | ಜೋಡಾಗಿರ್ದರು ಮೋಹದಿಂದ || ೧೮೧ ||

**ವಾರ್ಧಕ**

ಕೇಳು ಜನಮೇಜಯಮಹೀಶನೆ ಧುರಪ್ರಳಯ |
ಕಾಲನಂ ಮುರಿದೆವೆಂದುಬ್ಬೇರಿ ಕುರುವೀರ |
ರಾಲಯವ ಪೊಗಲು ರವಿ ಜಾರಿದಂ ಬಾಲಕನ ಕಾಣಲರಿದೆಂಬಂದದಿ ||
ಸೋಲವಿದು ಪಾಂಡವರಿಗಲ್ಲ ನಿಶ್ಚಯ ಪ್ರಳಯ |
ಕಾಲ ಕೌರವಕುಲಕೆ ನಾಳೆ ಫಲುಗುಣನಿಂದ |
ಸೋಲುಂಟೆ ಮಧ್ವಪತಿ ಕೃಷ್ಣನಾ ಭಕ್ತರ್ಗೆ ನಿಗಮಸಿದ್ಧವಿದೆಂದನು || ೧೮೨ ||

***ಅಂತು ಸಂಧಿ ೧ಕ್ಕೆ ಯಕ್ಷಗಾನ ಅಭಿಮನ್ಯುಕಾಳಗ ಮುಗಿದುದು***

## ಎರಡನೆಯ ಸಂಧಿ : ಸೈಂಧವ ವಧೆ

**ಭಾಮಿನಿ**

ಅವನಿಪತಿ ಕೇಳೈ ಕಿರೀಟಿಯ |
ಕುವರನಳಿದುದ ಕೇಳಿ ದುಗುಡದಿ |
ಪವನಸುತ ನಕುಲಾದಿಗಳು ಪೊಕ್ಕರು ನಿಜಾಲಯವ ||
ಇವರ ಕಾಣುತ ಮಗನ ಸುದ್ದಿಯ |
ನವನಿಪತಿ ಬೆಸಗೊಳಲು ಮಿಗೆ ವಾ |
ಸವನ ಗದ್ದುಗೆಯೇರಿದನುಯೆನಲರಸನಳಲಿದನು || ೧ ||

**ರಾಗ ಆನಂದಭೈರವಿ ರೂಪಕತಾಳ**

ಅಯ್ಯೋ ಮೋಹದ ಕಂದ | ಏನಾದೆಯೊ ಗುಣವೃಂದ ||
ಕಯ್ಯಾರೆ ಕೊಲಿಸಿದಂ | ತಾದುದೆಯೆನ್ನಿಂದ || ಅಯ್ಯೊ || ಪಲ್ಲವಿ ||

ಧರ್ಯದಿ ಸಿಂಹನ ಪೋಲುವ | ವೀರ ರಣಶೂರ |
ವೈರಿಗಳೆಂಬಡವಿಗೆ ದಾ | ವಾಗ್ನಿಯಾಕಾರ || ಅಯ್ಯೋ || ೨ ||

ಭೈರವವಿಕ್ರಮ ನಿನ್ನುವ | ನೆಂತು ಮರೆತಿಹುದೀಗ |
ಸೈರಿಸುವೆ ನಾ ಮನದಳಲನು | ಸವೆದುದೆ ಸಂಯೋಗ || ಅಯ್ಯೋ || ೩ ||

ಗೌರೀಶಸಖ ಪಾರ್ಥರು | ಬಂದು ಕೇಳಿದರೇನು |
ಪೌರುಷವಾಡುವೆನವರೊಳು | ಪತಿಕರಿಸುತ ನಾನು || ಅಯ್ಯೋ || ೪ ||

ಕೌರವ ಕೊಂದನೆನಲೊ | ನಾನೇ ಕೊಂದೆನೆನಲೊ ||
ನಿವೃತ್ತಿಯ ಕಾಣೆನು ಹುತ | ವಾಹನನನು ಪೊಗಲೊ || ಅಯ್ಯೋ || ೫ ||

**ಭಾಮಿನಿ**

ಕುಲಿಶಹತಿಯಲಿ ಕುಲಶಿಲೋಚ್ಚಯ |
ಇಳೆಗೆ ಒರಗುವ ತೆರದಿ ಧರ್ಮಜ |
ನಳಲಿ ಮೂರ್ಛಿತನಾಗಲಾ ಭೀಮಾದಿಗಳು ಮರುಗಿ |
ಕಳವಳವಗೊಳಲಂದು ವಾರ್ತೆಯ |
ತಿಳಿದು ದ್ರುಪದಾತ್ಮಜೆ ಸುಭದ್ರೆಯ |
ರಳುತ ಬಂದಡಗೆಡೆದರೆಮನಂದನನ ಸಭೆಯೊಳಗೆ || ೬ ||

**ರಾಗ ಯರಕಲ ಕಾಂಭೋಜಿ ಏಕತಾಳ**

ಆವಲ್ಲಿ ಪೋದೆಯಭಿಮನ್ಯು | ಅಯ್ಯಯ್ಯೊ ಎನ್ನ | ಜೀವರತ್ನವೆ ಬಾ ಇನ್ನು ||
ಜೀವದಾಸೆಗೆ ಬಾಲನ | ಸಂಗರಕಟ್ಟಿ | ತಾವಿಂದು ಕುಳಿತ ಜತನ || ೭ ||

ಅಳದಿರು ಯುಧಿಷ್ಠಿರರಾಯ | ಸುಮ್ಮನಿರಯ್ಯ | ತಿಳಿದೆ ನಾ ನಿಮ್ಮ ಬಗೆಯ ||
ಹಲುಬಿದರಿನ್ನು ಬಾಹನೆ | ಮಡಿದಭಿಮನ್ಯು | ಫಳಿಲನೆನ್ನಯ ಮರಿಯಾನೆ || ೮ ||

ಅಕಟ ನೀನೇಕೆ ಪುಟ್ಟಿದೆ | ಪಾಪಿಯುದರದಿ | ನಕುಲ ಭೀಮರ್ಗೆ ಜನಿಸದೆ ||
ಸುಕೃತವಿಲ್ಲ ನಿನ್ನಯ್ಯಗೆ | ಅದರಿಂದ ಬಲು ಕಂ | ಟಕರಾದರವರ್ ನಿನಗೆ || ೯ ||

ಧುರವನ್ನು ಹೊಗಬಲ್ಲನೆ | ಷಡುರಥರೊಳು | ಇರಿದಾಡತಕ್ಕವನೆ |
ಧರೆಯ ವೈಭವಕೋಸುಗ | ಎನ್ನಣುಗನ | ತ್ವರಿತದಿಂದಟ್ಟಿದರಾಗ || ೧೦ ||

ಕರುಣಿಗಳೆಂಬರೆಲ್ಲರು | ಈ ಧರ್ಮರಾಯ | ಕೊರಳ ಕೊಯ್ದುದನರಿಯರು ||
ತರಳರೀ ದ್ರೌಪದೇಯರ | ಗಜಪುರ ಪೊಗಿಸಿ | ಮೆರೆಸಿ ರಾಜ್ಯದ ಬಹುಭಾರ || ೧೧ ||

**ಭಾಮಿನಿ**

ಅರಸ ಜನಮೇಜಯನೆ ಕೇಳಂ |
ಬುರುಹನೇತ್ರೆಯ ವಚನಶಸ್ತ್ರಗ |
ಳಿರದೆ ಕೊಂಡವು ಭೂಪನಂಗವನೇನ ಬಣ್ಣಿಪೆನು ||
ಉರಿವ ಕಿಚ್ಚಿಗೆ ಘೃತವನಿಕ್ಕಿದ |

ಪರಿಯದಾಯ್ತನಿತರೊಳು ತಿಳಿದಾ |
ಪರಮ ವೇದವ್ಯಾಸ ಬಂದನು ಜನಪನಿದ್ದೆಡೆಗೆ || ೧೨ ||

**ರಾಗ ಶಂಕರಾಭರಣ ಏಕತಾಳ**

ಬಂದ ವೇದವ್ಯಾಸಮುನಿಗೆ | ವಂದಿಸಿ ಭಕ್ತಿಯೊಳಿರಲು |
ಕಂದುಮೊಗದ ನೃಪನ ಶಿರವ | ನಂದೆತ್ತಿ ನುಡಿದ || ೧೩ ||

ತಿಳಿದು ಬಂದೆ ನಿಮ್ಮ ದುಃಖಂ | ಗಳನೆಲ್ಲವ ಪೇಳ್ವುದೇನು |
ನಳಿನಭವನು ಬರೆದ ಬರೆಹಂ | ಗಳ ಮೀರ್ವರಾರು || ೧೪ ||

ಅಡಸಿದಾಪತ್ತಿನಲ್ಲಿ ಧೈರ್ಯ | ವಿಡಿದಿರ್ಪುದಲ್ಲದೆ ಬಾಯ |
ಬಿಡಲೆದ್ದು ಬಾಹನೆ ಇನ್ನು | ಮಡಿದ ಅಭಿಮನ್ಯು || ೧೫ ||

ಋಣರೂಪದಿಂದಲಿ ನಿಜ | ವನಿತೆ ಪುತ್ರ ಗೋಗೃಹಂಗಳ್ |
ಋಣವು ತೀರೆ ಕಾಕತ್ರಯವು | ಗುಣಭೇದ ನೋಡೈ || ೧೬ ||

ಹಿಂದೆ ಕಂಪನೆಂಬ ನೃಪಗೆ | ಕಂದನೋರ್ವ ಹರಿಯೆಂಬಾತ |
ಅಂದು ಮಡಿಯಲಿಂತು ದುಃಖಿಸೆ | ಬಂದ ನಾರದ || ೧೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧಾರಿಣೀಶ್ವರ ಕೇಳು ಮೃತ್ಯುವ | ನಾರು ಜಯಿಸುವರುಂಟು ಜಗದೊಳ |
ಗಾರಿಗಾದರು ತಪ್ಪಲರಿಯದ | ಪಾರವೆಂದ || ೧೮ ||

ಸತ್ಯವಚನವ ಕೇಳಿ ಭೂಪತಿ | ಮತ್ತೆ ನುಡಿದನು ದೇವ ಋಷಿಯೊಳು |
ಮೃತ್ಯುದೇವತೆ ಯಾರು ವಿವರಿಸೆ | ನುತ್ತ ಬಿಡದೆ || ೧೯ ||

ಜನಪ ಕೇಳಾ ಬ್ರಹ್ಮದೇವನ | ಘನತರದ ಕೋಪದಲಿ ಜನಿಸಿದ |
ಮನಸಿಜಾರಿಯು ಮತ್ತೆ ಪುಟ್ಟಿದಳ್ | ವನಿತೆ ಮೃತ್ಯು  || ೨೦ ||

ಅವಳ ತೆತ್ತಿಗರಾರು ಮಂದಿಯು | ವಿವರಿಸಲು ಷಡ್ವರ್ಗರುಜೆಗಳು |
ಅವಳ ಬಳಗವಿದೆಂದು ತಿಳಿವುದು | ಭುವನದೊಳಗೆ || ೨೧ ||

ಧರೆಯನಾಳುವ ವೀರ ಷೋಡಶ | ಧೊರೆಗಳವಳೊಶವಾದರೈ ವಿ |
ಸ್ತರಿಸಲೇನೆಂದಭಯಗೊಡುತಲೆ | ಭರದಿ ನಡೆದ || ೨೨ ||

**ಭಾಮಿನಿ**

ಕಂಪನಣುಗನ ಕಥೆಯ ಕೇಳುತ |
ತಂಪುಗೊಳಿಸಲು ಮತ್ತೆ ಬಾಲನ |
ನೆಂಪುಗೊಂಡಳಲುತ್ತ ನುಡಿದನು ವ್ಯಾಸಮುನಿಯೊಡನೆ ||
ಸೊಂಪು ಗುಣದಲಿ ಶೌರ್ಯ ತಾಪದ |
ಕಂಪಿನಲಿ ಸುತಗೆಣೆಯ ಕಾಣೆನು |
ಕಂಪನಣುಗನ ಪರಿಯಿದಲ್ಲೆಂದನು ಯುಧಿಷ್ಠಿರನು || ೧೩ ||

**ರಾಗ ಸಾಂಗತ್ಯ ರೂಪಕತಾಳ**

ಜನಪ ಕೇಳ್ ಜನನವೆ ಲಯಬೀಜ ಮರಣವು | ಜನನಬೀಜವ ತೋರಿಕೆಡುವ ||
ತನುವಿನಾನಂದಕ್ಕೆ ಮನಮಾಡದಿರ್ದು ನಿ | ನ್ನನು ನೀನೆ ತಿಳಿಯೆಂದ ಮುನಿಪ || ೧೪ |

ಬುಧನಭಿಮನ್ಯುವೆಂದರಿತುಕೊ ಮನದಲ್ಲಿ | ಕುದಿಗೊಳ್ಳಬೇಡ ನೀ ಬರಿದೆ ||
ಒದಗಿ ಪುಟ್ಟಿದನರ್ಜುನಗೆ ಸುತನಾಗುತ್ತ | ಪದಿನಾಲ್ಕು ವರುಷವೆಯವಧಿ || ೧೫ ||

ದೇಹಾಭಿಮನ್ಯುವೋ ಜೀವವೋ ದಿಟ ಜಡ | ದೇಹ ಕೆಟ್ಟರೆ ಹೋದುದೇನು ||
ದೇಹ ಶಾಶ್ವತವಲ್ಲ ಮಡಿದುಹೋದವರೊಳು | ಮೋಹವನಿಟ್ಟಳಲದಿರು || ೧೬ ||

ಎಂದು ಸುಜ್ಞಾನಬೋಧೆಯ ಪೇಳಿವ್ಯಾಸ ಮು | ನೀಂದ್ರನಾಶ್ರಮಕಡಿಯಿಡಲು ||
ಕಂದ ವಾಸವನಲ್ಲಿ ಪೋದುದನರಿತು ಮು | ಕುಂದ ತಾ ತಿರುಹಿದ ರಥವ || ೧೭ ||

ತರಣಿ ತಾ ಮುಳುಗಿದನಾಲಿಸು ಫಲುಗುಣ | ತೆರಳುವ ಶಿಬಿರಕಿಂದಿನಲಿ ||
ಧುರದ ಸಂಗತಿಯೆಲ್ಲ ನಾಳೆಯೆಂದಚ್ಯುತ | ಕರೆತಂದನಧಿಕ ವೇಗದಲಿ || ೧೮ ||

**ಭಾಮಿನಿ**

ಹರಿಧನಂಜಯರಿತ್ತ ಬರುತಿರೆ |
ಸರಸವಾಡುತ ಪಾರ್ಥನನು ಕಂ |
ಡರೆನಗೆಯೊಳಾಲೋಚಿಸಿದನಸುರಾರಿ ಚಿತ್ತದಲಿ ||
ತರಳನಳಿದುದ ಸುರಪತನುಜನಿ |
ಗರುಹಬೇಕೆನುತಾಗ ಮೆಲ್ಲನೆ |
ನರಗೆ ಪೇಳ್ದನು ಜಲವ ಮುಳುಗುವುದೆನುತ ವಹಿಲದಲಿ || ೧೯ ||

**ವಾರ್ಧಕ**

ಇಂತುಸಿರುತಾ ಕ್ಷಣವೆ ಸುರಪತನುಜಾತನಂ |
ಕಂತುಪಿತ ಕೂಡಿ ಕೊಳಕಿಳಿದು ವಿಜಯನೊಳೆಂದ |
ಸಂತಸದಿ ಜಲವ ಮುಳುಗಿದ ಬಳಿಕ ಕಡೆಗೆ ಮುಂದೇಳ್ವರಾರ್ ನೋಳ್ಪುದೆಂದು ||
ಪಂಥವೆಸಗುತ ನೀರ ಮುಳುಗಿದಾ ಮೇಲೆ ಹರಿ |

ಯಂತರಂಗದಿ ಶರವ ಬಗಿದೆದ್ದು ವೇಗದಿಂ |
ನಿಂತರ್ಜುನನೊಳೆಂದ ಕೇಳು ಫಲುಗುಣ ನಿನ್ನ ಸುತ ಮರಣಕಯ್ದನೆನುತ || ೩೦ ||

**ಕಂದ**

ಇಂತಚ್ಯುತನೊರೆದಾಪವ |
ಸಂತಸದಿಂ ಮುಳುಗೆ ಪಾರ್ಥನೆದ್ದಾಕ್ಷಣದೊಳ್ |
ನಿಂತಾಲಿಸಿ ಬಲು ದುಗುಡದಿ |
ಕಂತುಪಿತನ ಕರೆದೆಬ್ಬಿಸಿ ನುಡಿದಂ ಜವದೊಳ್ || ೩೧ ||

**ಭಾಮಿನಿ**

ಪಂಚಬಾಣನ ಪಿತನೆ ಕೇಳ್ ಗಗ |
ನಾಂಚಲದಿ ನುಡಿ ಕೇಳಿ ಮನದಿ ಪ |

ಳಂಚಿಸುವುದಿನ್ನಾಯ್ತು ವಂಚಿಸಬೇಡ ಮುರವೈರಿ ||
ಚಂಚಲವು ಬಲುವಾಗಿ ಚಿತ್ತವ |
ಮಿಂಚಿಹೋಗುವುದೆನುತ ನುಡಿಯಲು |
ಮುಂಚೆ ತಿಳಿದುದು ಸುತನ ಮರಣದ ಶಕುನ ಪಾರ್ಥನಿಗೆ || ೩೨ ||

**ರಾಗ ಬಿಲಹರಿ ಅಷ್ಟತಾಳ**

ತಿಳಿದುದಾ ಕ್ಷಣ ಪುತ್ರಶೋಕಲಕ್ಷಣಗಳು | ಫಲುಗುಣನಿಗೆ ಹೆಚ್ಚಿತಂದು ಸಂತಾಪ |
ಕಳವಳಗೊಂಡತಿ ಭಯದಿಂದಲುಸಿರಿದ | ನಳಿನನಾಭನೊಳು ಕಂಬನಿಯ ತುಂಬುತಲೆ || ೩೩ ||

ಸೆಳೆದೊಡಲೊಳಗುರಿತಾಪ ಹೆಚ್ಚಿದೆ ಧೈರ್ಯ | ಕಳವಳಗೊಡುತಿದೆ ಕಡು ಭಯವಾಗಿ |
ತಳುವದಿಂತಾಗುವ ಕಾರಣವೇನೆಂದು | ಒಳವ ಪೇಳಯ್ಯ ವಾಸುದೇವ ಸಂಜೀವ || ೩೪ ||

ಕಂದನಿರವ ಕಾಣದಾಪೆನು ಕೌರವರ್ | ಕೊಂದರೆಂಬುದ ಕೇಳುವೆನೊ ಕಿವಿಯೊಳಗೆ ||
ಇಂದಿನ ಚಕ್ರವ್ಯೂಹದಿಂದ ಬಾಲಕನಿಗೆ | ಬಂದ ಕಂಟಕವಲ್ಲದಿಲ್ಲ ನಿಶ್ಚಯವು || ೩೫ ||

ತಂದೆ ಕೇಳೀಗ ಧೃತಿಗುಂದದೆ ನಡೆ ನಿನ್ನ | ಕಂದನನಾರೊಯ್ವರೆಂದು ಕಂಸಾರಿ |
ಬಂದು ಪಾರ್ಥನ ರಾಜಮಂದಿರದೊಳು ಬಿಟ್ಟು | ನಿಂದಿರದಯ್ದಿದ ಸಿಂಧುರವರದ || ೩೬ ||

**ವಾರ್ಧಕ**

ಸುರನಗರಿ ನಡುಗಿತು ಸುರೇಶ್ವರಂ ಪನ್ನಗಾ |
ಭರಣನಂ ನೆನೆನೆನದು ಯಮಪುರದಿ ಗಜಬಜಿಸಿ |
ಸರಕು ತೆಗೆದುದು ಮೃತ್ಯು ಪೊಕ್ಕಳು ಮಹೇಶ್ವರನ ಮರೆಯನತಿ ಭೀತಿಯಿಂದ |

ಬಿರಿದು ರಂಜಿಸಿ ಸಕಲ ಸೇನೆ ಪರಿವಾರವಿಳೆ |
ಯರಸನೇ ಗತಿಯೆಂದಿರಲ್ ನರನ ದುಮ್ಮಾನ |
ವಿರದೆ ತ್ರೈಜಗಗಳಂ ಬೆದರಿಸಿದುದೇನೆಂಬೆನಹಿತ ಬಲ ತಲ್ಲಣಿಸಲು || ೩೭ ||

**ಭಾಮಿನಿ**

ಧಾರಿಣೀಶ್ವರ ಕೇಳಿದಿರು ಬಹ |
ನಾರಿಯರ ರತುನಾರತಿಗಳನು |
ವೀರಕೊಳ್ಳದೆ ಬಂದು ಧರ್ಮಜಗೆರಗಲೆತ್ತುತಲೆ ||
ಭೂರಿ ಭಯಗೊಳಲಂದು ತನ್ನಕು |
ಮಾರನಾವೆಡೆ ಕಾಣೆನೀ ಪರಿ |
ವಾರದೊಳಗೆನಲಳುತ ಬಂದೆರಗಿದಳು ಸೌಭದ್ರೆ || ೩೮ ||

**ರಾಗ ನವರೋಜು ಆದಿತಾಳ**

ಸುತನಿಂದೆಲ್ಲಿಗೆ ಪೋದ | ಪ್ರಾಣ | ರತುನ ತಾನೇನಾದ ||
ಪತಿಯೆ ನೀ ತೋರೆಂದು | ಬಿದ್ದ | ಳತಿ ದುಃಖದೊಳು ನೊಂದು || ೩೯ ||

ರಣಸಾಹಸಿಗಳಿದ್ದು | ಏ | ನ್ನಣುಗನಟ್ಟಿದರಿಂದು |
ಋಣವು ತೀರಿತೆಯೆಂದು | ನರ | ವನಿತೆ ಕೂಗಿದಳಂದು || ೪೦ ||

ಬಾ ಮಗನೆ ಪಿತನೆಡೆಗೆ | ಬಹು | ಪ್ರೇಮವ ತೋರಿಸು ನಮಗೆ ||
ನೀ ಮುನಿದು ಪೋಗುವರೆ | ರಣ | ಕಾಮಿತನಾಗ್ಯಗಲುವರೆ || ೪೧ ||

ಸ್ಮರಕೋಟಿಶೃಂಗಾರ | ಸ | ಚ್ಚರಿತ ಸಂಗರಧೀರ ||
ಅರಿಗಜ ಸಿಂಹಾಕಾರ | ಮರೆ | ದಿರಲೆಂತು ಸುಕುಮಾರ || ೪೨ ||

**ಭಾಮಿನಿ**

ಅರಸ ಕೇಳಿಂತಳುವ ಕಾಂತೆಯ |
ಸುರಿವ ಕಂಬನಿಯೊರಸಿ ದುಃಖಿ |
ಕರಗಿ ಸಂತಾಪದಲಿ ಬೆದೆ ಬೆದೆಬೆಂದು ಕಡು ನೊಂದು ||
ತರಹರಿಸಿ ಬಾಯಾರಿ ತನ್ನಯ |
ತರಳನಾವೆಡೆ ಹೇಳು ಹೇಳ್ಳೈ |
ಹಿರಿದು ಬಳಲಿಸಬೇಡವೆಂದಗ್ರಜನ ಬೆಸಗೊಂಡ || ೪೩ ||

**ರಾಗ ನೀಲಾಂಬರಿ ರೂಪಕತಾಳ**

ಪತಿಯು ಮಡಿದಿಹ | ಸತಿಯು ನಾಯಕ | ರತುನವಿಲ್ಲದ | ಪದಕ ದೇವತಾ ||
ಸ್ತುತಿಗಳಿಲ್ಲದ | ಕಾವ್ಯರಚನೆಯು | ಸುತನು ತೋರದ | ಸಭೆಯಿದೇನೈ || ೪೪ ||

ಬರಲು ಇದಿರಾಗಿ | ಬಂದು ಮೋಹದಿ | ಕರದಿ ಮೆಯ್ಯನು | ತಡವರಿಸುತಲಿ ||
ಸರಳ ಗಾಯವ | ಕಂಡು ಮರುಗುವ | ತರಳನೆಲ್ಲಿಗೆ | ಪೋದನಗ್ರಜ || ೪೫ ||

ಭೀಮನೀ ಮಹಾ | ದ್ರುಪದ ನಕುಲ ನಿ | ಸ್ಸೀಮ ಸಾತ್ಯಕಿ | ಮುಖ್ಯರಿದ್ದೆನ್ನ ||
ಕಾಮಧೇನುವ | ಕಳುಹಿ ಕೊಟ್ಟರೆ | ಕ್ಷೇಮವಾಯಿತೇ | ನಿಮ್ಮ ಮನಸಿಗೆ || ೪೬ ||

ವಿಗಡರಿನಿಬರು | ಇದ್ದು ದುರ್ಗವ | ಹೊಗದೆ ಹೊರಗಣ | ಮಾರಿ ಹೊರಗಿಂದ |
ಅಗಲಲೆನುತಲಿ | ಅಟ್ಟಿದಿರಲ್ಲ | ಮಗನ ಕಾಣದೆ | ಮನಸು ನಿಲ್ಲದು || ೪೭ ||

**ಭಾಮಿನಿ**

ನುಡಿದು ಫಲವೇನಕಟ ತಾನಿ |
ನ್ನೊಡೆಯರಿಲ್ಲದ ವಸ್ತುವಾದೆನು |
ಪಡೆದ ಪುಣ್ಯವಿದೆಂದು ಬಿಸುಸುಯ್ದುಳಲಿ ಮೂರ್ಛಿಸುತ ||
ಹೊಡಕರಿಸಿ ಕೊಂಡೆದ್ದು ರೋಷದಿ |
ಕಡೆಯ ವಡಬಾನಲನ ತೆರದಲಿ |
ನುಡಿದ ಕೊಂದವನಾರು ಮಗನನು ನಿಜದಿ ಪೇಳೆನಲು || ೪೮ ||

**ರಾಗ ಭೈರವಿ ಏಕತಾಳ**

ಶರದ ಪಂಡಿತನೆಂಬವನೊ | ಸಂ | ಗರದಲಿ ರಿಪು ಸೈಂಧವನೊ ||
ತರಣಿಸುತನೊ ಸೌಬಲನೊ | ವಿ | ಸ್ತರಿಸೈ ಯಾರೆಂಬುದನು || ೪೯ ||

ಅಶ್ವತ್ಥಾಮನೊ ಕೃಪನೊ | ಕಲಿ | ದುಶ್ಯಾಸನನೆಂಬವನೊ ||
ಶಾಶ್ವತ ಭೂರಿಶ್ರವನೊ | ಪೇ | ಳೀಶ್ವರನಾಣೆ ಕೊಲ್ಲುವೆನು || ೫೦ ||

ಕೃತವರ್ಮನೊ ಬಾಹ್ಲಿಕನೊ | ಭೂ | ಪತಿ ಶಲ್ಯನೊ ತತ್ಸುತನೊ ||
ಕೃತಕದಿ ಕೊಂದವನಾರು | ಪೇ | ಳತಿಶಯದಲಿ ದಯೆದೋರು || ೫೧ ||

**ರಾಗ ದೇಶಿ ಝಂಪೆತಾಳ**

ಕೇಳಯ್ಯ ದೇವೇಂದ್ರಜಾತ ವಿಖ್ಯಾತ || ಪಲ್ಲವಿ ||

ನೀನು ಸಮಸಪ್ತಕರ ಧುರಕೆ ಪೋಗಲು ಭೀಮ |
ಸೇನ ಸಾತ್ಯಕಿ ನಕುಲ ದ್ರುಪದಾದಿ ನೃಪರು || ೫೨ ||

ಚಕ್ರವ್ಯೂಹವ ಪೊಗದೆ ನೊಂದು ಬಂದರು ಬಳಿಕ |
ವಿಕ್ರಮದೊಳಭಿಮನ್ಯು ಪೋದನಾಹವಕೆ || ೫೩ ||

ಅರಸನಾತ್ಮಜರ ನೂರ್ವರನು ಕೊಂದಾರಣದಿ |
ಒರಸಿದನು ಬಿಡದೆ ಮೂರಕ್ಷೌಹಿಣೀ ಬಲವ || ೫೪ ||

ತರಳನಿಗೆ ಬೆಂಬಲಕೆ ಪೋದವರ ಬಾಗಿಲೊಳು |
ಹರನ ವರವುಂಟೆಂದು ತಡೆದ ಸೈಂಧವನು || ೫೫ ||

ವೀರಾಧಿವೀರ ಷಡುರಥರೊಡನೆ ಹೊಯ್ದಾಡಿ |
ಏರಿದನು ಮಗನು ವಾಸವನ ಗದ್ದುಗೆಯ  || ೫೬ ||

ತರಳನಿಗೆ ಮರಣವನು ತಂದವನೆ ಸೈಂಧವನು |
ಅರುಹಲೇನೆನಲು ಕಿಡಿಗೆದರಿದನು ಪಾರ್ಥ || ೫೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರರೆ ಪ್ರಳಯದ ರುದ್ರನೆನೆ ಹೂಂ | ಕರಿಸುತಡಿಯಿಡುತೌಡುಗಚ್ಚುತ |
ನರನು ವೀರಾವೇಶದಲಿ ಭೂ | ವರನಿಗೆಂದ || ೫೮ ||

ಹುಡುಗನನು ಕೊಂದವನ ದೇಹಕೆ | ಹಿಡಿಯಿದಕೊ ಮಿಗೆ ಸಂಚಕಾರವು |
ನುಡಿದು ತಪ್ಪಿದರಿದಕೆ ಕೇಳ್ ನಿ | ನ್ನಡಿಗಳಾಣೆ || ೫೯ ||

ನಾಳೆ ಬೈಗಿಂದೊಳಗೆ ರಿಪುವನು | ಸೀಳುವೆನು ಸೀಳದಡೆ ಬಲು ನರ |
ಕಾಳಿಯಾಗಲಿ ತನಗೆ ಭಾಷೆಯ | ಕೇಳುಭೂಪ || ೬೦ ||

ಹರಿಹರರ ಮರೆಹೊಗಲಿ ವಾಣೀ | ವರನ ಕರದ ಕಮಂಡಲದೊಳವ |
ನಿರದೆ ಹುದುಗಲಿ ಸೈಂಧವನ ಸಂ | ಹರಿಸದಿರೆನು || ೬೧ ||

ರವಿಯು ಮುಳುಗದ ಮುನ್ನ ರಿಪು ಸೈಂ | ಧವನ ನಾಳಿನೊಳೊರೆಸದಿರ್ದಡೆ |
ಅವಗಡಿಸಿ ದಾವಾನಲನ ಕುಂ | ಡವನು ಹೊಗುವೆ || ೬೨ ||

**ಭಾಮಿನಿ**

ಕೇಳು ಧರ್ಮಜನೆಂಬ ಶೌರ್ಯ ಛ |
ಡಾಳತನ ನುಡಿಯಾಲಿಸುತ್ತ ಮ |
ರಾಳವಾಹನನಯ್ಯನತಿ ಹಿಗ್ಗುತಲೆ ನಡೆತಂದು ||
ಲೀಲೆಯಲಿ ಕಂಡಾಗ ಪಾರ್ಥನ |

ಮೇಲೆ ಕರುಣಾರಸವ ಬೀರುತ |
ಶ್ರೀಲತಾಂಗಿಯ ರಮಣ ನುಡಿದನು ಮಧುರವಚನದಲಿ || ೬೩ ||

**ರಾಗ ನವರೋಜು ಏಕತಾಳ**

ಮೆಚ್ಚಿದೆ ಮೆಚ್ಚಿದೆ ಪಾರ್ಥ | ನಿನ್ನ | ಹೆಚ್ಚಿನ ಭಾಷೆಯು ಸ್ವಾರ್ಥ || ಪ ||

ವೈರಿ ಸೈಂಧವಭಟನ | ಸಂ | ಸಾರವು ತೀರಿತು ವಚನ ||
ಮೀರುವರ್ ಯಾರು ಸುರಾಸುರರೊಳು ರಘು |
ವೀರನ ಬಾಣವಲ್ಲವೆ ನಿನ್ನಯ ನುಡಿ || ಮೆಚ್ಚಿದೆ || ೬೪ ||

ಖೂಳ ಸೈಂಧವನೃಪನ | ನೀ | ಸೀಳಲು ಪೋಗಿಹ ಮಗನ |
ಬಾಳಾಂಬಕನೊಳು ಪಡೆದಂತಾಯಿತು |
ನಾಳೆಗೆ ಸರ್ವರ ಶೋಕ ನಿವಾರಣ || ಮೆಚ್ಚಿದೆ || ೬೫ ||

**ಭಾಮಿನಿ**

ಇಂತು ಗೋವಿಂದನು ಕಿರೀಟಿಯ |
ಸಂತವಿಸಲಾ ಪುತ್ರಶೋಕವ |
ನಾಂತು ಮಗುಳಾಧರಿಸಲಾರದೆ ಬಂದು ಸೌಭದ್ರೆ ||
ಕಂತುಪಿತನಂಘ್ರಿಯಲಿ ಬಿದ್ದು ಮ |
ಹಾಂತವಾಗಿ ಪ್ರಲಾಪಿಸಿದಳದ |
ನೆಂತು ಬಣ್ಣಿಪೆ ಕೇಳು ಜನಮೇಜಯಮಹೀಪತಿಯೆ || ೬೬ ||

**ರಾಗ ರೇಗುಪ್ತಿ ಆದಿತಾಳ**

ಅಣ್ಣ ನಾ ಮರೆವುದೆಂತು | ಎನ್ನಯ ಮುದ್ದು | ಚೆಣ್ಣನ ಋಣವು ಸಂತು ||
ಪುಣ್ಯಶ್ಲೋಕನೆ ನಿನಗಳಿಯನೆನಿಸುತೆನ್ನ | ಕಣ್ಣಮುಂದಿರುತಿರ್ದನು | ಅಭಿಮನ್ಯು || ೬೭ ||

ಹದಿನಾಲ್ಕು ವರುಷದೊಳು | ಕಂಟಕವು ಬಂ | ದೊದಗಲೆಂದಷ್ಟರೊಳು ||
ಪದುಮಭವನು ಫಣೆಯೊಳಗಿಂತು ಬರೆದನು | ಹದಮೀರಿ ಹೋಯಿತಲ್ಲ | ಈಶ್ವರ ಬಲ್ಲ || ೬೮ ||

ನೀವೆಲ್ಲರಿದ್ದಿರಲ್ಲ | ಎನ್ನಣುಗನಿ | ಗೀ ವಿಧಿಯಾಯಿತಲ್ಲ |
ಆವ ಪ್ರಕಾರದಿ ಸೈರಿಸಿಕೊಳಲಿನ್ನು | ದಾವಾಗ್ನಿಯನು ಹೊಗಲೋ | ಬಾಳಿರಲೋ || ೬೯ ||

**ವಚನ**
ಈ ರೀತಿಯಿಂದ ಸುಭದ್ರಾದೇವಿ ದುಃಖಿಸುತ್ತಿರಲಾಗಿ ಕೃಷ್ಣನು ಏನೆಂದು ಸಂತೈಸುತಿರ್ದನೆಂತೆನೆ -

**ರಾಗ ಮಧ್ಯಮಾವತಿ ಏಕತಾಳ**

ಕೇಳವ್ವ ತಂಗಿ ನೀ ಮರುಗದಿರಿನ್ನು | ಪೇಳುವೆ ಸೈರಿಸಬೇಕು ದುಃಖವನು ||
ಫಾಲದಿ ಕಮಲಜ ಬರೆದಕ್ಕರವನು | ತಾಳದೆ ಮೀರ್ವರ್ ಯಾರುಂಟು ಕರ್ಮವನು || ೭೦ ||

ಮಗನಿಗೆ ಮರಣವ ತಂದ ಖೂಳನನು | ಸಿಗಿಸುವೆ ನಾಳೆ ನೀ ನೋಡು ಭಾಷೆಯನು ||
ಮೃಗರಾಜನೊಳು ಮುನಿದಿಭವು ಬಾಳುವುದೆ | ಹಗರಣವನು ಬಿಟ್ಟು ತೆರಳು ದುಃಖಿಸದೆ || ೭೧ ||

**ವಾರ್ಧಕ**

ನಳಿನಾಕ್ಷನಿಂತೆಂದು ತಂಗಿಯನೊಡಂಬಡಿಸಿ |
ಮೊಳಗಿಸಿದನಾ ಪಾಂಚಜನ್ಯಮಂ ಕೋಟಿ ಸಿಡಿ |
ಲುಲಿವವೋಲಪ್ಪಳಿಸಲಾ ನರಂ ಕೂಡೆ ವರ ದೇವದತ್ತವನೂದಲು ||
ಘುಳು ಘುಳು ಧ್ವನಿ ಛಡಾಳಿಸುತೆಂಟು ದಿಕ್ಕಿನೊಳು |
ಕಳವಳಂಕೊಂಡು ಮೈಮರೆಯಲು ಜಗತ್ರಯಂ |
ಬಳಿಕ ಕುರುಸೇನೆ ತಲೆಗೆಳಗಾದುದಾ ರಾತ್ರೆ ಫಲುಗುಣನ ಭೀತಿಯಿಂದ || ೭೨ ||

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಕೇಳು ಕೇಳು ಧರಣಿಪಾಲಕ | ಇರುಳು ಬೊಂ |
ಬಾಳದೀವಿಗೆಗಳ ಪಿಡಿದ | ರಾಳು ಹರಿದುವೆಂಟು ದೆಸೆಗೆ || ಕೇಳು || ಪಲ್ಲವಿ ||

ಎಲೆಲೆ ಕುಳ್ಳರಿವರು ನಮ್ಮ | ಹೊಳಲು ಹೊಕ್ಕು ರಾತ್ರಿ ಬರಿದೆ |
ಧಳಧುಳಿಯನು ಮಾಡುತಿಹರು | ಕೊಲೆಗಡುಕರು ಪಾಂಡುಸುತರು |
ನಿಲದೆ ಕವಿಯೆನುತ್ತ ಸುಭಟರು | ಹೊಕ್ಕು ತಮ್ಮ |
ದಳದಿ ಹೊಯ್ದು ಹಳಚುತಿರ್ದರು || ಕೌರವನ್ನ
ಬಳಿಗೆ ಬಂದರೋಡಿ ರಥಿಕ | ರಳವಿಗೊಡುತಲಹಿತಬಲದಿ || ಕೇಳು || ೭೩ ||

ಕಡಿವಣವನು ಕರಿಯ ಮುಖಕೆ | ತೊಡಿಸಿ ದಂತಿ ಘಟೆಗಳಿಂಗೆ |
ನಿಡುನೊಗಂಗಳನ್ನು ಕಟ್ಟಿ | ಬಿಡದೆ ಕಿವಿಯೊಳ್ ಕೀಲನಿಕ್ಕಿ |
ಝುಡಿಯುತಿರ್ದರೇನನೆಂಬೆನು | ಗುಳವ ಕುದುರೆ |
ಗಿಡಿಸಿ ಬಿಡಿಸಿ ಹೆಕ್ಕರಿಕೆಯನು || ಹಾಯ್ಕಿ ಶರವ ||
ಪಿಡಿದು ಧನುವ ಹೂಡಿ ಬಿಟ್ಟ | ರಡಸಿ ಮರುಳುಹಿಡಿದುದಾಗ || ಕೇಳು || ೭೪ ||

ಈತ ಪಾರ್ಥನೀತ ನಕುಲ | ನೀತ ದ್ರುಪದನೀತ ಭೀಮ |
ನೀತನೆಲೆ ಘಟೋತ್ಕಚನು ಭು | ಜಾತಿಶಯದ ವೀರರೆನುತ |
ಭೀತಿಯಿಂದ ಹೊಕ್ಕು ಹೊಯ್ದರು | ಕೌರವನನು |
ದೂತರೆಲ್ಲ ಮುತ್ತಿಕೊಂಡರು || ಬಳಿಕ ಸೇನೆ |
ಧಾತುಗೆಟ್ಟು ತಮ್ಮೊಳ್ ತಾವೆ | ಘಾತಿಸಿದರದೇನನೆಂಬೆ || ಕೇಳು || ೭೫ ||

**ಭಾಮಿನಿ**

ಅರಸ ಕೇಳಿಂತಾಗುತಿರಲ |
ಬ್ಬರಿಸಿ ಬೊಬ್ಬೆಯ ನಿಲಿಸುತಿರೆ ಬಂ |
ದರುಹಿದರು ಕೌರವಗೆ ಬೇಹಿನ ಚರರು ಸೈಂಧವನ ||
ಶಿರವ ಕೊಂಬನು ನಾಳೆ ಫಲುಗುಣ |
ನುರಿಯ ಹೊಗುವನು ಕೊಳ್ಳದಿರ್ದಡೆ |
ಸ್ಥಿರವಿದೆನಲಾ ನುಡಿಗೆ ಭಯಗೊಂಡನು ಜಯದ್ರಥನು || ೭೬ ||

**ರಾಗ ಸುರುಟಿ ಆದಿತಾಳ**

ಕೇಳು ಕೌರವೇಂದ್ರ | ಭಾಗ್ಯವಿ | ಶಾಲ ಸುಗುಣಸಾಂದ್ರ ||
ಬೀಳುಗೊಂಬೆವೀ ದೇಶವ ನಮಗೆ ಪ | ಲಾಯನಕಪ್ಪಣೆ ಕೊಡಿಸೈ ಬೇಗದಿ || ೭೭ ||

ನರನ ಕುಮಾರಕನ | ಕೊಂದವ | ನಿರದೆ ದುಶ್ಯಾಸನನ ||
ತರಳನು ನಾವ್ ಮಾಡಿದುದೇನೈ ಸುರ | ವರನಣುಗನಿಗೆ ವಿರೋಧವನಿಂದಿಲಿ || ೭೮ ||

ಹರನ ಶರದ ಬಲವು | ಮತ್ತಾ | ಮುರಮಥನನ ಒಲವು ||
ಇರುವದು ನರನ ನುಡಿಯು ಹೊಳ್ಳಾಗದು | ಬರಿದೊಂದಪಕೀರ್ತಿಯು ತನಗೊದಗಿತು || ೭೯ ||

ಶರದ ಪಂಡಿತನಿಂದ | ತನಗೀ | ಪರಿಯಾಯಿತು ಮುಂದಾ ||
ಹರನ ಮರೆಯ ಹೊಕ್ಕರು ತೀರದು ನಾಳೆ | ಶಿರವನು ಕಾಯ್ವರ ಕಾಣೆ ಮೂಲೋಕದಿ || ೮೦ ||

**ರಾಗ ಕೇದಾರಗೌಳ ಅಷ್ಟತಾಳ**

ಎಂದತಿ ಭಯಗೊಳಲಾಗ ಕೌರವರಾಯ | ನೆಂದ ಸೈಂಧವನೃಪಗೆ ||
ಇಂದಿದಕಂಜುವುದೇಕೆ ಭೀಮಾರ್ಜುನ | ರಿಂದಲೇನಾಗುವುದು || ೮೧ ||

ಭೀಮನ ಭಾಷೆಯೇನಾಯಿತು ತನ್ನಯ | ಕಾಮಿನಿಗಾಗಿ ಪೇಳ್ದ ||
ಸಾಮರ್ಥ್ಯವೇಕೆ ತೋರನು ಬಿಡು ಭಯವನು | ನೀ ಮರುಗದಿರೆಂದನು || ೮೨ ||

ಗರಡಿಯಾಚಾರ್ಯನ ಬಲವುಂಟು ವಜ್ರಪಂ | ಜರವಾಗಿ ನಮಗಿಂದಿಲಿ ||
ಪೊರೆವನು ನಾವಾತಗರುಹುವುದೆಂದಾಗೆ | ಲ್ಲರು ಬಂದರವನೆಡೆಗೆ || ೮೩ ||

**ಭಾಮಿನಿ**

ವಸುಧೆಪತಿ ಕೇಳಾ ಜಯದ್ರಥ |
ನೆಸೆವ ಕರ್ಣ ಕೃಪಾದಿಗಳು ಬಂ |
ದಸಮಬಲ ದ್ರೋಣಂಗೆ ಕಾಣಿಸಿಕೊಳಲು ತವಕದಲಿ ||

ಉಸಿರಿರ್‍ಯಾತಕೆ ಬಂದಿರೀ ನಡು |
ನಿಶಿಯೊಳೆಂದಡೆ ಕೌರವೇಂದ್ರನು |
ಬಿಸುಸುಯುತ್ತರುಹಿದನು ಭೀತಿಯನೆಲ್ಲ ಕಲಶಜಗೆ || ೮೪ ||

**ರಾಗ ತುಜಾವಂತು ಝಂಪೆತಾಳ**

ಗರಡಿಯಾಚಾರ್ಯ ಕೇಳಯ್ಯ ಗುರುವರ್ಯ | ಅರುಹುವೆನು ಸೈಂಧವಗೆ ಬಂದ ದುರ್ಘಟವ || ಪ ||

ನಾಳೆ ರವಿ ತೊಲಗದಾ ಮುನ್ನ ಸೈಂಧವನೃಪನ | ಸೀಳುವೆನು ಸೀಳದಿರಲಗ್ನಿ ಕುಂಡದಲಿ ||
ಬೀಳುವೆನೆನುತ್ತ ಭಾಷೆಯ ತೊಟ್ಟ ಫಲುಗುಣನು | ಮೇಲೇನುಪಾಯ ಕಂಡುದನರುಹಿರೆಮಗೆ ||೮೫||

ಆ ನದೀಸುತನ ಮೇಲೆಮಗೆ ಪರಮಾಪ್ತ ಜನ | ನೀನಲ್ಲದಿಲ್ಲವೈ ನಿಶ್ಚಯವು ನೋಡೆ |
ಏನಾದರೊಂದು ಬಗೆಯೊಳು ಸೈಂಧವನ ಕಾಯ್ವು | ಜಾಣತನ ನಿಮ್ಮದಲ್ಲದೆ ಪಥವ ಕಾಣೆ || ೮೬ ||

ಎನುತ ಪಾದದಿ ಬಿದ್ದ ಕೌರವನ ಪಿಡಿದೆತ್ತಿ | ವಿನಯದಲಿ ಪೇಳಿದನು ಶಸ್ತ್ರಪಂಡಿತನು ||
ಜನಪ ಕೇಳಾರು ಕೊಲ್ಲುವರು ಕಾಯುವರೆಲ್ಲ | ಘನತೆ ದೈವಾಧೀನವಲ್ಲದಿನ್ನುಂಟೆ || ೮೭ ||

**ರಾಗ ಶಂಕರಾಭರಣ ಏಕತಾಳ**

ಕೌರವರಾಯ ಕೇಳಯ್ಯ | ಶೌರಿಯ ತಂತ್ರವಿದೆಲ್ಲ |
ಮೀರುವರಾರುಂಟು ಜಗದಿ | ಭೂರಿ ಮಹಿಮೆಯ || ೮೮ ||

ಆತ ಪಾಂಡುಸುತರ ಭಾರ | ವಾತು ಕೊಂಡಿರ್ಪನು ನರನು |
ಸೋತುಪೋಪುದುಂಟೆ ಬಯಲ | ಮಾತಿದೆಂದನು || ೮೯ ||

ಕೇಳು ಕರ್ಣ ಬೊಮ್ಮನನ್ನು | ಕೇಳಬಂದೆವೆ ನಾವಿನ್ನು |
ನಾಳಿನ ಕಾಳಗಕೇನು | ಹೇಳರು ಬರಿದೆ || ೯೦ ||

ಎಂದು ಚಿಂತಿಸುವ ಕೌರ | ವೇಂದ್ರಗೆ ಧೈರ್ಯವ ದ್ರೋಣ |
ನಂದು ಪೇಳ್ದ ಬಿಡು ಬಿಡಿಂಥ | ಬಂದ ಭಯಗಳ || ೯೧ ||

ಜಡಜವ್ಯೂಹವನ್ನು ರಚಿಸಿ | ಬಿಡದೆ ಕಾಯ್ವೆ ಸೈಂಧವನ |
ಮೃಡನೆ ಬಂದಡ್ಡೈಸಿದರೆಯು | ತಡೆದುಕೊಂಬೆನು || ೯೨ ||

**ಭಾಮಿನಿ**

ಅರಸ ಕೇಳಿಂತೆಂದು ಕೌರವ |
ರರಸನನು ಸಂತವಿಸಿ ನುಡಿದನು |
ಧುರಕೆ ಬರಲಿ ಸಮಸ್ತ ವೀರರು ಷಡುರಥಾದಿಗಳು ||
ಮರೆದು ಕಳೆಯಿನ್ನಂಜಿಕೆಯನೆನೆ |

ಹರಿದುದತ್ತಲು ಸಭೆಯು ಲಕ್ಷ್ಮೀ |
ವರನು ಪಾರ್ಥನಿಗರುಹಿದನು ದ್ರೋಣನ ಪರಾಕ್ರಮವ || ೯೩ ||

**ರಾಗ ಕಾಂಭೋಜಿ ಅಷ್ಟತಾಳ**

ಕೇಳು ಧನಂಜಯ ಬಗೆಯ | ರಿಪು |
ಪಾಳಯದೊಳಗಾದ ಪರಿಯ ||
ಖೂಳ ಸೈಂಧವ ಭೀತಿಗೊಳಲು ಕೌರವ ಬಂದು |
ಕೋಲಪಂಡಿತನಿಗೆ ಪೇಳಿದ ಹದನವ || ೯೪ ||

ವನಜವ್ಯೂಹವ ನಾಳೆ ರಚಿಸಿ | ಸೈಂಧ |
ವನ ಕಾವೆನೆನುತ ಭೀಕರಿಸಿ |
ಮನಸಿಜಾರಿಯ ಹೊಗೆಗೊಡೆನೆಂದು ದ್ರೋಣಾದ್ಯ |
ರನುವಾದರಿದಕೊ ಸಂಗರವಸದಳ ನಾಳೆ || ೯೫ ||

**ಭಾಮಿನಿ**

ಮುರಹರನ ನುಡಿ ಕೇಳಿ ಫಲುಗುಣ |
ನರುಹಿದನು ನಿನ್ನೊಲುಮೆಯಿರುತಿರೆ |
ಧುರದಿ ಬಗೆವೆನೆ ದ್ರೋಣ ಪದ್ಮವ್ಯೂಹಗೀಹಗಳ |
ಪರಿಕಿಸೆನುತಾಯುಧದ ಶಾಲೆಗೆ |
ನರನು ಬಂದರ್ಚಿಸಿದನಾ ಶಂ |
ಕರನ ಪಾಶುಪತಾದಿ ಶರಗಳನುಗ್ರಮಂತ್ರದಲಿ || ೯೬ ||

**ರಾಗ ವಸಂತಭೈರವಿ ಏಕತಾಳ**

ಪೂಜೆಯ ಮಾಡಿದನು | ಪಾರ್ಥನು | ಬೀಜಮಂತ್ರಾಕ್ಷರದಿ || ಪೂಜೆಯ || ಪ ||

ಧನು ಶರ ಮೊದಲಾದ | ಕೈದುವನಿಟ್ಟು | ವನಜಾಕ್ಷಿ ದುರ್ಗೆಯನು |
ವಿನಯದಿ ಪ್ರಾರ್ಥಿಸುತ | ನವವಿಧ | ಘನತರ ಭಕ್ತಿಯಲಿ || ಪೂಜೆಯ || ೯೭ ||

ಧೂಪದೀಪಂಗಳಲಿ | ನವಮಾಂ | ಸೋಪಫಲಂಗಳಲಿ |
ಶ್ರೀಪರಮೇಶ್ವರಿಯ | ಮಂತ್ರಕ | ಲಾಪವ ಜಪಿಸುತಲಿ || ಪೂಜೆಯು || ೯೮ ||

**ಭಾಮಿನಿ**

ಇಂತು ಪೂಜಿಸಿ ಬಳಿಕ ನರನೇ |
ಕಾಂತಧ್ಯಾನದಿ ಮಲಗಿರಲು ಕಾ |
ಮಾಂತಕನ ಒಲವಾದುದನು ಮಿಗೆ ಕನಸಿನಲಿ ಕಂಡು ||

ಸಂತಸದೊಳೆದ್ದುದಯದಲಿ ಶ್ರೀ |
ಕಾಂತನಿಂಗಭಿನಮಿಸಿ ಪೇಳಿದ |
ನಂತರಂಗದೊಳಾದ ಸ್ವಪ್ನದ ಬಗೆಯನೆಲ್ಲವನು || ೯೯ ||

**ರಾಗ ಮಧ್ಯಮಾವತಿ ಏಕತಾಳ**

ಲಾಲಿಸಿ ಕೇಳು ಮುರಾರಿ ಮುಕುಂದ | ಲೀಲೆಯಿಂದಿರುಳ್ಕಂಡ ಸ್ವಪ್ನದಾನಂದ || ಲಾಲಿಸಿ || ಪ ||

ದೇವ ನಿಮ್ಮಡಿಗಳ ಕಂಡೆನು ಶಿವ ಮಹಾ | ದೇವನ ಸನ್ನಿಧಿಗೆ ಪೋಗಿರಲಾಗಿ |
ಆ ವಿಭುವಿನಪ್ಪಣೆಯಿಂದ ಸರಸಿಯೊಳು ಗಾಂ | ಡೀವಧನುವ ಪಿಡಿದು ಕಲಿತೆ ವಿದ್ಯೆಯನು ||೧೦೦||

ಈಶನೆಡೆಗೆ ಬರಲೆನಗಾಗ ಮಂತ್ರೋಪ | ದೇಶವಾದುದು ಸರಳ ಬಿಡುತೊಡುವಂತೆ ||
ಶ್ರೀ ಸದಾಶಿವನನುಗ್ರಹದಲಿ ಪೂರ್ಣವಾಗಿ | ಪಾಶುಪತವು ವಶವರ್ತಿಯಾದುದನು || ೧೦೧ ||

ಎನಲಾ ಮಾತಿಗೆ ನಸುನಗುತಲಚ್ಯುತನೆಂದ | ಘನ ಜಯಕಾರ್ಯಕಾಗಿ ಹರನೊಲವಾಯ್ತು |
ನಿನಗಿನ್ನು ಸರಿಯಾರು ವೈರಿ ಸೈಂಧವನನ್ನು | ರಣದಿ ಸಂಹರಿಸುವ ವ್ಯಾಪಾರವೆಂದನು ||೧೦೨||

**ಭಾಮಿನಿ**

ಅರಸ ಕೇಳ್ ಬಳಿಕಾ ಯುಧಿಷ್ಠಿರ |
ಧರಣಿಪತಿನೇಮದಲಿ ನೆರೆದುದು |
ಕರಿ ತುರಗ ರಥ ಸಹಿತ ಸೈನಿಕವಪರಿಮಿತವಾಗಿ ||
ಮೊರೆವ ನಾನಾ ವಾದ್ಯ ಘೋಷದಿ |
ಧುರಕೆ ಸನ್ನಹವಾಗುತಿರಲಾ |
ಶರದ ಪಂಡಿತ ಬಲಿದನಿತ್ತಲು ಪದ್ಮವ್ಯೂಹವನು || ೧೦೪ ||

**ದ್ವಿಪದಿ**

ಅಖಿಳ ಗಜ ರಥ ಹಯದ ಸಾಲುಗಳ ನಿಲಿಸಿ |
ವಿಕಟ ಶಕಟವ್ಯೂಹ ದುರ್ಗವನು ಬಲಿಸಿ || ೧೦೫ ||

ಅದರೊತ್ತಿನಲಿ ಮಕರವ್ಯೂಹವನು ಮಾಡಿ |
ಅದಕೆ ದುಶ್ಯಾಸನಾದಿಗಳನೊಡಗೂಡಿ || ೧೦೬ ||

ಬಳಿಕ ಯೋಜನವೈದನುಜತೆಗಳವಡಿಸಿ |
ಹೊಳೆವ ಚಕ್ರವ್ಯೂಹಕೋಟೆಯನು ಬಲಿಸಿ || ೧೦೭ ||

ಕಾಂಭೋಜ ಭೂಪ ಮೊದಲಾದ ರಥಿಕರನು |
ಇಂಬುಗೊಳಿಸಿದನುಪಕಿರೀಟಪತಿಗಳನು || ೧೦೮ |

ತುರಗವೈವತ್ತಾರು ಕೋಟಿಗಳ ನಿಲಿಸಿ |
ಕರಿಘಟೆಗಳೆಂಟು ಲಕ್ಷವನದಕೆ ಬೆರಸಿ || ೧೦೯ ||

ಸುರುಚಿರ ವರೂಥವೈವತ್ತು ಸಾವಿರವ |
ಭರದಿ ಕಾಲಾಳು ನಿಲಿಸಿದನಪರಿಮಿತವ || ೧೧೦ ||

ನಿಯುತಾಯು ಮೊದಲಾದ ನೃಪರ ಕಾಹಿನಲಿ |
ಜಯಕೆ ಹಂಸವ್ಯೂಹ ಬಲಿದನುಗ್ರದಲಿ || ೧೧೧ ||

ಅರ್ಬುದ ಹಯೇಭ ಸುರಥಾವಳಿಯ ಕೂಡಿ |
ಗರ್ಭವ್ಯೂಹವ ಬಲಿದನತಿರಥರಗೂಡಿ || ೧೧೨ ||

ಹತ್ತು ಸಾವಿರ ಮಂಡಲೇಶ್ವರರ ಬರಿಸಿ |
ಮತ್ತದಕೆ ಸಮಸಪ್ತಕರ ಸೈನ್ಯವೆರಸಿ || ೧೧೩ ||

ಚಪಲ ಗಜರಥವೆಂಟುಕೋಟಿ ಬಲದಿಂದ |
ವಿಪುಲ ಪದ್ಮವ್ಯೂಹವೆಸಗೆ ನಲವಿಂದ || ೧೧೪ ||

ಬಿತ್ತರದ ಸೂಚಿವ್ಯೂಹವ ವಿರಚಿಸಿದನು |
ಸುತ್ತವಲಯದೊಳಗತಿರಥರ ನಿಲಿಸಿದನು || ೧೧೫ ||

**ವಾರ್ಧಕ**

ಸೋಮದತ್ತ ಸುದಂತನು ದಾರನಶ್ವತ್ಥಾಮ |
ಕ್ಷೇಮಧೂರ್ತಿಕ ಶಲ್ಯ ಭೂರಿಶ್ರವಾರ್ಕಸುತ |
ಭೀಮವಿಕ್ರಮ ದೀರ್ಘಬಾಹು ವೃಷಸೇನ ಕೃಪ ಮುಖ್ಯರಾದತಿರಥರನು ||
ಆ ಮಹಾ ಪದ್ಮಸೂಚಿವ್ಯೂಹವಲಯದೊಳ್ |
ತಾ ಮುದದಿ ನಿಲಿಸಿ ತನ್ಮಧ್ಯದೊಳ್ ಕಲಿ ಸಿಂಧು |
ಭೂಮಿಪತಿಯಂ ಕಾಯ್ದುಕೊಂಡಿರ್ದರೇನೆಂಬೆ ಹರನಿಗರಿದೆನೆ ದುರ್ಗವು || ೧೧೬ ||

**ಭಾಮಿನಿ**

ಭೋರಿಡಲು ಬಹು ವಾದ್ಯತತಿ ಧುರ |
ಧೀರ ದ್ರೋಣನು ಶಕಟವ್ಯೂಹದ |
ದ್ವಾರದಲಿ ಮಿಗೆ ಬಂದು ನಿಂದನು ಬಲವನೀಕ್ಷಿಸುತ ||
ಚಾರಕರನಟ್ಟಿದನು ಯಮನ ಕು |
ಮಾರನಿದ್ದಲ್ಲಿಗೆ ಮಹಾರಣ |
ಶೂರರೆದ್ದರು ಕೇಳುತಾಕ್ಷಣ ಧರ್ಮಜಾದಿಗಳು || ೧೧೭ ||

**ರಾಗ ಅಹೇರಿ ಝುಂಪೆತಾಳ**

ರಣಕೆ ಸನ್ನಹವಾದರೆಲ್ಲ | ಭೀಮ | ತ್ರಿಣಯಸಖ ಪಾರ್ಥ ಮೊದಲಾದ ಮಹರಥರು || ರಣಕೆ || ಪ ||

ಅರಸನೆಡವಂಕದಲಿ ದ್ರುಪದ ಧೃಷ್ಟದ್ಯುಮ್ನ |
ಧರಣಿಪ ವಿರಾಟ ಕುಂತೀಭೋಜ ನಕುಲ ಸಂ |
ಗರವಿಜಯ ಸಾತ್ಯಕಿ ಘಟೋತ್ಕಚ ಮಹಾಯವನ |
ರಿರಲು ಬಲವಂಕದೊಳ್ ನೃಪನ | ಮುಂದ |
ಕುರವಣಿಸಿದರು ಫಲುಗುಣಾಚ್ಯುತಾದಿಗಳು || ರಣಕೆ || ೧೧೮ ||

ಖಂಡೆಯ ಧನುರ್ಭಾಣ ಚಕ್ರ ಶಕ್ತಿಯು ಪಾಶ |
ಭಿಂಡಿವಾಳ ಕೃಪಾಣ ಕುಂತ ತೋಮರಗಳು |
ದ್ದಂಡ ಶಲ್ಲೆಹ ಪರಶು ವಜ್ರ ಮುದ್ಗರಗಳಂ |
ಚಂಡ ಭುಜಬಲರಾಂತರಾಗ | ರಣವ |
ಕಂಡು ನಡೆದರು ಬಹಳ ಪಟುಭಟರು ಬೇಗ || ರಣಕೆ || ೧೧೯ ||

ಭೇರಿ ಪಟಹ ಮೃದಂಗ ರಣಕಹಳೆ ಕೊಂಬು ಡಮಾಮಿ |
ಭೋರಿಡುವ ನಾನಾ ಸುವಾದ್ಯರಭಸದಲಿ ರಣ |
ಶೂರರೇಳ್ವಬ್ಬರಕೆ ನಡುಗಿತಾ ಕುರು ಸೇನೆ |
ಧಾರಿಣಿಪ ನುಡಿದನಚ್ಯುತಗೆ | ಪದವ |
ನಾರಾಧಿಸುತ ನಿಂತು ಪರಮ ಪಾವನಗೆ || ರಣಕೆ || ೧೨೦ ||

**ರಾಗ ಭೈರವಿ ಝುಂಪೆತಾಳ**

ತರಳನಿವ ಮುಂದುಗಾಣದೆ ಪೇಳ್ದ ನುಡಿಯನ್ನು |
ನೆರೆ ನಡೆಸಿ ರಕ್ಷಿಸುವ ಭಾರ ನಿಮಗೈಸೆ || ೧೨೧ ||

ಹಗೆಯ ಕೊಲ್ಲದಡಗ್ನಿ ಹೊಗುವ ಮತ್ತಾ ಪಾರ್ಥ |
ಬಗೆಯೊಳಯ್ವರ ಜೀವಕಧಿಪತಿಯೆ ನೀನು || ೧೨೨ ||

ಎಂದು ಕರುಣಾಳುಗಳ ದೇವನೊಳು ಬೇಡಿಕೊಳ |
ಲಂದು ಧರ್ಮಜಗಭಯವಿತ್ತನಸುರಾರಿ || ೧೨೩ ||

**ಭಾಮಿನಿ**

ಪೊಡವಿಪತಿ ಕೇಳ್ ಮನದ ಚಿಂತೆಯ |
ಬಿಡು ಜಯದ್ರಥಖೂಳನನು ತಲೆ |
ಗಡಿದು ಕೆಡಹುವ ಕಾಲದೆಸೆಯಲಿ ಷಡುರಥರ ಗೆಲಿದು ||
ಕೊಡಹುವನು ರಿಪುಬಲವನೆನಲಾ |

ಕಡಲಶಯನನ ಪದಕೆ ವಂದಿಸಿ |
ಮೃಡನ ಶರವನು ಜಪಿಸಿದನು ನರನಧಿಕ ಭಕ್ತಿಯಲಿ || ೧೧೪ ||

**ರಾಗ ಸಾಂಗತ್ಯ ರೂಪಕತಾಳ**

ಮಣಿಮಯ ರಥವನು ಬಲವಂದು ಮೇಲಿರ್ಪ | ಹನುಮಂತನನು ಕಂಡು ನಮಿಸಿ ||
ತ್ರಿಣಯಮಿತ್ರನ ಪಾದರಜವ ಶಿರದೊಳಾಂತು | ಧನುಶರಕೆರಗಿ ಕೈಗೊಂಡ || ೧೧೫ ||

ಕವಚವನುರೆ ತೊಟ್ಟು ಬಾಹುರಕ್ಷೆಯನಾಂತು | ತವಕದಿ ಧರ್ಮಜಗೆರಗಿ ||
ದಿವಿಜವ್ರಜಕೆ ಕಯ್ಯ ಮುಗಿದು ರಥವನೇರಿ | ಬವರಕೆ ನಡೆದನಾ ಪಾರ್ಥ || ೧೧೬ ||

ದೇವದುಂದುಭಿ ಮೊಳಗಿದುವಾಗ ನರನ ಗಾಂ | ಡೀವಧನುವಿನ ಝೇಂಕೃತಿಗೆ ||
ಆ ವೈರಿಮೋಹರ ತಲ್ಲಣಗೊಳುವಂತೆ | ದೇವೇಂದ್ರಸುತ ನಡೆತಂದ || ೧೧೭ ||

**ರಾಗ ಶಂಕರಾಭರಣ ಮಟ್ಟೆತಾಳ**

ನರನು ಬರುವ ಭರವ ಕಾಣುತರಸನನುಜನು |
ಕೆರಳಿ ಬೇಗ ಧನುವ ಕೊಂಡು ಧುರಕೆ ನಡೆದನು ||
ಸರಳ ಮಳೆಯ ಕರೆವುತಿರಲು ಕಂಡು ಪಾರ್ಥನು |
ಉರಿಯನುಗುಳುತಾಗ ಘೋರ ಶರವ ಕೊಂಡನು || ೧೧೮ ||

ಧುರದೊಳಿವನ ಕೊಂದರಣ್ಣ ಭೀಮಸೇನನ |
ಹಿರಿದು ಭಾಷೆ ಕೆಡುವುದೆನುತಲಿಂದ್ರನಂದನ ||
ಎರಡು ಶರದಿ ತೇರುಚಾಪಗಳನು ಖಂಡಿಸಿ |
ಉರವ ಡೋರುಗಡೆದನಾಗ ಧುರದಿ ಹೊರಳಿಸಿ || ೧೧೯ ||

**ಭಾಮಿನಿ**

ಅರಸ ಕೇಳ್ ದುಶ್ಯಾಸನನ ಭೀ |
ಕರಿಸಿ ಮುಂದೊತ್ತುತಲೆ ಕಂಡನು |
ಗುರುವನಾ ಘನತರದ ಶಕಟವ್ಯೂಹದ್ವಾರದಲಿ ||
ತೆರಹುಗೊಡನಿವನೆಂದು ನರನ |
ಬ್ಬರಿಸಿ ರಥವನು ನೂಕಿದರೆ ಹೂಂ |
ಕರಿಸಿ ತಡೆವುತ ದ್ರೋಣನಾ ಫಲುಗುಣನಿಗಿಂತೆಂದ || ೧೨೦ ||

**ರಾಗ ದೇಶಿ ಅಷ್ಟತಾಳ**

ಎಲವೊ ಪಾರ್ಥನೆ ಕೇಳು ನಿನಗೆ ದೈವ |
ಬಲವು ಸಂಘಟಿಸಿದೆಯೆನುತ ಮನ | ದೊಳಗೆ ಗರ್ವಿಸದಿರು ಕಣಾ || ೧೨೧ ||

ನಾಳೆ ಸೈಂಧವನೃಪನ ಸಂಗರದೊಳು |
ಸೀಳುವೆನು ದಿಟವೆನುತ ನುಡಿದು | ಬ್ಬಾಳುತನವನು ತೋರಿಸು || ೧೩೨ ||

ಆಳು ಕೂಡಿದೆ ಚೂಣಿಯೊಳಿದರೊಳೊಂ |
ದಾಳ ಗೆಲಿದರೆ ಗೆಲವು ನಿನ್ನದು | ಸೋಲು ತನಗಿಂದೆನುತಲಿ || ೧೩೩ ||

ಎನುತಲೆಚ್ಚನು ಬಾಣಸಂತತಿಯನ್ನು |
ಘನತರದಿ ಕಿಡಿಯಿಡುತ ಪಾರ್ಥನ | ತನುವಿನಗ್ರದಿ ತಳಿದವು || ೧೩೪ ||

ಗುರುವಿನಸ್ತ್ರಸಮೂಹವ ಸವರುತ್ತ |
ಮರಳಿ ಕಾಣಿಕೆ ಮಾಡಿ ಪೇಳ್ದನು | ಸುರಪಸುತನತಿ ವಿನಯದಿ || ೧೩೫ ||

ಅಂಬಿಗಿಂಬನು ಕೊಡುವೆ ನೀವ್ ಗುರುಗಳು |
ಡೊಂಬಿಯೇತಕೆ ಬರಿದೆ ಸೈಂಧವ | ನೆಂಬ ಖೂಳನ ತೋರಿಸಿ || ೧೩೬ ||

ಮರುಳೆ ಕೇಳೆಮ್ಮ ಗೆಲಿದ ಮೇಲಾತನ |
ಶಿರದ ಗೊಡವೆಯೆನುತ್ತ ಗಾಂಡಿವ | ತಿರುವ ಕಡಿದನು ದ್ರೋಣನು || ೧೩೭ ||

**ಭಾಮಿನಿ**

ನರನು ಮಂತ್ರಾಸ್ತ್ರಗಳ ತೊಡುತಿರ |
ಲರಿವುತಚ್ಯುತ ಕೆರಳಿದನು ಫಡ |
ಮರುಳೆ ಗುರುವನು ಗೆಲುವರುಂಟೇ ಬೇಡು ಪದಕೆರಗಿ ||
ಧುರವ ಜಯಿಸುವೆಯೆನಲು ಧನು ಶರ |
ವಿರಿಸಿ ರಥದಿಂದಿಳಿದು ಬೇಗದಿ |
ಶಿರವ ಚಾಚುತಲಾ ಧನಂಜಯ ನುಡಿದ ದ್ರೋಣನೊಳು || ೧೩೮ ||

**ರಾಗ ಕೇದಾರಗೌಳ ಅಷ್ಟತಾಳ**

ತಿಳಿಯಲೆಮ್ಮೈವರ ಜೀವನ ನಿಮ್ಮಿಂದ | ಉಳಿಯಬೇಕತಿ ದಯದಿ |
ಸಲಹಿಕೊಂಡರು ಲೇಸು ಕೊಂದರು ಲೇಸೆಂದು | ಫಲುಗುಣನರುಹಿದನು || ೧೩೯ ||

ತರಳತನದೊಳಿಪ್ಪಾಗೆಮ್ಮಯ ಬೊಪ್ಪನು | ತೆರಳಿದ ಸುರಪುರಕೆ |
ಹಿರಿದು ಬದುಕಿದೆವು ನಿಮ್ಮಿಂದ ಭೀಷ್ಮರಿಂ | ದರುಹುವುದೇನು ಮತ್ತೆ || ೧೪೦ ||

ಘಾಸಿಯಾದೆವು ಜೂಜಿನಿಂದಲಾರಣ್ಯನಿ | ವಾಸವ ಮಾಡಿದೆವು ||
ಭಾಷೆಯಿದೊಂದನು ಕಾಯಬೇಕೆನುತಲೆ | ವಾಸವಸುತ ಪೇಳ್ದನು || ೧೪೧ ||

ನೀವು ಹೂಣಿಗರಾಗಿ ರಿಪುವ ಕಾಯ್ದಿರ್ದಡೆ | ನಾವು ನಿಲ್ಲೆವು ಧುರಕೆ ||
ಈವುದಭಯವೆನೆ ನಗುತಲಾ ದ್ರೋಣನು | ದೇವೇಂದ್ರಸುತಗೆಂದನು || ೧೪೨ ||

ಕಂದನಶ್ವತ್ಥಾಮ ಹುಸಿ ನೀನೆ ಮೋಹದ | ಕಂದನೆನಗೆ ದಿಟವು |
ಇಂದು ಮುನಿವುದುಂಟೆ ಗೆಲು ಹೋಗು ಭಾಷೆಯು | ಸಂದುದೆನುತ ಬಿಟ್ಟನು || ೧೪೩ ||

**ಭಾಮಿನಿ**

ಸವ್ಯಸಾಚಿಯು ಗುರುಬಲವನಪ |
ಸವ್ಯದಲಿ ವಂಚಿಸುತ ನಡೆತರ |
ಲವ್ವಳಿಸುತತಿರಥರು ತಡೆದರು ಮಕರವ್ಯೂಹದಲಿ ||
ಅವ್ವಯನ ಬಲವಿರಲು ಬಲ್ಲನೆ |
ದಿವ್ಯಶರಗೊಂಡಹಿತ ಬಲವನು |
ಹವ್ಯವಾಹನನಂತೆ ಸವರಿದನೇನ ಬಣ್ಣಿಪೆನು || ೧೪೪ ||

**ರಾಗ ಕಾಂಭೋಜಿ ಝಂಪೆತಾಳ**

ತೇರು ಟೆಕ್ಕೆಯ ರಥದ ಸಾರಥಿಯ ಸವರಿ ರಣ | ಶೂರರ ಧನುರ್ಬಾಣಗಳನು |
ಓರಂತೆ ಕಡಿದು ಕೆಡಹಿದ ವೈರಿಮೋಹರವ | ಸೂರೆಗೊಂಡನು ಧನಂಜಯನು || ೧೪೫ ||

ಇದೆ ನರನ ಸಿಂಹಗರ್ಜನೆ ಬಿಲ್ಲ ಠೇಂಕಾರ | ವಿದೆಪಾರ್ಥ ಬಂದನೆಂದೆನುತ ||
ಕದನಕಲಿಗಳು ಕೈದುಗಳನು ಬಿಸುಟೋಡಿದರು | ರುಧಿರಮಯವಾಯ್ತು ಸಂಗರವು || ೧೪೬ ||

ತುರಗ ಬಳಲಲು ಕಂಡು ಧರೆಗೆ ಬಾಣವ ಹೊಡೆದು | ತ್ವರಿತದಿ ಸರೋವರವ ರಚಿಸಿ ||
ಹರಿಧನಂಜಯರಲ್ಲಿ ಮೆರೆಯಲಿತ್ತಲು ಭೀಮ | ಗೊರೆದನಾ ಧರ್ಮನಂದನನು || ೧೪೭ ||

ಹರಿಯ ಶಂಖಧ್ವನಿಯ ಕಾಣೆನೇನಾದನೋ | ನರನು ಸಂಗರದೊಳಿಂದಿನಲಿ ||
ಪರಿಕಿಸೆನುತಟ್ಟಿದರೆ ಭೀಮಸೇನನ ರಥವ | ನುರವಣಿಸಿ ತಡೆದನಾ ದ್ರೋಣ || ೧೪೮ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಭೀಮ ಗಮನವೆಲ್ಲಿ | ನಿಲು ಸಮರ್ಥನಹುದು ಪಾರ್ಥ |
ನಳುಕಿದಂತೆ ಪೋಗುತಿಹೆಯೊ | ಬಲುಹ ತೋರ್ಪೆಯೊ || ೧೪೯ ||

ನಿಲುಗಡೆಯನು ಸೂಚಿಸೆಂದ | ಡುಲಿದು ದ್ರೋಣಗೆಂದನವನು |
ತಿಳಿಯೆ ಪಾರ್ಥ ಹುಡುಗನೈಸೆ | ಬಳಿಕ ನಿಮ್ಮೊಳೂ || ೧೫೦ ||

ಧುರದಿ ತ್ರಾಹಿಯೆಂಬುದುಂಟೆ | ಗುರುಗಳಿದನು ನೋಡಿರೆನುತ |
ಮುರಿದು ಹೊಕ್ಕನತಿರಥರ ನು | ಗ್ಗನರಿದು ನಿಮಿಷದಿ  || ೧೫೧ ||

ಮರುತಸುತನ ಭರವ ಕಂಡು | ಕೆರಳಿ ದ್ರೋಣನಧಿಕ ಮಂತ್ರ |
ಶರವನೆಚ್ಚಡನಿಲಜಾತ | ತರಿವುತೆಂದನು || || ೧೫೨ ||

ಆತನಸ್ತ್ರಚಯಕೆ ಭುಜ ಬ | ಲಾತಿಶಯನು ದಂಡೆಯೊಡ್ಡಿ |
ಸೂತನನ್ನು ಕೆಡಹಿ ಹಯವ | ಘಾತಿಸಿದನು || ೧೫೩ ||

ಗುರುಗಳೆಮಗೆ ನೀವು ನಮ್ಮ | ಗರುಡಿಯೊಳಗೆ ಆಡುವಾಗ |
ಮರೆತ ವಂದನೆಯನು ಕೊಂಬು | ದಿರದೆ ಸಮರದಿ || ೧೫೪ ||

ಶರದಿ ಕಾದಲಿವನ ಕೂಡೆ | ಹರನಿಗರಿದೆನುತ್ತ ಭೀಮ |
ನುರಿಯನುಗುಳುತಾಗ ಗದೆಯ | ತಿರುಹುತೆಂದನು || ೧೫೫ ||

ಆತುಕೊಳ್ಳಿ ವಂದನೆಯನು | ಪ್ರೀತಿಯಿಂದಲೆನುತ ನಿಜವ |
ರೂಥ ಚೂರ್ಣ ಗೆಯ್ದು ಹೊಕ್ಕ | ವಾತ ಸಂಭವ || ೧೫೬ ||

**ವಾರ್ಧಕ**

ಮರುತಜನ ಗದೆಯ ಹೊಯ್ಲಿಗೆ ನಿಲ್ಲಲಾರದಾ |
ಗುರುವೈದಲಿತ್ತ ಶರಜವ್ಯೂಹ ದುರ್ಗಮಂ |
ಮುರಿದು ಮಕರವ್ಯೂಹಕಡಹಾಯ್ದು ಕೆಡಹಿದಂ ಶತಕೋಟಿಸೈನಿಕವನು ||
ಉರುಬಿದಂ ಮುಂದೆ ಚಕ್ರವ್ಯೂಹದಳವಿಯೊಳ್ |
ತರುಬುವತಿರಥರನಪ್ಪಳಿಸಿದಂ ಭೀಮನ |
ಬ್ಬರಕೆ ನಿಲ್ಲದೆ ಬಹಳ ನುಗ್ಗಾಯ್ತು ಕುರುಸೇನೆಯದ್ಭುತವನೇನೆಂಬೆನು || ೧೫೭ ||

ಝುಡಿದು ಹಂಸವ್ಯೂಹಮಂ ಮುರಿದು ಸುಭಟರಂ |
ಕೆಡಹಿದಂ ಮುಂದೆ ಗರ್ಭವ್ಯೂಹ ವಲಯದೊಳ್ |
ತಡೆವ ಕರಿಘಟೆ ರಥ ತುರಂಗ ಕಾಲಾಳ್ಗಳಂ ಕೆಡಹುತೊಂದೇಕ್ಷಣದಲಿ ||
ಅರಸಿ ಮುಂದೊತ್ತಿ ಪದ್ಮವ್ಯೂಹ ಬಾಗಿಲೊಳ್ |
ಮಡುಹಿದಂ ಕೌರವಾನುಜರನುಳಿದವರ ಜವ |
ಗೆಡಿಸಿ ಭೀಮಂ ಮೆರೆದನಹಿತ ಬಲದೊಳ್ ವಿಪಿನದಾವಾಗ್ನಿರೂಪನಾಗಿ || ೧೫೮ ||

ಸೂರೆಗೊಂಡಬುಜ ಸೂಚಿವ್ಯೂಹಮಂ ಮುರಿದು
ವೈರಿ ಸೈಂಧವಪಡೆಯ ಕೆಣಕಿ ಹೊಯ್ದಾಡಿದಂ |
ಕೌರವ ದ್ರೋಣನಶ್ವತ್ಥಾಮ ಮುಖ್ಯ ಷಡುರಥರೊಡನೆ ಸಂಗರದೊಳು |
ವೀರ ಸಾತ್ಯಕಿಯೊಂದು ಕಡೆಯೊಳ್ ಮಹಾರಥರ |
ನೋರಂತೆ ಕೆಡಹಿ ಭೂರಿಶ್ರವಾದಿಗಳ ಸಂ |
ಹಾರವಂ ಮಾಡಿ ಮೆರೆದಂ ಹರಿಯನುಗ್ರಹದಿ ಪಾರ್ಥನಡಹಾಯ್ದು ಮುಂದೆ || ೧೫೯ ||

**ಭಾಮಿನಿ**

ಪೊಡವಿಪತಿ ಜನಮೇಜಯನೆ ಕೇ |
ಳೊಡೆಯ ಕೃಷ್ಣನು ತನ್ನ ಭಕ್ತನು |
ನುಡಿದ ಭಾಷೆಯ ಸಲಿಸಬೇಕೆಂದಾ ಸುದರ್ಶನವ ||
ಹಿಡಿಯೆ ರವಿ ಮಂಡಲಕೆ ದಿನಮಣಿ |
ನಡೆದನೆಂದಾ ಪಾರ್ಥ ರಥವನು |
ತಡೆಯದಿಳಿದಚ್ಯುತಗೆ ಬಿನ್ನಹ ಮಾಡಿದನು ಬಳಿಕ || ೧೬೦ ||

**ರಾಗ ಆನಂದ ಭೈರವಿ ಏಕತಾಳ**

ವಾರಿಜನೇತ್ರ ಕೇಳಯ್ಯ | ವೈರಿ ಸೈಂಧವನ ಛಾಯ |
ತೋರದು | ಯುದ್ಧ | ತೀರದು || ೧೬೧ ||

ರವಿಯಸ್ತಮಾನವಾದನು | ತವಕದಿಂದಗ್ನಿಕುಂಡವನು |
ಮಾಡುವೆ | ತನುವೀ | ಡಾಡುವೆ || ೧೬೨ ||

ಇಂತೆಂಬ ಪಾರ್ಥನ ಬಗೆಯ | ಕಂತುಪಿತ ಕಾಣುತೆಳೆನಗೆಯ |
ಸೂಸಿದ | ಮಾಯ | ಬೀಸಿದ || ೧೬೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಾಯ ಕೇಳ್ಳೈ ರಣದಿ ನರ ನಾ | ರಾಯಣರು ಮಾತಾಡುತಿರೆ ಕುರು |
ರಾಯ ಹಿಗ್ಗಿದನುಳಿದ ಸೈಂಧವ | ರಾಯನೆನುತ || ೧೬೪ ||

ಒದರಿದವು ಬಹು ವಾದ್ಯಗಳು ನೆಲ | ನದುರಲಾ ರಿಪುಸೇನೆ ಪಾರ್ಥನ |
ತುದಿಯ ಕಾಲವ ಕಾಂಬೆವೆನುತಲೆ | ಒದಗಿ ನಿಲಲು || ೧೬೫ ||

ನಿಲುಕಿ ನೋಡಿದನೆಲ್ಲಿ ತೋರಾ | ಫಲುಗುಣನನೆನಗೆನುತ ಸೈಂಧವ |
ನುಲಿಯೆ ಹರಿ ಕಂಡಾಗ ಪಾರ್ಥಗೆ | ತಿಳಿಯುತೆಂದ || ೧೬೬ ||

ತಡವ ಮಾಡದಿರೆಲವೊ ಫಲುಗುಣ | ತೊಡು ಮಹಾ ಶರವನ್ನು ವೈರಿಯ |
ಕೆಡಹು ಬೇಗದೊಳೆನಲು ಹರಿಯೊಳು | ನುಡಿದ ನರನು || ೧೬೭ ||

ದೇವ ರವಿಯಸ್ತಮಿಸಿದನು ನೀ | ನಾವುದುಚಿತವ ಕಂಡೆಯೆನೆ ನಿನ |
ಗಾವ ಭಯ ಬೇಡೆಂದನಾ ರಾ | ಜೀವನಾಭ || ೧೬೮ ||

ಗಾಢದಲಿ ಸೈಂಧವನ ಕೊಲು ಮಾ | ತಾಡಿ ಫಲವಿಲ್ಲೆನಲು ಚಾಪಕೆ |
ಪೂಡಿದನು ಪಾಶುಪತಶರವನು | ನೋಡಿ ನರನು || ೧೬೯ ||

**ವಾರ್ಧಕ**

ತೆಗೆಯೆ ಜಗ ಕಂಪಿಸಿತು ತೀವ್ರದಿಂ ತಾರೆಗಳ |
ನೊಗಳಿಸಿತು ನಭ ಮಹಾಜಲಧಿ ಮೊದಲಾದ ರತು |
ನಗಳನೋಕರಿಸಿತು ಕುಲಾಚಲಗಳೊಲೆದವೆಡ ಬಲದಿ ನಿಮಿಷಾರ್ಧದೊಳಗೆ ||
ದಿಗಿಭತತಿ ನಡನಡುಗೆ ವಾಸುಕಿ ಫಣಾಳಿಗಳ |
ನುಗಿಯೆ ದಳ್ಳುರಿ ಕಾರಿತೇನೆಂಬೆ ಪ್ರಳಯವೆನೆ |
ವಿಗಡ ಪಾರ್ಥಗೆ ಬೆಸಸು ಬೆಸಸೆನ್ನುತಿರ್ದುದಾ ಪಾಶುಪತವಾ ಸಮಯದಿ || ೧೭೦ ||

**ರಾಗ ಮಾರವಿ ಏಕತಾಳ**

ನರನತಿ ವೇಗದಿ ಪಾಶುಪತವ ಕಿವಿ | ವರೆಗುಗುದರಿಭಟನ |
ಶಿರವನೆಚ್ಚಡೆ ಕೊಂಡೊಯ್ದುದು ಗಗನಾಂ | ತರಕೆ ಕ್ಷಣಾರ್ಧದೊಳು || ೧೭೧ ||

ಹಾರುವ ರಕ್ತದ ಧಾರೆಯೊಳ್ ತೊಯ್ದುದು | ಕೌರವಬಲವಂದು |
ಗಾರುಗೊಂಡುದು ಘನ ಶೌರ್ಯದಿ ಶಕ್ರಕು | ಮಾರನು ಕಂಡೆಂದ || ೧೭೨ ||

ಬೀಳುಬೀಳಭಿಮನ್ಯುವಿನೊಧೆ ನಿನ್ನನು | ಬಾಳಲೀವುದೆಯೆನಲು ||
ಕೇಳುತ ಹರಿ ನುಡಿದನು ತೊಡು ತೊಡು ಪ್ರತಿ | ಕೋಲನು ಶಿರದೆಡೆಗೆ || ೧೭೩ ||

ನೆರೆ ತಂದೆಯ ಶಾಪವು ಇವ ನಾಸ್ಯವ | ಧರೆಗೆಳುಹಿದ ಭಟನ ||
ಶಿರ ಸಾಸಿರ ಹೋಳಾಗಲೆನುತ ತಪ | ಸಿರುವ ದುರಾತುಮನು || ೧೭೪ ||

ವೃದ್ಧಕ್ಷತ್ರಿಯನಾತನ ಕೈಯೊಳು | ಹೊದ್ದುವಂತೆಸಗೆನಲು ||
ರುದ್ರನ ಘೋರ ಶರಕೆ ಬೆಸಸಿದನವ | ನಿದ್ದೆಡೆಗಮಿಸೆನುತ || ೧೭೫ ||

ತುಡುಕಿ ಕೊರಳ ಕೊಂಡೊಯ್ದುದು ನಭದಲಿ | ಗಿಡುಗನು ಹಾಯ್ವಂತೆ |
ಬಿಡುತಿರಲರ್ಘ್ಯವನಾಗಲೆ ಕೈಯಲಿ | ಕೆಡಹಿತು ಶಿರವನ್ನು || ೧೭೬ ||

ಅರ್ಘ್ಯಜಲವು ಕೆಂಪಾದುದ ನೋಡಿ ವೈ | ರಾಗ್ಯದಿ ಧರೆಗಿಡಲು |
ಶೀಘ್ರದಿ ಶಿರ ಸಾಸಿರ ಹೋಳಾಯಿತು | ಉಗ್ರಶಾಪದೊಳವಗೆ || ೧೭೭ ||

**ವಾರ್ಧಕ**

ಸಂಗರಂ ಮೆರೆವುದಾವುದರಿಂದವನಿಯೊಳ್ ಕು |
ಲಾಂಗನೆಯರಿಂಗಧಿಕ ಭಾಗ್ಯಮೇನೆಂದರಿದು |
ಕಂಗೊಳಿಸಲೆರಡು ಪೆಸರಂ ಬರೆದು ಮೊದಲು ಪಙ್ಕ್ತಿಯ ಮುನ್ನಿನಕ್ಷರವನು ||
ಸಂಗಡಿಸಲೆರಡನೆಯ ಪಙ್ಕ್ತಿಯಭಿಧಾನದಿಂ |

ಕಂಗೊಳಿಸುತಿರ್ಪ ನೃಪನಂ ಮುರಿದನೆಂದಮರ |
ಪುಂಗವ ಕದಂಬದೊಳಗಚ್ಯುತನ ಮೈದುನನ ಶೌರ್ಯಮಂ ಪೊಗಳುತಿರಲು || ೧೭೮ ||

**ರಾಗ ಸಾಂಗತ್ಯ ರೂಪಕತಾಳ**

ರಾಯ ಕೇಳಿನ್ನೇನನೆಂಬೆನು ಶ್ರೀಕೃಷ್ಣ | ರಾಯನ ಮಂತ್ರಶಕ್ತಿಯನು |
ರಾಯ ಕೌರವನಹಂಕಾರವು ಜರಿದುದು | ಪಾಯವನರಿವರಾರೆಂದ || ೧೭೯ ||

ತರಣಿಗೆ ಮರೆಯ ಮಾಡಿದ ಚಕ್ರವನು ಬೇಗ | ಕರೆದಾಗ ಭಾನುಮಂಡಲವ |
ನರನಿಗೆ ತೋರಲಾಗರಿಸೇನೆ ಸೂರ್ಯನ | ಜರೆಯಲೂಣೆಯವು ಬಂದಪುದೆ || ೧೮೦ ||

ದೈವಬಲವೆ ಮಹಾಬಲವಯ್ಯ ಶಿವ ಶಿವ | ದೈವ ಪೌರುಷಕೆಣೆಯುಂಟೆ ||
ದೈವಹೀನರ ಕೈಗೆ ಪರಶು ಪಾಷಾಣವು | ದೈವಾಧೀನದಿ ಜಗವಿಹುದು || ೧೮೧ ||

ಎಂದು ದ್ರೋಣಾದಿನಾಯಕರು ಮಾತಾಡುತ್ತ | ಲಂದು ಪಾಳಯಸಹ ತೆರಳೆ ||
ಬಂದನಾ ಫಲುಗುಣನಚ್ಯುತನೊಡನೆ ಸಾ | ನಂದದಿ ಧರ್ಮಜನೆಡೆಗೆ || ೧೮೨ ||

**ಭಾಮಿನಿ**

ಜನಪ ಜನಮೇಜಯನೆ ಕೇಳೈ |
ಚಿನುಮಯಾರ್ಜುನರಯ್ತರಲು ಕಂ |
ಡಿನಜಸುತನಿದಿರಾಗಿ ಸತ್ಕಾರದಲಿ ಪೊಡವಟ್ಟು ||
ವನಜನಾಭನ ಪದವನಪ್ಪುತ |
ಘನತರದ ಭಕ್ತಿಯಲಿ ಪೇಳ್ದನು |
ಜನಪರೊಳಗಿನ್ನೇಸು ಧನ್ಯನೊಧರ್ಮನಂದನನು || ೧೮೩ ||

ಜಲಜನಾಭನೆ ನಿನ್ನ ಮಹಿಮೆಯ | ನೆಲೆಯ ಬಲ್ಲವರಾರು ತ್ರಿಜಗದಿ |
ಸಲಹಿಕೊಂಡೈ ನಮ್ಮ ಬಿಡದೀ ಬಂದ ವಿಗ್ರಹದಿ ||
ಹಲವು ಪೇಳುವುದೇನೆನಲು ಹರಿ | ಯಲಘುಭಾಷಾ ಕಲ್ಪವೃಕ್ಷವು |
ಫಲವು ಬಂತೆಂದೆಲ್ಲರುರೆ ಸೇರಿದರು ಬೀಡಿಗೆಯ || ೧೮೪ ||

**ರಾಗ ಧವಳಾರ ತ್ರಿವುಡೆತಾಳ**

ಸರಸಿಜಲೋಚನ ಭವವಿಮೋಚನ | ಸರಸಿಜಭವಭವನುತಿಪಾತ್ರ |
ವರ ಸಾರ್ವಭೌಮ ಗುಣಧಾಮ | ಗುಣಧಾಮನೆ ಬಾ ಬಾರೆನುತಲಿ |
ತರುಣಿಯರಾರತಿಯ ಬೆಳಗಿರಿ || ಶೋಭಾನೆ || ೧೮೫ ||

ಯಮರಾಜನ ಸುಕುಮಾರಕನಿಗೆ | ಕ್ಷಮೆದಮೆಯಲಿ ಧರ್ಮದಿ ನಡೆವವಗೆ |
ಕುಮತಿವರ್ಜಿತಗೆ ಸುಮಾನಸಗೆ | ಸುಮಾನಸಗಾ ಧರ್ಮರಾಯನಿಗೆ |
ವಿಮಲೆಯರಾರತಿಯ ಬೆಳಗಿರೆ || ಶೋಭಾನೆ || ೧೮೬ ||

ಸುಗದೋರ್ದಂಡಗೆ ಚಂಡಗೆ | ಹಗೆಯರ ಸದೆ ಬಡೆವ ಉದ್ದಂಡಗೆ |
ಝುಗಝುಗಿಪ ಭೀಮ ಸುಗುಣಗೆ | ಸುಗುಣಗೆ ಶ್ರೀಕೃಷ್ಣಾದ್ವೈತಗೆ |
ಮುಗುದೆಯರಾರತಿಯ ಬೆಳಗಿರೆ || ಶೋಭಾನೆ || ೧೮೭ ||

ಗಾಂಡೀವಧಾರಗೆ ಧೀರಗೆ | ಚಂಡವಿಕ್ರಮನಿರುಪಮಗೆ |
ಭಂಡ ಸೈಂಧವನಗೆಲಿದವಗೆ | ಗೆಲಿದಾ ಧುರಧೀರಗೆ ಪಾರ್ಥಗೆ |
ಕುಂಡಲದಾರತಿಯ ಬೆಳಗಿರೆ || ಶೋಭಾನೆ || ೧೮೮ ||

ಭೂಪನ ಮೋಹದ ಸೋದರನಿಗೆ | ವ್ಯಾಪಿಸಿ ಮಾದ್ರಿಗೆ ಜನಿಸಿದ ಸುಕ |
ಲಾಪ ನಕುಲಾಂಕಗೆ ಸಹದೇವಗೆ | ಸಹದೇವಗೆ ಜಯ ಜಯವೆನುತಲಿ |
ದ್ರೌಪದಿಯರಾರತಿಯ ಬೆಳಗಿರಿ || ಶೋಭಾನೆ || ೧೮೯ ||

**ಭಾಮಿನಿ**

ಅರಸ ಕೇಳಿಂತುತ್ಸವದಿ ಮುರ |
ಹರನ ಸಭೆಯಲಿ ಪಾಂಡುಪುತ್ರರು |
ಮೆರೆದರವರಿನ್ನೇನು ಧನ್ಯರೊ ಮೂರು ಲೋಕದಲಿ ||
ಗುರುಕುಲೋತ್ತಮ ಮಧ್ವಪತಿ ಶ್ರೀ |
ವರದ ಕೃಷ್ಣನ ಕರುಣಕವಚವ |
ಧರಿಸಿದವರಿಗದೇನು ದೊಡ್ಡಿತೊ ಭೂಪ ಕೇಳೆಂದ || ೧೯೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಿಯೆನಖಿಳ ಪುರಾಣಶಾಸ್ತ್ರದ | ನೆರವಿಯನು ಶರಪುರದ ಗಣಪತಿ |
ವರನಿರೂಪದಿ ವರ್ಣಿಸಿದೆನಿದ | ನರಿವ ತೆರದಿ || ೧೯೧ ||

ಕೇಳಿ ತಪ್ಪಿರೆ ತಿದ್ದುವುದು ಗುಣ | ಶೀಲ ಕವಿಗಳು ಜಗದಿ ಸರ್ವ ಜ |
ನಾಳಿ ಕೇಳಿಯೆ ಮೆರೆಸುವುದು ಹರಿ | ಲೀಲೆಗಳನು || ೧೯೨ ||

ಇದು ಸಮಸ್ತಾಘೌಘಪರಿಹರ | ವಿದುಕಣಾ ಇಹಪರಕೆ ಶುಭಕರ |
ವಿದು ಮುಕುಂದನ ಪರಮಲೀಲಾ | ಸುಧೆಯು ಜಗಕೆ || ೧೯೩ ||

ಮಧ್ವ ಮುನಿಯ ವರಪ್ರಸಾದದ | ಸಿದ್ಧಿಯಲಿ ವಿರಚಿಸಿಹೆ ಕೃತಿಯನು |
ಹೊದ್ದದಿದರೊಳು ಕಲ್ಮಷವು ಹರಿ | ಸಿದ್ಧಮಂತ್ರ || ೧೯೪ ||

ಭಕ್ತಿಯಲಿ ಬರೆದೋದಿ ಕೇಳ್ವರ | ಭಕ್ತಜನರ ಮನೋರಥಂಗಳ |
ಶಕ್ತನಹ ಶರಪುರದ ಗಣಪತಿ | ಯಿತ್ತು ಪೊರೆವ || ೧೯೫ ||

**ರಾಗ ಮುಖಾರಿ ಝಂಪೆತಾಳ**

ಜಯ ಮಂಗಳಂ | ನಿತ್ಯ | ಶುಭಮಂಗಳಂ || ಪಲ್ಲವಿ ||

ಮಂಗಳಂ ಮತಿಭಾಗ್ಯದಾಯಕ ವಿನಾಯಕಗೆ |
ಮಂಗಳಂ ಸಿದ್ಧಚಾರಣಸೇವ್ಯಗೆ ||
ಮಂಗಳಂ ಶರಪುರದ ಶ್ರೀಮಹಾಗಣಪತಿಗೆ |
ಮಂಗಳಂ ಶರಭಲಿಂಗೇಶ್ವರನಿಗೆ || ಜಯ ಮಂಗಳಂ || ೧೯೬ ||

ಉದಧಿಲಂಘಿಸಿದವಗೆ ಮಹವಜ್ರಕಾಯನಿಗೆ |
ಸದಮಲದಿ ಜನಕಜೆಗೆ ವಂದಿಸಿದಗೆ |
ಅಧಮ ರಾವಣನ ಲಂಕೆಯ ಪಿತನ ಸಖಗಿತ್ತ |
ಕದನಕಲಿಗಳ ದೇವ ಹನುಮಂತಗೆ || ಜಯ ಮಂಗಳಂ || ೧೯೭ ||

ಶರದಿಂದುಭಾಸಿನಿಗೆ ಶರಣಜನಪೋಷಿಣಿಗೆ |
ಮಿರುಪ ಭೃಂಗಾಳಕಿಗೆ ಗುಣಪೂರ್ಣೆಗೆ |
ಸರಸಿಜಾಸನನ ಪಟ್ಟದರಾಣಿ ಶಾರದೆಗೆ
ಶರದವಾಹನ ಮುಖ್ಯ ಸುರನಮಿತೆಗೆ || ಜಯ ಮಂಗಳಂ || ೧೯೮ ||

ಪಶ್ಚಿಮಾಂಬುಧಿಯ ತಡಿಯಲಿ ಬಂದು ಮಾರುತಿಗೆ |
ನಿಶ್ಚಯವ ತೋರಿ ಪೂಜೆಯ ಕೊಂಬಗೆ |
ಆಶ್ಚರ್ಯಮಹಿಮನಿಗೆ ಆನಂದಭರಿತನಿಗೆ |
ಸಚ್ಚರಿತ ಮಧ್ವಪತಿ ಶ್ರೀಕೃಷ್ಣಗೆ || ಜಯ ಮಂಗಳಂ | ನಿತ್ಯ | ಶುಭಮಂಗಳಂ || ೧೯೯ ||

**ಭಾಮಿನಿ**

ಶ್ರೀಗಜಾನನ ಸಕಲ ಯೋಗ ಸು |
ಭಾಗ ಫಲದಾಯಕ ವಿನಾಯಕ |
ನಾಗವಾಹನ ಮುಖ್ಯ ಸುರತತಿವಂದ್ಯ ಗುಣಸಾಂದ್ರ ||
ಭಾಗವತ ಪರಿಪಾಲ ಬಹು ನಿಗ |
ಮಾಗಮಾರ್ಚಿತ ನೀನೊಲಿದು ದಯ |
ವಾಗೆನಗೆ ಶರಪುರದ ಗಣನಾಯಕ ನಿರಾಕಾರ || ೨೦೦ ||

***ಯಕ್ಷಗಾನ ಸೈಂಧವನ ವಧೆ ಮುಗಿದುದು***

# ಯಕ್ಷಗಾನ ಕರ್ಣಾರ್ಜುನ ಕಾಳಗ

## ಪಾತ್ರಗಳು

| | | | | | |
|---|---|---|---|---|---|
| ಪಾಂಡವರು | ದ್ರೌಪದಿ | ಶ್ರೀಕೃಷ್ಣ | ಕೌರವ | ದುಶ್ಯಾಸನ | ಅಶ್ವತ್ಥಾಮ |
| ಶಕುನಿ | ಸಂಶಪ್ತಕರು | ಚಾರಕರು | ಕರ್ಣ | ಕ್ಷೇಮಧೂರ್ತಿ | ಶಲ್ಯ |
| ಹನುಮಂತ | ವೃಷಸೇನ | ಅಶ್ವಸೇನ (ಸರ್ಪಾಸ್ತ್ರ) | | ಕೃಪ | ಕೃತವರ್ಮ |
| ಬ್ರಾಹ್ಮಣ | ಸೈನಿಕರು | | | | |

## ಯಕ್ಷಗಾನ ಕರ್ಣಾರ್ಜುನ ಕಾಳಗ

**ರಾಗ ನಾಟ ಝಂಪೆತಾಳ**

ಜಯ ಜಯತು ಗಣನಾಥ | ಜಯ ಕೀರ್ತಿವಿಖ್ಯಾತ |
ಜಯತು ಮೂಷಿಕರೂಥ | ಜಯತು ಹರಿಪ್ರೀತ ||
ಜಯತು ಪನ್ನಗಭೂಷ | ಜಯತು ದಿನಕರಭಾಸ |
ಜಯತು ವಿಘ್ನವಿನಾಶ | ಜಯತು ಸರ್ವೇಶ || ಜಯತು ಜಯತು || ೧ ||

ಮಾರಾರಿವರಪುತ್ರ | ಮೊದಲ ಪೂಜೆಗೆ ಪಾತ್ರ |
ಧಾರಿಣೀಧರವಕ್ತ್ರ | ಧರ್ಮಚಾರಿತ್ರ ||
ವಾರಿರುಹದಳ ನೇತ್ರ | ವಾಸವಾದಿಸ್ತೋತ್ರ |
ನೀರಜಾಸನಮಿತ್ರ | ನಿರ್ಮಲಸುಗಾತ್ರ || ಜಯತು ಜಯತು || ೨ ||

ಉದರ ಗಿರಿಯಾಕಾರ | ಉದಧಿಸಮಗಂಭೀರ |
ಪದುಮಬಾಣವಿದೂರ | ಪಾವನಶರೀರ ||
ವಿಧಿಸುಮನಸಾಧೀಶ | ವಿವಿಧರತ್ನ ವಿಭಾಸ |
ಮಧುರತರವರಭಾಷ | ಮೌನಿಜನಪೋಷ || ಜಯತು ಜಯತು || ೩ ||

ದೃಷ್ಟಾಂತಮಾದ ಗಜ | ಪುರದಿ ನರಹರಿಯೊಡನೆ |
ಒಟ್ಟಿನಲಿ ಮೆರೆವ ಬಲು | ಶ್ರೇಷ್ಠ ವಿಘ್ನೇಶ ||
ಕೊಟ್ಟ ಹರಕೆಯನು ಕೈ | ಗೊಟ್ಟು ಸುಜನರ ಮನದ |
ಭೀಷ್ಟವನು ಕೊಡುವ ಶ್ರೀ ಭಟ್ಟಿ ವಿಘ್ನೇಶ || ಜಯತು ಜಯತು || ೪ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಪಾಹಿ ಪನ್ನಗವೇಣಿ | ಪೂರ್ಣೇಂದುಭಾಷಿಣಿ | ಶ್ರೀಮೂಕಾಂಬಾ || ಎನ್ನ |
ತಾಯೆ ಮಹಮ್ಮಾಯೆ | ಮಾರಾರಿಸುಪ್ರೀಯೆ | ಶ್ರೀಮೂಕಾಂಬಾ || ೫ ||

ರಕ್ತಬೀಜಾಪಹಾರಿ | ಶಕ್ತಿ ಮಹೇಶ್ವರಿ | ಶ್ರೀಮೂಕಾಂಬಾ | ದೃಢ |
ಭಕ್ತಸುಪೋಷಣಿ | ಮುಕ್ತಿಪ್ರದಾಯಿನಿ | ಶ್ರೀಮೂಕಾಂಬಾ || ೬ ||

ಕೊಡಚಾದ್ರಿ ಪುರವಾಸೆ | ಜಡಜಸಂಭವಪೋಷೆ | ಶ್ರೀಮೂಕಾಂಬಾ || ಜಗ |
ದೊಡೆಯನನುಜೆ ಬೇಗ | ಕೊಡು ಮತಿಯೆನಗೀಗ | ಶ್ರೀಮೂಕಾಂಬಾ || ೭ ||

**ಕಂದ**

ಶಾರದೆದೇವಿಗೆ ವಂದಿಸಿ |
ಮಾರಮಣಿಯ ಸ್ಮರಿಸುತುಮಾಸತಿಗಂ ಮಣಿದುಂ ||
ನೀರಜಪತ್ರೇಕ್ಷಣ ಭವ |
ತಾರಕನಿಂಗಭಿವಂದಿಸುವೆನು ಮನ್ಮನದೊಳ್ || ೮ ||

**ವಾರ್ಧಕ**

ಭುವನತ್ರಯಂ ಗೆಲಿದ ವೀರನಂ ಧೀರನಂ |
ದಿವಿಜೇಂದ್ರನುತಿಪಾಲನಂ ಫಾಲನೇತ್ರನಂ |
ರವಿಪೂರ್ಣಕೋಟಿಪ್ರಕಾಶನಂ ಈಶನಂ ವರ ಮಹಾಗಂಗಾರ್ದ್ರನಂ ||
ಶಿವನಂ ಶಶಾಂಕವರದಾತನಂ ಖ್ಯಾತನಂ |
ಭವದೂರನಂ ಭೂತವರ್ಗನಂ ಭರ್ಗನಂ |
ಶಿವೆಯರಸನಂ ಪಂಚವಕ್ತ್ರತ್ರಿಣೇತ್ರನಂ ಸ್ಮರಿಸಿ ಮತಿಯಂ ಪಡೆವೆನು || ೯ ||

**ದ್ವಿಪದಿ**

ವರ ವಸಿಷ್ಠ ವ್ಯಾಸ ವಾಲ್ಮೀಕರ ನುತಿಸಿ | ಗುರು ಭೀಷ್ಮ ಭೂಮಿಸುರರಂಘ್ರಿಗಳ ಸ್ಮರಿಸಿ || ೧೦ ||

ಶುಕಶೌನಕಾದಿಗಳಿಗೊಂದನೆಯ ಮಾಡಿ | ಭಕುತಿ ಪೂರ್ವಕದೊಳಮರರನ್ನು ಕೊಂಡಾಡಿ || ೧೧ ||

ತಂದೆತಾಯ್ಗಳ ಪಾದಕೆರಗಿ ಗುರುಪದವ | ಚಂದದಿಂದರ್ಚಿಸುತ ಬೇಡುವೆನು ವರವ || ೧೨ ||

ಕವಿಜನರ ಚರಣಗಳಿಗೆರಗಿ ವಿನಯದಲಿ | ಭುವನದೊಳು ಭಾರತಪುರಾಣಕಥನದಲಿ || ೧೩ ||

ದುರುಳ ದುಶ್ಯಾಸನನ ಉರವನುರೆ ಬಗಿದು | ಕರುಳ ದ್ರೌಪದಿಮುಡಿಗೆ ಮುಡಿಸಿ ಮನವೊಲಿದು || ೧೪ ||

ನರಕರ್ಣರೆಸಗಿರುವ ಕಾಳಗದ ಕಥೆಯ | ಅರಿತಂತೆ ಪೇಳ್ವೆ ನಾ ನಡೆದ ಸಂಗತಿಯ || ೧೫ ||

ತಪ್ಪಿದ್ದರದ ಬಿಡದೆ ತಿದ್ದಿ ಕೋವಿದರು | ಒಪ್ಪವಿಡುತಲೆ ಮೆರೆಸಿ ಸುಜನರಾದವರು ||೧೬ ||

ಬಪ್ಪ ಅಪಮೃತ್ಯುವನು ತರಿದು ವಿನಯದಲಿ | ಸರ್ಪಶಯನನೆ ಕಾಯೊ ಎನ್ನ ಕರುಣದಲಿ || ೧೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸೋಮವಂಶಲಲಾಮನಾಗಿಹ | ಭೂಮಿಪತಿ ಜನಮೇಜಯಗೆ ನಿ |
ಸ್ಸೀಮ ವೈಶಂಪಾಯನಾಖ್ಯನು | ಪ್ರೇಮದಿಂದ || ೧೮ ||

ಭಾರತಾಮೃತಕಥೆಯ ಬಲು ವಿ | ಸ್ತಾರದಿಂ ಪೇಳುತಿರೆ ಪುನರಪಿ |
ಧಾರಿಣೀಪತಿ ನಮಿಸಿ ಕೇಳ್ದನು | ಚಾರು ಮುನಿಯ || ೧೯ ||

ಭೀಮಸೇನನು ಬಾಹುಬಲನಿ | ಸ್ಸೀಮ ಕಲಿ ದುಶ್ಶ್ಯಾಸನುರವನು |
ತಾ ಮುದದಿ ಬಗಿದಾ ಕಥೆಯ ಸು | ಪ್ರೇಮದಿಂದ || ೨೦ ||

ಧುರ ವಿಜಯ ಕಲಿ ಪಾರ್ಥ ರಣದಲಿ | ತರಣಿಸುತ ಕಲಿ ಕರ್ಣನೆನಿಪನ |
ಶಿರವನರಿದಾ ಪರಿಯನೆಲ್ಲವ | ನೊರೆವುದೆನಗೆ || ೨೧ ||

ಎಂದು ಮುನಿಪನ ಪಾದಕಮಲ | ದ್ವಂದ್ವದಲಿ ಚಾಚಲ್ಕೆ ಮುಕುಟವ |
ಚಂದದಿಂ ಪಿಡಿದೆತ್ತಿ ತಳ್ಕಿಸು | ತೆಂದನವಗೆ || ೨೨ ||

**ವಾರ್ಧಕ**

ಕಂದ ಕೇಳ್ ಧರ್ಮಸುತನನುಜರೊಡಗೂಡಿ ಸಾ |
ನಂದದಿಂದಿರುವ ಸಮಯದೊಳರಿತನೆಮಗಿನ್ನು |
ಬಂದಿತ್ತೈ ಕಡೆಗಾಲವೆಂದು ನರಪೌತ್ರನಿಗೆ ಪಟ್ಟಮಂ ಕಟ್ಟಿ ಬಳಿಕ ||
ಇಂದೀವರಾಕ್ಷಿ ಸಹಿತೊಡನೆ ಸ್ವರ್ಗಕ್ಕಯ್ಯ |
ಲಂದಿತ್ತ ನೃಪತಿ ವನಬೇಟೆಗೆಂದೆನುತ ನಡೆ |
ತಂದು ಮುಂದಿರುವ ತಪಸಿಯ ಕಂಡು ಬಿಲ್ಲ ತುದಿಯಿಂದ ಹಾವಿನ ಹಕ್ಕೆಯ || ೨೩ ||

ಕಂಧರದಿಯಿರಿಸಿ ದೊರೆ ನಡೆದನಾಗಳೆ ತನ್ನ |
ಮಂದಿರವನಿತ್ತಲುಂ ಬಂದನಾ ಮುನಿಸುತಂ |
ನಿಂದು ನೋಡುತ ಪಿತನನಂದು ಕೋಪಿಸಿ ಮುನಿಪನೆಂದನೇಳನೆ ದಿನದಲಿ ||
ಕೊಂದು ಬಿಸುಡಲಿ ತನ್ನ ತಂದೆಯಂ ಬಾಧಿಸಿದ |
ಮಂದಮತಿಗೀ ನುಡಿಗಳೆಂದು ಪೇಳಿರಲಿತ್ತ |
ಬಂದಿತೀ ವಾರ್ತೆ ಹರ ಹರ ಎಂದು ನೃಪಗೃಹವನುಳಿದಿರ್ದ ಹರಿಕಥೆಯಲಿ || ೨೪ ||

ಬಂದಿತಾ ಶಾಪವಶದಿಂದ ಸದ್ಗತಿ ನೃಪತಿ |
ಗಂದು ಕೇಳುತ್ತ ಜನಮೇಜಯ ನೃಪಂ ಬಳಿಕ |
ಒಂದುಳಿಯದಂತೆ ಸುಡಬೇಕೆಂದು ಯಜ್ಞದಿಂ ಕೊಂದನಗಣಿತದಹಿಯನು ||
ಬಂದ ಕುಷ್ಠವ್ಯಾಧಿ ಪರಿಹಾರಕಾಗಿ ಯದು |

ನಂದನನ ಸತ್ಕಥೆಯ ಲಾಲಿಸಿದೊಡದರಿಂದ |
ಮುಂದೆ ಸುಖಿಯಾಗಿ ಬಾಳುವೆಯೆಂದು ಮುನಿ ನುಡಿಯೆ ಕೇಳ್ದನೈ ಭಾರತವನು || ೧೫ ||

**ಭಾಮಿನಿ**

ಅರಸ ಕೇಳೈ ಪಾಂಡುನರಪತಿ |
ಗುರುಬಲಾನ್ವಿತರೈವರುದಿಸಲು |
ತರುಣಿಮಣಿ ಗಾಂಧಾರಿ ಪಡೆದಳು ಸುತರ ನೂರ್ವರನು ||
ಇರಲು ಕೌರವರರಸ ಜೂಜಿನ |
ಪರಿಯೊಳಾ ಪಾಂಡವರ ಸೋಲಿಸಿ |
ವರುಷ ಹದಮೂರಂತ್ಯದಲಿ ಬಹುದೆಂದು ಪೊರಡಿಸಿದ || ೧೬ ||

**ವಾರ್ಧಕ**

ಅರಸ ಕೇಳ್ ಧರ್ಮಜಂ ಕೌರವನ ಕಟ್ಟಳೆಯ |
ವರುಷದವಧಿಯ ಕಳೆದು ಮರಳಿದಂ ನಿಜಪುರಿಗೆ |
ಹರಿಯಿಂದ ಸಂಧಾನ ಮುರಿದುದಂ ತಿಳಿದು ಸಂಗರಕೆ ನಿಜಬಲವನವನು ||
ನೆರಹಲಿತ್ತಲು ಕೌರವೇಶ್ವರಂ ಬಳಿಕ ತ |
ದ್ಧುರಕೆ ಭೀಷ್ಮಾಚಾರ್ಯ ದ್ರೋಣರಿಗೆ ಪಟ್ಟಮಂ |
ವಿರಚಿಸಲು ಧರ್ಮಜಂ ಮುರಹರನ ತಂತ್ರದಿಂ ಗೆಲಿದನನುಜಾತರೊಡನೆ || ೧೭ ||

**ರಾಗ ಭೈರವಿ ಝಂಪೆತಾಳ**

ಇಂತು ವೈಭವದೊಳಗೆ | ಕಂತುಪಿತ ಸಹಿತಲ |
ತ್ಯಂತ ಹರುಷದೊಳಿರಲು ಕುಂತಿಯಾತ್ಮಜರು || ೧೮ ||

ಹಿರಿಯಾತ ಭೀಷ್ಮನನು | ಸರಳಮಂಚದೊಳಿರಿಸಿ |
ಗರಡಿಯಾಚಾರ್ಯನನು | ಸುರಪುರಕೆ ಕಳುಹಿ || ೧೯ ||

ವರ ಧರ್ಮ ಭೀಮ ನರ | ತರಳರಾ ಮಾದ್ರಿಜರು |
ತರುಣಿ ದ್ರೌಪದಿ ಸಹಿತ | ಲಿರಲು ಸಂತಸದಿ || ೨೦ ||

**ಭಾಮಿನಿ**

ಧರಣಿಪತಿ ಕೇಳಿತ್ತ ಕೌರವ |
ರರಸನೊಡ್ಡೋಲಗದೊಳೊಪ್ಪಿರೆ |
ಶರದ ಗುರುವಿನ ಸೂತ ರಥವನು ತಿರುಹಿ ಮೊರೆಯಿಡುತ ||
ಭರದೊಳಯ್ತಂದಂಘ್ರಿ ಕಮಲದೊ |

ಳೆರಗಲಾ ಸಾರಥಿಯ ಶಿರವನು |
ಎರಡು ಕೈಯಿಂದೆತ್ತಿ ಮೈದಡವುತ್ತಲಿಂತೆಂದ || ೩೧ ||

**ರಾಗ ಸವಾಯ್ ಏಕತಾಳ**

ಸೂತನೆ ಕೇಳ್ ನೀ ರಥವನು ತಿರುಗಿಸಿ | ಏತಕಿಲ್ಲಿಗಯ್ತುಂದಿರುವೆ ||
ಭೀತಿಗಳೇನಿದು ಬಿಡು ವೃತ್ತಾಂತವ | ನೀ ತಿಳಿದರುಹದಿಹುದು ತರವೆ || ೩೨ ||

**ರಾಗ ಸಾರಂಗ ಅಷ್ಟತಾಳ**

ದೊರೆರಾಯ ಲಾಲಿಸಯ್ಯ | ನಾ ಪೇಳ್ವ ಸಂ | ಗರದ ವೃತ್ತಾಂತ ಜೀಯ ||
ಅರುಹುವರೆನಗೆ ಅಂಜಿಕೆಯಪ್ಪುದಾದರು |
ಕರುಣದಿ ಮನವಿಟ್ಟು ಲಾಲಿಸು ಕಿವಿಗೊಟ್ಟು || ೩೩ ||

ಗುರುದ್ರೋಣರೊಡನೆ ಕಾದಿ | ರಣದಿ ಗೆಲು | ವರ ಕಾಣೆ ಮೂಲೋ೯ಕದಿ ||
ಹರನಿಗರಿದು ಮಿಕ್ಕ ಸುರರಿಗಸಾಧ್ಯವು |
ಧರಣಿಪಾಲಕರನ್ನು ಭರದಿ ಲೆಕ್ಕಿಸುವನೆ || ೩೪ ||

ಚಕ್ರವ್ಯೂಹವ ಮಾಡಿದ | ಮತ್ತವರೊಳು | ವಿಕ್ರಮವನು ತೋರಿದ ||
ಶಕ್ರನಣುಗನ ತನಯನ ಗೆಲಲು ಶಂಖ |
ಚಕ್ರಾಂಕಿತ ಪಾರ್ಥರೊಂದಾಗಿ ಮರುದಿನ || ೩೫ ||

ಕಂದನೆಂಬುರು ತಾಪದಿ | ಕೊಂದರು ನಿಮ್ಮ | ಸಿಂಧುನೃಪನ ಕೋಪದಿ ||
ಇಂದಿನಾಹವದೊಳು ಧರ್ಮಸುತನ ಕರೆ |
ತಂದು ನಿಲಿಸಿದನು ಕಲಶಜನಿದಿರಲಿ || ೩೬ ||

ಸತ್ಯವಂತನು ಧರ್ಮನು | ಪೇಳಿದನೊಂದ | ಕೃತ್ಯದ ವಚನವನು ||
ಪ್ರತ್ಯಕ್ಷದಲಿ ನಿನ್ನ ಸುತನಶ್ವತ್ಥಾಮನು | ಸತ್ಯಲೋಕಕೆ ಪೋದನೆಂದರುಹಿದ ತಾನು || ೩೭ ||

**ಭಾಮಿನಿ**

ಕಂದನಶ್ವತ್ಥಾಮ ಸುರಪುರ |
ಕಿಂದು ತೆರಳಿದನೆನುತ ಯಮಸುತ |
ನೆಂದ ಮಾತನು ಕೇಳಿ ಕಲಶಜ ಸತ್ಯವೆಂದರಿದು ||
ಸ್ಯಂದನದಿ ದೇಹಗಳ ಬಿಸುಟಾ |
ನಂದನನ ಬಳಿಗಯ್ದಲಿತ್ತಲು |
ಮಂದಮತಿ ದ್ರುಪದಾಖ್ಯತನುಜನು ಕೊಂಡು ಖಡುಗಗಳ || ೩೮ ||

**ಕಂದ**

ತುಂಡಿಸಿ ದೇಹಗಳಂ ಎದೆ |
ಗುಂಡಿಗೆಯ ಕಡಿದಿರಿಸುತವನೆಲುಗಳ ಸಾವಿರ ||
ತುಂಡಾಗುವ ತೆರದೊಳ್ ಪುಡಿ |
ಹೊಂದಿಸಿ ರಣರಂಗದೊಳೆಸೆದನ್ ಆ ಶವಮಂ || ೩೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದ ಮಾತನು ಕೇಳಿ ಕೌರವ | ನೊಂದು ಮನದಲಿ ಮರುಗಿ ರೋಷದೊ |
ಳೆಂದನಾ ಕರ್ಣಾದಿ ಸುಭಟರ | ಮುಂದೆ ಭರದಿ || ೪೦ ||

ದ್ರೋಣ ನಮ್ಮೀಬಲಕೆ ಪಂಚ | ಪ್ರಾಣ ತಾನಾಗಿರಲು ವೈರಿಗೆ |
ಪ್ರಾಣ ದಂಡವ ತೆತ್ತು ನಮ್ಮಯ | ಗೋಣ ಕೊಯ್ದು || ೪೧ ||

ಹೂಣಿಗರೊಳಾರಿನ್ನು ಸುಭಟ | ಶ್ರೇಣಿಯಲಿ ನಾ ಕಾಣೆ ಪಾರ್ಥನ |
ಬಾಣಕಿದಿರಹ ಭಟರದಾರೈ | ಕ್ಷೆಣಿಯೊಳಗೆ || ೪೨ ||

ಜೀಯ ಸಂಶಯವಿಲ್ಲ ಗುರು ಗಾಂ | ಗೇಯರಳುಕಿದರೇನು ಕಲಿರಾ |
ಧೇಯನಿಹನೆಂದರುಹಿದನು ಕೃಪ | ರಾಯನೊಡನೆ || ೪೩ ||

**ವಾರ್ಧಕ**

ಧರಣಿಪತಿ ಜನಮೇಜಯಾಖ್ಯ ನೀಂ ಲಾಲಿಸೈ |
ಹರುಷದಿಂ ಗುರುಜ ಕೃಪ ಕೃತವರ್ಮ ಮೊದಲಾದ |
ಉರು ಪರಾಕ್ರಮಿಗಳಂದೊರೆದರಾ ಕರ್ಣನಿಗೆ ಸೇನಾಧಿಪತ್ಯವನ್ನು ||
ವಿರಚಿಸುವುದೆಂದಡಾ ನುಡಿ ಕೇಳಿ ಕೌರವಂ |
ತರಿಸಿದುರು ಸುರುಚಿರದ ವಿಷ್ಟರವ ಕುಳ್ಳಿರಿಸಿ |
ಧುರದ ದಳಪತಿ ಕರ್ಣನೆಂದು ಡಂಗುರ ಹೊಯ್ಸಿ ಹರಸಿ ಸೇಸೆಯ ತಳಿದರು || ೪೪ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ತರಣಿಸುತನಿಗೆ ಸೇನೆಯೊಡೆತನ | ಕುರುಪತಿಯು ತಾನೊಲಿದು ಮಾಡಲು |
ಗುರುತನುಜ ಕೃಪ ಶಲ್ಯ ಶಕುನಿಗ | ಳಿರದೆ ಕಾಣಿಕೆಗೊಟ್ಟರು | ತೋಷದಿಂದ || ೪೫ ||

ಅರಳಿತರಸನ ವದನ ಮೇಲೀ | ಧರಣಿಯನು ಯಮಸುತಗೆ ಗೋವಿನ |
ಚರಣದಗಲದ ಸ್ಥಳವ ಕೊಡುವೆನೆ | ಬರಲಿ ನಾಳಿನ ಸಮರಕೆ | ಧರ್ಮರಾಯ || ೪೬ ||

ಹಿಂದೆ ಕಪಟದಿ ಭೀಷ್ಮ ಗುರುಗಳ | ಕೊಂದರಾ ಮುರವೈರಿ ಯಮಸುತ |
ರೆಂದು ಕೌರವರರಸ ಕರ್ಣಗೆ | ತಂದು ಕರದಲಿ ಕೊಟ್ಟನು | ವೀಳೆಯವನು || ೪೭ ||

**ಭಾಮಿನಿ**

ಪೊಡವಿಪತಿ ಕೇಳಾಗ ಪುತ್ರನ |
ಸಡಗರವ ನೋಡುವೆನೆನುತ್ತಲೆ |
ಯಡರಿದನು ದಿನನಾಥ ಪೂರ್ವಾಚಲದ ತುದಿಗಂದು ||
ಇಡುವ ಮಣಿ ಮುಕುಟಗಳು ಪೊಡವಿಯ |
ಹಿಡಿದು ನುಂಗುವ ಕತ್ತಲೆಯ ಕಡಿ |
ದಿಡುತ ಥಳಥಳಿಸುತ್ತ ಮೇಲಕೆ ಬಂದನಾ ಭಾನು || ೪೮ ||

**ರಾಗ ಮಾರವಿ ಏಕತಾಳ**

ತಂದೆಯ ಬರವ ನಿರೀಕ್ಷಿಸಿ ಕರ್ಣನು | ಮಿಂದತಿ ಭಕ್ತಿಯಲಿ ||
ಚಂದದೊಳರ್ಘ್ಯವನಿತ್ತುರೆ ರಥವನು | ಬಂದೇರಿದನಾಗ || ೪೯ ||

ಹೊಡೆಯಲು ಭೇರಿಯ ನಡೆಯಲು ಸೈನ್ಯವು | ತಡೆಯಲು ಷಡುರಥರು ||
ನಡೆಯುತಲಿರೆ ಕೆಂಧೂಳಿಯು ಮುಸುಕಿತು | ಬಿಡದಾಕಾಶದೊಳು || ೫೦ ||

ಕರೆಯಿರೊ ಪಾಂಡುನೃಪಾಲನ ತನುಜರು | ಬರಲಿಂದಾಹವಕೆ ||
ಗುರುಭೀಷ್ಮಾದ್ಯರ ಗೆಲಿದಬ್ಬರವನು ನಿಲಿಸುವೆನರೆ ಕ್ಷಣಕೆ || ೫೧ ||

**ವಾರ್ಧಕ**

ಧರಣಿಪತಿ ಕೇಳಿತ್ತಲಾ ಪಾಂಡುನಂದನರು |
ಭರದಿಂದ ತಂತಮ್ಮ ನಿತ್ಯ ವಿಧಿಗಳ ರಚಿಸಿ |
ಕರದಿ ಧನುಶರವಾಂತು ಮುರಹರನ ಬಳಿಗಯ್ದಿ ಸಾಷ್ಟಾಂಗಮಂ ಗೆಯ್ಯಲು ||
ಬರಸೆಳೆದು ಬಿಗಿಯಪ್ಪುತಾ ಧರ್ಮನಂದನನೊ |
ಳರಸ ಕೌರವ ಭಾನುಸುತಗೆ ಪಟ್ಟವ ಕಟ್ಟಿ |
ಧುರಕೆ ಪದ್ಮವ್ಯೂಹಕೈದಿತಾ ರಿಪುಸೇನೆ ಕರ್ಣನಾ ಕಟ್ಟಳೆಯೊಳು || ೫೨ ||

**ರಾಗ ಭೈರವಿ ಏಕತಾಳ**

ಮುರಹರನಿಂತೆನೆ ಕೇಳಿ | ನರ | ತ್ವರಿತದಿ ರೋಷವ ತಾಳಿ ||
ಕುರುಬಲವನು ಹೊಯ್ದರಿವೆ | ಮೇಣ್ | ಧರಣಿಪರೆಲ್ಲರ ಗೆಲುವೆ || ೫೩ ||

ಹೊರತಲ್ಲದೆ ಕೌರವನ | ನಾ | ನೊರೆಸುವೆನೀಗರ್ಕಜನ ||
ಶಿರಗಳ ಚೆಂಡಾಡುವೆನು ಎನು | ತಿರಲಾ ಕ್ಷಣ ಮಾಧವನು || ೫೪ ||

ಭಳಿಭಳಿರೆಲವೊ ಕಿರೀಟಿ | ನಿ | ನ್ನಳವಿಯೊಳಾರ್ ಸರಿಸಾಟಿ ||
ಕುಲಹೀನನು ಅರ್ಕಜನು | ಎ | ನ್ನಳಿಯನ ತೀರ್ಚಿದನವನು || ೫೫ ||

ಕೇಳುತ ಭಟರರ್ಜುನಗೆ | ಹರಿ | ಪೇಳಿದ ನುಡಿ ಶರದೊಳಗೆ ||
ಹೂಳಿದರುದರವನಾಗ | ಸುರ | ಪಾಲರು ಹರ್ಷಿಸುತಾಗ || ೫೬ ||

**ಭಾಮಿನಿ**

ಧರಣಿಪತಿ ಕೇಳುತ್ತ ಮಾದ್ರೀ |
ವರಸುತಾದಿ ಸಮಸ್ತ ಪಟುಭಟ |
ರಿರದೆ ಹತ್ತಿತು ಚಕ್ರವ್ಯೂಹವನಧಿಕ ರೋಷದಲಿ ||
ನರನು ಮುರಹರಗೆರಗಿ ಹನುಮನ |
ಚರಣಕಾನತನಾಗಿ ರಥವನು |
ತ್ವರಿತದಿಂದೇರಲ್ಕೆ ನಭದೊಳು ಸುರರುಘೇಯೆನಲು || ೫೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತಲಾ ಪಾಂಡವರ ಬಲ ಮುಂ | ದೊತ್ತಿ ಶರಧಿಯ ತೆರದಿ ಬರುತಿರೆ |
ಅತ್ತಲಾ ಕುರುಸೇನೆ ಸೈನ್ಯವ | ಮುತ್ತಿತಾಗ || ೫೮ ||

ಚೂಣಿಬಲ ಹೊಯ್ದಾಡಿ ಸಮರದಿ | ಕಾಣದಯ್ತುರೆ ಪೊಡವಿ ನಿಮಿಷದಿ |
ಪ್ರಾಣವುಳಿದರೆ ಸಾಕೆನುತ್ತರಿ | ಸೇನೆಯಾಗ || ೫೯ ||

ಭರದಿ ಪಿಂತಿರುಗಲ್ಕೆ ಕೌರವ | ಕರೆದು ಬೇಗದಿ ಕ್ಷೇಮ ಧೂರ್ತನೊ |
ಳರುಹಲಾ ನೀ ನೋಡು ತನ್ನಯ | ಧುರದ ಪರಿಯ || ೬೦ ||

ಅರೆಗಳಿಗೆಯೊಳು ಪಾಂಡುಸುತರಿಗೆ | ಧರಣಿಯನು ಸಾಕೆನಿಸಿ ದುರ್ಧರ |
ದರಣ್ಯವೇ ಲೇಸೆನಿಪೆನೆನ್ನುತ | ತೆರಳ್ದನಾಗ || ೬೧ ||

**ರಾಗ ಕಾಂಭೋಜಿ ಮಟ್ಟೆತಾಳ**

ಕರದಿ ಧನುವ ಪಿಡಿದು ಕ್ಷೇಮಧೂರ್ತನಾಗಳೆ |
ತರಣಿಜಾತಸುತನ ಮೇಲೆ ನಡೆದನಾಗಳೆ || ೬೨ ||

ಧರ್ಮನೆಂಬ ಮಾತನೊಂದ ಕೆಡಿಸಿಕೊಂಡೆಲಾ |
ಕರ್ಮವಶದಿ ಕಲಶಭವನ ಗೆಲಿದೆಯೈ ಭಲಾ || ೬೩ ||

ಪರಿಯದಲ್ಲ ಹೊಸಬ ನಾನು ತಿರುಗಿ ನೋಡೆಲಾ |
ಹರಣವುಳಿವುದಕ್ಕುಪಾಯವನ್ನು ಮಾಡೆಲಾ || ೬೪ ||

ಎನುತಲಾಗ ಧರ್ಮಸುತನ ಮೂದಲಿಸುತಿರೆ |
ಕನಲಿ ಪಾರ್ಥ ಕೋಪದಿಂದ ತಡೆದನಾಗಳೆ || ೬೫ ||

**ರಾಗ ಮಾರವಿ ಏಕತಾಳ**

ಖೂಳನ ವಾಕ್ಯವ | ನಾಲಿಸಿ ಕಂಗಳೊ | ಲೇಳಿಸಿ ಕಿಡಿಗಳ |
ತಾ ಲಯ ದಂತ್ಯದ | ಕಾಲನಂತೆ ಸುರ | ಪಾಲಕಕುವರನು |
ಲೀಲೆಯೊಳಯ್ದಿದ | ಕಾಳಗಕೆನುತ | ರೋಷದಿಂದ || ೬೬ ||

ಆ ಸಮಯದೊಳಾ | ರೋಷದಿ ಮರುತಜ | ದೋಷಕಾರಿಯ ಯಮ |
ವಾಸವ ಮಾಡುವೆ | ಆ ಸುರರಡ್ಡೈ | ಸಲು ಬಿಡೆನೆನ್ನುತ |
ಲಾಶುಗಕುವರನು | ತಾ ಸಮರಕೆನುತ | ನಡೆದನಾಗ || ೬೭ ||

**ರಾಗ ಭೈರವಿ ಆದಿತಾಳ**

ಗದೆಯನು ತಿರುಹುತಲಂದು | ನೃಪ | ನೆದೆಮೇಲೆರಗುತ ನಿಂದು ||
ಫಡ ಫಡ ಎನಲಾ ಕ್ಷಣದಿ | ಖಳ | ಸಿಡಿದ್ಹಾರಿದನಾ ರಣದಿ || ೬೮ ||

ಖೂಳ ಭೀಮನೆ ಕೇಳೆಲವೋ | ನಿನ | ಗಾಲಯ ಯಮಪುರ ವರವೋ ||
ಬಾಳುವೆ ತೀರಿತೆನುತ್ತ | ಶರವೇಳರೊಳೆಚ್ಚನು ನಗುತ || ೬೯ ||

ಆತನ ಶರಗಳ ತರಿದು | ಬಲು | ಖಾತಿಯಿಂದೌಡುಗಳಗಿದು ||
ಘಾತಕ ನಿಲ್ ನಿಲ್ಲೆನುತ | ಶರ | ವ್ರಾತವೆಸೆದ ಗರ್ಜಿಸುತ || ೭೦ ||

ಘರಘರ ಹಲ್ ಮಸೆಯುತ್ತ | ಭೀಮ | ಭರದೊಳ್ ಶಿರಕೆರಗುತ್ತ ||
ಹರ ಹರಯೆನ್ನುತ ಧರೆಗೆ | ಖಳ | ನೊರಗಿದನಾರಣದೊಳಗೆ || ೭೧ ||

**ಭಾಮಿನಿ**

ಭೂಮಿಪತಿ ಕೇಳಿಂತು ಸಮರದೊ |
ಳಾ ಮಹಾ ಕಲಿ ಭೀಮಸೇನನು |
ಕ್ಷೇಮಧೂರ್ತನ ಗೆಲಿದು ಶ್ಯೈಮಿನಿಪುರಕೆ ಕಳುಹಿಸಿದ ||
ಆ ಮರುತಸುತನನು ತಡೆಯೆ ರಿಪು |
ಸ್ತೋಮ ಬರೆ ಹದಿಮೂರು ಸಾವಿರ |
ಭೀಮಸೇನನು ಬಗೆವನೇ ಬಡಿದುರುಳಿಚಿದನವರ || ೭೨ ||

**ವಾರ್ಧಕ**

ಅರಸ ಕೇಳಿತ್ತಲಾ ಕೌರವಂ ಸಮರಮಂ |
ಪರಿಕಿಸಿದನಾಗಳುರೆ ತಾಪದಿಂ ಕೋಪದಿಂ |
ಶರವನುರೆ ಸಮನಿಸುತಲಸ್ತ್ರದಿಂ ಶಸ್ತ್ರದಿಂ ಪರಬಲವ ಮುರಿದೆಚ್ಚನು ||
ಸುರಪಸುತನಿತ್ತಲತ್ಯುಗ್ರದಿಂ ಶೀಘ್ರದಿಂ |

ಪರಿಪರಿಯೊಳಾ ಧನುರ್ನಾದದಿಂ ಭೇದದಿಂ |
ಕುರುಕುಲಾಂಬುಧಿಯನುರೆ ತೆವರಿದಂ ಸವರಿದಂ ಸೈನ್ಯವನ್ನರೆನಿಮಿಷದಿ || ೭೩ ||

**ಕಂದ**

ಇಂತೀ ಪರಿ ಪಾರ್ಥಂ ಬಲು |
ಪಂಥದಿ ರಣರಂಗಮುಖದಿ ಕಾದುತ್ತಿಹುದಂ ||
ಸಂತೈಸುತಲಾ ಧರ್ಮಜ |
ತಾಂ ತವಕದಿ ನಡೆದ ಕುರುಪನೊಡನಾಹವಕಂ || ೭೪ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಕೌರವೇಂದ್ರ ನಿನ್ನ | ಬಲದ ಜೂಜಿನವರ ಕರೆಸು |
ಗೆಲುವಡಿದಕೊ ಬಂದೆನೀಗ ಸರಳ ಮೊನೆಯಲಿ || ೭೫ ||

ಗೆಲುವ ಸುಭಟನಹುದೊ ಯಮಜ | ತಲೆಗೆ ಪಿತ್ತವೇರಿತೇನೊ |
ಇಳುಹುವುದಕೌಷಧಿಯ ಮಾಳ್ಪೆ | ನಲಗತುದಿಯಲಿ || ೭೬ ||

ಕೇಳುಕುರುಕುಲೇಶ ನಿನ್ನ | ಸ್ಥೂಲದುರವ ಬಗಿದು ಧರಣಿ |
ಜಾಲವನ್ನು ತೆಗೆವೆ ನೋಡು | ಲೀಲೆಯಿಂದಲಿ || ೭೭ ||

ಧರಣಿಯಾಸೆಯೇಕೆ ನಿನಗೆ | ಸ್ಮರಿಸಗೊಡೆನು ಸ್ವಪ್ನದಲ್ಲಿ |
ಹರಣದಾಸೆಯಿರಲು ವನಕೆ | ತೆರಳು ಶೀಘ್ರದಿ || ೭೮ ||

ವನದ ಪರಿಯ ಬಲ್ಲೆ ನಾನು | ಧನುಪರೀಕ್ಷೆ ನೋಡು ನೀನು |
ಎನುತ ಯಮಜ ನೂರು ಶರವ | ಕನಲುತೆಚ್ಚನು || ೭೯ ||

ಎಚ್ಚ ಶರವ ನಡುವೆ ತರಿದು | ಕೊಚ್ಚಿ ಕೌರವೇಂದ್ರನುರಿಯ |
ಮುಚ್ಚಿದಹಿಪನಂತೆ ರೋಷ | ಹೆಚ್ಚಿತಾಗಳೆ || ೮೦ ||

ಎಲವೊ ಯಮಜ ಕೇಳು ನಿನ್ನ | ಬಲದ ಕೃಷ್ಣನೆಲ್ಲಿ ಪೋದ |
ತಲೆಯನುಳುಹಿಕೊಳ್ಳೆನುತ್ತ | ತಳುವದೆಚ್ಚನು || ೮೧ ||

ಹತ್ತು ಶರದೊಳದನು ಕಡಿದು | ಮತ್ತೆ ಯಮಜಕರದ ಬಿಲ್ಲ |
ಕತ್ತರಿಸುತ ರಥವ ಮುರಿದ | ನುತ್ತಮಾಸ್ತ್ರದಿ || ೮೨ ||

**ಭಾಮಿನಿ**

ಕರದ ಚಾಪವು ಪೋಗೆ ಕೌರವ |
ರರಸ ಚಿಂತಾಭಾರದಿಂದಲಿ |

ತಿರುಗಿದನು ನಿಜಬಲಕೆ ಭಾಸ್ಕರನಿಳಿದನಂಬುಧಿಗೆ ||
ತರಣಿಯಸ್ತಮಯದಲಿ ಮುರರಿಪು |
ನರ ವೃಕೋದರ ಮಾದ್ರಿ ಯಮಸುತ |
ರಿರದೆ ತಾವ್ ನಡೆತಂದು ಹೊಕ್ಕರು ತಮ್ಮ ಶಿಬಿರವನು || ೮೩ ||

**ರಾಗ ಭೈರವಿ ಝಂಪೆತಾಳ**

ಧಾರಿಣೀಪತಿ ಕೇಳು ಕೌರವೇಶ್ವರನಿತ್ತ | ಭೂರಿ ಚಿಂತೆಯ ತಾಳಿ ಮೌನದಿಂದಿರಲು || ೮೪ ||

ಗುರುಜ ಕೃಪ ಕೃತವರ್ಮ ಶಲ್ಯ ಸೌಬಲ ಸಹಿತ | ಹರುಷದಿಂ ದಳಪತಿಯು ಬರರೆಲ್ಲರೊಲಿದು || ೮೫ ||

ಕೌರವೇಶ್ವರ ತಿಳಿದು ಪರಿಪರಿಯೊಳುಪಚರಿಸಿ | ಶೌರ್ಯಬಲಯುತರೆಲ್ಲ ಕೇಳಿ ಸಂತಸದಿ || ೮೬ ||

ನೋಡಿದಿರೆ ಪಾಂಡವರ ಕಡು ಪರಾಕ್ರಮಗಳನು | ರೂಢಿಯೊಳು ಸರಿಯಾದ ಭಟರಿಲ್ಲವರಿಗೆ || ೮೭ ||

ಮೂರು ಲೋಕದೊಳೊಬ್ಬ ವೀರನರ್ಜುನ ಹೊರತು | ಬೇರೆ ಭಟರಿನ್ನುಂಟೆ ಸರಿಯಾರವರಿಗೆ || ೮೮ ||

ಎಂದು ಮೂದಲಿಸಿ ಮಾತಾಡುತಿರೆ ಕರ್ಣ ತಾ | ನೆಂದ ನೃಪನೊಡನಾಗ ಮುಂದಾಹ ಬಗೆಯ ||೮೯||

ಇಂದುಕುಲ ತಿಲಕ ಕೇಳ್ ಸಾರಥಿಯ ಬಲವೆ ಬಲ | ವೆಂದು ಕರ್ಣನು ಪೇಳ್ದನರಸಗರಿವಂತೆ ||೯೦||

ಹಿಂದೆ ರಾಘವನು ಮಾತಲಿಯಿಂದ ರಾವಣನ | ಕೊಂದ ಕಥನವನು ನೀ ತಿಳಿಯದವನೇನೈ ||೯೧||

ಇಂದು ಫಲುಗುಣಗೆ ಗೋವಿಂದ ಸಾರಥಿಯಾದ | ರಂದು ಪೆಸರಾದರಿಳೆಗೆಂದನಾ ರವಿಜ ||೯೨||

ಭಾರಿ ಬಾಣಗಳಿರಲಿ ಭೂರಿ ಮಾರ್ಬಲವಿರಲಿ | ಸಾರಥಿಗಳಿಲ್ಲದಿರೆ ಸಮರವಿದು ವ್ಯರ್ಥ ||೯೩||

ಸೂತನೊಬ್ಬನ ಕೂಡಿ ಕೊಟ್ಟೆಯಾದರೆ ವೈರಿ | ವ್ರಾತಗಳು ತೃಣವಲ್ಲವೇನಯ್ಯ ನೃಪತಿ ||೯೪||

**ವಾರ್ಧಕ**

ತರಣಿಸುತನೆಂದುದಂ ಕೇಳುತಂ ಕೌರವಂ |
ಹರುಷದಿಂದೀ ಮಹಾಸೈನ್ಯದೊಳ್ ನಿನಗಾಹ |
ದುರಧೀರನಂ ತೋರ್ದಡಾತನಂ ಕರೆಸಿ ಸಾರಥಿತನಕೆ ಮಾಳ್ಪೆನೆನಲು ||
ಧರಣಿಪತಿ ಮಾದ್ರೇಶ ಭೂಪನಂ ತನಗೀಗ |
ಕರೆಸಿ ಸಾರಥಿ ತನಕೆ ನೇಮವಂ ಮಾಡಿದರೆ |
ಧುರದಿ ಬಗೆವೆನೆ ಪಾಂಡುಸುತರನೆಂದರುಹಲಾ ನೃಪತಿ ಮಗುಳಿಂತೆಂದನು || ೯೫ ||

**ಭಾಮಿನಿ**

ಸಾರಶೌರ್ಯಾಗ್ರಣಿಯೆ ಕೇಳ್ ಮೈ |
ದೋರಿರುವ ಹನ್ನೊಂದಕ್ಷೌಹಿಣಿ |
ಭೂರಿ ಮಾರ್ಬಲದೊಳಗೆ ಸೂತತ್ವವನು ಬಲ್ಲವರು ||
ವೀರರನು ಎನಗೊರೆಯದಿಂದು ಮ |
ಹೀರಮಣನಾಗಿರ್ಪ ಶಲ್ಯನ |
ಸಾರಥಿತ್ವಕೆ ಬಯಸಿದೇನೆನೆ ನುಡಿದನಾ ಕರ್ಣ || ೯೭ ||

**ರಾಗ ಕಾಂಭೋಜಿ ಝಂಪೆತಾಳ**

ಚಿತ್ತವಿಸು ಕುರುಕುಲಾಂಬುಧಿಪೂರ್ಣಶುಭ್ರಾಂಶು | ಬಿತ್ತರಿಪೆನೆನ್ನಾದಿ ಕಥೆಯ ||
ಸತ್ಯನಿಧಿ ಭಾರ್ಗವನ ಕೂಡೆ ದ್ವಿಜರೂಪದೊಳು | ವರ್ತಿಸಿದೆ ಗುಪಿತದೊಳು ಜೀಯ || ೯೮ ||

ಸರಸದಿಂ ಶಸ್ತ್ರವಿದ್ಯಾಭ್ಯಾಸ ಕಲಿಯುತಿರೆ | ಗುರುವೊಂದು ದಿನ ಎನ್ನ ತೊಡೆಯ ||
ಶಿರದಡಿಯಲಿಟ್ಟು ಮಲಗಿರೆ ತಾ ಸುಷುಪ್ತಿಯೊಳ್ | ಸುರಪನೆಸಗಿದ ಕಡು ಉಪಾಯ || ೯೮ ||

ಸುತಗೆ ಬಾಧಕ ಬಪ್ಪುದೆಂದು ಅಳಿರೂಪಿನಿಂ | ದತಿಶಯದಿ ಕೊರೆಯೆ ಜಂಘೆಯನು |
ಅತಿರಕ್ತ ಶೀತಳದಿ ತಿಳದೇಳಲಾಗ ಗುರು | ಖತಿಯಿಂದ ಕಾಣುತೆನ್ನುವನು || ೯೯ ||

ರೂಪುದೋರದೆ ಎನಗೆ ವಿದ್ಯವನು ಕಲಿತೆ ಕಡು | ಕಾಪಟಿಗನೆನುತ ಗುರು ಮುನಿದು ||
ಶಾಪವೀಯಲು ಕೇಳುತಿರೆ ಮನದಿ ಚಿಂತಿಸ | ಲ್ಕಾಪರಾಕ್ರಮಿಯು ಎನಗೊಲಿದು || ೧೦೦ ||

ಭದ್ರತ್ವದಿಂದಿಷ್ಟು ಕಾಲ ನೀ ಕಲಿತುದಕೆ | ಉದ್ರೇಕದಿಂ ಮುಂದೆ ರಣದಿ ||
ಮಾದ್ರಭೂಪನ ಸೂತತನದಿ ಜಯಿಸೆನುತಾ ಸ | ಮುದ್ರ ಭೀಕರಪೇಳ್ದ ದಯದಿ || ೧೦೧ ||

ಅದರಿಂದ ಶಲ್ಯನಾಪೇಕ್ಷಿಸಿದೆ ಕೇಳ್ ಭೂಪ | ಒದಗಿ ಕರೆತರಲು ಕ್ಷಣದಿಂದ ||
ಸದೆದು ರಿಪುಗಳ ಯಮನ ಸದನಕೊಪ್ಪಿಸುವೆ ಎ | ನ್ನಧಟುತನ ಮತ್ತೆ ನೋಡೆಂದ || ೧೦೨ ||

**ರಾಗ ಭೈರವಿ ಏಕತಾಳ**

ಭಳಿರೇ ಭಾಸ್ಕರತನಯ | ಎ | ನ್ನೊಳು ನೀನಾಡಿದ ನುಡಿಯ |
ಕಳಚುವರಿಲ್ಲರಿವಿಜಯ | ನಿನ | ಗೊಲಿಸುವೆ ಶಲ್ಯನ ಜೊತೆಯ || ೧೦೩ ||

ವೈರಿಬಲವ ಸಂಹರಿಸು | ಮಮ | ವೈರಾಗ್ಯವ ಪರಿಹರಿಸು ||
ಕಾರ್ಯದಿ ಸಾಹಸ ಮೆರೆಸು | ಘನ | ಶೌರ್ಯದಿ ಭೂಮಿಯ ಒಲಿಸು || ೧೦೪ ||

ಮದಗರ್ವದಿ ರವಿಸುತನು | ಪೇ | ಳಿದ ಮಾದ್ರಾಧೀಶ್ವರನು ||
ಕದನದೊಳೆನ್ನಾಜ್ಞೆಯನು | ನಡೆ | ಸಿದಡರಿಗಳ ಜಯಿಸುವೆನು || ೧೦೫ ||

ಬವರದಿ ಕಡಿದಾಡುವೆನು | ಹ | ಬ್ಬವ ಮಾರಿಗೆ ಮಾಡುವೆನು ||
ದಿವಿಜರ ಕಂಗೆಡಿಸುವೆನು | ಮಾ | ಧವ ಮೂರ್ತಿಯೆ ಬರಲಿನ್ನು || ೧೦೬ ||

**ಕಂದ**

ಕರ್ಣನು ಇಂತೆನಲಾ ನೃಪ |
ಕರ್ಣಾನಂದದೊಳೆಲ್ಲರ ಬೀಳ್ಗೊಟ್ಟಾಗಂ ||
ಸ್ವರ್ಣದ ದೀವಿಗೆ ಬೆಳಕಿಂ |
ಪೂರ್ಣೋಲ್ಲಾಸದೊಳೆ ಬಂದ ಶಲ್ಯನ ಬಳಿಗಂ || ೧೦೭ ||

**ರಾಗ ಸಾಂಗತ್ಯ ರೂಪಕತಾಳ**

ಬರವ ಕಾಣುತ ಮಾದ್ರಭೂಪ ತಾನಿದಿರೆದ್ದು | ಕರೆತಂದು ಕೌರವೇಶ್ವರನ ||
ಹರಿವಿಷ್ಟರದಲಿ ಕುಳ್ಳಿರಿಸಿ ನೀನೀ ನಡು | ವಿರುಳೊಳಯ್ತಂದ ಕಾರ್ಯವನು || ೧೦೮ ||

ಅರುಹಬೇಕೆನುತಲೆ ಗಂಧಕಸ್ತುರಿಯನ್ನು | ಧರಿಸಿ ಕೈಮುಗಿಯುತಿಂತೆಂದ ||
ದೊರೆರಾಯ ಕೇಳಯ್ಯ ಬಂದ ಕಾರ್ಯಗಳೇನು | ಆರುಹೆನಲೆಂದನಾ ನೃಪತಿ || ೧೦೯ ||

ಮಾವ ಕೇಳೀಗ ನಿಮ್ಮೊಡನೊಂದು ಕಾರ್ಯವ | ಭಾವಿಸಿ ಬಂದೆ ನಿಮ್ಮೆಡೆಗೆ ||
ನೀವನುಗ್ರಹವ ಗೆಯ್ದರೆ ಪಾಂಡುಸುತರಿನ್ನು | ಯಾವ ದೊಡ್ಡಿತು ಭಾನುಸುತಗೆ || ೧೧೦ ||

ಸಾರಥಿಯಾಗಿ ನೀವ್ ಕರ್ಣನ ರಥದಲಿ | ತೋರಿಸಬೇಕು ವಿಕ್ರಮವ ||
ಮೂರು ಲೋಕದಿ ನಿಮ್ಮ ಪೋಲ್ವ ಸಾಹಸಿಯಾರು | ಸಾರಥಿತ್ವದ ಹರಹಿನಲಿ || ೧೧೧ ||

**ಭಾಮಿನಿ**

ಕೇಳುತಲೆ ಕಲಿ ಮಾದ್ರಭೂಪತಿ |
ತಾಳುತತಿ ರೋಷವನು ಹರ ಹರ |
ಖೂಳ ಕರ್ಣಗೆ ಸಾರಥಿಯೆ ನಾವೀಗಲಾ ಎನುತ ||
ಹೇಳಿ ಫಲವೇನಿನ್ನು ಸುಮ್ಮನೆ |
ಕಾಳು ತೊತ್ತಿನ ಮಗನ ಕೆಲಸದ |
ಮೇಲೆ ನಿಲಿಸುವ ಮಾತ ಪೇಳ್ವರೆ ಎಂದನಾ ಶಲ್ಯ || ೧೧೨ ||

**ರಾಗ ಕೇದಾರಗೌಳ ಅಷ್ಟತಾಳ**

ಕುರುಭೂಪ ಲಾಲಿಸು ನೀನೆಂದ ನುಡಿಗಳು | ಸರಳಾಗಿ ಉರವನಿನ್ನು ||
ಕೊರೆಯುತಲಿವೆ ಸೂತಸುತನ ಸಂಗರಕೆ ನಾ | ಸಾರಥಿಯೆಂತಹೆನು || ೧೧೩ ||

ಕಬ್ಬಿಲ್ಲರವನ ನೃಪರ ಹಂತಿಯಲಿ ನೀವು | ತಬ್ಬಿಕೊಂಡಿರಿಯವನ |
ಕೊಬ್ಬಿ ತಾತನ ಮೈಯ ಶೋಣಿತವದರಿಂದ | ಲೊಬ್ಬರ ನೋಡುವನೆ || ೧೧೪ ||

ನೀವಾಗಲಿ ನಿಮ್ಮ ತಮ್ಮನಾಗಲಿ ಮತ್ತೆ | ಯಾರೊಬ್ಬರಾಗಿರಲಿ ||
ನಾವು ಸಾರಥಿಯಾಹೆವಲ್ಲದೆ ಕರ್ಣನ | ಸಾರಥ್ಯವೊಲ್ಲೆವಯ್ಯ || ೧೧೫ ||

**ರಾಗ ದೇಶಿ ಅಷ್ಟತಾಳ**

ಏನಯ್ಯ | ಶಲ್ಯ | ಏನಯ್ಯ || ಪ ||

ಏನಯ್ಯ ಶಲ್ಯ ನೀನೆಂದ ಮಾತುಗಳು | ಮಾನಕೆ ಕುಂದಿಹುದೇನು ಕರ್ಣನೊಳು || ಅ ||

ಅಂಗದೇಶದ ನೃಪನಲ್ಲವೆ ಅವನು | ಅಂಗಶುದ್ಧಗಳಾಗಿಯಿರುವ ತಾನಿನ್ನು ||
ಹಿಂಗುವನೆ ಸಮರದಿ ಸುಭಟರನು | ಮುಂಗಾಣದರಿಯದೆ ಪೇಳ್ದುದಕೇನು || ೧೧೬ ||

ಸಾರಥ್ಯವನು ಮಾಡಿದರೆ ಹೀನವೇನು | ಶೂರಕರ್ಣನ ರಥದಲಿ ಊನವೇನು ||
ಅರಿಯದೆ ಪೇಳ್ದರೆ ಸಂದೇಹಗಳನು | ಮರೆಯದೆ ದಯಮಾಡು ಗೆಲುವ ವೈರಿಯನು || ೧೧೭ ||

ಹರಗೆ ಸಾರಥಿಯಾದ ಕಮಲಸಂಭವನು | ತರಣಿಯ ಸೂತತ್ವ ವೆರಸಿಯರುಣನು ||
ಧರಣೀಶ ರಾಮಗೆ ಸುರಸೂತ ತಾನು | ಹರಿಸಿದ ರಥವನು ನರಗೆ ಶ್ರೀವರನು || ೧೧೮ ||

**ಭಾಮಿನಿ**

ಏನ ಹೇಳಿದರೇನು ಫಲ ಕುಲ |
ಹೀನ ಕಲಿ ರಾಧೇಯನಾತಗೆ |
ನಾನು ಸಾರಥಿಯಾಹೆನೇ ಬಿಡು ಕುರುಕುಲೇಶ್ವರನೆ ||
ನೀನು ನಮ್ಮನು ಹೊಗಳಲೇತಕೆ |
ಸಾನುಮತವಲ್ಲಿದುವೆ ಮತ್ತೀ |
ಸೇನೆಯೊಳಗಿನ್ನೋರ್ವ ಸುಭಟನ ಕರೆಸು ಹೋಗೆಂದ || ೧೧೯ ||

**ಕಂದ**

ಇಂತೆನುತಂ ಶಲ್ಯಂ ಬಹು |
ಪಂಥದೊಳಿರುತಿರೆ ಕಂಡಾ ಸಮಯದೊಳಾಗಳ್ ||
ಸಂತಸದಿಂ ಕೌರವನೃಪ |
ನಂತರಿಸದೆ ಪೇಳ್ದ ತ್ರಿಪುರದಹನದ ಕಥೆಯಂ || ೧೨೦ ||

**ದ್ವಿಪದಿ**

ಧರಣಿಪತಿ ಮಾದ್ರೇಶ ಕೇಳು ವಿನಯದಲಿ | ದುರುಳ ದಾನವರೆಲ್ಲ ಕೂಡೆ ಧರಣಿಯಲಿ ||೧೨೧||

ತ್ರಿಪುರವನು ರಚಿಸಿಕೊಳಲಪರಿಮಿತವಾಗಿ | ಅಪರಬುದ್ಧಿಗಳಿಂದ ಸುರಪುರಕೆ ಪೋಗಿ ||೧೨೨||
ಒಡವೆ ವಸ್ತುಗಳೆಲ್ಲ ಸುಲಿದು ಸುಮನಸರ | ಮಡದಿಯರ ಪಿಡಿದು ಗೋಳ್ಗುಡಿಸಿ ಮತ್ತವರ ||೧೨೩||
ದೂರಿದರು ಬಂದು ಕಮಲಜಗೆ ಸುರವರರು | ತಾರಕಾಸುರನ ಸುತರುಪಟಳವನವರು ||೧೨೩||
ಸುರಪಾಲ ಕೇಳೆಮ್ಮ ವರದ ಬಲುಮೆಯಲಿ | ಇರುವರೀ ದಾನವರ ಗೆಲಲು ಸಮರದಲಿ ||೧೨೪||
ಹರನು ಹೊರತಲ್ಲದಡೆ ಕಾಣೆನೊಬ್ಬನನು | ಅರುಹೆ ನಾ ಬಹೆನೆಂದನಮರರಿಂಗಜನು ||೧೨೫||

**ಭಾಮಿನಿ**

ಕಮಲಜನನೊಡಗೊಂಡು ಸುಮನಸ | ನಿವಹವತಿ ತೋಷದಲಿ ಗಿರಿಜಾ |
ಧವನ ಚರಣವ ಕಂಡು ಮೆಯ್ಯಿಕ್ಕಿದುದು ಭಕ್ತಿಯಲಿ ||
ಉಮೆಯರಸ ಕೇಳೆಮ್ಮ ಬವಣೆಯ | ವಿವರಿಸಲು ಬಗೆಯಿಲ್ಲ ರಮಣಿಯ |
ರಿರವದೆಂತೈ ಪೇಳಲಮ್ಮೆವು ತಾರಕಾತ್ಮಜನ || ೧೨೬ ||

**ಕಂದ**

ಅಳಲದಿರಿನ್ನಿವರುಗಳಂ |
ಘಳಿಲನೆ ನಾಂ ಕೊಂದು ಕೊಡುವೆನಾ ಖೂಳರತ |
ನ್ನಿಳಯವನಿಂದುರಿಗೊಳಿಸುವೆ |
ಅಳುಕದಿರಿದಕೆಂದು ಪೇಳ್ದನಾ ಮಾರಹರಂ || ೧೨೭ ||

**ವಾರ್ಧಕ**

ಸುರರಿಗಭಯವನಿತ್ತು ವಾಮದೇವಂ ಬಳಿಕ |
ತರಿಸಿದಂ ಮಣಿಮಯ ವರೂಥಮಂ ಕಮಲಜನ |
ನಿರಿಸಿ ಸಾರಥಿತನಕೆ ನೇಮವಂ ಗೆಯ್ದು ಮಿಗೆ ಪುರಹರಂ ಪೊರಮಟ್ಟನು ||
ಪುರವ ಮುತ್ತುತಲವರ ಸೈನ್ಯಮಂ ಸವರಿ ಘನ |
ದುರಿತಾತ್ಮರಾಗಿರ್ದ ರಕ್ಕಸರ ಶಿರಗಳಂ |
ತರಿದು ಪುರವನು ಸುಟ್ಟು ಹರುಷದಿಂ ತ್ರಿಪುರಾರಿ ನಿಜನಗರಿಗಯ್ತಂದನು || ೧೨೮ ||

**ಭಾಮಿನಿ**

[ಹರನು ಬಿಲುವಿದ್ಯೆಯನು ಕೊಡುತಲೆ |
ಪರಶುರಾಮನಿಗೆಂದನಧಮರಿ |
ಗೊರೆಯದಿರು ಸತ್ಪಾತ್ರಕಿದನಾದರಿಸಿ ಕಲಿಸೆಂದು ||
ಸುರರು ಮೆಚ್ಚಿದ ರಾಮ ನೀತನ |
ಕರೆದು ಗರಡಿಯ ಹೊಗಿಸಿದನು ಕಡು |
ಗರುಹನೀ ರಾಧೇಯನಧಮನೆ ಮಾವ ಕೇಳೆಂದ || ೧೨೯ ||

ದೇವಕೀಸುತನೆಂದು ಬಂಡಿಯ |
ಬೋವ ಕುಲದಲಿ ಹುಟ್ಟಿದನೊ ಮೇ |
ಣಾ ವಿರಿಂಚಿಯದಾವ ಸಾರಥಿತನದ ಪೀಳಿಗೆಯೋ ||
ಕಾವುದಿದರೊಳಗೊಬ್ಬರದನಾ |
ವಾವಶೀಲ ಪದ ಪ್ರಯೋಜನ |
ಭಾವಕರು ಸತ್ಪುರುಷರಿದಕೆ ವಿಚಾರವೇಕೆಂದ || ೧೩೦ ||

ಸೂತಕುಲಸಂಭವನೆ ಭುವನ |
ಕ್ಷಾತ್ರಕಂದನೊ ಸಾಕಿದಾತನು |
ಸೂತನಾದಡೆ ಮಾವ ಕೇಳನ್ವಯಕೆ ಹಳಿಯುಂಟೆ ||
ಸ್ವಾತಿಯುದಕದಲಾದ ಮುಕ್ತಾ |
ವ್ರಾತಕಾರ್ಯನುಚಿಮ್ಮೆ ನಿಮಗಿ |
ನ್ಯಾತಕೀ ಸಂದೇಹ ಸಾರಥಿಯಾಗಿ ಸಾಕೆಂದ || ೧೩೧ ||

ಗುರು ಪಿತಾಮಹರಿಂದ ಮೋರೆಯ |
ಮುರಿದ ವಿಜಯವಧೂಕಟಾಕ್ಷವ |
ತಿರುಹಿ ಹಾಯ್ಕುವ ವೀರನಾವನು ನೀವು ತಪ್ಪಿದರೆ ||
ಕುರುಕುಲೋದ್ಧಾರಕನು ಮಾದ್ರೇ |
ಶ್ವರ ನೆನಿಪ ಪ್ರಖ್ಯಾತಿ ಬರುವುದು |
ಪರಿಹರಿಸದಿರಿ ಮಾಡಿರೆಂದೆರಗಿದನು ಚರಣದಲಿ] || ೧೩೨ ||]

**ರಾಗ ಮಾರವಿ ಏಕತಾಳ**

ಇಂತೀ ಪರಿಯೊಳ್ ತ್ರಿಪುರರ ಗೆಲಿದುದ | ನಂತರದಲಿ ತಿಳಿದು ||
ಚಿಂತೆಗಳೆಲ್ಲವನುಳಿದಾ ಶಲ್ಯನು | ಸಂತಸವನು ತಳೆದು || ೧೩೩ ||

ಧರಣಿಪ ಕೇಳ್ಕೈ ನಿನ್ನಯ ವಚನವ | ಮರೆಯುವರಾರಿಹರು ||
ತರಣಿಯ ಸುತನಿಗೆ ಸಾರಥಿಯಾಹೆನು | ಧುರವನು ಜಯಿಸುವಡೆ || ೧೩೪ ||

ಕರ್ಣನು ತನ್ನಯ ಹಮ್ಮಿನೊಳೆಮ್ಮನು | ಮನ್ನಿಸದಿರಲವನು ||
ನಿರ್ಣಯವಿದು ನಾ ಪೇಳಿದ ಮಾತುಗ | ಳೊಮ್ಮೆಯು ಕೇಳದಿರೆ || ೧೩೫ ||

ವಾಘೆಯ ರಥದಲಿ ಬಿಸುಟು ಮತ್ತವನೊಳು | ಹೋಗೆನು ತಾನೀಗ ||
ನಾಗ ಗರುಡರ ಹಿತವು ನಮ್ಮವರಿಗೆ | ಯೋಗವು ದೊರಕಿತಲಾ || ೧೩೬ ||

ಕರೆಸೈ ಕರ್ಣನ ರಥವನು ಇಲ್ಲಿಗೆ | ಬರಿಸೈ ನೋಡುವೆನು ||
ಅರುಹಲಿಕಾಕ್ಷಣ ಚರರನು ಕಳುಹುತ | ಕರೆಸಿದ ಕರ್ಣನನು || ೧೩೭ ||

**ಭಾಮಿನಿ**

ಧರಣಿಪತಿ ಕೇಳಿತ್ತ ಕೌರವ |
ರರಸ ಮಾದ್ರೇಶ್ವರನ ಕೈಯಲಿ |
ಕರವಿಡಿದು ಎಳೆತಂದು ಕೊಟ್ಟನು ಅರ್ಕಸಂಭವನ ||
ಹರುಷದಲಿ ಮೈದಡವಿ ಮನ್ನಿಸೆ |
ಕುರುಪತಿಯು ಬೀಳ್ಗೊಂಡನಿತ್ತಲು |
ತರಣಿಸುತ ನಡೆತಂದು ಹೊಕ್ಕನು ಶಸ್ತ್ರಮಂದಿರವ || ೧೩೮ ||

**ಕಂದ**

ತರತರದೊಳ್ ಶರಮಂ ತಂ |
ದಿರಿಸುತಲಿರಲಾಗಳಂತೆ ಕುರಿಕೋಣಗಳಂ ||
ತರಿದಿದಿರೊಳಿರಿಸಿ ಬಳಿಕಂ |
ಹರಿವಾಣದೊಳಾರತಿಯೆತ್ತಿ ತಾಂ ಪ್ರಾರ್ಥಿಸಿದಂ || ೧೩೯ ||

**ರಾಗ ಮಧುಮಾಧವಿ ಆದಿತಾಳ**

ಮಾಡಿದ ಪೂಜೆಯನು | ಕರ್ಣನು | ಪಾಡುತ ದುರ್ಗೆಯನು || ಪ ||

ಅಥರ್ವಣಮಂತ್ರದಲಿ | ಪೂಜಿಸಿ | ಸತತದಿ ಭಕ್ತಿಯಲಿ ||
ಅತಿ ಮಾಂಸಗಳಿಂದ | ಶೋಣಿತ | ಘೃತಭಕ್ಷ್ಯಗಳಿಂದ || ಮಾಡಿದ || ೧೪೦ ||

ಧೂಪದೀಪಗಳಿಂದ | ನೈವೇದ್ಯಸ | ಮರ್ಪಣೆ ನಿನಗೆಂದ ||
ವ್ಯಾಪಿಸಿ ಕೈದುವನು | ಕೊಂಡನು | ಚಾಪಶರಂಗಳನು || ಮಾಡಿದ || ೧೪೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧನುವ ಪೂಜೆಯ ಮಾಡಿ ಶಲ್ಯನ | ಘನತೆಯಲಿ ಸಾರಥಿಗೆ ನೇಮಿಸಿ |
ಘನ ಪರಾಕ್ರಮಿ ಕರ್ಣನಡರಿದ | ಮಣಿರಥವನು || ೧೪೨ ||

ಭೇರಿ ಪಟಹ ನಗಾರಿ ತಂಬಟೆ | ಭಾರಿ ರವ ಭೋರ್ಗುಡಿಸೆ ಪಾರ್ಥನ |
ತೋರಿಕೊಡುವವರಾರು ನಮಗೀ | ಭೂರಿಬಲದಿ || ೧೪೩ ||

ತೋರಿದವರಿಗೆ ಕೊಡುವೆ ಧನ ಬಲು | ಭೂರಿ ವಸನಾಭರಣನಿಚಯವ |
ವಾರಣಂಗಳನೀವೆನೆನ್ನುತ | ವೀರ ನುಡಿದ || ೧೪೪ ||

ಊರುಗಳ ಕೊಡಬೇಡ ರಥ ಹಯ | ವಾರಣವ ಕೊಡಬೇಡ ಪಾರ್ಥನ |
ತೋರಿಸುವೆ ನೋಡೆನುತ ಶಲ್ಯನು | ಸಾರುತೆಂದ || ೧೪೫ ||

ಕಂಡು ಮಾಡುವುದೇನು ಮೊದಲಲಿ | ಕಂಡರಾ ಕಲಿ ದ್ರೋಣ ಭೀಷ್ಮರು |
ಭಂಡತನವೇಕಿನಿತು ಬಾಯಿಗೆ | ಬಂದ ತೆರದಿ || ೧೪೭ ||

ಬಗುಳಿದರದೇನಹುದು ಪಾರ್ಥನ | ಹಗೆಯಲಳಿದವ ನೀನೊ ನೃಪತಿಯೊ |
ಬಗೆಯನರಿಯದೆ ಕೆಟ್ಟುಹೋಗುವೆ | ಮಿಗುವರಿಯಲು || ೧೪೭ ||

**ರಾಗ ದೇಶಿ ಅಷ್ಟತಾಳ**

ಏನೆಂದೇ | ಶಲ್ಯ | ಏನೆಂದೇ || ಪ ||

ಏನೆಂದೆ ಶಲ್ಯ ನೀನತಿಗರುವದಲಿ | ಹಾನಿಯನೆಣಿಸುವೆ ಎಮಗೆ ಪಾರ್ಥನಲಿ || ಅ ||

ನೀನು ವೈರಿಗಳ ಸಹಾಯಿಯೆಂಬುದನು | ಕಾಣಿಸದಿಲ್ಲಿತನಕ ನಮ್ಮುವನು ||
ಕಾಣಲು ಕಣ್ಣಿನ ಕಸಗಳಂದದಲಿ | ನಿ | ಧಾನಿಸದಾಡುವರೇನೊ ನೀನಿಲ್ಲಿ || ಏನೆಂದೇ || ೧೪೮ ||

ಬಂಟತನದ ಸಾಹಸವನೇನ ಬಲ್ಲೆ | ಒಳ್ಳೆ | ಪಂಟಿಗೆ ನಿಲುವ ವೀರರು ನೀವಲ್ಲೇ ||
ಉಂಟಾದುದರುಹ ಕೇಳುವದಲ್ಲದಿಂಥ | ತುಂಟತನದ ಮಾತಾಡುವರೇನೊ ಭ್ರಾಂತ || ಏನೆಂದೆ || ೧೪೯ ||

ಯಾರು ಕೊಟ್ಟರು ನಿನಗೀ ವಿಚಾರವನು | ನಮ್ಮ | ದೂರಿ ಪಾಂಡವರನ್ನು ಪೊಗಳುವುದನ್ನು ||
ತೋರುವ ನಿನ್ನೆಳೆಗರುಳ ಧಾರಿಣಿಗೆ | ಬೀರುವೆನೆನುತ ಖಡ್ಗವ ಕೊಂಡು ಪೋಗೆ || ಏನೆಂದೇ || ೧೫೦||

**ಭಾಮಿನಿ**

ಹೊಡೆದು ತಲೆಯನು ನಿನ್ನ ರಕುತವ |
ಕುಡಿಸುವೆನು ಕೂರಸಿಗೆ ಕಡೆಯಲಿ |
ಕೆಡಹುವೆನು ಕಲಿ ಭೀಮ ಪಾರ್ಥರನೆಂದು ಗರ್ಜಿಸುತ ||
ಕೆಡಹಿದರೆ ಬಳಿಕಾ ಸುಯೋಧನ |
ತೊಡಗಿದಗ್ಗದ ರಾಜಕಾರ್ಯವು |
ಕೆಡುವುದೆಂಬುದರಿಂದಲುಳುಹಿದೆ ನಿನ್ನನಿಂದಿನಲಿ || ೧೫೧ ||

**ರಾಗ ಶಂಕರಾಭರಣ ಮಟ್ಟೆತಾಳ**

ಎನುತ ಶಲ್ಯನೃಪನ ಕರ್ಣ ಬೈದು ಭಂಗಿಸಿ | ಕನಲಿ ಖಡ್ಗವನ್ನು ತೆಗೆದು ಒರೆಗೆ ಸೇರಿಸಿ ||
ಅನಿತರೊಳಗೆ ಶಲ್ಯ ಮನದಿ ಕಿನಿಸ ತಾಳುತ | ಇನಿತು ಸತ್ತ್ವ ಬಂತೆ ನಿನಗೆ ಎನುತ ಪೇಳುತ ||೧೫೨||

ಕೇಳು ಸೂತನಣುಗ ನಿನಗೆ ಬಂತೆ ಗರ್ವವು | ಖೂಳ ಹೋಗೆನುತ್ತ ರಥವನಿಳಿಯೆ ಸೈನ್ಯವು ||
ಇಳಿದು ರಥವ ಶಲ್ಯ ತನ್ನ ಬಲಸಮೂಹಕೆ | ಮುಳಿದು ಕರವ ನೆಗಹಿ ಪೇಳ್ದ ಮನದ ಕೋಪಕೆ ||೧೫೩||

ಹೊಡೆದು ಬಡೆದು ಕೊಚ್ಚಿ ಕೊಲ್ಲಿರಿವನನೆನ್ನುತ | ಹಿಡಿದು ಕೆಡಹುತಿವನ ರಥವ ಮುರಿಯಿರೆನ್ನುತ ||
ನುಡಿಯ ಕೇಳುತಾಗ ಕರ್ಣ ರೌದ್ರ ರೋಷದಿ | ಬಡಿವೆ ಪೋಪೆಯೆಲ್ಲಿ ಕುನ್ನಿ ಮುಂದೆ ಗರ್ವದಿ ||೧೫೪||

ಬಳಿಕ ಶಲ್ಯ ಕರ್ಣರಾಗ ತಮ್ಮ ತಮ್ಮೊಳು | ಮುಳಿದು ಮುಷ್ಟಿಪ್ರಹರವನ್ನು ಗೆಯ್ಯೆ ಭರದೊಳು ||
ತಿಳಿದು ಕೌರವೇಂದ್ರನಿತ್ತ ಬಂದು ಶೀಘ್ರದಿ | ಕಲಹ ಬೇಡ ನಿಮ್ಮೊಳೆನುತಲವರ ಮಧ್ಯದಿ ||೧೫೫||

**ಭಾಮಿನಿ**

ಬಳಿಕ ಕೌರವರಾಯನೀರ್ವರ |
ಬಳಿಗೆ ಹರಿತಂದಿಳಿದು ಶಲ್ಯನ |
ನೊಲಿದು ಬೇಡಿದ ರಥಕೆ ಬಿಜಯಂಗೆಯ್ಯಬೇಕೆಂದು ||
ತಿಳುಹಿ ನಯನೀತಿಯಲಿ ಕರ್ಣನ |
ಛಲವನುರೆ ಪರಿಹರಿಸಿ ಕಾಲಿಗೆ |
ಮಣಿಸಿ ಮಾದ್ರೇಶ್ವರನ ಮನ್ನಿಸಿ ರಥವನೇರಿಸಿದ || ೧೫೬ ||

**ಕಂದ**

ರಣಮಂಡಲದೋಳ್ ಕುರುಪತಿ |
ಇನಸುತ ಮಾದ್ರೇಶರ ಮನ್ನಿಸಿ ಬೀಳ್ಗೊಡಲುಂ ||
ದಿನಮಣಿ ಪೂರ್ವಾಂಬುಧಿಯೊಳ |
ಗನುವರವೀಕ್ಷಿಸಲಯ್ತರೆ ರಣಕಯ್ತುಂದರ್ || ೧೫೭ ||

**ರಾಗ ಭೈರವಿ ತ್ರಿವುಡೆತಾಳ**

ಬಂದರಾಗ | ರಣಕ | ಯ್ತುಂದರಾಗ || ಪ ||

ಬಂದರಾ ಕುರುವೀರನನುಜರು | ಸ್ಯಂದನಗಳೆಡಬಲದ ಪಾಠಕ |
ರಿಂದ ಪೊಗಳಿಸಿಕೊಳುತ ಮರುತನ | ಹಿಂದುಳುಹಿ ವೇಗದಲಿ ಬರಲಾ |
ಮುಂದುವರಿದತಿರಥ ಭಯಂಕರ | ದಿಂದಲಾ ಗುರುಸೂನು ಷಡುರಥ |
ರೊಂದೆ ಮನದಲಿ ಶಲ್ಯಭಾಸ್ಕರ | ನಂದನರು ರಥವೇರಿ ಬೇಗದಿ || ಬಂದರಾಗ || ೧೫೮ ||

ಆರು ಸಾವಿರ ಭಂಡಿ ಶರ ಹದಿ | ನಾರು ಸಾವಿರ ವರಮಹಾರಥ |
ವಾರಣಂಗಳು ಐದು ಲಕ್ಷವು | ಚಾರು ಕುದುರೆಗಳೇಳು ಕೋಟಿಯು |
ಬೇರೆ ಕಾಲಾಳುಗಳು ತೊಂಭ | ತ್ತಾರುಅರ್ಬುದವಾದುದೆಣಿಕೆಗೆ |
ವೀರ ಕರ್ಣನು ಬರಲು ಪಥದಲಿ | ತೋರಿತುತ್ಪಾತಂಗಳಾ ಕ್ಷಣ || ಏನನೆಂಬೆ || ೧೫೯ ||

ಬರುತಲಾ ಬೀದಿಯಲಿ ಕರಿಗಳು | ಧರಿಸಿದವು ಮೃತ್ತಿಕೆಯ ಶಿರದಲಿ |
ವರ ರಥಾಗ್ರದ ಮೇಲೆ ಖಗ ಬಂ | ದೆರಗಿತ್ತೈ ಶಿಲೆಯೊಳಗೆ ತಾವರೆ |
ಯರಳಿದವು ಕಣ್ಣೊಳಗೆ ನೀರ್ಗಳು | ಸುರಿಸುತಾ ಕುದುರೆಗಳು ಬರುತಿರ |
ಲರಿತು ಶಲ್ಯನು ಕಷ್ಟವಿಂದಿನ | ಧುರವೆನುತ್ತಾಕ್ಷಣದೊಳರುಹುತ || ಬಂದರಾಗ || ೧೬೦ ||

**ಭಾಮಿನಿ**

ಬರೆದ ಬರೆಹವು ತೀರದಾ ಜನ |
ರರಿವರೇ ದುಃಶಕುನಫಲಗಳ |
ಹರಿವು ತನಗಿಂದಿನಲಿ ಎಂಬುದನರಿಯದಾ ಕರ್ಣ ||
ಧುರವನಿಂದಿಲಿ ಜಯಿಸಿ ಶಾಂತಿಯ |
ವಿರಚಿಸುವೆ ನಾಳಿನಲಿ ಎಂಬನಿ |
ತರಲಿ ಬಂದರು ಘೋರ ಸಮಸಪ್ತಕರು ಸಂಗರಕೆ || ೧೬೧ ||

**ರಾಗ ದೇಶಿ ಅಷ್ಟತಾಳ**

ಬಂದರಾ ಸಮಸಪ್ತಕರಂದು ಸಾ |
ನಂದದಿಂದಮರೇಂದ್ರಸುತನೊಡ | ನಿಂದು ಕಾದುವೆವೆನ್ನುತ || ೧೬೨ ||

ಕಾರುಗತ್ತಲೆಯಂತೆ ತೋರುವ ಮುಖ |
ಕೋರೆದಾಡೆಯು ಕರದ ನಖ ದಂ | ಷ್ಟ್ರಾಳಿಯಿಂ ಕಿಡಿ ಸುರಿಸುತ || ೧೬೩ ||

ಕರದಿ ಬಾಣವ ಹೆದೆಗೊಳಿಸುತ ಮತ್ತೆ |
ಥರಥರನೆ ಸುರಲೋಕ ನಡುಗುವ | ತೆರದೊಳೊದರಿಸಿ ಧನುವನು || ೧೬೪ ||

ಬರುತ ತಗ್ಗಿತು ಧರಣಿ ದಿಗ್ಗಜಗಳು |
ಕೊರಳ ತಗ್ಗಿಸೆ ಕಮಠ ಫಣಿಪನ | ಕರುಳು ಬೆನ್ನಿಗೆ ಸೇರಿತು || ೧೬೫ ||

ಹರುಷದಿಂದಲಿ ಕರ್ಣನಾ ಕ್ಷಣದೊಳು |
ಕರವ ಮುಗಿಯಲ್ಕಾಗ ದನುಜರು | ಭರದಿ ಶಿರಗಳ ತೂಗುತ || ೧೬೬ ||

ಗಾಳಿ ಬೆಂಕಿಗಳೊಂದಾಗಿ ಬರುವಂತೆ |
ಖೂಳ ದನುಜರು ಶಲ್ಯ ಭಾಸ್ಕರ | ಬಾಲ ಸಹಿತಾನಂದದಿ || ೧೬೭ ||

**ಭಾಮಿನಿ**

ದನುಜರಾ ಸಮಯದಲಿ ತಮ್ಮಯ |
ಜನದೊಳೋರ್ವನ ಕರೆದು ಪಾರ್ಥನೊ |
ಳನುವರಕೆ ನಡೆತಂದು ನಿಂದಿಹೆವೆನುತಲವನೊಡನೆ ||
ನೆನಹನೆಚ್ಚರ ಗೆಯ್ಯುತಾತನ |
ನನುವರಿಸಿ ಬರಲೆಂದು ಕಳುಹ |
ಲ್ಕನಿಲವೇಗದಿ ಬಂದು ಪೇಳಿದರಾ ಧನಂಜಯಗೆ || ೧೬೮ ||

**ರಾಗ ಮುಖಾರಿ ಏಕತಾಳ**

ಲಾಲಿಸಿ ಕೇಳಯ್ಯ ಪಾರ್ಥ | ನಾವೆಂಬ ಮಾತ | ಲಾಲಿಸಿ ಕೇಳಯ್ಯ ಪಾರ್ಥ || ಪ ||

ಜಾಲಮಾತುಗಳಲ್ಲವಯ್ಯ | ಬಂದಿದೆ ಶರಧಿ | ಏಳರಂದದಿ ಸೈನ್ಯವಯ್ಯ ||
ಖೂಳ ಖಳರು ಯಮ | ನಾಳುಗಳಂದದಿ | ಪಾಳೆಯವನು ಕೊಂ | ಡಾಲೋಚಿಸುತಲೆ | ಕಾಳಗಕಿದಿರಾ |
ಗೇಳೇಳೆನುತಲೆ | ಪೇಳಿದರಾ ಖಳ | ರಾಳುಗಳಾಗ || ಲಾಲಿಸಿ || ೧೭೯ ||

ಕರಿಯಾ ಮೈಯವನ ಬಿಟ್ಟು ಈಗ | ಕರೆಸಿಕೊ ಧುರಕೆ | ಕರಿಚರ್ಮಾಂಬರನನು ನೀ ಬೇಗ ||
ಧುರದೊಳು ನಿನ್ನಯ | ಶಿರವುಳಿವೆತ್ನಗ | ಳರಿಯೆವು ಕೇಳ್ ನಿನ್ನರಸಿಗೆ ಗತಿ ಯಾ |
ರಿರುವರೆಂದು ನೀ | ನರಿತುಕೊ ಮನದಲಿ | ಕರಕರೆಗೊಳ್ಳದೆ | ಪೊರಡೈರಣಕೆ || ಲಾಲಿಸಿ || ೧೭೦ ||

ಶಿರವೈದರವನ ಪುರವರವ | ಪೊಕ್ಕರು ತೀರ | ದಿರುವುದಿಂದಿನ ಮಹಾಧುರವ ||
ಬರಹೇಳೆಂದೆನು | ತರುಹಿದರಾಗಲೆ | ಧುರವಿಜಯರು ಅನು | ವರ ಕೇಳೆಂಬುದ |
ನರುಹಲು ಬಂದೆವು | ತೆರಪಿನಿತಿಲ್ಲವು | ಸರಿಸಮನೇ ನೀ | ನರಿತುಕೊ ಮನದಿ || ಲಾಲಿಸಿ ||೧೭೧||

ಆಗಲಾ ಕರ್ಣನ ಕಡೆಯ | ಚಾರಕನೋರ್ವ | ಪೋಗಿ ಪೇಳಿದ ನರನ ಕೈಯ ||
ಪೋಗುವೆಯೆಲ್ಲಿಗೆ | ರಣಸನ್ನಾಹಗ | ಳಾಗೇಳ್ ನಿನ್ನಯ | ಖಗಸಂತತಿಗಳಿ |
ಗೀಗುಣಲಿಕ್ಕುವ ಭಾರ್ಗವ ವೀರನ | ಹಾಗಿಹ ಕರ್ಣನ | ಬಗೆಯನರಿಯೆ ನೀ || ಲಾಲಿಸಿ ||೧೭೨||

**ಭಾಮಿನಿ**

ಚರರ ನುಡಿಯನು ಕೇಳಿ ಫಲುಗುಣ |
ಹರುಷದಿಂದವರುಗಳ ಮನ್ನಿಸಿ |
ಮರಳಿ ಕಳುಹಿಸಿಕೊಟ್ಟು ಮನದಲಿ ರಾಮಭೃತ್ಯನನು ||
ಸ್ಮರಿಸಲಯ್ತಂದಾ ರಥಾಗ್ರದಿ |
ಸ್ಥಿರದಿ ಕುಳ್ಳಿರಲಾಗ ಮುರಹರ |
ಧರಣಿ ನಡುಗುವ ತೆರದೊಳೊದರಿಸೆ ಪಾಂಚಜನ್ಯವನು || ೧೭೩ ||

**ವಾರ್ಧಕ**

ಧರಣಿಪತಿ ಲಾಲಿಸೈ ನರನು ಗಾಂಡೀವದಿಂ |
ದರಿಗಳೆದೆ ತಲ್ಲಣಿಸುವಂತೆ ಝೇಂಕರಿಸುತ್ತ |
ಲಿರಲಾಗ ಮರುತಜಂ ವರ ರಥಾಗ್ರದ ಮೇಲೆ ಶರಧಿಗಳ್ ತುಳುಕುವಂತೆ ||
ಭರದಿ ಹುಂಕಾರಮಂ ಗೆಯ್ಯಲಾ ಫಲುಗುಣಂ |
ವರದೇವದತ್ತಮಂ ಪೂರೈಸಲಾಗಲ |
ಚ್ಚರಿಯಿಂದ ಕುರುಸೇನೆಯಲ್ಲಲ್ಲಿ ಗರಹೊಡೆದ ತೆರನಂತೆ ಇರುತಿರ್ದುದು || ೧೭೪ ||

**ಭಾಮಿನಿ**

ರಾಯ ಕೇಳಂದಿನಲಿ ಪಾಂಡವ |
ರಾಯರರಸಿಯು ಬಂದು ಕಮಲದ

ಳಾಯತಾಕ್ಷನ ಚರಣಕಮಲದಿ ಬಿದ್ದು ಗೋಳಿಡಲು ||
ತಾಯೆ ಏಳೌ ತಂಗಿ ಸುಮ್ಮನೆ |
ಆಯಸವ ಕೊಳಲೇಕೆ ಮನಸಿನ |
ದಾಯತವನುಸಿರಿದರೆ ಕೇಳುವೆನೆಂದನಸುರಾರಿ || ೧೭೫ ||

**ರಾಗ ಕೇದಾರಗೌಳ ಅಷ್ಟತಾಳ**

ಚಿನುಮಯ ಕೇಳೆನ್ನ ಮನಸಿನೊಳಿರುವುದ | ನರಿಯೆಯ ನಾನೆಂಬುದೇನು ||
ಘನದುಷ್ಟನಾದ ಕೌರವನನುಜನು ಎನ್ನ | ಜನಪರ ಸಭೆಯೊಳಗೆ || ೧೭೬ ||

ಉಡಿಮಂಡಿಯನು ಬಿಚ್ಚಿ ಕೆಡಹಿದಂದಿನ ಭಾಷೆ | ನಡೆಯದಿಂದಿನವರೆಗೆ ||
ಕಡುದ್ರೋಹಿ ದುಶ್ಯಾಸನೇನ್ ಘನವಾತ ನಿ | ಮ್ಮಡಿಗಿದು ಸಹಜವೇನೈ || ೧೭೭ ||

ಗಂಡರೈವರು ಎನ್ನ ಮಾನ ಕಾಯುವರಿಲ್ಲೆಂ | ದಂಡಲೆಯುವ ಸತಿಗೆ ||
ಲಂಡ ದುಶ್ಯಾಸನನುದರ ರಕ್ತದೊಳದ್ದಿ | ಮಂಡೆ ಕಟ್ಟಿಸುವೆನವ್ವ || ೧೭೮ ||

ಇನನುದಯವಾಗಿರ್ದಸ್ತಮಯದ ಮುನ್ನ | ಇನಿತೆಂದ ವಾಕ್ಯಗಳು ||
ಕನಕಾಂಗಿ ಕೇಳಮ್ಮ ಭಾಷೆ ತಪ್ಪಿದರೆನ್ನ | ಜನಕನ ಪಾದದಾಣೆ || ೧೭೯ ||

ಇನಿತು ದುಃಖಿಸಬೇಡ ಮನೆಯೊಳಗಿರು ನೀನು | ದನುಜನ ಉರಗಳನು ||
ರಣದೊಳು ಭೀಮನ ಗದೆಯಿಂದ ಕೆಡಹಿಸಿ | ನಿನಗೆ ತೋರಿಸುವೆನವ್ವ || ೧೮೦ ||

**ಭಾಮಿನಿ**

ಎಂದು ಅಭಯವ ಕೊಟ್ಟು ಮುರರಿಪು |
ಸ್ಯಂದನವ ನಡೆಸುತ್ತಲರಿಗಳ |
ಮುಂದೆ ಕಾಣಿಸಲಾಗ ಸಮಸಪ್ತಕರು ಸಂಗರಕೆ ||
ಇಂದು ಪೋಪೆಯದೆಲ್ಲಿ ನಮ್ಮೊಳು |
ನಿಂದು ಕಾದಿಯೆ ಉಳಿದೆಯಾದಡೆ |
ಮುಂದೆ ಕೌರವರೊಡನೆ ಸಂಗರವೆನುತಲಡ್ಡೈಸೆ || ೧೮೧ ||

**ರಾಗ ಶಂಕರಾಭರಣ ಮಟ್ಟೆತಾಳ**

ನರನ ರಥವ ತರುಬಿ ನಿಂದು ದುರುಳ ದೈತ್ಯರು | ಉರುತರಾಸ್ತ್ರವನ್ನು ತೆಗೆದು ನರನಿಗೆಸೆದರು ||
ಬರುವ ಸರಳ ಕಂಡು ಪಾರ್ಥ ಭರದಿ ಖಂಡಿಸಿ | ಮರಳಿ ತೀವ್ರ ಶರದೊಳದನು ತರಿದ ಸಾಹಸಿ ||೧೮೨||

ಮತ್ತೆ ದನುಜರೊಂದೆ ಭರದಿ ಶಕ್ತಿಶರವನು | ಎತ್ತಿ ಬಿಸುಡಲಾಗ ವಿಜಯ ಕತ್ತರಿಸಿದನು ||
ರಕ್ತ ಮದದಿ ಬಂದು ಖಳನೆ ವ್ಯರ್ಥ ಸಾಯ್ವೆಯಾ | ಶಕ್ತಿಯಿರಲು ಖಂಡಿಸೆನುತ ಬಿಟ್ಟನಕ್ಷಯ ||೧೮೩||

ಶರವು ತಾಗಲನಿತರೊಳಗೆ ಕೆರಳಿ ದೈತ್ಯರು | ಭರದಿ ಕೋಲಮಳೆಯನಾಗ ನರನಿಗೆರೆದರು ||
ಹರನೊಳ್ ಬೇಡಿದಸ್ತ್ರವೆಲ್ಲಿ ನೋಳ್ಪೆ ತೆಗೆಯೆಲಾ | ತರಣಿಜಾತನೂರ ನಿನಗೆ ತೋರ್ಪೆ ನೋಡೆಲಾ ||೧೮೪||

ಸುತರು ಪೋಪುದುಚಿತ ಜನಕನಿರುವ ಲೋಕಕೆ | ಪಥವನರಿಯದಿರಲು ತೋರ್ಪೆ ನೋಡು ನಿಮಿಷಕೆ ||
ಪೃಥಿವಿ ಯಾವುದಭ್ರಯಾವುದೆಂಬ ಬಗೆಯನು | ಕ್ಷಿತಿಗೆ ರವಿಯು ತೋರದೆಂಬ ತೆರದೊಳೆಚ್ಚನು ||೧೮೫||

**ಭಾಮಿನಿ**

ಭೂರಿನೇತ್ರನ ತನುಜನರ್ಜುನ |
ವೀರ ಸಮಸಪ್ತಕರ ಸಮರದಿ |
ಭಾರಿಯಾಹವಮುಖದೊಳಿರುತಿರೆ ಮಾರುತಿಯು ಬಳಿಕ ||
ವೀರ ಕೌರವನಸುವ ರಣದಲಿ |
ತೀರಿಸುವೆನೆಂದೆನುತ ಬರುತಿರೆ |
ಸೂರ್ಯನಾತ್ಮಜ ತಡೆದು ಭೀಮನ ಸಮರಕನುವಾದ || ೧೮೬ ||

**ರಾಗ ಭೈರವಿ ಅಷ್ಟತಾಳ**

ಎಲವೊ ಭೀಮನೆ ನೀ ಕೇಳು | ನಿನ್ನಯ ಜೀವ | ಉಳಿವ ಯತ್ನವನೆ ಪೇಳು ||
ಕಳವಿನೊಳ್ ದ್ರೋಣನ ಗೆಲಿದ ಗರ್ವವನಿನ್ನು | ನಿಲಿಸುವೆನಿಂದಿನೊಳು || ೧೮೭ ||

ಗೆಲುವ ಸಮರ್ಥ ಕೇಳು | ಖೇಚರರೊಳು | ಸಿಲುಕಿ ನಿರ್ಬಂಧದೊಳು ||
ಅಳುವ ಕೌರವನನ್ನು ಬಿಡಿಸಿದ ಭಟ ನಿನ್ನ | ಬಲುಮೆಯ ಬಲ್ಲೆನೇಳು || ೧೮೮ ||

ಖಳ ಬಕನೆಂಜಲನು | ತಿಂದೋರುವ | ಲಲನೆಯ ಭೋಗವನು ||
ಸಲಿಸುವಿರೈವರ ಮೊಗ ನೋಡಲಾಗದೆಂ | ದುಲಿದೆಚ್ಚನಾ ಕರ್ಣನು || ೧೮೯ ||

ಎಚ್ಚ ಶರೌಘವನು | ಕಾಣುತ ನುರಿ | ನುಚ್ಚು ಮಾಡುತಲೆಂದನು ||
ಅಚ್ಯುತರಹಿತರಿಗೆಲ್ಲಿಯ ಜಯವೆನು | ತೆಚ್ಚನಾ ಕ್ಷಣ ಭೀಮನು || ೧೯೦ ||

ಮಡದಿ ದ್ರೌಪದಿಯೊಡನೆ | ದುಶ್ಯಾಸನ | ನೊಡಲಿಗಂತಕನು ತಾನೇ ||
ಬಡಿವಾರದಲಿ ಪೇಳ್ದ ಮಾತೆಂದರಿಯದೆ ನೀ | ನಡೆಯೋ ಬೇಗದಿ ಸುಮ್ಮನೆ || ೧೯೧ ||

ಗಾಯವಡೆದ ಹುಲಿಯ | ಕೆಣಕಿ ನೀನು | ನೋಯಿಸಬಹುದೇನಯ್ಯ ||
ಕಾಯುವ ಸುಭಟನ ಕರೆಬೇಗೆಂದೆನುತಲೆ | ಸಾಯಕವೆಸೆಯಲವ || ೧೯೨ ||

**ವಾರ್ಧಕ**

ಮರುತಸುತನಸ್ತ್ರಮಂ ತರಿದು ಪ್ರತಿಶಸ್ತ್ರಮಂ |
ತರಣಿತನಯಂ ತೆಗೆದು ಪೂಡಿದಂ ನೋಡಿದಂ |

ತೆರವುಗೊಡದರಿಭಟನ ಕಾಯದಿಂ ಗಾಯದಿಂ ಸುರಿವ ನೆತ್ತರುಗಳಿಂದ ||
ಇರಲಿತ್ತ ಪಾಂಡುಜ ಯಯುತ್ಸು ಸೃಂಜಯ ಶಕುನಿ |
ಗುರುಜ ಸಾತ್ಯಕಿ ವೀರ ದ್ರುಪದಸುತ ದುಶ್ಯಾಸ |
ವರ ಸುಶರ್ಮಕ ನಕುಲರೆಚ್ಚಾಡಿ ಮೈಮರೆದರೇನೆಂಬೆನದ್ಭುತವನು || ೧೯೩ ||

**ಭಾಮಿನಿ**

ಆಗಲಾ ರವಿಸೂನು ಶಸ್ತ್ರದ |
ಸಾಗರದೊಳದ್ದಿದನು ಭೀಮನ |
ಯೋಗ ನಿದ್ರೆಯೊಳಿರಿಸಿ ತಿರುಗಿದನಂದು ಧರ್ಮಜನ ||
ನಾಗನಿಗೆ ಖಗವೆರಗುವಂದದಿ |
ತಾಗಿದನು ಶಸ್ತ್ರಾಸ್ತ್ರನಿಕರದೊ |
ಳಾಗಲಾ ಯಮಸೂನು ತೆಗೆದನು ದಿವ್ಯ ಮಾರ್ಗಣವ || ೧೯೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮುಟ್ಟವಿಸಿ ಬಹ ತರಣಿತನುಜನ | ನಟ್ಟಿ ಹೊಯ್ದನು ಪೂತು ಮಝು ಜಗ |
ಜಟ್ಟಿ ನೀನಹುದೆನುತ ಶರಗಳ | ವೃಷ್ಟಿಯನ್ನು || ೧೯೫ ||

ಸುರಿಸಿ ಮಾರ್ಬಲವೊರೆಸೆ ಶಿರಗಳು | ತರಿದು ಧರಣಿಯೊಳುರುಳುವುದ ಕಂ |
ಡರಿತು ದಿನಪನ ಸೂನು ಕಿಡಿಗಳ | ಕರೆಯುತೆಂದ || ೧೯೬ ||

ಬೆಟ್ಟವನು ಕಡಿದೆಡಹ ಬಲ್ಲುದೆ | ಕಟ್ಟಿರುವೆ ಕೇಳೆಲೆ ನಪುಂಸಕ ||
ಸೃಷ್ಟಿಯಾಸೆಗೆ ಬಂದು ನಮ್ಮೊಳು | ಕೆಟ್ಟೆ ಬರಿದೆ || ೧೯೭ ||

ಘಡ ಮರುಳೆ ಕೇಳೆಲೆ ಯುಧಿಷ್ಠಿರ | ಪೊಡವಿಗೋಸುಗ ನಮ್ಮ ಕೆಣಕಿದು |
ಕಡೆಯ ಕಾಲವೆ ಹೊರತು ನಿನ್ನನು | ಬಿಡುವೆನೇನೈ || ೧೯೮ ||

ಎಲವೊ ಸೂತಜ ಕೇಳು ನಿನ್ನನು | ನಳಿನಸಖನಪರಾಬ್ಧಿಗಿಳಿವುದ |
ರೊಳಗೆ ತೀರ್ಚದೆ ಉಳಿದೆವಾದರೆ | ಫಲವನೊರೆವೆ  || ೧೯೯ ||

ಜನನಿಯುದರದೊಳಾವು ಐವರು | ಜನಿಸಲಿಲ್ಲವೆನುತ್ತ ನೀ ತಿಳಿ |
ಯೆನುತ ಹೂಡಿದನಾ ಮಹಾಸ್ತ್ರವ  | ಕಿನಿಸಿನಿಂದ || ೨೦೦ ||

**ರಾಗ ಮಾರವಿ ಏಕತಾಳ**

ಅನಿತರೊಳಾ ರವಿಸೂನು ನೃಪಾಲನ | ಧನುವನು ಖಂಡಿಸುತ ||
ಕ್ಷಣದೊಳು ಸೂತನ ಕೆಡಹಿಯೆ ಯಮಜನ | ಹಿಡಿದನು ಹೆಡತಲೆಯ || ೨೦೧ ||

ನಿನಗೇತಕೆ ಧುರವೆನ್ನುತಲಾತನ | ಕುಸುಬುತಲವನಿಯಲಿ ||
ದನುಜಾರಿಯೆ ಗತಿಯೆನುತಿರಲಾ ಕ್ಷಣ | ಇನಸುತನಿಂತೆಂದ || ೧೦೨ ||

**ರಾಗ ಕಾಪಿ ಅಷ್ಟತಾಳ**

ಸಿಕ್ಕಿದೆಯಾ ಧರ್ಮರಾಯ | ನಮ | ಗಕ್ಕರವಾಯ್ತು ಕಾಣಯ್ಯ ||
ರಕ್ಕಸಾರಿಯ ಕೈಯ ಪಂಜರದರಗಿಣಿ | ಫಕ್ಕನೆ ಹಾರಿಬಂದೆನ್ನ ಕೈಯೊಳಗಿಂದು || ಸಿಕ್ಕಿದೆಯಾ ||೧೦೩||

ನದಿಯೊಳು ಸ್ನಾನವ ರಚಿಸಿ | ಬಹು | ವಿಧ ವಿಧ ಜಪವನುಕರಿಸಿ ||
ವಿಧಿವಿಹಿತದಿ ಮುನಿನಿಕರಯೋಗಂಗಳ | ಹದವರಿಯದೆ ನೀನೇಕೊದಗಿದೆ ಸಮರಕೆ | ಸಿಕ್ಕಿದೆಯಾ ||೧೦೪||

ಹಲವು ಶಾಸ್ತ್ರಂಗಳನರಿತು | ಎನ್ನ | ನೆಲೆಯರಿಯದೆ ಮೈಯ ಮರೆತು ||
ಕಲಹಕೆ ಬರಬಹುದೇನನೆನಲಿ ನಿನ್ನ | ಕೊಲುವಡಚ್ಯುತಗಿತ್ತ ಭಾಷೆಗಂಜುವೆನಯ್ಯ || ಸಿಕ್ಕಿದೆಯಾ ||೧೦೫||

ಜಾಣ ತನದಿ ಗೆಲುವುದಕೆ | ಭೀಷ್ಮ | ದ್ರೋಣರಂತಲ್ಲನುವರಕೆ ||
ಕ್ಷೊಣೀಶ ನೀ ಬಂದು ಸೂತಜನೊಳು ಸೋತು | ರಾಣಿಗೆ ಮೊಗವೆಂತು ಕಾಣಿಪೆ ನೀನಿಂತು || ಸಿಕ್ಕಿದೆಯಾ ||೧೦೬||

ಭೀಮ ಕಿರೀಟಿ ನಕುಲರು | ಮತ್ತೆ | ಸ್ವಾಮಿದ್ರೋಹಿಗಳಲ್ಪಬಲರು ||
ಈ ಮಡುವಿಗೆ ನಿನ್ನ ನೂಕಿದ ಮೇಲಿನ್ನು | ಈ ಮಹೀಶನ ಮರೆಹೊಕ್ಕು ಜೀವಿಸು ನೀನು || ಸಿಕ್ಕಿದೆಯಾ ||೧೦೭||

**ಭಾಮಿನಿ**

ಬಿಡಿಸುವವರಾರಿನ್ನು ಭೀಮನೊ |
ಕಡೆಯೊಳಾ ಫಲುಗುಣನೊ ನಕುಲನೊ |
ಜಡಜನೇತ್ರನೊ ಮೃಡನೊ ನಿನ್ನಯ ಮಡದಿ ದ್ರೌಪದಿಯೊ ||
ನುಡಿಯೆಲಾ ಎಲೆ ಮರುಳೆ ಜನನಿಯ |
ಒಡಲನುರೆ ಹೊಗು ಹೋಗೆನುತ್ತಲೆ |
ಝಡಿದು ತಿವಿದನು ಬಿಲ್ಲಕೋಟಿಯೊಳಾ ಯುಧಿಷ್ಠಿರನ || ೧೦೮ ||

**ಕಂದ**

ಅನಿತರೊಳಾಗಲೆ ಶಲ್ಯಂ |
ಘನ ಕೋಪವ ತಾಳುತಾಗ ಭಾಸ್ಕರಸುತಗಂ ||
ರಣದೊಳ್ ಸಿಕ್ಕಿಹ ನೃಪನಂ |
ದಣಿಸುವುದಿದಾವ ನೀತಿಯಿದೆಂದನು ನಯದಿಂ || ೧೦೯ ||

**ರಾಗ ಸುರುಟಿ ಏಕತಾಳ**

ಲಾಲಿಸು ರವಿಜಾತ | ಸಂಗರ | ವೀರರೊಳತಿ ಖ್ಯಾತ ||
ಸೋಲವಿದೆಮ್ಮದು ಧರ್ಮಜಗಲ್ಲ ಶ್ರೀ | ಲೋಲನು ಭಕ್ತರ ಪಾಲಿಸದಿರುವನೆ || ೧೧೦ ||

ಅರಸ ಸಿಕ್ಕಿದನೆಂದು | ಮನದಲಿ | ಹರುಷಗೊಳ್ಳದಿರಿಂದು ||
ಪರಿಕಿಸಿ ನೀ ನೋಡರೆಗಳಿಗೆಯೊಳ್ ಮುರ | ಹರ ಬರುವಬ್ಬರವನು ನರ ಸಹಿತಲೆ || ೧೧೧ ||

ರಣದಲಿ ಸಿಕ್ಕಿಹನ | ಕೊಲ್ಲುವು | ದೇನಿದು ದೊಡ್ಡ ಘನ ||
ಗುಣವೇ ಕ್ಷತ್ರಿಯಕುಲದಲಿ ಜನಿಸಿದ | ಜನಪರು ನಿಲುವರೆ ಅನುವರಮದದಲಿ || ೧೧೨ ||

ಕರದಲಿ ಧನುವಿಲ್ಲ | ಮತ್ತವ | ಗೇರ್ವರೆ ರಥವಿಲ್ಲ ||
ಹೊರುವಳೆ ಧರಣಿ ದುರ್ನೀತರನೀಗನು | ಕರಿಸುವಳೇ ಜಯಸಿರಿ ನೀ ಲಾಲಿಸು || ೧೧೩ ||

**ಭಾಮಿನಿ**

ಧರಣಿಪತಿ ಕೇಳ್ ಮಾದ್ರಭೂಮಿಪ |
ನರುಹೆ ಕಂಗಳೊಳುರಿಯನುಗುಳುತ |
ಮೆರೆವ ದಕ್ಷಧ್ವಂಸನಂದದಿ ನುಡಿದ ಧರ್ಮಜಗೆ ||
ಕುರಿಯೆ ಕೇಳಿಂದೆನ್ನ ಜನನಿಯೊ |
ಳೊರೆದ ಮಾತಿಗೆ ನಿನ್ನನುಳುಹಿದೆ |
ಹೊರತು ನಡೆ ಹೋಗೆನುತಲೆಡಗಾಲ್ತುದಿಯೊಳವಗೊದೆದು || ೧೧೪ ||

**ಕಂದ**

ತಿರುಗಿದನಿತ್ತಲು ರವಿಜಂ |
ವರಧರ್ಮಕುಮಾರನಂದವನ್ನೀಕ್ಷಿಸುತಂ ||
ಭರದಿಂ ಮುತ್ತೈತಹನೆಂ |
ಬುರು ಭೀತಿಗಳಿಂದ ಪೊಕ್ಕನಾ ನಿಜ ಬಲವಂ || ೧೧೫ ||

**ರಾಗ ಕಾಂಭೋಜಿ ಝಂಪೆತಾಳ**

ಆ ಸಮಯದೊಳಗಿತ್ತ ವಾಸವಾತ್ಮಜನು ಬಲು | ಕ್ಲೇಶಗೊಳುತೆಂದ ಹರಿಯೊಡನೆ ||
ಸೂಸುತಿದೆ ಕಣ್ಣೊಳುದಕಂಗಳುರಿ ಜಠರದೊಳು | ವಾಸವಾಗಿಹುದೇನ್ ನಿಮಿತ್ತ || ೧೧೬ ||

ಕರದ ಚಾಪವು ಭಾರವಾಗುತಿದೆಯೆನಗೀಗ | ತರುಣನಳಿದಂದಿನಂದದಲಿ ||
ಅರುಹಬೇಕೆನಗೀಗ ಧರ್ಮಜನ ವಾರತೆಯ | ಹರಣದಲಿ ಸುಖವೊ ದುಃಸ್ಥಿತಿಯೋ || ೧೧೭ ||

ನೀನರಿದಡುಸಿರೆನಲ್ಕಾದಾನವಧ್ವಂಸಿ | ಮಾನನಿಧಿ ಧರ್ಮಜಗೆ ರಣದಿ ||
ಭಾನುಸುತನಿಂದಾದ ಬವಣೆಯೆಲ್ಲವನು ಅನು | ಮಾನವಿಲ್ಲದೆ ಪೇಳ್ದ ಮುದದಿ || ೧೧೮ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಕೇಳಯ್ಯ ಪಾರ್ಥ ಕರ್ಣನ ಪ್ರತಾಪಗಳನು | ಸವ್ಯಸಾಚಿ || ಈಗ |
ಪೇಳುವಡಿದು ವೇಳೆಯಲ್ಲ ಮದಾಂಧನ | ಸವ್ಯಸಾಚಿ || ೧೦೯ ||

ಮರುತಸಂಭವ ಮುಖ್ಯರಾದ ವೀರರನೆಲ್ಲ | ಸವ್ಯಸಾಚಿ || ಧರೆ |
ಗುರುಳಿಸಿ ಯಮಜನನಡ್ಡೈಸಿ ಹಿಡಿದನು | ಸವ್ಯಸಾಚಿ || ೧೧೦ ||

ಕರದ ಬಿಲ್ಲನು ಮುರಿದಿಕ್ಕಿ ಸಾರಥಿಯನು | ಸವ್ಯಸಾಚಿ || ಶಿರ |
ವರಿದು ಕೆಡಹಿ ನೃಪನುರಕಸ್ತ್ರ ತಿವಿದನು | ಸವ್ಯಸಾಚಿ || ೧೧೧ ||

ಬಿಲ್ಲಕೋಟಿಯೊಳೆದೆಗುತ್ತಿ ಮೂದಲಿಸಿದ | ಸವ್ಯಸಾಚಿ || ಕರೆ |
ಹುಲ್ಲು ಭೀಮಾರ್ಜುನರೆಲ್ಲಿ ತೋರೆನುತಲೆ | ಸವ್ಯಸಾಚಿ || ೧೧೨ ||

ಎಡಗಾಲ ತುದಿಯಿಂದಲೊದೆದು ಕೆಡಹಿ ಮತ್ತೆ | ಸವ್ಯಸಾಚಿ || ಬಲು |
ಸಡಗರದಿಂದಲೆ ತನಗಿದಿರಿಲ್ಲೆಂದ | ಸವ್ಯಸಾಚಿ || ೧೧೩ ||

**ಭಾಮಿನಿ**

ಕೇಳುತಲೆ ಕಲಿ ಪಾರ್ಥ ಕಲ್ಪದ |
ಕಾಲಭೈರವನಂತೆ ಗರ್ಜಿಸೆ |
ಮೇಲು ಜಗ ನಡುಗಿದುದು ಕರ್ಣಗೆ ಕಡೆಯ ದಿನವೆನುತ ||
ಪಾಳೆಯಕೆ ತಿರುಗಿದನು ಮುರಹರ |
ನಾಳು ಸಹಿತರ್ಜುನನು ಧರಣೀ |
ಪಾಲನೇಕಾಂಗದಲಿ ಚಾಚಿದನಂದು ಮಣಿಶಿರವ || ೧೧೪ ||

ನೊಂದೆಲಾ ನರನಾಥ ವಿಧಿಯೇ |
ನಿಂದು ಮುನಿದನೊ ನಿನಗೆನುತ್ತರ |
ವಿಂದನಾಭನು ಪೂರ್ಣ ದೃಷ್ಟಿಗಳಿಂದ ಧರ್ಮಜನ ||
ಚಂದದಲಿ ಮೈದಡವಿ ಮನ್ನಿಸೆ |
ಸಂದಿಸಿದ ನಯನಾಂಬುವನು ಮಿಗೆ |
ಕಂದೆರೆದು ನೋಡಿದನು ಭೂಪತಿ ಕೃಷ್ಣಫಲುಗುಣರ || ೧೧೫ ||

**ರಾಗ ಸಾವೇರಿ ಆದಿತಾಳ**

ಹರಿಯೇ ನೀ ಲಾಲಿಸಯ್ಯ | ನಿನ್ನಯ ಪಾದ | ದರುಶನವೊಂದೆ ಸಾಕಯ್ಯ ||
ಅರಸು ಕೌರವನೊಳಿನ್ನು | ಸಂಗರ ಬೇಡ | ಕರುಣವೊಂದಿರೆ ಸಾಕಿನ್ನು || ೧೧೬ ||

ಧರಣಿಗೋಸುಗ ನೃಪರನ್ನು | ಸದೆದು ವ್ಯರ್ಥ | ಗುರುದ್ರೋಣ ಭೀಷ್ಮರನ್ನು |
ಸೆರೆಗೊಡ್ಡಿ ಬೇಡಿಗೊಂಬೆನು | ಇನ್ನಾದರು ನೀ | ಧುರಕೆ ಸಂಧಿಯ ಮಾಡಿನ್ನು || ೧೧೭ ||

ತರಣಿಜಾತನ ಧುರದಿ | ಗೆಲ್ಲುವರಾರೈ | ಸುರನರಲೋಕ ಮಧ್ಯದಿ ||
ಹರನಿಗಾದರು ತೀರದು | ಗೆಲುವಡೆಮ್ಮ | ನರಭೀಮರಿಂದಾಗದು || ೧೧೮ ||

ಬೇಡವೆನಗೆ ದೊರೆತನ | ಮುರಹರ ಕೇಳು | ಕಾಡೊಳಿರುವುದೇ ಘನ ||
ಬಾಡಿದರಳಿನಂದದಿ | ಧರ್ಮಜನಿರೆ | ನೋಡಿ ಅರ್ಜುನ ಮುದದಿ || ೧೧೯ ||

**ಭಾಮಿನಿ**

ಅಳಲಲೇತಕ್ಕರಸ ನಿನ್ನನು |
ಬಲುಮೆಯಿಂ ಭಂಗಿಸಿದ ಖೂಳನ |
ನಳಿನ ಸಖನಸ್ತಮಿಸುವುದರೊಳಗವನ ಮಸ್ತಕವ ||
ಇಳುಹದಿರೆ ನಿನ್ನೊಡನೆ ಜನಿಸಿದ |
ಅನುಜನೇನೆನುತಲುಗೆ ಮೀಸೆಯ |
ತಿಳಿದು ಧರ್ಮಕುಮಾರನೆಂದನು ಇಂದ್ರನಂದನಗೆ || ೧೨೦ ||

**ರಾಗ ಆನಂದಭೈರವಿ ಏಕತಾಳ**

ಬಿಡು ಬಿಡಿಂಥಾ ಮಾತೇಕೆಂಬೆ | ನುಡಿವರೆ ಬಾಯಿಬಡಕರಂತೆ |
ಆಡ್ವರೆ | ಅರಿಗಳ್ | ನೋಡ್ವರೆ ||
ಸುಡಲಿನ್ನು ದೊರೆತನವನ್ನು | ಬಡವರಂತೆಯಿರೆ ಸಾಕಿನ್ನು |
ಎಂದನು | ಬಲು | ನೊಂದನು || ೧೨೧ ||

ಧರಣಿಯೊಳಗೆ ಕರ್ಣ ನೋರ್ವ | ಹೊರತು ಬೇರಿನ್ನುಂಟೆ ಭಟರು |
ನೋಡಯ್ಯ | ಬಡಿವಾರ | ಬೇಡಯ್ಯ ||
ಶರವ ಪಿಡಿದು ನಿಲ್ಲಲವನ | ಸರಿಸದಿ ನಿಲ್ಲುವರನ್ನು |
ಕಾಣೆನು | ಎಣೆ | ಗಾಣೆನು || ೧೨೨ ||

ಅನುಜರು ನೀವ್ ನಾಲ್ವರೆನ್ನ | ತನುವಿಗೆ ಹಿತಕಾರಿಗಳೆಂದು |
ಮಾಡಿದೆ | ಹರುಷ | ಗೂಡಿದೆ |
ದನುಜಹರನೆ ಬಲ್ಲನೆನ್ನ | ಮನದೊಳಿರ್ದ ಪರಿಯನೆಲ್ಲ |
ಪೇಳ್ವೆನು | ಶೋಕ | ತಾಳ್ವೆನು || ೧೨೩ ||

ನರನೆ ಕೇಳು ನಿನ್ನೊಳಿನಿತು | ಹರಿವುದಲ್ಲ ಮುಂದಾದಕ್ಕೆ |
ಮಾಡ್ವೆನು | ಅಳಿ | ಹೊಡ್ವೆನು |

ಕರದೊಳಿರುವ ಬಿಲ್ಲನೀಗ | ನರಕವೈರಿಗಿತ್ತು ಮತ್ತೆ |
ಕಾಯಯ್ಯ | ಹಯದ | ವಾಘೆಯ || ೧೩೪ ||

**ಭಾಮಿನಿ**

ಎಂದು ಧರ್ಮಜ ನುಡಿಯೆ ಸುರಪತಿ |
ನಂದನನು ಕಿಡಿಯುಗುಳುತಾಕ್ಷಣ |
ಚಂದವೇ ನೀ ನುಡಿದ ಮಾತುಗಳೆನಗೆ ಅಗ್ರಜನೆ ||
ಕೊಂದು ಕಳೆವೆನು ಮೊದಲಿಗೀತನ |
ನೆಂದು ಸುರಗಿಯನುಗಿದು ಬರಲಾ |
ಇಂದು ಮುಖಿ ದ್ರುಪದಜೆಯು ಖಡುಗಕೆ ತನುವನೊಡ್ಡಿದಳು || ೧೩೫ ||

**ರಾಗ ಮಾರವಿ ಏಕತಾಳ**

ಕೊಲುವರೆ ಕೊಲು ನಮ್ಮೀರ್ವರನೆನುತಲೆ | ಲಲನೆಯು ಶೋಕಿಸುತ |
ಬಲಹೀನಗೆ ಬೆಂಬಲವಾಗಿ ನುಡಿದಳು | ಬಳಿಕಾ ಪಾರ್ಥನೊಳು || ೧೩೬ ||

**ವೃತ್ತ**

ಎರೆಯ ಕೇಳೆನ್ನ ಮಾತಾ ಏತಕೀ ಕ್ರೋಧವಿಂಥಾ |
ಮರುಳತನ ಬೇಡವಿನ್ನೂ ಧರಿಸಿದೈ ಪಾಪವನ್ನೂ ||
ಪರಿವುದಕೆ ಯತ್ನವಿಲ್ಲಾ ಪಾರ್ವತೀರಮಣ ಬಲ್ಲಾ |
ಮರೆದು ಕಳೆ ಕಲ್ಮಷವನೂ ಮನ್ನಿಸೈ ಕಾಂತ ನೀನೂ || ೧೩೭ ||

**ರಾಗ ಶಂಕರಾಭರಣ ಏಕತಾಳ**

ಜಡಜನೇತ್ರೆ ಕೇಳೆ ಎನ್ನ | ನುಡಿಯ ನೀನರಿಯೆಯೇನೆ |
ಬಿಡು ಬಿಡಿವನಗೊಡವೆ ನಿನಗೆ | ಬೇಡವೇ ಕಾಂತೆ || ೧೩೮ ||

ಬಿಡುವಳಲ್ಲ ಕಾಂತ ನಾನು | ಬಿಡುವುದಾದಡರಸನೊಡನೆ |
ಬಿಡುವೆ ಪ್ರಾಣ ಹೊರತು ಬೇರೆ | ಮಾತಿಲ್ಲ ಕಾಂತ || ೧೩೯ ||

ಅರಸನೆನ್ನ ಕರದ ಬಿಲ್ಲ | ನರಕವೈರಿಗಿತ್ತು ರಥವ |
ಹರಿಸೆಂದೆನ್ನ ಜರೆವುದಿದು | ಸರಿಯೇನೆ ಕಾಂತೆ || ೧೪೦ ||

ಸರಿಯಿದಲ್ಲವೆಂಬಡೆ ಶ್ರೀ | ಹರಿಯೆ ಬಲ್ಲ ನೋಡದಕ್ಕೆ |
ಅರಿವೆ ಕೊರಳನೆಂಬುದಿದು | ಸರಿಯೇನೋ ಕಾಂತ || ೧೪೧ ||

**ವಾರ್ಧಕ**

ಅರವಿಂದಮುಖಿ ಮನದ ತಾಪದಿಂ ಕೋಪದಿಂ |
ದುರೆ ನೊಂದು ಬೆಂಡಾಗಿ ಕರಗುತಂ ಮರುಗುತಂ |
ಕುರುವರನ ಸಭೆಯೊಳಹ ಕೃತ್ಯಮಂ ಸತ್ಯಮಂ ಕರಿಸುವರೆ ನೀನಜ್ಞನೆ ||
ಅರಸ ಬಿಡು ದಮ್ಮಯ್ಯ ವರ್ಮಮಂ ಶರ್ಮಮಂ |
ಮರೆತುಬಿಡು ತರವಲ್ಲ ಹತ್ಯಮಂ ಸತ್ಯಮಂ |
ತೊರೆಯಬೇಡೆಂದಬಲೆ ನಯದಿಂದ ಭಯದಿಂದಲರುಹುತಿರಲಾ ಕ್ಷಣದೊಳು || ೧೪೧ ||

**ಭಾಮಿನಿ**

ಮುರಹರನು ನಡೆತಂದು ಪಾರ್ಥನ |
ಕರದ ಖಡ್ಗವ ಪಿಡಿದು ಪೇಳಿದ |
ಪರಿಯಿದೇನೈ ಭಾವ ನಿನ್ನಯ ಮನದ ಸಂಕಲ್ಪ ||
ಕುರುನೃಪಾಲನ ಸಭೆಯೊಳಾದುದ |
ಪರಿಯ ಮರೆದೆಯ ಪಾಪಿ ನೀನಾ |
ಧರಣಿಪತಿ ಧರ್ಮಜನು ಆರೆಂದರಿಯದಾದೆಯಲಾ || ೧೪೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪಿಡಿಯದಿರು ಮುರವೈರಿ ಪಾರ್ಥನ | ಖಡುಗಕಿದೆ ತನ್ನೊಡಲು ಬೇರಿ |
ನ್ನುಡಿಯಲೇತಕೆ ಎರೆದು ಧಾರೆಯ | ಕೊಡುವೆ ತನುವ || ೧೪೪ ||

ತೊಡಗಿದಾತನ ರಾಜಕಾರ್ಯವ | ಕೆಡಿಸದಿರು ನರಕಾರಿ ಪಾರ್ಥನ |
ನುಡಿಗಳವು ಪುಸಿಯಾಗಲಾರವು | ಜಡಜನೇತ್ರ || ೧೪೫ ||

ನರಕರಿಪು ಕೇಳೆನ್ನ ಕರದೊಳ | ಗಿರುವ ಗಾಂಡೀವವನು ನಿನ್ನೊಳ |
ಗಿರಿಸಿ ಸಾರಥ್ಯವನು ಮಾಡೆಂ | ದೊರೆದನಿನ್ನು  || ೧೪೬ ||

ಆರದನ್ಯಾಯವು ವಿಚಾರಿಸ | ಲಾರದನು ನೀ ಬಲ್ಲೆ ನಮ್ಮಲಿ |
ತೋರಿದಡೆ ತವ ಪಾದಸೇವೆಗೆ | ದೂರನಹೆನು || ೧೪೭ ||

ದೇವ ಕೇಳೈ ಪೂರ್ವದಲಿ ಸುರ | ಪಾಲಕನು ಎನಗಿತ್ತ ವರಗಳ |
ದೇವಧನುವನು ಕ್ರೋಧದಿಂದಲಿ | ಆವ ತೆರದಿ || ೧೪೮ ||

ಭಾವಿಸದೆ ಪರಗೀಯಲೆಂದವ | ನಾವನೇ ಹಗೆಯೆಂಬ ನುಡಿಯನು |
ಭೂವರೇಣ್ಯನು ನುಡಿದ ಮೇಲೆನ | ಗಾವ ಭಯವು || ೧೪೯ ||

**ರಾಗ ಮಾರವಿ ಏಕತಾಳ**

ಕೊಲುವೆನು ಮೊದಲಲಿ ಅಣ್ಣ ದುರಾತ್ಮನ | ಬಳಿಕಾ ಕೌರವನ ||
ತಲೆಯನು ತರಿಯುವೆನೆನ್ನುತಲಾ ಕ್ಷಣ | ಸೆಳೆದನು ಖಡುಗವನು || ೧೫೦ ||

ಚಳಕದಿ ಝಳಪಿಸೆ ನೋಡುತ ಕೃಷ್ಣನು | ಝಳಪಿಸುವಾಯುಧವ |
ಕೆಲದೊಳಗಿಡು ತಲೆ ಬಿಡಿಸಲು ಯಮಸುತ | ಅಳುಕದೆ ಹರಿಗೆಂದ || ೧೫೧ ||

**ಭಾಮಿನಿ**

ಆಸೆ ದೇಹದೊಳಿಲ್ಲ ರಾಜ್ಯದ |
ಪಾಶ ಮೊದಲಿನಿತಿಲ್ಲ ಪಾರ್ಥನ |
ಭಾಷೆಸಂದರೆ ಸಾಕು ಬಿಡು ಬಿಡು ಕೃಷ್ಣ ಫಲುಗುಣನ ||
ವಾಸುದೇವನು ನುಡಿದನೀ ಭೂ |
ಮೀಶನನು ನೀ ಕೊಲ್ಲಲಯ್ದುಲು |
ನಾಶವಾದನು ನೃಪತಿ ಫಲುಗುಣಗೆಲಿದೆ ಭಾಷೆಗಳ || ೧೫೨ ||

**ಕಂದ**

ಮಾನವರೊಳಗಿಂದೀ ಯಮ |
ಸೂನುವಿನಿಂದಧಿಕರ ಕಾಣೆನೀ ಧಾರಿಣಿಯೊಳ್ ||
ನೀನನುಮಾನಿಸದಲೆ ಅವ |
ಮಾನವ ಮಾಡಿದರಿಂ ಬಂತು ನಿದ್ರೋಹತ್ವಂ || ೧೫೩ ||

**ರಾಗ ಮಧುಮಾಧವಿ ಆದಿತಾಳ**

ದಾರಿಯೇನಿದಕಿನ್ನು | ಮುರಹರ | ಪಾರಗಾಣೆನು ನಾನು || ಪ ||

ಅಣ್ಣ ಧರ್ಮಾತ್ಮನೊಳು | ಪಾಪವ | ಹಣ್ಣಿದೆ ಕ್ರೋಧದೊಳು ||
ಪುಣ್ಯಮೂರುತಿ ನೀನು | ಪ್ರಾಯಶ್ಚಿತ್ತ | ವನ್ನು ತೋರೆನಗಿನ್ನು || ೧೫೪ ||

ತನ್ನಾತ್ಮ ಸ್ತುತಿಗಳನು | ತಾನೇ | ವರ್ಣಿಸಿಕೊಂಡವನು |
ನಿರ್ಣಯದಲಿ ತನುವ | ಹೋಗಾ | ಡಿನ್ನಿದೊ ನಿನ್ನಘವ || ೧೫೫ ||

ಹಿಂದೆ ಶ್ರೀ ರಾಘವನು | ಕ್ರೋಧದಿ | ಸಿಂಧುವ ಕೊಲ್ಲುವೆನು ||
ಎಂದು ಶಾರ್ಙ್ಗವ ಪಿಡಿದು | ನೆಗಹಲಿ | ಕಂದವ ತಾ ತಿಳಿದು || ೧೫೬ ||

ವಂದಿಸಿದನು ಪದಕೆ | ಭಕ್ತಿಯೊ | ಳಿಂದಿನಿತೇಕಿದಕೆ ||
ಚಂದದೊಳಭಯವನು | ಕೊಡಲರ | ವಿಂದನಾಭನು ತಾನು || ೧೫೭ ||

ಕೊಂದಾ ವೈರಿಯನು | ಸಲಹಿದ | ಚಂದದಿ ರಾಘವನು |
ಇಂದು ನಿನ್ನಗ್ರಜನ | ಅರಿಯನು | ಸಂಧಿಸಿ ಬೇಗವನ || ೧೫೮ ||

ಕೊಂದು ಯಮಾತ್ಮಜನ | ಪಾದಕೆ | ವಂದಿಸಿದರೆ ನಿನ್ನ ||
ಹೊಂದಿದ ಪಾಪಗಳು | ಹರಿವುದು | ಎಂದನು ಕರುಣಾಳು || ೧೫೯ ||

**ವಾರ್ಧಕ**

ಮುರಹರನ ನುಡಿ ಕೇಳಿ ಫಲುಗುಣಂ ಬಳಿಕ ತಾ |
ನರಸುಹಂತಿಯ ಗೆಲಿದು ದ್ರುಪದಾತ್ಮಜೆಯ ತಂದೆ |
ಹರನೊಡನೆ ಕಾದಿ ಶರ ಪಾಶುಪತಮಂ ಪಡೆದೆ ಸುರರ ದುರ್ಗವನೇರಿದೆ ||
ದುರುಳ ರಕ್ಕಸರ ಬಡೆದೊರಸಿ ಮೂರ್ಕೋಟಿಯಂ |
ಮುರಿದು ಕೌರವನುಗ್ರಮಂ ನಿಲಿಸಿ ಗೋವುಗಳ |
ತಿರುಗಿ ಮತ್ಸ್ಯೇಶ್ವರನಿಗಿತ್ತು ಮಿಗೆ ಸರಳಮಂಚದಿ ಮಲಗಿಸಿದೆ ಭೀಷ್ಮನ || ೧೬೦ ||

**ಕಂದ**

ಒರಗಿಸಿ ಭಗದತ್ತನನುಂ |
ಶಿರವರಿದಾ ಸುಪ್ರತೀಕ ಗಜವನ್ನಾಗಳ್ ||
ಧುರದೊಳ್ ದ್ರೋಣನ ಗೆಲಿದೆಂ |
ದುರು ಶೌರ್ಯದೊಳೆಂದ ಧರ್ಮಜನಿದರೊಳ್ ಪಾರ್ಥಂ || ೧೬೧ ||

**ದ್ವಿಪದಿ**

ಅರಸ ಕೇಳಿತ್ತ ಧರ್ಮಜ ನುಡಿದ ನರಗೆ | ಹರುಷದಿಂದೀ ರಾಜ್ಯವಾಳು ಸುಖದೊಳಗೆ || ೧೬೨ ||
ಎನಗೆ ವನವೇ ಸಾಕು ಎಂದು ಯಮಸೂನು | ವಿನಯದಿಂ ತಿರುಗುತಿರಲನಿಲಸುತ ತಾನು || ೧೬೩ ||
ಮಡದಿಯರಸರ ಬೆನ್ನ ಬಿಡದೆ ಮಾದ್ರೇಯ | ರೊಡನೆ ನಡೆದುದು ಸಕಲ ಸೇನೆ ಸಮುದಾಯ || ೧೬೪ ||
ಈ ಪರಿಯ ಕಾಣುತರ್ಜುನ ಭೀತಿಯಿಂದ | ಭೂಪನಂಘ್ರಿಯೊಳು ತಲೆವಾಗುತಿಂತೆಂದ || ೧೬೫ ||

**ಭಾಮಿನಿ**

ಜನಪ ಕೇಳೈ ಗಗನದಗ್ರಕೆ |
ದಿನಪನಿಲ್ಲದ ಪರಿಯೊಳಿರೆ ಭೂ |
ವನಿತೆಗರಸಿನ್ನುಂಟೆ ಬೇರಿನ್ನೀ ಧರಿತ್ರಿಯಲಿ ||
ಘನ ದುರಿತ ದುರ್ಗುಣನು ದುರಹಂ |
ಕಾರಿ ತಾನೆಲೆ ದೇವ ನೀನೇ |
ಘನ ಕೃಪಾಸಾಗರನು ತನ್ನಪರಾಧ ಕ್ಷಮಿಸೆಂದ || ೧೬೬ ||

**ಕಂದ**

ಎರಗಿದ ಸಹಜನ ಕಂಡಾ |
ದರಿಸದೆ ನೃಪನಿರಲೀಕ್ಷಿಸುತಾಗ ರಮೇಶಂ ||
ಧರಣಿಪ ನಿನಗೀತನೊಳುಂ |
ಪರಿಭೇದಗಳೇನೆನಲವನದನಾಲಿಸುತಂ || ೧೬೭ ||

**ರಾಗ ಕಾಂಭೋಜಿ ಝಂಪೆತಾಳ**

ಮುರಹರನ ತಂತ್ರದಿಂದೆತ್ತಿ ತಕ್ಕೈಸುತ್ತ | ಶಿರವನಾಘ್ರಾಣಿಸುತ ನರನ |
ಹರುಷದಿಂ ಕಣ್ಣಣಿಯಲೀಕ್ಷಿಸುತಲಂದು ತಾ | ಕರದಿ ತಡವರಿಸಿದನು ತನುವ || ೧೬೮ ||

ಅರಿಯ ಶರಗಾಯವನು ಕಂಡು ಮರುಗುತ ಮನದಿ | ಮರೆತನಾ ಕ್ಷಣ ತನ್ನ ನೋವ ||
ತರುಣ ನಿನ್ನನು ಧುರದಿ ಬಳಲಿಸಿದರಾರಕಟ | ತರಣಿತನಯನನಿಂದು ರಣದಿ || ೧೬೯ ||

ಶಿರವನಿಳುಹುವೆನೆಂದ ಭರವಸವದೇನು ನೀ | ನರಿಯದವನಂತೆ ಆಡುವರೆ ||
ಸಿರಿಯರಸನೇಂ ಗೆಯ್ವನೆಂದು ಮರುಗಲ್ಕಾಗ | ನರನು ಕರಗಳ ಮುಗಿಯುತೆಂದ || ೧೭೦ ||

**ರಾಗ ಕೇದಾರಗೌಳ ಅಷ್ಟತಾಳ**

ಅರಿವಧೆಗೆನಗಪ್ಪಣೆಯನೀಯಬೇಕೆಂದು | ಕರವ ಮುಗಿದ ಪಾರ್ಥನು ||
ಶಿರವ ಚೆಂಡಾಡಿ ಬಂದೆರಗುವೆ ಪಾದಕೆ | ತರಣಿಯಸ್ತಮಯಕಾನು || ೧೭೧ ||

ಇನನಸ್ತಮಯಕೊಂದೇ ಜಾವವು ಉಳಿಯಿತು | ಅನುಜ ನೀನೆಂಬುದೇನು ||
ಚಿನುಮಯಾತ್ಮಕ ಬಲ್ಲನೆಂದು ಕಂಬನಿದುಂಬಿ | ಮನದಿ ಚಿಂತಿಸುತೆಂದನು || ೧೭೨ ||

ಹಿಂದೆ ಸೈಂಧವನ ಕೊಲ್ಲುವೆನೆಂದು ನುಡಿದುದ | ಕಂದ ನಮ್ಮೊಳು ಪ್ರೇಮದಿ ||
ಮಂದರಧರನೊಂದು ಯತ್ನ ಗೆಯ್ದುದರಿಂದ | ಸಂದಿತಂದಿನ ಭಾಷೆಯು || ೧೭೩ ||

ಇಂದೊಂದು ಜಾವವದುಳಿಯಿತು ಕರ್ಣನ | ಕೊಂದಪೆನೆಂದುವನು ||
ನಂದನಂದನ ನೀನೆ ಕಾಯಬೇಕೆನುತವ | ಗೊಂದಿಸಿದನು ಪದಕೆ || ೧೭೪ ||

**ಭಾಮಿನಿ**

ಕೇಳು ಧರಣೀಪಾಲ ಪಾರ್ಥನು |
ಪೇಳಿದಾ ನುಡಿಯೆಮ್ಮ ನುಡಿಯೆಂ |
ದಾಲಿಸುವುದೆಂದೆನುತ ನುಡಿದನು ಕೃಷ್ಣ ಧರ್ಮಜಗೆ ||
ಲೀಲೆಯಲಿ ಪಿಡಿದೆತ್ತಿ ಲಕ್ಷ್ಮೀ |
ಬಾಲಿಕೆಯನಪ್ಪುವ ಸುಕೋಮಲ |
ತೋಳಿನಲಿ ಬಿಗಿದಪ್ಪಿ ಸಂತೈಸಿದನು ಭೂಪತಿಯ || ೧೭೫ ||

**ವಾರ್ಧಕ**

ಅರಸ ಜನಮೇಜಯನೆ ಲಾಲಿಸೈ ಮುಂಗಥೆಯ |
ನೊರೆವೆ ಕೇಳಿನ್ನು ಮುರಹರ ಪಾರ್ಥರೊಂದಾಗಿ |
ಮೆರೆವ ಮಣಿಮಯ ರಥವನೇರುತಿರಲಾಗ ವರದೇವದುಂದುಭಿ ಮೊಳಗಲು ||
ಧರಣಿಯೊಳಗುಳ್ಳ ಬುಧಜನರು ವೇದೋಕ್ತದಿಂ |
ಹರಸಿ ಮಂತ್ರಾಕ್ಷತೆಯನಿತ್ತು ತೆರಳಲ್ಕಾಗ |
ತರುಣಿ ದ್ರೌಪದಿ ಬಂದು ಧುರವ ಜಯಿಸೆಂದೆನುತ ಪಣೆಗೆ ತಿಲಕವನಿಟ್ಟಳು || ೧೭೫ ||

**ಕಂದ**

ಮತ್ತಾ ವನಜಾಂಬಕಿ ಮುದ |
ವೆತ್ತಾಗಳೆ ಪುರವರದೊಳಗಿರಲಾ ಕ್ಷಣಕಂ |
ಪೃಥ್ವಿಪ ಕೌರವನನುಜಂ |
ಹಸ್ತದಿ ಚಾಪವ ಧರಿಸುತಲಯ್ತಂದೆಂದಂ || ೧೭೬ ||

**ರಾಗ ಮಾರವಿ ಏಕತಾಳ**

ಅಣ್ಣ ಸುಯೋಧನ ಲಾಲಿಸು ನಿನ್ನಯ | ಪುಣ್ಯಫಲೋದಯವ |
ಬಣ್ಣಿಸುವವರ್ಯಾರು ಬಗುಳಿದ ಪಾರ್ಥನು | ಹೆಮ್ಮೆಯೊಳಗ್ರಜಗೆ || ೧೭೭ ||

ತರಣಿಯಸ್ತಮಿಪುದರೊಳಗಾ ಕರ್ಣನ | ಶಿರವ ಧರೆಗೆ ಕೆಡಹಿ ||
ಭರದಿ ಬಂದೆರಗುವೆನೆಂದೆಂಬ ಭಾಷೆಯ | ಪರಿಯನು ಕೇಳ್ದಿವೆಲೈ || ೧೭೮ ||

ಎಮಗುಪಕಾರಗಳಾಯಿತು ಪಾರ್ಥನು | ಭ್ರಮೆಯಿಂದಾಡಿದುದು |
ಸಮರದೊಳಾತಗೆ ಸಾಹಸದೋರುವೆ | ಕೊಡಿಸೆನಗಪ್ಪಣೆಯ || ೧೭೯ ||

ಮಾರಿಗೆ ಹಬ್ಬವ ಮಾಡುವೆ ಪಾಂಡವ | ವೀರರ ತಲೆಗಡಿದು ||
ಬೀರುವೆ ಶೋಣಿತವನು ಮರುತಾತ್ಮಜ | ವೀರಸುಪಾರ್ಥರನು || ೧೮೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದು ದುಶ್ಯಾಸನನು ಪೇಳಲಿ | ಕಂದು ಕೌರವನೃಪತಿಯನುಜಗೆ |
ಚಂದದಿಂದಾಭರಣವಿತ್ತಾ | ನಂದದಿಂದ || ೧೮೧ ||

ಕಡಗ ಸರಪಣಿ ಹಾರವನು ಮಿಗೆ | ತೊಡಿಸೆ ಸೀಸಕ ಕವಚವನು ಇ |
ತ್ತೊಡನೆ ಬೇಕಾದಸ್ತ್ರಸಂಕುಲ | ವಿತ್ತನಾಗ || ೧೮೨ ||

ಮತ್ತೆ ಹೊಂಬಟ್ಟಲಲಿ ವೀಳ್ಯವ | ನಿತ್ತು ಪೇಳಿದನನುಜನೊಡನೀ |
ಹೊತ್ತು ಕರ್ಣನ ಕಾದುಕೋ ರವಿ | ಯಸ್ತಮಯಕೆ || ೧೮೩ ||

ಒಂದು ಜಾವದ ಅವಧಿ ದಿನಕರ | ನಿಂದು ಕಾಯ್ದರೆ ಸಾಕು ಜಯ ನಮ |
ಗಿಂದು ದೊರೆವುದೆನುತ್ತ ನಡೆದನು | ಮಂದಿರಕ್ಕೆ || ೧೮೪ ||

**ಭಾಮಿನಿ**

ಧರಣಿಪತಿ ಕೇಳಾ ಸುಯೋಧನ |
ನರಸನತ್ತಲು ತೆರಳಲಾಗಳೆ |
ಧುರ ವಿಜಯ ದುಶ್ಯಾಸ ಪೊಕ್ಕನು ನರನ ಸೈನ್ಯವನು ||
ಅರಿಯ ಬರವನು ಕಾಣುತಾ ಮುರ |
ಹರನು ಪೇಳಿದ ನರನೊಳಾತಗೆ |
ಶರವ ತೊಡಬೇಡಿಂದು ಭೀಮನ ಭಾಷೆಗೆಡರಹುದು || ೧೮೫ ||

**ಕಂದ**

ಎಂದಾ ನುಡಿಯಂ ಕೇಳುತ |
ಸ್ಯಂದನದೊಳ್ ಗಾಂಡೀವವನಿಳುಹಲ್ ವಿಜಯಂ ||
ಬಂದಾ ಭೀಮಂ ನರಹರಿ |
ಯಂದದೊಳಾರ್ಭಟಿಸುತಂದು ತೋರ್ದರಿಬಲಕಂ || ೧೮೬ ||

**ರಾಗ ಪಂತುವರಾಳಿ ಮಟ್ಟೆತಾಳ**

ಅರಿಯ ಬರವನು | ಕಂಡು ಭೀಮನು ||
ಕರದಿ ಗದೆಯನು | ತಿರುಹುತೆಂದನು || ೧೮೭ ||

ತರುಣಿ ದ್ರುಪದೆಯ | ಮಾನ ಗೊಂಡೆಯ ||
ಉರವ ಬಗಿವೆನು | ಕರುಳನುಗಿವೆನು || ೧೮೮ ||

ಕರೆಸು ಜೂಜಿನ | ಕುಟಿಲಗಾರನ ||
ಧುರಕೆ ಬೇಗ ಬೆಂ | ಬಲಕೆ ಶೀಘ್ರದಿ || ೧೮೯ ||

ಬಾಯಬಡಕನೆ | ಬಲ್ಲೆ ನಿನ್ನನು ||
ಕಾಯಲಾಪರಾ | ನಾರ ಕಾಣೆನು || ೧೯೦ ||

ರಾಯ ಕೌರವ | ನನುಜನಾಗಿಹೆ ||
ಕಾಯಸತ್ತ್ವದಿ | ಭಟನು ನೀನಹೆ || ೧೯೧ ||

ಎನುತ ಬಾಣವ | ಹೂಡುತಿರಲದ ||
ಅನಕ ಭೀಮನು | ಕಡಿದು ಬಿಸುಟನು || ೧೯೧ ||

ಮನಕೆ ಹರುಷವ | ಮಾಡಿ ಕೌರವ ||
ಜನಪನನುಜನು | ಜಡಿದು ತಿವಿದನು || ೧೯೨ ||

**ರಾಗ ಶಂಕರಾಭರಣ ಮಟ್ಟೆತಾಳ**

ದಿಟ್ಟನಹುದೊ ಭಳಿರೆ ಭೀಮ ಎನುತ ಚಾಪವ |
ರಟ್ಟೆಯುರುಳುವಂತೆ ತೆಗೆದು ಬಿಟ್ಟನಸ್ತ್ರವ || ೧೯೪ ||

ಭಳಿರೆ ವೀರನಹೆ ಶಭಾಸು ಭಲೆ ನೃಪಾತ್ಮಜ |
ತಿಳಿದೆನೊಂದು ಗಳಿಗೆ ನಿಲ್ಲು ತೋರ್ಪೆ ಸಾಹಸ || ೧೯೫ ||

ಎನುತಲಾಗ ಭೀಮ ಗದೆಯನೆತ್ತಿ ಹೊಯ್ಯಲು |
ಕನಲಿ ಕಂಗೆಡುತ್ತಲಾಗ ಬಿದ್ದ ಭುವಿಯೊಳು || ೧೯೬ ||

ಅನಿತರೊಳಗೆ ನೃಪತಿಯನುಜನೆದ್ದು ಖತಿಯೊಳು |
ಜನಪನನುಜನುರವ ತಿವಿದು ಎಚ್ಚ ಭರದೊಳು || ೧೯೭ ||

ಎಚ್ಚ ಭರಕೆ ಭೀಮನೌಡುಗಚ್ಚುತಾಕ್ಷಣ |
ಕಿಚ್ಚಿನಂತೆ ಶರವನೆಚ್ಚನತಿ ವಿಚಕ್ಷಣ || ೧೯೮ ||

ಇಂತು ಭಟರ ಸಮರ ನಡೆದುದಿಲ್ಲಿ ತನಕಲಾ |
ಮುಂತೆ ನಡೆದ ಪರಿಯ ಕೇಳು ಪೇಳ್ವೆ ಭೂವರ || ೧೯೯ ||

**ಭಾಮಿನಿ**

ಪೊಡವಿಪತಿ ಕೇಳಾ ಸುಯೋಧನ |
ನನುಜ ದುಶ್ಯಾಸನನು ಗರ್ವದಿ |
ಹಿಡಿದು ದ್ರುಪದಾತ್ಮಜೆಯ ಮಾನವ ಕಳೆದ ದ್ರೋಹಗಳು ||
ಬಿಡುವುದೇ ಎಲೆ ನೃಪತಿ ಸುವ್ರತೆ |
ನುಡಿದ ನುಡಿ ಪುಸಿಯಹುದೆ ಕೇಳೈ |
ಕಡು ಮದಾಂಧನ ಹೆಡಕ ಹಿಡಿದಳು ಮೃತ್ಯುವಾ ಕ್ಷಣದಿ || ೨೦೦ ||

**ವಾರ್ಧಕ**

ಹರಿಧನಂಜಯರಿತ್ತ ಸಮರಮಂ ಕಾಣುತಿರೆ |
ಪರಿಯನುಂ ತಿಳಿದು ಸಹದೇವ ನಕುಲಾದಿಗಳ |

ನೆರವಿಯಂ ಧರ್ಮಜಂ ಪರಿಕಿಸಿದನಾಗ ಮರುತಾತ್ಮಜನ ಸಾಹಸವನು ||
ಹರನ ಕೋಪಾಟೋಪಮಂ ಕಂಡು ಹರುಷದಿಂ |
ಪಿರಿದು ಹೆಂಪುಳಿಯಾಗುತಡಿಗಡಿಗೆಯಿರಲಿತ್ತ |
ಕುರುಕುಲೇಶಂ ತನ್ನ ಮನದಿ ಭೀತಿಯ ತಳೆದು ಮರುಗಿ ಗೋಳಿಡುತಿರ್ದನು || ೨೦೧ ||

**ರಾಗ ಭೈರವಿ ಏಕತಾಳ**

ಅತ್ತಲು ದುಶ್ಯಾಸನನು | ಬಲು | ಶಕ್ತಿಯಿಂ ಕೊಂಡು ಶರವನು ||
ಎತ್ತುತ ಕರ್ಣಾಂತರಕೆ | ಬಿಡ | ಲತ್ತಲು ತೀರ್ಚಿದ ಕ್ಷಣಕೆ || ೨೦೨ ||

**ಭಾಮಿನಿಯರ್ಧ**

[ಅನಕ ಭೀಮನು ಮನದಿ ಯೋಚಿಸೆ | ಎಣಿಕೆ ತೊಂಭತ್ತೆಂಟು ಎನುತಲಿ |
ಘನ ಮದಾಂಧನ ಕರೆದು ನುಡಿದನು ಮನದ ಕೋಪದಲಿ ||]

**ರಾಗ ಸುರುಟಿ ಅಷ್ಟತಾಳ**

ಬಾರೋ ತಮ್ಮ ದುಶ್ಯಾಸ ನೀನೀಗ |  ತೋರಿಸೋ ನಿನ್ನ ಕೈಗುಣವನ್ನು ಬೇಗ || ೨೦೩ ||
ಅರಗಿನಾಲಯದೊಳು ಉರಿಯನು ಪ್ರಬಲಿಸಿ | ಪರೀಕ್ಷೆಯಿಂದಲಿ ನೋಡುವುದೀಗ || ೨೦೪ ||
ಸೀರೆಯ ಸುಲಿದ ದುರಾತ್ಮಕ ಎನ್ನಯ | ಮಾರಿಯ ಭವನವ ಸೇರಿಪೆನೀಗ || ೨೦೫ ||
ಈ ಕ್ಷಣದಲಿ ನಿನ್ನ ಕೊಂದು ಕಳೆವೆನೀಗ | ರಕ್ಷಿಸುವವರ್ ಯಾರು ಪೇಳು ನೀ ಬೇಗ || ೨೦೬ ||

**ರಾಗ ಭೈರವಿ ಏಕತಾಳ**

ಬತ್ತಳಿಕೆಯು ಬರಿದಾಯ್ತು | ಧೈರ್ಯದ  | ಹೊತ್ತುಗಳೆಲ್ಲವು ಹೋಯ್ತು ||
ಚಿತ್ತದಿ ರಣಭೀತಿಗಳು | ತೋ | ರುತ್ತಲೆ ಭೀಮ ರೋಷದೊಳು || ೨೦೭ ||

ಫಡ ಫಡ ಎನುತಾರ್ಭಟಿಸಿ | ಮುಂ | ಗಡೆಯಲಿ ಖಡ್ಗವ ಧರಿಸಿ ||
ಒಡೆವೆನು ಶಿರಗಳನೆನುತ | ಬಂ | ದೊಡನದರನು ಮುರಿದಿಡುತ || ೨೦೮ ||

ಹತ್ತಿತು ಉರಿ ಜಠರದಲಿ | ಹರ | ನಿತ್ತವರದ ಬಲುಮೆಯಲಿ ||
ಸುತ್ತಿತು ಹೊಗೆ ಹೊರೆ ಸೂಸಿ | ಬೆರ | ಸುತ್ತಲೆ ಹೋದನು ಸಹಸಿ || ೨೦೯ ||

ಉಗ್ಗಡದರಿಭಟನನ್ನು | ಧರೆ | ಜಗ್ಗುವ ತೆರದೊಳಗಿನ್ನು ||
ಬಗ್ಗಿಸುತೆಡಗಾಲಿಂದ | ಕೆಡೆ | ದುಗ್ಗಡದೊಳೇರ್ದೆಂದ || ೨೧೦ ||

ಕ್ಕಿಕ್ಕಿರಿಕಿರಿಕಿರಿಯೆನುತ | ಬಾಯೊ | ಳುಕ್ಕಿತು ಹೊಸ ಬಿಸಿ ರಕುತ ||
ಫಕ್ಕನೆ ಉರಕುಗುರೂರಿ | ಬಗಿ | ದಿಕ್ಕಲು ಖಳ ಬಲುಚೀರಿ || ೨೧೧ ||

**ಭಾಮಿನಿ**

ಉರವ ಬಗಿಯಲು ಕೌರವೇಂದ್ರನ |
ಅನುಜ ಕೂಗಿದ ಭರಕೆ ದಿಗ್ಗಜ|
ಜರಿದು ಬೀಳ್ವಂತಾಯ್ತು ಧರಣಿಪರೆರಡು ತಟ್ಟಿನಲಿ ||
ಇರಲಿದೇನುತ್ಪಾತ ಶಬ್ದಗ |
ಳೆನುತಲಾ ಯಮಜಾದ್ಯರಿರುತಿರೆ |
ತರಣಿಸುತ ಸೌಬಲ ಸುಶರ್ಮಾದಿಗಳು ಭೀತಿಯಲಿ || ೩೧೧ ||

**ಕಂದ**

ಇರಲಾ ಕ್ಷಣ ಭೀಮಂ ನೆರೆ |
ಕರಕುಡುತೆಗಳಿಂದಲೀಂಟಲಾ ಶೋಣಿತ ಮಂ ||
ಧರೆಯೊಳು ಪೊಸತಾದುದು ವರ |
ನರಹರಿ ಹಿರಣ್ಯಕಶಿಪರ ಸಂಗರಕಾಗಂ || ೩೧೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಿಕ್ಕಿದೆಯಲಾ ಸ್ವಾಮಿದ್ರೋಹಿಯೆ | ಸಿಕ್ಕಿದೆಯ ನೀ ನಮ್ಮ ಭವನಕೆ |
ಫಕ್ಕನನಲನನಿಟ್ಟ ದ್ರೋಹವು | ದಕ್ಕಿತೇನೈ || ೩೧೪ ||

ಸೊಕ್ಕಿನಲಿ ದ್ರೌಪದಿ ಮುಡಿಗೆ ಕೈ | ಯಿಕ್ಕಿಕೊಂಡೆಳೆದುಟ್ಟ ಸೀರೆಯ |
ಬಿಕ್ಕಿ ಬಿರಿದಾ ಪಾತಕಕೆ ಜಯ | ಸಿಕ್ಕಿತೇನೈ || ೩೧೫ ||

ಎಂದು ಮೂದಲಿಸುತ್ತಲಿರೆ ಬಳಿ | ಕಂಧನೃಪನಾತ್ಮಜನ ಕರೆಕರೆ |
ದೆಂದನಾ ಕಲಿ ಭೀಮ ಶೋಣಿತ | ದಂದ ನೋಡೈ || ೩೧೬ ||

ಅವನ ಬಿಡು ನೋಡಿತ್ತ ರವಿಸುತ | ಭುವನ ಮೂರರೊಳಿಲ್ಲ ನಿನ್ನೊಳು
ಬವರ ಕೊಡುವರ ಕಾಣೆ ಬಿಡಿಸೈ | ಅವನಿಪನನು || ೩೧೭ ||

ಇವನು ನಿಮ್ಮನು ಸಲಹಿದಾತನು | ಬವಣೆಯನು ನೀವ್ ಬಿಡಿಸಲೊಲ್ಲದೆ |
ಯುವತಿಯಂದದಿ ನೆಲವ ನೋಡ್ವಿರಿ | ಮೊಲೆಗಳುಂಟೇ || ೩೧೮ ||

ಗುರುಜ ಕೃಪ ಕೃತವರ್ಮ ಶಕುನಿಗ | ಳಿದರ ಸವಿಯನು ನೋಡಬನ್ನಿರಿ |
ಕುರುಕುಲೇಶನ ಹರಿಬಕೊದಗುವ | ಭಟರು ನೀವೈ || ೩೧೯ ||

**ಭಾಮಿನಿ**

ಎಲ್ಲಿ ನಿನ್ನನುಜಾತರಗ್ರಜ |
ರೆಲ್ಲಿ ನಿನ್ನಯ ಮನ್ನಣೆಯ ಭಟ |
ರೆಲ್ಲಿ ನಿನ್ನ ಮಹೇಂದ್ರಜಾಲದ ಕರ್ಣ ಶಕುನಿಗಳು ||

ಎಲ್ಲಿ ನಿನ್ನೊಲುಮೆಯ ಕುಮಂತ್ರಿಗ |
ಳೆಲ್ಲಿ ನಿನ್ನಯ ಬಲುಹಿನವರಿ |
ನ್ನೆಲ್ಲಿ ನಿನ್ನಾತುಮರ ಕರೆ ಸೆರೆ ಬಿಡಿಸಲಿನ್ನೆಂದ || ೩೧೦ ||

ಎಂದು ಮೂದಲಿಸುತ್ತಲವರನು | ಚಂದದಲಿ ಸುರಿಸುರಿದು ರಕುತವ |
ನಿಂದು ನೋಡುವುದೇಕೆ ಬಿಡಿಸೈ ಕೌರವೇಶ್ವರನೆ ||
ಅಂಧಕನಸುತನಿವನು ನಿನ್ನನು | ಹೊಂದಿದನುಜನು ಇವನ ರಕುತವ |
ನಿಂದು ಕುಡಿವರೆ ಬನ್ನಿ ತಾನಿಹೆನೆಂದನಾ ಭೀಮ || ೩೧೧ ||

**ಕಂದ**

ಎಂದಾ ಭೀಮನ ನುಡಿ ಕೇ |
ಳ್ದಂಧಕನೃಪನಣುಗ ಕೌರವೇಶ್ವರನಾಗಲ್ ||
ಮುಂದೀ ಕುರುವಂಶದ್ರುಮ |
ಕಿಂದಿವ ಪಗೆಯಾದನೆಂದು ಶೋಕಿಸುತಿರ್ದಂ || ೩೧೨ ||

**ರಾಗ ಮಾರವಿ ಏಕತಾಳ**

ಕುರುಸೈನ್ಯದ ನರಗುರಿಗಳಿರಾ ನಿ | ಮ್ಮರಸನ ಸೋದರನು ||
ಗರುಡನ ಬಾಯಿಗೆ ಭೋಜನನಾಗಿಹ | ಬಿಡಿಸಿರೊ ನಿಹಿತನನು || ೩೧೩ ||

ಸೀರೆಯ ಸುಲಿದ ದುರಾತ್ಮಕನೀತನು | ಮಾರಿಯ ಭವನವನು ||
ಸೇರಿದ ಕೌರವ ಜೀವಿಸಲೇಕೆ ಶ | ರೀರವ ಸುಡಲಿನ್ನು  || ೩೧೪ ||

ಗಜ ಬಹು ಸಿಂಹನ ವಶವಾದಂದದಿ | ಎನ್ನೊಳ್ ಸಿಕ್ಕಿದ ಭಟನು ||
ದಳಪತಿ ಶಕುನಿಗಳಿತ್ಯಾದಿ ಕಲಿಗ | ಳುಳುಹಿಸಿ ನೀವಿವನ  || ೩೧೫ ||

ಪರಮ ಶ್ರುತಿ ಸ್ಮೃತಿ ಶಾಸ್ತ್ರವಿಚಾರದ | ಗುರುಸುತ ಕೃಪರಿವನ ||
ಧುರದೊಳು ಕೊಟ್ಟು ನೀವು ಸುಮ್ಮನೆ ಕುಳಿ | ತಿರುವುದು ಸರಿಯೇನೈ || ೩೧೬ ||

ಎನುತೆಲ್ಲರ ಹಂಗಿಸೆಯಿವಗುತ್ತರ | ವೆನಲರಿಯದೆ ಭಟರು ||
ಮಿಡುಕುತಲಿರೆ ಮಾರುತಿ ನುಡಿದನು ತಾ | ನತಿ ಮನ ಕೋಪದೊಳು || ೩೧೭ ||

**ಭಾಮಿನಿ**

ದುರುಳರೀ ಕೌರವನ ಸಹಜನ |
ಸೆರೆಯ ಸಿಕ್ಕಿಸಿ ಸೊಬಗ ನೋಡುವ |
ನೆರೆ ನಪುಂಸಕರೊಡಲ ಸುಡು ಬಿಡಿ ಕೈದುಗಳನೆಂದ ||
ಮರಣ ಹೊರ ಹೊರಗಾಯ್ತುಲಾತನ |

ಹರಣವೆನ್ನಯ ಕೈಯೊಳಿದೆ ನರ |
ಗುರಿಗಳಿವರಿನ್ನ್ಯಾರು ನಿಮ್ಮನು ರಕ್ಷಿಸುವರೆಂದ ||೨೧೮||

**ರಾಗ ಕೇದಾರಗೌಳ ಅಷ್ಟತಾಳ**

ಗಂಡುಸಾದವರನ್ನು ಕಾಣೆನೀ ಸೈನ್ಯದಿ | ಲಂಡ ಸುಭಟರಿವರು ||
ಪುಂಡರೀಕಾಕ್ಷನ ಕಡೆಯಲಿ ಭಟರುಂಟೆ | ಎಂದನಾ ಕ್ಷಣ ಭೀಮನು || ೨೧೯ ||

ಮುರಹರ ಕೇಳು ಸಂಧಾನದಿ ನಿನ್ನಯ | ಕರವ ಬಿಗಿದ ಭಟನು |
ಕುರಿಯಂತೆ ಸಿಕ್ಕಿಕೊಂಡಿರುವ ನಾಯನು ಸತ್ತ್ವ | ವಿರೆ ಬಿಡಿಸುವುದೆಂದನು || ೨೨೦ ||

ಸಹದೇವ ನಕುಲ ಸಾತ್ಯಕಿ ಧೃಷ್ಟದ್ಯುಮ್ನರಿಂ | ದಹುದಲ್ಲ ಯಮಜನೊಳು ||
ಅಹುದು ಪರಾಕ್ರಮಿ ವಿಜಯ ನಿನ್ನೊಳು ಸತ್ತ್ವ | ಸಾಹಸವಿರಲು ತೋರು || ೨೨೧ ||

ಹಿಂದೊಂದು ಬಾರಿ ಖೇಚರನೊಳು ಸಿಲುಕಿದ | ನಂದು ಬಿಡಿಸಿದಾತನು ||
ಇಂದುನಾಚುವುದೇಕೆ ಕರದೊಳು ಬಳೆಯುಂಟೆ | ಎಂದನಾಕ್ಷಣ ಭೀಮನು || ೨೨೨ ||

**ರಾಗ ಮಾರವಿ ಏಕತಾಳ**

ಕೇಳುತ ಭೀಮನ | ನುಡಿಯನು ಪಾರ್ಥ ಕ | ರಾಳ ರೋಷದಿಕಿಡಿ |
ಯುಗುಳುತ ಕಂಗಳೊಳ್ | ಧಾಳಿಯ ಕೊಂಡು ಶ | ರಾಳಿಸಹಿತ ಬರೆ |
ಗೂಳೆಯ ತೆಗೆದಾ | ಭೂತಾಳಿಗಳದ || ನೇನನೆಂಬೆ || ೨೨೩ ||

ಅಸಮಸಾಹಸ ಕೇ | ಳಸುರ ದುಶ್ಯಾಸನ | ಬಿಸಿರಕುತವ ಕುಡಿ |
ದೆಸೆವ ಪರಾಕ್ರಮ | ಕುಸುರಿ ದರಿದನೆಂ | ದ್ದೊಸ ಕಣೆಯನು ಕೊಳ |
ಲಸುರಹರನು ಕಂ | ಡೆಂದನಾ ಕ್ಷಣದಿ || ಏನನೆಂಬೆ || ೨೨೪ ||

**ರಾಗ ಮಾರವಿ ಆದಿತಾಳ**

ಇಂಥ ಮಾತೇಕೆಂಬೆ ಪಾರ್ಥ | ಪಂಥವು ಯಾರೊಡನೆ ||
ಕಂತುಹರನು ಬಂದರಿವನ | ಮುಂತೆ ನಿಲುವನೆ || ೨೨೫ ||

ಸುರಲೋಕಕ್ಕೆ ಪೋಗಿ ಅಸುರ | ನಿವಾತಕವಚರನ್ನು ||
ಶಿರವನರಿದೆನೆಂಬ ಗರ್ವ | ಹರಿಯದಿವನೊಳಿನ್ನು || ೨೨೬ ||

ಹರನೊಳು ಸರಿಯಾಗಿ ಕಾದಿ | ಶರವ ಪಡೆದೆನೆಂಬ
ದುರಹಂಕಾರ ಬೇಡ ಭೀಮನ | ಪರಿಕಿಸಿ ನೋಡೆಂದ || ೨೨೭ ||

ಹರಿಯ ಮಾತಿಗಾಗಿ ನರನು | ಪೂರ್ಣ ದೃಷ್ಟಿಗಳಿಂದ ||
ಪರಿಕಿಸುತ್ತಲಾಗಾತನಿಗೆ | ಶರವನಿತ್ತವನೆಂದು || ೨೨೮ ||

ಹರ ಹರ ನಾನರಿಯದಿವನೊಳ್ | ಶರವ ಪಿಡಿದು ನಿಂದೆ ||
ತರಳನೆಂಬ ಭಾವವಿರಲು | ಕರುಣದೋರೋ ತಂದೆ || ೩೩೯ ||

**ಭಾಮಿನಿ**

ತನಗೆ ಪಾಶುಪತಾಸ್ತ್ರವನು ಮಗು |
ಳೊಲಿದು  ಕೊಟ್ಟ ಮಹಾನುಭಾವನು |
ಅನಘನೆಂದೇ ಭಕ್ತಿ ಭಾವದಿ ಪೊಗಳುತಿಂತೆಂದ ||
ಮನುಮಥಾಂತಕ ವಿಶ್ವತೋಮುಖ |
ತ್ರಿಣಯನ ಪುರಾರಾತಿ ಕರುಣಾ |
ವನಧಿ ಪಾಲಿಸು ಪಾರ್ವತೀವಲ್ಲಭ ನಮೋ ಎಂದ  || ೩೪೦ ||

ಅನಿಲಸಂಭವನಿತ್ತ ತನ್ನಯ |
ವನಿತೆಗೀ ಹದನೆಲ್ಲ ತಿಳುಹಿಸಿ |
ರಣಕೆ ಕರೆತಾರೆಂದು ಕಳುಹಿದ ಚರರನಾ ಕ್ಷಣಕೆ  || ೩೪೧ ||

**ಕಂದ**

ಮರುತಜನಪ್ಪಣೆಯಂ ತಾಂ |
ಶಿರದೊಳಗಾಂತಂತುಮಯ್ತುರುತ್ತಂದಾಗಳ್ ||
ತರುಣೀಮಣೀ ದ್ರುಪದಾತ್ಮಜೆ |
ಯಡಿಗಂ ಶಿರಬಾಗುತುಸಿರ್ದದನೇಪೇಳ್ವೆಂ || ೩೪೨ ||

**ರಾಗ ಸಾರಂಗ ಅಷ್ಟತಾಳ**

ತಾಯೆ ನೀ ಲಾಲಿಸವ್ವ | ನಿನ್ನೊಡನೊಂದೆ | ಕಾರ್ಯವ ಪೇಳ್ವೆನವ್ವ || ಪ ||

ವಾಯುಜನರುಹಿದನು | ದುಶ್ಯಾಸನ | ಕಾಯವ ಕೆಡಹಿದನು ||
ತೋಯಜಮುಖಿ ನಿನ್ನೊಳರುಹಿ ಬೇಗದಿ ಕರೆ | ತಾರೆಂದು ಕಳುಹಿದನು || ನಿಮ್ಮವನು || ೩೪೩ ||

ಹಿಂದೆ ಜೂಜಿನ ದಿನದಿ | ದುಶ್ಯಾಸನ | ನೆಂಬ ಖೂಳನು ಗರ್ವದಿ ||
ಮುಂದಲೆಯನು ಪಿಡಿದೆಳೆದು ಮೂದಲಿಸುತ್ತ | ಲಂದು ಸೀರೆಯ ಸುಲಿದು || ತಾನೊಲಿದು || ೩೪೪ ||

ಮದಮುಖತನದಿ  ನಿಮ್ಮ | ಮುಡಿಯ ಬಿಚ್ಚಿ | ಕೆಡಹಿದಾತನೊಳು ವರ್ಮ ||
ಅದರಿಂದಲಾತನ ಉದರ ರಕ್ತದೊಳದ್ದಿ ಮುಡಿಯಕಟ್ಟುವೆನೆಂದನು || ನಿಮ್ಮವನು || ೩೪೫ ||

ಎಂದ ಮಾತನು ಕೇಳುತಾ | ದ್ರೌಪದಿದೇವಿ | ಅಂದು ತೋಷವ ತಾಳುತ ||
ಹೊಂದಿಹೋದನೆ ಖೂಳ ಬರುವೆನಲ್ಲಿಗೆ ಈಗ | ಚಂದವಾಯಿತು ಎಂದಳು || ಮತ್ತವಳು || ೩೪೬ ||

ಹರುಷದಿ ದುಶ್ಯಾಸನ | ನೋಡುವೆನೆಂಬ | ತ್ವರಿತದಿ ಮರುತಜನ ||
ಅರಲಂಬನಾನೆಯೆಂಬಂದದಿ ಪೊರಟಳು | ತರುಣಿಯೈವರ ಕಾಂತೆಯು || ಸಿರಿವಂತೆಯು || ೩೪೭ ||

**ವಾರ್ಧಕ**

ನಡೆಗೆ ನಡುವಳುಕುತಂದಡಿಗಡಿಗೆ ನಿಲುಕುತಂ |
ಮುಡಿದಲರನಂದದಿಂ ಬಿಡುಮುಡಿಯ ಚಂದದಿಂ |
ತಡೆಯದರೆನೋಟದಿಂ ಕಿರುಬೆವರ ಕೂಟದಿಂ ಗಡಗಡನೆ ನಡೆವ ಭರಕೆ ||
ಕುಡಿಮೊಲೆಯು ಕುಣಿವುತಲಿ ನಡುವಳುಕಿ ದಣಿವುದಂ |
ನುಡಿಗೆ ಗಿಳಿವೃಂದದಿಂ ಜಡೆನಾಗಬಂಧದಿಂ |
ಉಡುಗಣಪ್ರಭೆಗಳಿಂ ಮೆರೆವ ಶಶಿ ಬಿಂಬದಿಂ ಪೊರಟಳಾನಂದದಿಂದ || ೩೪೮ ||

**ರಾಗ ದೇಶಿ ಅಷ್ಟತಾಳ**

ಮೆಲ್ಲಮೆಲ್ಲನೆ ಬರುತ ದ್ರೌಪದಿದೇವಿ |
ನಿಲ್ಲದಡಿಯಿಡುತಾಗ ಭಯದೊಳ | ಗಲ್ಲಿ ದೂರದೊಳೀಕ್ಷಿಸಿ || ೩೪೯ ||

ಏನಿದದ್ಭುತವಾಯ್ತು ಹಿರಣ್ಯಕ |
ದಾನವನ ಸಂಗರಕೆ ನೂರ್ಮಡಿ | ಕಾಣಲಿದು ಪೊಸತಾಯಿತು || ೩೫೦ |

ಅಮಮ ತನ್ನಯ ರಮಣ ಮಾರುತಿಯೊ |
ಕಮಲನೇತ್ರನೊ ಕಾಮವೈರಿಯೊ | ಸಮರವಿದ ನೋಡುತ್ತಲೆ || ೩೫೧ ||

ವಾತಸಂಭವನಹುದೊ ದುಶ್ಯಾಸನ |
ಘಾತಿಸೋ ರಣದೊಳಗೆ ರಣವಿ | ಖ್ಯಾತ ಭೀಮನ ನೋಡುತ || ೩೫೨ ||

**ಭಾಮಿನಿ**

ರಣದೊಳಗೆ ಪವಡಿಸಿದ ಹೆಣಗಳ |
ಬಣಬೆಯನು ಕಾಣುತ್ತ ದ್ರುಪದಜೆ |
ದಣಿದು ಹತ್ತಿಳಿಯುತ್ತ ಬಂದಳು ಭೀಮನಿದ್ದೆಡೆಗೆ ||
ಮಣಿದಳಂಗನೆಯಳನು ಮಾರುತಿ |
ಕಣುದಣಿಯಲೀಕ್ಷಿಸುತ ಮುದ್ದಿಸಿ |
ವನಜಲೋಚನೆಯಳನು ಕುಳ್ಳಿರಿಸಿದನು ತೊಡೆಯೊಳಗೆ || ೩೫೩ ||

**ರಾಗ ಘಂಟಾರವ ಆದಿತಾಳ**

ಲಲನೆ ಕೇಳೆಲೆ ನಿನ್ನ | ಬಳಲಿಸಿದಧಮರು | ಉಳಿವರೆ ಲೋಕದಿ | ನಳಿನದಳಾಕ್ಷಿ ||
ಹಳುವಕಟ್ಟಿದೆನೆಂಬ | ಹಮ್ಮಿಲಿ ತನ್ನೊಳ | ಗಳವಿಗೊಟ್ಟೀಗಲು ಮಡಿದ ದುಶ್ಯಾಸ || ೩೫೪ ||

ನೋಡು ನೋಡೆನುತವ | ನೊಡಲ ರಕ್ತದೊಳದ್ದಿ | ಮುಡಿಯ ನೇವರಿಸಿದ | ನಾಗಲಾ ಭೀಮ ||
ಹೊಡೆದು ಹಲ್ಲುಗಳನ್ನು ಕಳಚಿ ಕೈಬೆರಳಿಂದ | ಒಡನೆ ಬಾಚುತ ಎಳೆ | ಗರುಳನ್ನೆ ಮುಡಿಸಿ || ೩೫೫||

ಸಂದಿತಂದಿನ ದಿನ | ದಿಂದಲೆನ್ನಯ ಭಾಷೆ | ಯೆಂದು ಸಂತಯಿಸಿದ | ನಂದು ಕಾಮಿನಿಯ ||
ಮುಂದೇನು ಭೀತಿ ಬೇ | ಡೆಂದವಳೊಡನರುಹ | ಲಂದು ಕೈಮುಗಿಯುತ್ತ | ಲೆಂದಳಾ ಕಾಂತೆ || ೩೫೬ ||

**ರಾಗ ತೋಡಿ ಅಷ್ಟತಾಳ**

ಕೊಂದನೇ | ಭೀಮ | ಕೊಂದನೇ || ಪ ||

ಕೊಂದನೇ ಕೌರವನನುಜ ಸಂಪನ್ನ | ಒಂದಿಷ್ಟು ಕರುಣೆಯಿಲ್ಲದೆ ಭೀಮ ನಿನ್ನ || ಅ ||

ವನಕೆ ಐವರನಟ್ಟಿ ರಾಜಮಂದಿರದಿ | ಮನಕೆ ಬೇಕಾದ ಭೋಜನವುಂಡು ಸುಖದಿ |
ಮಿನುಗುವ ಕಾಯ ಜಜ್ಝರಿಯಾಯ್ತೀ ತೆರದಿ |
ತನಿಗರುಳರುಣಾಂಬು ಸೋರುವ ತೆರದಿ || ಕೊಂದನೇ || ೩೫೭ ||

ಮುಡಿಹಿಡಿದೆಳೆದ ಕೈ ತೊಳಲಾಯಿತಲ್ಲ | ಕೆಡುನುಡಿದಾ ಜಿಹ್ವೆಯೊಳಸೇರಿತಲ್ಲ |
ಅಡಚಿದಾಪತ್ತಿಗೆ ನಿನ್ನವರಿಲ್ಲ | ಕಡು ನಿಪುಣರು ಜೂಜಿನೊಳಗವರೆಲ್ಲ || ಕೊಂದನೇ || ೩೫೮ ||

ಎನ್ನಯ ದುಗುಡ ಸೈರಿಸದೆಯವನಿಯೊಳು | ನಿನ್ನರಸಿಯು ಕೇಳಿ ಹೇಗೆ ಜೀವಿಪಳು ||
ಅನ್ಯರಿಗತಿಕೇಡ ಬಗೆದವರಿಂತು | ಬನ್ನ ಬಡುವರೆಂದು ಜರೆದಳು ನಿಂತು || ಕೊಂದನೇ || ೩೫೯ ||

**ಭಾಮಿನಿ**

ಗಂಡರಲಿ ಕಲಿ ಭೀಮ ನೀನೇ |
ಗಂಡನೆನ್ನಯ ಮನದಭೀಷ್ಟವ |
ಕಂಡು ಸಲಿಸುವರಿಲ್ಲ ಮಿಕ್ಕುಳಿದಿರ್ದ ಗಂಡರಲಿ ||
ಮಂಡೆಯನು ಮಣಿದೆರಗಲಾ ಮಾ |
ರ್ತಂಡತೇಜದಿ ಮೆರೆವ ಲಕುಮಿಯ |
ಗಂಡನನು ಕಾಣುತ್ತ ಬಿನ್ನಯಿಸಿದಳು ಚರಣದಲಿ || ೩೬೦ ||

**ವಾರ್ಧಕ**

ಜಯ ಜಯ ರಮಾಧೀಶ ಖಳನಾಶ ರವಿಭಾಸ |
ಜಯ ಜಯ ಸರೋಜಾಕ್ಷ ಮುನಿಪಕ್ಷ ಖಳಶಿಕ್ಷ |
ಜಯ ಜಯ ಚಿದಾನಂದ ಗೋವಿಂದ ಗುಣವೃಂದ ಜಯ ಘನಶ್ಯಾಮ ಭೀಮ ||
ಜಯ ಜಯ ಜಗತ್ಪಾಲ ಶ್ರೀಲೋಲ ಗೋಪಾಲ |
ಜಯ ಜಯ ಖಗವರೂಥ ಅಜತಾತ ಸುಪ್ರೀತ |
ಜಯ ಜಯ ಸದಾನಂತ ಗುಣವಂತ ನಿಶ್ಚಿಂತ ಜಯ ಜಯೆಂದಡಿಗೆಡೆದಳು || ೩೬೧ ||

**ಕಂದ**

ಅಡಿಗೆರಗಿದ ದ್ರುಪದಜೆಯಂ |
ಪಿಡಿದೆತ್ತುತ್ತಧಿಕಮಾದ ತೋಷದೊಳಾಗಳ್ ||
ಜಡಜದಳಾಂಬಕಿ ನಿನ್ನಯ |
ಕಡುಮುಳಿಸಿಂದಳಿದರಳ್ತೆ ಕೌರವನನುಜರ್ || ೩೬೧ ||

**ರಾಗ ನೀಲಾಂಬರಿ ರೂಪಕತಾಳ**

ಅಂದೆರಗಿದ ದ್ರೌಪದಿಯನು ಸಂತಯಿಸಿ ಗೋ | ವಿಂದ ಪೇಳಿದನವಳೊಡನೆ |
ಮಂದಗಮನೆ ನಿನ್ನ ಜಠರಾಗ್ನಿಯಿಂದಲಿ | ಬೆಂದಿತು ಕೌರವರಡವಿ || ೩೬೩ ||

ಅಂಧಕನೃಪತಿಯ ಸುತರು ನೂರ್ವರೊಳೊಬ್ಬ | ನಿಂದಿಗೆ ಉಳಿದ ಕೌರವನು ||
ನೊಂದ ನೋವುಗಳಡಗಿತೆ ದುಶ್ಯಾಸನನಿಂದ | ನಂದಿತೆ ನಿನ್ನೊಡಲುರಿಯು || ೩೬೪ ||

ಚಂದವಾಯಿತು ಮುಂದೆ ಸುಖದೊಳಗಿರು ನೀನು | ಎಂದು ಸಂತಯಿಸಿ ಬೀಳ್ಗೊಡಲು ||
ಇಂದಿರೆಯರಸ ಗೋವಿಂದ ಮಾಧವ ಜಯ | ಎಂದು ಸಾಗಿದಳು ಮಂದಿರಕೆ || ೩೬೫ ||

**ಭಾಮಿನಿ**

ಧರಣಿಪತಿ ಕೇಳಿತ್ತ ದ್ರೌಪದಿ |
ಶಿಬಿರಕಭಿಮುಖವಾಗಲಿತ್ತಲು |
ಕುರುಕ್ಷಿತೀಶ್ವರನಿರ್ದ ಬಳಿಗಯ್ತಂದು ಗುರುಸೂನು ||
ಬರವ ಕಾಣುತಲಾಗ ಕೌರವ |
ಹರುಷದಿಂದವಗೆರಗಿ ಬೆಸಗೊಳ |
ಲರುಹಿದನು ನೀತಿಗಳ ಸಂಗತಿಯನ್ನುಮವನೊಡನೆ || ೩೬೬ ||

**ರಾಗ ಕಾಪಿ ಅಷ್ಟತಾಳ**

ಕುರುರಾಯ ಕೇಳೆನ್ನ ಮಾತ | ನಿನ್ನ | ಸಿರಿಯ ವೈಭವಕಾರು ಸರಿಯಿಲ್ಲ ಖ್ಯಾತ || ಪ ||

ಇನ್ನಾದರು ಪಾಂಡವರನು | ಬೇಗ | ಮನ್ನಿಸಿ ಕೊಡಿಸಯ್ಯ ಅರ್ಧ ರಾಜ್ಯವನು ||
ಭಿನ್ನ ಭೇದಗಳೆಲ್ಲವನ್ನು | ಬಿಡೆ | ಚೆನ್ನ ಶ್ರೀಕೃಷ್ಣಗೋವಿಂದ ರಕ್ಷಿಪನು || ೩೬೭ ||

ಗುರು ದ್ರೋಣ ಭೀಷ್ಮರೆಂಬವರ | ಕಂಡು | ಮರೆಯದೆ ಕೊಲಿಸಿದೆ ಅನುಜತನುಜರ ||
ಸರಿ ಯಾರು ನಿನ್ನ ಭಾವನಿಗೆ | ಮುಂದೆ | ಕುರಿಯಂತೆ ಮೆರೆಸಿದರಾ ದುಶ್ಯಾಸನಗೆ || ೩೬೮ ||

ಏತಕೆ ಹಗೆಯವರೊಡನೆ | ಬಿಡು | ಘಾತಕ ವೃತ್ತಿಯ ಕಪಟಹೃದಯನೆ ||
ನೀತಿಹೀನನು ಕರ್ಣ ನಿನಗೆ | ಪೇಳ್ದ | ಮಾತು ಹಿತವ ನಂಬಿ ಕೆಡುವೆ ನೀ ಕಡೆಗೆ || ೩೬೯ ||

ಬೇಡ ಸಾರಿದೆ ಕಡ್ಡಿ ಮುರಿದು | ನಿನ್ನ | ನಾಡೊಳಯ್ದು ಗ್ರಾಮವಿತ್ತು ಶೋಭಿಪುದು |
ಆಡುವರ್ ನಿನ್ನೊಳು ಹಿತವ | ಬೆನ್ನ | ಗೂಡನೆಣಿಸುವರು ಕಪಟ ಕೃತ್ರಿಮವ || ೩೭೦ ||

**ಭಾಮಿನಿ**

ಕೇಳ್ವುದಶ್ವತ್ಥಾಮ ನೀನೇ |
ಪೇಳಿದಾ ನುಡಿಯಹುದು ಮೊದಲಲಿ |
ಪೇಳಿದರು ಗುರು ಭೀಷ್ಮ ವಿದುರಾದಿಗಳು ಮನವೊಲಿದು ||
ಕೇಳದವರುಚಿತಗಳನರಿಯದೆ |
ಕೋಳು ಹೋದುದು ಅನುಜತನುಜರ |
ಜಾಲ ಬಾಂಧವರುಗಳು ತನಗೋಸುಗವೆ ಅಳಿದರಲಾ || ೩೭೧ ||

**ಕಂದ**

ಸಂಧಿಯೆ ಎನಗಿನ್ನವರೊಳ್ |
ಮುಂದಿನ್ನೇನಾದರಾಗಲಿಯೆನುತಂ ||
ಹಿಂದಕೆ ಕರೆದರಿಗಳ ಧರೆ |
ಯನ್ನಿತ್ತರೆ ಕರೆಯರೆ ಪೇತುಗನೆಂದೆನ್ನಂ || ೩೭೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಹಹ ಕೌರವ ಕೆಡುವ ಕಾಲಕೆ | ವಿಹಿತವೇ ಮದ್ವಚನ ಕೊಳ್ಳದು |
ಇಹಪರಂಗಳನರಿಯದವನೇ | ತಿಳಿಯಬಹುದೈ  || ೩೭೩ ||

ಎನುತ ಚಿತ್ತ ವ್ಯಥೆಯೊಳಾತನ | ಘನ ಸಭಾಸ್ಥಳವಿಳಿಯಲನಿತರೊಳ್ |
ದಿನಪತನುಜಕುಮಾರ ವೃಷಸೇ | ನಾಖ್ಯನೆನಿಪ  || ೩೭೪ ||

ಧನುವ ಝೇವಡೆಗೆಯ್ದು ಬಂದಡಿ | ಗೆರಗಿ ನಿನ್ನನುಜಾತನೂರ್ವರ |
ನೆನಹ ಮಾಣಿಸಿದಧಮನುರವನು | ಬಗಿವೆ ನೋಡೈ  || ೩೭೫ ||

ಎನುತ ಕಡಗವ ಸರಿಸೆ ಮೇಲಕೆ | ಜನಪ ಕೌರವನುಬ್ಬಿ ಹರುಷದಿ |
ರಣಕೆ ಸಣ್ಣವನೆಂತು ಕಳುಹುವೆ | ನೆನುತ ನುಡಿದ  || ೩೭೬ ||

**ರಾಗ ನೀಲಾಂಬರಿ ಏಕತಾಳ**

ಮಗನೆ ನೀ ಸಣ್ಣವ ನಿನ್ನನು | ನಾನು | ಜಗಳಕಿನ್ನೆಂತು ಕಳುಹುವೆನು ||
ವಿಗಡ ಭೀಮಾರ್ಜುನವೀರರು | ನಿನ್ನ | ಹೊಗಗೊಡುವರೆ ಸೈನ್ಯಕವದಿರು || ೩೭೭ ||

ಮೃಗರಾಜನಿದಿರೊಳು ಕರಿಗಳು | ಕಾದಿ | ಜಗದಿ ಗೆಲುವುದುಂಟೆ ನೀ ಹೇಳು ||
ಮೃಗಧರನಂತಿಹ ನಿನ್ನಯ್ಯ | ಕೇಳಿ | ಸೊಗಸುಗೊಂಬನೆ ಬೇಡ ಬೇಡಯ್ಯ || ೩೭೮ ||

ಅರಿಗಳಿಗಂಕುಶ ಕರ್ಣನು | ಒಬ್ಬ | ನಿರಲು ಬೇಕೆ ಪ್ರತಿಭಟರಿನ್ನು ||
ತರಳ ನೀನೊಮ್ಮೆ ಸಂಗರವನ್ನು | ನೋಡು | ತಿರುಯೆಂದು ಚಿಂತೆಯೊಳಿರ್ದನು || ೩೭೯ ||

**ರಾಗ ಕೇದಾರಗೌಳ ಝಂಪೆತಾಳ**

ಅರಸ ಬಿಡು ಚಿಂತೆಗಳನು | ಪಾಂಡವರ | ಧುರಕೆ ತಾನಿಹೆನೆಂದನು ||
ಸರಕುಮಾಡುವೆನೆ ತಾನು | ನೋಡಿ ನರ | ಕಾರಿಯೇ ತಡೆಯಲಿನ್ನು || ೩೮೦ ||

ಉರವ ಬಗಿವೆನು ಭೀಮನ | ಕ್ಷಣದೊಳಗೆ | ತಿರುಗಿಸುವೆ ನಿನ್ನನುಜನ ||
ಗರುಡನಿದಿರಲಿ ಉರಗರು | ಕಾದಿ ಗೆಲು | ವರಿವುದುಂಟೇಯವದಿರು || ೩೮೧ ||

ನೋಡು ಸಾಹಸವೆನ್ನನು | ರಣದಿ ಹೊ | ಯ್ದಾಡುವಂಥಾ ಬಗೆಯನು ||
ಕೂಡೆ ಶಾಕಿನಿ ಬಳಗಕೆ | ಔತಣವ | ಮಾಡಿ ತೋರುವೆ ನಿಮಿಷಕೆ || ೩೮೨ ||

**ಭಾಮಿನಿ**

ಎಂದು ಪೌರುಷವಾಡುತಿರಲಾ |
ನಂದದಿಂ ಕೌರವನು ಸ್ವಪ್ನದಿ |
ಕಂಡ ಹಣವಿಗೆ ಗೋಣಿಯೊಡ್ಡುವ ತೆರನು ತಾನಾದ ||
ಮುಂದುಗಾಣದೆ ಕುವರನನು ಬಳಿ |
ಕಂದು ತಾ ಬೀಳ್ಕೊಡಲು ಸಿಂಹದ |
ಮುಂದೆ ಕರಿ ಮಲೆವಂತೆ ಮಲೆತನು ವೀರ ವೃಷಸೇನ || ೩೮೩ ||

**ವಾರ್ಧಕ**

ಪೃಥ್ವಿಪತಿ ಲಾಲಿಸೈಯತ್ತಲು ವೃಕೋದರಂ |
ಚಿತ್ತಶುದ್ಧಿಯೊಳಾಗ ಕಾಲ್ಮೊಗಂ ತೊಳೆದು ಬಳಿ |
ಕುತ್ತಮದ ಮಡಿವಸನಮಂ ಕೊಂಡು ಪರಿಮಳಗಳಂ ಧರಿಸುತುತ್ಸಹದೊಳು ||
ಕತ್ತಲೆಯ ಕಡಿದು ಬಗಿದೇಳ್ವ ರವಿಯಂದದಿಂ |
ದುತ್ತಮ ವರೂಥಮನ್ನಡರೆ ವೃಷಸೇನ ಬಲು |
ಶಸ್ತ್ರದಿಂ ತರುಬುತಿಪ್ಪತ್ತು ಸಾವಿರ ಸೈನ್ಯದೊಡನೆ ಬಂದಿದಿರಾದನು || ೩೮೪ ||

**ರಾಗ ಮಾರವಿ ಏಕತಾಳ**

ಎಲವೋ ಭೀಮ ಪರಾಕ್ರಮ ನಿನ್ನದು | ಹಳೆ ಹಳೆ ಹಾರ್ವರಲಿ ||
ಗೆಲಿದಿಹ ಪೌರುಷ ಬಿಡು ಬಿಡು ಎನ್ನಯ | ಅಳವಿಯ ನೋಡಿಲ್ಲಿ || ೩೮೫ ||

ಕಾಡೊಳು ಕರಡಿಯ ಸಂಗಡವಿರುವರು | ನಾಡನು ಬಯಸಿದಕೆ |
ತೋಡುವೆ ಕರುಳನೆನುತ್ತಲೆ ಧನುವನು | ಪಿಡಿದನು ತತ್‌ಕ್ಷಣಕೆ || ೩೮೬ ||

ಹಿಡಿ ಹಿಡಿ ಧನುವನೆನುತ್ತಲೆ ಕರ್ಣಜ | ನುಡಿದ ಪರಾಕ್ರಮಕೆ ||
ಕಡು ಹಿಗ್ಗುತಲಾ ಮರುತಜ ನುಡಿದನು | ತರಳನ ಸಾಹಸಕೆ || ೩೮೭ ||

ಎಲವೋ ಕರ್ಣಕುಮಾರನೆ ನಿನ್ನನು | ಗೆಲಿದರೆ ಗೆಲುವೇನು ||
ಛಲ ವ್ಯರ್ಥವು ವಿವೇಕದಿ ಸಾರುವು | ದೊಳ್ಳಿತು ನೋಡಿನ್ನು || ೩೮೮ ||

**ಕಂದ**

ಸಾರುವರಂ ಕಡೆಸಾರಿಸು |
ಸಾರದಿರೆನ್ನೊಳಗೆನುತ್ತಲಾ ವೃಷಸೇನಂ ||
ತೋರೆ ಪರಾಕ್ರಮವೆನ್ನಯಿ |
ದಿರೊಳೆನುತ ಮಾರುತಿಯೊಡನಿಂತೆಂದಂ ತಾಂ || || ೩೮೯ ||

**ರಾಗ ಭೈರವಿ ಅಷ್ಟತಾಳ**

ಧುರಕೆ ಸಣ್ಣವನಾದರೇ ನಾನು | ನಿನ್ನ | ಶಿರವ ಕೊಳ್ಳದೆ ಪೋದರೇ ಇನ್ನು ||
ಕರೆಯ್ಯೆ ವೈಶ್ಯರ ಸುತನೆನಗೆಂದು | ಮತ್ತೆ | ಶರವ ಸುರಿದು ಮೇಲ್ವಾಯ್ದನಂದು || ೩೯೦ ||

ಹುಡುಗನೆಂಬುದಕಾಗಿ ನಿನ್ನನು | ಕೈಯ | ತಡೆದರೆ ಬಂತೆ ಗರ್ವಗಳಿನ್ನು |
ಧಡ ಧಿಡು ಧಪ್ಪು ಧಿಪ್ಪೆನುತಲೆ | ಭೀಮ | ಬಡೆದನು ಗದೆಯಿಂದಲಾಗಳೆ || ೩೯೧ ||

ಹೊಡೆದ ಭರಕೆ ವೃಷಸೇನನು | ಕಣ್ಣ | ಬಿಡುತಲೆ ಕಚ್ಚಿದ ಮಣ್ಣನು |
ಒಡನೆ ಥೂಯೆಂದುಗುಳುಗುಳುತ್ತ | ಮತ್ತೆ | ಮೃಡನ ಮಂತ್ರವನಾಗ ಜಪಿಸುತ್ತ || ೩೯೨ ||

ಏಳುತೇಳುತ ಕೊಂಡು ಧನುವನು | ಭೀಮ | ಬೀಳು ಬೀಳೆನುತೆಚ್ಚ ಶರವನು ||
ಭಾಳವನೊಡೆದುಚ್ಚಳಿಸಿತು | ಮೂಗಿ | ನೊಳಗೆ ಶ್ವಾಸಗಳಂತರಿಸಿತು || ೩೯೩ ||

**ಭಾಮಿನಿ**

ಕಾತರಿಸಿ ಕಲಿ ಭೀಮ ಶಸ್ತ್ರದ |
ವ್ಯಾಕುಲದಿ ಮಲಗಿರಲು ಬಳಿಕಾ |
ಶ್ವೇತವಾಹನನೊಡನೆ ನುಡಿದನು ಮಾತುಳಧ್ವಂಸಿ ||
ಘಾತವಾದನು ಭೀಮನಿಂದು ವಿ |
ಘಾತವಾಯಿತು ಅಕಟ ನಾನೀ |
ರೀತಿಯಿಂದಲೆ ಬಂದು ಕೆಟ್ಟೆ ನಿರರ್ಥ ನಿಮಗಾಗಿ || ೩೯೪ ||

**ಕಂದ**

ಇಷ್ವರ ಬಲುಮೆಯನವಗಂ |
ಕೊಟ್ಟೆವರಾರೀ ಮುರಹರನಲ್ಲದೆನುತ್ತಂ ||
ಥಟ್ಟನೆ ಹಾರಿಸು ರಥವೆನ |
ಲಷ್ವರೊಳವಗಿದಿರೊಳ್ ನಿಲಿಸಿಯೆ ತೋರಿಸಿದಂ || ೩೯೫ ||

**ವಾರ್ಧಕ**

ನೋಡಿದಂ ಫಲುಗುಣನು ಕರ್ಣಜನ ಖಾತಿಯಂ |
ಮಾಡಿದಂ ಮಾರ್ಗಣದೊಳಸ್ತ್ರಸಂಕುಲಗಳಂ |
ಹೂಡಿದಂ ವಾಜಿ ರಥ ವಾರಣಂಗಳನೆಚ್ಚು ರೂಢಿಯೊಳ್ ಬೊಬ್ಬಿರಿದನು |
ನೋಡುತಾ ಕ್ಷಣ ಬರುವ ಬಾಣಜಾತಗಳ ಕಡಿ |
ಮಾಡುತಾ ಬಾಲಕನ ಸಾಹಸಕೆ ಮೆಚ್ಚಿ ಕೊಂ |
ಡಾಡುತಾತನ ಸವ್ಯಸಾಚಿ ನಸುನಗೆಯಿಂದ ಕೂಡೆ ಮತ್ತಿಂತೆಂದನು || ೩೯೬ ||

**ರಾಗ ಶಂಕರಾಭರಣ ಮಟ್ಟೆತಾಳ**

ಸಾಕು ಸಾಕು ನಿನ್ನ ಸಾಹಸ | ತರಳರಿಗೆ ವಿ | ವೇಕವಲ್ಲವಿನಿತು ಪೌರುಷ | ಸಾಕು ಸಾಕು || ಪ ||

ಕಾಕು ಮಾತನಾಡಿ ನಮ್ಮಾ | ನೇಕ ಜನರ ಮುಂದೆ ನೀನು |
ಪೋಕನೆನಿಸಿಕೊಂಡು ಬರಿದೆ | ನೂಕಿ ಪೋಪರೇನೊ ಮನೆಗೆ || ಅ ||

ವಿಷದ ಘಟವ ಪೊಕ್ಕು ನೊಣಗಳು | ಬದುಕಲುಂಟೆ | ಪಸುಳೆ ನೀನು ನಿನಗೆ ರಣದೊಳು ||
ಅಸಮ ವೀರನೊಡನೆ ಬಾಣ | ದೆಸುಗೆಗಳನದೇನ ಬಲ್ಲೆ |

ಶಿಶುವಿಘಾತ ಗೆಯ್ಯಲಾರೆ | ಅಸುವ ನೀಗದೀಗ ಪೋಗು || ೩೯೭ ||
ಗರುಡ ನೊಲುಮೆಯುಳ್ಳ ಸುಭಟನು | ಫಣಿಗೆ ಬೆದರಿ | ಮರುಳವನೆ ಕಿರೀಟಿ ನಮ್ಮನು |

ಸುರರು ಮೆಚ್ಚುವಂತೆ ಭರದೊ | ಳರಿದರಿಲ್ಲ ನಿನಗೆ ದೋಷ |
ತರಳನಾದರೇನು ಕೈಯ | ಗುರಿಯನೀಕ್ಷಿಸೆನುತಲೆಚ್ಚ || ೩೯೮ ||

ಕರ್ಣಸುತನ ಸರಳ ಖಂಡಿಸಿ | ದಿವ್ಯ ಶರಗ | ಳನ್ನು ಪಾರ್ಥ ಧನುವಿಗೇರಿಸಿ ||
ಕೆನ್ನೆಯುಗಿದು ಬಿಡಲು ಕಿಡಿಗ | ಳನ್ನು ತುಳುಕಿ ಬರುವ ಕಣೆಗ |

ಳನ್ನು ಸವರಲವನ ಚಳಕ ವನ್ನು ನೋಡಿ ನರನು ಪೇಳ್ದ || ೩೯೯ ||
ಹರಿಯೆ ಪರಿಕಿಸೆನ್ನ ಕುವರನ | ಪೋಲ್ವ ಸುಭಟ | ವರನ ತಟ್ಟಲೀತನೋರ್ವನ |

ಧುರದಿ ಗುರುನದೀಜರುಗಳ | ಸರಿ ಸಮಾನನೀತನೆನ್ನ |
ಸರಕುಮಾಡಲಿವನ ಬಗೆಯ | ನರಿವೆನೆನುತಲವನೊಳೆಂದ || ೪೦೦ ||

**ರಾಗ ಶಂಕರಾಭರಣ ಏಕತಾಳ**

ಕರ್ಣಜಾತ ಕೇಳೊ ಮಾತ | ಸಣ್ಣವನೆಂಬುದಕಾಗಿ |
ಮನ್ನಿಸಿ ಬಿಟ್ಟರೆ ಇಂಥ | ಗರ್ವ ಬಂತೇನೊ || ೪೦೧ ||

ಸಣ್ಣವ ನಾನಹುದಾದ | ರೆನ್ನ ಬಾಣಜಾತಗಳನು |
ಹೂಣೆ ನೋಡೆನುತಲೆಚ್ಚ | ಬಾಣಗಳನ್ನು || ೪೦೨ ||

ಭ್ರೂಣಹತ್ಯ ಪಾಪಕಂಜಿ | ಬಿಟ್ಟೆವೀಗ ನೋಡು ನಿನ್ನ |
ಕಾಣಬಹುದೆನುತ್ತಲೆಚ್ಚ | ಸಾಣೆಯಲಗನು || ೪೦೩ ||

ಜಾಣತನದ ಮಾತು ನಿನ್ನ | ರಾಣಿಯರ ನಿವಾಸದೊಳಗೆ |
ಹೂಣಿಗನಾದರೆ ನಿಲ್ಲು | ನಿಲ್ಲತ್ತ ಸಾರೋ || ೪೦೪ ||

ಇಷ್ಟು ಪಂಥಯಾರೊಡನೆ | ಥಟ್ಟನಿದಿರಾಗೆನುತ್ತ |
ತೊಟ್ಟ ಬಾಣವನ್ನು ಜಯಿಸೆಂ | ದಿಟ್ಟನಾ ಪಾರ್ಥ || ೪೦೫ ||

ಅಷ್ಟರೊಳು ವೃಷಸೇನ | ತೊಟ್ಟ ಸೀಸಕವಚ ಹರಿಯೆ |
ಬಟ್ಟ ಬಯಲನ್ನು ಮಾಡಿ | ಬಿಟ್ಟನಾ ಕ್ಷಣ || ೪೦೬ ||

ದಿಟ್ಟ ವೃಷಸೇನನವಗೆ | ಮುಷ್ಟಿಯಿಂದಲೆರಗುತಿರಲು |
ಬಿಟ್ಟ ಶರದಿ ಶಿರವು ನಭಕೆ | ತಟ್ಟಿ ಪೋದುದು || ೪೦೭ ||

**ಭಾಮಿನಿ**

ಕರ್ಣತನಯನ ಶಿರವು ಧರೆಗೆ ಸು |
ವರ್ಣತೇಜದಿ ಬೀಳುತಿರೆ ಸೌ |
ಪರ್ಣವಾಹನ ಕಂಡು ವಿಸ್ಮಿತನಾಗುತಿಂತೆಂದ ||
ದುರ್ನಯನು ಕೌರವನಧರ್ಮದ |
ನಿರ್ಣಯದಿ ಸುತನಳಿದನೆಂದುಂ |
ವರ್ಣಿಸುತಲೆತ್ತಿದರು ವೇಗದಿ ಸುರರು ಸುರಪುರಕೆ || ೪೦೮ ||

**ರಾಗ ಭೈರವಿ ಝಂಪೆತಾಳ**

ಧರಣಿಪತಿ ಕೇಳು ಜನಮೇಜಯನೆ ಕೌರವನು | ತರಳ ವೃಷಸೇನನನು ನೆನೆದು ಮರುಗುತಲೆ ||
ತರಣಿತನಯನು ತನ್ನ ತರಳನೆಲ್ಲಿಗೆ ಪೋದ | ಕರೆದು ತಾರೆಂದೆನ್ನೊಳರುಹಲೇನೆಂಬೆ || ೪೦೯ ||

ಹರಣದಾಸೆಗೆ ತನ್ನ ತರುಣನನು ಹರಿವ್ಯಾಘ್ರ | ಝುರಿಗೆ ನೂಕಿಸಿ ಉಳಿದೆನೆಂಬೆ ನಾನವಗೆ ||
ಮರಣವದರಿಂದ ಲೇಸೆನುತಲಾ ಕೃತ್ರಿಮನು | ಗರಳವನು ಕುಡಿದು ಜೀವವ ಕಳೆವೆನನಲು || ೪೧೦ ||

ಎಂದು ಮರುಗುವ ಸಮಯದೊಳಗಿತ್ತಲಾ ಭಾನು | ನಂದನನು ನಡೆತಂದನಾಗ ಕೌರವನ ||
ಇಂದಿದೇನೆನೆ ಶೋಕ ಬಿಡು ನಿನಗೆ ನಾನಿರಲು | ಬಂದ ವ್ಯಾಕುಲವೇನು ಪೇಳೆನ್ನೊಳೀಗ || ೪೧೧ ||

ಪೇಳುವರೆ ಭಯದಿ ಬಾಯಾರಿ ಬಳಲುವ ನೃಪನ | ನಾಲಿಗೆಯು ತಡವರಿಸುತಂತರಿಸುವಾಗ ||
ಕೇಳೊ ನಿನ್ನಯ ಕುವರ ಖೂಳ ಭೀಮನ ಗೆಲಿದು | ಕಾಳಗದೊಳರ್ಜುನನೊಳಯ್ದು ಸುರಪುರಕೆ || ೪೧೨ ||

**ಭಾಮಿನಿ**

ಸುತಗೆ  ಮರಣವ ಗೆಯ್ದು ಪಾರ್ಥನ |
ಸತಿಯ ವಾಲೆಯ ಕಳೆವೆ ನೋಡೆಂ |
ದತಿ ಮಹಾ ಚಿಂತೆಯಲಿ ಪೊರಟನು ನೃಪಸಭಾಲಯವ ||
ಅತುಳಬಲ ನಡೆ ತಂದು ಶಸ್ತ್ರದ |
ಹತಿಯಳೊರಗಿದ ಮಗನ ಕಾಣುತ |
ಗತಿಯದಾರೆನಗೆನುತ ಮಮ್ಮಲಮರುಗಿದನು ಕರ್ಣ || ೪೧೩ ||

**ಕಂದ**

ಅನಿತರೊಳೆಚ್ಚತ್ತಾಗಳ್ |
ಘನ ಶೋಕಗಳಿಂದಲೀಕ್ಷಿಸುತೆ ಕುವರನ ತಾಂ ||
ಗುಣಗಣಗಳ ವರ್ಣಿಸುತಲೆ |
ನೆನೆದು ಪ್ರಲಾಪಿಸುತೆ ಮತ್ತೆ ತಾನಿಂತೆಂದಂ || ೪೧೪ ||

**ರಾಗ ನೀಲಾಂಬರಿ ಆದಿತಾಳ**

ಮಗನೇ ನಿನ್ನ ಪೋಲ್ವರಾರೀ | ವಿಗಡಭಟರೊಳಿನ್ನು ||
ಜಗದೊಳು ನಿನ್ನಂಥ ಚೆಲುವ | ಸುಗುಣ ಕುವರರಿಹರೆ || ೪೧೫ ||
ಮೊಗದೊಳು ತಾ ಮೊಗವನಿಟ್ಟು | ಸೊಗಸಿನಿಂದ ಮುತ್ತ ಕೊಟ್ಟು |
ಝುಗಝುಗಿಸುವಂಥ ಪ್ರಭೆಯು | ಮುಗಿದು ಹೋಯಿತಯ್ಯೋ || ೪೧೬ ||

ದುಷ್ಟ ಪಾಪಿಯುದರದೊಳು | ಪುಟ್ಟಿ ವ್ಯರ್ಥವಾದೆ ||
ದೃಷ್ಟಿಯನ್ನು ತಾನೆ ಕುತ್ತಿ | ಕಳೆದಂತಾಯಿತಯ್ಯೋ  || ೪೧೭ ||

ಸೃಷ್ಟಿ ಈರೇಳರೊಳಿಂಥ | ಶ್ರೇಷ್ಠನನ್ನು ಕಾಣೆ ||
ಕೆಟ್ಟೆ ನಾನೀ ದೇಹವನ್ನು | ಇಟ್ಟು ಬಾಳಲಾರೆ  || ೪೧೮ ||

ಪುಟ್ಟಿ ಈರೇಳ್ ವರುಷವಾಯಿ | ತಪ್ಪರೊಳಿಂತಾಯ್ತು |
ಇಷ್ಟಪಡುವ ಸಮಯದಿ | ಕಷ್ಟವೊದಗಿತಯ್ಯೊ || ೪೦೯ ||

ಬತ್ತಳಿಕೆಯನ್ನು ಬೆನ್ನೊಳು | ಪೊತ್ತು ಮಲಗಿರುವೆ |
ಎತ್ತಿ ಸಲಹಿದಂಥ ತೋಳು | ವ್ಯರ್ಥವಾಯಿತಯ್ಯೋ || ೪೧೦ ||

ಧಾತ್ರಿಯಧಿಪತಿತನಕೆ | ಯೋಗ್ಯನಹೆಯಲ್ಲ ||
ಸುತ್ರಾಮನ ಪುರವು ನಿನಗೆ | ಪ್ರೀತಿಯಾಯಿತಲ್ಲ || ೪೧೧ ||

**ಭಾಮಿನಿ**

ವೀರ ವೃಷಸೇನಾಖ್ಯನಳಿದನೆ |
ತೀರಿತೇ ತನ್ನುರು ಪರಾಕ್ರಮ |
ಸೂರೆ ಹೋದುದೆ ಸಮರ ಪಾರ್ಥಗೆ ಶಿವಾ ಶಿವಾ ಎನುತ ||
ಸೂರಿಯನ ಸುತನಾಗ ಚಿಂತಾ |
ಭಾರದಲಿ ಮನನೊಂದು ದೈವದ ||
ಕೂರುಮೆಯನಾರರಿವರಕಟಾ ತನ್ನ ವಿಧಿಯೆಂದ || ೪೧೧ ||

ಜನಪ ಕೇಳೈ ಬಳಿಕ ಕರ್ಣನು | ಮನದ ಚಿಂತೆಯ ಬಿಟ್ಟು ರೋಷದಿ |
ಕಣುಗಳಲಿ ಕಿಡಿಯುಗುಳಿ ಮಾದ್ರಾಜನಪಗಿಂತೆಂದ ||
ಅನಿಮಿಷಾಧಿಪಕುವರನೆಡೆಗೀ | ಘನ ರಥವ ಹರಿಸೆನಲು ಕೇಳ್ದಾ |
ಕ್ಷಣದಿ ಕಪಿಕೇತನನ ರಥಸಮ್ಮುಖಕೆ ಹಾರಿಸಿದ || ೪೧೩ ||

**ಕಂದ**

ಬಂದಾ ರಥಮಂ ಕಾಣುತ |
ಮುಂದರಿಯುತ ಸಮ್ಮುಖದೊಳ್ ಮುರಹರನಾಗಂ ||
ಚಂದವೆ ಸಾರಥಿತನವಿದು |
ಸುಂದರನೆ ಎನುತ ಶಲ್ಯನೊಳ್ ಜರೆಯುತೆಂದಂ || ೪೧೪ ||

**ರಾಗ ಸಾರಂಗ ಅಷ್ಟತಾಳ**

ಏನಯ್ಯ ಶಲ್ಯಭೂಪ | ನಿನ್ನಂಗವಿ | ದೇನಯ್ಯ ಮದನರೂಪ ||
ಭೂನಾಥ ನಿನಗೆ ಈ ಸಾರಥಿತನವಿದು | ಹೀನವೃತ್ತಿಗಳೇಕಯ್ಯ || ಪೇಳಯ್ಯ || ೪೧೫ ||

ಧರ್ಮವಲ್ಲರಸರಿಗೆ | ನೋಡಿಂಥ ದು | ಷ್ಕರ್ಮವೇತಕೆ ನಿನಗೆ ||
ಚಮ್ಮಟಿಕೆಯ ಪಿಡಿದಶ್ವವ ನಡೆಸುವ | ಮರ್ಮವಾದರು ಬಲ್ಲೆಯ || ಪೇಳಯ್ಯ || ೪೧೬ ||

ಕರ್ಣನ ಬಂಡಿಯನು | ನಾ ಹೊಡೆವುದು | ದುರ್ನೀತಿಯಹುದು ನೀನು ||
ಎನ್ನವಗುಣವ ಶೋಧಿಸುವಾತ ನರನಶ್ವ | ವನ್ನು ನಡೆಸುವೆ ಏಕೆ || ಪರಾಕೆ || ೪೧೭ ||

ಹರಿ ನಿನ್ನ ಮಹಿಮೆಯನ್ನು | ಎಂತೊರೆವೆ ಗೋ | ಪರ ಕುಲದೈವ ನೀನು ||
ತುರಗಲಕ್ಷಣವೇನ ಬಲ್ಲೆ ಹೇಳೆನುತಲೆ | ಜರೆದ ಸನ್ನುತಿವೆರೆದು || ಕೈ ಮುಗಿದು || ೪೧೮ ||

**ವಚನ**

ಈ ಪರಿಯಿಂದ ಶಲ್ಯಭೂಪನು ಕೃಷ್ಣನಲಿ ಅರುಹಿದ ಮೇಲೆ ಇತ್ತಲಾ ಯುದ್ಧಾಂಗಣದಲ್ಲಿ ಕರ್ಣನು ರೋಷದಿಂದ ಅರ್ಜುನನೊಡನೆ ಏನೆಂದನು ಎಂದರೆ -

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಪಾರ್ಥ ಕೇಳು ನೀನು | ಕಳವಿನಲ್ಲಿ ಸಿಂಧುನೃಪನ |
ಗೆಲಿದ ಪರಿಯಿದಲ್ಲ ನೋಡು | ನಿಲ್ಲು ಸಮರಕೆ || ೪೧೯ ||

ಕಳವಿನಲ್ಲಿ ಬೆಂಗಡೆಯೊಳು | ಕರದ ಬಿಲ್ಲ ಕಡಿದ ಜೀವ |
ಗಳ್ಳನೆಂದು ಬಲ್ಲೆ ಗೋ | ಗ್ರಹಣ ದಿನದಲಿ || ೪೨೦ ||

ಗೋಗ್ರಹಣವಲ್ಲವಿಂದು | ಪಾರ್ಥ ನಿನಗೆ ಸೋಮಗ್ರಹಣ |
ಭಾರ್ಗವೇಂದ್ರ ತಾನೆ ಬರಲಿ | ಗೆಲುವೆ ಶೀಘ್ರದಿ || ೪೨೧ ||

ಭಾರ್ಗವೇಂದ್ರನೇಕೆ ನಿನಗೆ | ವ್ಯಾಘ್ರನಂತೆ ಚಿತ್ರಸೇನ |
ಭೋರ್ಗುಡಿಸಿ ಕುರುಪಶುವ ಪಿಡಿಯಲೆಲ್ಲಿಹೆ || ೪೨೨ ||

ಕಾಲನಣುಗನೆಂಬ ಕುರಿಯ | ಗೋಣನೌಕಿ ಪಿಡಿದು ಬಡೆವ |
ವೇಳೆಯರಿತು ಬಿಡಿಸಿದಾತ ಭಟನು ನೀನೆಲಾ || ೪೨೩ ||

ಭಟನು ನೀನಹುದೊ ರವಿಜ | ಕುಟಿಲವಿದ್ಯೆ ಕಲೆಗಳಲ್ಲಿ |
ಪಟುತನವ ನೋಡೆನುತ್ತ | ಸುರಿದ ಬಾಣವ || ೪೨೪ ||

**ರಾಗ ಪಂಚಾಗತಿ ಮಟ್ಟೆತಾಳ**

ಎಚ್ಚ ಬಾಣವನ್ನು ಕರ್ಣ | ಕೊಚ್ಚಿ ನಿಮಿಷದಿ ||
ಬಿಚ್ಚಕಂಗಳಣುಗ ಶರವ | ನೆಚ್ಚ ರೋಷದಿ || ೪೨೫ ||

ಬಳಿಕ ಅಜಮಹಾಸ್ತ್ರವನ್ನು | ಹೂಡೆ ರವಿಜನು |
ನಳಿನನಾಭಶರವನೆಚ್ಚು | ತರಿದ ವಿಜಯನು || ೪೨೬ ||

ಒಡನೆ ಅನಲಶರವನೆಚ್ಚ | ಲಾಗ ಕರ್ಣನು |
ಒಡನೆ ವಾರುಣಾಸ್ತ್ರದಿಂದ | ಕಡಿದ ವಿಜಯನು || ೪೩೭ ||

**ವಾರ್ಧಕ**

ಹವ್ಯವಾಹಾಸ್ತ್ರಮಂ ವಾರುಣಾಸ್ತ್ರದಿ ಗೆಲಿದು |
ನವ್ಯಮೇಘಾಸ್ತ್ರಮಂ ಪೂಡುತಿರೆ ಕರ್ಣ ವಾ |
ಯವ್ಯಾಸ್ತ್ರದಿಂದದಂ ಸವರುತಿರಲಾ ಸವ್ಯಸಾಚಿ ತಿಮಿರಾಸ್ತ್ರ ಬಿಡಲು ||
ರವ್ಯಸ್ತ್ರದಿಂ ಜಯಿಸಿ ಪರ್ವತಾಸ್ತ್ರವನೆಸೆಯೆ |
ದಿವ್ಯ ಕುಲಿಶಾಸ್ತ್ರದಿಂ ಕಡಿದಾ ಧನಂಜಯಂ |
ಸೂರ್ಯಮಂಡಲ ಕಾಣದಂತೆ ಅಕ್ಷಯ ಶರವನೆಚ್ಚುತಾತನ ಗೆಲಿದನು || ೪೩೮ ||

**ರಾಗ ಭೈರವಿ ಏಕತಾಳ**

ಭಳಿ ಭಳಿರೆಲವೊ ಶಭಾಸು | ಶರ | ವಲಯವ ತೀರ್ಚಿದೆ ಲೇಸು ||
ಸಲುವುದು ಭಟತನ ನಿನಗೆ | ಪಲ್ | ಮೊರೆವುತಲೆಚ್ಚನು ಮೇಗೆ || ೪೩೯ ||

ನರನು ಶರೌಘವ ಮುರಿದು | ಮಗು | ಳುರು ಮಂತ್ರಾಸ್ತ್ರವ ತೆಗೆದು ||
ಭರದಿಂದೆಚ್ಚನು ನಗುತ | ಭೋ | ರ್ಗರೆವಸ್ತ್ರವನೀಕ್ಷಿಸುತ || ೪೪೦ ||

ತಿರುವಿಗೆ ಶರಗಳ ಹೂಡಿ | ಬಿಡ | ಲರಿಗಳನುರೆ ಪುಡಿಮಾಡಿ ||
ತ್ವರಿತದಿ ರವಿಜನ ರಥವ | ಒದೆ | ದ್ಧಾರಿಸೆ ಏಳ್ ಯೋಜನವ || ೪೪೧ ||

**ಭಾಮಿನಿ**

ಏನು ಹೇಳುವೆನರಸ ಇಂದ್ರನ |
ಸೂನುವಿನ ಶರಹತಿಗೆ ಕೌರವ |
ಸೇನೆ ಕಳವಳಿಸಲ್ಕೆ ಕರ್ಣನ ರಥವ ಹಾರಿಸಿದ ||
ಭಾನುಸುತನಾ ಕ್ಷಣದಿ ತನ್ನಯ |
ಸೇನೆಗಭಯವ ಕೊಟ್ಟು ರಥವನು ||
ದಾನವಾರಿಯ ಮುಂದೆ ಸಂತೈಸಿದನು ನಿಮಿಷದಲಿ || ೪೪೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಥವನುರೆ ಸಂತಯಿಸಿಕೊಳುತಾ | ಧರಿಸಿ ವಾಘೆಯ ನೂಕಿ ಶಲ್ಯನ |
ಪ್ರತಿಕರದಿ ಕಾಲಿಂದಲೊದೆದ | ಚ್ಯುತನ ರಥವ || ೪೪೩ ||

ಗತಿಗೆ ವರರಥ ಜಗಿದು ಯೋಜನ | ತತಿಗಳೆರಡರೊಳಂತರಿಸುತಿರೆ |
ರತಿಪತಿಯ ಪಿತ ಪೊಗಳುತಿರ್ದಾ | ದಿತ್ಯಸುತನ || ೪೪೪ ||

ಪೂತು ಮಝುರೇ ಕರ್ಣ ಸುಭಟ | ಖ್ಯಾತ ನೀನಹೆ ಲೇಸು ಕೌರವ ||
ಪ್ರೀತಿಯಲಿ ಸಾಕಿದಕೆ ಫಲಿಸಿತು | ಭಾಪು ಭಲರೇ || ೪೪೫ ||

ಈ ತೆರದಿ ಪೊಗಳುತಿರೆ ಶ್ರೀರಘು | ನಾಥಭಕ್ತನು ಹನುಮ ರಥದಿಂ |
ಖ್ಯಾತ ನೀನಹೆ ಭಳಿರೆ ಕರ್ಣಶ | ಭಾಸು ಎಂದ || ೪೪೬ ||

**ವಾರ್ಧಕ**

ಈ ತೆರದಿ ಕರ್ಣನಂ ಪೊಗಳುತಿರಲಾ ಹರಿಯ |
ಮಾತು ಕರ್ಕಶವಾಗಿ ನೆಡಲಹಂಕಾರದಿಂ |
ಘಾತಿಸುವೆನರಿಭಟನ ರಥವನುರೆ ದಶಯೋಜನಾಂತರಕೆ ಹಾರಿಸುವೆನು ||
ಶ್ವೇತವಾಹನ ಕೇಳು ಕರ್ಣನ ವರೂಥಮಂ |
ಘಾತಿಸುವಡಿದು ಸಮರ್ಥತೆಯಲ್ಲ ಹದಿನಾಲ್ಕು |
ಭೂತಳವು ಎನ್ನ ಜಠರದೊಳುಂಟು ನವಖಂಡದೊಳಗೊಬ್ಬನೇ ಮಾರುತಿ || ೪೪೭ ||

**ಭಾಮಿನಿ**

ಅಂತರಹಿತನೆ ನಿನ್ನ ಮಹಿಮೆಯ |
ನಿಂತು ಬಣ್ಣಿಪರಾರು ಲೋಕದಿ |
ಮುಂತೆ ಕೇಳುವುದೆನ್ನ ಭಾಷೆಯನೆಂದನಾ ಪಾರ್ಥ ||
ಕಂತುಹರನಿವನಾದಡಾಗಲಿ |
ಪಂತಿಮುಖನಾದಡೆಯದಾಗಲಿ |
ಕುಂತಿಸುತ ತಾನಾದಡೀತನ ಗೆಲುವೆ ನೋಡೆಂದ  || ೪೪೮ ||

**ಕಂದ**

ಎಂದಾ ಪಾರ್ಥನ ನುಡಿ ಕೇ |
ಳ್ದಂದಾನಂದದೊಳುಸಿರಿದ ಕಾಮನ ಜನಕಂ ||
ಸಂದೇಹವೆ ಇದರೊಳ್ ರಘು |
ನಂದನನ ಬಾಣಕೆ ಸರಿಸಮವೀಮಹದ್ವಚನಂ  || ೪೪೯ ||

**ರಾಗ ಮಾರವಿ ಏಕತಾಳ**

ಇಂತೀ ಪರಿಯಲಿ ಪಾರ್ಥನ ಪೊಗಳಲ | ನಂತರದಿ ರವಿಜ ||
ಸಂತಸದಿಂದುರಗಾಸ್ತ್ರವ ತೆಗೆದು ಮ | ಹಾಂತ ಪರಾಕ್ರಮದೀ || ೪೫೦ ||

ಮುಗಿಲೊಳಗಿಹ ರವಿಯಂದದಿ ಫಣಿಶರ | ಝುಗಝುಗಿಸುತ ಭೋರ್ಗುಡಿಸೆ |
ಗಗನದೊಳಿಹ ಖಗಸಂತತಿಯಳಿಯಲು | ಉಗುಳುತ ವಿಷದುರಿಯ || ೪೫೧ ||

ಉರಿವ ಮಹಾಸ್ತ್ರವ ತೆಗೆಯಲು ಕೌರವ | ಗಹಗಹಿಸುತಲಾಗ ||
ಅರಿಗಳ ಜಯವೀಶರದೊಳಗೆನ್ನುತ | ಲರಿದತಿ ತೋಷದಲಿ || ೪೫೧ ||

ಅತ್ತಲು ಪಾಂಡವಸೈನ್ಯದಿ ಭೀತಿಯು | ಹತ್ತಿತು ವಿಷದುರಿಗೆ |
ಚಿತ್ತದಿ ಭಯದೋರುತ್ತ ಯಮಜ ತಲೆ | ಗುತ್ತಿದನಾ ಕ್ಷಣಕೆ || ೪೫೨ ||

ಮರುತಜ ಸಾತ್ಯಕಿ ನಕುಲಾಂಕರು ಬಲು | ಉರುತರ ಭೀತಿಯಲಿ ||
ಇರುತಿರಲತ್ತಲು ಹೂಡಿದನಾ ಮಹ | ಶರವನು ತಿರುವಿನಲಿ || ೪೫೪ ||

**ಭಾಮಿನಿ**

ಹೂಡಿದನು ತಿರುವಿನಲಿ ಬಾಣವ |
ನೋಡಿ ಪಾರ್ಥನಗಳಕೆ ಸಮನವ |
ಮಾಡಿದನು ಕಲಿಕರ್ಣ ಸರ್ಪಾಸ್ತ್ರವನು ನಿಮಿಷದಲಿ ||
ನೋಡಿದನು ಶಲ್ಯನನು ಮಿಗೆ ಮಾ |
ತಾಡಿದನು ಕುರುಪತಿಯ ಪುಣ್ಯದ |
ಬೀಡು ಬೀಡುವರೆ ಕಾಣಲಿನ್ನಹುದೆಂದ ಕಲಿ ಕರ್ಣ |  || ೪೫೫ ||

ಏನು ಸಾರಥಿ ಸರಳು ಪಾಂಡವ |
ಸೇನೆಯನು ಗೆಲಲಹುದೆ ಪಾರ್ಥನ |
ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಬಹುದೆ ||
ಆನಲಮ್ಮುವರುಂಟೆ ನಿನಗಿದು |
ಸಾನುರಾಗವೆ ಹೇಳೆನಲು ರವಿ |
ಸೂನುವಿನ ಸರ್ಪಾಸ್ತ್ರವನು ಹೊಗಳಿದನು ಮಾದ್ರೇಶ | || ೪೫೬ ||

ಲೇಸನಾಡಿದೆ ಕರ್ಣ ಕೌರವ |
ನೀಸು ದಿನ ಸಾಕಿದ ಫಲವ ನೀ |
ನೈಸಲೇ ತೋರಿಸಿದವನು ಶಿವ ಶಿವ ಮಹಾದೇವ ||
ಏಸು ಕಾಳಗವಾದುವೀ ಕ |
ಟ್ಟಾಸುರದ ಶರವೆಲ್ಲಿ ಗುಪ್ತಾ |
ವಾಸವಾದುದೊ ಪೂತುರೆಂದನು ಶಲ್ಯನಿನಸುತನ |
ನೋಡಿದನು ಕಲಿ ಶಲ್ಯ ಮನದಲಿ |
ಮಾಡಿದನು ಬಲು ಶರದ ಪಾಯವ |
ಪಾಡು ತಪ್ಪಿತೆನುತ್ತ ಕರ್ಣನೊಳೆಂದನಾ ಕ್ಷಣದಿ  || ೪೫೭ ||

**ರಾಗ ಕೇದಾರಗೌಳ ಅಷ್ಟತಾಳ**

ಎಲೆ ಭಾನುಜಾತ ಕೇಳಸ್ತ್ರದ ಮಹಿಮೆಯ | ನೆಲೆಯರಿಯದೆ ಹೂಡಿದೆ ||
ನಳಿನಾಕ್ಷನಾತನ ರಥದೊಳಗಿಹ ನಿನ್ನ | ಗೆಲುವರೆ ಬಿಡುವನೇನೈ || ೪೫೮ ||

ಕೊರಳಿಗೆ ಹಿಡಿದರೆ ಮುಕುಟಕೆ ತಾಗುವು | ದುರಕಾಗಿ ಬೆಸಸಿದರೆ ||
ಶಿರವ ಕತ್ತರಿಸುವುದಿದುಸಿದ್ಧ ಬೇಗದಿ | ಮರಳಿ ನೀ ತೊಡು ಎಂದನು || ೪೫೯ ||

ನೀತಿಯ ಪೇಳ್ವರೆ ಕರೆದೇವೆ ನಾವ್ ನಿನ್ನ | ಸೂತ ಶೌನಕನೆ ನೀನು |
ಘಾತಕವೃತ್ತಿಯೊಳ್ ನಡೆಯುವಾತನೆ ನಾನು | ಮಾತುಗಳೊಂದೆಮಗೆ || ೪೬೦ ||

**ಭಾಮಿನಿ**

ಒಂದು ಶರಸಂಧಾನ ನಾಲಿಗೆ |
ಯೊಂದು ನಮ್ಮಲಿ ಕುಟಿಲವಿದ್ಯೆಗ |
ಳೆಂದು ಕಂಡೈ ಶಲ್ಯ ನಾವಡಿಯಿಡುವ ಧರ್ಮದಲಿ ||
ಇಂದು ಹೂಡಿದ ಶರವನಿಳುಹುವು |
ದಂದವೇ ನೀನರಿಯೆ ಹೊರಸಾ |
ರೆಂದು ತಿರುವಿನೊಳಂಬು ತೊಟ್ಟನು ಕರ್ಣನಾ ಕ್ಷಣದಿ || ೪೬೧ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಏನ ಹೇಳುವೆನರಸ ಪಾರ್ಥನ | ಮಾನಿನಿಯ ಸಿರಿತನಕೆ ಮತ್ತೆ |
ನ್ಯೂನವಹುದೆನ್ನುತ್ತ ವೈಮಾ | ನಿಕರು ಮರುಗೆ || ೪೬೨ ||

ಆನನದ ಕಟವಾಯಲೊಯ್ಯನೆ | ಜೇನಹಟ್ಟಿಯೊಳ್ ಬಸಿವ ವಿಷದಂ |
ತಾ ನರೇಂದ್ರನ ಅನುಜನಲ್ಲಿಗೆ | ಬರಲು ಭಟರು || ೪೬೩ ||

ಹಾ ವೃಕೋದರ ಹಾ ಧನಂಜಯ | ಹಾ ನಕುಲ ಸಹದೇವ ಧರ್ಮಜ |
ಹಾವಿನಗ್ನಿಗೆ ಹವಿಗಳಾದಿರೆ | ಎಂದು ಮರುಗೆ || ೪೬೪ ||

ಗರುಡಪಂಚಾಕ್ಷರಿಯ ಮಂತ್ರೋ | ಚ್ಚರಣೆಯಲಿ ರಕ್ಷೆಘ್ನಸೂಕ್ತವ |
ವಿರಚಿಸುತ ಮರಕತದ ಗುಟಿಕೆಯ | ಬಾಯೊಳಿರಿಸಿ || ೪೬೫ ||

ನೊಂದ ಧರ್ಮಜ ಮರುಗಿ ಶ್ರೀಗೋ | ವಿಂದ ನೀನೇ ಗತಿಯೆನುತ್ತಿರ |
ಲಂದು ಪಾರ್ಥನ ಕೊರಳ ಸರಿಸಕೆ | ಬಂದಿತಾಗ || ೪೬೬ ||

**ಭಾಮಿನಿ**

ಪೊಡವಿಪಾಲಕ ಕೇಳು ಪಾರ್ಥನ |
ಕೊರಳ ಸರಿಸಕೆ ಬರಲು ರಥವನು |

ಅಡಗಿಸಿದನೈದಂಗುಲವ ಧರಣಿಯಲಿ ಕಡಿವಡದು ||
ಹಿಡಿದು ಮುಕುಟವ ಕಚ್ಚಿ ಹಾಯಲು |
ಪೊಡವಿಗುದುರಿತು ವಜ್ರ ವೈಡೂ |
ರ್ಯಾದಿ ಗೋಮೇದಿಕ ಸುರತ್ನಾದಿಗಳು ಸರಕಟಿಸಿ || ೪೯೭ ||

**ಕಂದ**

ರತುನಗಳವನಿಗೆ ಬೀಳಲು |
ಸಿತತುರಗನ ತಲೆಯಿದೇ ಎನುತ್ತೆಂದಾಗಳ್ ||
ಪ್ರತಿಯಾಗಿಯೆ ಕಾಣಿಸೆ ತಾಂ |
ಮತಿಗೆಡುತಂ ಧರ್ಮಕುಮಾರಂ ಪ್ರಲಪಿಸಿದಂ || ೪೯೮ ||

**ರಾಗ ನೀಲಾಂಬರಿ ಆದಿತಾಳ**

ಶ್ವೇತವಾಹನ | ಶಶಿನಿಭಾನನ | ಭೂತನಾಥನು | ಮುನಿದನೇನಯ್ಯ ||
ಏತಕೀ ಮಹಾ | ಪಾಶುಪತಶರ | ಏತಕ್ಹಿಂಗಿತು | ಅನಲಧನುವಿದು || ೪೯೯ ||

ಮೃಡನ ಸಂಗಡ | ಕಾದಿ ಗೆಲಿದಿಹ | ಕಡು ಪರಾಕ್ರಮ | ವೆತ್ತ ಪೋದುದೋ ||
ಜಡಜಮಿತ್ರನ | ಸುತನ ಖಡುಗದಿ | ಮಡಿದೆಯಲ್ಲವೆ | ತಮ್ಮ ಅರ್ಜುನ || ೫೭೦ ||

ಅಡವಿಯೇ ಸುಖ | ನಮಗೆ ರಾಜ್ಯದ | ಗೊಡವೆ ಬೇಡ ನಾ | ನೆಂದೆ ನಿನ್ನೊಳು |
ಪೊಡವಿಯಾಳದ | ನೃಪನ ಸ್ವರ್ಗದಿ | ಬಿಡರು ದಾರಿಯ | ಎಂದೆಯಲ್ಲವೆ || ೫೭೧ ||

ಕಂದನೋರ್ವನ | ಕೊಲಿಸಿ ಕಡೆಯಲಿ | ಕೊಂದೆನನುಜನ | ಈಗಲಯ್ಯಯ್ಯೋ ||
ಮುಂದೆ ಕೌರವ | ನೃಪನ ಗೆಲಿದರೆ | ಸಂದ ಅರ್ಜುನ | ಮರಳಿ ಬರುವನೆ || ೫೭೨ ||

**ಭಾಮಿನಿ**

ಅನುಜನೋರ್ವನನಗಲಿ ತನ್ನಯ |
ತನುವ ಪೊರೆವೆನೆ ಶಿವ ಶಿವಕಟಾ |
ಎನುತ ಖಡುಗವ ಕೊಂಡು ಛೇದಿಪೆನೀಗ ತನ್ನಸುವ |
ಇನಸುತನಿಗೊಪ್ಪಿಸುವೆ ಜೀವವ |
ನೆನುತಲಿರೆ ಬಳಿಕಿತ್ತ ದ್ರುಪದಜೆ |
ಕನಲಿ ಕಂಗೆಡುತಯ್ದೆ ಬಂದಳು ನೃಪನ ಪೊರೆಗಾಗಿ || ೫೭೩ ||

**ಕಂದ**

ಕುಕ್ಷಿಯ ಬಾರಿಸುತಾ ಕಮ |
ಲಾಕ್ಷಿಯುಮತಿ ಚಿಂತೆಯಿಂದ ಶೋಕಿಸುತಂ ಮೇಣ್ ||

ದಕ್ಷಾತ್ಮಜೆಯರಸನೆ ನೀಂ |
ರಕ್ಷಿಸುವುದು ನಮ್ಮನೆಂದು ಮರುಗಿದಳ್ ತಾಂ || ೪೭೪ ||

**ರಾಗ ನೀಲಾಂಬರಿ ಏಕತಾಳ**

ಅಯ್ಯಯ್ಯೋ ಎನ್ನಯ ರಮಣ | ಅರಿಗಳಿಗಸಿಯಾಭರಣ |
ಕೈಯಾರೆ ಕೊಲಿಸದೆ ಎನ್ನ | ಪೋಪರೆ ಮೋಹನ್ನ || ೪೭೫ ||

ಧೈರ್ಯದಿ ನಿನ್ನೊಳ್ ಕಾದುವ | ವೈರಿಗಳಾರಿನ್ನಿಳೆಯೊಳು |
ಆರ್ಯಮಸುತನಿಗೆ ಸೋಲುವ | ಪರಿಯಾಯಿತೆ ಶಿವನೆ || ೪೭೬ ||

ಪಾಶುಪತಾಸ್ತ್ರವು ಬರಿ ಬಯ | ಲಾಸೆಗಳಾದುದೆ ಶ್ರೀ ಲ |
ಕ್ಷ್ಮೀಶನೆ ನಿನಗಲ್ಲದೆ ಇ | ನ್ನಾರಿಗೆ ಪೇಳುವೆನು || ೪೭೭ ||

ಪಾಸಟಿ ಕೌರವನೊಳಗೆ ವಿ | ನಾಶಗಳಾಗುವುದಾಯಿತೆ |
ಈ ಶೋಕವನ್ಯಾರಿಗೆ ಪೇಳುವೆ | ಹರಹರ ಕೇಶವ ಮಾಧವನೇ || ೪೭೮ ||

ಮರುತಜನೆಲ್ಲಿರ್ಪನೊ ಮಾದ್ರೀ | ಸುತರೇನಾದರೊ ವಿಧಿ ಪರಿ |
ಹರಿಸುವರಾರೀ ಶೋಕವನೆನು | ತೊರಲಿದಳಬುಜಾಕ್ಷಿ || ೪೭೯ ||

**ರಾಗ ಸಾವೇರಿ ಆದಿತಾಳ**

ಹರ ಹರ ಎನ್ನಯ ವಿಧಿಯೇ | ಅಯ್ಯಯ್ಯೋ |
ಸುರ | ವರರಿಗಿನಿತು ಪ್ರೀತಿಯಾಯ್ತೆ | ಅಯ್ಯಯ್ಯೋ ||
ಪುರುಷರೈವರಿರಲೇನಾಯಿ | ತಯ್ಯಯ್ಯೋ |
ಎನ್ನ | ಕೊರಳ ಕೊಯ್ದು ಪೋದಿರೇ ನೀ | ವಯ್ಯಯ್ಯೋ || ೪೮೦ ||

ಕಂದನಭಿಮನ್ಯುವಿರ | ಲಯ್ಯಯ್ಯೋ |
ಈ ಕುರು |  ವೃಂದವನುಳುಹಗೊಡುವನೆ | ಅಯ್ಯಯ್ಯೋ ||
ಮಂದಬುದ್ಧಿಯಾಯಿತಲ್ಲ | ಅಯ್ಯಯ್ಯೋ |
ನಾವು | ಇಂದು ಮೋಸಹೋದೆವಲ್ಲ | ಅಯ್ಯಯ್ಯೋ || ೪೮೧ ||

ಪುಟ್ಟಿ ದೇಹ ವ್ಯರ್ಥವಾದು | ದಯ್ಯಯ್ಯೋ |
ಮುಂದೆ | ಇಟ್ಟು ಬಾಳಿಕೊಂಡರೇನು ಸ್ವಾರ್ಥ | ಅಯ್ಯಯ್ಯೋ ||
ಥಟ್ಟನೆ ನಾ ವಿಷವ ಕೊಂಬೆ | ನಯ್ಯಯ್ಯೋ |
ಪ್ರಾಣ | ಬಿಟ್ಟರೆ ಲೇಸಿದು ತನಗೆ | ಅಯ್ಯಯ್ಯೋ  || ೪೮೨ ||

**ಭಾಮಿನಿ**

ಎಂದು ನಾನಾವಿಧದಿ ದುಃಖಿಸು |
ವಂದವನು ತಿಳಿದಾಗ ಮುರಹರ |
ನಂದು ದೂತನ ಹರಿಸಿ ಸಂತೈಸಿದನು ಧರ್ಮಜನ ||
ಚಂದವಾದುದೆನುತ್ತ ದ್ರುಪದನ |
ನಂದನೆಗೆ ಧೈರ್ಯವನು ತಿಳುಹಿಸ |
ಲಂದು ಗಮಿಸಿದನಸುರ ರಿಪುವಿದ್ದೆಡೆಗೆ ವೇಗದಲಿ || ೪೮೩ ||

**ವಾರ್ಧಕ**

ಧರಣಿಪತಿ ಕೇಳಿತ್ತಲಚ್ಯುತಂ ಪಾಂಡವರ |
ಹರುಷಮಂಗೊಳಿಸುತಿರಲತ್ತಲಂದುರಗಾಸ್ತ್ರ |
ಮರಳಿ ಬಂದುದು ಪುರಾಕೃತ ವೈರದಿಂದಿನಜನಿರುವಲ್ಲಿಗಾ ಕ್ಷಣದೊಳು ||
ಅರಿಕೆಯಿನ್ನೊಂದುಂಟು ತೊಡು ಮರಳಿ ಬೇಗದಿಂ |
ಪರಿಕಿಸರ್ಜುನನ ಶಿರ ಕಡಿವೆನೆಂದೊರೆಯಲನಿ |
ತರೊಳು ರವಿಸೂನು ತಾ ಬೆರಗಾಗಿ ನೋಡುತಿರೆ ಮಾದ್ರೇಶನಿಂತೆಂದನು || ೪೮೪ ||

**ಕಂದ**

ಕರ್ಣನೆ ಕೇಳೀ ಶರ ಮಗು |
ಳಿನ್ನೊಮ್ಮೆ ತೊಡು ಎಂದು ಬೇಡುತಿದೆ ಬೆಸನಂ ||
ನಿನ್ನೊಳಗನುಮಾನವಿದೇ |
ಕಿನ್ನದ ತೊಡು ಬೇಗದೊಳೀ ಮಹಾಹಿಶರಮಂ || ೪೮೫ ||

**ರಾಗ ಕಾಂಭೋಜಿ ಝಂಪೆತಾಳ**

ಕೇಳು ಮಾದ್ರಾಧೀಶ ನೀನೆಂಬ ವಚನವನು | ಕೇಳಿ ಸಂತಸವಾದುದೆನಗೆ ||
ಲೋಲಲೋಚನ ರಾಮನಾಳ್ವ ಕಾಲದಲಿ ಬಹು | ಖೂಳ ರಕ್ಕಸರನುರೆಗೆಲಿದು || ೪೮೬ ||

ಮರಳಿ ಬಹ ಬಾಣಗಳೊಳಾರು ನೀನೀ ವಿಶಿಖ | ಅರುಹಬೇಕೆನಲುಮವನೆಂದ ||
ಸುರಪತಿಯ ಖಾಂಡವವನದೊಳಿರಲು ತಾನಲ್ಲಿ | ಉರಗಪತಿ ತಾನಶ್ವಸೇನ || ೪೮೭ ||

ಒಂದು ದಿನವಾ ವನವನುರಿಗೊಳಿಸಲರ್ಜುನನು ಅಂದು ಭಯದಿಂ ಪಾಯ್ದುತಿರಲು ||
ಕೊಂದನೀ ಪಾಪಿ ಅರೆಗಡಿದೆನ್ನ ನಾನವನಿ | ಗೆಂದ ಭಾಷೆಯ ಕೇಳು ನೀನು || ೪೮೮ ||

ಧರಣಿಯೊಳಗುಳ್ಳ ವೀರರ ಸೇರಿ ಸರಳಾಗಿ | ಕೊರಳ ಕತ್ತರಿಪೆನೆಂದೆಂಬ ||
ಇರುವ ಭಾಷೆಗೆ ನರನ ಶಿರವನವನಿಗೆ ಕೆಡೆವೆ | ಹರಿಸೊಮ್ಮೆ ಎನಲುಮವನುಸಿರ್ದ || ೪೮೯ ||

**ಭಾಮಿನಿ**

ಮರುಳೆಲಾ ಎಲೆ ವಿಶಿಖ ನಾನೀ |
ಪರರ ಹಂಗಿಲಿ ಗೆಲುವ ಕರ್ಣನೆ |
ಅರಿಗೆ ವೈರಿಯು ನೀನು ನಿನ್ನನು ತೊಡುವುದಿಲ್ಲೆಂದ ||
ಮರುಗಿದನು ಶಲ್ಯನು ನೃಪಾಲನ |
ನಿರಿದೆಯೋ ರಾಧೇಯ ಕುರುಪತಿ |
ಕರೆದು ನಿನ್ನನು ಸಾಕಿದಕ್ಕುಪಕಾರವಾಯ್ತೆಂದ || ೪೯೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ನಿನ್ನನು ಜಗವರಿಯೆ ಕ | ಬ್ಬಿಲರ ಮಗನನು ತಂದು ವಂಚಿಸಿ |
ಕುಲಜನನು ಮಾಡಿದಕೆ ಕಡೆಯಲಿ | ಫಲವ ತೋರ್ದೆ || ೪೯೧ ||

ನೆಲನು ಹೊರುವುದೆ ಪಾಪಿ ಕೀರ್ತಿಯ | ಬೆಳಸು ಮಾಸಿದರುಂಟೆ ಸಾಕಿದ |
ಹೊಲೆಯನಾದರು ಹರಿಬಕೊದಗದೆ | ಉಳಿವನೇನ್ಯೆ || ೪೯೨ ||

ಏನೆಲವೊ ವಿಶ್ವಾಸಘಾತಕ | ನೀನು ರಣಕಂಜುವರೆ ಸ್ವರ್ಗದ |
ಮಾನಿನಿಯ ರತಿಸುಖವ ಕೆಡಿಸಿದೆ | ಯೆನುತುಸುರ್ದ || ೪೯೩ ||

**ಭಾಮಿನಿ**

[ಮಾತೆಗಿತ್ತೆನು ಭಾಷೆಯನು ತವ |
ಜಾತರೊಳಗೈವರನು ರಣದಲಿ |
ಘಾತಿಸದೆ ನಾಂ ಕಾಯ್ವೆನೆಂಬಾ ಮಾತಿಗೋಸುಗವೆ ||
ಸೋತವನು ತಾನೀಗ ಪಾರ್ಥನ |
ಖಾತಿಗೊಪ್ಪಿಸಿ ಕಳೆವೆ ತನುವನು |
ಭೀತಿ ಬೇರಿಲ್ಲೆನಲು ಕಿಡಿಕಿಡಿಯಾದನಾ ಶಲ್ಯ || ೪೯೪ ||]

ನಂಬಿ ಹಿಡಿದರೆ ನದಿಯ ಮಗ ಹಗೆ |
ಯಂಬಿಗಿತ್ತನು ಕಾಯವನು ಸುತ |
ನೆಂಬ ನೆವದಲಿ ತನುವ ಬಿಸುಟನು ಗರಡಿಯಾಚಾರ್ಯ ||
ಅಂಬು ಬೆಸನವ ಬೇಡಿದರೆ ತೊಡೆ |
ನೆಂಬ ಛಲ ನಿನಗಾಯ್ತು ಮೂವರ |
ನಂಬಿ ಕೌರವ ಕೆಟ್ಟನಕಟಕಟೆಂದನಾ ಶಲ್ಯ | || ೪೯೫ ||

**ಕಂದ**

ಚಮ್ಮಟಿಕೆಯನಲ್ಲಿಯೆ ಬಿಸು |
ಟುಮ್ಮಳಿಸುತ ರಥವನ್ನಿಳಿದಾ ಕ್ಷಣ ಶಲ್ಯಂ ||

ದುಮ್ಮಾನದೊಳಡಹಾಯ್ದಹಿ |
ಧರ್ಮಾನುಜನೀಕ್ಷಿಸೆಂದಂ ಮಾರಜನಕಂ || ೪೯೬ ||

**ರಾಗ ಸಾಂಗತ್ಯ ರೂಪಕತಾಳ**

ಕೇಳಯ್ಯ ಪಾರ್ಥ ನೀ ಖಾಂಡವವನವನುರಿ | ಗೊಳಿಸುವ ಸಮಯದೊಳೀತ ||
ನಿಳಯದಿಂದಭ್ರಕ್ಹಾರುವ ವೇಳೆಯಲಿ ಬಾಣ | ಸೆಳೆದು ತುಂಡಿಸಿದರ್ಧ ದೇಹ || ೪೯೭ ||

ನಿನ್ನ ತಲೆಯ ಕಚ್ಚಿ ಕೊಲುವೆನೆಂಬ ಭಾಷೆ | ಯನ್ನು ತಾಳಿದು ಕರ್ಣನಲ್ಲಿ ||
ಪನ್ನಗಶರವಾಗಿರಲು ಆತನು ಪೂಡೆ | ಯೊಮ್ಮೆ ನಾ ಕಾಯ್ದೆನಿಂದಿನಲಿ || ೪೯೮ ||

ಮರಳಿ ಬಂದೊಮ್ಮೆ ನೀ ತೊಡು ಎಂದು ಕರ್ಣನೊಳ್ | ಶಿರವ ಕತ್ತರಿಸುವೆನೆನಲು ||
ಪರರ ಹಂಗಿಲಿ ಗೆಲ್ವ ಭಟನಲ್ಲ ತಾನೆಂದು | ಮರಳಿ ನೂಕಿಸಿ ಬಿಟ್ಟು ಕಳೆದ || ೪೯೯ ||

ತೊಡು ಬೇಗ ಬಾಣವನೆನಲು ಮುಕ್ಕಡಿಯಾಗಿ | ನಡುವೆ ಖಂಡಿಸಿದನಾ ಕ್ಷಣದಿ ||
ಅಡಗಿದುದಾ ಶರವಲ್ಲಿಯೆ ಮುಂದಣ | ನಡೆದ ಸಂಗತಿ ಕೇಳು ಭೂಪ || ೫೦೦ ||

**ಭಾಮಿನಿ**

ಧರಣಿಪತಿ ಕೇಳಿತ್ತ ಮಾದ್ರಾ |
ವರ ಜನಪನಡಹಾಯ್ದನತ್ತಲು |
ತರಣಿ ಸುತನಳುಕುವನೆ ಕೊಂಡನು ದಿವ್ಯ ಮಾರ್ಗಣವ ||
ಹರಿಗೆ ಐವತ್ತೆಂಟು ಮೇಲಿನ |
ಮರುತಜನಿಗೆಂಭತ್ತು ಮುಂದಣ |
ತುರಗಚಯಕೈವತ್ತು ಶರಗಳನೆಚ್ಚು ನರಗೆಂದ || ೫೦೧ ||

**ರಾಗ ಭೈರವಿ ಅಷ್ಟತಾಳ**

ಎಲವೋ ಪಾರ್ಥನೆ ನೀ ಕೇಳೊ | ಆಕಳಿಗೆ ಹೆ | ಬ್ಬುಲಿಯಂಜಲುಂಟೆ ಪೇಳೊ ||
ತಿಳಿಯಬಹುದು ಹಿಂದಣಂತಲ್ಲ ಸಮರದ | ಬಲುಮೆಯ ನೋಡೆಂದನು || ೫೦೨ ||

ನೋಡಿದೆ ಮೊದಲು ನಾನು | ನಿಮ್ಮರಸನ | ಜೋಡಾಗಿ ಬಿಗಿದುದನು ||
ಗಾಢದಿ ಖೇಚರರವರೊಳು ಕಾದಿ ಹೊ | ಯ್ದಾಡಿದಾತನು ನೀನೆಲೈ || ೫೦೩ ||

ಇಷ್ಟು ಮಾತುಗಳಾರೊಳು | ಪೇಳುವರೆದೆ | ಮುಟ್ಟಿ ನೋಡಿಕೊ ನಿನ್ನೊಳು ||
ನೆಟ್ಟನೆ ಇದಿರಾಗೆನುತ್ತಲೆ ಶರಗಳ | ವೃಷ್ಟಿಯ ಸುರಿದನಂದು || ೫೦೪ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಸೂತನುಣಗ ಕೇಳು | ಹುಲು ಶರಂಗಳಿಂ |
ಗೆಲುವುದಲ್ಲದಿರಲು ನೋಡು | ದಿವ್ಯ ಶರಗಳಿಂ || ೫೦೫ ||

ಎನಲು ಕೇಳುತಾಗ ಕರ್ಣ | ಕುಲಿಶ ಶರವನು ||
ಕನಲುತೆಚ್ಚನಾಗ ವಿಜಯ | ಕಡಿದು ಬಿಸುಟನು || ೫೦೬ ||

ಮತ್ತೆ ಪ್ರಾಸಪರಿಘ ಪಟ್ಟಿ | ಸಾಯುಧಂಗಳ ||
ಒತ್ತಿ ಬಿಡಲು ಕಡಿದನಾಗ | ನೈಂದ್ರಶರದೊಳು || ೫೦೭ ||

**ವಾರ್ಧಕ**

ಧರಣಿಪತಿ ಕೇಳು ಕರ್ಣಾರ್ಜುನರ ಸಮರದಿಂ |
ದರುವತ್ತು ಕೋಟಿ ಕರಿತುರಗರಥಸಾಲ್ಗಳಿಂ |
ದೊರಸಿ ನೂರೆಂಬತ್ತುಸಾವಿರ ನೃಪಾಲರಂ ಸವರಿದಂ ಸೈನಿಕರನು ||
ಅರುಣಾಂಬುವಿನ ಹೊಳೆಯ ಮಧ್ಯದಿಂ ಚೋದ್ಯದಿಂ |
ಸರಕಟಿಸಿ ಬೀಳ್ವ ಶವದೋಟದಿಂ ಕೂಟದಿಂ |
ನರಿ ಹದ್ದು ಕಾಗೆ ನಾಯ್ ಹರಿವುದಂತರಿವುದಂ ಏನೆಂಬೆನಚ್ಚರಿಯನು || ೫೦೮ ||

**ಭಾಮಿನಿ**

ಇಂತು ಸಮರದಿ ಸುರಿವ ರಕುತದಿ |
ದಂತಿ ಮುಳುಗುವ ತೆರದಿ ಕೆಸರುಗ |
ಳಾಂತು ಧರಣಿಯೊಳ್ ನಿಂತುದಾ ವರ ರಥವು ಕಣನೊಳಗೆ ||
ಪಂಥದಲಿ ರಥದಚ್ಚು ಕೀಲ್ಗಳ |
ನಾಂತು ಕೀಳುವ ರವಿಜನಧಟನು |
ನಿಂತು ನೋಡುತ ಕೃಷ್ಣ ಪಾರ್ಥನೊಳೆಂದ ನಸುನಗುತ || ೫೦೯ ||

**ರಾಗ ಘಂಟಾರವ ಆದಿತಾಳ**

ಕೇಳಯ್ಯ ಪಾರ್ಥ ನೀ ವೈರಿ ಕರ್ಣನ ಕೊಲುವ |
ವೇಳೆಯದೀಗ ನೋಡು ತೊಡು ದಿವ್ಯ ಶರವ || ೫೧೦ ||

ತಡವ ಮಾಡದೆ ಬೇಗ ಇಳುಹು ಮಸ್ತಕವನ್ನು |
ಪೊಡವಿಪಾಲರ ಕೆಲಸ ಹಿಡಿ ಗಾಂಡೀವವನು || ೫೧೧ ||

ರಥವ ಸಂತಯಿಸಿ ಕೊಂಡಳವಿಗೊಟ್ಟರೆ ಮತ್ತೆ |
ಹುತವಾಹನಯ್ಯನೊಳ್ ತೀರದು ನೋಡು || ೫೧೨ ||

ನೋಡಿದೇನೈ ರಥಹೀನನೊಡನೆ ಬಾಣ |
ತೊಡುವುದೆ ಕ್ಷತ್ರಿಕುಲ ಧರ್ಮವೇನಯ್ಯ || ೫೧೩ ||

ಶರಹೀನ ರಥಹೀನನಾಗಿ ಶರಧಿಯೊಳು |
ಮುಳುಗುವನೊಳು ತೊಡೆ ಗಾಂಡೀವವನು || ೫೧೪ ||

ಏತಕೆ ಸಂದೇಹ ಹೊಡೆ ಮಸ್ತಕವನೆನೆ |
ಮಾತ ಕೇಳುತ ಕರ್ಣ ನುಡಿದನು ನರಗೆ || ೫೧೫ ||

**ಭಾಮಿನಿ**

ಕಲಿ ಕಿರೀಟಿಯೆ ಕೇಳು ನೀ ಸೈ |
ರಿಸುವುದೊಂದರೆಗಳಿಗೆ ಮಾತ್ರದಿ |
ನೆಲನೊಳಡಗಿಹ ರಥವನೆಬ್ಬಿಸಿಕೊಂಡು ನಾನೀಗ ||
ಅಳವಿಗೊಡುವೆನು ಮತ್ತೆ ಅನಕರ |
ನಿಲಿಸು ಗಾಂಡೀವವನು ಎನುತಿರೆ |
ನಳಿನಸಖಸುತನೊಡನೆ ಕೃಪೆ ಸಂಜನಿಸಿತರ್ಜುನಗೆ || ೫೧೬ ||

**ಕಂದ**

ದ್ವೇಷವಡಗಿಯಾತನೊಳಭಿ |
ಲಾಷೆಯಿಂದಲಾ ಮಧುಸೂದನನೊಳಾಗಂ ||
ಮೋಸದಿ ಕೊಲಿಸದೆ ಕರ್ಣನ |
ಈ ಸಮಯದೊಳಾರೆಂಬುದನುರುಹೆನಗೆಂದಂ || ೫೧೭ ||

**ರಾಗ ಮಧ್ಯಮಾವತಿ ಆದಿತಾಳ**

ಯಾದವೋತ್ತಮ ಲಾಲಿಸಿ ಕೇಳು | ಈ | ರಾಧೇಯನಾರೆಂಬ ನಿಜವನು ಪೇಳು  || ಪ ||

ಕುಂತಿಯುದರದಲಿ ಜನಿಸಿದವನೊ ಎಂಬ | ಅಂತರ್ಭಾವದೊಳೀಗ ಸಂಶಯವಾಗಿದೆ ||
ದಂತೀಶನಿಗೆ ರಾಜ್ಯ ಬಿಟ್ಟು ನಾವೈವರು | ಸಂತೋಷದಲಿ ವನವ ಚರಿಸುತ್ತಲಿಹೆವು || ೫೧೭ ||

ಅರಸ ಧರ್ಮಜನಂತೆ ವರ ವೃಕೋದರನಂತೆ | ಪರಿಕಿಸಲೊಂದಾಗಿ ತೋರುವುದೆನಗೆ ||
ಸರಸಿಜಾಕ್ಷನೆ ನೀನು ಕರ್ಣನ್ಯಾರೆಂಬುದ | ನರುಹು ನಿಶ್ಚಯವನ್ನು ವರ ದಯಾಸಿಂಧು || ೫೧೮ ||

ಬಿಸುಟು ಹೋದನು ರಥವ ಸಾರಥಿ ಮೊದಲೆ | ವಸುಧೆಯೊಳಡಗಿತು ರಥವು ಮತ್ತವಗೆ ||
ನಿಶಿತಮಾರ್ಗಣವಿಲ್ಲ ಕೈಯೊಳಗಾತಗೆ | ಅಸುರಾರಿ ಕರ್ಣನ ಕೊಲುವವತಾನಲ್ಲ || ೫೧೯ ||

ಬಳಿಕಾ ಭೀಮಾದಿಗಳೆಲ್ಲರ ಮನದಲಿ | ಸುಳಿದುದು ಸಂದೇಹವಾಯಿತೆಮಜಗೆ ||
ಅಳುಕಿ ದ್ರೌಪದಿ ಮನದೊಳಗೆ ಸಂತಾಪದಿ | ಕಳವಳಗೊಳುತಿರ್ದರೆಲ್ಲರಾಚೆಯಲಿ || ೫೧೦ ||

**ರಾಗ ಸಾವೇರಿ ಅಷ್ಟತಾಳ**

ಕೇಳಯ್ಯ ಪಾರ್ಥ ನೀನೆಂಬ ಮಾತ | ಕೇಳಿ ಸಂತಸವಾಯಿತಯ್ಯ ಪ್ರಖ್ಯಾತ || ಪ ||
ಖೂಳ ಕೌರವನ ತಂಬುಲಕೆ | ತಾನು | ಓಲಗಿಸುತಲಿಹನದಕೆ ||
ಕಾಲದೆಕ್ಕಡವನ್ನು ಪಿಡಿವ ಕರ್ಣಗೆ ಸಮ | ಹೋಲಿಸಬಹುದೆ ನೀನು ||
ಧರ್ಮಜನನ್ನು | ಕಾಲಲಿ ತುಳಿದವನು || ನೀನಾತನ | ಪೊಗಳುವುದೇನಿನ್ನು || ೫೧೧ ||

ಲಂಡಿಗಳಂತೆ ಮರೆಯಲಿ | ನಿಂತು | ಕೊಂಡನೀ ಖಳ ಬೆಂಗಡೆಯಲಿ ||
ತುಂಡಿಸಿದನು ತೋಳೆರಡಭಿಮನ್ಯುವ | ದಿಂಡುಗೆಡಹಿದವನು ||
ಆತನ ಜೀವ | ಗೊಂಡ ಅಧಮನಿವನು || ಪೋಗಲಾ ಮಾತ | ಕಂಡುದನಾಡಿದೆನು || ೫೧೧ ||

ನಿನಗೆ ತೀರದೆ ಪೋದರೇನು | ಬಿಡು | ಅನಿಲಸಂಭವನೊಡನಾನು |
ಜನಜನಿತದಿ ಕೊಂದು ಕೆಡಹಿ ಕೌರವನಾಳ್ವ | ವನಿಯನು ಧರ್ಮಜಗೆ ||
ಪಟ್ಟವ ಕಟ್ಟಿ | ಯೊಲವಿನಿಂ ಸುಖದೊಳಗೆ || ಪಾಲಿಸುವಂತೆ | ಮಾಡುವೆ ಕ್ಷಣದೊಳಗೆ || ೫೧೩ ||

**ಭಾಮಿನಿ**

ಹರಿಯ ನುಡಿಯನು ಕೇಳಿ ಫಲಗುಣ |
ನುರಿವ ಕರ್ಬೊಗೆಯಿಂದ ನಾಸದೊ |
ಳುರುಳಿದುದು ಕೆಂಗಿಡಿಯು ಕಣ್ಣಿನೊಳಾಗ ಫಲುಗುಣನ ||
ನರಕರಿಪು ಬಿತ್ತಿದನು ವರ್ಮದ |
ಭರಿತ ಬೀಜವನೆಲೆ ಮಹೀಪತಿ |
ಪುರವಿನಾಶನೆ ಬರಲಿ ಬಗೆವೆನೆ ಕರ್ಣಗಿರ್ಣರನು || ೫೧೪ ||

**ಕಂದ**

ಆ ಸಮಯದೊಳಿತ್ತ ಮಹೋ |
ಲ್ಲಾಸದೊಳಿನಜಾತನೆಬ್ಬಿಸುತ್ತಲೆ ರಥಮಂ ||
ವಾಸವಸುತನೊಡನಾ ಕ್ಷಣ |
ತಾ ಸಂಗ್ರಾಮಕನುವಾದನೇಂ ಸಾಹಸಿಯೋ || ೫೧೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹಿಡಿ ಧನುವನನುಮಗು ಸಾಕಿ | ನ್ನೆಡಬಲವ ನೋಡದಿರೆನುತ್ತವ |
ತುಡುಕಿದನು ಕೂರಂಬ ಪಾರ್ಥನ | ಸರಿಸಕಾಗ || ೫೧೬ ||

ಘುಡುಘುಡಿಸಿ ಕಲಿ ಪಾರ್ಥ ಕಲ್ಪದ | ಕಡಲರವವೆಂಬಂತೆ ಗರ್ಜಿಸು |
ತೊಡನೆ ಬಾಣವನುಗಿದಕವಧಿಯ | ಕಾಣೆನಿನ್ನು || ೫೧೭ ||

ತೊಡುವ ಬಿಡುವಂಬುಗಳನನಿತರೊಳ್ | ಕಡಿವನವನಿವನೇಂ ಸಮರ್ಥನೊ |
ಪೊಡವಿಪತಿ ಕೇಳ್ ಹಿಂದೆ ರಾಘವ | ರಾವಣನ್ನ || ೫೧೮ ||

ಕದನಕಿದು ಪೊಸತಾಯಿತಿಬ್ಬರ | ವರ ಮಹಾಸಂಗ್ರಾಮವೆನುತದ |
ನರಿದು ಮುರಹರನಿಳಿದು ರಥದಿಂ | ಪೊರಟನಾಗ || ೫೧೯ ||

**ಭಾಮಿನಿ**

ಹಾನಿದೋರಲ್ಕರಿತು ನೃಪ ನಿ |
ನ್ನಾನೆ ಕುಸಿದುದು ಕೇಳು ಕೊಳುಗುಳ |
ಕಾನುವಡೆ ಕೈಕಾಲು ನಡುಗಿತು ಧೈರ್ಯಸಿರಿ ತೊಲಗಿ ||
ಹೀನನಾದೆನು ಕೌರವೇಶ್ವರ |
ಗೇನು ಗತಿಯೊ ಹರ ಮಹಾದೇ |
ವೀ ನಿರೋಧಕೆ ಕಾದೆನೆಂದೆನುತಳಲಿದನು ಕರ್ಣ || ೫೨೦ ||

**ರಾಗ ಸಾವೇರಿ ಏಕತಾಳ**

ಶಿವ ಶಿವ ಸಮರದೊಳು | ಕೈಸೋತೆನಲ್ಲೋ | ಭುವನೇಶ ಮಮತೆಯೊಳು ||
ಕುವರನಂದದಿ ಎನ್ನನು | ಆಪತ್ತಿಗಾ | ಗುವನೆಂದು ಸಲಹಿದನು || ೫೨೧ ||

ಕೀಳುವಂಶಜನೆಂಬುದ | ಗ್ರಹಿಸದೆ ಗುಣ | ಶೀಲನೆನ್ನುತ ಪೊರೆದ ||
ಕಾಳಗದೊಳು ಮಡಿದ | ಬಂಧುಗಳೆನ್ನ | ಮೇಲಾಸೆಯಿಂದ ಮರೆದ || ೫೨೨ ||

ಎನ್ನ ಕುಲವ ಕೃಷ್ಣನು | ಎಚ್ಚರಿಸಿ ತಾ | ಎನ್ನೊಡೆಯನ ಕೊಂದನು ||
ಇನ್ನೆಂತು ಕೌರವನ | ಅಗಲುವೆನಾತ | ಗೆನ್ನಂಥ ಮಿತ್ರರಾರಿನ್ನು || ೫೨೩ ||

ಚೆಲುವನ ಗುಣವ ಪೇಳಿ | ತುದಿಗಾಣೆನಯ್ಯೋ | ತಲೆಯ ರಣಾಗ್ರದಲಿ ||
ಸಲಹಿದಾತನ ಕಾರ್ಯದಿ | ಒಪ್ಪಿಸಲೆನ | ಗೊಲಿವನಚ್ಯುತ ಶೀಘ್ರದಿ || ೫೨೪ ||

**ಭಾಮಿನಿ**

ಆ ಸಮಯದಲಿ ಹರಿಯು ಭೂಸುರ |
ವೇಷವನು ತಾಳ್ದೊಡನೆ ಘನ ಸಂ |
ತೋಷದಿಂ ಪೊಗಳುತ್ತ ಕರ್ಣನ ಬಳಿಗೆ ನಡೆತಂದ ||
ಏಸು ಕೀರ್ತಿಯೊ ನೀನು ಜಗದಲಿ |

ಮಾಸಲಳಿಯದ ತ್ಯಾಗಿಯೆಂಬುದ |
ನೋಸರಿಸಿ ನಾ ಬಂದೆನೀವುದು ಎನ್ನ ಮನದಿರವ || ೫೩೫ ||

**ಕಂದ**

ಭೂಸುರ ಕೇಳೀ ವೇಷಗ |
ಳೇಸು ವಿಚಿತ್ರಂ ಬಲ್ಲೆನು ಎಲ್ಲವ ನಾಂ ||
ಸೂಸೆನನೃತವಾ ರಣದಾ |
ಯಾಸದಿ ನಾನೀಗ ಕೊಡುವುದೇನ್ ನಿನಗೆಂದಂ || ೫೩೬ ||

**ರಾಗ ತೋಡಿ ಅಷ್ಟತಾಳ**

ಭೂಸುರ ಕೇಳು ಸಿಂಹಾಸನದೊಳಿರುವಾಗ | ಬಂದು ಕೇಳಿದ ಜನರಿಗೆ ||
ಕಾಸು ಕನಕ ಭೂಮಿ ಗೋವುದಾನಂಗಳ | ನೇಸರ ಕೊಡಬಹುದು || ೫೩೭ ||

ಈಗ ಖಾಡಾಖಾಡಿ ಯುದ್ಧ ರಣಾಗ್ರದಿ | ಬೇಡಿದ ಕೊಡುವೆನೆಂತು |
ಯೋಗ ಇನ್ನೇನೆಂಬೆ ಮನಕೆ ಬಂದುದ ಬೇಡು | ಕೊಡುವೆ ನಾನೀಗದನು || ೫೩೮ ||

ಕೊಡುವುದಾದರೆ ಕರ್ಣಕುಂಡಲವೆರಡನ್ನು | ಕೊಡು ಧಾರೆಯೆರೆದು ನೀನು ||
ನುಡಿದ ಮಾತಿಗೆ ನೀರನರಸಲು ಕರ್ಣನೊಳ್ | ನುಡಿದನು ಮುರಹರನು || ೫೩೯ ||

ಉದಕವ ಹೊರಗರಸುವುದೇಕೆ ನಿನ್ನಯ | ಹೃದಯಕಮಲದೊಳಿಹ |
ಉದಕದಿ ಧಾರೆಯೆರೆದು ಕೊಡು ಎನಲಾತ | ಹರುಷದಿ ನಸುನಕ್ಕನು || ೫೪೦ ||

**ಭಾಮಿನಿ**

[ತಂದೆ ಮಿತ್ರನು ಬಲ್ಲನಿದರನು |
ಇಂದುಮುಖಿ ತಾಯ್ ಕುಂತಿ ಬಲ್ಲಳು |
ಮಂದರಾಧರನೊಬ್ಬ ಬಲ್ಲನು ಹೊರತು ಬೇರುಂಟೆ ||
ಇಂದು ಎನ್ನಯ ಪ್ರಾಣ ತೆಗೆವರೆ |
ಬಂದನೀ ಮುರಹರನೆನುತ ಮನ |
ನೊಂದು ಚಿಂತಿಸುತಕಟ ದ್ವಿಜ ನೀನಾರು ಹೇಳೆಂದ || ೫೪೧ ||]

ಮಾತೆ ಬಲ್ಲಳು ಬಾರಳೀ ತೆರ |
ತಾತ ಬಲ್ಲನು ಕೇಳನಿದ ಶ್ರೀ |
ನಾಥ ಬಲ್ಲನು ಬಂದನೀತನೆನುತ್ತ ಯೋಚಿಸಿದ |
ಹರಿಗಿದರ್ಪಿತವಾಗಲೊಂದೇ |
ಮನದಿ ತನ್ನಯ ತನುವ ಸರಳಲಿ |
ಸೀಳಿ ತೆಗೆದನು ಪರಮಹರುಷದಿ ನಿರ್ಮಲೋದಕವ || ೫೪೨ ||

ಎರೆದು ಧಾರೆಯನಿತ್ತು ಕುಂಡಲ |
ವೆರಡನರ್ಚಿಸಿ ಕೊಟ್ಟು ಭಕ್ತಿಯೊ |
ಳಿರದೆ ಕರಗಳ ಮುಗಿದು ಮುಕ್ತಿಯನೀಯಬೇಕೆಂದ || || ೫೪೩ ||

**ಕಂದ**

ಭಕ್ತಿಯೊಳೀತನ ಪೋಲುವ |
ಭಕ್ತರನುಂ ನಾನೆ ಕಾಣೆನೀ ಧಾರಿಣಿಯೊಳ್ ||
ಮುಕ್ತಿಪ್ರದಾಯಕ ಹರಿ ನಿಜ |
ಮೂರ್ತಿದರುಶನವಿತ್ತನೇಂ ಸುಕೃತಿಯೋ ಕಲಿ ಕರ್ಣಂ || ೫೪೪ ||

**ವಾರ್ಧಕ**

ಜಯ ಸುಮನಸೋದ್ಧಾರ ಜಯ ಶರಧಿಗಂಭೀರ |
ಜಯ ದೇವ ದೇವೇಶ ಜಯ ಭವವಿನಾಶ ಜಯ |
ಜಯ ಚಿದಾನಂದ ಜಯ ದೇವಕೀಕಂದ ಜಯ ಜಯ ನಮೋ ಜಯ ಮುಕುಂದ ||
ಜಯ ಕಮಲಭವತಾತ ಜಯ ರಮಾ ಸುಪ್ರೀತ |
ಜಯ ಕೋಟಿಶಶಿಕಿರಣ ಜಯ ಕೌಸ್ತುಭಾಭರಣ |
ಜಯ ಪಾಂಡುಸುತಪಕ್ಷ ಜಯ ಕಂಸಖಳಶಿಕ್ಷ ಜಯ ಜಯೆಂದೆರಗಿರ್ದನು || ೫೪೫ ||

**ರಾಗ ನೀಲಾಂಬರಿ ಏಕತಾಳ**

ಕೇಳು ಮುರರಿಪು | ಕಮಲಲೋಚನಾ | ತಾಳಲಾರೆನು | ಸರಳಿನುರಿಯನು || ೫೪೬ ||
ಒಡಲು ಸುಡುತಿದೆ | ತಾಪ ಹೆಚ್ಚಿದೆ | ಕಡಲಶಯನನೇ | ಕಾಯೊ ಕರುಣದಿ || ೫೪೭ ||
ಭಕ್ತವತ್ಸಲಾ | ಮುಕ್ತಿದಾಯಕಾ | ಶಕ್ತಿರೂಪನೇ | ಶೇಷಶಯನನೇ || ೫೪೮ ||

**ಭಾಮಿನಿ**

ಹರಿಯ ಮಾಯವನರಿವರಾರೀ |
ಸುರನರೋರಗರೊಳಗೆ ಕರ್ಣನ |
ಸಿರಿಯ ಸೊಬಗಿಲಿ ಮೆರೆವ ಕುಂಡಲಗಳನೆ ಅಪಹರಿಸಿ ||
ತಿರುಗಿದನು ನರನಲ್ಲಿಗಾ ಮುರ |
ಹರನ ಬರವನು ಕಾಣುತರ್ಜುನ |
ಕರವ ಮುಗಿದೊಡೆ ಎತ್ತಿ ತೋರ್ದನು ಕುಂಡಲದ್ವಯವ || ೫೪೯ ||

**ರಾಗ ಸುರುಟಿ ಆದಿತಾಳ**

ಕೇಳರ್ಜುನ ನೀನು | ಸುಮ್ಮನೆ | ವೇಳೆಗಳೆವರೇನು ||
ಬಾಳಲೋಚನನಿತ್ತಸ್ತ್ರಕೆ ಬಳುವಳಿ | ಪಾಲಿಸಿದಗಜೆಯ ಶರವನು ನೀನು || ೫೫೦ ||

ತೊಡು ಅಂಜನಶರವ | ಬೇಗದಿ | ಕಡಿ ಕರ್ಣನ ಶಿರವ |
ಮೃಡನಜನಮರೇಂದ್ರಾದಿಗಳೆಲ್ಲರು | ನುಡಿವರು ನಿನ್ನ ಶುಭೋದಯವೀಕ್ಷಿಸಿ || ೫೫೧ ||

ಅಸುರಹರನ ನುಡಿಗೆ | ಪೂಡಿದ | ವಿಶಿಖವಾಕ್ಷಣದೊಳಗೆ ||
ದೆಸೆಗೆಟ್ಟರು ಕೃಪ ಶಕುನಿ ದುರ್ಯೋಧನ | ಮುಸುಳಿಸಿದಾನನದೊಳಿರ್ದರಾಚೆಯಲಿ || ೫೫೨ ||

**ಭಾಮಿನಿ**

ಧರಣಿಪತಿ ಕೇಳಿಂತು ಶಸ್ತ್ರದ |
ಪರಿಯ ವರ್ಣಿಸಲರಿದು ಫಣಿಪಗೆ |
ಕುರುಕುಲಾಂಬುಧಿ ಕಲಕಲಿತ್ತನು ಧೈರ್ಯ ತನ್ನವರ್ಗೆ ||
ಪರಿಯ ನೋಡಲು ಬಹುದು ಪಾರ್ಥನ |
ಸಿರಿಯ ಸೊಬಗನು ತೋರ್ಪೆ ನಾನರೆ |
ಗಳಿಗೆ ಸೈರಿಸು ಸೈರಿಸೆಂದನು ನಗುತ ಕಲಿ ಕರ್ಣ || ೫೫೩ ||

**ರಾಗ ಮಾರವಿ ಏಕತಾಳ**

ಆ ಸಮಯದಿ ಕಾಲಿಪಾರ್ಥನು ಗಿರಿಜೆಮ | ಹಾಸ್ತ್ರವನೇರಿಸುತ ||
ದೋಷವು ತನಗಿಲ್ಲಿನ್ನಸುರಾರಿಗೆ | ನುತ್ತಲೆ ಘೋಷಿಸುತ || ೫೫೪ ||

ಎಲವೋ ಕರ್ಣನೆ ಕೇಳೀ ಬಾಣವ | ಗೆಲುವೆತ್ನಗಳೇನು ||
ಫಳಿಲನೆ ನೋಡಿಕೊ ಎನುತವನುಗಿದನು | ಶೈಲಜೆಯಸ್ತ್ರವನು || ೫೫೫ ||

ಸಿಡಿಲಂದದಿ ಘುಡಿಘುಡಿಸುತಲಗ್ನಿಯ | ಕಿಡಿಯುಗುಳುತಲಾಗ ||
ಕಡು ಪ್ರಕಾಶದಿ ಭೋರ್ಗುಡಿಸುತಲಾ ಶರ | ಬಂದುದು ಅತಿ ಬೇಗ || ೫೫೬ ||

ಮುಟ್ಟವಿಸುತ ಬರಲಾ ಬಾಣವ ತರಿ | ದೊಟ್ಟುವೆನೆಂದೆನುತ ||
ತಟ್ಟವಿಸುತ್ತತಿಶಸ್ತ್ರಗಳಿಂ ಸರಿ | ಗಟ್ಟಿಯೆ ಪೊಯ್ಯಲು ತಾ || ೫೫೭ ||

ಆ ಮಹಾಸ್ತ್ರದ ತೇಜದಲೀ ಕ | ಣ್ಮುಚ್ಚಿದುದತಿ ಭಯದಿ |
ಆ ಮುಹೂರ್ತದೊಳಡರಿತು ಶಿರ ಗಗ | ನಾಂತರಕನಿತರಲಿ || ೫೫೮ ||

ಶಿರದ ಬೆಂಬಳಿಯ ಚಿಗಿದುದು ರಕ್ತಗ | ಳರೆಯೋಜನ ತನಕ ||
ಸುರಿಸುತ ಬಂದುರೆ ಧರೆಯಲಿ ಬಿದ್ದುದು | ಕೇಳೈ ನೃಪತಿಲಕ || ೫೫೯ ||

**ಭಾಮಿನಿ**

ಅರಸ ಕೇಳೈ ಕರ್ಣನೊಡಲಿನ |
ಪರಮತೇಜಃಪುಂಜ ದ್ಯುಮಣಿಯ |

ತೆರದಿ ಉದರದಿ ಒಡೆದು ಹಾಯ್ದುದು ಇನನ ಮಂಡಲಕೆ ||
ಅರರೆ ಶಿವ ಶಿವ ಸತ್ಯಕೋಸುಗ |
ತೊರೆದು ಜೀವವ ಬಿಟ್ಟ ಕರ್ಣಗೆ |
ಸರಿಯದಾವನೆನುತ್ತ ಮನದಲಿ ಮರುಗಿದನು ಹನುಮ || ೫೬೦ ||

**ದ್ವಿಪದಿ**

ಅರಸ ಕೇಳಿತ್ತಲಾ ಕೌರವೇಶ್ವರನು |
ತರಹರಿಸಿ ಮನದೊಳಗೆ ಭೀತಿ ತಾಳಿದನು || ೫೬೧ ||

ದ್ರೋಣ ಭೀಷ್ಮಾದಿಗಳು ಭುಜಗಳೆರಡೆನಗೆ |
ಪ್ರಾಣವೇ ಕಲಿ ಕರ್ಣ ಮಡಿದನೇ ನಮಗೆ || ೫೬೨ ||

ಅನಿತರೊಳು ಶಲ್ಯ ಕೃಪ ಗುರುಜರಯ್ತುಂದು |
ಜನಪತಿಗೆ ಧೈರ್ಯವನು ಪೇಳುತಿರಲಂದು || ೫೬೩ ||

ಹುಚ್ಚರಂದದಿ ಭ್ರಾಂತನಾಗಿ ತನ್ನೊಳಗೆ |
ಬೆಚ್ಚಿದನು ತರತರದಿ ತೊಳಲುತಡಿಗಡಿಗೆ || ೫೬೪ ||

ಬಾರಯ್ಯ ಕರ್ಣ ಪಂಚಪ್ರಾಣನೆನುತ |
ಚಾರಕನನಪ್ಪಿದನು ಕೊರಳ ತಬ್ಬುತ್ತ || ೫೬೫ ||

ಘನ ಚಿಂತೆಯಲಿ ಕೊರಗಿ ಕೌರವೇಶ್ವರನು |
ಪ್ರಾಣವನು ತೊರೆವೆ ತಾನೆನುತ ಮರುಗಿದನು || ೫೬೬ ||

**ಕಂದ**

ದಿನಮಣಿ ತನ್ನಯ ಮಗನಂ |
ಘನ ಗಗನಾಂಗಣದೊಳೀಕ್ಷಿಸೆ ಪಾಪವೆನುತ್ತಂ ||
ಕಣುಗಳಲುಕ್ಕುತ ಜಲವಂ |
ಮನಮರುಗುತಲುಸಿರಿದ ಪರಿಯನದೇಂ ಪೇಳ್ವೆಂ || ೫೬೭ ||

**ವಾರ್ಧಕ**

ಮಗನಳಿದ ತಾಪದಿಂ ತಪನ ಬಲು ಕೋಪದಿಂ |
ದೃಗುಯುಗಳ ವಾರಿಯಂ ಧರೆಗಿಳಿವ ಸ್ವಾರಿಯಂ |
ಝುಗಝುಗಿಸುವಂದದಿಂ ಮುನಿಜನ ಪ್ರಬಂಧದಿಂ ಸಪ್ತಾಶ್ವರಥಗಳಿಂದ ||
ಅಘಹರಂ ತನ್ನ ನಿಜ ಭಕ್ತರನು ಪಾಲಿಸುವ |

ಬಗೆಗೆನ್ನ ಪುತ್ರನಂ ಕೊಂದ ಕೌರವನೆನ್ನ |
ಮಗನಂತೆ ಹೊಂದಿ ಹೋಗಲಿ ನಾಳೆ ದಿನದೊಳೆಂದದರಿದಂ ಪಡುಗಡಲನು || ೫೬೮ ||

**ರಾಗ ಸಾಂಗತ್ಯ ರೂಪಕತಾಳ**

ತರಣಿಯಸ್ತಮಿಸಲಾ ರಥವನು ತಿರುಹಿ ಶಿ | ಬಿರಕಭಿಮುಖವಾದರಾಗ ||
ಕರವ ಮುಗಿದು ರಣಮಂಡಲಕೆರಗುತ್ತ | ಬರುವ ಸಂಭ್ರಮಕಿತ್ತ ಯಮಜ || ೫೭೯ ||

ತರುಣಿ ದ್ರೌಪದಿ ಭೀಮ ನಕುಲಾಂಕ ಸಹದೇವ | ರರಿತಿದಿರ್ಗೊಡರ್ ತೋಷದಲಿ ||
ಮುರಹರಗೆರಗಲಾ ಯಮಜನ ಬಾಯೊಳ | ಗಿರುವ ವೀಳ್ಯವ ನೋಡಿ ನಗುತ || ೫೭೦ ||

ಹರ ಹರ ಕರ್ಣ ನಿನ್ನಣ್ಣನಲ್ಲವೆ ಬಾಯೊ | ಳಿರುವ ವೀಳ್ಯವನುಗುಳೆಂದ |
ಹರಿಯ ಮಾತುಗಳಂಬು ಕಂತಿ ಮೂಡಿತು ಬೆನ್ನೊ | ಳೊರಗಿ ಮೂರ್ಛಿತನಾಗುತೆಂದ || ೫೭೧ ||

**ಭಾಮಿನಿ**

ಹರ ಹರಾ ಮುರವೈರಿ ನೀನೇ |
ಕೊರಳ ಕೊಯ್ದೆಯೊ ಅಕಟ ಭಾಸ್ಕರ |
ತರುಣನಿವ ರಾಧೇಯನೆಂದೇ ಒರೆದೆಲಾ ಮೊದಲು ||
ಅರಿಯದಾದೆವು ನಾವು ಜನನಿಗೆ |
ಹಿರಿಯ ಮಗನಿವ ಕರ್ಣನೆಂಬುದ |
ನರುಹಲೊಲ್ಲದೆ ಕೊಲಿಸಿದ್ಯೆಯೆನುತೊರಲಿದನು ಯಮಜ || ೫೭೨ ||

**ರಾಗ ಕಾಂಭೋಜಿ ಆದಿತಾಳ**

ಹರ ಹರ ಈ ಕರ್ಣನೆನ್ನ | ಹಿರಿಯ ಅಣ್ಣನೆಂದು ||
ಅರಿಯದಾದೆನವನ ಕೊಲಿಸಿ | ಧರೆಯನಾಳ್ವುದೆಂತು || ೫೭೩ ||

ಹಿಂದೆ ತಾಯಿ ತನ್ನ ಮಗನ | ನೆಂತು ಬಿಟ್ಟಳಯ್ಯೋ |
ಇಂದುಕುಲಾಧೀಶ ತಂದನೊ ತಾ | ಬಂದು ಸೇರ್ದನೇನೋ || ೫೭೪ ||

ಮಂದಗಮನೆಜನನಿಯರಿಗೇ | ನೆಂದು ಪೇಳಲಯ್ಯೋ ||
ಬಂದೆವು ತಾವೀಗಲೆನಲೊ | ಕೊಂದೆವಣ್ಣನೆನಲೋ || ೫೭೫ ||

**ವಾರ್ಧಕ**

ಎಲೆ ಯುಧಿಷ್ಠಿರ ಕೇಳು ಅಳಿದವರಿಗಳಲೆ ತಾವ್ |
ಮರಳಿ ಬರುವರೆ ವ್ಯರ್ಥ ಹೊಳೆಯೊಳಗೆ ಪರಿವ ನೀ |
ರಿನ ಗುಳ್ಳೆಯಂತಿರ್ಪುದೀ ದೇಹ ತಿಳಿಯಲಿದು ನಿಶ್ಚಯವೆ ಹೇಳೆಂದನು ||

ಖಳಶಿರೋಮಣಿ ಕರ್ಣನಣ್ಣನಾದರೆ ನಿನ್ನ |
ನಳಿನಮುಖಿ ಸೌಭದ್ರೆಯಣುಗನಂ ಕಳವಿನೊಳು |
ಇಳೆಗೆ ಕೆಡಹುವನೆ ತೋಳ್ಗಳ ಕುಲಾಂತಕನೆನುತ್ತವನಿಪನ ಸಂತಯಿಸಿದ || ೫೭೬ ||

ಅರಸ ಜನಮೇಜಯನೆ ಲಾಲಿಸ್ವೈ ಪಾಂಡವರು |
ತರಣಿಸುತನಂ ಗೆಲಿದು ಶಲ್ಯನಂ ಮಡುಹಿ ಕುರು |
ವರನನುಂ ಸಂಹರಿಸಿ ತಿರುಗಿ ನಿಜಪುರಕೈದಿ ಧೃತರಾಷ್ಟ್ರನಂ ಮನ್ನಿಸಿ ||
ವರ ಮುಹೂರ್ತದೊಳಯ್ದಿ ಪಟ್ಟಾಭಿಷೇಕಮಂ |
ವಿರಚಿಸುತ ನಾಲ್ಕನೆಯ ದಿನದಿಯವಭೃಥವೆಸಗಿ |
ಮುರಹರಂ ಪಾಂಡವರ ಮನ್ನಿಸುತ ಬೀಳ್ಗೊಂಡು ದ್ವಾರಕೆಗೆ ನಡೆತಂದನು || ೫೭೭ ||

**ಕಂದ**

ಬರಲಾ ಕ್ಷಣ ಸತಿ ರುಗ್ಮಿಣಿ |
ಸತ್ಯಭಾಮೆಸಹಿತಷ್ಟಮಹಿಷಿಯರುಗಳಾಗಳ್ ||
ಪರಿಪರಿಯಿಂದಂ ಹರುಷದಿ |
ಸುರುಚಿರದಾರತಿಗಳೆತ್ತಿ ಪಾಡಿದರಾಗಳ್ || ೫೭೮ ||

**ರಾಗ ಢವಳಾರ ಏಕತಾಳ**

ವರ ಸುದತಿಯರೆಲ್ಲರು ನೆರೆದು | ಸುರುಚಿರದಲಿ ಹಸೆಮಣೆಗಳ ಬರೆದು ||
ಸರಸಿಜಾಕ್ಷನೆ ಬಾರೆಂದು ಶ್ರೀಕೃಷ್ಣಗೆ | ತರುಣಿಯರಾರತಿಯ ಬೆಳಗಿರೆ || ಶೋಭಾನೆ || ೫೭೯ ||

ಕಡಗ ಕಂಕಣ ಚೂಡ್ಯ ದೋರೆಗಳ್ ಹೊಳೆಯೆ |
ನಡುವಿನೊಡ್ಯಾಣ ಕಿರುಗಂಟೆಗಳುಲಿಯೆ ||
ಒಡೆಯ ಕಡಗೋಲಾಡುವ ಕೃಷ್ಣಗೆ | ಮಡದಿಯರಾರತಿಯ ಬೆಳಗಿರೆ || ಶೋಭಾನೆ || ೫೮೦ ||

ದೇವಕಿದೇವಿ ಯಶೋದೆಯರೊಲಿದು |
ಭಾವಜಜನನಿ ರುಗ್ಮಿಣಿಯನ್ನು ಕರೆದು |
ದೇವದೇವನ ವಾಮಾಂಕದಲಿ ಕುಳ್ಳಿರಿಸಿ | ತಾವರೆಯಾರತಿಯ ಬೆಳಗಿರೆ || ಶೋಭಾನೆ || ೫೮೧ ||

ಕನಕಖಚಿತ ಕಿರೀಟದಂದದಲಿ | ದಿನಮಣಿಪ್ರಭೆಯಂತೆ ಪೊಳೆವ ಚಂದದಲಿ ||
ವನಜಲೋಚನೆ ಭಾಮಾದೇವಿ ಶ್ರೀಕೃಷ್ಣಗೆ |
ವನಿತೆಯರಾರತಿಯ ಬೆಳಗಿರೆ || ಶೋಭಾನೆ || ೫೮೨ ||

ಗಜಪುರಾಧೀಶ ನರಸಿಂಹದೇವನಿಗೆ | ತ್ರಿಜಗತ್ಪಾವನ ಶ್ರೀ ಗಣಪತಿಗೆ ||
ಭುಜಗಭೂಷಣ ಸೋಮನಾಥನ ಸಖನಿಗೆ |
ಗಜಗಮನೆಯರಾರತಿಯ ಬೆಳಗಿರೆ || ಶೋಭಾನೆ || ೫೮೩ ||

**ಭಾಮಿನಿ**

ಈ ಕಥೆಯ ಭಕ್ತಿಯಲಿ ಕೇಳ್ದರ |
ನೇಕ ದುರಿತವ ಹರಿದು ಕಡೆಯಲಿ |
ನಾಕವನು ಪಾಲಿಸುವ ಗಜಪುರದೊಡೆಯ ನರಸಿಂಹ ||
ಲೋಕದೊಳಗುತ್ತುಮರ ಸಂಸ್ಕೃತ |
ನೇಕ ಜನರಿದನರಿಯಬಲ್ಲರು |
ಈ ಕರ್ಣಾಟಕವೆನುತ ವೈಶಂಪಾಯಮುನಿ ನುಡಿದ || ೫೮೪ ||

ಇದು ಕಣಾ ಪರಮೋಕ್ಷಸಾಧನ | ವಿದು ಕಣಾ ಪಾತಕ ವಿನಾಶನ |
ವಿದು ಕಣಾ ಧನ ಕನಕ ರತ್ನಾದಿಗಳ ಲಭ್ಯಕರ ||
ಇದನು ಲಾಲಿಸಿ ಕೇಳ್ವ ಜನರಿಗೆ | ಮುದವೊಲಿದು ತಾ ಪೇಳಿದವರಿಗೆ |
ಪದುಮನಾಭನ ದಯವು ದೊರಕುವುದನವರತವವರ್ಗೆ || ೫೮೫ ||

**ಕಂದ**

ಈ ತೆರದಿಂದುತ್ತಮ ಕಥೆ |
ಕೋಟದ ಸೀಮೆಯ ಪಾಂಡೇಶ್ವರದಾ ||
ಮಾತೆಯು ಪುಟ್ಟಮ್ಮನವರ |
ದ್ವಿತೀಯಜಾತ ಬಾಲ ವೆಂಕಟ ವರ್ಣಿಸಿದಂ || || ೫೮೬ ||

**ಮಂಗಲ**

**ರಾಗ ಆಹೇರಿ ಅಷ್ಟತಾಳ**
ಮಂಗಲಂ ಜಯ ಮಂಗಲಂ || ಪ ||

ಮಂಗಲ ಶ್ರೀ ಕೃಷ್ಣರಾಯನಿಗೆ | ಮಂಗಲ ದೇವಕಿಪುತ್ರನಿಗೆ ||
ಮಂಗಲ ಶ್ರೀವಸುದೇವಸುತನಿಗೆ | ಮಂಗಲ ರುಗ್ಮಿಣಿವಲ್ಲಭಗೆ ||
ಮಂಗಲಂ ಜಯ ಮಂಗಲಂ || ೫೮೭ ||

ಮಂಗಲ ಲಕ್ಷುಮಿ ರಮಣನಿಗೆ | ಮಂಗಲ ಮತ್ಸ್ಯ ಕೂರ್ಮ ವರಹನಿಗೆ ||
ಮಂಗಲ ನರಸಿಂಹ ದೇವನಿಗೆ | ಮಂಗಲ ವಾಮನಾವತಾರನಿಗೆ ||
ಮಂಗಲಂ ಜಯ ಮಂಗಲಂ || ೫೮೮ ||

ಭಾರ್ಗವತಾರದಿ ಮಾತೆಯನರಿದಗೆ | ಸೀತಾರಮಣಗೆ ಶ್ರೀಕೃಷ್ಣಗೆ ||
ತರುಣಿಯರ ವ್ರತವಳಿದ ಬೌದ್ಧಾವತಾರಗೆ | ತುರಗವಾಹನನಿಗೆ ಮಂಗಲಂ |
ನಿತ್ಯ ಶುಭೋದಯ ಮಂಗಲಂ || ೫೮೯ ||

***ಯಕ್ಷಗಾನ ಕರ್ಣಾಜುನರ ಕಾಳಗ ಮುಗಿದುದು***

# ಯಕ್ಷಗಾನ ಕರ್ಣಪರ್ವ

## ಪಾತ್ರಗಳು

| | | | | | |
|---|---|---|---|---|---|
| ಶ್ರೀಕೃಷ್ಣ | ಧರ್ಮರಾಯ | ಭೀಮ | ಅರ್ಜುನ | ನಕುಲ | ಸಹದೇವ |
| ಶಲ್ಯ | ದ್ರೌಪದಿ | ಸಖಿಯರು ಮುಂತಾದವರು | | ಕರ್ಣ | ದುರ್ಯೋಧನ |
| ದುಶ್ಶ್ಯಾಸನ | ಅಶ್ವತ್ಥಾಮ | ಕೃಪ | ಶಕುನಿ | ಸೈನಿಕರು | |

# ಯಕ್ಷಗಾನ ಕರ್ಣಪರ್ವ

**ರಾಗ ನಾಟಿ ಝಂಪೆತಾಳ**

ಜಯತು ಜಯತು ಗಣೇಶ | ಜಯತು ವಿಘ್ನವಿನಾಶ |
ಜಯ ಕೀರ್ತಿ ಸಂಪನ್ನ | ಜಯ ಸುಪ್ರಸನ್ನ ||
ಜಯತು ಜಯ ಮಹಕಾಯ | ಜಯತು ಮೋದಕಪ್ರೀಯ |
ಜಯತು ಮುನಿಜನಹಂಸ | ಜಯ ರಿಪುಧ್ವಂಸ || ಜಯತು ಜಯತು || ೧ ||

ಕರಚತುಷ್ಟಯಶೋಭ | ಕರವೀರಕುಸುಮಾಭ |
ಕರಸುಚಂದನಯುಕ್ತ | ಕರಕಫಲಭುಕ್ತ |
ಕರಟಾಂತಮದಗಳಿತ | ಕರಸುಭಕ್ಷಕಮಿಳಿತ |
ಕರಿವದನ ಹೇರಂಬ | ಕರುಣಾವಲಂಬ || ಜಯತು ಜಯತು || ೨ ||

ಶರಧಿಗುಣಗಂಭೀರ | ಶರಣಜನಮಂದಾರ |
ಶರಚಂದ್ರಶತತೇಜ | ಶರಜನ್ಮಸಹಜ ||
ಶರಭಸಮಬಲವ್ರಾತ | ಶರದನುಜನುತಜಾತ |
ಶರಪುರಾಧಿಪ ಶಾಂತ | ವರದೈಕದಂತ || ಜಯ ಜಯತು ಜಯತು || ૩ ||

**ವಾರ್ಧಕ**

ಧರಣಿಪತಿ ಲಾಲಿಸೈ ಮುಂದಣ ಪ್ರಸಂಗಮಂ |
ಗುರು ರಣಾಗ್ರದೊಳಳಿಯಲಾಗಿ ನಿನ್ನವರೆಲ್ಲ |
ರಿರುಳಿನೊಡ್ಡೋಲಗಕೆ ನಡೆತಂದು ಸಂತಾಪದಿಂ ಬಳಲುತಿರ್ದು ಬಳಿಕ ||
ಗುರುಜ ಕೃಪ ಮುಖ್ಯರಭಿಮತದಿಂದ ನಿಶ್ಚಯಿಸಿ |
ತರಣಿಯ ಕುಮಾರಂಗೆ ಸೇನಾಧಿಪತ್ಯಮಂ |
ವರ ವಿದಿತಲೌಕಿಕ ಸುವೈದಿಕ ವಿಧಾನದಿಂ ರಚಿಸಿದಂ ಕುರುರಾಯನು || ೪ ||

**ರಾಗ ಭೈರವಿ ಝಂಪೆತಾಳ**

ಕರ್ಣನಿಗೆ ದಳಪತಿಮು | ಹೂರ್ತಾಭಿಷೇಚನವು |
ಪೂರ್ಣವಾಗಲು ಸಕಲ | ವಾದ್ಯರವ ಮೊಳಗೆ || ೫ ||
ಅತಿರಥ ಮಹಾರಥಾ | ದ್ಯಖಿಲ ಸುಭಟ ನಿಕಾಯ |
ಚತುರಂಗಬಲದೊಡನೆ | ಕಾಣಿಕೆಯನಿತ್ತು || ೬ ||

ಕಂಡು ಬಳಿಕತ್ಯಧಿಕ | ರಭಸದಿಂದುಬ್ಬಿ ಖತಿ |
ಗೊಂಡು ನಲಿದುದು ಸೇನೆ | ಕಡುಹರುಷದಿಂದ || ೭ ||

**ಭಾಮಿನಿ**

ಅನಿತರೊಳು ತನ್ನಾತ್ಮಸಂಭವ |
ನನುವರವನೀಕ್ಷಿಸುವ ತವಕದೊ |
ಳಿನನು ಪೂರ್ವಾಚಲದ ಗದ್ದುಗೆಗಿತ್ತನೋಲಗವ ||
ಘನ ಸಮುದ್ರವು ಮಸಗಿದಂದದೊ |
ಳೆನಗೆ ತನಗೆಂದಾಗ ಬಲು ಗ |
ರ್ಜನೆಯನೆಸಗಲು ಕೂಡಿತಾ ಕ್ಷಣದೊಳಗೆ ಭಟನಿಕರ || ೮ ||

**ವಾರ್ಧಕ**

ಉಭಯಬಲವೆಚ್ಚಾಡಿ ವೀರರೌಕುಳಮಾಗೆ |
ರಭಸದಿಂದಿದಿರಾದ ಕ್ಷೇಮ ಧೂರ್ತನೃಪಾಲ |
ಪ್ರಬಲದೊಳು ಕಾದಿ ಮರುತಜನಿಂದ ಮಡಿಯಲ್ಕೆ ಕರ್ಣನುರುಖಾತಿಯಿಂದ ||
ತ್ರಿಭುವನಂ ಕಂಪಿಸಲ್ ಬಂದು ನಿಜಮೋಹರ |
ಕ್ಕಭಯವಿತ್ತರಿಭಟರ ನುಗ್ಗೊತ್ತಿ ಕದಳಿವನ |
ದಿಭದಂತೆ ಮುಂಬರಿದು ಕೂಡೆ ನಕುಲಾಂಕನೊಳ್ ಸೆಣಸಿ ಮೂರ್ಛಿತನಾದನು || ೯ ||

**ರಾಗ ಸವಾಯ್ ಏಕತಾಳ**

ಬವರದೊಳಪಜಯವಾಗಲು ಕರ್ಣಗೆ | ರವಿ ಜಾರಿದ ತಾ ಪಶ್ಚಿಮಕೆ ||
ತವಕದೊಳುಭಯ ಚತುರ್ಬಲವಯ್ದಿತು | ಜವದಿಂ ತಂತಮ್ಮಾಲಯಕೆ || ೧೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇರುಳಿನಲಿ ನಡೆತಂದು ಕೌರವ | ರರಸನೊಡ್ಡೋಲಗದಿ ಕುಳಿತಾ |
ಗುರುಜ ಕೃಪ ರವಿಸೂನು ಮುಖ್ಯಾ | ಪ್ತರುಗಳೆಲ್ಲ || ೧೧ ||

ತಲೆಯ ಮುಸುಕಿನ ಕಯ್ಯ ಕದಪಿನ | ನೆಲನ ನೋಟದ ಪೊತ್ತ ದುಗುಡದ |
ಬಲಿದ ಬೆರಗಿನ ಬಿಗಿದ ಮೌನದ | ಒಲಪಿನಿಂದ || ೧೨ ||

ಸುಭಟರಾಸ್ಥಾನದಲಿ ರಂಜಿಸ | ಉಭಯ ಪಾರ್ಶ್ವವನೀಕ್ಷಿಸುತ ಕುರು |
ಪ್ರಭವ ನುಡಿದನು ಮತ್ತೆ ಸೇನಾ | ವಿಭುವಿನೊಡನೆ || ೧೩ ||

**ರಾಗ ತುಜಾವಂತು ಝಂಪೆತಾಳ**

ಏನಾದುದಿಂದಿನಾಹವದಿ ಕಲಿ ಕರ್ಣ | ಮಾನನಿಧಿಗಳಿಗೇತಕೀ ಪರಿಯ ಮೌನ || || ಪ ||

ದುಗುಡವೇನಿದು ಬರಿದೆ ಧುರಧುರಂಧರರಿಂಗೆ |
ವಿಗಡರವರಿಂದೇನು ವಿಕ್ರಮಕೆ ಕುಂದು ||
ಹಗೆಯವರ ಕೈಚಳಕ ಹತಿಯು ಪಿರಿದಾಗಿರಲು |
ಬಗೆಯಲಾರಳವೈಸೆ ಬಿಡು ಮನೋವ್ಯಥೆಯ || || ೧೪ ||

ರಾಯ ಕೇಳಿಂದು ರಿಪುರಾಜೀವಕೊಳವೆಂಬು |
ವಾಯಿಭಕೆ ಕುಂದೆನಗೆ ದೊರಕಿತೊಂದರಲಿ ||
ಬಾಯಿಂದ ಪೇಳಿದರೆ ಬಪ್ಪುದೇ ಸಾರಥಿಗು |
ಪಾಯವಿಲ್ಲದರಿಂದ ಪಿಸುಣ ನಾನಾದೆ || || ೧೫ ||

ಸಾರಥಿಯು ತನಗೋರ್ವ ಸಾಧ್ಯನಾದರೆ ನಾಳೆ |
ಭೂರಿ ರಿಪುಬಲವೆಲ್ಲ ಭಂಗಿಸುವೆ ಕ್ಷಣದಿ
ಯಾರೆನಗೆ ತಕ್ಕಂಥ ಯೋಗ್ಯ ಸೂತನ ತಂದು |
ತೋರುವವರೆಂದೆನುತ ತೊಳಲಿದನು ಕರ್ಣ || || ೧೬ ||

**ವಾರ್ಧಕ**

ಇನಸೂನುವಿಂತೆಂದ ನುಡಿ ಕೇಳ್ದು ನಗುತ ಕುರು |
ಜನಪಾಲ ನುಡಿದನೆಲೆ ರಾಧೇಯ ಕೇಳೆಮ್ಮ |
ಳಿನಿತು ಸುಭಟವ್ರಾತವಿದೆ ನಿನ್ನ ಪಾಡಿನವರಾರೆಂಬುದಿದರೊಳಾಯ್ದು ||
ವಿನಯದಿಂದೆನ್ನೊಳೀಕ್ಷಣ ಪೇಳ್ದಡಾತನಂ |
ನಿನಗೊದಗಿಸುವೆ ಸೂತನಂ ಮಾಡಿ ನಿಮಿಷದೊಳ್ |
ಮನದಿ ಶಂಕಿಸದೆ ನೀನೆನ್ನಾಣೆ ಪೇಳೆಂದು ನುಡಿಯಲವನಿಂತೆಂದನು || ೧೭ ||

**ರಾಗ ಕೇದಾರಗೌಳ ಅಷ್ಟತಾಳ**

ಜೀಯ ಲಾಲಿಪುದೀಗ ನೆರೆದಿಹ ಸುಭಟನಿ | ಕಾಯದೊಳಿರುವರೊಳು ||
ಪ್ರೀಯನಾಗಿಹನೋರ್ವನನು ಕೊಟ್ಟರೆನಗೆ ಸ | ಹಾಯ ನಿನ್ನಿಂದಪ್ಪುದೈ || ೧೮ ||

ಎನ್ನ ನೀನಿಂದಿನವರೆಗೆ ರಕ್ಷಿಸಿದುದ | ಕಿನ್ನು ನಾ ಪೇಳ್ವಂದವ ||
ಮನ್ನಿಸಿ ಮನಸಿಗೆ ತಂದವನೊಪ್ಪಿಸ | ಉನ್ನತಿಕೆಯ ನೋಡಯ್ಯ || ೧೯ ||

ಶಲ್ಯನೃಪಾಲನು ಸಾರಥಿತನದೊಳ | ತುಲ್ಯಸಂಪನ್ನನಲ್ಲೈ ||
ಬಲ್ಲೆನಾತನನು ತಂದೊದಗಿಸಿಕೊಡಲು ಸಾ | ಫಲ್ಯವಾಹುದು ಕಾರ್ಯವು || ೧೦ ||

**ಭಾಮಿನಿ**

ಸಾರಶೌರ್ಯಾಗ್ರಣಿಯೆ ಕೇಳ್ ಮೆಯ್ |
ದೋರಿರುವ ಹನ್ನೊಂದಕ್ಷೌಹಿಣಿ |
ಭೂರಿ ಮಾರ್ಬಲದೊಳಗೆ ಸೂತತ್ವವನು ಬಲ್ಲವರ ||
ವೀರರನು ತನಗೊರೆಯದಿಂದು ಮ |
ಹೀರಮಣನಾಗಿರುವ ಶಲ್ಯನ |
ಸಾರಥಿತ್ವಕೆ ಬಯಸಿದೇನೆನಲೆಂದನಾ ಕರ್ಣ || ೧೧ ||

**ರಾಗ ಕಾಂಭೋಜಿ ಝಂಪೆತಾಳ**

ಚಿತ್ತವಿಸು ಕುಲಕುಲಾಂಬುಧಿಪೂರ್ಣಶುಭ್ರಾಂಶು | ಬಿತ್ತರಿಪೆನೆನ್ನಾದಿ ಕಥೆಯ ||
ಸತ್ಯನಿಧಿ ಭಾರ್ಗವನ ಕೂಡೆ ದ್ವಿಜರೂಪಿನಲಿ | ಗುಪ್ತದಿಂದಡಗಿರ್ದೆ ಜೀಯ || ೧೧ ||

ಸರಸದಿಂ ಸಕಲ ವಿದ್ಯಾಭ್ಯಾಸ ಕಲಿತಿರಲು | ಗುರುವೊಂದು ದಿನವೆನ್ನ ತೊಡೆಯ ||
ಶಿರವಿಟ್ಟು ಮಲಗಿರಲು ಕಡು ಸುಷುಪ್ತಿಯೊಳಾಗ | ಸುರಪನೆಸಗಿದನೊಂದು ಉಪಾಯ || ೧೨ ||

ಸುತಗೆ ಬಾಧಕ ಬಪ್ಪುದೆನುತಲಳಿರೂಪಿನಿಂ | ದತಿಶಯದಿ ಕೊರೆಯೆ ಜಂಘೆಯನು ||
ಅತಿರಕ್ತಶೀತಳವ ತಿಳಿದೇಳಲಾಗ ಗುರು | ಖತಿಯಿಂದ ಕಾಣುತೆನ್ನುವನು || ೧೪ ||

ರೂಪುದೋರದೆ ಎನ್ನ ವಿದ್ಯವನು ಕಲಿತೆ ಕಡು | ಕಾಪಟಿಗನೆಂದೆನುತ ಮುಳಿದು ||
ಶಾಪವೀಯಲು ಮನದಿ ನಾ ಮರುಗುತಿರಲು ಬಳಿ | ಕಾ ಪರಂಜ್ಯೋತಿಯೆನಗೊಲಿದು || ೧೫ ||

ಭದ್ರತ್ವದಿಂದಿಷ್ಟು ದಿನ ವಿದ್ಯೆ ಕಲಿತುದಕೆ | ಉದ್ರೇಕದಿಂ ಮುಂದೆ ರಣದಿ ||
ಮಾದ್ರಭೂಪನ ಸೂತತನದಿ ಜಯಿಸೆನುತಾ ಸ | ಮುದ್ರಭೀಕರ ಪೇಳ್ದ ದಯದಿ || ೧೬ ||

ಅದರಿಂದ ಶಲ್ಯನಾಪೇಕ್ಷಿಸಿದೆ ಭೂಪ ಕೇಳ್ | ಒದಗಿರ್ದಡವನು ಭರದಿಂದ |
ಸದೆದು ರಿಪುಗಳನು ಯಮಸದನಕಟ್ಟುವೆನು ಎ | ನ್ನಧಟುತನ ಮತ್ತೆ ನೋಡೆಂದ || ೧೭ ||

**ಭಾಮಿನಿ**

ವೀರ ಕರ್ಣನ ನುಡಿಯ ಕೇಳುತ |
ಭೂರಿ ಸಂತಸವೆತ್ತು ಕೌರವ |
ಭೂರಮಣನತಿ ತವಕದಲಿ ಮಾದ್ರೇಶನರಮನೆಗೆ ||
ಚಾರು ವಿಭವದೊಳಯ್ದೆ ಬರಲಾ |

ಚಾರಕರ ಸನ್ನೆಯಲಿ ತಿಳಿದು ವಿ |
ಚಾರಿಸುತ ಬಳಿಕಿದಿರು ಬಂದರಸನನು ಮನ್ನಿಸಿದ || ೧೮ ||

**ಕಂದ**

ಮನ್ನಿಸಿ ಭೂಪಾಲಕನಂ |
ತನ್ನ ನಿಜಾಲಯಕಯ್ದಿಸಿ ಶಲ್ಯನೃಪಾಲಂ ||
ಉನ್ನತ ನಿಶಿಯೊಳು ಬರಲೇ |
ಕೆನ್ನುತ ಬೆಸಗೊಳಲವನಿಂತೆಂದನು ನಗುತಂ || ೧೯ ||

**ರಾಗ ತುಜಾವಂತು ಝಂಪೆತಾಳ**

ಕೇಳ್ದೆಲೈ ಮಹವೀರ ಶಲ್ಯಭೂಪಾಲ |
ತಾಳ್ದು ಪಾಲಿಸಬೇಕು ಬಿನ್ನವಿಪಸೊಲ್ಲ || ಕೇಳ್ದೆಲೈ || ಪ ||

ಧುರದೊಳಿಂದಿನ ದಿನದೊಳತಿರಥ ಮಹಾರಥರು |
ಮುರಿದು ಹರಿಹಂಚಾದರೀ ಪರಿಯೊಳೆಲ್ಲ ||
ಪರಿಭವಕೆ ಸಂದುದೆಮ್ಮಯ ಸೇನೆ ನೀವಿರ್ದು |
ಹರಿಬಕನುವಾಗುವರ ಕಾಣೆ ಮಿಕ್ಕವರ || ಕೇಳ್ದೆಲೈ || ೨೦ ||

ಕರ್ಣನತಿಬಲನೆಮ್ಮ ಭಟರೊಳಗೆ ಪೆಗ್ಗಳನು |
ಪೂರ್ಣವಿಕ್ರಮನವನಿಗೊಂದರಲಿ ಕೊರತೆ |
ಸ್ವರ್ಣಮಯ ರಥಕೋರ್ವ ಸಾರಥಿಯು ದೊರಕಿದಡೆ |
ನಿರ್ನಾಮವನು ಗೆಯ್ವ ರಿಪುಗಳನು ಕ್ಷಣದಿ || ಕೇಳ್ದೆಲೈ || ೨೧ ||

ಅದರಿಂದ ನಿನ್ನೊಡನೆ ಬೇಡಿಕೊಳ್ಳುವುದಾನು |
ಸದಮಲನವನ ರಥಕೆ ಸೂತತನವನ್ನು ||
ಪದುಳದಿಂ ಗೆಯ್ದೆಮ್ಮ ಕುರುವಂಶವನು ಕಾಯ್ದು |
ಮುದದಿಂ ಸುಕೀರ್ತಿಯನು ನೀ ಧರಿಸಬೇಕು || ಕೇಳ್ದೆಲೈ || ೨೧ ||

**ಕಂದ**

ಎನೆ ಕೇಳ್ದಾಗಲೆ ರೋಷದಿ |
ತನು ಕಂಪಿಸುತಲಿ ಕೆಂಪಡರಿದ ಆಲಿಗಳುಂ ||
ಕೊನೆಮೀಸೆಗಳಲುಗಲು ಶ |
ಲ್ಯನು ಗರ್ಜಿಸುತಲಿ ಕುರುಭೂಮಿಪಗಿಂತೆಂದಂ || ೨೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇನ್ನು ಬಗುಳಿನ್ನೊಮ್ಮೆ ಕುರುಪತಿ | ನಿನ್ನ ಭಾವವನರಿತೆ ಚಿತ್ತದೊ |
ಳುನ್ನತದ ಸಿರಿಮದದಿ ನುಡಿದೆಯೊ | ಎನ್ನೊಳಿದನು  || ೩೪ ||

ಆತ ಗಡ ಸಮರದೊಳು ಕಲಿ ವಿ | ಖ್ಯಾತ ಗಡ ಸುಭಟರೊಳು ಮೇಣಾ |
ಸೂತಸುತನೇಸರವನೆಂಬೀ | ಮಾತನರಿಯೈ  || ೩೫ ||

ಏನು ತನ್ನಂಗದಲಿ ಮಲಿನದ | ಹೀನತನವನು ಕಂಡಿತೀ ಪರಿ |
ಮಾನಭಂಗದ ಮಾತ ನುಡಿವರೆ | ನೀನು ಪೇಳೈ  || ೩೬ ||

ಖೂಳರಾಡುವ ತೆರದ ಮಾತಿದು | ಪೇಳಿದರೆ ನಾನೀ ದುರುಕ್ತಿಯ |
ಕೇಳುವೆನೆ ನೀನೆಂದ ಕಾರಣ | ತಾಳಿಕೊಂಡೆ  || ೩೭ ||

ಧೀವರನ ಮಗನೆತ್ತಲೆಮ್ಮಯ  | ಭೂವರತ್ವವಿದೆತ್ತಲಿಂದಿನ |
ಲೀ ವಿಧಿಯು ಪ್ರಾಪ್ತಿಸಿತೆ ತಪ್ಪೇ | ನಾವುದಹಿತ  || ೩೮ ||

**ವಾರ್ಧಕ**

ಭಾವಿಸಿದಡೆಲೆ ಕುರುನೃಪಾಲನಿವ ಲೋಕದೊಳ |
ಗಾವ ಪಾರ್ಥಿವಸುತಂ ರಾಧೇಯನೀತನುಂ |
ವಾವೆಯಿಲ್ಲದೆ ನೃಪರ ಗದ್ದುಗೆಯನಿತ್ತು ಪತಿಕರಿಸಿದಡೆ ಭಟನಾಹನೆ ||
ನಾವರಿಯೆವೆಂದು ಗರ್ಜಿಸಲವಂ ನಸುನಗುತ |
ಮಾವ ಕೇಳಾನೆಂದ ಕ್ಷಣಕದಂ ಸಂಘಟಿಸಿ |
ತೇ ವಿರೋಧವಿದೇಕೆ ಮನಮಿಲ್ಲದಿರೆ ಬಲಾತ್ಕಾರವೇ ನಿನಗೆಂದನು || ೩೯ ||

**ಭಾಮಿನಿ**

ಖತಿಯಿದೇನೈ ಮಾವ ನೀನೇ |
ಗತಿಯೆನುತ ನಾ ಬಂದರೆನ್ನೊಡ |
ನತಿಶಯದ ಮಾತೇಕೆ ಬಿಡು ಕಾರುಣ್ಯದೃಷ್ಟಿಯನು ||
ಪತಿಕರಿಸುತೆಮಗೊಂದು ನೀನುಪ |
ಕೃತಿಯ ಮಾಡಿದು ನಿನ್ನ ಶೌರ್ಯೋ |
ನ್ನತಿಯ ಮೆರೆಸಲು ಬೇಕೆನಲ್ಕಿಂತೆಂದನಾ ಶಲ್ಯ || ೪೦ ||

**ರಾಗ ಭೈರವಿ ಅಷ್ಟತಾಳ**

ಫಡ ಸುಯೋಧನನೆ ಕೇಳು | ನಿನಗೆ ತಕ್ಕ | ನುಡಿಗೆ ತಪ್ಪೇನು ಹೇಳು ||
ಧಡಿಗರ ಧೂರ್ತವಿದ್ಯವ ಸಂಪಾದಿಸುತಲೆ | ನ್ನೊಡನೆ ತೋರಲು ಬಂದೆಯ  || ೪೧ ||

ಕೀಳು ರಾಧೇಯನಿಗೆ | ಸೂತನೆ ತಾನು | ಹೇಳಲು ಬಹುದೆ ಹೀಗೆ |
ಖೂಳರ ಸಹವಾಸದಿಂದ ಜೀವಿಸುವಂಥ | ಬಾಳುವೆ ಸುಡಲು ಲೇಸು || ೪೧ ||

ಇವರತ್ಯಂತಧಮರೆಲ್ಲ | ನಿಕೃಷ್ಟ ದಾ | ನವರೆಂದು ತಿಳಿಯಲಿಲ್ಲ ||
ಹವಣರಿಯದೆ ಬಂದು ಮೋಸವಾಯಿತು ನೀನಿ | ನ್ನವಘಡಿಸಲು ತಪ್ಪುದೆ || ೪೩ ||

**ವಾರ್ಧಕ**

ಅಕಟ ದೈವದ ಬಲಾತ್ಕಾರವಲೆ ತನಗಿಂದು |
ಪ್ರಕಟಿಸಿತೆಲಾ ಮುನ್ನಿನಾರಭ್ಯದೊಳು ಜಗದಿ |
ವಿಕಟನೆಂದೆಂಬ ಪೆಸರಂ ಪಡೆದು ಪರಿವಾರ ಪ್ರಜೆಗಳಂ ಸಲಹಿ ಬಳಿಕ ||
ಸಕಲ ಯಜ್ಞಾಧಿಕಂ ದಾನಧರ್ಮಾದಿಗಳ |
ನಕಳಂಕದಿಂದ ಲೇಸಂ ಗೆಯ್ದುಮೀ ಕರಂ |
ವಿಕಳಮತಿ ಕರ್ಣನ ಹಯಂಗಳಂ ಚಪ್ಪರಿಸಲಾಯ್ತೆ ಪ್ರಾರಬ್ಧಮೆಂದ || ೪೪ ||

**ಕಂದ**

ಕೇಳಿದು ಶಲ್ಯನ ವಚನಂ |
ತಾಳಿದು ದುಗುಡವ ಭೂಮಿಪ ಕಾರ್ಯ ನಿಮಿತ್ತಂ ||
ಬೋಳವಿಸುತಲಾತನೊಳಂ |
ಪೇಳಿದನತಿ ದೈನ್ಯದೊಳಾ ಧಾರಿಣಿಪಾಲಂ || ೪೫ ||

**ರಾಗ ಕೇದಾರಗೌಳ ಝಂಪೆತಾಳ**

ಲಾಲಿಸೈ ಮುದದೊಳಾನು | ಪೇಳ್ವ ನುಡಿ | ಪಾಲಿಸೈ ಮಾವ ನೀನು ||
ಜಾಲಮಾತಲ್ಲವಿದಕೆ | ನೀನೆನ್ನ | ಮೇಲೆ ಖತಿಗೊಳುವುದೇಕೆ || ೪೬ ||

ರವಿಜನತಿಬಲನಾತನು | ರಣದಿ ಕೆಣ | ಕುವರ ಕಾಣೆನು ಖ್ಯಾತನು ||
ದಿವಿಜ ದನುಜಾದ್ಯರೊಳಗೆ | ಸರಿಗಾಣೆ | ನವನಿಗೀ ಭೂಮಿಯೊಳಗೆ || ೪೭ ||

ಪಾನೀಯ ಸತ್ತ್ವವೆತ್ತು | ಬೆಳೆದರದು | ಹೀನವೇ ಜಗಕೆ ಮುತ್ತು |
ಹಾನಿಯೇನಿದು ಸೂತನ | ಮನೆಯೊಳಗೆ | ತಾನಿರ್ದರಿನಜಾತನ || ೪೮ ||

ವಿಕ್ರಮಕೆ ಕುಂದಪ್ಪುದೆ | ಭುಜಬಲಪ | ರಾಕ್ರಮಕೆ ಜರೆಯಪ್ಪುದೆ ||
ಶಕ್ರನಿವಗಲ್ಲ ಪಾಡು | ಬರಿದೆ ನೀ | ವಕ್ರಿಸದೆ ದಯವ ಮಾಡು || ೪೯ ||

**ವಾರ್ಧಕ**

ಸಾರಥ್ಯಮಂ ಗೆಯ್ದರೇಂ ಹೀನವೇ ಮಾವ |
ನೀರಜದಳಾಕ್ಷನೇನಭ್ಯಾಸಿಯೇ ನರನ |
ವಾರುವದ ಚಮ್ಮಟಿಕೆಯಂ ಪಿಡಿದನೇಕೈ ಪರೋಪಕಾರಾರ್ಥಮೆಂದ ||
ಧಾರಿಣಿಯೊಳೊರ್ವಂಗೆ  ಶೂರ ಸಾರಥ್ಯಮಂ |
ಪೂರಯಿಸಲದರಿಂದ ಕುಂದೇನು ಪೂರ್ವದೊಳ್ |
ವಾರಿಜಾಸನನಮರರಿಗೆ ಸಹಾಯವ ಮಾಡನೇಯೆಂದಡವನೆಂದನು || ೫೦ ||

**ರಾಗ ಮಾರವಿ ಏಕತಾಳ**

ಬಿಡು ಬಿಡು ಕೌರವನೃಪತಿ ಕುಲಾಧಮ | ನಡಿಗಡಿಗ್ಹೊಗಳದಿರು ||
ಪೊಡವಿಯೊಳವನತ್ಯಧಿಕ ತಾನಾದರೆ | ತಡೆಯದಿರೀ ಕ್ಷಣದಿ  || ೫೧ ||

ನಡೆರಾಧೇಯನ ಶಿರದಲಿ ಛತ್ರವ | ಪಿಡಿ ನೀನನಿತರಲಿ ||
ಒಡಹುಟ್ಟಿದವರ್ ಪ್ರೇಮದೊಳಾತನ | ಹಡಪಗಳನು ಹೊರಲಿ  || ೫೨ ||

ಆ ಮೇಲವನ ವರೂಥಕೆ ಸಾರಥಿ | ನೀ ಮಾಡಿಸು ತನಗೆ ||
ಭೂಮಿಯೊಳವನೆ ಧುರಂಧರ ಧೀರಸ | ಮಾನನೆನಿಸು ಬಳಿಕ || ೫೩ ||

**ಭಾಮಿನಿ**

ಕೀಳರಿಗೆ ನೆರೆಯಾಗಿ ಬಂದವ |
ಖೂಳನಲ್ಲವೆ ಮೇಣು ತನಗದು |
ಪೇಳಿ ಫಲವೇನಿನ್ನು ಪ್ರಾರಬ್ಧಾನುವಶದಿಂದ ||
ಮೇಳವಿಸಿತಲ್ಲದೆ ವಿರೋಧವ |
ತಾಳಲಿಂದೇನಪ್ಪುದಿದರೊಳು |
ಕೋಳುಹೋದುದು ನಿನ್ನ ನುಡಿ ಕೈಗೊಂಡೆ ನಿಂದಿನಲಿ  || ೫೪ ||

**ಕಂದ**

ವರ ಮಾದ್ರೇಶನ ನುಡಿಯಂ |
ಕುರುಭೂಪಾಲಕ ಕೇಳುತ ಹರುಷವ ತಾಳ್ದಂ ||
ತರಹರಿಸದೆ ಬಳಿಕವನನು |
ಸರಿಸಿದು ಮಾತಾಡಿದನತಿ ದೈನ್ಯದೊಳಾಗಲ್ || ೫೫ ||

**ರಾಗ ಕೋರೆ ಅಷ್ಟತಾಳ**

ಮಾವ ಕೋಪವೇನ್ಯೆ | ನಾ ಪೇಳುವ | ಈ ವಾಕುಗಳಿಂದೇನ್ಯೆ ||
ಹೇವವಿಲ್ಲದೆ ನಿಮ್ಮನು ನಂಬಿರ್ದವರೆಂಬ | ಭಾವದೊಳರಿಕೆಮಾಡಿದಡಿಂದೆನ್ನಯ ಮೇಲೆ || ೫೬ ||

ಆ ಧನಂಜಯನಲ್ಲಿಗೆ | ಸೂತನು ಮಧು | ಸೂದನನಿಹನಿಲ್ಲಿಗೆ ||
ರಾಧೆಯಾತ್ಮಜನ ಸಾರಥ್ಯವ ನೀ ಗೆಯ್ದು | ರೀ ಧರೆಯೊಳಗೆಮಗೆಣೆಯುಂಟೆ ಗ್ರಹಿಸಯ್ಯ || ೫೭ ||

ಅಮರರ ಕಾಯಲೆಂದು | ಕಪರ್ದಿಗೆ | ಕಮಲ ಸಂಜಾತನಂದು ||
ಭ್ರಮಿತ ಮುಪ್ಪುರದ ದಾನವರ ಸಂಗ್ರಾಮದೊ | ಳಮಳ ಸೂತತ್ವವ ಮಾಡಲಿಲ್ಲವೆ ಕೇಳು || ೫೮ ||

**ಭಾಮಿನಿ**

ಎನಲು ಕೇಳುತ ಶಲ್ಯ ನುಡಿದನು |
ಜನಪ ನಿನ್ನಯ ನುಡಿಗಳಿದುವೇ |
ಘನವಲ್ಲೈ ನಾನಿಂದು ಸಿಲುಕಿದೆನಾದಡಿಂದಿನೊಳು ||
ಮನುಮಥಾರಿಯು ತ್ರಿಪುರದೈತ್ಯರ |
ಹನನಗೆಯ್ದನದೆಂತು ವಾರಿಜ |
ತನಯನಾತಗೆ ಸೂತನಾಗಿಹ ಪರಿಯನರುಹೆಂದ || ೫೯ ||

**ವಾರ್ಧಕ**

ಆದಡೆಲೆ ಮಾವ ಕೇಳ್ ಪೂರ್ವದಲಿ ತಾರಕನಿ |
ಗಾದರು ತ್ರಿಯಾತ್ಮಜರು ಮೇಲಜನ ವರದಿಂದ |
ಲಾದುದವರಿಗೆ ಪುರತ್ರಯವಂಬರದೊಳು ಬಳಿಕವರು ಜಗಕಹಿತರಾಗಿ ||
ಆ ದೇವರಿಪುಗಳೊಡನಾಹವಕೆ ಹರನಯ್ದು |
ಲಾ ದಯಾನಿಧಿ ಸರಸಿಜಾಸನಂ ಸುರರ ಮೊರೆ |
ಯಾದರಿಸಿ ಸೂತತನಮಂ ಮಾಡಿ ತ್ರಿಪುರರಂ ನಾಶಮಂ ಗೆಯ್ದಿಸಿದನು || ೬೦ ||

**ಶಾರ್ದೂಲವಿಕ್ರೀಡಿತಂ**

ಮಾವಂ ಕೇಳದರಿಂದ ನೀ ಕೃಪೆಯನುಂ ಮಾಡೆಮ್ಮನುಂ ಪ್ರೇಮದಿಂ
ಕಾವಂಥಾ ತೆರನಿರ್ದಡೀ ಕ್ಷಣದೊಳುಂ ಕಾರುಣ್ಯದಿಂ ಪೇಳು ನೀ
ನೀ ವೀರಂ ಸುಭಟೋತ್ತಮಂ ಕಲಿಯಲೈ ನಿರ್ಮೋಹಕಾ ಯುದ್ಧದೀ
ಸೇವಾವೃತ್ತಿಯಿದಲ್ಲ ದಿಗ್ವಿಜಯಮಂ ಸೇರ್ವಂತೆ ಮಾಡೆಮ್ಮನುಂ || ೬೧ ||

**ಕಂದ**

ಎನೆ ಮಾದ್ರೇಶನು ಕೇಳ್ದಾ |
ತನ ನುಡಿಗೊಡಬಡಲಾ ರವಿಜನ ಕರೆದಾಗಂ ||
ವಿನಯದಿ ಶಲ್ಯನ ಕಯ್ಯೊಳು |
ಜನಪಂ ತೆಗೆದಿತ್ತು ಮನ್ನಿಸಿದನತಿ ಮುದದಿಂ || ೬೨ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಮೇಲೆ ಭೂಪತಿ ತೆರಳಿದನತ್ತ | ತ | ನ್ನಾಲಯಕಾಗಿ ಸೂರ್ಯಜನಿತ್ತ ||
ಕೋಲಿನ ಮನೆಗಾಗಿ ಬಂದನು | ಶಸ್ತ್ರ | ಜಾಲಕರ್ಚಿಪ ಮನದಂದನು || ೬೩ ||

ಧನುದೇವತೆಗೆ ಪೂಜೆ ಮಾಡಿದ | ಕ | ಯ್ಯನು ಜೋಡಿಸುತ ಜಯ ಬೇಡಿದ ||
ತನಿರಕ್ತಗಲಸಿದ ಬಲಿಗಳ | ನಿತ್ತು | ನೆನೆದನು ಭೂತ ಗಣಂಗಳ || ೬೪ ||

ಈಸು ಪೂಜೆಯನು ತಾನೆಸಗಲು | ದ | ರ್ಭಾಸನವನು ಹಾಸಿ ಮಲಗಲು |
ಗಾಸಿ ಮಾಡುತ್ತ ಕತ್ತಲೆಯನು | ಎಳೆ | ನೇಸರಿಂದರ್ಕ ರಂಜಿಸಿದನು || ೬೫ ||

**ವಾರ್ಧಕ**

ಇನನುದಯದೊಳಗೆದ್ದು ನಿತ್ಯ ಕರ್ಮಂಗಳಂ |
ವಿನಯದಿಂ ರಚಿಸಿ ಬಹುದಾನಂಗಳಂ ವಿಪ್ರ |
ಜನಕಿತ್ತು ರವಿಜನತಿ ರಭಸದಿಂ ಕೊಳುಗುಳಕೆ ಸನ್ನದ್ಧನಾಗಿ ಬರಲು ||
ಅನಕ ಮಾದ್ರೇಶನಯ್ತಂದು ನಿಜಸ್ಯಂದನವ |
ನನುಗೊಳಿಸಿ ತುರಗಂಗಳಂ ಜೋಡಿಸುತ್ತಲಾ |
ಗನುವರಕ್ಕುದ್ಯುಕ್ತನಾಗಿ ನಿಂದಿರೆ ಕಂಡು ರವಿಜನತ್ಯುತ್ಸಹದೊಳು || ೬೬ ||

**ಭಾಮಿನಿ**

ಸಾರಥಿಗೆ ವಂದಿಸಿ ವರೂಥದ |
ವಾರುವಂಗಳಿಗೆರಗಿ ಸೊಗಯಿಪ |
ತೇರಿಗೆ ಪ್ರದಕ್ಷಿಣೆಯ ಗೆಯ್ದೊಡನಂದು ಸಂತಸದಿ ||
ಭೂರಿ ವಾದ್ಯದ ವಂದಿಜನಕಯ್ |
ವಾರಿಸಲು ಪಟುಭಟರ ಗಡಣದೊ |
ಳೇರಿದನು ಕಲಿ ಕರ್ಣನಹಿತರ ಧೈರ್ಯಘಟ ಬಿರಿಯೆ || ೬೭ ||

**ಕಂದ**

ದಳಪತಿ ಸನ್ನಹವಾಗಲು |
ತಿಳಿದಾ ಕ್ಷಣ ಮಹಿಪಾಲಕನತಿರಥರೊಡನಂ ||
ತುಳುಕುವ ಶರಧಿಯವೋಲ್ ಕೊಳು |
ಗುಳಕೆನುತಯ್ತಂದನು ರವಿಜಾತನ ಪೊರೆಗಂ || ೬೮ ||

**ರಾಗ ಕಾಂಭೋಜಿ ಝಂಪೆತಾಳ**

ಕೇಳು ಧೃತರಾಷ್ಟ್ರಾವನಿಪ ನಿನ್ನ ಮದದಾನೆ | ಯಾಳುತನದುಬ್ಬಿನಬ್ಬರವ ||
ಸೂಳವಿಪ ಭುಜಪ್ರತಾಪಗಳಿಂದ ಭುಲ್ಲವಿಸಿ | ತೇಳು ಭುವನಂಗಳನು ಬಳಿಕ || ೬೯ ||

ಕಲಿ ಕರ್ಣನೆಂದನೀ ದಳನಿಕಾಯದೊಳೆನಗೆ | ಫಲುಗುಣನ ಕುರುಹುಗಳ ಮತ್ತಾ |
ಜಲಜನಾಭನ ಮಯ್ದುನನ ವರೂಥದ ನೆಲೆಯ | ಕಲಹದ ಕಠೋರವನು ಸಹಿತ || ೭೦ ||

ತೋರ್ವರಾರವರಿಂಗೆ ಬೇಕಾದ ದ್ರವ್ಯಗಳ | ನೂರ್ವಿ ಮೊದಲಾದ ವಸ್ತುಗಳ ||
ಸರ್ವಸ್ವವನು ಕೊಟ್ಟು ಮನ್ನಿಸುವೆ ನಿಮಿಷಕಾ | ಗರ್ವಿತನ ಮುಂಕೊಳಿಪುದೆಂದ || ೭೧ ||

ಬವರದೊಳಗೆನ್ನ ತನುವಾ ಧನಂಜಯನ ಕೂ | ಡವನ ತನುವೆನ್ನೊಳನುವಾಗಿ ||
ತವಕಿಸುತಲೀ ಪರಿಯ ಸಮಯುದ್ಧವೆಸಗಿದೊಡೆ | ಭುವನವಿಖ್ಯಾತನಹೆ ಬಳಿಕ || ೭೨ ||

ಪಾಕಶಾಸನಸುತನ ತರಿದು ರಕುತವ ಭೀಮ | ನಾ ಕಪಾಲದೊಳು ಮೊಗೆಮೊಗೆದು |
ಶಾಕಿನಿಯ ಬಳಗಕುಣಿಸಿದರೆ ಕೌರವನೆನ್ನ | ಸಾಕಿದಕೆ ಫಲವಾಯಿತೆಂದ || ೭೩ ||

**ವಾರ್ಧಕ**

ವಿಜಯನೊಡನಾಹವದೊಳಿದಿರಾಗಿ ಪಾರ್ಥನೊಳ್ |
ಭುಜಪ್ರತಾಪದಿ ಸೆಣಸುತಾ ಕಿರೀಟಯ ಕೂಡೆ |
ನಿಜ ಶೌರ್ಯಮಂ ತೋರುತರ್ಜುನನ ಕೆಣಕಿದು ಧನಂಜಯನ ಚಚ್ಚರದೊಳು ||
ಭಜಿಸುತ ಬಿಭತ್ಸುವಿನ ನುಗ್ಗೊತ್ತಿ ನರನೊಳಜಿ |
ಗಿಜಿಯಾಗಿ ಸವ್ಯಸಾಚಿಯ ಸದೆದು ಜಿಷ್ಣುವಂ |
ಗಜರಿಸುತ ಫಲುಗುಣನೊಳೆಚ್ಚಾಡಿ ಸರಸದಿಂ ಕಾದಲಾಂ ಧನ್ಯನೆಂದ || ೭೪ ||

**ಭಾಮಿನಿ**

ಶ್ವೇತವಾಹನಗೆನಗೆ ರಣನಿ |
ರ್ಭೀತ ಗಾಂಡೀವಿಗೆ ಮಹೋನ್ನತ |
ವೀತತುಕ್ಷಣಕಳವಿ ಘಟಿಸಿದರೀ ಧರಿತ್ರಿಯಲಿ ||
ಖ್ಯಾತನಹೆ ತಾನೆಂದು ಬಲು ಸ |
ತ್ವಾತಿಶಯದಿಂದುಬ್ಬಿ ರವಿಸಂ |
ಜಾತ ನುಡಿಯಲು ಕೇಳ್ದು ಬಳಿಕಾ ಶಲ್ಯನಿಂತೆಂದ || ೭೫ ||

**ರಾಗ ಮಧ್ಯಮಾವತಿ ಏಕತಾಳ**

ಕೇಳು ಸೂತನ ತನಯನೆ ನೀನು | ಈ | ಖೂಳತನಕೆ ನಾನುಸಿರುವುದೇನು || ಕೇಳು  || ಪ ||

ವ್ಯರ್ಥವೀ ಜನಕೆಲ್ಲ ಮೊರೆಯಿಟ್ಟರೇನಪ್ಪು |
ದರ್ತಿಯಿಂದೆನಗೆ ನೀ ಪೇಳ್ದರೀಗ ||
ಪಾರ್ಥಿವರೊಳು ನಿರುಪಮ ಶೌರ್ಯವಂತ ಸ |
ಮರ್ಥನರ್ಜುನನನು ನಾ ತೋರಿಸುವೆನಯ್ಯ | ಕೇಳು || ೭೬ ||

ಕೊಡದಿರು ಕಾಸೊಂದೆನಗೆ ಈ ಕ್ಷಣದೊಳು |
ಬಿಡದೆ ರಣಾಂಗಣದೊಳಗೊಲಿದು ||
ಧಡಿಗ ನಿನ್ನಯ ಕರುಳ ತೋಡಿ ರಣದಿ ಜಯ |
ಮಡದಿಯನೊಯ್ವ ಕಲಿ ನರನ ತೋರುವೆನೀಗ || ಕೇಳು || ೭೭ ||

ಅವರಿವರೊಳು ನೀ ಪಲ್ಗಿರಿವುದೇತಕೆ ಸರ್ವ |
ಸ್ವವನಿತ್ತು ನೋಡುವ ಮನವಿರ್ದಡೆ ||
ಬವರಗಾರರ ದೇವ ರಿಪುವಂಶಗಜ ಕಂಠೀ |
ರವನ ತೋರುವೆ ನಾನು ನೀ ಮಾಳ್ಪುದೇನು || ಕೇಳು || ೭೮ ||

**ವಾರ್ಧಕ**

ಎಲೆ ಮೊಗೇರನ ಮಗನೆ ಗಳಹದಿರು ನಿನಗೇಕೆ |
ಕಲಿ ನರನ ಸಂಗರದ ಮಾತು ಸುರಗಜವೆತ್ತ |
ಹುಲು ಕೋಣ ನೀನೆತ್ತ ಬಯಲ ಪೌರುಷವಿದಕೆ ತಾ ಮೆಚ್ಚೆ ಪೋಗೆಂದನು ||
ಕಲಕಿದುರಿಯಂತೆ ರೋಷಂ ಪೆಚ್ಚಿದಾಲಿಗಳ್ |
ಬಲಿದ ಕಿಡಿಯುಗುಳಿದವು ಮೋರೆ ಕಾಯ್ದಂತಾಯಿ |
ತಲುಗಿದವು ಮೀಸೆಗಳು ತುದಿವೆರಳನಾಡಿಸುತಲಾ ಕರ್ಣನಿಂತೆಂದನು || ೭೯ ||

**ರಾಗ ಕೇದಾರಗೌಳ ಅಷ್ಟತಾಳ**

ಖೂಳ ಮಾದ್ರೇಶ ನೀನೇನೆಂದೆಯೆಲವೊ ಈ | ರೇಳು ಲೋಕದೊಳೆನ್ನನು |
ಕೇಳಿ ಬಲ್ಲರು ಬಿಡು ಬಿಡು ನಿನ್ನ ಪೌರುಷ | ದೇಳಿಗೆಯನು ಸುಮ್ಮನೆ || ೮೦ ||

ಹುರುಳೇನು ಹಳ್ಳಿಯ ಕುರುಬರ್ಗೆ ಠಕ್ಕಿನ | ಹರಳು ಮಾಣಿಕವಲ್ಲವೆ |
ಧರೆಯೊಳು ಶಿಥಿಲಪೌರುಷರಿಗೆ ನರನಂಥ | ಧುರಧೀರರಿಲ್ಲವೆಂದು || ೮೧ ||

ಕಾಣುವುದೀ ಮಾತು ಸಹಜವಾಗಿದೆ ಮಾದ್ರ | ಕ್ಷೆಣಿಪಾಲರ ವಂಶಕೆ |
ಕೇಣವಲ್ಲದೆ ದುರ್ಗುಣಂಗಳ ಚೇಷ್ಟೆಯ | ಠಾಣವಲ್ಲದೆ ಬೇರುಂಟೆ || ೮೨ ||

ಅಹಿತರು ಸಲೆ ಮತ್ಸರಿಗಳು ಸುಜ್ಞಾನವಿ | ರಹಿತರು ನಿಷ್ಕೃಪರು ||
ಕುಹಕಿಗಳತಿ ಚಾಂಡಾಲರು ಮಾದ್ರಾ | ಮಹಿಯೊಳಗುದಿಸಿರ್ಪರು || ೮೩ ||

ಎಲೆ ಷಂಡ ಕೇಳು ನೀನಿಂದು ಕಿರೀಟಿಯ | ಬಲುಹಿಗೆ ಬೆದರಿಕೊಂಡು ||
ಹುಲುಭಟನೆಂದೆನ್ನ ಜರೆದೆಯ ಕರ್ಣನ | ಕಲಿತನವರಿಯದಿಂತು || ೮೪ ||

**ಭಾಮಿನಿ**

ಕ್ಷಿತಿಪ ಕೇಳೈ ಬಳಿಕ ಸೂರ್ಯನ |
ಸುತನ ಶಲ್ಯನ ನುಡಿಗೆ ನುಡಿ ಹೆ |
ಚ್ಚಿತು ಮಹಾಭಯವಾದುದೀರ್ವರ ರಭಸದದುಭುತಕೆ ||
ಅತುಳಬಲ ಮಾದ್ರೇಶನಿತ್ತಲು |
ಜತೆಯ ನಿಜ ಮೋಹರವ ನೆರಹಿಸ |
ಲತಿ ಪರಾಕ್ರಮಿ ಕರ್ಣ ತಿಳಿದೆಚ್ಚರಿಸೆ ಸೈನಿಕವ || ೮೫ ||

**ಕಂದ**

ಕಳಕಳದಿಂದಾ ರಣಕಂ |
ದಳವನು ನೆರಹಿಸಲಾ ಶಲ್ಯನು ರಥದಿಂದಂ ||
ಇಳಿದಯ್ದಿದನಾ ಕ್ಷಣಕಾ |
ಒಳಕೋಟೆಯೊಳೆದ್ದುದು ಕದನದ ಬಲು ರಭಸಂ || ೮೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೂಡೆ ಕೇಳುತ ಬಂದ ಕೌರವ | ರೂಢಿಪತಿ ಒಳತೋಟ ನಿಲಿಸಿ ವಿ |
ಭಾಡಿಸಿದ ಶಲ್ಯಂಗೆ ಶಾಂತವ | ಮಾಡಿ ಬಳಿಕ || ೮೭ ||

ರವಿಜ ಮಾದ್ರೇಶ್ವರರ ಮನಕ್ಲೇ | ಶವನು ಬಿಡಿಸಿದು ಮತ್ತೆ ಹರುಷವ |
ಹವಣಿಸುತ ನೆರೆಗೆಯ್ದು ಕಳುಹಿದ | ಬವರಕಾಗ || ೮೮ ||

ಮೊಳಗಿದವು ನಿಸ್ಸಾಳಕೋಟಿಯು | ಕಳಕಳಧ್ವನಿ ಬೆದರಿಸಿತು ಜಗ |
ವಳುಕಿದುದು ಫಣಿ ಕೂರ್ಮ ದಿಗ್ಗಜ | ವಿಳೆಯು ನಡುಗೆ || ೮೯ ||

**ವಾರ್ಧಕ**

ಅಬ್ಬರಿಸಿ ಮೋಹರವ ನೂಕಿದಂ ಕೂಡೆ ಧರೆ |
ಗುಬ್ಬಸಂ ಘಟಿಸುವಂತೀ ಚಮೂಪಂ ನಡೆಯ |
ಲಿಬ್ಬದಿಯೊಳವಶಕುನಮಂ ಕಂಡು ಗಣ್ಯಕದನುಂ ತಾರದಾ ಕ್ಷಣದೊಳು ||
ಉಬ್ಬಿದ ಮದಾಂಧತನದಿಂದಯ್ದುತಿಹ ಭಟರ |
ಬೊಬ್ಬೆಯಿಂ ಘೀಳಿಡುವ ವಾರಣರವಂಗಳಿಂ |
ದುಬ್ಬರದ ಚಾಪಠೇಂಕಾರದಿಂದಯ್ದೆ ರಿಪುಸೇನೆ ತಾ ಮುಕ್ಕುರಿಸಿತು || ೯೦ ||

**ಭಾಮಿನಿ**

ಅಳವಿಯಲಿ ಚತುರಂಗಸೇನೆಯು |
ಹಳಚೆ ಹೊಸ ಕುಮ್ಮರಿಯ ಪೋಲ್ರಣ |
ದೊಳಗೆ ಪೆಣ ಸಾಲಿಟ್ಟು ಕೆಡೆದುದು ರಕುತ ಮಡುಗಟ್ಟಿ ||

ತಳಿತನೊಣಗಳ ಮಿದುಳ ಮಾಂಸಂ |
ಗಳಲಿ ರೌದ್ರಾಕಾರವೆಸೆದುದು |
ಬಳಿಕ ರಣವಿಕ್ರಮರು ತಾವ್ ಕೈಗೊಂಡರಾಹವವ || ೯೧ ||

**ಕಂದ**

ಇತ್ತಲು ಸಮಸಪ್ತಕರೊಡ |
ನೊತ್ತುತಲೊಂದೆಸೆಯಲಿ ಕಾದುತ್ತಿರೆ ಪಾರ್ಥಂ ||
ಅತ್ತಲು ಕೌರವಬಲಕೆ ಮ |
ರುತ್ತಜ ತಾಗಲು ರವಿಜಂ ಬೆರಸಿದ ನೃಪನಂ || ೯೨ ||

**ರಾಗ ದೇಶಿ ಮಟ್ಟೆತಾಳ**

ಎಲೆಲೆ ಧರ್ಮಜ | ನಿಲ್ಲು ಸಮರಕೆ || ಸುಲಭವೇ ಧರಾಧಿಪತ್ಯ | ದೊಲವು ಇನಿತಕೆ || ೯೩ ||
ನಿನಗೆ ಸಮರದ | ವ್ಯಸನವೇತಕೆ || ಬಿನುಗೆ ನೀ ಪಲಾಯನಕ್ಕೆ | ಮನವ ಕೊಡದಿರು || ೯೪ ||
ಎಂದು ಕನಲುತ | ರವಿಜ ರೋಷದಿ || ಅಂದು ಮರಳಿ ನೂರು ಶರಗ | ಳಿಂದ ಮುಸುಕಿದ ||೯೫||

**ಭಾಮಿನಿ**

ಎಲೆಲೆ ಹಾ ಹಾ ಖೂಳ ಕರ್ಣನ |
ಬಲುಹು ಬಿರುಸ್ಸೆ ಕೋಳು ಹೋದುದು |
ಸಲೆ ನೃಪಾಲನ ಬಿಡಿಸಿಕೊಳ್ಳುವರಿಲ್ಲಲಾ ಎನುತಾ ||
ಬಲವು ಬೊಬ್ಬಿಡುತಿರಲು ಕೇಳಿದು |
ಕಲಿ ಮರುತ್ಸತಮುಖ್ಯ ಸೇನಾ |
ಜಲಧಿ ಕವಿದುದು ರವಿಜನಿದಿರಲಿ ನೃಪನ ಹಿಂದಿಕ್ಕಿ || ೯೬ ||

**ರಾಗ ಭೈರವಿ ಏಕತಾಳ**

ಪೂತುರೆ ರಾಧಾತನುಜ | ಬಲು | ಘಾತಕಿಯಹುದೈ ಸಹಜ ||
ಪಾತಕಿಯೇ ನಲಿದಾಡಿ | ಪು | ಣ್ಯಾತುಮನೊಳು ಕೈಮಾಡಿ || ೯೭ ||

ಬದುಕುವೆನೆಂಬಾಸೆಯಲಿ | ಬಂ | ದೊದಗಿದೆ ದುರ್ವಾಂಛೆಯಲಿ ||
ಸದರವೆ ನಿನಗೆಂದೆನುತ | ಮುಸು | ಕಿದರೆಲ್ಲರು ಝೋಂಪಿಸುತ || ೯೮ ||

ದ್ಯುಮಣಿಯ ಸುತನದ ಕಂಡು | ತಾ | ನಿಮಿಷದೊಳಗೆ ಮುಂಕೊಂಡು ||
ಸಮರದಿ ರಿಪು ಸೇನೆಯನು | ಸದೆ | ದೆಮನ ಪುರಿಗೆ ಕಳುಹಿದನು || ೯೯ ||

**ವಾರ್ಧಕ**

ಚತುರಂಗಬಲವ ಸಂಹರಿಸಿದು ರಣಾಂಗಣದೊ |
ಳತುಳ ಧೃಷ್ಟದ್ಯುಮ್ನನಂ ಸದೆದು ಮಾದ್ರಿಜರ |
ಸತುವಮಂ ನೆರೆಗೆಡಿಸಿ ದ್ರೌಪದೇಯರ ಜಡಿದು ಪಾಂಚಾಲಕೇಕಯರನು ||
ಮತಿವಿಹೀನರ ಮಾಡಿ ಮಿಕ್ಕಾದ ನಾಯಕರ |
ಪತಿತರೆಂದೆನಿಸಿ ಕಲಿಭೀಮನಂ ತಿರುಗಿಸುತ |
ಪ್ರತಿಭಟಭಯಂಕರಂ ಬೊಬ್ಬಿರಿದ ಸಾಹಸಕೆ ಮೆಚ್ಚಿದಂ ಮಾದ್ರೇಶನು || ೧೦೦ ||

**ರಾಗ ಕಾಂಭೋಜಿ ಅಷ್ಟತಾಳ**

ಭಳಿರೆ ರಾಧೇಯ ಮೆಚ್ಚಿದೆನು | ನಿನ್ನ | ಕೊಳುಗುಳವ ಕಂಡು ಹೆಚ್ಚಿದೆನು ||
ಸುಳಿವವರಾರು ಭೂ | ತಳದಿ ಸುರಾಸುರ |
ರೊಳಗೆ ನಿನ್ನ ಸಮಾನರಹದಳ | ದುಳದ ಭಟರುಗಳಿಲ್ಲವೈ || ೧೦೧ ||

ಏಸು ಬಲಾಢ್ಯ ತೋಳುಗಳೊ | ಮೇಣಿ | ನ್ನೇಸು ವಿಕ್ರಮದ ಬಾಣಗಳೊ ||
ಈಸು ಪೆಣಂಗಳ | ರಾಸಿಯ ಕದನದಿ |
ಬೇಸರಿಸದೆ ನೀನೊಟ್ಟಿದೈ ಶಾ | ಭಾಸುರೇ ಕಲಿ ಧೀರನ್ನೆ || ೧೦೨ ||

ರಥಕೆ ತಾನಿಂಬಿಲ್ಲ ಪೊಗಲು | ತ್ರಿಪುರ | ಮಥನನಾಟೋಪಕೆ ಮಿಗಿಲು ||
ಪ್ರತುಳ ಶೌರ್ಯಂಗಳ | ಕಥೆ ಪೊಸತಿಂದಿಗೆ |
ಪೃಥೆಯ ಮಕ್ಕಳು ನಿನ್ನ ಶರಗಳ | ವ್ಯಥೆಗೆ ಮೈಗೊಡದಿರ್ಪರೆ || ೧೦೩ ||

**ಭಾಮಿನಿ**

ಎಂದು ಶಲ್ಯನು ಪೊಗಳುತಾಕ್ಷಣ |
ಸ್ಯಂದನವ ತಾ ವಾಮಭಾಗದೊ |
ಳಂದು ನಡೆಸಲು ಪೊಕ್ಕನಾ ಕಲಿಕರ್ಣನಬ್ಬರಿಸಿ
ಮಂದಿಯಜಗಿಜಿಯಾಗೆ ಬಳಿಕೆಮ |
ನಂದನನೆ  ಬಿಲ್ ಹಿಡಿಯದೇತಕೆ |
ಪಿಂದುಗಳೆವೆಯೆನುತ್ತಲಾ ಝೋಂಪಿಸುತಲಿದಿರಾದ ||೧೦೪||

**ರಾಗ ಪಂಚಾಗತಿ ಮಟ್ಟೆತಾಳ**

ಪೂತು ಮಝುರೆ ಕರ್ಣ ನಿನ್ನೊ | ಳಾತುಕೊಂಬಡಯ್ದೆ ಸತ್ತ್ವ |
ದಾತಿಶಯಗಳುಂಟೆ ನಮ್ಮ | ದೇತರದು ಶರ ||
ಮಾತಿನಿಂದಲೇನು ಫಲ ವಿ | ಖ್ಯಾತನಹೆಯೆನುತ್ತಲಾಪ |
ರೇತಪತಿಯ ತನುಜ ಬಾಣ | ಜಾತ ಕವಿಸಲು  || ೧೦೫ ||

ಧೀರನುರೆ ಶಭಾಸು ನಿನಗಿ | ದಾರು ಕಲಿಸಿಕೊಟ್ಟರೆಂದು |
ಭೂರಿ ಸರಳ ಸವರುತುರೆ ಪ | ಚಾರಿಸುತ್ತಲೆ ||
ಚಾರುವರಿವುತಂದು ರವಿಕು | ಮಾರ ಕನಲಿ ಭೂಪನೆದೆಯ |
ಬೀರುವಂತೆಯೆಚ್ಚ ಶರದ | ಸಾರ ಘಟಿಸಲು || ೧೦೬ ||

ನಿಶಿತಶರಸಮೂಹವಯ್ದಿ | ಪಸರಿ ನೃಪನ ತೇರು ಟಕ್ಕೆ |
ಎಸೆವ ಕುದುರೆಗಳನು ಸಹಿತ | ಕುಸುರಿದರಿದನು ||
ಅಸಮ ವೀರನೊಲಿದು ಮೂರು | ವಿಶಿಖದಿಂದಲೊಡನೆ ನೃಪತಿ |
ಗೆಸೆಯೆ ಬೇಗ ಧಾತುಗೆಟ್ಟು | ವಸುಧೆಗುರುಳಿದ || ೧೦೭ ||

**ವಾರ್ಧಕ**

ನೃಪ ಮೂರ್ಛೆಯಿಂದಿರಲ್ ಕಂಡು ರಾಧೇಯನತಿ |
ಕೃಪಣದಿಂ ಜರೆದೆಂದನೆಲೆ ಮರುಳೆ ಬರಿದೆ ಭೂ |
ಮಿಪನಾಗಬಹುದೆ ರಣದೊಳು ಕಾದಿಜಯಿಸದಡೆ ಧರೆ ನಿನ್ನ ಕಯ್ವಿಡಿವಳೆ ||
ವಿಪುಳ ಸಿಂಹನ ಕೂಡೆ ನರಿಗೆ ಸೆಣಸಾಟವೇ |
ಶಪಥವೇನಿನ್ನು ತಾಯ್ನುಡಿಗೊಂಡರಿಂ ನಿನ್ನ |
ವಪುವ ರಕ್ಷಿಸಿಬಿಟ್ಟೆ ಪೋಗೆಂದು ಜಡಿದವಂ ತಿರುಗಿದಂ ಖಾತಿಯಿಂದ || ೧೦೮ ||

**ಕಂದ**

ರವಿಜಂ ಮರಳಲ್ಕಾಗಲ್ |
ಪವನಜನಿತ್ತಲು ವೈರಿಚುತುರ್ಬಲವೆಲ್ಲಂ ||
ಸವರಿ ಮಹಾರಥರತಿರಥ |
ರವಘಡಿಸುತಲಾ ಕುರುನೃಪನೆಡೆಗಡಹಾಯ್ದಂ || ೧೦೯ ||

**ರಾಗ ಶಂಕರಾಭರಣ ಮಟ್ಟೆತಾಳ**

ಗಾರುಗೆಡದಿರೆಲವೊ ಕುಹಕಿ | ಗಾರ ನಿನ್ನಯ |
ಮೋರೆಯನ್ನು ಪದುಳದಿಂದ | ತೋರಿಸೆನ್ನಯ ||
ಭಾರಿ ಗದೆಯು ನಿನ್ನ ಗೆಲಲು | ಚಾರುವರಿವುದು |
ಸಾರಿ ಮುಂಬರಿವುತಿದಕೊ ಕೈ | ಮೀರಿ ಬರುವುದು || ೧೧೦ ||

ನಿಲ್ಲು ಪಿಂತೆ ಸರಿಯಬೇಡ | ಖುಲ್ಲನೆನುತಲಿ |
ಪಲ್ಲ ಮೊರೆದು ಭರದಿ ಗಜರಿ | ಮಲ್ಲ ನಗುತಲಿ
ಮೆಲ್ಲನಯ್ದುತವನ ಸಾರಿ | ಚೆಲ್ಲಬಡಿಯಲು |
ಬಲ್ಲಿದಧಟ ಕುರುಮಹೀಶ | ರೆಲ್ಲ ಸಿಡಿಯಲು || ೧೧೧ ||

ಬಳಿಕ ವಿಶ್ರಮಿಸಿಕೊಂಡು | ಕಳನೊಳೀರ್ವರು |
ಮುಳಿದು ಕಾದಲಾಗ ನೋಡ | ಉಳಿದ ಸರ್ವರು ||
ಪೊಳೆವ ಭೀಮಸೇನನೆಚ್ಚ | ಹಿಳುಕಿನಿಂದಲಿ |
ಬಳಲಿ ನೃಪತಿ ಹೊಕ್ಕ ತನ್ನ | ದಳದ ಸಂದಿಲಿ || ೧೧೨ ||

**ಭಾಮಿನಿ**

ಅರಸ ಬಳಲಿದನೆಂದು ತವಕದಿ |
ಗುರುಜ ಕೃತವರ್ಮಾದಿ ಸಮರದ |
ಹರಿಬಕಾರರು ಬಂದು ಝೋಂಪಿಸಿಕೊಳ್ಳಲಂದವರು ||
ತರಣಿತನುಜಗೆ ತೋರಿ ಶಲ್ಯನು |
ಜರೆದನೆಲವೋ ಪಾಪಿ ಸುಡು ನೀ |
ಪರಮ ಘಾತವ ನೆನೆದರದು ತಾ ಬಿಡದು ನಿನಗೆನುತ || ೧೧೩ ||

**ಕಂದ**

ಸಲೆ ಮಾದ್ರೇಶನ ನುಡಿಗಂ |
ಕಲಿಕರ್ಣಂ ತವಕದೊಳಯ್ತಂದತಿ ಭರದಿಂ ||
ಫಲುಗುಣನಗ್ರಜನೊಳು ಮಾ |
ರ್ಮಲೆತುರೆ ಸಂಗ್ರಾಮದೊಳೆಚ್ಚಾಡಿದನಾಗಂ || ೧೧೪ ||

**ರಾಗ ಘಂಟಾರವ ಅಷ್ಟತಾಳ**

ಎಲವೊ ಭೀಮನೆ ಗೆಲಿದೆಮ್ಮ ಸೈನ್ಯವ |
ನಿಳೆಯಪಾಲನ ಮೇಲೆ ಮಲೆತಿಹ | ಬಲುಹ ನಿಲಿಪೆನು ತೋರೆಲಾ || ೧೧೫ ||

ಸೂತನಂದನ ಬಗುಳದಿರೆಲೊ ನಿನ್ನ |
ನೀ ತತೂಕ್ಷಣ ಗೆಲಿದು ಕುಹಕಿಯ | ಘಾತಿಸುವೆನೆಂದೆಚ್ಚನು || ೧೧೬ ||

ಎಚ್ಚ ಬಾಣವ ತರಿದೆಸೆಯಲಿಕದ |
ನುಚ್ಚುಗೆಯ್ಯುತ ಹೆಣಗಲಭ್ರದೊ | ಳಚ್ಚರಿಸೆ ಸುರರೆಲ್ಲರು || ೧೧೭ ||

**ರಾಗ ದೇಶಿ ಅಷ್ಟತಾಳ**

ಕಾದಿದರ್ ಮತಿಯುತ ಭೀಮರವಿಜರು |
ಮೇದಿನಿಯ ಸುಭಟಾಳಿತಾವ್ ಬೆರ | ಗಾದರೀ ಪರಿ ಸಮರದಿ  || ೧೧೮ ||

ಎಚ್ಚ ಬಾಣವ ಗುಡಿಕಟ್ಟಿದನು ಕರ್ಣ |
ಕಿಚ್ಚಿನಂತುರಿಮಸಗುತದರನು | ನುಚ್ಚುಗೆಯ್ದನು ಮರುತಜ  || ೧೧೯ ||

ಹೆಚ್ಚೆ ರೋಷದಿ ಬಳಿಕ ರಾಧೇಯನು |
ಚುಚ್ಚುವಂದದಿ ಸರಳನೆಸೆಯಲು | ಮೆಚ್ಚೆ ಖಂಡಿಸಲಾತನು || ೧೨೦ ||

ಮತ್ತೆ ಬೊಬ್ಬಿರಿದಾರ್ದು ಶರಂಗಳ |
ಮೊತ್ತ ಸುರಿಯಲು ಕೂಡೆ ಭೀಮನ | ಮುತ್ತಿದನು ಸರ್ವಾಂಗದಿ || ೧೨೧ ||

ತತ್ತ ಮಾರ್ಗಣವೆಲ್ಲ ಸಂಹರಿಸಿ ಮ |
ರುತ್ತಜನು ಕಲಿಯಾಗಿ ರಿಪುಭಟ | ನುತ್ತಮಾಂಗದೊಳೆರಗಿದ || ೧೨೨ ||

**ವಾರ್ಧಕ**

ತುಂಗಭುಜಬಲ ವೃಕೋದರನಯ್ದೆ ಜಡಿದು ರಿಪು |
ಪುಂಗವನ ಸುವರೂಥದಿಂದೆಳೆದು ಕೊರಳೌಕು |
ತಂಗಮಂ ಜಜ್ಝರಿತಮಂ ಗೆಯ್ದು ಕೆಡಹಲ್ಕೆ ಮಾದ್ರಾವನೀಶನಂದು ||
ಹಂಗಿಗಂ ತಾನಾಗಿ ಪೇಳ್ದನೆಲೆ ಭೀಮ ನೀ |
ಸಂಗರದಿ ಕಲಿಯಲ್ಕೈ ಸಾಕು ಬಿಡು ಕರ್ಣನಂ |
ಭಂಗಿಸಿದೆ ಮೇಣೇತರವಮಾನಗಳು ಬೇಕು ಶೌರ್ಯವಂತರಿಗೆಂದನು || ೧೨೩ ||

**ಕಂದ**

ಕೇಳಿದು ಶಲ್ಯನ ವಚನವ |
ಭಾಳವಿಲೋಚನನಂದದಿ ಮಾರುತ ತನಯಂ ||
ಘೋಳಿಡುತಯ್ತರಲಾ ಕುರು |
ಪಾಳೆಯದತಿರಥರುಗಳಂ ತರುಬಿದನಾಗಳ್ || ೧೨೪ ||

**ಭಾಮಿನಿ**

ಮೇದಿನಿಪ ಕೇಳಿತ್ತ ಮೂರ್ಛಿತ |
ನಾದ ಧರ್ಮಜನೆದ್ದು ರಕುತದಿ |
ತೋದ ಮೈ ತೊಳೆದಮಲ ವಸ್ತ್ರವನುಟ್ಟು ವಿಶ್ರಮಿಸಿ ||
ಕಾದಿ ಮೈಮರೆದೊರಗಿರುವ ಛಲ |
ವಾದಿ ರವಿಸುತನೆದ್ದು ಬಂದು ವೃ |
ಕೋದರನ ಮರೆಮಾಚಿ ಭೂಪನ ಬೆರಸುತಯ್ತಂದ || ೧೨೫ ||

**ರಾಗ ಮಾರವಿ ಏಕತಾಳ**

ಅಬ್ಬರಿಸಿನಸುತ | ನುಬ್ಬುವ ಕಲಿಗಳಿ | ಗುಬ್ಬಸದಾಕೃತಿ | ಹಬ್ಬಿಸಿ ಚಾಪವ |
ತೆಬ್ಬ ಝೇವಡೆದತಿ | ಬೊಬ್ಬೆಗಜಾಂಡವು |
ಇಬ್ಬದಿಯಾಗಲು | ದಬ್ಬಿದ ರಥವ | ಏನನೆಂಬೆ || ೧೨೬ ||

ಘಡ ಘಡ ಭೂಪತಿ | ಪಿಡಿ ಪಿಡಿ ಚಾಪವ | ತೊಡು ತೊಡು ಮಾರ್ಗಣ | ಗಡಬಡಿಸುತ ಹಿಂ |
ದಡಿಯಿಡಬೇಡಿಕೊ | ನುಡಿ ನುಡಿಯೆನುತಲೆ |
ಎಡೆಬಿಡದಾ ಕ್ಷಣ | ಗುಡುಗುಡಿಸುತಲೆ | ತಡೆದನಾಗ || ೧೧೭ ||

ಬಂತಿದು ಮರಳಿ ಕೃ | ತಾಂತಸ್ವರೂಪವ | ನೆಂತು ಸೈರಿಪೆನೆನು | ತಂತಕಸುತ ಬಲ |
ವಂತನು ತನಗತಿ | ಚಿಂತಿಸಿ ರಣಕಿದಿ |
ರಾಂತನು ಪ್ರತಿ ಜವ | ನಂತೆ ಗರ್ಜಿಸುತ | ಖಾತಿಯಿಂದ || ೧೧೮ ||

ಆ ತುರಗಾನೆ ವ | ರೂಥ ಸಮೇತ ಪ | ದಾತಿ ಸಕಲ ಸಂ | ಖ್ಯಾತವ ಕ್ಷಣದಿ ನಿ |
ಪಾತವ ಗೆಯ್ದುದು | ಭೂತದಿ ಪಾರ್ಥಿವ |
ಜಾತರ ಬಿಡದುರೆ | ಘಾತಿಸೆ ಕರ್ಣ | ಕೇಳು ಭೂಪ || ೧೧೯ ||

**ವಾರ್ಧಕ**

ಇಳೆಯಪತಿ ಲಾಲಿಸೈ ಕರ್ಣನೆಸೆದಿರ್ದ ದಳ |
ದುಳಕೆ ಧೃಷ್ಟದ್ಯುಮ್ನ ಮೊದಲಾದ ಪಾಂಡವರ |
ದಳದ ನಾಯಕರು ಸತ್ತ್ವದಿಕುಂದಿ ಹರಿಹಂಚಿ ಪೋಗೆ ಮಾದ್ರೇಶ ಕಂಡು ||
ನಳಿನ ಸಖಸುತನಾಗಬಹುದೆಲೈ ನಿನ್ನೊಡನೆ |
ಕೊಳುಗುಳಕೆ ನಿಲ್ವ ಭಟನಾವನೊ ಸುರಾಸುರರಿ |
ಗಳವೆ ಮಝು ಭಾಪೆಂದು ಪೊಗಳಲ್ಕೆ ರಥವ ನೂಕಿದ ನೃಪನ ಸಮ್ಮುಖದೊಳು || ೧೨೦ ||

**ರಾಗ ಮಾರವಿ ಮಟ್ಟೆತಾಳ**

ನಿಲ್ಲು ನಿಲ್ಲು ನೃಪತಿ | ನೀ | ನೆಲ್ಲಿಗೆಂದು ಪೋಗುತಿ |
ಬಿಲ್ಲನೆತ್ತಿ ಕಣೆಗಳನ್ನು | ಚೆಲ್ಲು ನೋಳ್ಪೆನದನು ||
ಬಿಲ್ಲ ಪ್ರೌಢಿಯನ್ನು | ತೋ | ರಿಲ್ಲಿ ಎನ್ನೊಳಿನ್ನು |
ನಿಲ್ಲದೋಡಿಪೋಗುವರಿಗಿಂ | ಬಿಲ್ಲ ತಾಯ ಬಸಿರಲಿ || ೧೨೧ ||

ಬಗುಳದಿರು ರಾಧೇಯ | ನೀ | ಜಗಕತಿ ಕಲಿಯಾದೆಯ |
ವಿಗಡನಾದರೀಕ್ಷಿಸೆನ್ನ | ಬಗೆಯ ತೋರ್ಪೆನೀಗ ||
ಮುಗುದ ನೃಪರ ಮೇಲೆ | ಕೈ | ಮಗುಚಿದ ಹೊಯ್ಮಾಲೆ |
ಪೊಗದು ಸಾಕೆನ್ನೊಡನೆ ತೆಗೆ | ತೆಗೆಯೊ ಬೊಬ್ಬಾಟವನು || ೧೨೨ ||

ಎನಲು ಕೇಳ್ದು ಕರ್ಣ | ತಾ | ಕನಲುತಾ ಸಂಪೂರ್ಣ |
ಧನುವಿಗೌಕಿ ಸರಳ ಮಳೆಯ | ಘನದಿ ಕರೆಯೆ ಕಂಡು ||
ಬಿನುಗೆ ನೀ ಪೋಗೆಂದು | ಯಮ | ತನುಜ ನಲಿದು ಬಂದು |
ಮಿನುಗುವಂಬಿನೊಳಗೆ ಮುಸುಕಿ | ದನು ನೃಪತಿ ಮುಂಕೊಂಡು || ೧೨೩ ||

**ಭಾಮಿನಿ**

ಯಮಜನಸ್ತ್ರವ ಕಡಿದು ಕರ್ಣನು |
ನಿಮಿರಿಸಿದ ಬಾಣಪ್ರಯೋಗದಿ |
ತಮವೆರಸಿ ನಭವಾವುದಿಳೆ ತಾನಾವುದೆನೆ ಮುಸುಕೆ |
ಕಮಲಜಾಂಡವ ತುಂಬೆ ಬಳಿಕಾ |
ಕ್ರಮಿಸಿಕೊಂಡವನೀಶನಂಗದೊ |
ಳಮರಿದವು ಶರ ಕೂಡೆ ಮೈಮರೆದೊರಗಿದನು ಭೂಪ || ೧೩೪ ||

**ಕಂದ**

ಶರಹತಿಯಿಂ ನೃಪತನು ಜ |
ರ್ಝರಿತವದಾಗಲು ಮೂರ್ಛೆಯೊಳಾ ರಥದೊಳಗಂ ||
ಬರಸಿಡಿಲೆರಗಿದವೋಲ್ ಮಲ |
ಗಿರೆ ಕಾಣುತ ರವಿಜನೊಳಿಂತೆಂದನು ಶಲ್ಯಂ || ೧೩೫ ||

**ರಾಗ ಮಧ್ಯಮಾವತಿ ಏಕತಾಳ**

ಇನಸೂನು ಲಾಲಿಸೈ ಮಾತ ನೀನೀಗ | ನೆನೆಯದಿರಕೃತ್ಯಗಳ ಬಿಟ್ಟು ಬೇಗ |
ಜನಪ ತಾನೇತರ ಸಹಸಿಗನೆಂದು | ಮುನಿವೆಯ ಪೇಳವನ ಕೂಡೆ ನೀನಿಂದು || ೧೩೬ ||

ಹಸುಳೆಯರಾ ಮಾದ್ರಿಜರು ನಿನ್ನೊಳೀಡೆ | ವಸುಧೇಶ ಧರ್ಮಾತ್ಮಭವ ನಿನ್ನ ಪಾಡೆ ||
ಪಸರಿಸಿದತಿ ವಿಕ್ರಮಾನ್ವಿತ ನೀನು | ಮಸಗದವರ ಮೇಲೆ ಮರುಗೈಗಳೇನು || ೧೩೭ ||

ಖೂಳರಾಗಿರುವ ವೃಕೋದರಾರ್ಜುನರು | ಕಾಳಗದೊಳಗೆ ನಿಷ್ಠೂರ ದುರ್ಜನರು ||
ತೋಳಿನಬ್ಬರವಿದ್ದರವರೊಳು ಸೆಣಸು | ಏಳಿವನನು ಬಿಟ್ಟು ಪೋಪುದಕೆಣಿಸು || ೧೩೮ ||

**ವಾರ್ಧಕ**

ಮಾದ್ರೇಶನಿಂತೆನಲ್ಕಾ ಕರ್ಣನತಿರೋಷ |
ದುದ್ರೇಕದಿಂ ತಿರುಗಿದಂ ಬಳಿಕ ಮೂರ್ಛೆಯೊಳ್ |
ಮುದ್ರಿಸಿದ ಶರಹತಿಯ ವೇದನೆಗೆ ಬಸವಳಿದ ಭೂಪನಂ ಕಂಡು ಹೊರಗೆ ||
ಆ ದ್ರುಪದತನುಜ ಯಮಳರ್ ಮುಖ್ಯ ವಿಕ್ರಮಸ |
ಮುದ್ರರಯ್ತಂದು ಕಂಡಳಲುತೆಲ್ಲರು ಮತ್ತೆ |
ನಿದ್ರಾಶರೀರನಂ ಶಿಬಿರ ಕೊಯ್ಯಲ್ ಕೂಡೆ ನಡೆದುದಾ ಸರ್ವ ಸೇನೆ || ೧೩೯ ||

**ರಾಗ ಸವಾಯ್ ಏಕತಾಳ**

ಸೇನೆಯು ತೆರಳುವ ಹದನವನಂದಾ | ದಾನವರಿಪು ತಾ ನೆರೆ ಕಂಡು ||
ಏನೆಂದೀ ಪರಿ ದೂರದಿ ತೋರಿದ | ನಾ ನರನಿಗೆ ಬಲು ಭಯಗೊಂಡು || ೧೪೦ ||

**ರಾಗ ಕಾಂಭೋಜಿ ಏಕತಾಳ**

ನೋಡು ಮುಂದೆ ಕಾಂಬುತಿದೆ | ಎಲೊ ಪಾರ್ಥ | ನಿಲ್ಲ |
ದೋಡುತಿಹುದು ಸೇನೆಯದಕೊ | ಎಲೊ ಪಾರ್ಥ ||
ರೂಢಿಪತಿಯ ಸ್ಯಂದನವು ಪೋ | ಪುದು ಮುಂದೆ | ಅದರ |
ಕೂಡೆ ಮಾದ್ರಿಸುತರ ರಥ | ವಿಹುದು ಹಿಂದೆ || ೧೪೧ ||

ಅಕ್ಕೊ ಸೇನಾಪತಿಯ ತೇರು | ಎಳಕೊಂಡು | ಪೋಪ |
ಮಿಕ್ಕ ಸುಭಟಾವಳಿಯ ಪತಾ | ಕಿನಿ ದಂಡು |
ಹೆಕ್ಕಳುಳ್ಳ ಚಾತುರಂಗ | ಬಲವೆಲ್ಲ | ಮುರಿಯಿ |
ತಿಕ್ಕೊ ನೋಡು ನಾವಿಲ್ಲಿರುವು | ದನುವಲ್ಲ || ೧೪೨ ||

**ಭಾಮಿನಿ**

ಎಂದು ನುಡಿದಾ ಕ್ಷಣ ಮಹಾರಥ |
ಮುಂದೆ ನಡೆದುದು ಕೂಡೆ ರಭಸದಿ |
ಹಿಂದೆ ಬೆನ್ನಟ್ಟುತ್ತ ಪೋಗುವುದೆಲ್ಲಿ ನಿಲ್ಲೆನುತ ||
ಸ್ಯಂದನವನಡಹಾಯ್ದು ಗರ್ಜಿಸಿ |
ಬಂದು ಮುಕ್ಕುರಿಕೀರ್ದ ನಿಷ್ಠುರ |
ಮಂದಮತಿ ಸಮಸಪ್ತಕರಿಗಿದಿರಾದನಾ ಪಾರ್ಥ || ೧೪೩ ||

**ರಾಗ ಭೈರವಿ ಏಕತಾಳ**

ಫಡ ಫಡ ಯಾಮಿನಿಚರರೆ | ನಿಮ್ಮ | ಕಡುತನವಿಂದೆಮಗಿದಿರೆ ||
ತಡೆಯದೆ ಭಂಗಿಪೆನೆನುತ | ಹೇ | ರೊಡಲರಿಗೆಚ್ಚನು ಪಾರ್ಥ || ೧೪೪ ||

ತರಿದೆಂದರು ನೀನೆಲ್ಲಿ | ರಣ | ತೊರೆಯುತ ತೆರಳುವೆ ನಿಲ್ಲೀ ||
ಶಿರವರಿಯದೆ ಬಿಡೆವೆನುತ | ಭೋ | ರ್ಗರೆದೆಚ್ಚರು ಗರ್ಜಿಸುತ || ೧೪೫ ||

ಮಸಗುತ ತರಿಯಲು ನರನ | ಮೇ | ಲೆಸೆಯುತಲಯ್ದುತ ನಿನ್ನ ||
ರಸೆಯಲಿ ಬಿಡೆವೆಂದೆನುತ | ಆ | ಅಸುರರು ಬಲು ರೋಷಿಸುತ || ೧೪೬ ||

ಹಿಂದೆಮ್ಮಯ್ಯನ ರಣದಿ | ನೀ | ಕೊಂದುದಕೀ ಕ್ಷಣ ಧುರದಿ ||
ಸಂದೆಲುಬನು ಕಳಚುವೆವು | ಮನ | ದಂದವ ನೆರೆ ಸಲಿಸುವೆವು || ೧೪೭ ||

ಪಿತಸುತರತಿ ಜತೆಯಿಂದ | ಇಹ | ಮತವತಿಯೋಗ್ಯವಿದೆಂದ ||
ಅತಿ ಕಠಿನದ ಶರವೆಸೆದ | ಆ | ಮತಿಹೀನರ ತೊಲಗಿಸಿದ || ೧೪೮ ||

**ರಾಗ ದೇಶಿ ಮಟ್ಟೆತಾಳ**

ಕೆಟ್ಟ ದನುಜರು | ಬೆ | ನ್ನಟ್ಟಿ ಬಹರಲಾ ||
ಸುಟ್ಟುಬಿಡುವೆನೆನುತ ಶರಗ | ಳೊಟ್ಟು ಮುಸುಕಿದ || ೧೪೯ ||

ಬಿಟ್ಟ ಬಾಣವ | ಮೈ | ಮುಟ್ಟದಂದದಿ ||
ಧಟ್ಟಿಸುತ್ತಲವರು ಮರಳಿ | ತೊಟ್ಟರಸ್ತ್ರವ  || ೧೫೦ ||

ಅತಿಶರೌಘವು | ಬಂ | ದೆರಗುವನ್ನೆಗ |
ಮುರಿಯಲೆಚ್ಚು ತನ್ನ ನಿಶಿತ | ಶರಗಳೆಚ್ಚನು || ೧೫೧ ||

ಮರಳಿ ಫಲುಗುಣ | ಬೊ | ಬ್ಬಿರಿದು ಖಳರಿಗೆ ||
ತೆರಹುಗೊಡದೆ ಮತ್ತೆ ನೂರು | ಶರದೊಳೆಚ್ಚನು || ೧೫೨ ||

**ವಾರ್ಧಕ**

ನರನು ಖಳರಂ ಭಂಗಿಸುತ ನಡೆಯಲಿದಿರಾಗಿ |
ಕುರುನೃಪಾನುಜರು ಬಲು ಬಲಸಹಿತ ಸೌಬಲಂ |
ದೊರೆ ಬೃಹದ್ರಥ ಸೋಮದತ್ತ ಕೃಪ ಕೃತವರ್ಮ ವೃಷಸೇನ ಮುಖ್ಯರೆಲ್ಲ ||
ಶರಗಳಂ ಕವಿಸಿದರೆ ಖಂಡಿಸುತ ಬೇರ್ಬೇರೆ |
ತಿರುವಿಗೆಚ್ಚರಿಭಟರ ನುಗ್ಗರಿದು ಬರುತಿರಲ್ |
ಗುರುಜನಯ್ತಂದು ಪೋಪೆಯದೆಲ್ಲಿ ನಿಲ್ಲೆನುತ ಮಾರ್ಗಣವ ಕವಿಸಿ ತಡೆದ || ೧೫೩ ||

**ರಾಗ ಮಾರವಿ ಏಕತಾಳ**

ನಿಲ್ಲೆಲೊ ಫಲುಗುಣ | ನೆಲ್ಲಿಗೆ ಗಮನವ | ದಿಲ್ಲಿಯೆ ತೋರಿಸು | ಮಲ್ಲ ತನಂಗಳ |
ಬಲ್ಲಿದ ಭಟನೆನು | ತಲ್ಲಿಯೆ ಕೂರ್ಗಣೆ |
ಚೆಲ್ಲುತ ಖತಿಯಿಂ | ಭುಲ್ಲವಿಸಿದನು | ಕೇಳು ಭೂಪ || ೧೫೪ ||

ಬರುವ ಶರವ ಕ | ತ್ತರಿಸುತಲೆಂದನು | ನೆರೆ ವಿಪ್ರರು ಜಪ |
ವಿರಚಿಪುದುಳಿಯುತ | ಧುರಕಯ್ತಂದರೆ | ದೊರೆನಂದನರೊಳು |
ಬರುವುದೆ ಜಯವೆನು | ತಿರದೆಚ್ಚನು ಶರ | ಕೋಪದಿಂದ || ೧೫೫ ||

ಮಸಗುತ ಗುರುಸುತ | ನಸಮಾಸ್ತ್ರಂಗಳ | ಕುಸುರಿತರಿದು ಮೇಣ್ |  ದೆಸೆಗಾಣದ ತೆರ |
ಪೊಸ ಶರ ತುಂಬಲ್ | ಕೆಸೆಯುತ ಖಂಡಿಸಿ |
ವಿಶಿಖವ ಚೆಲ್ಲುತ | ಕುಶಲದಿ ಜಯಿಸಿ | ಬಂದನಾಗ || ೧೫೬ ||

**ವಾರ್ಧಕ**

ಘನ ನಿಶಿತಶರಹತಿಗೆ ಸಮಸಪ್ತಕರ್ ಪಲಾ |
ಯನಮೆಸಗೆ ಭರದಿ ಮುಂಬರಿಯುವ ವರೂಥಮಂ |
ದನುಜರದನರಿತು ಬಂದಡಹಾಯ್ದು ದಾರಿಯಂ ಕಟ್ಟಿ ಮುಸುಕಲು ಕಾಣುತ ||
ಕನಲಿದು ಧನಂಜಯಂ ಮಗುಳೆಚ್ಚ ಕೂರ್ಗಣೆಯೊ |
ಳನಿಮಿಷಾರಿಗಳೆದೆಯು ಜಜ್ಜರಿತವಾಗೆ ಗುಣ |
ವನಧಿ ತಿರುಗಿಸೆ ರಥವ ಸೂಟಿಯೊಳ್ ಕಂಡನಶ್ವತ್ಥಾಮನೀ ಪಾರ್ಥನ || ೧೫೭ ||

**ಕಂದ**

ಭೋರನೆ ನಡೆವ ಕಿರೀಟಿಯ |
ತೇರಿಂಗಡಹಾಯ್ದು ವಿರೋಧದಿ ಗುರು ತನುಜಂ ||
ಮೀರಿಯೆ ಪೋಗದಿರೆಲೊ ಜ |
ಜ್ಝಾರನೆ ತನಗಿದಿರಾಗೆನುತಲಿ ತೆಗೆದೆಚ್ಚಂ || ೧೫೮ ||

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಏನನೆಂಬೆನಂದಿನಾಹವ | ಕೇಳು ನೃಪತಿ | ಏನನೆಂಬೆನಂದಿನಾಹವ || ಪ ||

ಗುರುಜನೆಚ್ಚ ಬಾಣತತಿಯ | ತರಿದು ಪಾರ್ಥ ಸ್ವರ್ಣಪುಂಖ |
ದುರು ಶಿಲೀಮುಖಂಗಳನ್ನು | ಕರೆಯೆ ಕಂಡು ಕನಲಿ ಭೋ |
ರ್ಗರೆದು ಮತ್ತೆ ಖಾತಿಯಿಂದಲಿ || ರಿಪುವಿನಂಬ |
ತರಿದು ಸರ್ವಶಕ್ತಿಯಿಂದಲಿ || ತಡೆದರಾಗ |
ಶರವನೆಚ್ಚು ಶೌರ್ಯದಿಂದಲಿ || ಏನನೆಂಬೆ || ೧೫೯ ||

ಹೊಡೆದ ಕಣೆಗಳೆಲ್ಲ ಕ್ಷಣದಿ | ಕಡಿದು ಪೊಸ ಸುಮಾರ್ಗಣಂಗ |
ಳೊಡನೆ ಬಿಟ್ಟು ಕರದೊಳೆತ್ತಿ | ಪಿಡಿದ ಧನುವ ಖಂಡಿಸಲ್ಕೆ |
ಸಿಡಿದು ಪಿಂತೆ ಸರಿಯೆ ಗುರುಸುತ || ರಥವು ಮುಂದೆ |
ನಡೆಯೆ ಕುರುಕುಲಾಬ್ಧಿ ಗಜರುತ || ಬಂದು ನರನ |
ತಡೆದರಾಗ ನಿಲು ನಿಲೆನ್ನುತ || ಏನನೆಂಬೆ || ೧೬೦ ||

**ವಾರ್ಧಕ**

ಬಂದೆರಗಿದರ್ ಕೂಡೆ ನರನ ಪಥಮಂ ಮುಸುಕು |
ತಂಧನೃಪನಾತ್ಮಜರ್ ಕರ್ಣ ಕೃಪ ಶಕುನಿ ಗುರು |
ನಂದನಾದ್ಯಖಿಲ ಸಮಸಪ್ತಕರ್ ಸಹಿತ ಧನು ಝೇಗೆಯ್ದು ಗಜಬಜಿಸುತ ||
ಒಂದೇ ಕ್ಷಣಾರ್ಧದೊಳ್ ಗೌತಮನ ತೆಗೆದೆಚ್ಚು |

ಹಿಂದೆ ರವಿಜನ ತುಡುಕಿ ಸೌಬಲನ ಬರಿಗೆಯ್ದು |
ನೊಂದಿಸಿ ತ್ರಿಗರ್ತರಶ್ವತ್ಥಾಮನೃಪನನುಜರಂ ಸದೆದನಾ ಪಾರ್ಥನು || ೧೬೧ ||

**ಭಾಮಿನಿ**

ಅತಿರಥಮಹಾರಥರ ಭಂಗಿಸಿ |
ಪ್ರತಿಭಟಭಯಂಕರ ಕಿರೀಟಿಯು |
ಕ್ಷಿತಿಪನಿರವನು ಕಾಂಬ ತವಕದಿ ಬರಲು ಮಾರ್ಗದಲಿ ||
ಖತಿಯೊಳುರಿಮಸಗುತ್ತಲಾ ಕುರು |
ಪತಿಯ ಸೇನೆಯ ಕೊಲ್ಲುತಿಹ ಮಾ |
ರುತಿಯ ಗರ್ಜನೆ ಕೇಳ್ದು ತಿರುಗಿದನವನ ಪೊರೆಗಾಗಿ || ೧೬೨ ||

**ಕಂದ**

ಮಾರುತತನಯನ ಕಾಣುತ |
ಧಾರಿಣಿಪಾಲಗೆ ಸುಕ್ಷೇಮವೆ ಪೇಳೆನಲುಂ ||
ಯಾರದು ಬಲ್ಲರು ತಾನು ವಿ |
ಚಾರಿಸಲಿಲ್ಲೆನಲರ್ಜುನನವನೊಡನೆಂದಂ || ೧೬೩ ||

**ರಾಗ ಕೇದಾರಗೌಳ ಅಷ್ಟತಾಳ**

ಅಣ್ಣಯ್ಯ ಕೇಳು ನೀ ಬಳಲಿರ್ದ ಭೂಪನ | ಕಣ್ಣಾರೆ ನೋಡಿಕೊಂಡು ||
ತಣ್ಣಗಾರಯ್ದು ಸಂತಯಿಸಿ ಮೇಣಿಲ್ಲಿಗೆ | ಮಿಣ್ಣನೆ ನಡೆತಪ್ಪುದು || ೧೬೪ ||

ಅನಕ ರಣಾಂಗಣಕಿದಿರಾಗಿ ಕಾದುವೆ | ಘನಪರಾಕ್ರಮದಿ ನಾನು ||
ವಿನಯದೊಳೀ ಕ್ಷಣ ತಡೆಯದೆ ಪೋಗೆಂದ | ಡನಿಲಸಂಭವ ಪೇಳ್ದನು || ೧೬೫ ||

ತಮ್ಮ ನೀ ಮರುಳು ಪೋಗೆನ್ನಯ ಕೂಡಿಂಥ | ಹೆಮ್ಮೆತನಂಗಳೇಕೆ ||
ಸುಮ್ಮನೆ ನಡೆ ಭೂಮಿಪಾಲನ ನೋಡುವ | ರೆಮ್ಮನು ಕೆಣಕಬೇಡ || ೧೬೬ ||

**ವಾರ್ಧಕ**

ಅನಿಲಸುತನಿಂತೆಂದು ಧಿಕ್ಕರಿಸಲಾ ಕ್ಷಣಂ |
ಜನಪನಂ ಕಾಂಬ ಕಡು ಲವಲವಿಕೆಯಿಂದಲಾ |
ವನಜಾಕ್ಷಫಲುಗುಣರ್ ನಡೆತರಲ್ಕಿತ್ತಲುಂ ಬೀಡಿನೊಳ್ ಭೂಪಾಲನು ||
ಇನಸುತನ ಕೂರಂಬಿನುಪಹತಿಯೊಳುರೆ ನೊಂದು |
ತನುವಿನೊಳ್ ವಶವಿಲ್ಲ ಕರಣೇಂದ್ರಿಯಂಗಳಂ |
ಘನದೂರ್ಧ್ವಶ್ವಾಸ ಘುರುಘುರಿಸೆ ಪರವಶನಾಗಿ ಮೂರ್ಛೆಯಿಂದಿರುತಿರ್ದನು || ೧೬೭ ||

**ಕಂದ**

ಧರಣಿಪನಿರವಂ ಕೇಳಿದು |
ಭರದಿಂ ದ್ರೌಪದಿ ತನ್ನ ಸಖೀಜನ ಸಹಿತಂ ||
ತರಹರಿಸುತ ನಡೆತಂದೀ |
ಪರಿಯಂ ಕಾಣುತ ಧೊಪ್ಪನೆ ಕೆಡೆದಿಂತೆಂದಳ್ || ೧೯೮ ||

**ರಾಗ ನವರೋಜು ಆದಿತಾಳ**

ಏನಾಯಿತೆಲೆ ಕಾಂತ | ಯಾರಿಂದ ನಿನಗಿಂಥ ||
ತಾನಿರಲೀ ವಿಧಿ ಬಂತು | ತಾಪವ ಸೈರಿಪುದೆಂತು || ೧೯೯ ||

ನೀತಿವಂತರು ನೀವು | ನಯದಿ ಕಾದಲು ನೋವು ||
ಘಾತಕರಿನ್ನರಿತಿಹರೆ | ಗಾಸಿಯೊಳಿಂದಯ್ತುಹರೆ || ೧೭೦ ||

ಮೊದಲೇ ನಿಷ್ಠುರರವರು | ಮೋಸದಿ ಜೈಸದೆ ಬಿಡರು ||
ಕದನಕೆ ಧರ್ಮದಿ ಪೋಗಿ | ಕಾದಿದಿರೇ ಇದಿರಾಗಿ || ೧೭೧ ||

ಹರ ಹರ ಈ ಪರಿ ವಿಧಿಯು | ಹಣೆಯಲಿ ಗೀರಿದ ಲಿಪಿಯು |
ಧರಣಿಯೊಳಾವನುಭವಿಸಿ | ತೀರಿಸಬೇಕನುಸರಿಸಿ || ೧೭೨ ||

**ರಾಗ ನೀಲಾಂಬರಿ ಅಷ್ಟತಾಳ**

ಆಯಿತಿನ್ನೇನು ರಾಜ್ಯದ ಭೋಗ | ತೀರಿ | ಹೋಯಿತಿಂದಿನೊಳು ಸಾಕೆಮಗೀಗ ||
ದಾಯಾದ್ಯರುಗಳತಿ ಖೂಳರು | ಸರ್ವ | ಮಾಯಕದೊಳಗೆ ಸಮ್ಮೇಳರು || ೧೭೩ ||

ಹಸುವಿನೊಳ್ ಕೇಡುಬಾಗುಗಳನ್ನು | ಇತ್ತು | ಕಳೆದರು ಪ್ರಾಣಮಾತ್ರದೊಳಿನ್ನು ||
ಉಳಿದಿರ್ದವಿಂದಿಗೆ ಖಳರೊಳು | ಕಾಯ | ಇಳೆಗಾಗಿ ತೊರೆವುದಾಯ್ತಿವರೊಳು || ೧೭೪ ||

ಮಾನವ ಕೊಂಡರು ಪಗೆಗಳು | ಜೀವ | ದಾನವನಿತ್ತರೆಯವರೊಳು ||
ತಾನಾಗಿ ಹರಣವ ಕೊಡಲೆಂದು | ಬಂದೆ | ವೇನೆಂಬುದನು ಕಾಣದೆನಗೊಂದು || ೧೭೫ ||

ಧುರದೊಳಗಿಂದಿನವರೆಗಿಂಥ | ದೊಂದಾ | ದರು ಕಷ್ಟ ಪಡಲಿಲ್ಲೆನ್ನಯ ಕಾಂತ ||
ಹರಿ ತನ್ನ ಪಂಚ ಪ್ರಾಣಗಳೆಂದು | ಸಲಹಿ | ಧರಣೀಶನನು ಮರೆತೆಯೊ ಇಂದು || ೧೭೬ ||

**ಭಾಮಿನಿ**

ಹಲುಬಿದಳು ನಾನಾ ಪ್ರಕಾರದಿ |
ಲಲನೆ ಬಳಿಕಾ ರಾಯನಂಗದೊ |
ಳುಲಿವ ಗಾಯಕ್ಕೌಷಧಂಗಳ ಸೇಕಲೇಪಗಳ ||

ಕಲಿತ ಪಂಡಿತರಿಂದ ಮಾಡಿಸಿ |
ಮಲಗಿಸಿ ನೃಪೋತ್ತಮನ ಸುತ್ತಲು |
ನೆಲಸಿದರು ಸಚಿವಾಪ್ತ ಜನರುಗಳಖಿಳರೆಡೆಬಿಡದೆ || ೧೭೭ ||

**ಕಂದ**

ಇತ್ತ ನೃಪಾಲನ ಕಾಂಬ ನಿ |
ಮಿತ್ತದಿ ಜವದಿಂ ಪೋಪ ಕಿರೀಟಿಯು ಭರದಿಂ ||
ಚಿತ್ತವು ಕದಡಿತು ಕಳವಳಿ |
ಸುತ್ತಲೆ ಕಂಬನಿದುಂಬುತಲೆಂದಂ ಹರಿಯೊಳ್ || ೧೭೮ ||

**ರಾಗ ನೀಲಾಂಬರಿ ಧ್ರುವ ಝಂಪೆತಾಳ**

ಕೇಳು ಮುರರಿಪು | ಕಮಲಲೋಚನ ||
ಪೇಳಲಂಜುವೆ | ಪೆಚ್ಚಿದುರಿಯನು || ೧೭೯ ||

ಒಡಲು ಸುಡುವುದು | ತಾಳಲಾರೆನು ||
ಪೊಡವಿಪಾಲನ | ವರ್ತಮಾನವ || ೧೮೦ ||

ಸಹಜವಿರ್ಪುದೊ | ಏನು ಕೇಳುವ ||
ದಿಹುದೊ ಕಿವಿಯಲಿ | ಕಾಣೆನಿಂದಿಗೆ || ೧೮೧ ||

ಪ್ರಾಣಮಾತ್ರದಿ | ಬದುಕಿಹನೇನೊ ||
ಮೇಣು ಸುರರಲಿ | ಸೇರ್ದನೋ ಹರಿ || ೧೮೨ ||

ನಿಶ್ಚಯಂಗಳ | ತಿಳಿಯದೆನಗದು ||
ಸ್ವಚ್ಛವಾಗಿಯೆ | ನುಡಿಯಬೇಹುದು || ೧೮೩ ||

**ರಾಗ ಕಾಂಭೋಜಿ ಝಂಪೆತಾಳ**

ಕಲಕಿ ಬರುತಿದೆ ಮನಸು ಕಯ್ ಕಾಲು ನಡುಗಿ ಕ |
ತ್ತಲೆ ಬೀರುತಿದೆ ಕಣ್ಗೆ ಹರಿಯೆ |
ನೆಲ ಕಂಡರರಸಿನದ ಛಾಯೆ ತೋರಿದು ತನುವ |
ನೊಲೆದು ಕಂಪಿಸುತಿಹುದು ಹರಿಯೆ || ೧೮೪ ||

ಆ ನರಾಧಿಪ ಜೀವದಿಂದಿಹನೊ ನೋಳ್ಪ ಋಣ |
ವೇನಾದರೆನಗುಂಟೆ ಹರಿಯೆ |
ಸೇನೆಯೊಂದುಳಿಯದಯ್ದಿದ ಪರಿಯ ನೋಡಿದರೆ |
ಮಾನನಿಧಿಯುಳಿವಿಲ್ಲ ಹರಿಯೆ || ೧೮೫ ||

ಅಂತಕಜನಂಗ ನಾಲ್ವರು ನಮ್ಮ ಜೀವವೆಂ |
ಬಂತರ್ಯ ನೀ ಬಲ್ಲೆ ಹರಿಯೆ |
ಎಂತು ಸೈರಿಪೆನಕಟ ಕಾಯ ತೊಲಗಿದ ಮೇಲೆ |
ಚಿಂತೆರಹಿತನೆ ಪೇಳು ಹರಿಯೆ || ೧೮೭ ||

**ವಾರ್ಧಕ**

ನರನಾಥ ಲಾಲಿಸೈ ಫಲುಗುಣನ ನುಡಿಗೆ ಮುರ |
ಹರನವನ ಸಂತಯಿಸುತಳಲದಿರು ನಡೆ ನೋಳ್ಪ |
ರರಸನನು ತಾವೆಂದೆನುತ್ತಾ ವರೂಥಮಂ ಹರಿಸಿದಂ ಸೂಟಿಯಿಂದ ||
ತೆರಳುವ ಕಿರೀಟಿಯಂ ಕಂಡು ಪೋಗದಿರೆಲವೊ |
ನರ ನಿನ್ನ ಸಾಹಸವ ತೋರೆಂದು ಗರ್ಜಿಸುತ |
ತರಣಿಜಂ ಬಂದಡ್ಡಗಟ್ಟಿ ಬಾಣಂಗಳಂ ಕವಿಸಿದಂ ನರನ ಮೇಲೆ || ೧೮೭ ||

**ರಾಗ ಭೈರವಿ ಏಕತಾಳ**

ನೋಡಿದನಿದ ಕಲಿ ಪಾರ್ಥ | ವಿಧಿ | ರೂಢಿಸಿತಿನ್ನು ಯಥಾರ್ಥ ||
ಮಾಡುವುದೇನೆನುತಾಗ | ಶರ | ಜೋಡಿಸಿದನು ತಾ ಬೇಗ || ೧೮೮ ||

ಮುಸುಕಿದನೊಂದೇ ಕ್ಷಣದಿ | ಕಣೆ | ವಿಸರವನೆಲ್ಲವ ಕಣದಿ ||
ಪಸರಿಸಿದಂಬುಗಳುಗಿದು | ಪೊಸ | ಮಸೆಯ ಶರಂಗಳ ಸುರಿದು || ೧೮೯ ||

ಬೊಬ್ಬಿರಿದನು ಕಲಿ ಕರ್ಣ | ಕಂ | ಡುಬ್ಬಿದ ನರ ಸಂಪೂರ್ಣ ||
ತೆಬ್ಬಿನ ಝೇಂಕಾರದೊಳು | ಕಣೆ | ದಬ್ಬಿದನರೆ ನಿಮಿಷದೊಳು || ೧೯೦ ||

**ಭಾಮಿನಿ**

ಫಲುಗುಣನ ಶರಹತಿಗೆ ಕರ್ಣನು |
ನಿಲಲರಿಯದುರಿಗೊಂಡು ಮರಳಲು |
ಕಲಿ ಧನಂಜಯ ಮುಂದೆ ನಡೆಯಲ್ಕಿತ್ತ ಮಾರುತಿಯು ||
ಕಲಹದೊಳಗೇನೆಂಬೆ ಕೌರವ |
ಬಲನಿಪಾತವ ಮಾಡೆ ರಿಪುಕುಲ |
ತಿಲಕ ನೋಡಿದು ಕೌಳಿಕದ ಸಂಧಾನವನು ನೆನೆದ || ೧೯೧ ||

**ಕಂದ**

ಚರರೀರ್ವರನಂ ಹತ್ತಿರೆ |
ಕರೆದರುಹಿದ ವಾಯುಜನಲ್ಲಿಗೆ ಪೋಗೆನುತಂ ||

ಪರಮೋಲ್ಲಾಸದೊಳಾ ದೂ |
ತರು ತಾವಯ್ತುಂದಾ ಭೀಮನೊಳಿಂತೆಂದರ್ || ೧೯೨ ||

**ರಾಗ ಘರಜು ಏಕತಾಳ**

ಏನೆಮ್ತಿದ್ದೆಲೆ ಭೀಮ | ಸೇನಪ್ಪಾ ನಿನ್ಮೇಲೆ |
ತಾನೆ ನಮ್ದೊರೆ ದಯವಾದ || ಸಾಕೇಟ್ ಮಾತು ||
ಜ್ಞಾನುಳ್ಳ ಧೊರೆಗೆ ಮ | ದ್ದಾನೆ ಕರ್ಣಪ್ಪ ತುಳಿದು |
ಮಾನವ್ರ ಮೇಗಣಭೋದಿಲ್ಲ | ಸಾಕೇಟ್ ಮಾತು || ೧೯೩ ||

ಎಲ್ಲ ಬಡೆದಾಟವನ್ನು | ನಿಲ್ಲಲ್ಲಿ ಕಾಳಗವಿಂ |
ದೊಲ್ಲೆ ತಾನೆಂಬುತಯ್ದಾನೆ || ಸಾಕೇಟ್ ಮಾತು ||
ಸುಳ್ಳಿನೋಲೆಕಾರನಲ್ಲ | ಪೊಳ್ಳೆಲ್ ನೀನೆಂದಕಾಸಿ |
ಒಳ್ಳೆ ಒಳ್ಳೇ ಮೆಚ್ಚಿಕೊಂಡಯ್ದೆ || ಸಾಕೇಟ್ ಮಾತು || ೧೯೪ ||

ಓಟು ದಂಡೆಲ್ಲ ನಿನ್ನ | ಕೂಟೆ ಕಡಿದಾಡಿದರು |
ಗೂಟ ನಿಂತ ಹಾಗೆ ನಿಂತಯ್ದಿ || ಸಾಕೇಟ್ ಮಾತು ||
ಈಟಾಗುಳ್ಳ ಗೆಣೆಯರ | ಕೂಟಾದರು ಪೋಗಿ ತಿವಿ |
ದಾಟದಾ ಪರಿಪಾಟೇನೆಂಬ್ತಿ || ಸಾಕೇಟ್ ಮಾತು || ೧೯೫ ||

**ವಾರ್ಧಕ**

ದೂತರ ದುರುಕ್ತಿಗಂ ಮೆಚ್ಚಿದು ಜಗತ್ಪ್ರಾಣ |
ಜಾತ ನಗುತವರ ಬೋಳಯಿಸಿ ನಿಮ್ಮೊಡೆಯ ವಿ |
ಖ್ಯಾತನಹ ಸಮರದೊಳ್ ಬಳಲಿದಗ್ರಜನ ಹರಿಬಂ ಪೂರವಿಸಿದಲ್ಲದೆ ||
ಭೂತಳಾಧಿಪನೆಡೆಗೆ ಪೋಪವಂ ತಾನಲ್ಲ |
ಮಾತಿನಿಂದೇನು ಫಲ ನೆರೆದಿಹ ಚತುರ್ಬಲವ |
ನಾತುಕೊಳಲಾನೋರ್ವನೇ ಸಾಕು ನಮ್ಮವರಗೊಡವೆ ನಿಮಗೇಕೆಂದನು || ೧೯೬ ||

**ಕಂದ**

ಎನುತವರಂ ಕಳುಹಿಸಿ ಭೀ |
ಮನು ತನ್ನವರೀರ್ವರನುಂ ಕೌರವನೆಡೆಗಂ ||
ವಿನಯದೊಳಟ್ಟಲು ಬಂದಾ |
ಜನಪನೊಳಿಂತೆಂದರು ವಿಕ್ರಮದಿಂದಾಗಳ್ || ೧೯೭ ||

**ರಾಗ ದಿವಾಳಿ ಏಕತಾಳ**

ತೆಕ್ಕೋ ಸಲ್ಲಾಮು ಭಿರ್‍ರನೆ | ಕುರುರಾಯ ಭೂಪ | ತೆಕ್ಕೋ ಸಲ್ಲಾಮು ಭಿರ್‍ರನೆ || ಪ ||

ಕಾಟಕಮಂದಿ ನೋಟ್ಯಾ ಸುಮ್ಗೇ | ಮೀಟಾದೋಲೆಕಾರರ್ ಭೀಮ್ಗೇ ||
ಥಾಟು ಥಾಟು ಬಜಾಯ್ಸುವರಿಲ್ಲಿ | ನಮ್ದೊರೆ ಸಿಟ್‌ಗಿಟ್ |
ಮೀಟಾಗ್ಯಾನು ಕಾಣೆನಿದರಲ್ಲಿ || ತೆಕ್ಕೋ || ೧೯೮ ||

ಮಂಕುಗೆಣೆಯರ್ ಬಂದೂಕು ಸೋಟು | ಡೊಂಕು ಡೊಂಕು ಪಿಸ್ಕುವರೀಟು ||
ಬಿಂಕಗಿಂಕ ಬೇಡಿರೆಂದವನೆ | ಭೀಮಪ್ಪ ನಿನ್ನ |
ಟೊಂಕ ಮುರಿವೆನೆಂತ ನಿಂತವನೆ || ತೆಕ್ಕೋ || ೧೯೯ ||

ನಮ್ದೀ ನಿಮ್ದೀ ಲಡಾಯಿದಾಗೆ | ತಿಮ್ದೇವು ಗಿಮ್ದೇವು ಮೊಗದಾ ಮ್ಯಾಗೆ ||
ಗುಮ್ದೇವು ಸಿಟ್ಟು ಮಾಡಬೇಡೆಂದ | ನಿನ್ ಹತ್ತಿರ ಹೋಗಿ |
ನಮ್ಮವ್ವೊಮ್ಮೆ ಹೇಳಿ ಬಾರೆಂದ || ತೆಕ್ಕೋ || ೨೦೦ ||

**ಭಾಮಿನಿ**

ಎಂದ ಚರರನು ನೋಡಿ ನಗುತಾ |
ಮಂದಮತಿ ಕುರುರಾಯ ಸತ್ಕರ ||
ದಿಂದಲವರನು ಕಳುಹಿ ಕೂಡೆ ರಣಾಂಗಣಕ್ಕೊಲಿದು ||
ಮಂದಿ ತೇರು ಗಜಾಶ್ವ ರಥಿಕರ |
ಸಂದಣಿಯು ನೆರೆಯಲ್ಕೆ ಕಾಣುತ |
ಬಂದು ಹೊಕ್ಕನು ಭೀಮ ಕದಳಿಯ ವನದಿ ಕರಿಯಂತೆ || ೨೦೧ ||

**ವಾರ್ಧಕ**

ಧುರದೊಳಿದಿರಾಗಿರ್ದ ಕರಿಗಳಂ ಹರಿಗಳಂ |
ಭರದಿ ಮುಂದಯ್ತಹ ಪದಾತಿಗಳ ಯೂಥಗಳ |
ವರವರೂಥಂಗಳಂ ಕುಟ್ಟಿದಂ ಮೆಟ್ಟಿದಂ ಥಟ್ಟವಿಸಿ ಘಟ್ಟಿಸಿದನು ||
ಮರುತಸುತನಿಂತು ಕಲಿತನದಿಂದ ಘನದಿಂದ |
ಅರಿಬಲೌಘವ ಕೊಲ್ಲುತಿರಲಿತ್ತ ನರನತ್ತ |
ಧರಣಿಪನ ಕಾಣುವತ್ಯುಗ್ರದಿಂ ಶೀಘ್ರದಿಂದಯ್ದಿದಂ ಪಾಳೆಯದೊಳು || ೨೦೨ ||

**ಕಂದ**

ಭರಿತಪಯೋಧಿಯ ತೆರದಿಂ |
ದಿರುತಿಹ ಪಾಳ್ಯವ ಕಂಡು ವರೂಥವ ನಿಳಿದುಂ ||
ಗರಹೊಡೆದಂತೀಕ್ಷಿಪ ಜನ |
ರಿರವಿಗೆ ಕಳವಳಿಸುತ ಹೊಕ್ಕ ನೃಪಾಲಯಮಂ || ೨೦೩ ||

**ರಾಗ ಭೈರವಿ ಝಂಪೆತಾಳ**

ಅವನಿಪತಿ ಕೇಳು ನಿ | ನ್ನವರವಸ್ಥೆಯನಿಂತು |
ಹವಣಿಸುವಡೆನಗಳವೆ | ಶಿವನಿಗರಿದಾಗ || ೧೦೪ ||

ಬಂದು ಫಲುಗುಣ ಭರದಿ | ಮಂದಿರವ ಪೊಕ್ಕು ಗೋ |
ವಿಂದ ನರಳುವ ನೃಪನ | ಮುಂದೆ ನಿಂದಿರ್ದ || ೧೦೫ ||

ತೆರೆಯದ ವಿಲೋಚನದ | ಘುರುಘುರಿಪ ನಿಶ್ವಾಸ |
ಮರಣದಾಕೃತಿಯ ಜ | ರ್ಜರ ಶರೀರವನು || ೧೦೬ ||

ಹತ್ತಿರದೊಳಿದ್ದೈವ | ರುತ್ತಮಾಂಗನೆ ಪದವ |
ನೊತ್ತುವಳು ಮಾದ್ರಿಸುತ | ರೊತ್ತಿಲಿಹರಳುತ || ೧೦೭ ||

ಆಪ್ತಜನರಡಿಗಡಿಗೆ | ತಪ್ತ ಮಾನಸರಾಗಿ |
ಪ್ರಾಪ್ತಿಗಂ ಬೈವ ಲೋ | ಲುಪ್ತಿ ಸಹ ಕಂಡ || ೧೦೮ ||

**ಕಂದ**

ನರನೀ ತೆರನಂ ಕಾಣುತ |
ಉರಿಮಸಗುತ ಕೆಲಬಲನ ನಿರೀಕ್ಷಿಸುತಾಗಂ ||
ತರತರದಿಂ ಯೋಚಿಸುತಿರೆ |
ಧುರಧೀರರು ನಡುಗಲು ಬಳಿಕಣ್ಣನೊಳೆಂದಂ || ೧೦೯ ||

**ರಾಗ ಸಾಂಗತ್ಯ ರೂಪಕತಾಳ**

ಅಣ್ಣನವರಿಗಿಂಥಾ ವಿಧಿ ಸಂಘಟಿಸಿತೆ ಮೂ | ರ್ಕಣ್ಣಿನ ಶಿವನೊಬ್ಬ ಬಲ್ಲ ||
ಪುಣ್ಯಹೀನರು ನಾವಾದುದರಿಂದಲೀ ಪರಿ | ಕಣ್ಣಾರೆ ಕಾಣುವುದಾಯ್ತು || ೧೧೦ ||

ಧಾರಿಣಿಪತಿ ನಿನ್ನ ಬಳಲಿಸಿದರೆ ಇಂಥ | ಭೂರಿ ವಿಕ್ರಮರಿದ್ದು ರಣದಿ ||
ಆರಾದರಾ ವೇಳ್ಯಕೊದಗದೀ ಪರಿ ಮೋಸ | ದೋರಿದರಲ್ಲಕಟಕಟ || ೧೧೧ ||

ಉದ್ದುರುಟರಿಯದೆ ಖೂಳನೊಡನೆ ಕಾದಿ | ಬಿದ್ದೆಯ ಹಾ ಹಾ ನೃಪತಿಯೇ ||
ಹೊದ್ದಿದಾಪತ್ತಿನೊಳೊದಗದ ಮೇಲೆ ನಾ | ವಿದ್ದು ಇಲ್ಲದ ರೀತಿ ನಿನಗೆ || ೧೧೨ ||

**ಭಾಮಿನಿ**

ಆ ಸಮಯದಲಿ ಬಂದು ಲಕ್ಷ್ಮಿನಿ |
ವಾಸ ಹತ್ತಿರೆ ಕುಳಿತು ಭೂಪನ |
ತಾ ಸರಾಗದೊಳಮೃತಹಸ್ತದಿ ತನುವ ತಡವರಿಸಿ ||
ಏಸು ನೊಂದೈ ತಂದೆ ನಿನ್ನನು |

ಗಾಸಿಮಾಡಿದರೇ ಕಠೋರರು |
ಮೋಸದವರವರೆಂದು ಕಂಬನಿ ದುಂಬಿದನು ಕೃಷ್ಣ || ೧೧೩ ||

**ಆರ್ಯಾ ಏಕತಾಳ**

ಅಮೃತಕರಾಗ್ರವು ಸೋಕಲು ಭೂಪತಿ | ಅಮೃತವಿನೋದನು ತಾನಾಗಿ ||
ಅಮೃತವಿರೋಧವಿನಾಶಧ್ವಜನನು | ಅಮೃತಿಯೊಳೀಕ್ಷಿಸೆ ಲೇಸಾಗಿ || ೧೧೪ ||

**ಕಂದ**

ಅಂಗವನಲುಗಿಸುತೆದ್ದು ಕು |
ರಂಗವಿಲೋಚನೆಯುಳ ಮೇಲೊರಗುತ ಭೂಪಂ ||
ತುಂಗಪರಾಕ್ರಮಿ ಪಾರ್ಥಂ |
ಕಂಗಳಿದಿರು ಕಾಣಲು ಬಳಿಕವನೊಡನೆಂದಂ || ೧೧೫ ||

**ರಾಗ ಸಾವೇರಿ ತ್ರಿವುಡೆತಾಳ**

ಬಂದೆಯ ಪಾರ್ಥ ನೀನು | ಸಮಸಪ್ತಕ | ರಿಂದಲ್ಲಿ ಬಿಟ್ಟರೇನು | ಸಂಗ್ರಾಮದಿ |
ನೊಂದು ಬಿದ್ದಿರುವೆ ನಾನು | ಪೋದಲ್ಲಿ ನೀನು ||
ಚಂದವಾದುದೆ ರಣದೊಳಾ ರವಿ | ನಂದನಗೆ ಹದನೇನು ಮಾಡಿದೆ |
ಕೊಂದೆಯೋ ಮಿಗೆ ಸಲಹಿದೆಯೊ ಮೇ | ಣೆಂದು ನುಡಿ ನುಡಿ ತಡೆಯದೀ ಕ್ಷಣ || ೧೧೬ ||

ಬಾಯಿಂದ  ಬಗುಳಿದರೆ | ಕಾರ್ಯವು ತನ್ನ | ದಾಯಿತೆ ಪೊಗಳಿದರೆ | ಪೌರುಷದಂಗ |
ದಾಯತಿಕೆಗಳೆ ಬೇರೆ | ತಾ ನೆಗಳ್ದರೆ ||
ನೋಯಿಸುವರಿಲ್ಲೆಂಬ ಕಡೆಯೊಳು | ಗಾಯದೋರುವ ವಿಕ್ರಮವು ರಾ  |
ಧೇಯನಿದಿರಲಿ ನಡೆವುದೇ ಮುದಿ | ನಾಯಿಗಳಿಗೇಕೀ ಪರಾಕ್ರಮ || ೧೧೭ ||

ಸದೆದು ವೈರಿಗಳನೆಲ್ಲ | ಸಂಗರದೊಳು | ಬದುಕಿ ನೀ ಬಂದೆಯಲ್ಲ | ಈ ತನು ಸಾಕು |
ಮೊದಲಿದನಾರು ಬಲ್ಲ | ನೊಂದ ನೋವೆಲ್ಲ ||
ಕದನದೊಳು ಸಿಲುಕಿರ್ದ ಭೀಮನ | ವದನ ಕಂಡವರಾರು ಕಾದುವ |
ಡದುಭುತದ ಭಟನೆಂಬ ಗರ್ವದೊ | ಳಿದಿರು ಬಂದೆಯ ಸಾಕು ಬಿಡು ಬಿಡು || ೧೧೮ ||

ಇವರ ನಂಬಿದವರಿಗೆ | ದೇಶಾಂತರ | ದವಧಿಯಲ್ಲವೆ ಕಡೆಗೆ | ಸೇರುವುದು ತಾ |
ನವನಿಯೆಂಬುದು ಸುಮ್ಮಗೆ | ಕಾಳಗದೊಳಗೆ ||
ನವೆಯಲೋಸುಗ ಘಟಿಸಿತಲ್ಲದೆ | ಎಮಗೆ ಸಾಧ್ಯವೆ ತಿಳಿಯದಾದೆನು |
ರವಿಯ ನಂದನನೋಲು ವೀರರು | ಭುವನದೊಳಗಾರುಂಟು ಧಣುಧಣು || ೧೧೯ ||

**ವಾರ್ಧಕ**

ಅವನಿಯೊಳ್ ಕಲಿ ಕರ್ಣಗಿದಿರಾದ ಭಟರಿಲ್ಲ |
ರವಿಜನೊಡನಾಹವದಿ ಕೈಗಲಸುತುರೆ ಬದುಕಿ |
ದವರಿಲ್ಲ ರಾಧೇಯನಂ ಕೆಣಕಿ ಬಾಳ್ದವರನಾರನುಂ ಕಾಣೆನಿಂದು ||
ಅವನ ಸಮಬಲರಾರು ನಮ್ಮೀ ಭಟಾಳಿಯೊಳ್ |
ಬವರಗಾರರ ದೇವನೆನಬಹುದು ಪೂತು ಕೌ |
ರವನ ಭಾಗ್ಯೋದಯದ ಬೆಳಕೆಂದು ನೃಪ ಪೊಗಳೆ ಕೈಮುಗಿದು ನರ ನುಡಿದನು || ೧೧೦ ||

**ರಾಗ ಕಾಂಭೋಜಿ ಏಕತಾಳ**

ಲಾಲಿಸೆನ್ನ ಬಿನ್ನಪವ | ಕರುಣದಿಂದ ಜೀಯ |
ಜಾಲವಲ್ಲ ಚಿತ್ತದೊಳು | ನೀನೀಗೊಲಿದು ರಾಯ || ಲಾಲಿ || ಪ ||

ಸಮಸಪ್ತಕರೊಳ್ ಕಾದುತಿರ್ದೆ | ಮೊದಲಿಂಗೆ ನಾ ನಿನ್ನ |
ಶ್ರಮಗಳನ್ನು ಕೇಳ್ದು ಮೇಲೆ | ತಿರುಗಿದೆನ್ನೈ ಎನ್ನ ||
ಗಮನವ ಕಂಡಡ್ಡ ಬರಲು | ಖಳರ ನಿರ್ಣಯಿಸಿದೆನು |
ನಿಮಿಷದೊಳ್ ಗುರುಸಂಜಾತನ | ಧನುವ ಖಂಡಿಸಿದೆನು || ಲಾಲಿ || ೧೧೧ ||

ಅನಿತರೊಳ್ ಕೌರವಭಟರು | ಶರಧಿಘೋಷದಿಂದ |
ಕನಲುತಡ್ಡಯ್ಸಿದರೆ ಕ್ಷಣದಿ | ಮುರಿದೆನಿನ್ನನುವಿನಿಂದ ||
ಇನಜ ಕಂಡು ಬೆನ್ನಟ್ಟಿದನು | ನಿಲ್ಲು ನಿಲ್ಲೆಂದಾಗ |
ಬಿನುಗೆ ಪೋಗೆಂದವನ ಪಿಂತೆ | ಸರಿಸಿದೆನು ನಾ ಬೇಗ || ಲಾಲಿ || ೧೧೨ ||

ಬಿಟ್ಟ ಸೂಟಿಯಿಂದ ಭೀಮನ | ಕಂಡು ಮಾತಾಡಿಸಿದೆ |
ತಟ್ಟನಲ್ಲಿಂದಿತ್ತ ಬರಲೆಂ | ದೊತ್ತಿ ರಥವೋಡಿಸಿದೆ ||
ಇಟ್ಟಣಿಸಿ ಮತ್ತೆ ಕರ್ಣ | ಬರಲು ಭಂಗಿಸಿದೆನು |
ಪಟ್ಟ ಶ್ರಮಗಳಾರಿಗೆಂಬೆ | ದೇವನೆ ಕಂಡಿಹನು || ೧೧೩ ||

**ಭಾಮಿನಿ**

ಎನಲು ಕೇಳ್ದಾ ನೃಪತಿ ಕನಲಿದು |
ತನು ವಿಭಾಡಿಸಿ ನುಡಿದನೆಲವೋ |
ಘನ ಮದಾಂಧನೆ ದಣಿದೆಯೈ ತಪ್ಪೇನು ತಪ್ಪೇನು ||
ಅನುಜನಾದೊಡೆ ನನ್ನ ಹರಿಬವ |
ನೆನೆದು ರಿಪು ಸೂತಜನ ಕೊಲ್ಲದೆ |
ಜುನುಗಿ ಬಪ್ಪೆಯ ಸಾಕು ಸುಡು ಗಾಂಡೀವವಿದನೆಂದ || ೧೧೪ ||

**ಕಂದ**

ಅಣ್ಣನ ನುಡಿ ಕೇಳುತ ಮು |
ಕ್ಕಣ್ಣನ ತೆರದಿಂದರ್ಜುನ ರೋಷವ ತಾಳ್ದಂ ||
ಎಣ್ಣೆ ವಿರೋಧವನುಂ ಪೊಂ |
ಬಣ್ಣದ ಒರೆಯಿಂದುಗಿದಂ ನಿಜ ಖಡ್ಗವನುಂ || ೧೧೫ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಚಿತ್ತವಿಸೈ ಪರೀಕ್ಷಿತಜಾತ | ನಿನ್ನ | ಮುತ್ತಜ್ಜರುಗಳಿಗಾಗಿಹ ಮಾತ ||
ಕತ್ತರಿಸುವೆ ನೃಪನನೆನ್ನುತ | ಪಾರ್ಥ | ನೆತ್ತಿ ಖಡ್ಗವ ಮುಂದುವರಿವುತ || ೧೧೬ ||

ಝಳಪಿಸುವಾಯುಧವನು ಕಂಡು | ಮ | ತ್ತಿಳೆಯ ಪಾಲಕನು ತಾ ಮುಂಕೊಂಡು ||
ಬಳಿ ಸಾರ್ದು ನಡುಗುತ ಬಂದನು | ಕುಟ್ಟಿ | ಕಳೆದು ತೀರಿಸು ತನ್ನನೆಂದನು || ೧೧೭ ||

ನೋಡಿ ದ್ರೌಪದಿ ಹಾಯ್ದು ಬಂದಳು | ಬೇಡ | ಬೇಡೆಂದು ತಡೆದಡ್ಡ ನಿಂದಳು ||
ಗಾಢದೊಳಸುರಾರಿ ದಯೆಗೆಯ್ದು | ಕಯ್ | ಮಾಡದಿರೆನುತರ್ಜುನನ ಬಯ್ದು || ೧೧೮ ||

**ವಾರ್ಧಕ**

ತಡೆಯದಿರು ಮುರಮಥನನಿವನು ಸಾಹಸಿ ಕಣಾ |
ಕಡಿದಿಕ್ಕಿ ತನ್ನಯ ಪ್ರತಾಪಮಂ ಮೆರೆಸಲ್ಕೆ |
ಬಿಡು ವೃಥಾ ಕಾರ್ಯಕುಪಹತಿಯ ತಾರದಿರೆಂದು ನೃಪ ನರಳುತಂ ಪೇಳಲು ||
ತುಡುಕುತಘಹರನಯ್ದೆ ನರನ ಗರ್ಜಿಸುತ ಕಯ್ |
ವಿಡಿದೆಂದನೆಲೆ ದುರಾತುಮ ಹಿರಿಯರಂ ಕೊಂದು |
ಕಡು ನರಕವನ್ನಾಳ್ವೆನೆಂದು ಯೋಚಿಸಿದೆಯ್ಕೆ ಎನಲಾತನಿಂತೆಂದನು || ೧೧೯ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಎನ್ನಿಂದ ತಪ್ಪೇನು ಸೆರಗಿನೊಳಿಕ್ಕೀಗ | ದೇವ ಕೇಳು | ನಾ |
ಮುನ್ನಿನಾರಭ್ಯ ಪಾಲಿಸಿದೆನೀ ಶಪಥವ | ದೇವ ಕೇಳು ||
ಪನ್ನಗ ನರ ಸುರ ದೈತ್ಯರೊಳಾಗಲಿ | ದೇವ ಕೇಳು | ಈ |
ಸನ್ನುತ ಗಾಂಡೀವವನು ಜರೆದವರನ್ನು | ದೇವ ಕೇಳು || ೧೨೦ ||

ಅರಿಭಾವದೊಳು ಸಂಹರಿಸುವೆನಲ್ಲದಡಾನು | ದೇವ ಕೇಳು | ಕೊರ |
ಳರಿದು ಸಾಯುವೆನೆಂಬುದೀ ಸುಪ್ರತಿಜ್ಞೆಯು | ದೇವ ಕೇಳು |
ಧರೆಯೊಳಗೆಲ್ಲ ಪ್ರಖ್ಯಾತವಾಗಿಹುದ್ಯೆಸೆ | ದೇವಕೇಳು | ಇದ
ನರಿತವರೀ ರೀತಿ ಭಂಗಿಸಬಹುದೇನ್ಯೆ | ದೇವ ಕೇಳು || ೧೨೧ ||

ಅದರಿಂದಗ್ರಜನಾದಡೀ ಕ್ಷಣ ಕೊಲುವೆನು | ದೇವ ಕೇಳು | ಮ |
ತ್ತೊದಗದಿರ್ದಡೆ ಕೊರಳರಿದು ಸಾಯುವೆನೀಗ | ದೇವ ಕೇಳು ||

ಇದಕೆ ಕೇಡನು ತಾರೆ ತಡೆಯದಿರೆನ್ನನು | ದೇವ ಕೇಳು | ತ |
ಪ್ಪಿದನಾದರೆಯು ನಿನ್ನ ಪಾದಸೇವಕನಲ್ಲ | ದೇವ ಕೇಳು || ೧೩೧ ||

**ಭಾಮಿನಿ**

ಅರ್ಜುನನ ನುಡಿ ಕೇಳಿ ಮುರರಿಪು |
ಗರ್ಜಿಸುತ ತತ್ವಾರ್ಥದಿಂದಲಿ |
ದುರ್ಜನತ್ವವ ಕಳೆವ ಕಥೆಗಳ ಪೇಳಲವಗಂದು ||
ಊರ್ಜಿತದ ನಿರುಗೆಯನು ಕೇಳುತ |
ಮೂರ್ಜಗತ್ಪತಿ ನಗುತ ಪಾಪವಿ |
ಸರ್ಜನದ ಹದನಂಗಳರುಹಿದನಾಗ ಸಂತಸದಿ || ೧೩೩ ||

**ರಾಗ ಸಾವೇರಿ ಏಕತಾಳ**

ಕೇಳು ಕೇಳಯ್ಯ ಧನಂಜಯ | ಎನ್ನಯ ನುಡಿಯ | ಕೇಳು ಕೇಳಯ್ಯ ಧನಂಜಯ || ಪ ||

ಹಿರಿಯರ ಕೊಲ್ಲುವೆನೆಂದೆಣಿಸಿದ ಬಲು | ತರ ದುರಿತಕ್ಕುಪಶಮನಗಳುಂಟೆಲೆ ||
ಬರಿಯ ವಿಷಾದವಿದೇತಕೆ ಬಿಡು ಬಿಡು | ಗರುವರಿಗಿದು ಬಹುಮಾನವೆ ಸುಮ್ಮನೆ || ಕೇಳು || ೧೩೪ ||

ಮಾನವುಳ್ಳ ಮಾನುಷರುಗಳಿಗವ | ಮಾನಗಳಾಗಲು ಸತ್ತಂತೆಂಬುದು ||
ಈ ನುಡಿ ಶಾಸ್ತ್ರಪ್ರಕಾರವು ಸರಿ ನೀ | ಹೀನಿಸು ಭೂಪನ ಕೊಂದಂತಾದುದು || ಕೇಳು || ೧೩೫ ||

**ಶರಷಟ್ಪದಿ**

ಮುರಹರನೆಂದಾ | ಸರಸದ ನುಡಿಯಂ |
ನರ ತಾ ಕೇಳಿದು ತವಕದೊಳು |
ಪರಿಪರಿಯಿಂದಲಿ ಧರಣೀಪಾಲನ |
ಜರೆದನು ನಿಂತು ವಿರೋಧದೊಳು || ೧೩೬ ||

**ರಾಗ ಕೇದಾರಗೌಳ ಅಷ್ಟತಾಳ**

ಎಲೆ ಷಂಢನೃಪತಿ ನಿನ್ನೊಡಹುಟ್ಟಲೆಮಗೆಲ್ಲ | ಹಲವಂಗದಲಿ ಕಷ್ಟವೈ ||
ನೆಲಸಿತಲ್ಲದೆ ಬೇರೆ ಸುಖವೆಂಬುದೊಂದರ್ಧ | ತಿಲದಷ್ಟು ಕಾಣೆವಿಂದು || ೧೩೭ ||

ದ್ಯೂತದಾಟಗಳಿಂದ ರಾಜ್ಯವ ರಿಪುಗಳ್ಗೆ | ಸೋತು ಭಿಕ್ಷುಕರ ಗೆಯ್ದೆ ||
ಖ್ಯಾತಿಯಿಂ ಗುಡ್ಡಬೆಟ್ಟಗಳ ಸುತ್ತಿಸಿದಂಥ | ಪಾತಕಿ ನಿನಗೇನೆಂಬೆ || ೧೩೮ ||

ವಿಗಡತನಂಗಳ ಬಿಡಿಸಿದು ಪರಸೇವೆ | ತಗುಳಿಸಿದಧಮನಲ್ಲೈ ||
ಜಗದೊಳಗಧಿಕ ನಿಷ್ಠೂರ ದುರಾತ್ಮನ | ಮೊಗ ನೋಡಬಹುದೇನಯ್ಯ || ೧೩೯ ||

ಇಂದುರಣಾಗ್ರದೊಳೊಮ್ಮೆ ನೋಯಲು ಸಿಟ್ಟು | ಬಂದುದು ದಿನದಿನದಿ ||
ಕೊಂದು ತಾ ಕೊಲಿಸಿಕೊಂಡಲ್ಲದೆ ಜಯಸಿರಿ | ಪೊಂದಿ ಪೃಥ್ವಿಪನಾಹನೆ || ೧೪೦ ||

ಭೂಪರ ವೇಷವಿದೇಕೆ ವಿಜೃಂಭಕ | ಲಾಪವೇತಕೆ ಹೇಡಿಗೆ |
ಪಾಪಿ ಸಂಸಾರವ ಪೊರೆದೆ ವ್ಯರ್ಥದೊಳೆಂದು | ಕೋಪಿಸಿ ನುಡಿದ ಪಾರ್ಥ || ೧೪೧ ||

**ವಾರ್ಧಕ**

ಆ ನರಂ ಬಳಿಕಯ್ದೆ ಝಳಪುವಸಿಯಂ ಕೊರಳಿ |
ಗಾನಿಸಿದು ತನ್ನ ಪ್ರಾಣವ ಕಳೆವೆನೆಂದು ಸಂ |
ಧಾನಮಂ ಗೆಯ್ಯಲನ್ನೆಗ ಬಂದು ಖಡ್ಗಮಂ ಪಿಡಿದಸುರರಿಪು ಕೋಪಿಸಿ ||
ಏನೆಲೆ ಕಿರೀಟಿ ಮನದನುವನುಂ ಪೇಳೀಸು |
ಹೀನನೆಂಬುದನರಿಯದಾದೆನ್ನೈ ಬಿಡದೊಂದ |
ನಾನರುಹಿದಪೆನು ಪ್ರಾಯಶ್ಚಿತ್ತವಿದಕೆಂದು ತಿಳಿದು ನೀ ಮಾಳ್ಪುದೆಂದ || ೧೪೨ ||

**ಭಾಮಿನಿ**

ತಿಳಿ ಧನಂಜಯನಿರದೆ ತನ್ನ |
ಗ್ಗಳಿಕೆ ತಾನೆ ಪೊಗಳ್ವನಾವನು |
ಮುಳಿದು ತನ್ನನೆ ಕೊಂದುಕೊಂಡವನೆಂಬ ಶ್ರುತಿವಚನ ||
ಅಳುಕದದರಿಂದೀಗ ತವ ಹೆ |
ಗ್ಗಳಿಕೆತನಗಳ ನೀನೆ ಪೊಗಳಿಕೊ |
ಸುಳಿವ ದೋಷದ ಭಯವಿನಾಶನವಹುದು ಕಡೆಗೆಂದ || ೧೪೩ ||

**ಕಂದ**

ಜಲಜದಳಾಕ್ಷನ ನುಡಿಯಂ |
ಕಲಿ ಪಾರ್ಥನು ಕೇಳಿದು ಮತ್ತೆ ವಿನೋದದೊಳುಂ ||
ನಲಿದುರೆ ಹೆಕ್ಕಳಿಸುತ್ತಂ |
ಹಲವಂಗದಿ ತನ್ನನೆ ತಾ ಪೊಗಳಿದನಾಗಳ್ || ೧೪೪ ||

**ರಾಗ ಭೈರವಿ ಅಷ್ಟತಾಳ**

ಎಲವೊ ನೃಪಾಲ ಕೇಳು | ನೋಡೆನ್ನಂಥ | ಬಲವಂತರುಂಟೆ ಪೇಳು ||
ಛಲದಂಕನೀ ಮೂರು ಲೋಕದೊಳೆನ್ನ ಮುಂ | ದುಲಿಯುವ ಭಟನಾವನ್ನೈ || ೧೪೫ ||

ಅರಿಯೆ ನೀನಂದಿನಲಿ | ದ್ರೌಪದಿಸ್ವಯಂ | ವರ ಗೆಲ್ದು ನಿಮಿಷದಲಿ ||
ಸುರರ ಖಾಂಡವವನ ದಹಿಸಿ ಶಂಕರನ ಮೇ | ಲೆರಗಿದ ಭಟನಾವನ್ನೈ || ೧೪೬ ||

ಅಂಗಿಯ ಖಳರ ಕೊಂದೆ | ಗೋಗ್ರಹಣದ | ಸಂಗರ ಗೆಲಿದು ಬಂದೆ ||
ಹಿಂಗದೆ ದ್ರೋಣ ಭೀಷ್ಮಾದ್ಯರ ತರಿದ ಉ | ತ್ತುಂಗವಿಕ್ರಮಿ ತಾನಲ್ಲೈ || ೧೪೭ ||

**ವಾರ್ಧಕ**

ಇಂದೀ ಮಹಾ ಕಾಳಗವ ಗೆಯ್ದವಂ ತಾನು |
ಮುಂದೀ ಕುರುಕ್ಷೇತ್ರದೊಳಗಿರ್ಪ ಸೇನೆಯಂ |
ಕೊಂದು ಕರ್ಣಾದಿಗಳ ಶಿರವ ಚೆಂಡಾಡಿದು ಮಹೀತಳವ ಕೈವಶದೊಳು ||
ತಂದುಕೊಳುವಾತ ತಾನಲ್ಲದಿನ್ನಿದರೊಳಾ |
ರಿಂದಪ್ಪುದೈ ತನ್ನ ಸರಿ ಸಮರ್ಥರುಗಳಾ |
ರೆಂದು ವೆಗ್ಗಳತನಂ ನುಡಿಯಲಾನೃಪತಿ ವೈರಾಗ್ಯದಿಂ ಹರಿಗೆಂದನು || ೧೪೮ ||

**ರಾಗ ಗೌಳನೀಲಾಂಬರಿ ಏಕತಾಳ**

ದಾನವಾರಿ ಮಾತ ಲಾಲಿಸೊ | ಸುಪ್ರೇಮದಿಂದ | ಲೀ ನರಂಗೆ ಮತಿಯ ಪಾಲಿಸೊ |
ತಾನು ಬೆರತರಿಂದಲಿವರಿಂಗೆ | ಈ ಪಾಟಿ ಬಹಳ | ಹಾನಿಯಾಯ್ತಿನ್ನಾದರವರಿಂಗೆ || ೧೪೯ ||

ಕ್ಷೇಮವಾಗುತಿರಲಿ ತೋಷದಿ | ನಾ ಪೋಗುತಿರ್ಪೆ | ನಾ ಮಹಾಂತಾರಣ್ಯವಾಸದಿ ||
ಭೂಮಿಯಲ್ಲಿ ಕಲಿಯು ಬಂದುದು | ಸಾಮೀಪ್ಯದೊಳಿ | ನ್ನೀ ಮಹೀಪತಿತ್ವ ನಿಂದುದು || ೧೫೦ ||

ಪಾರ್ಥ ಜಯಿಸಿ ತಂದ ದೊರೆತನ | ಭೀಮನಿಗಿತ್ತು | ಸ್ವಾರ್ಥದಿಂದ ಪೊರೆವುದಾತನ ||
ವ್ಯರ್ಥದಾ ಪ್ರಪಂಚವ ಬಿಟ್ಟು | ತವ ಧ್ಯಾನದಿ ಕೃ | ತಾರ್ಥನಪ್ಪೆ ಹರುಷವ ಪಟ್ಟು || ೧೫೧ ||

**ಭಾಮಿನಿ**

ತಿಣ್ಣಭುಜಬಲ ಪಾರ್ಥ ಕೇಳೈ |
ಸಣ್ಣವರು ಮಾದ್ರೀಕುಮಾರರು |
ಪೆಣ್ಣುಗಳೊಳತಿ ಪ್ರೌಢೆ ದ್ರೌಪದಿಯಿವರನೆಡೆಬಿಡದೆ ||
ಬಣ್ಣದಿಂದಲಿ ಸಲಹುತಿಹುದಿ |
ನ್ನೆಣ್ಣದಿರು ಕ್ಲೇಶಂಗಳೆನುತಲಿ |
ಕಣ್ಣನೀರಲಿ ಪೊರಟು ಭೂಪತಿ ನಡೆದನನುವಾಗಿ || ೧೫೨ ||

**ವಾರ್ಧಕ**

ನಡೆದ ನೃಪತಿಲಕನಂ ಕಂಡು ಮರುಗುತ್ತಲಾ |
ಮಡದಿ ಪೊರಮಟ್ಟಳಾ ಕೂಡೆ ಮಾದ್ರೀಸುತರು |
ತಡೆಯದಯ್ದಿದರು ಬಳಿಕುಳಿದ ಸೇನಾಪತಿಗಳಖಿಳ ಬಾಂಧವರು ಸಹಿತ ||
ಪೊಡವಿಪನ ಬಳಿಸಾರ್ದರದುಭುತವ ಕಾಣುತಂ |

ಕಡೆಯಾಯ್ತು ನಿನ್ನಭ್ಯುದಯಕೆಲೆ ದುರಾತ್ಮ ನೀ |
ನಡಿಗೆರಗಿ ಕರೆತಪ್ಪುದೆಂದೆನುತ ಮುರಹರ ಧನಂಜಯನ ಕಳುಹಿಸಿದನು || ೧೫೩ ||

**ಕಂದ**

ಬೀದಿಯೊಳಯ್ದಿ ನೃಪಾಲನ |
ಪಾದದೊಳೆರಗುತ್ತಳಲುತಲಾ ಕಲಿ ಪಾರ್ಥಂ ||
ಸೋದರನೆಂಬಭಿಮಾನದೊ |
ಳಾದರು ನೀ ಕೃಪೆಮಾಡಲು ಬೇಕೆನುತೆಂದಂ || ೧೫೪ ||

**ರಾಗ ದೇಶಿ ಏಕತಾಳ**

ತಪ್ಪುಗಳ ಪಾಲಿಸಬೇ | ಕಣ್ಣದೇವ | ಎನ |
ಗಪ್ಪಣೆಯನಿತ್ತು ಪೋಪು | ದಣ್ಣದೇವ ||
ಬೊಪ್ಪನಿಗೆ ಮಕ್ಕಳ ಮೇ | ಲಣ್ಣದೇವ | ಪಗೆ ತಾ |
ನಿಪ್ಪುದೆ ಕರುಣೆ ಮಾಳ್ಪು | ದಣ್ಣದೇವ  || ೧೫೫ ||

ತಂದೆಯವೋಲಿಷ್ಟು ದಿವಸ | ಅಣ್ಣ ದೇವ | ಸಲಹಿ |
ಇಂದು ಮುನಿದು ಪೋಪರೇನೈ | ಅಣ್ಣದೇವ ||
ಮಂದಮತಿ ರಾಧೇಯನ ನಾ | ನಣ್ಣದೇವ | ಕ್ಷಣದಿ |
ಕೊಂದುಬಿಡುವೆ ಬಾರೊ ದಯದೊ | ಳಣ್ಣದೇವ || ೧೫೬ ||

**ಭಾಮಿನಿ**

ಇನಿತು ಪಾರ್ಥನು ಮರುಗಿ ಪೇಳಲು |
ವನಿತೆ ಭೂಪನ ಚರಣಕೆರಗಿದು |
ಘನವಿಷಾದವ ತಾಳ್ದು ಮಿಗೆ ತಾ ಬೇಡಿಕೊಳಲಂದು ||
ಅನಘ ಕರುಣಾಜಲಧಿ ಕೃಷ್ಣನು |
ಜನಪನೆಡೆಗಯ್ತಂದು ಬಹುವಿಧ |
ವಿನಯದೊಳು ಸಂತವಿಸಿ ಮರಳಿಸಿ ತಂದನಾಲಯಕೆ || ೧೫೭ ||

**ಕಂದ**

ಬರಲಾ ನೃಪನಾಲಯಕಂ |
ಭರದಿ ಚತುರ್ಬಲ ಘೇಯೆಂದುದು ಸಂತಸದಿಂ ||
ಪರಮ ವಿನೋದದಿ ಪಾರ್ಥನ |
ಕರೆದು ಮಹೀಪತಿ ಬೋಳವಿಸುತಲಿಂತೆಂದಂ || ೧೫೮ ||

**ರಾಗ ಕೇದಾರಗೌಳ ಝಂಪೆತಾಳ**

ತಮ್ಮ ಫಲುಗುಣನೆ ನೀನು | ಕೇಳೀಗ | ಸುಮ್ಮನೇ ಕುಳಿತುದೇನು ||
ಒಮ್ಮೆಗಾ ಸೂತಸುತನ | ಕೊಂದಲ್ಲ | ದೆಮ್ಮ ಮನ ನಿಲದು ಜತನ || ೧೫೯ ||

ಮುಂದೇನು ಹದನ ಕಂಡೆ | ಪೇಳೆನ್ನ | ತಂದೆ ನೀ ಹರುಷಗೊಂಡೆ ||
ಕುಂದದೊರ್ವನೆ ಭೀಮನು | ಛಲವಿಡಿದು | ನಿಂದಿಹನು ನಿಸ್ಸೀಮನು || ೧೬೦ ||

**ವಾರ್ಧಕ**

ರಾಯನಿಂತೆನೆ ಪಾರ್ಥನೆದ್ದು ಭೂಭುಜರ ಸಮು |
ದಾಯದೊಳ್ ಗರ್ಜಿಸುತಲಿಂದಿನಾಹವದಿ ರಾ |
ಧೇಯನಂ ಸಂಹರಿಸಿ ಶಿರವ ಚೆಂಡಾಡದಿರೆ ತನ್ನಯ ಪ್ರತಿಜ್ಞೆಗಳನು ||
ಪ್ರೀಯದಿಂ ಕೇಳಿದೈ ವಿಪ್ರನ ದರಿದ್ರನ ನಿ |
ರಾಯುಧನ ಕೊಂದವನ ವಿಶ್ವಾಸಘಾತಕನ |
ಮಾಯಕಿಗಳುರು ಸ್ವಾಮಿ ದ್ರೋಹಿಗಳ ಗತಿಯು ತನಗಹುದೆಂದು ಬೊಬ್ಬಿರಿದನು || ೧೬೧ ||

**ಭಾಮಿನಿ**

ಕೇಳಿ ನೃಪ ಹಿಗ್ಗಿದನು ಸೋದರ |
ನಾಳುತನಕುರೆ ಮೆಚ್ಚಿ ಕಪ್ಪುರ |
ವೀಳೆಯವ ತರಿಸಿತ್ತು ಕರ್ಣನ ಕೊಂದು ಬಿಸುಡೆನುತ ||
ಬೋಳವಿಸಿ ಕಳುಹಲ್ಕೆ ಪಾರ್ಥನು |
ಕಾಳಗಕೆ ಬಲು ರಭಸವೆಸಗಿದು |
ಘೀಳಿಡುವ ವಾದ್ಯದ ನಿನಾದದಿ ಪೊರಟನಾಲಯವ || ೧೬೨ ||

**ಕಂದ**

ಕುದುರೆಯ ಚಪ್ಪರಿಸುತ್ತಂ |
ಮದನನ ಪಿತ ರಥಮಂ ಸನ್ನಹಿಸಲ್ಕಾಗಂ ||
ಕದನವಿಶಾರದ ರಿಪುಕುಲ |
ಮದಗಜಕಂಠೀರವನೇರಿದು ನಡೆತಂದಂ || ೧೬೩ ||

**ಆರ್ಯಾ ಏಕತಾಳ**

ಕೂಡೆ ಮಹಾರಥರಥಿರಥ ನಾಯಕ | ವಾಡಿಗಳ ನಿಕಾಯದೊಳಾಗಂ ||
ರೂಢಿಪ  ತಾನೇ ಬಂದನು ನಲಿನಲಿ | ದಾಡುತ ಕೊಳುಗುಳಕತಿಬೇಗಂ || ೧೬೪ ||

**ರಾಗ ಭೈರವಿ ಮಟ್ಟೆತಾಳ**

ಅನಕ ಭೀಮಸೇನನಿತ್ತ | ಕನಲಿ ಧುರದೊಳು ||
ಘನ ಚತುರ್ಬಲವನು ತರಿದು | ತೊನೆದು ಭರದೊಳು || ೧೯೫ ||

ಕೊಂದು ರಿಪುನೃಪಾಲನೆಡೆಗೆ | ಹೊಂದಿ ಗಜರಲು ||
ಬಂದು ಕ್ಷಣದೊಳಾತನನುಜ | ರಂದು ತರುಬಲು || ೧೯೬ ||

ಧಿಮ್ಮನೆಲ್ಲ ಸದೆದು ನೃಪನ | ತಮ್ಮದಿರುಗಳ ||
ಘಮ್ಮನೆ ಗೋಳಿಡಲು ಬಡೆದ | ನೊಮ್ಮೆರಿಪುಗಳ || ೧೯೭ ||

**ಭಾಮಿನಿ**

ಕಣುಗಳಿಲ್ಲದ ನೃಪತಿ ಕೇಳೈ |
ರಣದೊಳಿಂದಿನವರೆಗೆ ತೀರಿದ |
ಅಣುಗರೀಲೆಕ್ಕದೊಳು ತೊಂಭತ್ತೆಂಟು ಜನವಾಯ್ತು ||
ಗಣಿತವಿದು ನೀ ನೋಡಿಕೋ ಮುಂ |
ದಣಕಿಸುತ ಕಲಿ ಭೀಮ ಪೊಕ್ಕನು |
ಕಣನ ಮಧ್ಯದಿ ಕಂಡು ದುಶ್ಯಾಸನನನುರೆ ಕರೆದ || ೧೯೮ ||

**ರಾಗ ತುಜಾವಂತು ಏಕತಾಳ**

ವೀರ ದುಶ್ಯಾಸನ | ಬಾರೊ ಬಾರೀಗ ||
ಭೂರಿ ವಿಕ್ರಮಗಳ | ತೋರೊ ತೋರೀಗ || ವೀರ || ಪ ||

ಸುರನರರೊಳು ನಿನ್ನ | ಸರಿ ಭಟನಾರೊ ||
ಕುರು ಬಲದೊಳು ನೀನೆ | ಸರಸನು ಬಾರೊ || ವೀರ || ೧೯೯ ||

ಕಲಿಗಳು ನಾವ್‌ರಣ | ದಲಿ ಜಗವರಿಯೆ ||
ಕಲಿತ ವಿದ್ಯೆಗಳನಾ | ಡಲಿಕದು ಮೆರೆಯೆ || ವೀರ || ೧೭೦ ||

ನೋಡಲಿ ಕಣನೊಳು | ಕೂಡಿದ ಜನರು ||
ಮೋಡಿಯೊಳಾವ್ ಮೆರೆ | ದಾಡುವ ಘನರು || ವೀರ || ೧೭೧ ||

**ಕಂದ**

ಭೀಮನ ನುಡಿಗಂ ರಣನಿ |
ಸ್ಸೀಮ ನೃಪಾನುಜನತಿ ಸಂತಸವೆತ್ತಾಗಂ ||
ತಾ ಮೇಲು ವಿಚಾರವ ಮರೆ |
ದಾ ಮಿಗೆ ಗರ್ಜಿಸುತಯ್ತಂದೆಚ್ಚನು ಭರದೊಳ್ || ೧೭೨ ||

**ರಾಗ ಶಂಕರಾಭರಣ ಮಟ್ಟೆತಾಳ**

ಧಿರುರೆ ಮರುತಜಾತನಿಂದು | ಧುರಕೆನುತ್ತ ಕರೆದೆ ತೋಷ |
ವೆರಸಿ ಬಂದೆ ನಿಲ್ಲೆನುತ್ತ | ಸರಳ ಸುರಿದನು |
ತರಿಯುತೆಂದ ಭಳಿರೆ ಮನಕೆ | ಭರಿತ ತೋಷವಾಯ್ತು ನಿನ್ನ |
ತರಿದು ಭಾಷೆಯನ್ನು ಮೆರೆಸಿ | ಧರೆಯ ಕೊಂಬೆನು || ೨೭೩ ||

ಕಾಡಿನೊಳಗೆ ಪುಟ್ಟಿದವಗೆ | ನಾಡೊಳಾಸೆಯೇಕೆ ಬರಿದೆ |
ತೋಡಿ ತೆಗೆವೆ ಕರುಳನೆಂದ | ರೂಢಿಪಾನುಜ ||
ಮೂಢ ಕೇಳು ಸಭೆಯೊಳೆನ್ನ | ವ್ಯಾಢವೇಣಿ ಕೃಷ್ಣೆಯಳನು |
ನೋಡಲೆಲ್ಲ ಭಂಗಿಸಿದ್ದ | ಪಾಡ ತೋರೆಲಾ || ೨೭೪ ||

ಭೂತಳವ ಬಿಟ್ಟು ಕ್ಷಾತ್ರ | ರೀತಿಯುಳಿದು ವಿಪ್ರರಂತೆ |
ನೀತಿಗೊಂಡ ತಿರುಕರಲ್ಲೊ | ಮಾತಿದೇನಲಾ |
ನೀತಿವಂತ ಲಾಕ್ಷಾಭವನ | ರೀತಿ ಕೃತಕಿಯಿತ್ತು ವಿಷವ |
ಮೇತಯತ್ನಗೆಯಿಸಿದಧಮ | ಘಾತಿಸುವೆನು || ೨೭೫ ||

ಏರಿ ಮದದೊಳನುಜರುಗಳ | ಮಾರಿಗಿತ್ತೆ ನಿನ್ನ ಉದರ |
ಹೀರಿ ತೆಗೆವೆ ಸೋದರರನು | ಭಾರಿ ಛಲದಲಿ ||
ವೀರ ಕೇಳು ಅನುಜರುಗಳು | ಸಾರಿದಂತ ಠಾವತೋರ್ಪೆ |
ಭೂರಿ ಬಲುಹು ಇರಲು ತೋರು | ತೋರು ತನ್ನಲಿ || ೨೭೬ ||

ಆದಡೀಗ ನಿಲ್ಲೆನುತ್ತ | ಕ್ರೋಧದಿಂದ ಪತ್ತು ಶರದಿ |
ಭೇದಿಸಿದ ತೇಜಿ ಸಹಿತ | ಲಾ ಧುರಂಧರ ||
ಆ ಧರಿತ್ರಿಗುರುಳಿ ಭೀಮ | ಕ್ರೋಧನಾಗಿ ಮತ್ತೆ ಕುಹಕಿ |
ಸೋದರನ್ನ ಹೊಯ್ಯೆ ಎದ್ದು | ಕಾದುತಿದ್ದನು || ೨೭೭ ||

**ರಾಗ ಪಂಚಾಗತಿ ಮಟ್ಟೆತಾಳ**

ಕುರುನೃಪಾಲನನುಜನೆಚ್ಚ | ಸರಳತತಿಯ ಕಂಡು ಭೀಮ |
ನುರು ಶಿಲೀಮುಖಂಗಳಿಂದ | ಬರಿಯಗೆಯ್ದನು ||
ಮರಳಿ ಸ್ವರ್ಣಪುಂಖಯುಕ್ತ | ಶರಸಮೂಹದಿಂದಲವನ |
ವರರಥಾಶ್ವಸೂತನನ್ನು | ಭರದಿ ಮುಸುಕಿದ || ೨೭೮ ||

ಆ ಸಮೀರತನುಜನಸ್ತ್ರ | ದಾ ಸಮೂಹ ತರಿವುತಾ ದು |
ಶ್ಶಾಸನಾಂಕ ಮಗುಳೆ ಕನಲು | ತಾ ಸರಾಗದಿ ||
ಏಸು ಬಾಣ ಪೊಡೆದೆದಡದನು | ಗಾಸಿ ಮಾಡಿ ಮರುತಸುತ ಶ |
ರಾಸನದೊಳೌಕಿ ಕಣೆಯ | ರಾಸಿಯುಗಿದನು || ೨೭೯ ||

**ಭಾಮಿನಿ**

ಎಚ್ಚ ಶರ ದುಶ್ಯಾಸನಾಧಮ |
ಕೊಚ್ಚಿ ಮುಳಿದು ಮಹಾ ಶರಂಗಳ |
ನೆಚ್ಚು ಭೀಮನ ಮುಸುಕಲಾ ಕ್ಷಣಕೀತ ಸಂಹರಿಸೆ ||
ಅಚ್ಚ ಪೊಸ ಮಾರ್ಗಣೆಯನೆಸೆಯಲು |
ಕಿಚ್ಚನೋಲಿವನಂತು ಸವರುತ |
ಹೆಚ್ಚಿತೀ ಪರಿ ಸಮರ ಬಳಿಕಾ ಮರುತಸುತ ನುಡಿದ || ೨೮೦ ||

**ರಾಗ ಆಹೇರಿ ಝಂಪೆತಾಳ**

ಭಳಿರೆ ದುಶ್ಯಾಸನಾಖ್ಯ | ನಿನ್ನೊಡನೆ | ಕೊಳಗುಳವದಾರಿಂಗೆ ಸೌಖ್ಯ || ಭಳಿರೆ || ಪ ||

ಏಸು ದಿನ ಧನುವಿನ | ಭ್ಯಾಸಮಂ ಮಾಡಿದೆಯೊ |
ವಾಸಿ ಪಂಥಗಳೊಳ್ಳಿ | ತೀ ಸಮರದೊಳಗೆ ನಾ |
ವೀಸು ನೆರೆದಂತಾಯಿತು | ಪೌರುಷದ |
ಮೀಸಲರಿಯದೆ ಹೋಯಿತು | ಯುದ್ಧದ ವಿ |
ಲಾಸದೊಳು ಪಗೆಯಾಯಿತು || ಭಳಿರೆ || ೨೮೧ ||

ಎಲ್ಲರೆಸಗುವ ತೆರನಿ | ದಲ್ಲದೇ ಪೊಸಪರಿಗ |
ಳಿಲ್ಲಿ ತೋರಲುಬೇಕು | ನಿಲ್ಲದೀ ಕ್ಷಣ ನಾವು |
ಮಲ್ಲಯುದ್ಧದಿ ಕಾದುವ || ಚಾಪದೊಳ |
ಗಿಲ್ಲ ನೋಡು ವಿನೋದವ | ಬಾ ಬೇಗ |
ಬಲ್ಲ ತನಗಳ ನೋಡುವ || ಭಳಿರೆ || ೨೮೨ ||

**ವಾರ್ಧಕ**

ಕೇಳಂಧನೃಪ ನಿನ್ನ ಮಗನನೀ ತೆರದಿ ಕ |
ಟ್ಟಾಳು ಭೀಮಂ ಕರೆಯೆ ಕಂಡು ನಗುತಾ ಕ್ಷಣಕೆ |
ತೋಳಬಲ್ಪಿಂದವಂ ಸಮ್ಮತಂಬಡಲು ರಥದಿಂದೀರ್ವರಿಳಿದು ನಿಂದು |
ತಾಳಿದೊಸನಂ ತೆಗೆದು ಚಲ್ಲಣವ ಬಿಗಿದು ಕೆಂ |
ಧೂಳಿಯಂ ಮೆಯ್ಗೆ ಪೂಸಿದು ಭುಜವ ಚಪ್ಪರಿಸಿ |
ಕಾಳಗಕೆ ಸನ್ನದ್ಧರಾಗಿ ಜಗಜಟ್ಟಿಗಳ್ ಮೆರೆದರಾನೇವೇಳ್ವೆನು || ೨೮೩ ||

**ರಾಗ ಭೈರವಿ ತ್ರಿವುಡೆತಾಳ**

ಬಂದರಾಗ | ಯುದ್ಧಕೆ | ನಿಂದರಾಗ || ಪ ||

ಖಳನು ಜಾನುವನೊತ್ತಿ ಸಮ್ಮುಖ | ದೊಳಗೆ ನಿಂತು ವಿಡಾಯಿಯಲಿ ತಾ |
ತಿಳಿದ ಸಂಜ್ಞೆಯ ಗೆಯ್ದು ಕಾಲಿಂ | ದಿಳೆಯ ಘಟ್ಟಿಸಿ ಮತ್ತೆ ಪುಟನೆಗೆ |
ದುಳಿಯದಂತಿರೆ ಸೇರಿ ಪೌರುಷ | ದೊಳವನರಿತು ವಿಭಾಡಿಸುತ ಕೈ |
ಚಳಕವನು ತೋರುತ್ತ ತಿವಿತಿವಿ | ದುಳಿಚಿಕೊಂಡರು ಕೂಡೆ ಸಮರದಿ || ಬಂದರಾಗ || ೧೮೪ ||

ಓರೆಕಣ್ಣಿನ ಕುಣಿವ ಮೀಸೆಯ | ಭೋರುಗುಟ್ಟುವ ನಾಸಿಕಂಗಳ |
ಭೂರಿ ಕಿಣಿ ಕಿಟಿಲೆಂಬ ಮುಷ್ಟಿಗ | ಳಾರುಭಟಿಸುವ ಬಾಯ ಗರ್ಜನೆ |
ಮೀರಿ ಹತ್ತಾ ಹತ್ತಿಯಿಂದಲಿ | ಸೇರಿಸುವ ತಿವಿಗಳಿಗೆ ಮಿಕ್ಕು ಕ |
ಠೋರ ಗಾಯದೊಳಿಳಿವ ರಕ್ತದ | ಧಾರೆಯಾಗಲು ಬಿಡದೆ ಸಮರದಿ || ಬಂದರಾಗ || ೧೮೫ ||

ಸೋತನಿವನಿಕೊ ನೋಡಿರೈನ | ಮ್ಮಾತ ಗೆಲಿದನು ಎಂಬರೀಚೆಯೊ |
ಳಾತ ಮುರಿದನು ಕಾಣಿರೈ ವಿ | ಖ್ಯಾತ ನಮ್ಮವ ಗೆದ್ದನೆಂಬುವ |
ರಾತುಕೊಂಡಾಚೆಯಲಿ ಬಿಡದೀ | ರೀತಿಯಲಿ ಬಲವೆರಡು ಪೊಗಳಲು |
ಪೂತು ಮಝುರೇ ಭೀಮ ತಾನದು | ಭೂತ ದುಶ್ಯಾಸನನ ಕೆಡಹಿದ || ನೇನನೆಂಬೆ || ೧೮೬ ||

**ಭಾಮಿನಿ**

ಬಿದ್ದ ದುಶ್ಯಾಸನನ ನಿಮಿಷದಿ |
ಹೊದ್ದಿ ಧರೆಗಪ್ಪಳಿಸಿ ಕಾಲಿಂ |
ದೊದ್ದುತೆದೆಯಲಿ ಕುಳಿತು ಕರದಿಂದವನ ಶೋಣಿತವ ||
ಮೆದ್ದು ತುಟಿ ಚಪ್ಪರಿಸಿ ಬಿಡದುರೆ |
ಗುದ್ದಿ ಮಾಂಸವ ಬಗಿದು ಕರುಳೊಳ |
ಗಿದ್ದ ರಕುತವ ಸವಿದು ಥಳ್ರನೆ ತೇಗಿದನು ಭೀಮ || ೧೮೭ ||

**ವಾರ್ಧಕ**

ತೀರಿತೇ ನಿನ್ನಾಟ ಸಭೆಯೊಳಗೆ ಮುನ್ನೆಮ್ಮ |
ಘೋರಿಸಿದ ಬಗೆ ಹೇಗೆ ಜೂಜಿನೊಳು ಗೆಲಿದು ಕಾಂ |
ತಾರಕಂ ಕಳುಹಿಸಿದ ಪರಿ ಹೇಗೆ ಪೋಪಾಗ ನಗುವ ಪರಿ ಹೇಗೆಂದನು ||
ನಾರಿಯಂ ಸೆಳೆದ ಬಗೆ ಹೇಗೆ ಸಭೆಯೊಳಗೆ ಭಂ |
ಗಾರಮಂ ಸುಲಿದ ಪರಿ ಹೇಗೆ ತನ್ನನು ಕಟ್ಟಿ |
ವಾರಿಗಂ ಹಾಕಿ ವಿಷವಿತ್ತಂದ ಹೇಗದರ ತೋರೆಂದು ಗರ್ಜಿಸಿದನು || ೧೮೮ ||

**ಕಂದ**

ಮತ್ತೆಡೆಬಿಡದಾ ಖೂಳನ |
ನೆತ್ತರಮಂ ಮೊಗೆಮೊಗೆದು ವಿಲಾಸದೊಳಾಗಂ ||

ಚಿತ್ತದಿ ಕನಲಿದು ರಿಪುನೃಪ |
ರತ್ತಲು ನೋಡುತ ಕರೆದವರೊಡನಿಂತೆಂದಂ || ೧೮೯ ||

**ರಾಗ ಪಂತುವರಾಳಿ ಅಷ್ಟತಾಳ**

ಕೇಳ್ದಿರೆ ನೀವು ಸರ್ವರು ಬೇಗ | ಕೇಳ್ದಿರೆ || ಪಲ್ಲವಿ ||

ಅಮ್ಮಮ್ಮ ಈ ಪಾಟಿ ಸವಿಗಾಣೆನೇಸು | ಕಮ್ಮಗಾಗಿಹುದು ಕೌರವನೆ ನೋಡೀಸು |
ತಮ್ಮನ ರಕುತವೆಂದಿನಿತು ಹೇಸದೆ ನೀ ಬಂ | ದೊಮ್ಮೆಸೇವಿಸದಡೆ ತೋರ್ಗತಿಲೇಸು |
ಸುಮ್ಮನಿರಬೇಡಿತ್ತ ಬಾ ಸುರ | ರೆಮ್ಮಿಕೊಂಡಿಹ ಸುಧೆಗೆ ಮಿಕ್ಕಹು |
ದುಮ್ಮಳಿಸದೀಗೆಂದು ಮಾತಿನ | ಸೊಮ್ಮನಾದರು ನೀ ಪರೀಕ್ಷಿಸು || ಕೇಳ್ದಿರೆ || ೧೯೦ ||

ಎಲೆ ಕರ್ಣ ನೀನತಿ ಸಹಸಿಯೈ ರಣದಿ | ಬಲಿದನಶ್ವತ್ಥಾಮನಿದಕೊ ಈ ಕ್ಷಣದಿ |
ಕೊಲುವೆನಲ್ಲೈ ನಿಮ್ಮ ಭೂಪಾಲನನುಜನ | ಛಲವಿದ್ದಡಯ್ತಂದು ಬಿಡಿಸಿರುಬ್ಬಣದಿ ||
ಕಲಹದಲಿ ಮಿಡುಕುಳ್ಳ ಕೃಪ ಸೌ | ಬಲರು ಮಾದ್ರಿಪ ಮುಖ್ಯ ಪಾರ್ಥಿವ |
ಕುಲದ ವೀರರು ನಿಮ್ಮ ನೆರವಿಯ | ಕಲಿಯ ಕೊಲುವೆನು ಬಿಡಿಸಿಕೊಳಿರೈ || ಕೇಳ್ದಿರೆ || ೧೯೧ ||

ನೋಡುವ ಮೇಲಣ ಸುಮನಸಾದಿಗಳು | ಗಾಢದೊಳಯ್ತಂದು ಬಿಡಿಸುವರುಗಳು |
ಹೇಡಿಗಳಂತೆ ನಿಂದಿರ್ಪರಲ್ಲದೆ ಕೈ | ಮಾಡರು ತಾವಿಂದಿನ ಸಮರದೊಳು ||
ಪಾಡಿನಲಿ ನೀವಾದರೆಮ್ಮಯ | ಕೂಡೆ ಸಮಸಮನಾಗಿ ಯುದ್ಧವ |
ಮಾಡಿ ದುಶ್ಯಾಸನನ ಹರಣಕೆ | ಕೇಡು ಬಾರದ ತೆರನನೀಕ್ಷಿಸಿ || ಕೇಳ್ದಿರೆ || ೧೯೨ ||

**ವಾರ್ಧಕ**

ಎನ್ನುವ ಕಠೋರೋಕ್ತಿಗಾರು ಮಾತಾಡಿದರೆ |
ಕುನ್ನಿಗಳ್ ಬಿಡಿ ಸುಮ್ಮನೇತಕಾನೊರೆಯಬೇ |
ಕೆನ್ನವರ ಕಾಂಬೆನೆಂದಿತ್ತ ತಿರುಗಿದು ಪೇಳ್ದ ನೆಲೆ ಮುರಾಸುರಮರ್ದನ ||
ನಿನ್ನಯ ಸುದರ್ಶನವ ಬಿಟ್ಟೀ ಖಳಾಧಮನ |
ಮನ್ನಿಸುವುದೆನಲಾತ ಸುಮ್ಮನಿರೆ ಬಳಿಕ ನರ |
ನಂನೋಡಿ ನಗುತ ತವಗಾಂಡೀವಮಂ ತೆಗೆ ಶರಾಳಿಯಂ ಕಳುಪೆಂದನು || ೧೯೩ ||

**ಭಾಮಿನಿ**

ಗಂಡುಗಲಿ ನರನೀ ಪ್ರತಾಪದ |
ಚಂಡ ನುಡಿಯನು ಕೇಳುತಲೆ ಕೋ |
ದಂಡವನು ಝೇಗೆಯ್ದು ಶರಗಳ ಪೂಡುತಿರಲಾಗ ||
ಕಂಡನು ಮುರಾಂತಕನಿದೇನೈ |

ಪುಂಡುತನವೇ ಪಾರ್ಥ ಲೋಕದ |
ಭಂಡನಲ್ಲಾ ನೀನು ಮರುತಜನಾರು ನೋಡೆಂದ || ೧೯೪ ||

**ಕಂದ**

ಎನಲು ಧನಂಜಯಗಾ ಕ್ಷಣ |
ಘನ ದಿವ್ಯ ನಿರೀಕ್ಷೆಯ ನೀಡಲು ಮಾರುತಿಯಂ ||
ವಿನಯದೊಳೀಕ್ಷಿಸೆ ಪಂಚಾ |
ನನ ದುರ್ಧರರೂಪವ ಕಂಡಂಜಿದನಾಗಳ್ || ೧೯೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರ ಹರ ತ್ರಿಯಂಬಕನೆ ರಕ್ಷಿಸು | ಮರುತಸುತನೆಂದೇ ಮನಸ್ಸಿನ |
ಬರಡುತನದಲಿ ಚಾಪವೆತ್ತಿದೆ | ಧುರವ ನೆನೆದು || ೧೯೬ ||

ಮೋಸವಾದುದೆನುತ್ತ ನೆಗೆದ ಶ | ರಾಸನವನಿಳುಹಿದು ಧನಂಜಯ |
ನಾ ಸಮೀರಜನಿರವನೀಕ್ಷಿಸು | ತಾ ಸಮಯದಿ || ೧೯೭ ||

ಇತ್ತ ವಾಯುಕುಮಾರ ಹರುಷದಿ | ಮತ್ತಕಾಶಿನಿಯಳನು ಕರೆಯಲಿ |
ಕತ್ತ ದೂತರ ಕಳುಹೆ ಬಂದರು | ಮತ್ತೆ ಭರದಿ || ೧೯೮ ||

**ಭಾಮಿನಿ**

ರಾಯರರಸಿಯ ಬಳಿಗೆ ದೂತರು |
ಪ್ರೀಯದಲಿ ನಡೆತಂದು ತವಕದೊ |
ಳಾ ಯುವತಿಯಳ ಕಂಡು ಬಿನ್ನಹ ಮಾಡಿದರು ನಗುತ ||
ತಾಯೆ ಕೇಳೌ ರಣದಿ ವೀರ ಗ |
ದಾಯುಧನು ದುಶ್ಯಾಸನಾಧಮ |
ನಾಯುವನು ನೆರೆ ತೊಡೆದ ನೀ ದಯೆಗೆಯ್ಯಬೇಕೆನಲು || ೧೯೯ ||

**ಕಂದ**

ಚರರಾಡಿದುದಂ ಕೇಳಿದು |
ಸರಸಿಜಲೋಚನೆ ಚಿತ್ತದಿ ಸಂತಸವೆತ್ತುಂ ||
ಮೆರೆವ ಸಖೀಜನರೊಡನಂ |
ತೆರಳಿದಳು ವಿಲಾಸದೊಳಾ ಧುರಮಂಡಲಕಂ ||

**ರಾಗ ಹಿಂದುಸ್ತಾನಿ ಅಷ್ಟತಾಳ**

ಭೋರನಯ್ತುಂದಳಾ ದ್ರೌಪದಿ | ಚೆಲ್ವ | ನಾರಿಯರ್ಗಡಣದಾಳಾಪದಿ || ಭೋರ || ಪ ||

ದಂಡಿಗೆಯೊಳಗೇರಿ | ಕೊಂಡು ವಿಲಾಸದಿ |
ಹಿಂಡು ಸತಿಯರ್ ಪೊಗಳ್ವ ಘೋಷದಿ | ಮಹಾ | ತೋಷದಿ || ಭೋರ || ೩೦೦ ||

ಮಾನಭಂಗವ ಗೆಯ್ದು | ದಾನವ ಮಡಿದನೆಂ |
ದಾನಂದದಲಿ ನಲಿದಾಡುತ್ತಮಾತ | ನಾಡುತ್ತ || ಭೋರ || ೩೦೧ ||

ನೋಡುವ ವಿಟರೆದೆ | ಗೇಡಿಪ ಸ್ಮರನ ಸಿಂ |
ಗಾಡಿಯಲಿರುವ ವಯ್ಯಾರದಿ | ಸಖಿ ಸಂ | ಚಾರದಿ || ಭೋರ || ೩೦೨ ||

**ವಾರ್ಧಕ**

ಧುರದಿ ಮಡಿದುರೆ ಬಿದ್ದ ಹೆಣದ ಮಯ ನೆಣದ ಮಯ |
ಧರೆಗೆ ಮೆತ್ತಿರ್ದ ನಿಡುಗರುಳ ಮಯ ಕೊರಳಮಯ |
ದುರುದುರಿಸಿ ಪರಿವ ನೆತ್ತರದ ಮಯ ಶಿರದ ಮಯ ಕೇಶಪಾಶಗಳ ಮಯವು ||
ಕರಿಹಯಗಳುರುಳ್ವ ಕಡಿ ಖಂಡಮಯ ರುಂಡಮಯ |
ಮೊರೆದು ಝೇಂಕರಿಸುತಿಹ ಕಾಕಮಯ ಘೂಕಮಯ |
ಭರದಿಂದ ಮುತ್ತುವ ಪರೇತಮಯ ಭೂತಮಯದಿಂದ ಭೀಕರಮೆಸೆದುದು || ೩೦೩ ||

**ಕಂದ**

ಇಂತಾ ಸಮರವ ತುಳಿದುಂ |
ಕಾಂತಾಜನರೊಡನಾ ದ್ರೌಪದಿ ಪೋಗುತ್ತಂ ||
ತಾಂ ತವಕದಿ ಮಿಗೆ ಪ್ರಳಯಕೃ |
ತಾಂತನವೋಲಿಹ ಭೀಮನ ಕಂಡಂಜಿದಳಾಗಳ್ || ೩೦೪ ||

**ಆರ್ಯಾ ಏಕತಾಳ**

ಪವನಜನೋ ಮೇಣಿವ ಕಡೆಗಾಲದ |
ಶಿವನೋ ತಾನರಿಯೆನು ಎನುತಂ ||
ಯುವತಿಯು ಮನದೊಳು ಜವಗೆಡುತಿರೆ ಬಳಿ |
ಕವಳ ನಿರೀಕ್ಷಿಸಿ ನಗುತೆಂದಂ || ೩೦೫ ||

**ರಾಗ ಭೈರವಿ ಝಂಪೆತಾಳ**

ಬಾರೆ ಮೋಹನಾಕಾರೆ | ಬಾ ಮದನವಯ್ಯಾರೆ |
ಬಾರೆಲಗೆ ಶುಕವಾಣಿ | ಬಾ ನಾಗವೇಣಿ || ೩೦೬ ||

ನಿನ್ನ ಮಾನವನಂದು | ನೀಗಿದಧಮನ ಕೊಂದು |
ಮನ್ನಿಸಿದೆ ಧುರದೊಳಗೆ | ಒರಗಿಸಿದೆನಿಳೆಗೆ || ೩೦೭ ||

ನೋಡುವರೆ ಬಾ ಮುಂದೆ | ನೋಯುವುದೆ ಮನವಿಂದೆ |
ತೋಡಿರುವೆ ಕರುಳವನ | ತೋರ್ಪೆ ನಿನಗದನು || ೩೦೮ ||

**ಭಾಮಿನಿ**

ಎನುತ ನಾರಿಯ ಕರೆದು ಹತ್ತಿರೆ |
ವಿನಯದಿಂ ಕುರುಳ್ಗಳನು ಬಿಡಿಸಿದು |
ಘನದ ತಿಳಿರಕುತವನು ಹಾಕಿದು ಬಾಚಿ ಮುಡಿಗಟ್ಟಿ ||
ದನುಜನಾ ಕರುಳ್ಗಳನು ತೆಗೆದಾ |
ವನಿತೆಯಳ ತುರುಬಿಂಗೆ ಸೂಡಿಸಿ |
ನೆನೆದ ಭಾಷೆಯು ತೀರಿತೇ ನಡೆ ಹೋಗು ಮನೆಗೆಂದ || ೩೦೯ ||

**ಆರ್ಯಾ ಏಕತಾಳ**

ನಳಿನದಳಾಕ್ಷಿಯ ಕಳುಹಿಸಿ ಭೀಮನು |
ಕಳನೊಳಗಾ ಪೆಣಮಂ ಬಿಸುಟುಂ ||
ತಿಳಿನೀರಿಂದಲಿ ಕಯ್ ಕಾಲ್ ಮೊಗವನು |
ತೊಳೆಯಲ್ ಕಾಣಿಸಿಕೊಂಡಧಟಂ || ೩೧೦ ||

**ವಾರ್ಧಕ**

ಇಳೆಯಪತಿ ಲಾಲಿಸೈ ವೀರ ವೃಷಸೇನ ದಳ |
ದುಳಿಸಿ ಧೃಷ್ಟದ್ಯುಮ್ನ ಮೊದಲಾದ ಪಾಂಡವರ |
ದಳವ ನೋಯಿಸಿ ನೃಪನ ಬೆಂಬತ್ತಿ ಗರ್ಜಿಸುತ ಹಾಯ್ದನಾ ಪಾರ್ಥನೆಡೆಗೆ ||
ಬಳಿಕವಂ ಕೋಪದಿ ಕನಲ್ದೆಚ್ಚು ಮೂರು ಶರ |
ದೊಳು ಕರ್ಣನಂದನನ ಶಿರವನರಿದಾಗ ಧರೆ |
ಗಿಳುಹಲ್ಕೆ ಜನರೆಲ್ಲ ತರಳನಳಿವಿಂಗೆ ಹಾ ಹಾಯೆಂದು ದುಃಖಿಸಿದರು || ೩೧೧ ||

**ಭಾಮಿನಿ**

ಏನನೆಂಬೆನು ಕರ್ಣತನಯನ |
ಹಾನಿಯನು ಕಾಣುತ್ತ ಕೌರವ |
ಸೇನೆ ತಲೆಕೆಳಗಾಯ್ತು ಕುರುಪತಿ ದುಗುಡಮನನಾದ ||
ಈ ನೆರೆದ ಪರಿಭವವ ಕಾಣುತ |

ತಾನೆ ರೋಷಾಗ್ನಿಯಲಿ ಭುಗಿಲೆಂ |
ದಾ ನರನ ಸಮ್ಮುಖಕೆ ರಥವನು ಚಾಚಿದನು ಕರ್ಣ || ೩೧೨ ||

**ಕಂದ**

ರಣದೊಳಗೀರ್ವರು ಚೂಣಿಯೊ |
ಳಣಕಿಸಿ ರಥಮಂ ದುವ್ವಾಳಿಸುತಲೆ ಬಳಿಕಂ ||
ಕುಣಿಸುವ ಚಾಪಧ್ವನಿಗಾ |
ಕ್ಷಣ ಬ್ರಹ್ಮಾಂಡದ ಭಟರೆದೆ ಬಿರಿದಂತಾಗಲ್ || ೩೧೩ ||

**ದ್ವಿಪದಿ**

ಆಧರಿಸು ಜನಪಾಲನೊಂದು ಚೋದ್ಯವನು |
ಈ ಧರೆಯೊಳಿಂತಾಗದಿರ್ಪ ಪದ್ಯವನು || ೩೧೪ ||

ಆ ಧನಂಜಯನ ಪಕ್ಷದೊಳು ಸುರನಾಥ |
ರಾಧೇಯನಲಿ ಸಪ್ತವಾರುಹವರೂಥ || ೩೧೫ ||

ಸುರರು ಮುನಿಮುಖ್ಯರಾ ನರನತ್ತಲಾಗೆ |
ದುರುಳ ದೈತ್ಯರು ಸೂರ್ಯಸುತನಿತ್ತಲಾಗೆ || ೩೧೬ ||

ನಿರತ ಸಜ್ಜನರೆಲ್ಲ ಕೌಂತೇಯನತ್ತ |
ಪರಮ ದುರ್ಜನರೆಲ್ಲ ಕಲಿಕರ್ಣನತ್ತ || ೩೧೭ ||

ಉಸಿರಲೇನುತ್ತಮ ಪದಾರ್ಥವಾ ಕಡೆಗೆ |
ಪಿಸುಣಾಧಮಾಧಮ ಪದಾರ್ಥವೀಕಡೆಗೆ || ೩೧೮ ||

ಎಸೆವುತ್ತಲಿಹ ಕಮಲಜಾಂಡವಾ ಪಕ್ಷ |
ಹಸನಾದ ಪಕ್ಷವಿದು ಲಾಲಿಸು ಗತಾಕ್ಷ || ೩೧೯ ||

**ಕಂದ**

ಇತ್ತಲು ಕರ್ಣಾರ್ಜುನರಿಗೆ |
ಹತ್ತಿತು ಕಾಳಗವಿಳೆ ಬಾಯ್ ಬಿಡಲೀ ತೆರದಿಂ ||
ಮತ್ತೆ ವಿಭಾಡಿಸುತಿರೆ ಗಜ |
ರುತ್ತಲೆ ಮೂದಲಿಸಿದು ಮಾತಾಡಿದರಾಗಳ್ || ೩೨೦ ||

**ರಾಗ ಭೈರವಿ ಏಕತಾಳ**

ಎಲವೋ ಸೂತನ ಮಗನೆ | ನೀ | ಕಲಹದೊಳತಿ ಸಹಸಿಗನೆ ||
ತಲೆಯನು ನೀಗಲಿಕಹುದೊ | ಮೇಣ್ | ಮಲೆತರೆ ಕಾಣಲುಬಹುದೊ || ೩೧೦ ||

ಬಿಡು ಬಿಡು ಸಾಕೆಲೊ ಪಾರ್ಥ | ನೀ | ಪೊಡವಿಯೊಳಧಿಕ ಸಮರ್ಥ ||
ಕಡುಗಲಿಯೆಂಬಬ್ಬರವು | ಎ | ನ್ನೊಡನದು ಸಲ್ಲದು ನಿರವು || ೩೧೧ ||

ಸಾಯಕ ತೊಡುವ ವಿಚಾರ | ರಾ | ಧೇಯಗೆ ಸಲುವುದೆ ತೋರಾ ||
ಕಾಯುವರ್ ಯಾರೈ ನಿನಗೆ | ನೀ ಸಾಯದೆ ನಡೆಯೈ ಮನೆಗೆ || ೩೧೩ ||

ಹಾರದಿರಕಟಾ ನರನೆ | ನಿನ | ಗ್ಯಾರರಿವರು ಪಾಮರನೆ |
ತೋರುವೆನೆನ್ನಯ ಬಿರುಸು | ಮೈ | ದೋರಿಯೆ ಕಾದಿದರಿರಿಸು || ೩೧೪ ||

**ಭಾಮಿನಿ**

ರವಿಜಕೌಂತೇಯರಿಗೆ ರೋಷದಿ |
ತವಕಿಸುತ ಕೈಚಳಕ ಶೌರ್ಯದ |
ಬವರಿಗರು ಹೊರೆಯೇರಿ ಕಾದುವ ರಭಸದದುಭುತಕೆ ||
ಅವನಿ ಮುಗ್ಗಿತು ವರ ಚತುರ್ದಶ |
ಭುವನ ಕಂಪಿತವಾಯ್ತು ಪರ್ವತ |
ದವಯವಂಗಳು ಸಡಿಲಿತಾ ಬ್ರಹ್ಮಾಂಡಘಟ ಬಿರಿಯೆ || ೩೧೫ ||

**ಕಂದ**

ಇನಿತಾ ಕರ್ಣಧನಂಜಯ |
ರನುವರಮಂ ಕಾಣುತಲಾ ಗುರುಸಂಜಾತಂ ||
ಘನ ಬೇಗದಿ ಬಂದಾ ಕುರು |
ಜನಪಾಲಕನೊಡನೆಂದನುಮತಿ ಸಂಭ್ರಮದಿಂ || ೩೧೬ ||

**ರಾಗ ಭೈರವಿ ಝುಂಪೆತಾಳ**

ಕೇಳು ಕುರುರಾಯ ಬಲು | ಕಟ್ಟುಹೋದುದು ಕಾರ್ಯ |
ಪೇಳುವೆನು ತಾನೀಗ | ಪೆಸರಿಟ್ಟು ನಿನಗೆ  || ೩೧೭ ||

ಇಂದಿನಾಹವದೊಳಗೆ | ರವಿಜನತಿ ಬಲವಂತ |
ನೆಂದು ಲೋಕದೊಳೆಲ್ಲ | ನಿರ್ಧಾರವಾಯ್ತು || ೩೧೮ ||

ಇಂಥಾ ಮನುಷ್ಯನನು | ಈ ಸ್ವಲ್ಪ ಕೆಲಸಕ್ಕೆ |
ನಿಂತು ನೀ ಕೊಲಿಸುವುದು | ನೀತಿಯೇನಯ್ಯ || ೩೧೯ ||

**ವಾರ್ಧಕ**

ಎಲೆ ಕುರುನೃಪಾಲಾಗ್ರಣಿಯೆ ಮುನ್ನಿನಾರಾಭ್ಯ |
ಕುಲಗೋತ್ರ ಬಂಧು ಬಾಂಧವ ತನುಜರನುಜರೀ |
ಛಲದಂಕ ರವಿಜನೋರುವನಲ್ಲದಿಲ್ಲೆಂಬೆ ಮೇಣಿವನ ಕೊಳಗುಳದೊಳು ||
ಕೊಲಿಸದಿರ್ ನೀನುಳಿವ ಪರಿಯಂತ ಸುತರಳಿವ |
ಸಲೆ ಸೂತತನುಜನಂ ಕಂಡು ಮರೆತಿಹೆ ಮುಂದೆ |
ಕಲಿಕರ್ಣನಳಿಯಲಾರಂ ನೋಡಿ ಮೆರೆವ ಬಿಡು ಸಂಧಾನಮೆಸಗೆಂದನು || ೩೨೦ ||

**ಭಾಮಿನಿ**

ಸಾಕು ಮೂರ್ಖತೆ ಬೇಡ ಮನಕೆ ವಿ |
ವೇಕ ತಂದುಕೊ ರಣದೊಳಳಿದುದ |
ನೇಕ ಸುಭಟಾವಳಿಯ ನೋಡಿದೆ ಕಣ್ಣಿನೊಳು ಮತ್ತಾ ||
ಆಕೆವಾಳರ ಕೂಡೆ ಸಮರವಿ |
ದೇಕೆ ಬಿಡು ಸಂಧಿಯನು ಮಾಡಿಸಿ |
ನೀ ಕರೆದು ತಂದಿಟ್ಟುಕೊಳ್ಳೈ ಪಾಂಡುಸುತರಿಂಗೆ || ೩೨೧ ||

**ಕಂದ**

ಇನಿತಶ್ವತ್ಥಾಮಂ ಪೇ |
ಳ್ದನಿತಂ ಕುಹಕಿಶಿರೋಮಣಿ ಕೇಳಿದು ಭರದಿಂ ||
ಮನದಿ ವಿರೋಧವ ತಾಳ್ದುಂ |
ಘನ ರೋಷದ ಭಾವದೊಳವನೊಡನಿಂತೆಂದಂ || ೩೨೨ ||

**ರಾಗ ಕೇದಾರಗೌಳ ಅಷ್ಟತಾಳ**

ಗರುಡಿಯಾಚಾರ್ಯಕುಮಾರ ನೀನಿಂದಿನೊ | ಳೊರೆದ ಮಾತಿನ ಬಗೆಗೆ ||
ಹರುಷವಾಯ್ತೆನ್ನ ಚಿತ್ತದೊಳೀಗ ಬಿಡು ಬಿಡು | ಮರಳಿದನಾಡದಿರು || ೩೨೩ ||

ಪಣೆಯೊಳು ವಿಧಿ ಬರೆದಂಥ ಕಲ್ಪನೆಯನ್ನು | ಜುಣುಗಿದರದು ತಪ್ಪದೆ |
ರಣದೊಳು ಸುತಸೋದರರು ಸಹಿತಳಿದ ಮೇಲ್ | ಬಣಗರೊಳ್ ಸಂಧಾವನೇ || ೩೨೪ ||

ವಿಹಿತವಿನ್ನಾದರಾಗಲಿ ಮುಂದೆ ಸಂಧಾನ | ವಹ ರೀತಿಯೆಂತು ಕಂಡ್ಯೆ ||
ಅಹಿತರೆಮ್ಮವರ ನಷ್ಟವ ನೋಡಿ ನೀವು ನಿ | ರ್ವಹಿಸಲೊಪ್ಪುವೆನಿಂದಿಗೆ || ೩೨೫ ||

**ವಾರ್ಧಕ**

ದ್ರೋಣನದಿಸುತರೆರಡುತಟ್ಟಿನವರಿಗೆ ಸಮಂ |
ಮೇಣು ಲಕ್ಷಣ ಮುಖ್ಯರಭಿಮನ್ಯು ಮೊದಲಾದ |
ಭ್ರೂಣರಿಗೆ ಸರಿಯಾಯ್ತು ಮಿಕ್ಕಿನಿತ್ತಂಡದೊಳ್ ಪೊಯ್ದಾಡಿ ಮಡಿದೊರಗಿದ ||
ಕ್ಷೆಣಿಪರ ಬಿಡಲಿ ವೃಷಸೇನ ದುಶ್ಯಾಸನರ |
ನೂಣಯಕೆ ತೆರಪಿಲ್ಲ ಮಾರುತಿಜ ಧನಂಜಯರ |
ಗೋಣಂಗಳಂ ತರಿದರಪ್ಪುದು ಸಮಂ ಬಳಿಕ ಸಂಧಾನಮೆಸಗೆಂದನು || ೩೩೬ ||

**ಕಂದ**

ಎಂದಾ ಗುರುಜನ ಗರ್ಜಿಸ |
ಲಂದು ವಿಭಾಡಿಸಿ ಮುರಿದವ ಪೋಗಲ್ಕಿತ್ತಂ ||
ಕುಂದದೆ ಜತೆಯೊಳಗೀರ್ವರು |
ನಿಂದು ರಣಾಗ್ರದೊಳೆಚ್ಚಾಡಿದರತಿ ಭರದಿಂ || ೩೩೭ ||

**ರಾಗ ಶಂಕರಾಭರಣ ಏಕತಾಳ**

ಪೂತು ಮಝರೆ ಧೀರನ್ಯೆಸೆ | ನೀತಿವಂತನಹುದೊ ನಮ್ಮ |
ಜಾತನಾದವೃಷಸೇನನ | ನೇತಕೆ ಕೊಂದೆ ||
ಜಾತನಾದರವನು ತನ್ನ | ಮಾತೆಯೊಂದಿಗಿರದೆ ದಳವ |
ಘಾತಿಸುತ್ತ ಮೇಲೆ ಬೀಳ | ಲಾತು ತರಿದೆನು || ೩೩೮ ||

ಇಂದ್ರತನಯ ಭಳಿರೆ ಕುರು | ವೃಂದ ಸಹಿತ ಗೋಗ್ರಹಣದಿ |
ನಿಂದು ಜಯಿಸಿದಂದದಿಂದ | ಲಿಂದುಬ್ಬಬೇಡ ||
ಹಿಂದೆ ರಣದಿ ಮಾಗಧನ | ಮುಂದುಗೆಡಿಸಿ ಸೆಳೆದೆ ರಾಜ್ಯ |
ವೆಂದು ಮನದೊಳುಲಿಯದಿರು | ನಿಂದು ತೋರೆಲಾ || ೩೩೯ ||

ಹರಿಹರರ ಕೂಡೆ ಯುದ್ಧ | ಕಿರದೆ ಮಲೆತು ಕವಚಖಳರ |
ತರಿದ ಬಲ್ಮೆಯಿಂದ ಗಳಹೆ | ಧುರಕೆ ಬೆದರ್ವನೆ ||
ತರಳೆ ಭಾನುಮತಿಯ ಕುರು | ವರಗೆ ಲಗ್ನಗೆಯ್ಯುವಲ್ಲಿ |
ನೆರೆದ ರಾಯರನ್ನು ಗೆಲ್ದ | ಬಿರುಸ ತೋರೆಲಾ || ೩೪೦ ||

ಮಲ್ಲ ದ್ರುಪದನಲ್ಲಿ ಜಯಿಸಿ | ನಿಲ್ಲದಗ್ನಿಗಿತ್ತೆ ಸುರರ |
ಚೆಲ್ವ ವನವ ಸುರರ ಗೆಲ್ದು | ದೆಲ್ಲ ಕೇಳ್ದಿಹೆ ||
ನಿಲ್ಲು ತಿಳಿವೆ ಕುರುಮಹೀಶ | ನಲ್ಲಿ ಹೈಡಿಂಬಿಯ |
ನಲ್ಲಿ ಗೆಲಿದೆ ಮೂರುಕೋಟಿ | ಮಲ್ಲ ಖಳರನು || ೩೪೧ ||

ಎನಲು ಕರ್ಣ ರೋಷದಿಂದ | ಕನಲಿ ದಿವ್ಯ ಸರಳನೆಸೆಯ |
ಲನಿತು ತರಿದು ನುಡಿದನಾಗ | ಕಿನಿಸಿನಿಂದಲಿ ||

ಘನತೆ ತೋರು ತೋರೆನುತ್ತ | ಕಣೆಯ ಕವಿಸೆ ಕಡಿದು ಸುರಿದ |
ವನಜನೇತ್ರ ಮೆಚ್ಚುವಂತೆ | ಕ್ಷಣದಿ ರವಿಜನು || ೩೪೧ ||

**ರಾಗ ಸಾವೇರಿ ಮಟ್ಟೆತಾಳ**

ಪೂತು ಮಝುರೆ ಕರ್ಣ ನೀ ವಿ | ಖ್ಯಾತನೆಂದು ಪೂರ್ಣ |
ಶಾತಕುಂಭ ಪುಂಖದಸ್ತ್ರ | ವ್ರಾತವೆಸೆದನಾಗ ||
ನೀತಿವಂತ ನೀನು ಪೃಥೆಯ | ಜಾತನಾಗಬಹುದೊ |
ಆತುಕೊಂಬದೆನುತ ರವಿಜ | ನೂತನಂಬುಗರೆದ || ೩೪೩ ||

ಎಲವೊ ಸೂತತನುಜ ನಿನ್ನ | ಹುಲು ಕಣಾಳಿ ಮುಂದೆ |
ನಿಲಲರಿಯದೆನುತ್ತಲಾಗ | ಉಲಿವ ಶರಗಳುಗಿದ |
ಕಲಿಗಳೊಳಗೆ ನೀನೆ ಧೂರ್ತ | ಬಲಿದ ವೀರನಹುದೊ |
ನೆಲೆಯ ನೋಳ್ಪೆನೆನುತ ಕರ್ಣ | ಕಲಿಕಿರೀಟಿಗೆಸೆದ || ೩೪೪ ||

**ವಾರ್ಧಕ**

ಈ ಪರಿಯೊಳಾ ರವಿಜಫಲುಗುಣರ್ ಕದನದಾ |
ಳಾಪದೆಂದೆಚ್ಚಾಡಿದರ್ ಬಳಿಕ ನರನು ಪ್ರ |
ತಾಪದಿಂ ತೆಗೆದೆಸಲ್ ಕರ್ಣನ ರಥಂ ಬುಗರಿಯಂತೆ ಧಿರ್‍ರನೆ ತಿರುಗಿತು ||
ತಾ ಪೋಗಲೊಂದು ಯೋಜನ ಪಿಂತೆ ಕಂಡಿನಜ |
ಕೋಪದಿ ಕನಲ್ದೆಚ್ಚನಾತನ ವರೂಥಮಂ |
ಮೀ ಪರಂತಪೆಯ ಮೇಲ್ ಪತ್ತು ಬಿಲ್ಲಂತರಂ ಪಿಂತೆ ಸರಿದುದು ಘರ್‍ರನೆ || ೩೪೫ ||

**ಭಾಮಿನಿ**

ಪೂತು ಮಝುರೇ ಕರ್ಣ ಜಗವಿ |
ಖ್ಯಾತ ಧಣು ಧಣು ಸಮರದೊಳು ಸ |
ತ್ತ್ವಾತಿಶಯನಹೆ ಧಿರುರೆ ಮಝು ಬಿಲ್ಲಾಳು ನೀನೆನುತ ||
ಯಾತುಧಾನರ ವೈರಿ ಪೊಗಳಿದ |
ಮಾತ ಕೇಳುತ ಪಾರ್ಥ ಮನದಲಿ |
ಕಾತರಿಸಿ ಧನುವಿಳುಹಿ ದುಗುಡದೊಳಿರಲು ಹರಿ ನುಡಿದ || ೩೪೬ ||

**ರಾಗ ರೇಗುಪ್ತಿ ಆದಿತಾಳ**

ಏನು ಚಿಂತೆ ಬಂತು ಪಾರ್ಥ | ಎನ್ನೊಳೀಗ ಪೇಳು ||
ಮಾನಭಂಗವನ್ನು ಗೆಯ್ದ | ರಾರು ನಿನಗಿಂದಿನೊಳು || ೩೪೭ ||

ಮುಂದೆ ಕರ್ಣನೆಂಬ ಧೂರ್ತ | ನಿಂದಿರ್ಪ ತಾನಿದಕೊ ||
ಕುಂದಿ ಧನುವನಿಳುಹಿ ಕುಳಿತು | ಕೊಂಡಿರ್ಪುದು ನೀನೇಕೊ || ೩೪೮ ||

ರಣದೊಳೆಮ್ಮಂಥವರಿಗಾದರು | ಕೋಪವೇರಿ ಬಹುದು ||
ಸೆಣಸುವಂಥ ವೀರ ನಿನಗೆ | ಸೇರುವುದೆ ಹೀಗಿಹುದು || ೩೪೯ ||

**ಕಂದ**

ಮುರಹರನೆಂದುದ ಕೇಳ್ದುಂ |
ತರಹರಿಸದೆ ಪುರುಹೂತಕುಮಾರನು ಭರದಿಂ ||
ದುರುತರ ಲೀಲಾನಾಟಕ |
ನರಚಾರಿತ್ರನೊಳಿಂತೆಂದ ವಿನೋದದೊಳುಂ || ೩೫೦ ||

**ರಾಗ ಕೇದಾರಗೌಳ ಅಷ್ಟತಾಳ**

ದೇವ ಲಾಲಿಪುದೀಗ ಬಿಡದೊಂದು ಯೋಜನ | ಕಾ ವಿರೋಧಿಯ ರಥವ ||
ನೀವೆ ನೋಡುವ ತೆರದಿಂದೆಚ್ಚು ರಿಪುವಿನ | ಡಾವರ ಬಿಡಿಸಿದೆನು  || ೩೫೧ ||

ಜೀವದಾಸೆಯ ಬಿಟ್ಟು ಪತ್ತು ಬಿಲ್ಲಂತರ | ಕೀ ವರೂಥವನು ಮತ್ತಾ |
ಧೀವರಾತ್ಮಜನೆಚ್ಚಡಾತನನತಿ ತೋಷ | ಭಾವದಿ ಪೊಗಳುವಿರಿ  || ೩೫೨ ||

ಎನ್ನಯ ಭುಜಬಲದೊಳಗೇನು ಕುಂದುಗ | ಳನ್ನು ಕಂಡಿರಿ ನೀವಿಂದು ||
ಕುನ್ನಿ ರಾಧೇಯನ ವಿಕ್ರಮದಾಟೋಪ | ದುನ್ನತಿಕೆಯು ಹೆಚ್ಚೇನು || ೩೫೩ ||

ಎನ್ನುವುದೇನು ನಾನೇಸು ಗೆಯ್ದರು ಕಷ್ಟ | ವನ್ನು ನಿರರ್ಥವಲ್ಲಾ |
ಘನ್ನಘಾತಕದ ಪ್ರಾರಬ್ಧಾನುವಶವಲ್ಲ | ದಿನ್ನು ಪೇಳುವುದಾರಿಗೆ || ೩೫೪ ||

**ವಾರ್ಧಕ**

ಆ ಕಿರೀಟಿಯು ನುಡಿದುದಂ ಕೇಳ್ದು ನಗುತ ಕರು |
ಣಾಕರಂ ಪೇಳ್ದನೆಲೆ ಮರುಳೆ ಕೌಂತೇಯ ಕೇ |
ಳೀ ಕಮಲಜಾಂಡಮಂ ಪೊತ್ತಿರ್ಪೆನೆನ್ನ ಸಹಿತೀದೇವದತ್ತ ಸಹಿತ ||
ಈ ಕಪೀಶ್ವರ ಸಹಿತಮೀ ಚಾಪ ನೀ ಸಹಿತ |
ಮೀ ಕಠಿನ ರಥಮೆಸೆವರೇಸು ಸತ್ತ್ವಂಗಳುಂ |
ಬೇಕವನ ಹುಲುರಥವನೆಚ್ಚಡೇನಾಯ್ತು ರವಿಜಾತಗೆಣೆಗಾಣೆನೆಂದ || ೩೫೫ ||

**ಕಂದ**

ಚಿತ್ತದ ದುಮ್ಮಾನವ ಬಿಡು |
ಮತ್ತೆ ಶರಾಸನಮಂ ಝೇಗೆಯ್ದತಿ ಭರದಿಂ ||
ದತ್ತ ರಣಾಗ್ರದಿ ರಿಪುವಿನ |
ಕತ್ತರಿಸೆನೆ ಕಲಿ ಪಾರ್ಥಂ ಬಳಿಕನುವಾದಂ || ೩೫೬ ||

**ರಾಗ ಭೈರವಿ ಅಷ್ಟತಾಳ**

ಎಲವೊ ರಾಧೇಯ ಕೇಳು | ಉಬ್ಬದಿರಿನ್ನು | ತಿಳಿವೆ ನೀನಂದಿನೊಳು ||
ಹುಲು ಖೇಚರನಲಿ ಜೀವಿಸಿದಂದ ಮರೆತಿಂದು | ಕಲಿತನದೋರುವೆಯ || ೩೫೭ ||

ಸುರತರುಣಿಯಲಿ ನೀನು | ಶಾಪವ ಕೊಂಡು | ದರಿತಿಹೆ ಕೇಳ್ದು ನಾನು ||
ಬರಿದೇಕೆ ಗಳಹುವೆ ಧುರಧೀರನಾದರೆ | ಪರಿಕಿಸೆಂದೆಚ್ಚನಾಗ || ೩೫೮ ||

**ರಾಗ ಪಂಚಾಗತಿ ಮಟ್ಟೆತಾಳ**

ಜನಪ ಕೇಳು ರೋಷದಿಂದ | ಕನಲುತಿಂದ್ರಜಾತ ತನ್ನ |
ಧನುವ ಝೇಂಕರಿಸುತ ರವಿಜ | ನನು ಪಚಾರಿಸಿ ||
ಧನುವ ಝೇಂಕರಿಸುತ ರವಿಜ | ನನು ಪಚಾರಿಸುತ್ತಲಾಗ |
ಘನ ಶರಂಗಳಿಂದಲವನ | ತನುವ ಮುಸುಕಿದ || ೩೫೯ ||

ಎಚ್ಚ ಕಣೆಗಳನ್ನು ನಡುವೆ | ಕೊಚ್ಚಿ ಪುಡಿಯ ಮಾಡುತೌಡು |
ಗಚ್ಚಿ ಪಲ್ಲಮೊರೆದು ಬಳಿಕ | ಲಚ್ಚ ಸಾಣೆಯ |
ಕಚ್ಚಿ ಪಲ್ಲಮೊರೆದು ಬಳಿಕ | ಲಚ್ಚ ಸಾಣೆಯಲಗಿನಿಂದ |
ಮುಚ್ಚಿದನು ಕಿರೀಟಿಯನ್ನು | ಮೆಚ್ಚಲಮರರು || ೩೬೦ ||

**ವಾರ್ಧಕ**

ಹರಿಗೆ ಪನ್ನೆರಡು ರಥಹರಿಗಳ್ಗೆ ಪದಿನೆಂಟು |
ನರನಿಗಯ್ವತ್ತು ಪಳವಿಗೆ ಹನುಮಗಿಪ್ಪತ್ತು |
ವರರಥಾಂಗಗಳಿಗಯ್ದಯ್ದು ಶರವೆಚ್ಚು ಕಲಿ ರಾಧೇಯನುರೆ ಗರ್ಜಿಸೀ |
ಮರಳೆಲ್ಲವರ್ಗೆನಲುವತ್ತು ಬಾಣದೊಳೆರ್ಚು |
ಭರದೊಳರ್ಜುನನ ನೂರಂಬಿನಿಂ ಮುಸುಕಲ್ಕೆ |
ತರಹರಿಸಿ ಪಾರ್ಥ ಮೂರ್ಛಿತನಾದನವರೆಲ್ಲರಲ್ಲಿ ಕಡು ನೊಂದರು || ೩೬೧ ||

**ಭಾಮಿನಿ**

ಕೇಳು ಧೃತರಾಷ್ಟ್ರಾವನಿಪ ನಿ |
ನ್ನಾಳು ರಣದೊಳು ವಿಜಯಲಕ್ಷ್ಮಿಯು |
ತೋಳತೆಕ್ಕೆಯೊಳಿರ್ದಳೊಂದರೆನಿಮಿಷಮಾತ್ರದಲಿ ||

ಪೇಳಲೇನದ ಬಳಿಕ ಮೂರ್ಛೆಯೊ |
ಳಾಳಿದರ್ಜುನನೆದ್ದು ಖತಿಯನು |
ತಾಳಿದುರು ಕಾರ್ಮುಕವ ಧರಿಸುತ ಕನಲುತಿದಿರಾದ || ೩೮೧ ||

**ರಾಗ ಪಂತುವರಾಳಿ ಅಷ್ಟತಾಳ**

ಪೂತು ಮಝರೆ ಧೀರನಹುದೊ | ಸೂತಸಂಭವ ||
ಯಾತು ರಣದೊಳೊಮ್ಮೆ ತನ್ನ | ಜಯಿಸಿದಂದವ ||
ರೀತಿಯಿಂದ ತೋರೆನುತ್ತ ಶರವ ಮುಸುಕಲು ||
ಖಾತಿಯಿಂದ ತರಿಯುತೆಂದ | ಕರ್ಣ ನರನೊಳು || ೩೮೩ ||

ಇನ್ನು ನೋಳ್ಪುದೇನು ಪಿಂತೆ | ಕಂಡ ಬಗೆಯನು |
ತನ್ನ ಬಲುಹನರಿತು ಬಪ್ಪು | ದೇಕೆ ನೋಡಿನ್ನು ||
ಎನ್ನುತೆಚ್ಚನಧಿಕ ಮಾರ್ಗ | ಣಗಳ ಪಾರ್ಥನು |
ನಿರ್ಣಯಿಸಿ ಕನಲುತೆಸೆದ | ಮಸೆಯುವಲಗನು || ೩೮೪ ||

**ವಾರ್ಧಕ**

ಸಾರಥಿಗೆ ಪದಿನಯ್ದು ತೇಜಿಗಳಿಗಿಪ್ಪತ್ತು |
ವೀರಕರ್ಣಗೆ ನೂರು ಧ್ವಜದ ಮೇಲರುವತ್ತು |
ಚಾರು ರಥಚಕ್ರಗಳಿಗೆಂಟೆಂಟು ಕೋಲ್ಗಳೆಚ್ಚಾರ್ದವಂ ಬೊಬ್ಬಿರಿದನು ||
ಮೀರಿ ಪುನರಪಿ ಪತ್ತು ಶರದಿಂದವರ್ಗಳಂ |
ಗಾರುಗೆಡಿಸಿದು ಮತ್ತೆ ತೊಂಭತ್ತು ಮಾರ್ಗಣದೊ |
ಳಾ ರವಿಜನಂ ಮುಸುಕೆ ನಿರ್ವಹಿಸಲರಿಯದಾತಂ ಕೂಡೆ ಮೆಯ್ ಮರೆದನು || ೩೮೫ ||

**ಭಾಮಿನಿ**

ರವಿಜ ಮೂರ್ಛಿತನಾಗಲಾ ಕೌ |
ರವನ ಬಲ ಕಳವಳಿಸೆ ಸಮರದ |
ತವಕಿಗಳು ಗುರುಜ ಕೃಪ ಮುಖ್ಯರು ಹರಿಬಕಯ್ತುಂದು ||
ಬವರದೊಳು ಮೊಗದಿರುಹಲನ್ನೆಗ |
ರವಿಕುಮಾರಕನೆದ್ದು ಮಿಗೆ ತ |
ನ್ನವರನೀಕ್ಷಿಸಿ ಬಳಿಕ ತಾನಿದಿರಾದನಾಹವಕೆ || ೩೮೬ ||

**ರಾಗ ಶಂಕರಾಭರಣ ಏಕತಾಳ**

ನಿಲ್ಲು ನಿಲ್ಲೊ ರಣಕೆ ನಿನ್ನ | ಮಲ್ಲತನವ ನಿಲಿಸುತೀಗ |
ಹಲ್ಲ ಮುರಿವೆನೆನುತ ಶರವ | ಚೆಲ್ಲೆ ರವಿಜನು || ೩೮೭ ||

ತರಿಯೆ ನರನ ನೋಡುತೆಸೆದ | ಗಿರಿಯುರಗ ಮೇಘ ತಿಮಿರ |
ಮರುತ ಗರುಡ ವಹ್ನಿ ಶರವ | ಭರಿತ ಖತಿಯೊಳು || ೩೯೮ ||

ಖಂಡಿಸಲ್ಕೆ ಕರ್ಣ ಖಾತಿ | ಗೊಂಡು ಸಕಲ ಮಂತ್ರಶರವ |
ಕಂಡು ಕವಿಸೆ ತರಿಯೆ ಸುರರು | ಕಂಡು ಮೆಚ್ಚಲು || ೩೯೯ ||

**ಭಾಮಿನಿ**

ಅಂಧನೃಪ ಕೇಳಿಂತು ಸಮರದಿ |
ನಿಂದು ಕಾದಿದರಮಮ ತ್ರಿಭುವನ |
ಕಂದಿಹೋಯ್ತುವರೆಚ್ಚ ದಿವ್ಯಾಸ್ತ್ರಗಳ ಹೊಯ್ಲಿನಲಿ ||
ಮುಂದೆ ಲಾಲಿಸು ಪಾಂಡುತನುಜಗೆ |
ಬಂದ ಹರಿಬವನೇನನುಸಿರುವೆ ||
ನಂದು ಭುಜಗಾಸ್ತ್ರವನು ಕೈಗೊಂಡುಲಿದನಾ ಕರ್ಣ || ೩೮೦ ||

**ರಾಗ ಮಾರವಿ ಏಕತಾಳ**

ಇಂತೀ ಪರಿಯಲಿ ಕರ್ಣನು ರೋಷವ | ನಾಂತತಿ ಸಾಹಸದಿ ||
ಸಂತಸದಲಿ ಭುಜಗಾಸ್ತ್ರವ ತೆಗೆದು ಮ | ಹಾಂತ ಪರಾಕ್ರಮದಿ || ೩೮೧ ||

ಮುಗಿಲೊಳಗಿಹ ರವಿಯಂದದಿ ಫಣಿಶರ | ಝುಗಝುಗಿಸುತ ಪೊಳೆಯೆ ||
ಉಗುಳುವ ವಿಷದುರಿಗಂಬರದೊಳಗಿಹ | ಖಗಸಂತತಿಯಳಿಯೆ || ೩೮೨ ||

ಉರಗಮಹಾಸ್ತ್ರವ ತೆಗೆಯಲು ಕಾಣುತ | ಕುರುಪತಿ ಹರುಷದೊಳು ||
ಅರಿಗಳ ಜಯಮೀ ಶರದೊಳಗೆನ್ನುತ | ಲಿರಲತಿ ಹರುಷದೊಳು || ೩೮೩ ||

ಅತ್ತಲು ಪಾಂಡವಸೈನ್ಯದಿ ಭೀತಿಯು | ಹತ್ತಿತು ಶರದುರಿಗೆ ||
ಚಿತ್ತದಿ ಭಯಗೊಂಡಾ ಧರ್ಮಜ ತಲೆ | ಗುತ್ತಿದನಾ ಘಳಿಗೆ || ೩೮೪ ||

ಮರುತಜ ಸಾತ್ಯಕಿ ನಕುಲಾದಿಗಳಂ | ದುರುತರ ಭೀತಿಯಲಿ |
ಇರುತಿರಲಾ ಕ್ಷಣ ಪೂಡಿದನಾ ಮಹ | ಶರವನು ತಿರುವಿನಲಿ || ೩೮೫ ||

ಆಡಂಬರದೊಳಗಾ ಬಾಣದ ಗುರಿ | ನೋಡಿ ನರನ ಗಳಕೆ |
ಪೂಡುತ ಶಲ್ಯನ ಕಂಡರ್ಕಜ ಮಾ | ತಾಡಿದನಗ್ಗಳಿಕೆ || ೩೮೬ ||

**ಭಾಮಿನಿ**

ಏನು ಸಾರಥಿ ಸರಳು ಪಾಂಡವ |
ಸೇನೆಯನು ಗೆಲಲಹುದೆ ಪಾರ್ಥನ |

ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಬಹುದೆ ||
ಆನಲಮ್ಮುವರುಂಟೆ ನಿನಗಿದು | ಸಾನುರಾಗವೆ ಹೇಳೆನಲು ರವಿ |
ಸೂನುವಿನ ಮೊಗ ನೋಡಿ ಮಾದ್ರಾಧೀಶನಿಂತೆಂದ || ೩೭೭ ||

**ರಾಗ ಕೇದಾರಗೌಳ ಅಷ್ಟತಾಳ**

ಎಲೆ ಭಾನುಜಾತ ಕೇಳಸ್ತ್ರದ ನೆಲೆಯನು | ತಿಳಿಯದೆ ನೀ ಹೂಡಿದೆ ||
ನಳಿನಾಕ್ಷನಾತನ ರಥದೊಳಗಿರೆ ನಿನ್ನ | ಗೆಲುವರೆ ಬಿಡುವನೇನೈ || ೩೭೮ ||

ಕೊರಳಿಗೆ ಹಿಡಿದರೆ ಮಕುಟಕೆ ತಾಗುವು | ದುರಕಾಗಿ ಬೆಸಸಿದರೆ ||
ಶಿರವ ಕತ್ತರಿಸುವುದಿದು ಸಿದ್ಧ ಬೇಗದಿ | ಮರಳಿ ನೀ ತೊಡು ಎಂದನು || ೩೭೯ ||

**ಭಾಮಿನಿ**

ಒಂದು ಶರಸಂಧಾನ ನಾಲಿಗೆ |
ಯೊಂದು ನಮ್ಮಲಿ ಕುಟಿಲವಿದ್ಯೆಯ |
ನೆಂದು ಕಂಡೈ ಶಲ್ಯ ನಾವಡಿಯಿಡುವ ಧರ್ಮದಲಿ ||
ಇಂದು ಹೂಡಿದ ಸರಳ ನಿಳುಹುವು |
ದಂದವೇ ನೀನರಿಯೆ ಹೊರಸಾ |
ರೆಂದು ಖಾತಿಯೊಳಂಬನೆಸೆದನು ಕರ್ಣನಾ ಕ್ಷಣದಿ || ೩೮೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಚ್ಚ ಭುಜಗಾಸ್ತ್ರವದು ಬಾಯೊಳ | ಗಚ್ಚ ವಿಷ ಕಾರುತ್ತ ಜಗವನು |
ಬೆಚ್ಚಿಸುತ ಪಾರ್ಥನ ಸಮೀಪಕೆ | ಚಚ್ಚರದಲಿ || ೩೮೧ ||

ಬರುವ ವೇಳ್ಯದಿ ಗಗನಮಂಡಲ | ನರನ ರಥ ಸಲೆ ವಾಜಿ ಮತ್ತಾ |
ಧುರಧುರಂಧರರಸುರ ರೂಪಿಲಿ | ಪರಿಕಿಸಿದರು || ೩೮೨ ||

ಕಬ್ಬೊಗೆಯ ಸೂಸುತ್ತ ರೋಷದೊ | ಳಬ್ಬರಿಸುತಾ ಕ್ಷಣದಿ ಪಾರ್ಥನ |
ಕೊಬ್ಬ ಮುರಿವೆನೆನುತ್ತಲಯ್ದಿತು | ಬೊಬ್ಬೆಯಿಂದ || ೩೮೩ ||

**ವಾರ್ಧಕ**

ತರಣಿಸುತನೆಸೆದಂಬು ವಿಷವುಗುಳಿ ಬರೆ ರವಕೆ |
ನೆರೆ ಚತುರ್ದಶ ಭುವನ ಭಯಗೊಳ್ಳಲುರಿಮಸಗಿ |
ಬರೆ ಪಾಂಡವರ್ ಭೀತಿಯಿಂದ ಹರಿಯಂ ನೆನಸೆ ಕೌರವನ ಬಲಜಲಧಿಯು ||
ಹರುಷದಿಂದುಕ್ಕುತಿರಲಾ ಶರಂ ಮುಟ್ಟವಿಸೆ |

ಧರೆಯೊಳಯ್ದಂಗುಲವ ತೇರ ತಗ್ಗಿಸೆ ಹರಿಯು |
ನರನ ಮುಕುಟವ ಕಚ್ಚಿಕೊಂಡಡರಲಾ ನಭಕೆ ಮೂಜಗಂ ಬೆರಗಾಗಲು || ೩೮೪ ||

**ರಾಗ ಭೈರವಿ ಏಕತಾಳ**

ಒರೆಯುವುದೇನಾ ಬಗೆಗೆ | ಶ್ರೀ | ಹರಿಯನು ನಂಬಿದವರಿಗೆ ||
ಬರುವುದೆ ಮಹದಾಪತ್ತು | ಪರಿ | ಹರ ಮಾಡನೆ ತಾ ಮೃತ್ಯು || ೩೮೫ ||

ಹತ್ತಿರೆ ಬರುವಾಸ್ತ್ರವನು | ಕಾ | ಣುತ್ತಲೆ ಮಧುಸೂದನನು ||
ಒತ್ತಿದನಾ ಕ್ಷಣ ರಥವ | ತಗ್ಗೆ | ಪೃಥ್ವಿಯು ಐದಂಗುಲವ || ೩೮೬ ||

ಬರಸಿಡಿಲಂದದೊಳಾಗ | ಬಂ | ದುರಗಾಸ್ತ್ರವು ತಾ ಬೇಗ ||
ನರನ ಮುಕುಟವನು ಕೊಂಡು | ನಭ | ಕೆರಗಿತು ಪೌರುಷಗೊಂಡು || ೩೮೭ ||

ಕೊಂಡಾ ಮುಕುಟವನಾಗ | ರವಿ | ಮಂಡಲಕಯ್ದುತ ಬೇಗ |
ಕಂಡಿತು ಶಿರವಲ್ಲೆಂದು | ತಾಪ | ಗೊಂಡತಿಮನದೊಳಗಂದು || ೩೮೮ ||

**ಆರ್ಯಾ ಏಕತಾಳ**

ಪಾರ್ಥನ ಶಿರವದು ತಪ್ಪಲು ಕಂಡು ನಿ | ರರ್ಥಕವಾಯ್ತೆನುತಾ ಶರವು ||
ಸ್ವಾರ್ಥದಿ ಪೋಗಿಯೆ ಕರ್ಣನೊಳೆಂದುದು | ವ್ಯರ್ಥವಿಚಾರದ ಮನದರಿವು || ೩೮೯ ||

**ರಾಗ ಬಿಲಹರಿ ಏಕತಾಳ**

ಆಯ ಕೆಟ್ಟಿತು ರಾ | ಧೇಯ ಲಾಲಿಸು ಕೌಂ | ತೇಯ ತಪ್ಪಿದ ಮೋಸ | ವಾಯಿತೇನೆಂಬೆ ||
ಪ್ರೀಯದೊಳೊಮ್ಮೆ ವ | ಜ್ರಾಯುಧಸುತನಲ್ಲಿ | ನೀಯೆನ್ನ ಕಳುಹಲು | ನೋಯಿಸಿಬಿಡುವೆನು || ೩೯೦ ||

ಎನಲು ನೋಡುತ ಕರ್ಣ | ಮನದೊಳಚ್ಚರಿಗೊಂಡು | ವಿನಯದಿ ನೀನಾರೆಂ | ದೆನುತ ಕೇಳಿದರೆ ||
ಅನಿಮಿಷರ ಉದ್ಯಾನ | ವನ ಸೇರಿಕೊಂಡಿರ್ದ | ಘನದಶ್ವಸೇನ ಸ | ರ್ಪನು ತಾನಂದಿನಲಿ ||೩೯೧||

ಪುರುಹೂತಸುತನದ | ನುರಿಸುವ ಸಮಯದೊ | ಳರೆಗಡಿದನು ತನ್ನಾ | ಸುರಭಾವದಿಂದ ||
ಅರಿಯದೆ ಬಳಿಕಾನು | ಧುರದೊಳಾತನ ಕೊಲ್ಲ | ಲುರುಪರಾಕ್ರಮಿ ನಿನ್ನೊ | ಳಿರುತಿರ್ದೆನೆಂದ ||೩೯೨||

**ಭಾಮಿನಿ**

ಕೇಳಿ ಕರ್ಣನು ಕನಲುತೆಲೆಲೆ ನಿ |
ವಾಳಿ ನಿನ್ನಯ ಬಲುಹಿನಿಂದಲಿ |
ಕಾಳಗದೊಳರಿವಧೆಯನೆಸಗುವನಲ್ಲ ಹೋಗೆನುತ ||
ಪೇಳಲಾ ನುಡಿಗೊಲಿದು ಶಲ್ಯನು |

ಕೀಳುಮಾಡದಿರಕಟ ಬಾಣವ |
ಮೇಳವಿಸಿ ನೀ ತೊಡುವುದೆನಲಾ ರವಿಜನಿಂತೆಂದ || ೩೯೩ ||

**ರಾಗ ಮಾರವಿ ಏಕತಾಳ**

ಬಿಡು ಬಿಡು ಮಾದ್ರಾಪತಿ ನೀನೆನ್ನೊಳು | ನುಡಿವುದಿದನುಚಿತವು |
ಬಿಡದೊಮ್ಮೆಗೆ ಬಿಟ್ಟಾಸ್ತ್ರವ ಮರಳಿದು | ತೊಡುವೆನೆ ಸಮರದೊಳು || ೩೯೪ ||

ಮುನ್ನಿನಾರಭ್ಯದೊಳಯ್ದಿದ ಶರ ಮಗು | ಳಿನ್ನು ಬಂದುದ ಕಾಣೆ ||
ತನ್ನಾಪತ್ತಿನಲೋಸುಗ ಬಂದೀ | ಗೆನ್ನ ಕಾಡುವುದ್ಯೆಸೆ || ೩೯೫ ||

ಅಂಬರ ಕುಸಿದರು ತೊಟ್ಟ ಶರವ ತೊಡೆ | ನೆಂಬ ಬಿರುದು ತನಗೆ ||
ಹಂಬಲಿಸುವುದೇಕೆನುತಲೆ ಗರ್ಜಿಸು | ತಂಬನು ನೂಕಿಸಿದ || ೩೯೬ ||

**ವಾರ್ಧಕ**

ಇಂತು ನೂಕಿಸಲಾ ಶರಂ ಗರ್ಜಿಸುತ ತಾನೆ |
ಕುಂತೀಕುಮಾರನಂ ಕೊಲುವೆನೆಂದಯ್ತುರಲು |
ಕಂತುಪಿತನಾಜ್ಞೆಯೊಳ್ ಬಾಣವಂ ಖಂಡಿಸಿದನಾ ಕ್ಷಣದೊಳಾ ಪಾರ್ಥನು ||
ಚಿಂತಿಸುತಲಿತ್ತ ಶಲ್ಯಂ ಬಿಟ್ಟು ಪೋಗುವ ದಿ |
ನಂ ತನಗೆ ಬಂತೆನುತಲಿನಜನಂ ಜರೆದೆಂದ |
ನಿಂತೆಲವೊ ಖೂಳ ಬೆಸನಂ ಬೇಡಿದಸ್ತ್ರವನು ಕಳೆದೆ ಪಾತಕಿಯೆನ್ನುತ || ೩೯೭ ||

**ಭಾಮಿನಿ**

ಹಲವಿದೇತಕೆ ರಣದಿ ನದಿಸುತ |
ಹುಲು ಶಿಖಂಡಿಯ ನೆವದೊಳೊರಗಿದ |
ಕಲಶಸಂಭವ ತನುವ ನೀಗಿದ ಸುತನಿಮಿತ್ತದೊಳು ||
ಅಲಗು ಮರಳಿದೆ ಹೂಡೆನೆಂಬಾ |
ಛಲ ಕಣಾ ನಿನಗಿಂತು ಕೌರವ |
ತಿಲಕ ಮೂವರ ನಂಬಿ ಕೆಟ್ಟನೆನುತ್ತ ಖತಿ ತಳೆದ || ೩೯೮ ||

**ಕಂದ**

ಇನ್ನೇಕೀ ಸಮರವಿದೆನು |
ತುನ್ನತ ರೋಷದಿ ದುಮ್ಮಿಕ್ಕುತಲಾ ಶಲ್ಯಂ ||
ಗನ್ನದಿ ಪೋಗಲು ತಾನೇ |
ತನ್ನ ರಥವ ನಡೆಸುತಲಿದಿರಾದಂ ಕರ್ಣಂ || ೩೯೯ ||

**ರಾಗ ಪಂಚಾಗತಿ ಮಟ್ಟೆತಾಳ**

ಇನಿತು ತಾನೆ ರಥವ ನಡೆಸು | ತಿನಜನಯ್ದೆ ಸಮರದಲ್ಲಿ |
ಧನುವನೊದರಿಸುತ್ತ ಪಾರ್ಥ | ನನು ಪಚಾರಿಸಿ ||
ಧನುವನೊದರಿಸುತ್ತ ಪಾರ್ಥ | ನನು ಪಚಾರಿಸಲ್ಕೆ ಕಂಡು |
ಕನಲುತಾಗ ರಥವ ನಡೆಸಿ | ದನು ಧನಂಜಯ || ೪೦೦ ||

ಮೋಡಿಯಿಂದಲಿರ್ವರೆ | ಚ್ಚಾಡುತಿರುವ ರಭಸವನ್ನು |
ನೋಡಿ ದಿವಿಜರೆಲ್ಲ ಕೊಂ | ಡಾಡುತಿರ್ದರು ||
ನೋಡಿ ದಿವಿಜರೆಲ್ಲ ಕೊಂ | ಡಾಡುತಿರಲು ಭಾನುಸುತನ |
ರೂಢಿಸಿದ ವರೂಥವಿಳೆಯೊ | ಳೂಡಿ ಕುಸಿದುದು || ೪೦೧ ||

**ಭಾಮಿನಿ**

ಏನ ಮಾಡುವುದಿನ್ನು ದೈವವಿ |
ಹೀನನಲ್ಲಾ ನೃಪತಿ ರಣದಭಿ |
ಮಾನಿದೇವತೆ ಮುಳಿದಳಿಂದಿಗೆನುತ್ತ ಚಿಂತಿಸಿದ ||
ಭಾನುಸುತ ರಥವಿಳಿದು ಕುಂತೀ |
ಸೂನುವಿನ ಮೊಗ ನೋಡಿ ನೀತಿವಿ |
ಧಾನದಲಿ ತಾನೊರೆದ ಸರ್ವರು ಮೆಚ್ಚುವಂದದಲಿ || ೪೦೨ ||

**ರಾಗ ಮಧುಮಾಧವಿ ಏಕತಾಳ**

ಎಲೆ ಪಾರ್ಥ ನೀ ಕೇಳ್ವುದೊಲಿದೆನ್ನ ಮಾತ | ಛಲದಂಕನಹೆ ಸೋಮ ಕುಲಧರ್ಮಜಾತ |
ನೆಲದಲಿ ಹೂಳಿದುಮ್ಮಳಿಸಿತು ರಥವು | ಕಲಹಕಾನುವರೀಗಲಲಸದು ಮತವು || ೪೦೩ ||

ಬಿಲುಹೀನ ಶರಹೀನ ಸಲೆ ವಾಹನಗಳ | ಬಲಹೀನರಲಿ ಸಲ್ಲದೆಂಬ ನೀತಿಗಳ |
ಸಲೆ ಬಲ್ಲಿದವ ನೀನು ನಿಲು ಒಂದು ಕ್ಷಣಕೆ | ಸಿಲುಕಿರ್ದ ರಥವೆತ್ತುತಲೆ ಬಪ್ಪೆ ರಣಕೆ || ೪೦೪ ||

**ವಾರ್ಧಕ**

ಅಸಮಬಲನೆಂದ ನುಡಿಗೊಲಿದಾ ಧನಂಜಯಂ |
ವಸುಧೆಗಿಳುಹಲು ಚಾಪಮಂ ಬಳಿಕ ರಾಧೇಯ |
ನಸು ತಿರುಗಿ ಬಾಗಿ ಮಂಡಿಯನೂರಿ ಗಾಲಿಯಂ ಪಿಡಿದೆತ್ತುತಿರೆ ಕಾಣುತ ||
ಎಸೆ ಮರುಳೆ ಗಾಂಡೀವಿ ವೈರಿಗಳಿಗಾಪತ್ತು |
ಮಸಗಿದಾಗಲೆ ಕೊಲಲುಬೇಕೆಂಬುದರಸುಗಳ |
ಹಸನಾದ ನೀತಿ ತೊಡು ತೊಡು ಮಹಾಸ್ತ್ರವನೆಂದು ಮುರವೈರಿ ಗರ್ಜಿಸಿದನು || ೪೦೫ ||

**ಕಂದ**

ಹರಿಯಾಡಿದುದಂ ಕೇಳಿದು |
ತರಣಿಕುಮಾರನ ಬೆನ್ನ ನಿರೀಕ್ಷಿಸಲಾಗಂ ||
ಕರಗಿದುದಂತಃಕರಣಂ |
ಮರುಗುತ ಬಳಿಕಜಪಿತನೊಡನೆಂದನು ಪಾರ್ಥಂ || ೪೦೬ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಮನಸಿಜಪಿತ ನೀನು ಮಾತಿಲಿ ಬಿಟ್ಟಾಡು | ಕರ್ಣನಾರೈ | ಎನ್ನ |
ಮನದಲ್ಲಿ ಹಲವು ಹಂಬಲಿಸುತ್ತಲಿರ್ಪುದು | ಕರ್ಣನಾರೈ |
ಧನುವೆತ್ತಲಾರೆ ಕೂರ್ಗಣೆ ತೊಡಲಾರೆನು | ಕರ್ಣನಾರೈ | ಮೇ |
ಣೆನಗೀಸು ಪಗೆಗಾಣದಾತನ ಮೇಲಿನ್ನು | ಕರ್ಣನಾರೈ || ೪೦೭ ||

ಪೊಡವಿಪಾಲಕನಿಂದ ಹೆಚ್ಚು ತೋರುತಲಿದೆ | ಕರ್ಣನಾರೈ || ಎನ್ನ
ಒಡಹುಟ್ಟಿದವನೊ ಸಂಬಂಧವೊ ತಿಳಿಯದು | ಕರ್ಣನಾರೈ
ನಡೆಯದೆನ್ನಯ ಮಾರ್ಗಣಂಗಳಾತನ ಮೇಲೆ | ಕರ್ಣನಾರೈ | ದೇವ |
ನುಡಿ ನುಡಿ ಮರೆಮಾಜಬೇಡ ಯಥಾರ್ಥವ | ಕರ್ಣನಾರೈ || ೪೦೮ ||

ಪ್ರೀತಿಯುಕ್ಕುತಲಿಹುದೆನ್ನ ಮನದಿ ಬಹು | ಕರ್ಣನಾರೈ | ಇವನ |
ಘಾತಿಸಲಿಕ್ಕೆನ್ನ ಮನವೆಳಸುವುದಿಲ್ಲ | ಕರ್ಣನಾರೈ |
ಖಾತಿಹುಟ್ಟುವುದಿಲ್ಲ ಲೇಶವಾದರು ಈಗ | ಕರ್ಣನಾರೈ | ಇದು |
ನೀತಿಯಾಗಿಯೆ ತೋರ್ಪುದಿಲ್ಲವು ತನಗಿಂದು | ಕರ್ಣನಾರೈ || ೪೦೯ ||

**ಭಾಮಿನಿ**

ಸಾಯಕಗಳಿಲ್ಲವಗೆ ಕರದೊಳ |
ಗಾಯತದ ಧನುವಿಲ್ಲ ಬರಿದೆ ನಿ |
ರಾಯುಧನ ಕೊಲಲೆಂದಡೆಂತೈ ನೋಡು ಮನದೊಳಗೆ |
ಬಾಯ ಬಿಡುತಲಿ ರಥವನೆಳೆದೆಳೆ |
ದಾಯೆನುತ ನಿಂದವನ ಮೇಲುರು |
ಗಾಯ ತೋರುವನಾರು ನೀ ನಿಷ್ಕರುಣಿ ಪೋಗೆಂದ || ೪೧೦ ||

**ವಾರ್ಧಕ**

ಎಂದಡೆಲೆ ಮರುಳೆ ಕೌಂತೇಯ ನಿನಗೇನೆಂಬೆ |
ಮಂದಮತಿ ಸೂತ ಸುತನಿವ ನಿನ್ನ ಬಾಂಧವನೆ |
ಹಂದೆ ಕುಲಗೆಡುಕ ನೀನೇಸು ಮರುಗುವೆ ಸಾಕು ಪಿಂದಣ ರಣಾಗ್ರದೊಳಗೆ ||
ಕಂದನಭಿಮನ್ಯುವಂ ಕೊಲುವಾಗಲೆಸೆವ ಸಂ |

ಬಂಧದವನೆಂದೆನುತ ನೋಡಿದನೆ ಬಿಡು ವೃಥಾ |
ಬಂಧುತನಮಂ ಬಳಿಕ ಧನುವಿಡಿದು ತೊಡು ದಿವ್ಯ ಮಾರ್ಗಣವನೀಗೆಂದನು || ೪೧೧ ||

**ಕಂದ**

ಮಾಧವನಿಂತೆನೆ ಕೇಳ್ದುಂ |
ಕ್ರೋಧದೊಳುರಿಮಸಗಿ ಧನಂಜಯನತಿ ಭರದಿಂ ||
ಭೇದಿಸಲೆಂದೆಸೆಯಲು ಕಲಿ |
ರಾಧೇಯನು ಕಂಡು ಕಠಾರಿಯೊಳಿರಿದೆಂದಂ || ೪೧೨ ||

**ರಾಗ ಕೇದಾರಗೌಳ ಅಷ್ಟತಾಳ**

ಭಳಿರೆ ಶಾಭಾಸು ಪಾರ್ಥಿವವಂಶಜಾತನೆ | ಕೊಳುಗುಳದಧಟ ನೀನೈ ||
ತಿಳಿಯದೀ ಪರಿ ಕೃತ್ರಿಮದಲಿ ಕೊಲ್ಲುವೆನೆಂದ | ರಳುಕುವ ಭಟನೆ ತಾನು || ೪೧೩ ||

ಇನ್ನು ನೋಡಲುಬಹುದುರುಪರಾಕ್ರಮದ ಸಂ | ಪನ್ನ ತೇಜವನು ನೀನು |
ಸನ್ನದ್ಧರಾಗಿದಿರಾಗೆಂದು ಕರ್ಣ ತಾ | ಖಿನ್ನಗೆಯ್ಸಿದ ಪಾರ್ಥನ || ೪೧೪ ||

**ರಾಗ ಪಂಚಾಗತಿ ಮಟ್ಟೆತಾಳ**

ಎನಲು ಕೇಳುತಾಗ ಪಾರ್ಥ | ಮನದಿ ರೋಷಗೊಂಡು ತನ್ನ |
ಧನುವನೊದರಿಸುತ್ತ ಶರದ | ವನಧಿ ಕವಿಸಿದ ||
ಧನುವನೊದರಿಸುತ್ತ ಶರದ | ವನಧಿ ಕವಿಸಲಾಗ ಕರ್ಣ |
ಕನಲುತೆಚ್ಚ ಪೊಸ ಶರೌಘ | ವನು ವಿರೋಧದಿ || ೪೧೫ ||

ಸವರುತಾಗಲದನು ಮರಳಿ | ರವಿಜಗಂಬಿನಿಂದ ಮುಸುಕ |
ಲವನಿ ತಳದೊಳೆಲ್ಲ ಬಾಣ | ನಿವಹವೆನಿಸಿತು ||
ಅವನಿತಳದೊಳೆಲ್ಲ ಬಾಣ | ನಿವಹವೆನಿಸಿತೆಂಬವೋಲು |
ಕವಿಸಲಯ್ದೆ ಕರ್ಣ ತಾ ನಿ | ದ್ರವದೊಳಿರ್ದನು || ೪೧೬ ||

**ಭಾಮಿನಿ**

ಹಾನಿದೋರಲ್ಕರಿದು ನೃಪ ನಿ |
ನ್ನಾನೆ ಕುಸಿದುದು ಕೇಳು ಕೊಳುಗುಳ |
ಕಾನುವಡೆ ಕೈಕಾಲು ನಡುಗಿತು ಧೈರ್ಯಸಿರಿ ತೊಲಗಿ ||
ಹೀನನಾದನು ಕೌರವೇಶ್ವರ |
ಗೇನು ಗತಿಯೋ ಹರ ಮಹಾದೇ |
ವೀ ನಿರೋಧಕೆ ಕಾದೆನೆಂದೆನುತಳಲಿದನು ಕರ್ಣ || ೪೧೭ ||

**ರಾಗ ನೀಲಾಂಬರಿ ಏಕತಾಳ**

ಶಿವ ಶಿವ ಸಮರದೊಳು | ಕೈಸೋತೆನಲ್ಲ | ಭುವನೇಶ ಮಮತೆಯೊಳು ||
ಕುವರನಂದದೊಳೆನ್ನನು | ಆಪತ್ತಿಗಾ | ಗುವನೆಂದು ಸಲಹಿದನು || ೪೧೮ ||

ಕೀಳುವಂಶಜನೆಂಬುದ | ಗ್ರಹಿಸದೆ ಗುಣ | ಶೀಲನೆಂದೆನ್ನ ಪೊರೆದ ||
ಕಾಳಗದೊಳು ಮಡಿದ | ಬಂಧುಗಳೆನ್ನ | ಮೇಲಾಸೆಯಿಂದ ಮರೆದ || ೪೧೯ ||

ಎನ್ನಕುಲವ ಕೃಷ್ಣನು | ಎಚ್ಚರಿಸಿ ತಾ | ನೆನ್ನೊಡೆಯನ ಕೊಂದನು ||
ಇನ್ನೆಂತು ಅಗಲುವೆನು | ಕೌರವನಿಗೆ | ಎನ್ನಂಥ ಮಿತ್ರರಾರಿನ್ನು || ೪೨೦ ||

ಕೋವಿದನೆನುತೆನ್ನನು | ಸನ್ನುತ ಹಿತ | ಭಾವದಿ ಸಲಹಿದನು ||
ಈ ವಿಧಿ ತನಗಾಯಿತು | ಆ ಕೌರವನ | ಜೀವದ ಸಿರಿ ಹೋಯಿತು || ೪೨೧ ||

ಚೆಲುವನ ಗುಣವ ಪೇಳಿ | ತುದಿಯ ಕಾಣೆ | ತಲೆಯ ರಣಾಗ್ರದಲಿ ||
ಸಲಹಿದಾತನ ಕಾರ್ಯದಿ | ಒಪ್ಪಿಸಲೆನ | ಗೊಲಿಯಲಚ್ಯುತ ಮುದದಿ || ೪೨೨ ||

**ರಾಗ ಕಾಂಭೋಜಿ ಝಂಪೆತಾಳ**

ಮರುಗುತೀ ತೆರದಿಂದ ಸುಜ್ಞಾನದಿಂದರಿತ | ಸೊರಗಲೇಕೀ ತೆರದಿ ತಾನು ||
ಹರಿ ಛಾಯೆಯಿಂದಳಿವ ತೆರವೆಂದ ಭಾಷೆ ಮುರ | ಹರನಿತ್ತನೆನಗೆ ಪೂರ್ವದೊಳು || ೪೨೩ ||

ನರನೆಂಬವನೆ ಛಾಯೆ ಹರಿಸಹಿತ ಮುಕ್ತಿಯನು | ಕರುಣಿಸದೆ ಬಿಡನಾದರೆನ್ನ ||
ಪರಶುಧರ ಚಕ್ರಧರ ಸುರಪ ನಿಜಮಾತೆಯೀ | ಧರಣಿದೇವಿಯು ಸಹಿತ ಮುನ್ನ || ೪೨೪ ||

ನೆರೆ ಯೋಚಿಸುತ್ತಿರ್ದು ಸರಿಸಿದರು ಕಾರ್ಯವನು | ಹರಣವೊಂದುಳಿದಿರ್ದರಿವರ ||
ತರಿದು ಭಾಷೆಯ ನಡೆಸದಿರ ಹಿಂದಣಾ ಪಗೆಯ | ಕುರುರಾಯನೇಂ ಬಲ್ಲನದರ || ೪೨೫ ||

**ವಾರ್ಧಕ**

ಎಂದು ನಿಶ್ಚಯಿಸಿ ಹರಿಯಂ ನೆನೆಯುತಿರೆ ಕೃಷ್ಣ |
ನಂದರಿತು ಸಾಹಸ್ರ ಕವಚದಿಂದೊಂದುಳಿದು |
ಬಂದು ಪುಟ್ಟಿದನೀತಗಂ ಮುಕ್ತಿಯನ್ನೀವ ಮತಮೆನಗೆ ಸುಧೆಕಲಶವು ||
ಇಂದಿವನ ಹೃದಯದೊಳಗಿರಲಳಿಯನಿವನೆನುತ |
ಲಂದು ವೃದ್ಧಾಕಾರದ ಸುವಿಪ್ರನಾಗಿ ಮುದ |
ದಿಂದ ಕರ್ಣನ ಪೊಗಳುತಯ್ತಂದನೇನೆಂಬೆ ಶ್ರೀವರನ ಸೂತ್ರಗಳನು || ೪೨೬ ||

**ಕಂದ**

ಎನುತಪರೋಕ್ಷದಿ ರವಿಜಂ |
ಮನವಿರಿಸುತ ನರನ ವರೂಥಾಗ್ರದ ಹರಿಯಂ ||
ನೆನೆದೀಕ್ಷಿಸುತಿರೆ ಪಾರ್ಥನ |
ಘನಶರವಳುಕಲು ದ್ವಿಜನಾಗಿಯೆ ಹರಿ ಬಂದಂ || ೪೨೭ ||

**ರಾಗ ತಿಲ್ಲಾನಿ ಅಷ್ಟತಾಳ**

ಬಂದು ಹರಿಯು ಕಪಟವೇಷ | ದಿಂದ ಸೂರ್ಯಸುತನ ಕೂಡಿಂ |
ತೆಂದ ತ್ಯಾಗದೊಳಗೆ ನಿನ್ನಲಿ |
ಕುಂದುಗಾಣೆವೆನುತ ನಾವ | ಯ್ತುಂದೆವಿಲ್ಲಿಗೆಮ್ಮಪೇಕ್ಷೆಯ |
ನಿಂದು ಪೂರಯಿಸುವುದು ರಾಧೇಯ || ೪೨೮ ||

ಎನಲು ಕೇಳುತ್ತೆಲೆಲೆ ವಿಪ್ರ | ಘನ ರಣಾಗ್ರದಲ್ಲಿ ಬರಲು |
ನಿನಗೆ ಸಿಕ್ಕುವುದೇನು ಎಂದಡೆ |
ಕನಕಕುಂಡಲಂಗಳನ್ನು | ವಿನಯದಿಂದ ತೆಗೆದು ಬೇಗ |
ಲೆನಗೆ ಕೊಡುವುದಯ್ಯ ಪ್ರೇಮದಿ || ೪೨೯ ||

ವಿಪ್ರನಲ್ಲೀತ ಸಾಕ್ಷಾತ್ | ಸುಪ್ರಸನ್ನನೆಂದು ತಿಳಿದು |
ಕ್ಷಿಪ್ರದಿಂದ ಕುಂಡಲಂಗಳ ||
ಸುಪ್ರತಾಪನು ಕೊಡಲು ಧಾರೆ | ಯ ಪ್ರವಾಹಿಸದಿತ್ತರದು ತಾ |
ನಪ್ರಯೋಜಕವಪ್ಪುದೆಂದನು || ೪೩೦ ||

**ವಾರ್ಧಕ**

ಬುಧನೆಂದುದಂ ಕೇಳ್ದು ನೀರಿಲ್ಲಮೆನಲು ನಿ |
ನ್ನೆದೆಯೊಳಿದ್ದಮೃತಕಲಶವತೆಗೆ ವಿನೋದದಿಂ |
ಮುದದಿ ಧಾರೆಯನೆರೆದು ಕೊಡು ಎನೆ ಶರಾಗ್ರದಿಂದಾಗ ವಕ್ಷಸ್ಥಳವನು ||
ಕೆದರಿ ಸುಧೆಯಂ ತೆಗೆದು ವಿಪ್ರನ ಕರಾಂಜಲಿಯೊ |
ಳುದಕಮಂ ಬಿಟ್ಟು ಕುಂಡಲಮೀಯಲತಿ ಮೆಚ್ಚಿ |
ಪದುಳದಿಂ ವಿಶ್ವರೂಪವ ತೋರ್ದು ಹರಿ ಬಳಿಕ ನಿಜರಥದೊಳೆಸೆದಿರ್ದನು || ೪೩೧ ||

**ರಾಗ ಮೋಹನ ಅಷ್ಟತಾಳ**

ಕಂಡನು | ವಿಶ್ವರೂಪವ ಕರ್ಣನು | ಕಂಡನು || ಪಲ್ಲವಿ ||

ಕಂಡನು ಸಕಲ ಬ್ರಹ್ಮಾಂಡದೊಡೆಯನನು | ದ್ದಂಡಮೂರುತಿಯ ಶ್ರೀಪುಂಡರೀಕಾಕ್ಷನ || ಅ ||

ಹರಿಕೋಟಿ ಲಾವಣ್ಯದಿಂದ | ಮೊಗ | ಸ್ಫುರಿಸೆ ಕೋಮಲಕಾಯದಿಂದ | ರತ್ನ |
ವೆರಸಿದ ಹಾರಗಳಿಂದ | ಪೀತಾಂ | ಬರಮುಟ್ಟು ಶೋಭಿಸಲಂದ || ಶಿರ |

ಕಿರಿಸಿದ ಜ್ವಲಿಪ ಶ್ರೀಸಿರಿಮುಡಿ ಗಂಧ ಸುಂ |
ದರಕೋಟಿ ಮದನನನಿರದೆ ಹಿಂಗಿಸುತಿರೆ || ಕಂಡನು || ೪೩೧ ||

ಬಲು ಮೊಗ ಕೈ ಕರ್ಣದಿಂದ | ಮತ್ತೆ | ಬಲು ನೇತ್ರ ಬಲು ರೂಪಿನಿಂದ | ಸುರ |
ಕುಲವನು ಮುನಿಗಳನಂದ | ಮನು | ಗಳ ರುದ್ರವಸುಗಳ ವೃಂದ || ಯೋಗಿ |
ಗಳನು ಗಂಧರ್ವ ಚಾರಣ ವಿದ್ಯಾಧರಯಕ್ಷ |
ಕುಲವ ಕಿಂಪುರುಷರ ಜಲಜಾಕ್ಷನಂಗದಿ || ಕಂಡನು || ೪೩೩ ||

ಗಿರಿ ನದನದಿಗಳನೆಲ್ಲ | ಮತ್ತೆ | ತರು ಗುಲ್ಮ ಫಲ ಸುಮವೆಲ್ಲ | ಗ್ರಹ |
ನೆರವಿಯ ನಕ್ಷತ್ರವೆಲ್ಲ | ತನ್ನ | ಚರಣದಾಶ್ರಿತ ಭಕ್ತರೆಲ್ಲ || ರೋಮ |
ದಿರದಲಿ ಕುಣಿಯುತ್ತಲೊಂದೆಸೆ ಪಾಂಡವ |
ರಿರದೊಂದು ಬದಿ ಕುರುವರಮುಖ್ಯರಿರಲದ || ಕಂಡನು || ೪೩೪ ||

ಹರಕಮಲಜಗಿರಿಜೆಯನು | ದಿಕ್ಪಾ | ಲರ ಸಿರಿ ಶಾರದೆಯರನು | ಶಚಿ |
ಸುರರಪ್ಸರಾಂಗನೆಯರನು | ತೀರ್ಥ | ನೆರವಿಯ ಭಾಗೀರಥಿಯನು || ಸಪ್ತ |
ಶರಧಿ ಚತುರ್ದಶ ವರ ಭುವನವ ಸಹ |
ಹರಿಯಂಗದಲಿ ವೇದ ಪೊರೆದಿಹ ಬ್ರಹ್ಮನ || ಕಂಡನು || ೪೩೫ ||

**ವಾರ್ಧಕ**

ಹರಿಯ ಕಂಡತ್ಯಧಿಕ ಭಕ್ತಿಯಿಂ ನುತಿಸುತಂ |
ಹರಿಯೆ ನೀ ಹಿಂದಿತ್ತ ಭಾಷೆಯಂ ನಡೆಸೆಂದು |
ಹರಿಸುತನು ಶಿರವೆಸಗೆ ಸಂಜ್ಞೆಯಿಂ ವಾಂಛೆಯಂ ಸಲಿಸುವೆನು ದಿಟವಿದೆನಲು ||
ಹರಿ ಕೃಷ್ಣ ಕೇಶವಾಚ್ಯುತ ಶ್ರೀಶನೆನ್ನುತಿರೆ |
ಹರಿ ನರನ ರಥಕಡರೆ ಪರಮಾತ್ಮ ಪರಬ್ರಹ್ಮ |
ಹರಿವೈರಿಕುಲನಾಶ ಶ್ರೀಧರನೆ ಜಯಮೆಂದು ಏಕಾಗ್ರಮನನಾದನು || ೪೩೬ ||

**ಕಂದ**

ಮುರಹರನಾಗ ಕಿರೀಟಯ |
ಕರೆದೀ ಕ್ಷಣ ತೊಡು ದಿವ್ಯ ಮಹಾಸ್ತ್ರವನೆನಲುಂ ||
ಹರನಾಸ್ತ್ರದಿ ಬಳುವಳಿಗಂ |
ಗಿರಿಜೆಯು ಕೊಟ್ಟಂಜನಬಾಣವ ತೆಗೆದೆಚ್ಚಂ || ೪೩೭ ||

**ರಾಗ ಭೈರವಿ ತ್ರಿವುಡೆತಾಳ**

ಎಚ್ಚನಾಗ | ಫಲುಗುಣ | ನೆಚ್ಚನಾಗ || ಪಲ್ಲವಿ ||

ಅಚ್ಯುತಾಂಘ್ರಿಯ ನೆನೆದು ನೆಗಹಿದ | ಚಚ್ಚರದೊಳುರುಧನುವನು |
ಮೆಚ್ಚಿ ಕರುಣದೊಳಗಜೆಯಿತ್ತಿಹ | ಪೆಚ್ಚಿನಂಜನ ಶರವನು |
ಬಿಚ್ಚಿ ಡೊಣೆಯಿಂ ತೆಗೆದು ಮೌರಿಗೆ | ಹಚ್ಚಿ ಕರ್ಣನ ಶಿರವನು |
ಚುಚ್ಚಿ ಕೆಡೆಯಿಂದೆನುತಲೌಡನು | ಕಚ್ಚಿ ಕಿವಿವರೆಗೆಳೆದು ಬಿಸುಟನು || ಎಚ್ಚನಾಗ || ೪೩೮ ||

ಬಾಣದುರುಬೆಗೆ ಸಕಲ ಜನ ನಿ | ತ್ರಾಣವಾದುದು ಕ್ಷಣದೊಳು |
ಕೇಣ ಕಾರ್ಬೊಗೆ ಸುಳಿದು ಮುಸುಕಿತು | ಮಾಣದೆ ನಭಾಂಗಣದೊಳು |
ಕ್ಷೀಣವಿಲ್ಲದೆ ಸುರಿವ ಕಿಡಿಗಳ | ಠಾಣವೆಸೆದುದು ರಣದೊಳು |
ಕ್ಷೆಣಿ ಬಾಯ್ಬಿಡೆ ಕೂರ್ಮದಿಗ್ಗಜ | ಶ್ರೇಣಿ ಬೆಚ್ಚಲು ತೀವ್ರ ಕಣನೊಳು || ಎಚ್ಚನಾಗ || ೪೩೯ ||

ಭಾಪು ಭಳಿರೇ ಪೂತು ಮಝುರೆನು | ತಾ ಪುರಂದರ ಪೊಗಳಲು |
ಲೋಪವಹುದೆನುತಖಿಳಜನದಾ | ಳಾಪದನುವನು ನೆಗಳಲು
ಚಾಪವೆಡೆಗೊಂಡಂಬು ಕರ್ಣಪ್ರ | ತಾಪಶಿರವನು ಕಡಿದು ಜಿಗುಳಲು || ಎಚ್ಚನಾಗ || ೪೪೦ ||

**ಭಾಮಿನಿ**

ಅಂಜನಾಸ್ತ್ರದೊಳರಿದು ಕರ್ಣನ |
ರಂಜಿಸುವ ತಲೆ ಧರಣಿಗುರುಳಲು
ಮಂಜುಳಾತ್ಮಜ್ಯೋತಿಯಯ್ದಿತು ಸುಪ್ರಕಾಶದಲಿ ||
ಕಂಜಸಖನೆಡೆಗಾಗಿ ಬಳಿಕಾ |
ಕುಂಜರನೆ ಹಾಯೆಂದು ಮರುಗಿ ಧ |
ನಂಜಯನು ತಿರುಗಿದನು ನೆನೆನೆನೆದವನ ವಿಕ್ರಮವ || ೪೪೧ ||

**ವಾರ್ಧಕ**

ಸಕಲ ಜನ ಮರುಗಿತಾ ರಾಧೇಯನಳಿವಿನೊಳು |
ವಿಕಳಮತಿ ಕೌರವಂ ಕೇಳ್ದು ಮೂರ್ಛಿತನಾದ |
ಶಕುನಿ ಮೊದಲಾದವರು ಬಂದು ಸಂತವಿಸಿ ನಿಜಪಾಳೆಯಕೆ ತೆರಳಿಸಿದರು ||
ಪ್ರಕಟಿಸಿದನಾತ್ಮಜಂ ಮಡಿದನೆಂಬೀ ಶೋಕ |
ವಿಕಸಿತದೊಳಿನನಿಳಿದನಂಬುಧಿಗೆ ಕೂಡೆ ಸೈ |
ನಿಕವೆರಡು ತಿರುಗಿದು ಬಿಡಾರಂಗಳಿಗೆ ಪಾಂಡುಸುತರೊಡನೆ ಹರಿ ಬಂದನು || ೪೪೨ ||

ಮರುದಿವಸ ಶಲ್ಯ ಸೌಬಲ ತ್ರಿಗರ್ತರ ಸದೆದು |
ಕೆರೆಯೊಳಡಗಿರ್ದ ಕೌರವನನೆಬ್ಬಿಸಿ ರಣದಿ |
ತರಿದು ಧೃತರಾಷ್ಟ್ರಾದಿಗಳ ಶಾಪಮಂ ಬಿಡಿಸಿ ಪಾಂಡುಸುತರಂದು ಬಳಿಕ ||
ಹರಿ ಸಹಿತ ಸಿಂಧೂರನಗರಾಂತರಕ್ಕಯ್ದಿ |
ವರ ಯುಧಿಷ್ಠಿರನೃಪಗೆ ಪಟ್ಟಾಭಿಷೇಕಮಂ |
ವಿರಚಿಸಲು ವರವಾದ್ಯರವವೆಸೆಯೆ ನಾರಿಯರು ತಂದೆತ್ತಲಾರತಿಯನು || ೪೪೩ ||

**ರಾಗ ಧವಳಾರ ಏಕತಾಳ**

ರಾಜಾಧಿರಾಜ ಪಾಂಡವಗೆ | ರಾಜೀವಾಕ್ಷನ ಭಜಿಸುವಗೆ ||
ತೇಜದಿ ಬೆಳಗುವ ಧರ್ಮಸ್ವರೂಪಗೆ | ಮೂಜಗದೊಳಗತಿ ಕೀರ್ತಿಕಲಾಪಗೆ ||
ರಾಜವದನೆಯರು ವೈಭವದಿಂದಲಿ | ರಾಜಿಸುವಾರತಿಯ ಬೆಳಗಿರೆ || ಶೋಭಾನೆ ||೪೪೪||

ಐವರ ಸತಿಗೆ ತೋಷದೊಳು | ಮೆಯ್ವಳೆಯದ ನಾರಿಗಳು |
ಕಯ್ ವಿಡಿದಿಹ ದೀವಿಗೆಬೆಳಕಿನೊಳು | ನೈವರಿಸುವ ಘನ ಗೀತಂಗಳೊಳು ||
ದೈವಿಕದಂಗನೆಯೆನುತಾರತಿಯನು | ರೈವಾಸದಿಂದ ಬೆಳಗಿರೆ || ಶೋಭಾನೆ || ೪೪೫ ||

ಶೀಲವಂತೆಯರೆಲ್ಲ ಸುಳಿದು | ಜಾಲ ಮುತ್ತಿನ ಸೇಸೆ ತಳಿದು |
ಮೇಲುದಶಾಗ್ರವ ಕುಚದಡಿಗೆಳೆದು | ಕಾಲಲಂದುಗೆ ಗೆಜ್ಜೆ ಘಲಿರೆನೆ ನಲಿದು ||
ನೀಲಮಾಣಿಕದಿಂದಲೆ ರಚಿಸಿರ್ದ ವಿ | ಶಾಲದಾರತಿಯ ಬೆಳಗಿರೆ || ಶೋಭಾನೆ || ೪೪೬ ||

**ಭಾಮಿನಿ**

ಇಂತು ಪಟ್ಟವ ಧರಿಸುತೆಮಜನು |
ಚಿಂತೆವಿರಹಿತನಾಗಿ ಪ್ರಜೆಗಳ |
ಸಂತವಿಡುತಲೆ ರಾಜ್ಯಭಾರವ ಗೆಯ್ಯುಲಾ ಬಳಿಕ ||
ಕಂತುಜನಕನು ವಿನಯದಿಂದಲೆ |
ಕುಂತಿತನುಜನ ಬೀಳುಗೊಂಡಾ |
ದಂತಿನಗರವ ಪೊರಟುಬಂದನು ದ್ವಾರಕಾಪುರಿಗೆ || ೪೪೭ ||

ಲಾಲಿಸೈ ಜನನಾಥ ಲಕ್ಷ್ಮೀ |
ಲೋಲ ಪಾಂಡುಕುಮಾರರೊಡನತಿ |
ಲೀಲೆಯಿಂದಿರುತಿರ್ದನೆಂಬೀ ಘನ ಕಥಾಮೃತವ ||
ಮೇಲೆ ಭೀಷ್ಮ ದ್ರೋಣ ವಿಕ್ರಮ |
ಶಾಲಿ ರವಿಸುತ ಮುಖ್ಯ ನೃಪರ ವಿ |
ಶಾಲಚರಿತವಿದಿಲ್ಲಿ ಮುಗಿದುದೆನುತ್ತ ಮುನಿ ನುಡಿದ || ೪೪೮ ||

ಇದು ಕಣಾ ಪರಮೋಕ್ಷಸಾಧನ |
ಇದು ಕಣಾ ಪಾತಕವಿನಾಶನ |
ಇದು ಕಣಾ ಐಶ್ವರ್ಯ ಧನ ಕನಕಾದಿ ಲಭ್ಯಕರ ||
ಇದನು ಲಾಲಿಸಿ ಕೇಳ್ದ ಜನರಿಗೆ |
ಮುದವೊಲಿದು ತಾ ಪೇಳಿದವರಿಗೆ |
ಪದುಮನಾಭನ ದಯವು ದೊರಕುವುದವರಿಗನವರತ || ೪೪೯ ||

ಈ ಮಹಾಕೃತಿ ರಚಿಸುವರೆ ತಾ |
ಕ್ಷೇಮನಗರಾಪತಿಯ ವೇಂಕಟ |
ಧಾಮನೆನ್ನಯ ಹೃದಯ ಕಮಲದಿ ವಾಸವಾಗಿರ್ದು ||
ಪ್ರೇಮದಿಂದಲಿ ನುಡಿಸಲಾತನ |
ನಾಮ ಸಂಕೀರ್ತನೆಯನುಸಿರಿದೆ |
ಭೂಮಿಯೊಳಗುತ್ತಮರು ಕೇಳುವುದೀ ಮಹಾಕಥೆಯ || ೪೫೦ ||

**ಮಂಗಲ**

**ರಾಗ ಅಹೇರಿ ಏಕತಾಳ**

ಮಂಗಲಂ | ಜಯ | ಮಂಗಲಂ || ಪಲ್ಲವಿ ||

ಮಂಗಲ ಶರಧಿಯ ಪೊಕ್ಕವಗೆ | ಜಯ | ಮಂಗಲ ಗಿರಿಯನು ತಾಳ್ದವಗೆ ||
ಮಂಗಲ ಧರಣಿಯ ತಂದವಗೆ | ಶುಭ | ಮಂಗಲ ವರದನೃಸಿಂಹನಿಗೆ || ಮಂಗಲಂ || ೪೫೧ ||

ಮಂಗಲ ನಿಪುಣನಹ ವಟುವಿಂಗೆ | ಜಯ | ಮಂಗಲ ನೃಪಕುಲ ತರಿದವಗೆ ||
ಮಂಗಲ ಕಪಿಗಳಿಗೊಲಿದವಗೆ | ಶುಭ | ಮಂಗಲ ಕಪಟಚರಿತ್ರನಿಗೆ || ಮಂಗಲಂ || ೪೫೨ ||

ಮಂಗಲ ಬತ್ತಲೆ ನಿಂದವಗೆ | ಜಯ | ಮಂಗಲಂ ತುರಗವೇರ್ದವಗೆ ||
ಮಂಗಲ ಶ್ಯಾಮಲವರ್ಣನಿಗೆ | ಶುಭ | ಮಂಗಲ ಕ್ಷೇಮಪುರೀಶನಿಗೆ || ಮಂಗಲಂ || ೪೫೩ ||

***ಯಕ್ಷಗಾನ ಕರ್ಣಪರ್ವ ಮುಗಿದುದು***

# ಯಕ್ಷಗಾನ ಸಾಹಸ ಭೀಮವಿಜಯ (ಗದಾಯುದ್ಧ)

## ಪಾತ್ರಗಳು

**ಪ್ರಥಮಾಂಕದಲ್ಲಿ**

| | | | | |
|---|---|---|---|---|
| ೧. ಧರ್ಮರಾಯ | ೨. ಭೀಮಸೇನ | ೩. ಅರ್ಜುನ | ೪. ನಕುಲ | ೫. ಸಹದೇವ |
| ೬. ದ್ರೌಪದಿ | ೭. ಬುದ್ಧಿಮತಿ (ದ್ರೌಪದಿಯ ಕೆಳದಿ) | | ೮. ದೃಷ್ಟಾ ದೃಷ್ಟ ಪರಂಪರೆ, ದ್ರೌಪದಿಯ ವೃದ್ಧ | |
| ಕಂಚುಕಿ | ೯. ಕೌರವ | ೧೦. ಸಂಜಯ | ೧೧. ಧೃತರಾಷ್ಟ್ರ | ೧೨. ಗಾಂಧಾರಿ |

**ದ್ವಿತೀಯಾಂಕದಲ್ಲಿ**

| | | | |
|---|---|---|---|
| ೧. ಕೌರವ | ೨. ಸಂಜಯ | ೩. ಭೂತರಾಜ | ೪. ಭೀಷ್ಮಾಚಾರ್ಯರು |

**ತೃತೀಯಾಂಕದಲ್ಲಿ**

| | | | |
|---|---|---|---|
| ೧. ಧರ್ಮರಾಯ | ೨. ಕೃಷ್ಣ | ೩. ಭೀಮಸೇನ | ೪. ಗಾಂಧಾರಿ ಮತ್ತು ಧೃತರಾಷ್ಟ್ರ |
| ಭೀಮಸೇನನ ಕಿರಾತದೂತರು | | ೫. ವಿಂಧ್ಯಕ | ೬. ಜಾಲಕ |
| ೭. ನಕುಲ | ೮. ಸಹದೇವ | ೯. ಅರ್ಜುನ | ೧೦. ಬಲರಾಮ |

**ಚತುರ್ಥಾಂಕದಲ್ಲಿ**

| | | | |
|---|---|---|---|
| ೧. ಭೀಮಸೇನ | ೨. ಕೌರವ | ೩. ಅರ್ಜುನ | ೪. ನಕುಲ ಸಹದೇವರ್ಕಳು |
| ೫. ಧರ್ಮರಾಯ | ೬. ಕೃಷ್ಣ | ೭. ಬಲರಾಮ | ೮. ದ್ರೌಪದಿ |

**ಪಂಚಮಾಂಕದಲ್ಲಿ**

| | | | |
|---|---|---|---|
| ೧. ಕೃಷ್ಣ | ೨. ಅಶ್ವತ್ಥಾಮ | ೩. ಲಕ್ಷ್ಮೀದೇವಿ | ೪. ಕೌರವ |
| ೫. ದೃಷ್ಟದ್ಯುಮ್ನಾದಿಗಳು | ೬. ಧರ್ಮರಾಯ | | |

## ಯಕ್ಷಗಾನ ಸಾಹಸ ಭೀಮವಿಜಯ (ಗದಾಯುದ್ಧ)

**ಪ್ರಥಮಾಂಕ ಮುಖಸಂಧಿ**

**ನಾಂದಿವೃತ್ತಂ**

ಆವನ ಚಿತ್ರಭಾವಳಿಯ ತೇಜದೊಳೀ ಭುವನಂಗಳಾವಗಂ |
ಭಾವಕ ರೂಪಮಂತಳೆದು ಮಾಯಕದೊಲ್ಸುಳಿದತ್ತಲೀಭವಂ ||
ಭಾವತರಂಗದೊಳ್ನಲಸಲೂರ್ಜಿತ ಶಕ್ತಿಯನಿತ್ತ ಕೃಷ್ಣಗಂ |
ಪಾವನ ಕಣ್ವನಾಮಕ ಪುರೋತ್ಥಿತಗಂಮಣಿದೀವೆ ಕೃತಿಯಂ || ೧ ||

**ಕಂದ**

ಕೊಳಲೂದುತೆನವಿಲುಡೆಯಿಂ |
ನಲಿದಾವ್ರಜ ಭೂಮಿಯ ತುರುಗಳ ನಲವಿಂದಂ ||
ಸಲಹಿದ ಗೋಪಾಲಕ ಸಿರಿ |
ಚೆಲುವಣ್ಣನೆ ಪೊರೆಗೆ ಕಣ್ವ ಪುರಪತಿ ಕೃಷ್ಣಂ || ೨ ||

ಬಿಡಲಾರದೆ ನಿನ್ನಡಿಯಂ |
ಪೊಡಮಟ್ಟುರುಭಕ್ತಿಯೊಳ್ನುತಿಸುವರ್ಗೆಂದುಂ ||
ಕುಡುಮೆಯಕೊಡುಗೈನೀಡುವ |
ಕುಡುಮ ಶ್ರೀ ಮಂಜುನಾಥನೀಯುಗೆ ಶುಭಮಂ || ೩ ||

ವಾಗರ್ಥಂಗಳ ತೆರದಿಂ |
ದೇಗಳ್ ಬಳಿಸೇರ್ದಪಾರ್ವತೀಪರಮೇಶರ್ ||
ವಾಗರ್ಥಂಗಳನೀಯುತೆ |
ರಾಗವಿದೂರರ್ಸಲಹುಗೆ ಜನನೀ ಜನಕರ್ || ೪ ||

ಪಾರ್ವತಿಸುತನಂಧ್ಯಾನಿಸಿ |
ಪಾರ್ವತಿಸುತದೇಸಿಯೊಳೊವಜನ ಭಾವಿಸುತಂ ||
ಪೂರ್ವದ ಕಬ್ಬಿಗರಡಿಗಂ |
ಭಾವದಿಮಣಿದೀನವೀನ ಕೃತಿಯನುಸುರ್ವೆಂ || ೫ ||

**ರಾಗ ತೋಡಿ ಏಕತಾಳ**

ಪೊರೆ ಸಿರಿವರದೆಯೆ ಕರುಣಾಕರೆ | ಭಾರತಿನೀನೊಲಿದತಿ ದಯದೀ || ಪಲ್ಲವಿ ||

ಅರಿಯೆನು ತಿಳಿದಿರಬೇಕಾದುದ | ನರಿತಿಹೆನರಿವಿಲ್ಲದಗರಿಮೆಯ |
ಕಿರಿದಿನ ಕಲೆಗಳನೀದಯ | ವಿರಿಸುತೆ ಪಾಲಿಸು ಗೀರ್ವಾಣಿಯೆ || ಪೊರೆಸಿರಿವರದೆಯೆ || ೬ ||

ಆತ್ಮನನರಿದಾಪರಮಾತ್ಮನ | ಆತ್ಮದೊಳಿರಿಸುತೆ ಪರತತ್ವವ |
ಸಾತ್ಮ್ಯದೊಳರುಹಿದ ಘನಮಹಿಮರ | ನಾತ್ಮದೊಳಿರಿಸುತೆ ಪೂಜಿಸುವೆನು ||
ಪೊರೆಸಿರಿವರದೆಯೆ || ೭ ||

ರಸನೆಯೊಳೊಸರಲು ಕಬ್ಬದ ನವ | ರಸಕರುಣಿಸುಮತಿಯನು ಸರಸದೆ |
ಶಶಿಮುಖಿನಂಬಿದೆ ನಿನ್ನಡಿಯನು | ಬಿಸಜಾಂಬಕಿಯೆ ಸರ್ವೇಶ್ವರಿ || ಪೊರೆಸಿರಿವರದೆಯೆ || ೮ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಶ್ರೀಮದುನ್ನತ ಕನ್ನಡದ ಕವಿ | ತಾಮರಸರವಿಯೆನಿಪ ರನ್ನನ |
ಪ್ರೇಮದಾ ಕೃತಿರತ್ನ ಸಾಹಸ | ಭೀಮವಿಜಯಾ || ೯ ||

ಭಾರತಾಬ್ಧಿಯ ಸೊದೆಯು ಕವಿಕುಲ | ಸಾರಸತ್ವದತಿರುಳು ಪಂಪನ |
ಚಾರುವಾಣಿಯ ವಿಕ್ರಮಾರ್ಜುನ | ವೀರವಿಜಯಾ || ೧೦ ||

ಸಕ್ಕದದವರ ವೇಣಿಸಂಹಾ | ರಾಖ್ಯನಾಟಕ ಭೀಮವಿಜಯದೊ |
ಳಿರ್ಕೆಗೊಂಡಿಹುದಮಮಸೊಬಗಿನ | ಚುಕ್ಕೆಯೈಸೇ || ೧೧ ||

ನೆಲನೊಳಾಸೆಯ ತೊರೆದು ಕ್ಷಾತ್ರದ | ಛಲಕೆಕಾದಿದ ಕೌರವೇಂದ್ರಗೆ |
ಕಳೆಯನಿತ್ತಿಹ ಕವಿಯ ಮೈಸಿರಿ | ತಿಳಿಯಲಿದುವೇ || ೧೨ ||

ಚಂದ್ರವಂಶದ ಪೌರವೇಯರ | ಸಾಂದ್ರಚರಿತೆಯ ಲಕ್ಷ್ಯಲಕ್ಷಣ |
ದಂದಪೊಸತೆನೆ ತೋರ್ಪುದಿದರೊಳು | ಚಂದವಾಗೀ || ೧೩ ||

ಕುರುಕುಲಾನ್ವಯ ತಿಲಕರೆನಿಸಿದ | ಕೌರವೇಂದ್ರನು ಪವನತನುಭವ |
ರರಿದುಕಾದಿದ ಧರ್ಮಸಮರದ | ಸರಸಕಥೆಯಾ || ೧೪ ||

ಬಲ್ಲಿದರಪದಕೆರಗಿ ಚರಿತೆಯ | ಸೊಲ್ಲಯಕ್ಷರ ಪಾಡುಗಬ್ಬದೆ |
ಸೊಲ್ಲಿಸುವೆ ಪಾಂಚಾಲಿಕಬರಿಯ | ಗೆಲ್ಲವೆನಲೂ || ೧೫ ||

* * *

**[-ಪಾಂಡವರ ಪ್ರವೇಶ – ಭೀಮನ ಜೊತೆಗೆ ನರ್ಮಸಚಿವನಿರುತ್ತಾನೆ-]**

**ಭಾಮಿನಿ**

ಕುರುಧರಾತಳ ಧರ್ಮಕ್ಷೇತ್ರದೊ |
ಳೊರಗೆ ಪದಿನೇಳನೆಯ ದಿವಸದ |
ಧುರದಿಕರ್ಣನು ದಿವಸದರ್ಧದೊಳಳಿಯೆಮಾದ್ರೇಶ ||
ಕುರುಧರಾಧಿಪನಿರವ ಕಾಣದೆ |
ಮರುಗೆ ಧರ್ಮಜಪಾರ್ಥನಕುಲರು |
ವರವೃಕೋದರನಧಿಕ ರೋಷದೊಳೆಂದನಗ್ರಜಗೇ || ೧೬ ||

**ರಾಗ ಭೈರವಿ ಝಂಪೆತಾಳ**

ಯೇತಕೀಸಂದೇಹ | ಆತತಾಯಿಗನವನ | ಘಾತಿಸದೆಬಿಡೆನಿಂದು | ಧೂರ್ತಕೌರವನಾ || ೧೭ ||
ತಲೆಮರೆಸೆ ಬಾಳುವನೆ | ಛಲದಂಕನಹದುರುಳ | ಬಲವಳಿಯೆ ಬೆಂಡಾದ | ನೆಲದಾಶೆ ತೊರೆದು ||೧೮||
ಎಲ್ಲಿರಲು ಬಿಡೆನವನ | ಸೊಲ್ಲುಗಳನರಿತಿಹುದು | ನಿಲ್ಲದರಸುವೆನೆನುತ | ಮಲ್ಲನವಪೊರಡೇ ||೧೯||

**ವಚನ ||** ಇಂತೊರೆ ಭೀಮಂಜವದೊಳ್, ರಣಕಣದೊಳ್ ತಿರುತಿರುಂಗಿಶೋಧಿಸಿ ಕೌರವನಂ ಕಾಣದೆ ಮತ್ತಂ ||

**ಕಂದ**

ಬಲಯುತರೆನಿಸಿದ ಖಳರಂ |
ಬಲಿಗೊಟ್ಟಿರಿದೆನ್ನಯ ಗದೆಯಿಂ ಕುರುಕುಲಮ ||
ನ್ನಳಿಸಿದೆ ಭಾಷೆಯ ತೆರದಿಂ |
ದಳಿಯದೆ ದುರ್ಯೋಧನನುಳಿದನೆ ಪಗೆಶೇಷಂ || ೨೦ ||

**ವಚನ ||** ಇಂತಾಲೋಚಿಸುತ್ತಲಾ ಭೀಮಂ | ಕುರುರಂಗದೊಳ್ | ಕೌರವನಂ ಕಾಣದೆ ಬಸವಳಿದಿರೆ | ಮತ್ತಂ ಶಿಬಿರದೊಳ್ ಪಾಂಚಾಲನಂದನೆಯಾಗಳ್ |

[ದ್ರೌಪದಿ, ದೃಷ್ಟಾದೃಷ್ಟ ಪರಂಪರೆಯೆಂಬ ವೃದ್ಧಕಂಚುಕಿ, ಮತ್ತು ಬುದ್ಧಿಮತಿಯೆಂಬ ಮೇಳದ ಕೆಳದಿ, ಇವರ ಪ್ರವೇಶ]

**ರಾಗ ವಸಂತ ಭೈರವಿ ಏಕತಾಳ**

ಶ್ರೀರಮಣೀಮಣಿ ದ್ರುಪದಜೆಯೂ | ತಿಳಿಯದೆ | ನೀರಸ ಕದನದ ಜಯಸಿರಿಯೂ || ಪಲ್ಲವಿ ||

ಮರುಗುತೆ ಮನದೊಳು ಹದಿಬದೆಯೂ | ಕುರುನೃಪಸೂದನ ಸಹಚರಿಯೂ ||
ಕರಕರೆಗೊಳುತತಿ ಬೆರಗಿನೊಳೂ | ತರಹರಿಸುತಲಗ್ನಿಜೆಯುಸುರಿದಳೂ ||
ಶ್ರೀರಮಣೀಮಣಿ || ೧೧ ||

ನಂಜಿನ ಮೂಲವನುಳಿಸಿದೆಯಾ | ಎಂಜಲೆನುತಿನಿತಕೆ ತೊರೆದೆಯೊಹಾ |
ಭುಂಜಿಸಲೊಲ್ಲದೆ ಕುರುನೃಪನಾ | ಅಂಜಿದೆಯೇತಕೊಯೆನ್ನಯ ರಮಣಾ || ೧೨ ||

ತಾಳೆನು ಕೆಳದಿಯೆ ಪೊರಡೆನಲೂ | ತಿಳಿದಾ ಕಂಚುಕಿ ಜೊತೆಗಿರಲೂ ||
ಬಾಲೆಯುಬರೆ ರಣ ಭೂಮಿಯಲೀ | ಕಾಲಸ್ವರೂಪನು ನಿಂದಿರೆ ದೂರದಲೀ || ೧೩ ||

**ವಚನ ||** ಆಗಳೆ ಬಂದಲ್ಲಿಗೆ ಪಾಂಚಾಲಿಯು ಮತ್ತಂ ||

**ಕಂದ**

ರಮಣನ ಪದಕೆರಗುತ್ತಂ |
ಸಮಯೋಚಿತ ಕಾರ್ಯದುಜ್ಜುಗದಿನವಗೆಂದಳ್ ||
ಭ್ರಮೆಯೇನಂತಾಳ್ದಿರ್ಪೆಯೊ |
ಕುಮತಿಯ ಸೀಳ್ದಿಕ್ಕದೇಕುರುನೃಪಾಲಕನಂ || ೧೪ ||

**ರಾಗ ಕೇತಾರಗೌಳ ಅಷ್ಟತಾಳ**

ಅನುವಿಗೀಗಲೆ ಮಾಡೆ | ದನುಜಾರಿಪುದುವಾಳ | ಮುನಿಸಿರ್ದು ಮಾಳ್ಪುದೇನಾ ||
ತನುಜ ಶಂತನು ಪೇಳೆ | ಮನದಿನೋಯದೆ ಧರ್ಮ | ತನುಜಾತನೊಪ್ಪುಗೊಂಬಾ || ೧೫ ||

ಸಂಧಿ ಸಾಧಿಸಲತ್ತ | ಪಂದೆಗಳ್ ನಿಮಗಿನ್ನು | ಕುಂದೇನು ವನವಾಸದೀ ||
ಪಿಂದೆಜನ್ಮವನಿತ್ತ | ಅಂದಿನಗ್ನಿಯೊಳೆನ್ನ | ಚಂದಕರ್ಪಿಸುವೆನೋಡೂ || ೧೬ ||

**ವಚನ ||** ಇಂತಾವಲ್ಲಭೆಯುಸುರಲ್ ಖತಿಯೊಳ್ ಪವನಸುತಂ ||

**ರಾಗ ಮಾರವಿ ಏಕತಾಳ**

ಬಿಡು ಬಿಡು ಶೋಕವ | ನುಡಿಯದಿರೇನನು | ಪೊಡವಿಪ ಕೌರವನಾ ||
ಬಡಿದರುಣೋದಕ | ವಿಡಿದೀ ಕರದೊಳೆ | ಮುಡಿಸುವೆ ವೇಣಿಯನೂ || ೧೭ ||

ವಾಯುಜನುಸುರಿದ | ಬಾಯ್ನುಡಿ ಬರಿದೇನ್ | ಬೀಯವದಾಗುವುದೇ ||
ಆಯದ ಶಿಲೆಯೊಳು | ಪಾಯದಿ ಕೊರೆದಿಹ | ಮಾಯದ ಲಿಪಿಯಹುದೂ || ೧೮ ||

ಉಸುರಿರೆ ಬಿಡುವೆನೆ ಪುಸಿನುಡಿಯಾಗಲು | ಸಸಿಮೊಗದೋರಬಲೇ ||
ವ್ಯಸನವದೇತಕೆ | ಬಿಸಜಾಕ್ಷನೆ ಪೊಸ | ತುಸುರಲು ಮೀರುವೆನೂ || ೧೯ ||

ಅಂತಕ ಸುತನಾ | ತಂಕವಗಣಿಸೆನು | ಶಂತನುಸುತಮುಖರೂ ||
ಸಂತವಿಸಲು ಮನ | ದಂತರವನೆ ಬಿಡೆ | ಕೊಂತಿಯಮೀರುವೆನೂ || ೨೦ ||

ಕರದೊಳಗೆನ್ನಯ | ಧುರವಿಜಯದ ಗದೆ | ಯಿರೆ ಭುಜಸಿರಿಗೂಡೀ ||
ದುರುಳನ ಕೊಲ್ಲದೆ | ತೆರಳಲು ಸಂಧಿಗೆ | ಮರುಳನೆ ಪವನಜನೂ || ೨೧ ||

**ವಚನ ||** ಆ ಮಾತಂ ಕೇಳ್ದಾಗಲೆ ದ್ರೌಪದಿ ನಚ್ಚಿನ ನಲ್ಲನಂ ಪೊಗಳಲ್ | ಭೀಮಸೇನನ ಮತದೊಳ್ | ಪರಿಹಾಸಕೇಳೀ ಶೀಲನೆನಿಸಿದ | ನರ್ಮಸಚಿವನಿಂತೆಂದಂ ||

**ಕಂದ**

ಮಾರುತಿ ನಿಜವೇಣೀ ಸಂ |
ಹಾರಂ ಮಾಡಿದೊಡೆ ಮಾಳ್ಪುದೆನಗಂ ನಿನಗಂ ||
ಪೂರಣೆಗೆ ಜಠರ ಪಿಠರಕ |
ಪೂರಣೆ ಗೇಂಮಾಡದೆಂತು ಕರವೆಂ ನಿನ್ನಂ || ೨೨ ||

**ವಚನ ||** ಎನೆ ಪವನಸುತಂ ||

**ಕಂದ**

ಕುರುಕುಲ ಜೀವಾಕರ್ಷಣ |
ಪರಿಣತ ಮಿದುಕಾಳಹಸ್ತಮಲ್ಲದೆ ಪರಮೇ ||
ಶ್ವರಿ ಕೇಶಹಸ್ತಮಕ್ಕುಮೆ |
ಪರಾಭವ ಜ್ವಲನ ಧೂಮಕೃಷ್ಣಂ ಕೃಷ್ಣೇ || ೨೨ ||

**ವಚನ ||** ಎಂದು ನಂಬುಗೆಯನೊರೆದು | ಅಳುತ್ತಂ ಬಂದಾ ದ್ರೌಪದಿಯಂ ನಗುತ್ತುಂ ಪೋಪಂತೆ ಸಂತೋಷವ ಮಾಡಿಸಿದುದರ್ಕೊಡಂಬಟ್ಟು ಚಾರುಹಾಸಿನಿ ನಿಜನಿವಾಸಕ್ಕೆ ಪೋಗಲ್ ಬಳಿಕಂ ||

[ಕೌರವ ಮತ್ತು ಸಂಜಯ ಇವರ ಪ್ರವೇಶ]

**ರಾಗ ಭೈರವಿ ಝಂಪೆತಾಳ**

ಅತ್ತ ಕುರು ಧರಣೀಶ | ಚಿತ್ತದೊಳು ಕುದಿಗೊಂಡು |
ಮತ್ತವನ ಪರಿಭವದ | ಕುತ್ತಗಳ ನೆನೆದೂ || ೩೪ ||

ಸುರನದಿಯ ಪುತ್ರ ಹಾ | ಗುರು ಕುಂಭಸಂಭವನೆ |
ಮರೆಯಾದೆ ಸೈಂಧವನೆ | ಗರುವ ಹಾ ಕರ್ಣಾ || ೩೫ ||

ಧರಣೀಶ ಭಗದತ್ತ | ತರುಣ ಹಾ ದುಶ್ಯಾಸ |
ನರನಾಥ ಮಾದ್ರೇಶ | ದೊರೆಸುಬಲಜಾತಾ || ೩೬ ||

ಕುರುಕುಲದ ಹಿರಿಯ ಭೂ | ವರನೆ ಭೂರಿಶ್ರವನೆ |
ನರವೀರ ಬೃಹದಬಲ | ಕುರುವಿಂದ ನೃಪರೇ || ೩೭ ||

ಕುರುಧರೆಯ ಬವರದೊಳು | ಕರುಬರೊಡನಾಹವದಿ |
ಧುರಕೊದಗುತೆನಗಾಗಿ | ಸಿರಿಮೈಯ್ಯನೀಗೀ || ೩೮ ||

ಸುರಲೋಕದೆಡೆಗೊಂಡ | ನರವೀರರಿರನಮಿಪೆ |
ಬರುವೆನಾ ನಿಮ್ಮೆಡೆಗೆ | ಕರುಣವಿರಬೇಕೂ || ೩೯ ||

**ವಾರ್ಧಕ**

ಸಾಗರದ ಮೇರೆಗಿಹ ಧರಣಿಯಂ ಪಾಲಿಸಿದೆ |
ಭೋಗಿಸಿದೆನುರ್ವರೆಯ ಸಂಪದಗಳೆನಿತನಿತ |
ಬಾಗಿಸಿದೆನರಸುಗಳ ಮಕುಟಮಂ ತಿರಿದುಣಲಿಕಟ್ಟಿದೆನು ಪಾಂಡವರನೂ ||
ಆ ಗರತಿ ದುರುಪದಿಯ ಸೊಕ್ಕಮುರಿದಿಕ್ಕಿಸಿದೆ |
ಮೇಗರೆಯ ಮಾತಲ್ಲ ರಿಪುಹನನ ಕಾರ್ಯದು |
ದ್ಯೋಗಕೊರ್ವೋರ್ವರೇ ಸಾಕೆಂದು ಸಾಕಿದೆನು ಗುರುಭೀಷ್ಮರಮರವೃತರಾ || ೪೦ ||

**ರಾಗ ಆರಭಿ ರೂಪಕತಾಳ**

ಸಾಯಲಾರದ ಕಾರ್ಮುಕ ಶಿವನೆಂದು ಪೇಳ್ವರು | ಮಾಯಕಾರನಾ ದ್ರೌಣಿಯನೂ ||
ಬಾಯ್ಬಡಿಕಗೇನೆಂಬೆ ಕಲಶಜನ ರಥದಿಂದ | ನಾಯ್ಮರಿಯನೆಳೆವಂತೆ ಸೆಳೆದೂ || ೪೧ ||

ಅಸಿಯಿಂದ ದ್ರುಪದಜನಿರಿಯಲ್ಕೆ ತಿರುವಾಯ್ಗೆ | ಕಿಸಲಂಬತಂದುದಿಲ್ಲವನೂ ||
ಪೆಸರಾಂತ ಪಾರ್ವರೀ ದ್ರೋಹಿಗಳ ನೆರೆನಂಬಿ | ಜಸವಳಿದು ಬೆಂಡಾದೆನಿನಿತೂ || ೪೨ ||

ಸುತಸೋದರರು ಪೋದರಿವರಿಂದ ಕಪಟಿಗಳ | ಜೊತೆಗೊಳ್ಳಲಹುದೆನ್ನಗತಿಯೂ ||
ಖತಿಗೊಂಡಡಿರಿಯಲ್ಕೆ ಹಿತವರಿದಡೀಯಲ್ಕೆ | ಗತಿಯಿಲ್ಲ ಶರಣೆಂದು ಪೇಳೆ || ೪೩ ||

ಕಾಯಲು ಕ್ಷತ್ರಿಯರೆ ನಿಜವೀರ್ಯರಪ್ಪಂತೆ | ಭೋಯೆನುವ ಬೊಮ್ಮರ್ಕಳಹರೇ ||
ಧೋಯೆನುತೆ ಕೊಲುವಲ್ಲಿ ಬಾಯ್ಬಿಡುವ ಬಲ್ಲಿದರು | ಸಾಯಕದೊಳಿರಿವರೇನವರೂ || ೪೪ ||

ಬಣ್ಣ ನಾಲ್ಕರೊಳುಂಟು ಭೂದಿವಿಜಸಂತತಿಗೆ | ರನ್ನವಾ ದರ್ಭಾಧಿಕಾರಾ ||
ಚೆನ್ನಹುದೆ ನೃಪರಂತೆ ಶಸ್ತ್ರಾಸ್ತ್ರದರಿವಿಜಯ | ದೌನ್ನತಿಕೆ ಸಲ್ಲದಾ ಕುಲಕೇ || ೪೫ ||

ಗೆಲಲಾರ್ಪೊಡಿರಿದರಿಯ ಕೊಲುವುದಲ್ಲದೆ ಪೋದ | ಡಳಿಗೊಂಬುದಾಳ್ಗಿನಿತೆ ಗುಣವೂ ||
ಗೆಲಲೂ ಸಾಯಲು ತೀರದಿರ್ಪಂಗೆ ಸಿರಿಮೈಯ್ಯ | ತೊಲಗದೇನ್ನೆಗಳ್ತೆಯು ನೆಲದೀ || ೪೬ ||

**ವಚನ ||** ಎಂದರಸನವರ್ಗೆ ವಿರಸಮಾಗಿ ಪರುಷಂ ನುಡಿಯೆ ಸಂಜಯಂ ತನ್ನಂತರ್ಗತದೊಳ್ ||

**ಕಂದ**

ಗುರುಸುತನಂ ನಿಂದಿಪನೀ |
ದುರುಳಂ ರುದ್ರವತಾರಮೂರ್ತಿಯನಮಮಾ ||
ಪೊರೆದರ್ಗೆರಡೆಣಿಸಿದಖಿಲ ||
ನರಿದನೆ ಗುರುಭೀಷ್ಮ ಕರ್ಣರಿವರಳಿದುದನುಂ || ೪೭ ||

**ವಚನ ||** ಎಂದು ಸ್ವಗತಾಲೋಚನೆಯಂಮಾಡಿ ಸಂಜಯಂ ಕುರುರಾಜನೊಡನಿಂತೆಂದಂ ||

**[ಸೂಚನೆ : ಭಾರತ ಯುದ್ಧದಲ್ಲಿ ಕೌರವಮಹಾರಾಜನ ಪಕ್ಷವನ್ನು ವಹಿಸಿ ವೀರಸ್ವರ್ಗವನ್ನು ಪಡೆದ ಗಣನೀಯರಾದ ವ್ಯಕ್ತಿಗಳಲ್ಲಿ ಕೆಲವರನ್ನು ದುರ್ಯೋಧನನು ಸ್ಮರಿಸಿ ಚಿಂತಿಸುವನು : (೧) ಭೀಷ್ಮರು ಶಂತನು ಚಕ್ರವರ್ತಿಯಿಂದ ದೇವಗಂಗೆಯಲ್ಲಿ ಹುಟ್ಟಿದವರು, ವಸಿಷ್ಠನ ಶಾಪಭ್ರಮಣೆಯಿಂದವತರಿಸಿದ ಎಂಟನೇಯವರು, ಪಾಂಡವ ಕೌರವರ ಮುತ್ತಾತನು – (೨) ದ್ರೋಣಾಚಾರ್ಯರು, ಭರದ್ವಾಜ ಮುನಿಯ ವೀರ್ಯದಿಂದ ಕಲಶದಲ್ಲಿ ಹುಟ್ಟಿದವರು, ಬಿಲ್ಲಗುರು (೩) ಸೈಂಧವನು ಸಿಂಧೂದೇಶದ ರಾಜನು. ಕೌರವನ ತಂಗಿ ದುಸ್ಸಳೆಯ ಗಂಡ – (೪) ಭಗದತ್ತ–ಪ್ರಾಗ್ಜೋತಿಷದ ರಾಜನು – (೫) ದುಶ್ಶಾಸನ–ಕೌರವನ ಸೋದರನು – (೬) ಮಾದ್ರೇಶ ಮದ್ರಾನಗರದ ರಾಜನಾದ ಶಲ್ಯನು – (೭) ಭೂರಿ ಶ್ರವಸ್ಸು–ಶಂತನು ಚಕ್ರವರ್ತಿಯ ಸಹೋದರನಾದ, ಬಾಹ್ಲಿಕನ ಮಗನಾದ, ಸೋಮದತ್ತನ ಪುತ್ರನು – (೮) ಬೃಹದ್ಬಲ–ಕೌಸಲ ದೇಶಾಧಿಪತಿಯು – (೯) ಕುರುವಿಂದ, ವಿಂದ, ಅನುವಿಂದ, ಇವರು ಆವಂತೀದೇಶದ ರಾಜನಾದ ಜಯತ್ಸೇನನ ಮಕ್ಕಳು. ಮಿತ್ರವಿಂದೆ, ಜಯತ್ಸೇನನ ಮಗಳು. ಕೃಷ್ಣನ ಪತ್ನಿಯು. ಇವರ ತಾಯಿಯಾದ ರಾಜಾಧಿದೇವಿಯು ಕುಂತೀದೇವಿಯ ಸಹೋದರಿಯು. (೧೦) ಕರ್ಣ–ಕುಂತೀದೇವಿಯ ಮಗನು, ಸೂರ್ಯಪುತ್ರನು, ಇನ್ನು ಕಾಂಭೋಜರಾಜನಾದ ಸುದಕ್ಷಿಣ. ಕಳಿಂಗರಾಜನಾದ ಶ್ರುತಾಯುಸ್ಸು, ಮಗಧದೇಶದ ರಾಜನಾದ ಜಯತ್ಸೇನ, ತ್ರಿಗರ್ತರಾಜನಾದ ಸುಶರ್ಮ ಇವರೆಲ್ಲರೂ ಕೌರವನ ಪಕ್ಷವನ್ನು ಸೇರಿ ಯುದ್ಧದಲ್ಲಿ ಮೃತಪಟ್ಟವರು. ಭಾರತಯುದ್ಧವು ರಾಕ್ಷಸಸಂವತ್ಸರದ ಮಾರ್ಗಶಿರ ಶು. ೧೩ ಭರಣಿ ನಕ್ಷತ್ರದಲ್ಲಿ ಪ್ರಾರಂಭವಾಗಿ ಮಾರ್ಗಶಿರ ಬ. ೩೦ ಮೂಲಾನಕ್ಷತ್ರಕ್ಕೆ ಅಂತ್ಯವಾಯಿತು. ೧೮ ದಿವಸಗಳ ಯುದ್ಧವಾಗಿದೆ.]**

**ರಾಗ ಬಿಲಹರಿ ಅಷ್ಟತಾಳ**

ಅಹ | ಏನ್ವಿಚಾರವಿದಯ್ಯ | ಭೂಪ ಎನ್ನೊಡೆಯನೆ ಕುರುವಂಶ ದೀಪಾ || ಪಲ್ಲವಿ ||

ಬರಿದೇಕೆ ದೂರುವೆಯಹಗುರುವ ನೀನೂ | ನರಕಭಾಜನನಾಗ ಬೇಡ ಕೇಳಿದನೂ ||
ಧರೆಗೆ ತಾನಾರಾಧ್ಯನೆನಿಸಿದ ಜನಕೇ | ಪರಶುರಾಮನ ಚಾಪಧರಿಸಿದದ್ಭುತಕೇ || ಅಹಹ || ೪೮ ||

ಪೌರವೇಯರ ಪಾದಕೆರಗಿಸಿದುದಕೇ | ವೀರಬಿಲ್ಲೊವಜನೇನ್ ಪಾರ್ಥನಧುರಕೇ ||
ಜಾರಿ ಪೋದನೆ ಪೇಳು ಅರಿಯೆಯ ನೀನೂ | ಮೀರಿಕಾದುತೆ ದೇಹಕೊಡನವನೇನೂ || ೪೯ ||

ಪೆತ್ತಮಾತೆಯ ಭವ್ಯನಾಮದ ಗುಣಕೇ | ಉತ್ತಮೋತ್ತಮ ಭೀಷ್ಮ ಬಿರುದಿನ ಛಲಕೇ ||
ಮತ್ತೆ ಪಾರ್ಥಿವ ಪಂಥದೌನ್ನತ ಬಲಕೇ | ಹತ್ತು ಸಾವಿರ ರಾಜಪುತ್ರರ ದಿನಕೇ || ೫೦ ||

ಬಲಿಗೊಟ್ಟ ಧುರಧೀರ ಭಾರತಹವದೀ | ಭಳಿರೆಂಬ ಪೆಸರಾಂತನಾತನು ರಣದೀ ||
ಗಳಿಸಲಾರದ ಕೀರ್ತಿವಡೆದನು ಜಗದೀ | ಯಿಳಿಕೆ ಗೈಯ್ಯದೆ ಪೋದ ಪಾರ್ಥನ ಧುರದೀ || ೫೧ ||

**ಕಂದ**

ಅಂತಕನುಮಿಂದ್ರನುಂ ಕಾ ||
ಮಾಂತಕನುಂಭಾನುಸೂನುವುಂ ಕಳಶಜನುಂ ||
ಶಂತನು ತನೂಜನಾರದೆ ||
ಕುಂತೀಸುತನಂಗೆಲಲ್ಕೆ ಪೆರರಾರ್ತಪರೇ || ೫೨ ||

**ರಾಗ ಕೇತಾರಗೌಳ ಅಷ್ಟತಾಳ**

ಅವನೀಶಕೇಳಿನ್ನು ಭುವನ ಮೂರರೊಳುಂಟೆ | ಪವನಸಂಭವ ಮಲ್ಲರೂ ||
ಅವನ ಬಣ್ಣಿಸಲೇನು ಜವನವಿಕ್ರಮಭೀಮ | ದಿವಿಜವಂದಿತ ರುದ್ರನು || ೫೩ ||

ತಿರೆಯೊಳಾರಿಗೆ ಸಾಧ್ಯಪುರುಷಾಖ್ಯ ಮೃಗವನ್ನು | ತರುವನೊರ್ವನ ತೋರಿಸೂ ||
ಗರುವ ನೀನರಿಯೆಯ ಸೌಗಂಧಿಪುಷ್ಪವ | ತರಿದು ತಂದಿಹ ಯಕ್ಷರಾ || ೫೪ ||

ಬಕ ಹಿಡಿಂಬಿಕನು ಕೀಚಕ ಮತ್ತಕಿಮ್ಮೀರ | ಮುಖಜಟಾಸುರ ವರ್ಗವಾ ||
ಚಕಿತಗೊಳ್ಳಿಸಿಕೊಂದ ಪ್ರಕಟಜರಾಸಂಧ | ರಕುತಲಾಂಛಿತ ಭೀಮನೂ || ೫೫ ||

**ರಾಗ ಆನಂದಭೈರವಿ ಏಕತಾಳ**

ಕುರುನರಪಾಲಕ ಲಾಲಿಸುಮಾತಾ | ದೊರೆನಿನಗೀವಿಧಿಯಾದುದೆ ತಾತಾ || ಪಲ್ಲವಿ ||

ಅರಿದರಿದಿದ ನೀಪೇಳುವದೇನಹ | ಪರಿಕಿಸಲಿಲ್ಲವೆ ಪಾಂಚಾಲೆಯ ವೈವಾಹ ||
ಇರಿಸಿದಲಾಂಛನ ಮತ್ಸ್ಯವಭೇದಿಸಿ | ಕರ ಪಿಡಿದಾಕೆಯ ವರಿಸಿದ ವಿಜಯನ || ೫೭ ||

ಕೇತುಕೃತಾಂಜನೆ ತನಯನು ಸಿರಿವರ | ಸೂತನುಮದನಾರಾತಿ ಕೃತಾಸ್ತ್ರಧರಾ ||
ಪಿತೃಪುರುಹೂತನು ಭುವನಕೃತಾರ್ಥನು | ಕೃತಿಪೂರಣ ಮಹಿಮಾನ್ವಿತ ಫಲುಗುಣ || ೫೮ ||

**ಕಂದ**

ಪವನಸುತಂ ಗದೆಗೊಳೆ ಗಾಂ |
ಡಿವಿಬಿಲ್ಗೊಳೆ ಕೆಯ್ದುಕೊಳ್ವಮಾರ್ಕೊಳ್ವಧಟರ್ ||
ಭುವನದೊಳಿಲ್ಲವರ್ಗಳಬಾ |
ಹುವಿಕ್ರಮಂ ನಿನಗೆ ಪೊಸತೆ ಕೌರವರಾಜಾ || ೫೮ ||

**ವಚನ ||** ಧಾರ್ಮಿಕ ಯಮಜಂ, ಯಮಳರದ್ಭುತರ್, ಸಂಧಿಯನೆಸಗೆನೆ, ಫಣಿರಾಜಕೇತನಂ ಸಿಡಿಲ್ದವಗಿಂತೆಂದಂ ||

**ರಾಗ ಮಾರವಿ ಏಕತಾಳ**

ಸ್ಥಿರವೃತಿ ಸತ್ಯಕೆ ಧರ್ಮಜನೆಂದೆಯ | ಪರಿಕಿಸದಾತನನೂ ||
ಗುರುವಧೆಗಳುಕದೆ ಪುಸಿನುಡಿಯಾಡಿದ | ಗರುವನೆ ಧಾರ್ಮಿಕನೂ || ೫೯ ||

ಅವನೆಹತಾಶ್ವತ್ಥಾಮನದೆಂಬಾ | ತವಕದ ಸತ್ಯವನೂ ||
ಪವಣರಿದುಸುರಲುಕೇಳುತೆ ಕುಂಭಜ | ಜವನೆಡೆಗಾತುರದೀ || ೬೦ ||

ತೆರಳಲು ಪೇಳ್ದನು ಕುಂಜರನೆಂದಾ | ದುರುಳನು ಸೂನೃತವಾ ||
ಅರಮಗನರುಹಿದ ಸಟೆಯನು ಪೇಳಲು | ಗುರುವರಿದಂತಕಗೇ || ೬೧ ||

ಬೋಧಿಸೆ ಪೋದನದಲ್ಲದೆ ಪುತ್ರನ | ಶೋಧಿಸೆಪೋಗಿಹನೇ ||
ಚೋದ್ಯವಿದಲ್ಲವೆ ಕಪಟಿಯಧರ್ಮದ | ಸಾಧಕನೆನ್ನುವುದೂ || ೬೨ ||

**ಕಂದ**

ಬಿಡುಕಪಟಿಯಪೇರ್ವೆಸರಂ |
ಕಡೆಗಣಿಸುವೆನಾ ವೃಕೋದರನಿರಲಿಜವನೇಂ ||
ತುಡುಗುಣಿ ವನಿತೆಯತುರುಬಂ |
ಪಿಡಿದೆನ್ನನುಜಂ ಸೆಳೆಯಲವನದೇಂ ಗೈದಂ || ೬೩ ||

**ವಾರ್ಧಕ**

ಜಗವರಿಯಲಾಸುಪ್ರತೀಕಗಜ ಪಿಳಿಯುತಿರೆ |
ಪೆಗೆಗಿರಿವ ಕಟ್ಟಾಳುತನವೆಲ್ಲಿ ಪೋಯ್ತುವನ |
ಪೊಗಳದಿರು ಸಾಹಸವನಂಗಪತಿ ಕಾರ್ಮುಕದೆ ಕೋದೆಳೆದ ಸುಭಟಜವನಾ ||
ವಿಗಡನೇ ಬಾಣಸಿಗ ಮಂದಮತಿ ಮರುತಸುತ |
ಪಗರಣದೆ ಕುರುಬಾಲರಂಕೊಂದಡೇನವಂ |
ಜಗಜಟ್ಟಿ ಕಲಿತಮನೆಪಿರಿತಿನಿಗ ಪೈಶಾಚ ರಕ್ಕಸಿಯ ಗಂಡನಲ್ತೇ || ೬೪ ||

**ರಾಗ ಕೇತಾರಗೌಳ ತ್ರಿವುಡೆತಾಳ**

ಎನಗೆ ಜೂಜಿನೊಳಗ್ರಜಾನುಜ | ರನಿತನೆಲ್ಲವ ಸೋತು ತಿರುಕುಳ ||
ತನದೊಳಟವಿಯ ಸೇರಿಬದುಕಿದ | ಬಿನುಗರವರೂ || ೬೫ ||

ಜಟೆಯವಲ್ಕಲವೇಷಿ ತರಗೆಲೆ | ದಟೆಯ ತಾಪಸನಾಗಿ ಮೆಟ್ಟಲು |
ನಿಟಿಲಲೋಚನ ನಿತ್ತಬಾಣವ | ದಿಟವುನರಗೇ || ೬೬ ||

ಸುರಪನಾಸನವಿತ್ತಪುತ್ರಗೆ | ಮರುಳುತನವದು ನೂರು ಯಜ್ಞದ |
ಬಿರಿದರೇರುವ ತಾಣವೆಂತದ | ಕರುಹನಹನೂ || ೬೭ ||

ಸೋವುಗೊಡದಾ ನಾಲ್ಕುತಿಂಗಳ | ಕಾವಿವಸನದ ಜೋಗಿಯಾಗುತೆ ||
ದೇವಕೃಷ್ಣನ ಭಗಿನಿಗೊಲಿಸಿದ | ಸಾವೆಸಹಸಾ || ೬೮ ||

ಕೈಗೆ ಬಳೆಯನುತೊಟ್ಟು ಸೀರೆಯ | ಮೈಗೆ ನಿರಿವಿಡಿದುಟ್ಟು ಜಡೆ ಮುಡಿ ||
ಯಾಗಿ ತೈತಕಕುಣಿದ ಷಂಡನ | ದಾರ್ಗೆವಿಜಯಾ || ೬೯ ||

ಕಾಲನಾತ್ಮಜ ಕಂಕನಾಗನೆ | ಮೇಳದೊಲ್ಲಭೆ ಗಂಧದಾಯಿನಿ ||
ಖೂಳಪವನಜ ಕಂಚುಗರ್ಚಕ | ಬಾಲರಿರಲೀ || ೭೦ ||

ವೇಷಪಲ್ಲಟಗೊಳಿಸಿ ಪುಸಿನುಡಿ | ದೋಷವಲ್ಲೆನುತಾ ವಿರಾಟನ ||
ದಾಸರಾಗಿರುತಿರ್ದ ಪಾಂಡವ | ರೈಸೆಭಟರೂ || ೭೧ ||

**ಕಂದ**

ಬಾರದ ಬನ್ನಂಗೊಳಿಸಿದೆ |
ತೀರಿತು ಪೋಧೂರ್ತರ ಪೊಗಳಲ್ಬೇಡವರಂ ||
ಮೀರಿದ ಕಪಟೆಗಳವದಿರ್ |
ವೀರರೆ ಪೇಳ್ಸಂಜಯ ಕೆಸರಿನ ಬೆಳ್ ನೀರೊಲ್ || ೭೨ ||

**ವಚನ ||** ಎಂದು ದುರ್ಯೋಧನಂ, ಶಿವನಂ, ಸುರಪಾಲಕನಂ, ಕೌಂತೇಯರುಮನೆಲ್ಲರಂ ನಿರಾಕರಣಂ ಗೈದು ಸಮರೋದ್ಯೋಗಂ ಗೈಯ್ಯೆ, ಸಂಜಯನಂಜದೆ ಮಾರ್ಕೊಳುತಂ ||

**ಭಾಮಿನಿ**

ಎಲೆ ಧರಾಧಿಪ ಛಲವಿದೊಳ್ಳಿತೆ |
ಬಲದೊಳಧಿಕರು ಭೀಮಪಾರ್ಥರು |
ತಿಳಿದು ನೋಡತಿರಥರು ಮಹರಥರವರು ಸಮರದಲೀ ||
ಬಲದಿ ನೀಸಮರಥನು ಕಾಳಗ |

ದೊಳಗೆ ರಿಪುಗಳ ಗೆಲಲಸಾಧ್ಯವು |
ನೆಲನೊಳರ್ಧವನಿತ್ತು ಸಂಧಿಯನೆಸಗು ಕೈಮುಗಿವೇ || ೭೩ ||

**ವಚನ ||** ಎನೆಕೇಳ್ದು ಪಿಂಗಾಕ್ಷನತಿ ವಿಷಮಪರುಷಾವೇಶಧರನಾಗಿ ||

**ರಾಗ ತಿಲಾನ ಏಕತಾಳ**

ಧೀ ಪೆರರಂ ಪೊಗಳುವ ಧೂರ್ತನೆ ಬಿಡುಬಿಡು | ಆ |
ಗುರುಸಿಂಧುಜರುಪದೇಶವೆ ನಿನಗಿದು | ಕಾ |
ಪುರುಷನೆ ಕಿರಿದೇನ್ ಗೊಳಿಸುವೆ ಮಾರುತಿ | ಮಾ |
ಗರುವನೆ ನುಡಿನುಡಿ || ಧೀಪೆರರಂ || ೭೪ ||

ನರಮಾಂಸಕೆ ಮಹಮಾಂಸವದೆನ್ನರೆ | ನರತೈಲಕೆ ಮಹತೈಲವದೆನ್ನರೆ |
ನರಬಲಿ ನಿದ್ರೆಗೆ ಮಹದಹಶಬ್ದವ | ಬೆರಸರೆ ನಿರಸವ || ಧೀಪೆರರಂ || ೭೫ ||

ಸ್ನುಹಿಮಹ ವೃಕ್ಷವೆ ಪೆಸರದಕಿಲ್ಲವೆ | ಬಹಿರಾವರಣದ ಬೆಳ್ನುಡಿ, ಭೀಮನ |
ಮಹರಥನೆನುವುದೆ ನಾಚಿಕೆ ಸುಡುಸುಡು | ಸಹಿಗೊಡೆನಿನಿತಕೆ || ಧೀಪೆರರಂ || ೭೬ ||

**ವಚನ ||** ಎನೆ ಸಂಜಯಂ ಸ್ವಗತಾಲೋಚನೆಯಂಮಾಡಿ ||

**ವಾರ್ಧಕ**

ಶಿಲೆಗೆರೆದ ನೀರಾಯ್ತು ಮದ್ಬೋಧೆ ಶಿವಶಿವಾ |
ತಲೆತಿರುಕನೆಂದಿವನ ತೊರೆಯಲೇ ಋಣಭಾರ |
ಮುಳಿದಪುದು ಸೇವ್ಯನಿವಗದರಿಂದಲನುಕೂಲವೃತ್ತಿಯಿಂದರುಹಿನೋಳ್ಪೇ ||
ಪಳಿವನಿವ ನುಡಿಗೆಡೆಯಗೊಡಲಾರನೆಂತಾದೊ |
ಡಳುಕನೆಂದೊರೆದನೆಲೆ ಕುರುರಾಯ ಗುರುಸುತಂ |
ಬಲದೇವ ಕೃತವರ್ಮ ಕೃಪರಿತ್ತ ಬರುವನಕ ನೀಕಾದು ಬಳಿಕಲವರಾ || ೭೭ ||

ಮತವಿಡಿದು ನಾಲ್ವರೊಳಗೊರ್ವಂಗೆ ನೀಕಟ್ಟು |
ಪತಿಕರಿಸಿ ಸೇನಾಧಿಪಟ್ಟಮಂ ಬಳಿಕಿರಿದು |
ಮತಿವಂತಪಗೆಗಳಂ ಕೈವಶವ ಮಾಳ್ಪುದೆನೆ ಕುರುಜನಪ ನುಡಿದನವಗೇ ||
ಹಿತವಹುದು ರಿಪುಗಳಂ ಜಯಿಸಿದೊಡೆ ಸುರನದಿಯ |
ಸುತನಿಂದ ಗುರುಕರ್ಣರಿಂಸಾಗದಾಹವಂ |
ಪತಿಕರಿಸೆ ಗುರುಸುತನೊಳಪ್ಪುದೇನ್ಬಿಡುಬರಿದೆ ಮತಿವಿಕಳ ವಾಕ್ಯಾರ್ಥವಾ || ೭೮ ||

**ವಚನ ||** ಆಗಳ್ ಧೃತರಾಷ್ಟ್ರ ಗಾಂಧಾರಿಯರ್, ಸುಯೋಧನನಿರವಂ ಕಾಣದೆ ರಣಭೂಮಿಯೊಳ್ ಕರೆಕರೆದರಸುತ್ತಂಬರೆ ||

**ಕಂದ**

ಪಡೆಪನ್ನೊಂದಕ್ಷೆಹಿಣಿ |
ಗೊಡೆಯನೆ ಮೂರ್ಧಾಭಿಷಿಕ್ತನ್ಯೆ ಮೂರುಂಬೆಳ್ ||
ಗೊಡೆಯನಡುವಿರ್ಪನೀನಿ |
ದ್ಗಡೆಯುಮನೆಮಗರಿಯದಂತುಟಾದುದೆ ಮಗನೇ || ೭೯ ||

**ವಚನ ||** ಎಂದಳುತ್ತಂಬರುವ ದಂಪತಿಗಳಾಗಮನಮಂ ತಿಳಿದಾಗಳೆ ಸಂಜಯಂ, ಮುಕುಳಿತ ಕರಪುಟನತಿ ದೈನ್ಯದೊಳಂ, ಕುರುಭೂಪಾಲಕಗೆಚ್ಚರಿಸಲ್, ಕೇಳ್ದೊಡನಾದುರ್ಯೋಧನಂ ||

**ಕಂದ**

ಶೋಕಂ ಮಿಗೆ ಫಣಿರಾಜಪ |
ತಾಕಂ ವಿಕಳಿತ ವಿವೇಕ ಶೂನ್ಯಂ ಬಾಷ್ಪೋ ||
ದ್ರೇಕಂ ಹಾ ದುಶ್ಯಾಸನ |
ಹಾಕರ್ಣಾ ಎನುತಮಂತೆ ಮೂರ್ಛೆಗೆ ಸಂದಂ || ೮೦ ||

**ವಚನ ||** ಅಂತು ಮೂರ್ಛಾಪ್ರಸಂಗನಾದ, ಪನ್ನಗ ಪತಾಕಂಗೆ, ಶಿಶಿರೋಪಚಾರಂಗಳಂ ಮಾಳ್ಪಸಂಜಯನಿರವಂ ತತ್ಪರಿಜನಂ ಕಂಡು ಪೇಳೆ ಗಾಂಧಾರಿ ಮನದೊಳಲ್ಕಿನನೆ ಕೊನೆವೋಗುತ್ತಂ ||

**ರಾಗ ಬೇಗಡೆ ತ್ರಿವುಡೆತಾಳ**

ಬಾಲಕೌರವನೆಯೆನ್ನಾ | ವಂಶದರನ್ನಾ | ಬಾಲ ಕೌರವನೆಯೆನ್ನಾ | || ಪಲ್ಲವಿ ||

ಅಮೃತಕರ ಕುಲಸೋಮವಲ್ಲಿಗೆ | ವಿಮಲಸುರಕುಜಸಮರ ಸಾಹಸ |
ನಮಿತ ಭೂಭುಜ ಮಗನೆ ಮಡಿದೈ | ಕುಮತಿಭೀಮನ ಗದೆಯ ಘಾತಕೆ || ಅನು ಪಲ್ಲವಿ ||

ತಾತಗಂಧನೃಪಾಲಗೆ | ಮಾತೆಗೆನಗೆ | ಈ ತೆರನೆಸಗಿಪೋದೆಯಾ ||
ಮಾತನಾಡದೆ ಮುನಿಸಿದೇತಕೋ | ತಾತ ಕೌರವ ಜರೆಯ ಕಾಲಕೆ |
ಜಾತ ನಿನ್ನೀತನುವೆ ನಮಗಿದು | ಪೂತಕೈಗೋಲಿರಲು ಸೆಳೆದೆಯ |
ಪಾತಕರು ನಾವಾದ ಕಾರಣ | ಧೂರ್ತಜವನೇಗೈದನಿನಿತಕ |
ನಾಥರಾಗಲು ನಮ್ಮನೇನಹ || ಬಾಲಕೌರವನೆ || ೮೧ ||

ಜನಕಜನನಿಯರೆಮ್ಮನು | ಕಾಣಲಿನಿತು | ಮನಕೆ ಲಜ್ಜೆಯೆ ಮಗನೇ ||
ಮಣಿಯದೆರಗದೆ ಗುರುಜನಂಗಳ | ಕಣಿಯೆ ಪರಕೆಯನಾನದೀಪರಿ |
ಮೌನವಿರ್ಪುದು ಸರಿಯೆ ಕೌರವ | ದಿನಪಸುತ ದುಶ್ಯಾಸರೇನವ |
ರಿನ್ನು ಮರುಗಲು ಬರುವರೇನ್ಬಿಡು | ಬನ್ನಗೊಳಿಸಲು ಬೇಡವೃದ್ಧರ |
ಯನ್ನ ಕರುಳಿನ ಕಣವೆ ಮಾತಾ | ಡೆನಲುಧೊಪ್ಪನೆ ಕೆಡೆದನಂಧಕ ||
ಬಾಲ ಕೌರವನೆಯನ್ನ || || ೮೨ ||

**ವಚನ ||** ಇಂತಾಧೃತರಾಷ್ಟ್ರಂ ಸುಯೋಧನನಂಪ್ರಿಯೊಳ್ವಿದ್ದು ಪೊರಳ್ದವಂ ದುಃಖದೊಳ್ ||

**ಕಂದ**

ಹಾ ಕುರುಕುಲಚೂಡಾಮಣಿ |
ಹಾ ಕುರುಕುಲಚಕ್ರವರ್ತಿಹಾಸಕಲಧರಿ ||
ಶ್ರೀಕಾಂತನಿನ್ನು ಮಂಪರ |
ಲೋಕಕ್ಕಟ್ಟಿದನೆ ಕಾಯ್ದು ಮಾಯ್ದು ವಿಧಾತಂ || ೮೩ ||

**ರಾಗ ಸಾಂಗತ್ಯ ರೂಪಕತಾಳ**

ಮನಮರುಗಿ ಬಾಯಾರಿ ಹಾಯೆಂದು ಮೊರೆಗೊಡುವ | ಜನಪಾಲಗಾಂಧಾರಿಯರನೂ ||
ಅನುವರಿದು ತಕ್ಕೈಸಿ ಸಂಜಯನು ಬಳಿಕೆಂದ | ಮನದಣಿಕೆ ಬೇರಾಯ್ತು ನಿಮಗೇ || ೮೪ ||

ಅನುಜಾತರಿನಜಾದಿ ಭಟರಳಿದ ಶೋಕದೊಳು | ಜನನಾಥಧೃತಿಗೆಟ್ಟು ನೆಲದೀ ||
ಇನಿತಿರ್ಪ ಮೈಮರೆದು ಚಿಂತಿಸಲುಬೇಡಯ್ಯ | ಕಣ್ದೆರೆವನವನೀಶನೀಗಾ || ೮೫ ||

ಸಂದೇಹಮಿಲ್ಲೆಂದು ಸಂತೈಸಿ ನಯನಾಂಬು | ಬಿಂದುಗಳ್ ಸೂಸಲಂಧಕಗೇ ||
ಬೆಂದೊಡಲಿನುಚ್ಛ್ವಾಸ ಪರಿಘೋಷಮಾಗಲ್ಕೆ | ಕಂದೆರೆದು ಕೌರವನು ಮಣಿಯೇ || ೮೬ ||

**ವಚನ ||** ಕೌರವಂ ಪದಕೆರಗಿದನೆಂದಾಗಳ್ ಸಂಜಯಂ ಸೂಚಿಸಲ್, ಅಂಧನೃಪಾಲಂ ಪರಸುತ್ತವನಂ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಬೇಡ ಮಗನೇ ಪಾಂಡುಪುತ್ರರ | ಕಾಡದಿರುಸಿರಿವನಿತೆಗಾದಳು |
ಜೋಡಿಯವರಿಗೆ ಜಯಮಹಾವಧು ||
ಕೇಡುಗರ ಮತದಿಂದ ನಿನಗಹ | ಪಾಡಿದಾಯ್ತೂ || ೮೭ ||

ಸಮರಸಲ್ಲದು ಮಗನೆ ನಿನಗೀ | ಸಮಯಸಲ್ಲದ ಕಾಲವಕಟಾ |
ಭ್ರಮೆಯಗೊಳ್ಳದೆ ಸಂಧಿಗೊಡಬಡು ||
ಯಮಜನೊಳ್ಳಿದನಹನು ಧಾರ್ಮಿಕ | ಸುಮತಿಯವನಾ || ೮೮ ||

ನುಡಿಯ ಸೋದರರೊಪ್ಪುಗೊಂಬರು | ತಡೆಯದೀಗಳೆ ಸಂಜಯನನವ |
ರೆಡೆಗೆಕಳುಹುವೆ ಕುರುಕುಲಾಂತಕ ||
ನೊಡನೆ ಪಗೆತನ ಬೇಡ ಬೇಡುವೆ | ತೊಡಕು ಮಗನೇ || ೮೯ ||

**ಕಂದ**

ಕಲ್ನೀರಾಗುವ ತೆರದೊಳ್ |
ನಲ್ನೀತಿಯೊಳಾ ಸುಯೋಧನಂಗವರರುಹಲ್ ||

ಕಲ್ಲೆದೆಗಾರಂ ಹಿರಿಯರ |
ಸೊಲ್ಲರಿದಾಗಳ್ ನಯೋಕ್ತಿಯೊಳಗಿಂತೆಂದಂ  || ೬೦ ||

**ರಾಗ ತೋಡಿ ಅಷ್ಟತಾಳ**

ಲಾಲಿಸೆನ್ನಯ ಮಾತೆ ಮಾತಾ | ಯೇನ | ಪೇಳ್ವೆನಾನಿದಕೆನ್ನ ತಾತ ||
ಜಾಲವಪ್ಪುದೆನುಡಿ ಧರ್ಮನಂದನನ |
ಕಾಲಗತಿಯಲೀಲೆಗಾಳಾದನವನಾ || ಲಾಲಿಸೆನ್ನಯ  || ೬೧ ||

ಕೇಳೊಂದು ಕೃತಕಭಾಷೆಯನೂ | ಪೇಳ್ದ | ಕಾಲನಾತ್ಮಜನೆಂಬೆನದನೂ ||
ಬಾಳಿಕೊಂಡಿರುವನು ಜಾತರ್ನಾಲ್ವರೊಳೂ |
ಕಾಲವಶದೊಳೊರ್ವನಳಿಯಲಾಕ್ಷಣದೊಳು || ಲಾಲಿಸೆನ್ನಯ  || ೬೨ ||

ಜ್ವಲಿಪಗ್ನಿಯೊಳೆ ಬೀಳ್ವೆನೆಂದೂ | ಆಹಾ | ಛಲದ ಭಾಷೆಯತಾಳ್ದನಂದೂ ||
ಅಳಿದರೆನ್ನನುಜಾತರ್ನೂರ್ವರಿಂದೂ |
ಉಳಿವುದೆಂತೊಡಲೆನ್ನ ಸಾಯದೆ ಬೆಂದೂ || ಲಾಲಿಸೆನ್ನಯ ಮಾತ || ೬೩ ||

ಅನುಜರ್ಗ್ಗಾದುದೆ ತನ್ನಗತಿಯೂ | ಅಪ್ಪ | ತನುಜರಾಪ್ತರೆಯೆನ್ನ ಧೃತಿಯೂ ||
ಎನಗಿನ್ನು ಪೇಳದಿರ್ಬಿಡುವುದಾಶೇ |
ದಿನಘಟಿಯಾಯ್ತೀಗಬಿಡಲೆಂತು ಭಾಷೆ || ಲಾಲಿಸೆನ್ನ ಮಾತಾ  || ೬೪ ||

**ಕಂದ**

ಸಾಧಿಸುವೆಂ ಫಲ್ಗುಣನಂ |
ಸಾಧಿಸುವೆಂ ಪವನಸುತನ ಬಸಿರಿಂ ಹಾ ಕ |
ರ್ಣಾದುಶ್ಶಾಸರತೆಗೆವೆಂ |
ನಿರ್ದೋಷಿ ಬಳಿಕ್ಕೆ ಯಮಜನೊಳ್ಪುದುವಾಳ್ವೆಂ  || ೬೫ ||

**ರಾಗ ಮಧ್ಯಮಾವತಿ ಏಕತಾಳ**

ತಾತ ಕೇಳೆನ್ನ ಮಾತಾ | ಪೆತ್ತಮ್ಮ | ಪ್ರೀತೇಕೇಳ್ಸು ಪ್ರಖ್ಯಾತೆ || ತಾತ ಕೇಳೆನ್ನ ಮಾತಾ || ಪಲ್ಲವಿ ||ನಿಮಗಾನು ಮಗನೆಂಬ ಭ್ರಮೆಗೊಳ್ಳದಿಹುದೂ |
ಯಮಜಾತನೊಡಗೂಡೆ ಸಮನಾಗ ಬಹುದೂ ||
ಕ್ಷಮೆಗೊಳ್ಳಬೇಕೆನ್ನ ನಮಸ್ಕಾರ ನಿಮಗೇ |
ಯೆಮಗಿಲ್ಲಖುಣಭೋಗ ನಿಮಗಿರ್ಕೆಕೊನೆಗೇ || ತಾತ  || ೬೬ ||

ಬಿಡಿರೆನ್ನನೆಂದಾಗ ಪೊಡಮಟ್ಟುಪದಕೇ |
ನಡೆಗೊಳ್ಳೆ ಮರುಗುತ್ತ ಬಿಡದಾಗ ಧುರಕೇ ||

ತಡೆದೆಂದ ಧೃತರಾಷ್ಟ್ರ ಕಡೆಗೊಂದುಬೆಸನಾ |
ಧೃಡವಾಯ್ತೆ ಛಲವಿಂತು ಮಡಿವಾಶೆ ಜತನಾ || ತಾತ || ೯೭ ||

ಯಿನಿತೊಂದ ನೀಮಾಳ್ಪುದೆಮಗಾಗಿ ಹಿತವಾ |
ವಿನಯಾತ್ಮನಿಹ ಭೀಷ್ಮ | ನನು ಕೇಳಿತಿಳಿದೂ ||
ಅನುಗೊಂಡ ತೆರನಾಗು ಮನಕಿಲ್ಲಪಿರಿದೂ |
ಎನಲೆಂದ ಕುರುಭೂಪ ಜನಕಂಗೆ ಮಣಿದೂ || ತಾತ || ೯೮ ||

ಯೆನಗೀಗ ನೀವೆಂದುದನು ಮಾಳ್ಪೆ ಜವದೀ |
ಮನಕಾಯ್ತೆ ಪರಿತೋಷ ಜನಕಂಗೆ ನಯದೀ ||
ಕೊನೆಗಿದೋ ನಿಮಗಮ್ಮವಿನಮ್ರನಾಗೀ |
ತನುಬಾಗಿ ನಮಿಸಿರ್ಪೆ ಪುರದತ್ತಸಾಗೀ || ೯೯ ||

**ಕಂದ**

ಗುರುಜನರಂಬೀಳ್ಕೊಳುತಂ |
ಭರದೊಳ್ನಿಜ ಭುಜ ಸಹಾಯದೊಳ್ಗದೆ ಗೊಳುತಂ ||
ಧರಣಿಪನೊಡನಿರೆ ಸಂಜಯ |
ನೊರುವಂ ರಣಭೂಮಿಗೆ ನರಪತಿನಡೆತಂದಂ || ೧೦೦ ||

* * *

**ದ್ವಿತೀಯಾಂಕ ಪ್ರತಿಮುಖ ಸಂಧಿ**

**ಭಾಮಿನಿ**

ಘನಪರಾಕ್ರಮಿ ಕೌರವೇಶ್ವರ |
ಪೆಣನ ರಾಶಿಯನೇರುತಿಳಿಯುತೆ |
ಪೊನಲರಕುತದ ಪೊಳೆಯನುತ್ತರಿಸುತ್ತ ನಡೆತರಲೂ ||
ಮನದಿ ಮರುಗುತಲೆಂದ ಸಂಜಯ |
ಜನಪ ನಿನಗೀವಿಧಿಯೆ ಬಳಲಿದೆ |
ಕಣೆಯ ಕೊಂತದ ಮೊನೆಯ ಕಣದೊಳಗೆಂತು ಕಾಲ್ದೆಗೆವೇ || ೧೦೧ ||

**ವಚನ ||** ಎನೆ ಮರುಳೊಂದಾಡಿದುದಾಗಳೆ ನವಭೂತಭಾಷೆಯೊಳ್ ||

**ರಾಗ ಘಂಟಾರವ ಏಕತಾಳ**

ಎಲವೆಲೊ ಓ ಓ ಕೌರವನೇ | ಭಳಿರೈ | ಭಲನಿಲುಮಾತಿದೆ | ಖಲನೀಭೂವರನೇ ||
ಅಲಲಲ ಕಾಯ್ತೆನಿ ನಿನ್ನಾವಾ | ಹಸಿಬಿಸಿ | ಪಲಲದ ತೊಡೆತೋಳ್ತಿನಿಸಿಗೆನನ್ನಾವಾ ||
ಎಲವೆಲೊ ಓ ಓಕೌರವನೇ || ೧೦೨ ||

ಕಲಶಜನುದರದರಕುತವನೂ | ಕುಡಿಯಲಿ | ಕಲಸಿದೆ ಹೇಸುತೆ ಭೂಸುರನೆಂದವನೂ ||
ಕೊಳೆತಿದೆ ಪೆಣಗಳ ರಾಸಿಗಳೂ | ಹುಡುಕಿದೆ |
ಕಣದೊಳು ತೋರದು ಪೊಸಪಸಿಮಾಂಸಗಳೂ || ಎಲವೆಲೊ || ೧೦೩ ||

ಬಲ್ಲಿದ ನಿನ್ನಯ ಸೋದರನಾ | ನೆತ್ತರ | ನೆಲ್ಲವ ಭೀಮನೆ ಕುಡಿದನು ಬಗಿದವನಾ ||
ಅಲ್ಲಿಹನೊರ್ವನುಮುದಿಬರಡಾ | ಸಾಯನು |
ಮುಳ್ಳಿನ ಕಣೆಯೊಳೆ ಮಲಗಿಹನ ತಿವಿಗಡ || ಎಲವೆಲೊ || ೧೦೪ ||

ಕುರುಪತಿ ನಿನ್ನಯಕೆನ್ನೀರಾ | ಕುಡಿಯಲು | ಪರಿತಪಿಸುತಲಿಹೆ ಬಿಸಿಬಿಸಿಯನು ಬೀರಾ ||
ಅರಿತಿರು ಪೋದೊಡೆ ನಿನ್ನೂರಾ | ಪವನಜ |
ಮುರಿಯಲು ಕಾದಿಹನೀಕಡೆಗವಬಾರಾ || ಎಲವೆಲೊ || ೧೦೫ ||

**ಕಂದ**

ಮರುಳಿನ ಮಾತಿನೊಳಿಲ್ಲಂ |
ಪುರುಳೆನುತವನೀಶ್ವರನಡಿಗೊಳಲಾ ಪ್ರಮಥಂ ||
ಕರೆದಾರ್ಭಟಿಸುತಲೆಂದುದು |
ಮರುಳಂ ಪೇಳಾರ್ದುರುಳನೆ ನಮ್ಮಿರ್ವರೊಳಂ || ೧೦೬ ||

**ರಾಗ ಶಂಕರಾಭರಣ ಝುಂಪೆತಾಳ**

ವಿಷದ ಲಡ್ಡುಗೆಯಿಂದ | ಪೊಸಮಾಡದುರಿಯಿಂದ |
ನಸಿದೊಡಲ ಮೂಳೆಗಳ | ಪೆಸರಾಟದಿಂದಾ ||
ಶಶಿಮುಖಿಯ ಸೀರೆಯೊಳು | ಕಸುದೋರಿ ಕಪಟದೊಳು |
ಅಸುವಿಡಿದು ಜೀವಿಸಿದ | ಪುಸಿಗಾರಚೋರಾ || ೧೦೭ ||

ಆತತಾಯಿಗನೆ ಸುಡು | ವಾತಜನ ಪಗೆಯೊಳೀ |
ಭೀತಿಗೆಡೆಯಾದೆ ಖಲ | ಪೇತುಗನೆ ಮರುಳಾ ||
ಭೂತ ಕೋಟಿಗಳಿಂಗೆ | ನಾಥನೆಂದೆನಿಸುತೀ |
ಪೂತರಣ ಕಣದೊಳಿಹೆ | ನಾರ್ತಿರುಕಪೇಳೂ || ೧೦೮ ||

ಮರುಳೆಂದ ಮಾತಿಗಾ | ಕುರುಭೂಪ ಕಿವಿಗುಡದೆ |
ಭರದಿ ಮುಂದೈದುತಿರೆ | ಕರೆದಡ್ಡಗಟ್ಟೀ ||

ಮರುಳನಾರ್ಪೇಳಣ್ಣ | ಬರಿದೆಬಿಡೆ ಪೋಗದಿರ್ |
ಹರನಾಣೆ ಮೀರಿದೊಡೆ | ಮರುತಸುತನಾಣೇ || ೧೦೯ ||

**ಕಂದ**

ಶಿವನಾಣೆಗೆ ನಿಂದಿರೆ ಕೌ |
ರವನಾ ಪವಮಾನಿಯ ಪೆಸರೆತ್ತಲ್ ಭೂತಂ ||
ಜವನೊಲ್ಗದೆಗೊಳೆ ಸಂಜಯ |
ನವನಂ ಸಂತವಿಸುತಾ ದುರಂತವ ನೀಗಲ್ || ೧೧೦ ||

**ವಚನ ||** ಮತ್ತಾಸುಯೋಧನಂ, ಸಂಜಯನ ಕೈವಿಡಿದು ಮುಂದೆವರೆ ಬರೆ | ಕಡಿವಡೆದ ಕುಂಭಜನ ಮೃತದೇಹಮಲ್ಲಿರಲು, ಕಂಡು ಮನನೊಂದು, ಬಿಸುಸುಯ್ಯುತ್ತುಂ ||

**ರಾಗ ನೀಲಾಂಬರಿ ರೂಪಕತಾಳ**

ಗುರುವರ ನಿನಗೀ ವಿಧಿಹಾ | ಧುರದೊಳಗೊದಗಿತೆ ಶಿವಶಿವ |
ನರನಂತಿರಲಾ ಧೂರ್ಜಟಿ | ನೆರೆಯನು ಸಮರದಲೀ ||
ಕಿರಿದಾದುದೆ ಪುಣ್ಯದ ಫಲ | ಪಿರಿದಾಲಸ್ಯವ ತಾಳ್ದಿರೆ |
ಕರುಬರಭಾಗ್ಯದೆ ಸಾವಿದಿ | ತರಿಯಲು ನಿಮಗಾಯ್ತೇ || ೧೧೧ ||

ಬಲವೆಂದೆರಗುತೆ ಕುರುನೃಪ | ಬಳಿವಿಡಿದ್ಯೆತರೆ ಸಮರದಿ |
ಛಲದಿಂಕಾದುತ ನಿಜಭುಜ | ಬಲವನು ಕಾಣಿಸಿದಾ ||
ಪೊಳೆಯುವರುಣಜಲಸರಸಿಯ | ಚೆಲುವಿನ ಕೆಂದಾವರೆಯೆನೆ |
ಬೆಳಗುತೆ ವಿಜಯಾತ್ಮಜನಿರೆ | ಕುಲಕಂಠೀರವನೂ || ೧೧೨ ||

**ವಚನ ||** ಆ ಕಡುಗಲಿಯಪ್ಪಭಿಮನ್ಯು ಕುಮಾರನ ಕಳೇಬರಮಂ ಕಂಡಾಸುಯೋಧನಂ ||

**ರಾಗ ಕಾಂಭೋಜಿ ಅಷ್ಟತಾಳ**
ಸರಿಗಾಣೆ ನಿನಗಯ್ಯ ಮಗನೇ | ಆಹ | ಕುರುವಂಶವಿಯದಭಾಸ್ಕರನೇ || ಪಲ್ಲವಿ ||

ಪಲರಿರ್ದು ಕಾದಿದಡಳುಕದೆಸಮರದಿ |
ತಲೆಯಗಡಿದ್ಯೆ ನಿನ್ನ ಪೆತ್ತಳ್ | ಮೊಲೆಯವೆತ್ತಳದೇನು ಧನ್ಯಳೊ || ಸರಿಗಾಣೆ || ೧೧೩ ||

ಇನಿತೊಂದು ಕೃತಕಾರ್ಯಭರನ | ಸಾ | ವೆಣಿಸಿರ್ಪುದಹ ನಿನ್ನ ತೆರನ ||
ಗುಣರನ್ನ ನಿಜಸಾಹಸ್ಯೆಕದೊಳೊದಗಲಿ |
ಕೊನೆಯಮರಣವದೆನುತ ಪ್ರಾರ್ಥಿಪೆ | ತನಯ ನಿನ್ನಡಿಗೆರಗಿ ಮನದೊಳು || ಸರಿಗಾಣೆ || ೧೧೪ ||

**ವಚನ ||** ಅಂತಭಿಮನ್ಯುಗೆ ಕೆಯ್ಗಳ ಮುಗಿದುಬರೆ ಮುಂದಾಸನ್ನ ಪ್ರದೇಶದೊಳ್ ತನ್ನ ಕುಮಾರನಪ್ಪ ಲಕ್ಷ್ಮಣಂ ಕೆಡೆದಿರೆ ಕಾಣುತ್ತುಂ ಶೋಕೋದ್ರೇಕನಾಗಿ ಧೊಪ್ಪನೆ ಕೆಡೆದುಂ ||

**ರಾಗ ನೀಲಾಂಬರಿ ಆದಿತಾಳ**

ಹಾಮಗನೇ ನೀ ಮಡಿದೆಯಯ್ಯೋ | ಕಾಮಸನ್ನಿಭರುಚಿರಾ ||
ಸೋಮವಂಶದ ಸಿರಿಯೆನೀಹಾ | ಪ್ರೇಮವಿಲ್ಲದೆ ಪೋದೇ || ಹಾ ಮಗನೇ || ೧೧೫ ||

ಎನಗೆ ನೀಜಲ ದಾನವೀಯದೇ | ನಿನಗೆ ನಾಕುಡಲಾಯ್ತೇ ||
ತನುಜನೆನಗೇ ಸಾವಕಾಲಕೇ | ಇನಿತುಗತಿಯೇಕಾಯ್ತೋ || ಹಾಮಗನೇ || ೧೧೬ ||

**ಕಂದ**

ಎನ್ನಯ ದೃಗ್ಜಲದಿಂದಂ |
ರನ್ನನೆ ನಿನಗಂತಿಮಜಲದಾನವನೀವೆಂ ||
ಪೊನ್ನಿನ ಮಣಿಪಾಪಿಯೊಳಂ |
ಚೆನ್ನಿಹುದೆಂತೈಕಳಂಕಿತೀಭವದಾಟಂ  || ೧೧೭ ||

**ವಾರ್ಧಕ**

ಎಂದಲ್ಲಿ ನಿಲಲಾರದಾನೃಪಂನೊಂದು ಮನ |
ದಂದುಗದೆ ಕಂದವೃಷಸೇನಗಂ ಮರುಗುತ್ತೆ |
ಮುಂದೆ ಬರೆ ಧರ್ಮಜನ ಶರಹತಿಗೆ ಮಡಿದಿರ್ದ ಮಾದ್ರೇಶನಂ ಕಂಡನೂ ||
ಪಿಂದಲ್ಲಿ ನರನಶರಕೊಡಲಿತ್ತ ಭಗದತ್ತ |
ಸೈಂಧವರ್ಬದಿಯೊಳಿರೆ ಸಹದೇವಖಡ್ಗೋಗ |
ದಿಂದಳಿದ ಶಕುನಿಯಂ ನಕುಲಾಂಕನುರುಕೊಂತಕಸುವಿತ್ತದಂದ ಶುಕರಾ || ೧೧೮ ||

ಪೆಣಗಳಂ ದಿಟ್ಟಿಸುತೆ ಸಂಶಪ್ತಕಾದಿಗಳ |
ನೆನೆದೊರ್ಮೆ ಬಿಸುಸುಯ್ದು ಮರುಕ ಮಿಗೆ ಕೌರವಂ |
ರಣದೆ ಹಾ ಲೋಕೈಕವೀರರಿರ ನಿಮಗೊದಗಿದೀಭವಣಿತನ್ನದೆನುತಾ ||
ಮಣಿದವಂಕಂಬನಿಯ ನೀರಿತ್ತು ಮುಂದೈದೆ |
ಕಣದೆಡೆಯ ಕೌತುಕವ ತೋರಿಸಿದ ಸಂಜಯಂ |
ಜನಪಾಲ ನೋಡಿಲ್ಲಿ ಮರುತಸುತ ನಿನ್ನನುಜನಂ ಸೀಳ್ದರೌದ್ರರಸವಾ || ೧೧೯ ||

**ವಚನ ||** ಆಗಳ್ ಕೌರವನದನೀಕ್ಷಿಸೆ ||

**ರಾಗ ತೊಡಿ ರೂಪಕತಾಳ**

ಸೋದರನ ಕಣ್ಣುಗಳ ಕಾಗೆಗಳ್ ಕರ್ದುಂಕೆ | ಛೇದಿಸಲು ಪರ್ದುಗಳ್ಕರುಳಾ ||
ಭೇದಿಸುತ್ತಿರೆ ನಾಯಿ ಸೀಳ್ದೆತ್ತಿ ಸ್ನಾಯುಗಳ | ವಾದಿಸುತ್ತಿರೆ ಭೂತ ನಿಚಯಾ || ೧೨೦ ||

ಬೆನ್ನೆಲುಬ ಬೇತಾಳರೆಳೆದೊಟ್ಟ ರಕ್ಕಸಿಯ | ರಿನ್ನೇನು ತಮಗೆಂದು ಭರದೀ ||
ಮುನ್ನಾಯ್ದು ಕೆನ್ನೆಯನು ಕತ್ತಿಯೊಳ್ಕಡಿದಿಡುವ | ಬನ್ನಗಳ ಕಂಡಲ್ಲಿ ನೃಪತೀ || ೧೨೧ ||

**ರಾಗ ಬೇಗಡೆ ತ್ರಿವುಡೆತಾಳ**

ಬಾಲದುಶ್ಶ್ಯಾಸನನೆ ಹಾ | ಅನುಜ ಸೌ | ಶೀಲ ಮೂರುತಿಯೇ ಹಾ || ಪಲ್ಲವಿ ||

ತಾಯ ಮೊಲೆಯನು | ಕುಡಿದೆನಾಮೊದ | ಲಯ್ಯೋನೀಬಳಿಕದನೀಂಟಿದೆ |
ಪೇಯಸೋಮಾವೃತವನಾಸವಿ | ದೀಯೆನೀನದನುಂಡ ಮರಿಯೈ || ಅ. ಪಲ್ಲವಿ ||

ಆವಕಾರ್ಯವ ಪೇಳಲು | ಒಡನೆಧೈರ್ಯದಿ | ಸಾವಿಗಂಜದೆ ಗೈಯುವ ||
ಭಾವಶುದ್ಧಿಯ ವೀರಸೋದರ | ವಿನಯಮತಿ | ಸಾವಿಗೆನ್ನಿಂ ಮುನ್ನ ಸಂದೈ | ಸಹಜಹಾ |
ಪಾವಮಾನಿಯೊಳೊದಗಿಧುರದಲಿ | ಮಡಿದೆಯಾ | ಸಾವು ನಿನಗಲ್ಲೆನಗೆ ಸಮನಿಸಿ |
ತಾವವಿಧದಿಂದಾಡದವನನು | ಭೂವಲಯದೊಳಗಿಲ್ಲವೆನಿಸುತೆ |
ಕೋವಿದನೆ ನಿನಗಣ್ಣ ನೆನಿಸುವೆ || ಬಾಲ ದುಶ್ಶ್ಯಾಸನನೆ || ೧೨೨ ||

ನೋಡಲಿಕಾಗದೆ ಜನಪಾ | ರಣದಕಣದೆ | ಪಾಡಳಿದೈತರೆ ನೆಲದೇ |
ಮೂಡಲಾಸೆಯನೇಸರಂಬಿನ | ವೀರಭಟ | ಜೋಡುಗಾಣದ ದಾನಚಿಂತಾ | ಮಣಿಯಂಗ |
ನಾಡಿನಗ್ಗದ ಮಂಗಳಾತ್ಮಕ | ನಂಗವಿರೆ | ರೂಢಿಪತಿಗನುಗಾಲ ಸೇವೆಯ |
ಮಾಡುವಾಳ್ತನದಿರವ ಕಾಣಿಸಿ | ನೋಡುವನೆ ತಾನೆಂಬ ಕರ್ಣನ |
ನೋಡಿದನುಕುರುಧಾರುಣೀಶ್ವರ || ಬಾಲದುಶ್ಶ್ಯಾಸನನೆ || ೧೨೩ ||

**ವಚನ ||** ಅಂತಿರ್ದವನಿವಂ ಶೋಕಾನಲದಹ್ಯಮಾನಾಂತಃಕರಣನಾಗಿರ್ದ ಸುಯೋಧನಂ ನೋಡಿ ||

**ರಾಗ ನೀಲಾಂಬರಿ ರೂಪಕತಾಳ**

ಶಿವ ಶಿವ ಹಾಸಖ ಸೂರ್ಯಜ | ಭವಣಿಯೆ ನಿನಗೀರಣಕಣ |
ದವನಿಯೊಳೆನ್ನಯ ಪಾಪದ | ನವಲಿಪಿಶಾಸನವೇ ||
ಭವರಕೆದುಶ್ಶ್ಯಾಸನ ಬಳಿ | ಕಿರ್ವರು ನಾವಿರ್ದವು ಗಡ |
ಜವನೊಯ್ದನು ಸೋದರನನು | ಶಿವನಿನಗಿನಿತಾಯ್ತೇ || ೧೨೪ ||

ನೀನಿಲ್ಲದೆ ಬಾಳ್ವೆನೆ ಪೇಳ್ | ನೀನಿಲ್ಲದೆ ನೆಲನಿದನಾಳ್ವೆನೆ |
ನೀನಿಲ್ಲದೆ ಸಂಧಿಯೆ | ಮಾನಿತಹಾಕರ್ಣಾ ||
ನಿನ್ನಯ ಮಗ ವೃಷಸೇನನು | ಎನ್ನಯ ಮಗ ಲಕ್ಷಣನೀ |
ಚನ್ನಿಗರಳಿವಿನ ಮರುಕದೊ | ಳೆನ್ನನು ಸಂತವಿಸೇ || ೧೨೫ ||

ನೀನಿಲ್ಲದೆ ಪೆರತೊರ್ವರ | ಕಾಣೆನು ಹಾಸಖ ಬಂದಿಹೆ |
ನಾನಿದೊ ನಿನ್ನನು ಕಾಣಲು | ಗುಣವನಧಿಯೆಕಣಾ ||

ನಿನಗಪಮಾನದೆಪಳಿದೆನೊ | ಮೇಣ್ ನಡವಳಿತೆಯ ತಪ್ಪಿದೆ |
ನೋ ನಿನಗೇತರೊಳಾದುದು | ತನ್ನೊಡನೀ ಮುನಿಸೂ || ೧೧೬ ||

ಆನರಿವೆನು ಪೃಥೆಯರಿವಳು | ದಾನವರಿಪು ತಾನರಿವನು |
ಮೇಣಿದರತಿಳಿದಪನ ಕು | ಲಾನುಜನಿದ ಬಲ್ಲಾ ||
ನೀನಾರ್ಗೆಂಬುದ ನರಿಯರು | ಮಾನವಮಹಿತರು ದಿನಪಜ |
ನೀನರಸಿರ್ದುದನೂ || ೧೧೭ ||

**ಕಂದ**

ಪರಶುಧರಂ ಚಕ್ರಧರಂ |
ಸುರಪತಿ ಭೂಕಾಂತೆ ಕೊಂತಿಯೆಂದೀ ಪೇಳ್ದ ||
ಯ್ವರೆಕೂಡಿ ನಿನ್ನ ಕೊಂದರ್ ||
ನರನೊರ್ವನೆ ಕೊಂದನಲ್ಲನಂಗಾಧಿಪತೀ || ೧೧೮ ||

**ವಚನ ||** ಎಂದವಗಂ ಶೋಕದೆ ಕಣ್ಣೀರಿತ್ತು ಮುಂದೈತರ್ಪೆಡೆಯೊಳ್ ಭೀಷ್ಮರಿತ್ತಲಿರ್ದಪರೆಂದು ಸಂಜಯಂ ಕೆಯ್ ಮುಗಿಯೆ, ನದೀನಂದನಂಗೆರಗಲೆಂದು ಸುಯೋಧನನೆಯ್ದೆವಂದಜ್ಜನಂ ಕಾಣಲ್ ||

**ರಾಗ ನಾಟಿ ಝಂಪೆತಾಳ**

ಕವಲಂಬೆ ತಲೆಗಿಂಬು | ಕವಲುಡೆಯೆ ಮಂಚಮಾ |
ದವನಿಯೊಳು ಶರಶಯನ ಮುಕ್ತಾತ್ಮನಾಗೀ || ೧೧೯ ||

ಮಲಗಿರುವ ಯೋಗೀಂದ್ರ | ಫಲದಂಕ ಭೀಷ್ಮನಿರೆ |
ಕಳವಳಿಸೆ ಕೌರವನ ಹೃತ್ಕರಣ ಬಿಗಿದೂ || ೧೨೦ ||

ದೇವನದಿಯಣುಗಹಾ | ಕೋವಿದನೆ ನೀವೆಂದ |
ಭಾವಶುದ್ಧಿಯ ಮಾತ ಭಾವಿಸದೆ ಪೋದೇ || ೧೨೧ ||

ಮಾರುತಿಯ ಪಗೆಯಿಂದ | ಮಾರಿದೆನು ನಾ ನಿಮಗೆ |
ಸೇರಿತರ್ಜುನಗೆ ಮಹಭಾರತದ ಜಯವೂ || ೧೨೨ ||

**ವಚನ ||** ಎಂಬುದ ನಾಲಿಸಿ ಮಂದಾಕಿನೀ ಸುತಂ ಕಣ್ದೆರೆಯಲಾಗಂ ||

**ಕಂದ**

ಬಾಗುತೆ ಸಂಜಯನಾಗಳ್ |
ಬೇಗನೆ ಮಹದಾತ್ಮನ ಬಳಿಗಂ ಸಾರ್ದೊಡನಂ ||

ಯೋಗಿಯ ಕರ್ಣದೊಳುಸುರಿದ |
ನಾಗಮಿಸಿಹ ಕೌರವೇಶ್ವರನ ದುಃಸ್ಥಿತಿಯಂ || ೧೩೩ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಕೇಳಿ ಯೋಗವನಿಳುಹೆ ಭೀಷ್ಮನು | ಮೌಳಿಯನು ಪದಕಿಟ್ಟು ನಮಿಸಿದ |
ಶೀಲವಂತನ ಪರಸಿಮೊಮ್ಮನ | ತೋಳನೆಗೆದೊಡನಪ್ಪುತಾ | ಪೇಳ್ದನವಗೇ || ೧೩೪ ||

ಪಟ್ಟದಾನೆಯನೇರಿ ವಿಭವದಿ | ನೆಟ್ಟನೆತ್ತಿದ ಧವಳಛತ್ರದ |
ಮಟ್ಟಕೆಸೆಯುವ ಶುಭ್ರಚಾಮರ | ದೊಟ್ಟೆಗೆಯ್ತಹ ಭಾಗ್ಯವಾ | ಬಿಟ್ಟೆಯೇನೈ || ೧೩೫ ||

ತಾತ ನಿನ್ನಯ ಸಾಧ್ವಿಯರುಸಲೆ | ಮಾತ ಮನ್ನಿಪ ಸುಭಟ ತಿಂಥಿಣಿ |
ಗೀತವಾದ್ಯಗಳಿಂದ ಕೂಡಿದ | ಕೀರ್ತಿಯಾಸನ ತೊರೆದೆಯಾ | ಪೂರ್ತಿಯಾಗೀ || ೧೩೬ ||

ಸುತಸಹೋದರ ಶತಕವೆಲ್ಲಿದೆ | ಚತುರ ನಿನ್ನಯ ಬಲವದೆಲ್ಲಿದೆ |
ಸತತ ಸೇವಿಪ ಭೃತ್ಯರಿಹರೇ | ಪಿತನಿಗೇನನು ಗೈದೆ ಹಾ | ಗತಿಯೆ ನಿನ್ನ || ೧೩೭ ||

ಎಂದು ಕಂಬನಿಗರೆಯೆ ಕೌರವ | ನೆಂದನಜ್ಜಗೆ ಭಾವಿತಾತ್ಮರು |
ನೊಂದು ಕೂಗುವುದುಂಟೆ ಮನದೊಳು | ಸಂದ ವಿಷಯಂಗಳನು ಭಾವಿಸಿ | ಕುಂದದಿಹುದೂ || ೧೩೮ ||

**ವಚನ ||** ಎನೆ ಕೇಳ್ದಾಗಳೆ ಭೀಷ್ಮಂ ಮರುಗುತಲವನೊಡನಿಂತೆಂದಂ ||

**ವಾರ್ಧಕ**

ಮಗನೆ ಕೇಳ್ ಕಮಲಜನ ಮಾನಸದೊಳವತರಿಸಿ |
ಬಗೆಗೊಂಡ ಸಪ್ತರ್ಷಿ ವರ್ಗದೊಳಗತ್ರಿಗಂ |
ಮಗನಾಗೆ ಚಂದಿರಂ ಬಳಿಕವನ ದಿಸೆಯಿಂದಲಾಯ್ತೆಮ್ಮ ಭರತ ವಂಶಾ ||
ಪಗೆಯಿಲ್ಲದೀತಿರೆಯ ಕುರುಹಸ್ತಿ ಮೊದಲಾದ |
ವಿಗಡರತಿಕೆಳೆಯಿಂದ ಮುನ್ನಾಳ್ದರೆಲೆ ಮಗನೆ |
ಜಗಳವಿದ ನೀ ತೊರೆದು ಪಾಂಡವರನೊಡಗೂಡಿ ಬಾಳಯ್ಯ ಕೀರ್ತಿಯಿಂದಾ || ೧೩೯ ||

**ವಚನ ||** ಎಂಬುದನಾಲಿಸಿ ಕೌರವಂಕೆಯ್ ಮುಗಿದಜ್ಜಗಂ ||

**ರಾಗ ಕೇದಾರಗೌಳ ಝಂಪೆತಾಳ**

ಸುರನದಿತನುಜ ಕೇಳೂ | ನಿನ್ನೊಳಾ | ನೊರೆಯುವುದಸಲೆಕೃಪಾಳೂ ||
ಧುರದೊಳೆನಗಿಲ್ಲ ಶಂಕೇ | ಚಾಗಿಗೇನ್ | ಬೆರಗಿಹುದೆಗೊಳ್ಳೆನಂಕೇ || ೧೪೦ ||

ನೆಲಕಿರಿವುದಿಲ್ಲ ತಾತಾ | ಕೊಂತಿಜರ | ಛಲಕಿರಿವೆ ಸುಪ್ರಖ್ಯಾತಾ ||
ಜಲಜಸಖನಾತ್ಮಜನನೂ | ಬಲಿಗೊಟ್ಟು | ಕೊಲಿಸಿದೀ ನೆಲದೊಳಾನೂ || ೧೪೧ ||

ಪುದುವಾಳೆ ಮತವಿದಲ್ಲಾ | ಅನುಜರಿರೆ | ಕದನವನುಗೆಯ್ದು ಮಲ್ಲಾ ||
ಬೆದರಿದನದೆಂಬ ಸೊಲ್ಲಾ | ಕೇಳ್ದಿರೆನು | ಮದಮುಖರ ನಗೆಯ ಗುಲ್ಲಾ || ೧೪೨ ||

ಅನುಜರೊಡಗೂಡಿ ಮೆರೆವಾ | ಧರ್ಮಜನೊ | ಳನುಜವ್ಯರಹಿತನಿರುವಾ ||
ತನಗಹುದೆ ಸಂಧಿ ತಾತಾ | ಸಮ್ಮತವೆ | ಎನಗರುಹುನಯದ ಮಾತಾ || ೧೪೩ ||

ನೂರ್ವರನುಜಾತರಿನ್ನಾ | ಬಳಿಸಂದ ನೂರ್ವರೆಳೆ ಮಕ್ಕಳೆನ್ನಾ ||
ಉರ್ವರೆಯೊಳಸುವನೀಗೇ | ಬಾಳ್ವುದಾ | ನೊರ್ವನಿದುಹಿತವೆ ನಿಮಗೆ || ೧೪೪ ||

ಯೆನಗಾಗಿ ಶರತಲ್ಪವಾ | ಕೆಯ್‌ಕೊಂಡ | ಮುನಿಮಾನ್ಯನಿರದ ನೆಲವಾ ||
ಕನಸಿನೊಳಗಾಳ್ವನಲ್ಲಾ | ಗುರುವಿಲ್ಲ | ತನುವಿಡಿಯೆ ಬಾಳ್ವೆಸಲ್ಲಾ || ೧೪೫ ||

**ವಚನ ||** ಕೌರವನಿಂತೆನೆ ಗಂಗಾತನೂಜಂ ಕೇಳ್ದಾಲೋಚಿಸಿ ಮತ್ತಂ ||

**ಕಂದ**

ಶರಮೊಂದಂತೆಗೆದುನಿಜೋ |
ದರದಿಂಲೆಕ್ಕಣಿಕೆ ಮಾಡಿಗಜಮದ ಮಸಿಯಂ ||
ತರಿಸಿಪತಾಕಾಪಟದೊಳ್ |
ಬರೆದಿಟ್ಟದನಂಧನೃಪತಿಗಾಸಿಂಧುಮತಂ || ೧೪೬ ||

**ವಚನ ||** ಸಂಜಯನ ನಿಂತು ಕಳುಹಲ್ಕುರುಭೂಪಂ, ತಾನಾ ಲೋಚಿಸುತಜ್ಜನೊಳಿಂತೆಂದಂ ||

**ರಾಗ ಸಾಂಗತ್ಯ ರೂಪಕತಾಳ**

ಸಂಧಾನವಿನಿತೆಂಬುದಕೆ ಮಾಡಿ ಇತಿಶ್ರೀಯ | ಸಂಧಿಸಲುಬಳಿಯಿರ್ಪುದೆರಡೂ ||
ಕುಂದಿಲ್ಲಹತನಾಗೆ ಸುರಲೋಕಜಿತನಾಗೆ | ನಿಂದಿರುವತಿರೆಯೆನ್ನದೈಸೇ || ೧೪೭ ||

ಭುಜದಂಡದೊಳಗೆನ್ನ ಗದೆಯಿರ್ಪತನಕಾನು | ನಿಜಶೌರ್ಯದಿಂಕಾದಿ ರಣದೀ ||
ವಿಜಿತಪೌರುಷನಪ್ಪೆ ಛಲಕೆದೂಷಣಮಿಲ್ಲ || ರಜತೇಶ ರಕ್ಷಿಸುವನೆನ್ನಾ || ೧೪೮ ||

ಭಳಿರೆಂದು ಕೌರವನ ನಿಜಮತಕೆತಲೆದೂಗಿ | ಕುಲತಿಲಕನೊಡನೆಂದ ಭೀಷ್ಮ ||
ಕಲಿತನದೊಳೇಕಾಂಗ ವೀರತ್ವದೊಳ್ನಿನ್ನ | ನಿಳಿಗೈವ ಭಟರಿಲ್ಲ ಜಗದೀ || ೧೪೯ ||

ಬಲದೇವಬರ್ಪನ್ನಕಾದಿರ್ದು ಬಳಿಕನೀ | ನುಳಿದಿರ್ಪಕೃತವರ್ಮ ಕೃಪರ ||
ನೆಲೆಯರಿತುಗುರುಸುತನ ಮತವಿಡಿದು ಧುರವೆಸಗು | ಪಳಿವಿಲ್ಲ ಕೊನೆಗೊಂದ ಪೇಳ್ವೇ || ೧೫೦ ||

**ಭಾಮಿನಿ**

ಶಶಿಕುಲಾನ್ವಯತಿಲಕ ಕೇಳ್ಳೈ |
ಪೆಸರವೈಶಂಪಾಯನದ ಸರ |
ಮೆಸೆವುದೀ ಕುರುಭೂಮಿಗುತ್ತರ ದಿಸೆಯಭಾಗದಲಿ ||
ಪಸರದಿಂದಿನ ನಿಶಿಯನದರೊಳು |
ಕುಸಿತುಕಳೆನಿನಗೀವೆಸಿದ್ಧಿಯ |
ಬೆಸುಪಮಂತ್ರವನೆನುತ ವಕಿವಿಯೊಳಗೊರೆಯೆ ಕೆಯ್‌ಕೊಳುತಾ || ೧೫೧ ||

**ರಾಗ ಕೇದಾರಗೌಳ ತ್ರಿವುಡೆತಾಳ**

ಭರದೊಳಜ್ಜನ ಪದಕೆವಂದಿಸಿ | ಪೊರಟನಾಬಳಿವಿಡಿದು ಮುಂದೆಯ್ |
ತರುತೆ ಕಂಡನು ಮೆರೆವ ಕೊಳನನು | ಕೌರವೇಂದ್ರ || ೧೫೨ ||

ಬಿರಿದ ಕಮಲದೆ ಮೊರೆವ ತುಂಬಿಯ | ಸಿರಿಯಮಾಡದೆ ಚರಿಸುವಂಚೆಯ |
ಸರದತಡಿಗೆಯ್ ತಂದುಜನಪತಿ | ಹರುಷದಿಂದಾ || ೧೫೩ ||

**ಕಂದ**

ಕರಚರಣಂಗಳತೊಳೆದಾ |
ಚರಿಸುತಲಾಚಮನಮಂತ್ರತೀರ್ಥೋಪಾಯಂ |
ಪೆರಗಡಿಯಿನ್ನೀರ್ಗಿಳಿಯುತೆ |
ಸರಸಿಜವಿಷ್ಟರಮನಾಂತಿರೆ ತಪದೊಳತ್ತಂ || ೧೫೪ ||

**ದ್ವಿತೀಯಾಂಕ ಸಂಪೂರ್ಣಂ**

* * *

**ತೃತೀಯಾಂಕ ಗರ್ಭಸಂಧಿ**
[ಧರ್ಮರಾಯ ಮತ್ತು ಶ್ರೀಕೃಷ್ಣರ ಪ್ರವೇಶ-ಭೀಮನೂ ಅಲ್ಲಿರುವನು]

**ರಾಗ ಭೈರವಿ ಝಂಪೆತಾಳ**

ಇಳೆಯರಸ ಮಾದ್ರೇಶ | ನಳಿದ ಬಳಿಕೆಲ್ಲಿಯುಂ |
ಛಲದಂಕ ಕೌರವನ | ನೆಲೆಯರಿಯದಿರಲೂ || ೧೫೫ ||

ನಳಿನಾಕ್ಷನೊಡನೆಂದ | ಕಳವಳಿಸಿ ಧರ್ಮಜನು |
ಕೊಳುಗುಳಕೆ ದಾರಿಯೇನ್ | ಪೇಳೋಡೆಯ ಹರಿಯೇ || ೧೫೬ ||

ಕದನದೊಳು ದಾಟಿದುದು | ಪದಿನೇಳು ದಿನದವಧಿ |
ಹದನವಿನಿತೇಕಾಯ್ತು | ಮುದಮುಖನ ಕಾಣೇ || ೧೫೭ ||

ಎಲ್ಲಿ ಪೋದನೊ ಜಾಣ | ಸೊಲ್ಲಿಲ್ಲ ಕೌರವನ |
ಬಲ್ಲಿದನೆ ನೀ ಪೇಳು | ಯೆಲ್ಲವನು ನಮಗೇ || ೧೫೮ ||

ಎನೆ ಕೇಳುತಸುರಾರಿ | ಜನಪತಿಗೆ ನಗುತೆಂದ |
ಮನಕಿನಿತು ನೋವೇಕೆ | ನಿನಗರಸ ಬರಿದೇ || ೧೫೯ ||

**ಭಾಮಿನಿ**

ಜೀವದಾಶೆಯೊಳಡಗಿಕೊಂಡಿಹ |
ಪಾವಮಾನಿಯ ಭಯದೊಳೆತ್ತಲೊ |
ಸಾವಕಾಲದೊಳಮಮ ಕೌರವರಾಯಗಿನಿತಾಯ್ತೇ ||
ಕಾವುದೊಳ್ಳಿತು ಬಂದನಾದೊಡೆ |
ನೀವು ಸೋದರರೊಂದೆ ಬುದ್ಧಿಯೊ |
ಓೋವಿಕೊಂಡಿಹುದೆನಲು ಕೇಳುತೆ ಭೀಮನಿಂತೆಂದಾ || ೧೬೦ ||

**ರಾಗ ಕೇತಾರಗೌಳ ತ್ರಿವುಡೆತಾಳ**

ದೇವ ಕಂಸಾಂತಕನೆ ನಿನ್ನಯ | ಭಾವವೇನದತಿಳಿಯದಾದೆನು |
ಸಾವು ಬಾರದೆ ಕೌರವೇಂದ್ರಗೆ | ಕಾವುದಾರಾ || ೧೬೧ ||

ಅಂದು ಕೃಷ್ಣೆಯ ಮಾನಭಂಗದೊ | ಳೆಂದ ಭಾಷೆಯನರಿಯದಾದಿರೆ ||
ಕಂದಿದಾನನ ಮಾಣ್ದುದಿಲ್ಲವ | ಳಂದವರಿತೂ || ೧೬೨ ||

ಯೇನಿದೇತರರಾಜಕಾರ್ಯವ | ಮಾನನಿಧಿನೀ ಪೇಳ್ದೆಯಣ್ಣಗೆ |
ಹೀನಕೌರವನೆತ್ತಲಡಗಿದ | ಕಾಣೆನವನಾ || ೧೬೩ ||

ಲೋಕ ಪದಿನಾಲ್ಕೆನಿಪ ಭುವನಾ | ನೀಕವಿದರೊಳು ಶರಧಿನಾಲ್ಕರೊ |
ಳಾಕೆವಾಳನದಿಲ್ಲ ನಿಶ್ಚಯ | ಸಾಕುಸಹಸಾ || ೧೬೪ ||

ಚರಮಚರದೊಳಗಿರ್ಪ ಭುವನದೊ | ಳುರಗಕೇತನ ಹರಿಹರಾದ್ಯರ |
ಮರೆಯಗೊಳ್ಳಲಿ ದುರುಳನವನನು | ತರಿಯದಿರೆನೂ || ೧೬೫ ||

**ರಾಗ ಕೇದಾರಗೌಳ ಅಷ್ಟತಾಳ**

ಕಾಲ ಸಂಭವ ಧರ್ಮಶೀಲ ಸದಾಶ್ರಯ | ಭೂಲಲಾಮನೆ ಧರ್ಮಜಾ ||
ಲೋಲಜಾಂಬಕಿ ಬಾಲೆಯಗ್ನಿಜೆ ನವೆದಳು | ಕೇಳ್ವರಿಲ್ಲದೆಯಗ್ರಜಾ || ೧೬೬ ||

ಕರುಣಿಯೆಂಬರು ನಿನ್ನ ಕರುಣವಿದೇನಹ | ತುರುಬಕಟ್ಟಿಸಬೇಡವೇ ||
ಇರಲಿ ನಿನ್ನಯ ಮಾತ ಮೀರುವೆ ನೋಡಿಕೊ | ತರಿವೆ ಧೂರ್ತನನೀಗಳೆ || ೧೬೭ ||

ಹಿರಿಯ ಧರ್ಮಜನೆಂಬ ಗುರುತನವಿರಿಸೆನು | ದುರುಳನಾತನ ಕೊಲ್ಲದೇ ||
ತುರುಬಿಗಿಕ್ಕಿದ ಕೈಯ್ಯಕರುಬನ ಸೀಳಿದೆ | ಮರೆಯೆನೀತನ ಗೆಲ್ಲದೇ || ೧೬೮ ||

**ವಚನ ||** ಇಂತರುಹುತವರ್ಗಂ ಪೊಡಮಟ್ಟತಿ ಜವದೊಳ್ಭೀಮಂ ಪರಿವಂಬಂ ಪಾರ್ದು ಪಿಡಿವಂತೆ, ರಣಕಣಮಂತ್ವರಿತದೆ, ಶೋಧಿಸಿ ಕುರುಪತಿಯಂ ಕಾಣದೆ ಮತ್ತಂ, ದುರ್ಯೋಧನನ ಶಿಬಿರದೆಡೆಗಂ ಪಾರ್ದಲ್ಲಿಯ ಕಾವಲಭಟರಂ ಕಂಡಾಗಳ್, ಪಲ್ಮೊರೆದಿಂತೆಂದ ||

**ರಾಗ ಕೇತಾರಗೌಳ ಝಂಪೆತಾಳ**

ಎಲ್ಲಿರುವ ದುರ್ಯೋಧನ | ಜತುಗೃಹದ | ಬಲ್ಲಿದನು ಕಾಣೆನವನಾ ||
ಎಲ್ಲಿರುವನಂಧಸುತನೂ | ನಂಜುಣಿಸಿ | ಕೊಲ್ಲಿಸುವ ತೋರಿಸವನಾ || ೧೬೯ ||

ಎಲ್ಲಿರುವ ಪಗಡೆಗಾರಾ | ಕರೆಯವನ | ಸೊಲ್ಲಿಸಲಿಕಿದೆ ವಿಚಾರಾ ||
ಎಲ್ಲಿರುವ ನಾರಿಮಣಿಯಾ | ಉಟ್ಟುಡೆಯ | ತಲ್ಲಣಿಸೆಪೇಳ್ದರಾಯಾ || ೧೭೦ ||

ಸುತಸೋದರಾದಿಗಳನೂ | ಬಲಿಗೊಟ್ಟ | ಮತಿವಿಕಳ ಕೌರವನನೂ ||
ಹಿತದಿಂದ ತೋರೊಬೇಗಾ | ಉರಿಗೊಡುವೆ | ಜೊತೆಗೊಳಿಸಿ ಶಿಬಿರಕೀಗಾ || ೧೭೧ ||

**ವಚನ ||** ಎಂಬುದ ಕೇಳ್ದಾಗಳೆ ಗಾಂಧಾರಿಯು ಧೃತರಾಷ್ಟ್ರನೊಡವೆರಸುತ್ತಂ
ಬಂದಲ್ಲಿಗೆ ಭೀಮನಂ ಕಾಣುತ್ತೆ ಬೆದರ್ದು ||

**ರಾಗ ನೀಲಾಂಬರಿ ರೂಪಕತಾಳ**

ಯೆನ್ನಯ ಕುವರರು ನೂರ್ವರ | ಮಣ್ಣಿಗೆ ಕೂಡಿಸುತೆಮ್ಮನು ||
ತಿನ್ನಲು ಬಂದೆಯ ಪಾಪಿಯೆ | ನಿನ್ನೆದೆ ಸುಡದಿಹುದೇ || ಯೆನ್ನ || ೧೭೨ ||

**ರಾಗ ಕೇತಾರಗೌಳ ತ್ರಿವುಡೆತಾಳ**
ಇನಿತು ಮಕ್ಕಳು ಸತ್ತಡಳಿಯದೆ | ತನುವಿಡಿದು ಬಾಳ್ದಿರ್ಪನಿಮ್ಮನು |
ಕನಲಿನೋಡದೆ ಜವನೆ ಬಿಟ್ಟಿರೆ | ತನಗದೇಕೇ || ೧೭೩ ||

**ರಾಗ ನೀಲಾಂಬರಿ ರೂಪಕತಾಳ**

ನರಭಕ್ಷಕರಿದುವರೆಗೀ | ಕುರುವಂಶದಿ ಜನಿಸಿದುದಾ |
ನರಿಯೆನು ಶಿವಶಿವ ಧೂರ್ತರ | ಗುರು ಪೈಶಾಚಿಕನೇ || ೧೭೪ ||

**ರಾಗ ಕೇತಾರಗೌಳ ತ್ರಿವುಡೆತಾಳ**
ಕುರಿಗೆ ಧಾರೆಯನೆರೆದ ನಿನ್ನೊಳು | ಮರಿಗಳಾದರು ಪಲವು ಕುರಿಗಳು |
ಸರಿಯೆ ನಮ್ಮಯ ವಂಶಧರ್ಮಕೆ | ತರಿದೆನವರಾ || ೧೭೫ ||

**ರಾಗ ನೀಲಾಂಬರಿ ರೂಪಕತಾಳ**

ಪಲವರಿಗುದಿಸಿದ ಮಕ್ಕಳ | ನೆಲೆಯರಿಯಲು ಸಾಧ್ಯವೆ ಶಿವ ||
ಹಳುವದೆ ರಾಕ್ಷಸಿಗೊಲಿಸಿದ ಖಳನಿನಗೊರೆಯುವುದೇ || ೧೭೬ ||

**ರಾಗ ಕೇತಾರಗೌಳ ತ್ರಿವುಡೆತಾಳ**

ಹುಟ್ಟುಕುರುಡನ ಪಟ್ಟದರಸಿಗೆ | ಪುಟ್ಟಿದನಿಬರು ಹೋತಪುತ್ರರ |
ಗುಟ್ಟನರಿದೊಡೆ ದುಷ್ಟಬೀಜವು | ಕಷ್ಟಧರೆಗೇ || ೧೭೭ ||

**ರಾಗ ನೀಲಾಂಬರಿ ರೂಪಕತಾಳ**

ಧರ್ಮಜನುಣ್ಣಲಿ ಭಾಗ್ಯವ | ಶರ್ಮಗಳೆಲ್ಲವ ತೀರಲಿ |
ಕರ್ಮದ ಫಲವಿದಭೋಗಿಸ | ಲೊರ್ಮೆಗೆ ಮಾಧವನೂ || ೧೭೮ ||

**ರಾಗ ಕೇತಾರಗೌಳ ತ್ರಿವುಡೆತಾಳ**

ಆಡಿದಂದದೊಳೆನ್ನ ಭಾಷೆಯ | ಮಾಡಿತೋರಿಸಲೆತ್ತ ಪೋದನು |
ಹೇಡಿ ಕೌರವನೆಂಬುದರಿವೆಯ | ಬೇಡಿಕೊಂಬೇ || ೧೭೯ ||

**ವಚನ ||** ಎನೆಕೇಳ್ದವರ್ ತೆರಳಲ್ಕಲ್ಲಿಗೆ ತ್ವರಿದೊಳ್ - ವಿಂಧ್ಯಕ, ಜಾಲಕರೆಂಬ ಭೀಮಸೇನನ ಕಿರಾತರ್ಬಂದೊಡನಂ, ದೂರಪ್ರಣತರಾಗುತ್ತಂ ಭೀಮನೊಳಿಂತೆಂದರ್ ||

**ರಾಗ ಮುಖಾರಿ ಏಕತಾಳ**

ಕೇಳ್ದೇವ ಮಹಾವೀರ ಭೀಮಯ್ಯಾ | ನಾವೆಂಬಸೊಲ್ಲಾ || ಪಲ್ಲವಿ ||

ಕುರುಕ್ಷೇತ್ರದೊಳಗೆಲ್ಲಜೀಯಾ | ಎಡೆಬಿಡದಲ್ಲಲ್ಲಿ | ತಿರಿದೆವು ಕೇಳ್ಮಹರಾಯಾ ||
ಕುರುನರಪಾಲಕ ನಿರುವೆಡೆಯರಿಯದೆ | ಬಿರು ಬಿರು ಬಿಸಿಲಿಗೆ ತರಹರಗೊಳುತೇ ||
ಕುರುನೆಲದುತ್ತರಕಿರುತಿಹತಿಳಿನೀರ | ಸರದತ್ತಬಂದೆವು ವಿರಮಿಸಲೆನುತಾ || ಕೇಳ್ದವ || ೧೮೦ ||

ಕಾಲೊತ್ತು ಪೊಸರೀತಿವಡೆದಾ | ಗುರುತಿದೆಪದಮುದ್ರೆ | ಸಾಲ್ಗೊಂಡುತೋರ್ಪುದುನಡೆದಾ ||
ಜಲದಿಂದಪೊರಮಟ್ಟು ಬಳಿಸಾರ್ದತೆರನಿರ್ಪ | ಚೆಲುವಿನಕಾಲಚ್ಚು ನೆಲದೊಳಗಿಹುದೂ ||
ಸಲೆಶಂಖಚಕ್ರವು ಹಲಕುಲಿಶಂಗಳು | ತಳರೇಖೆಯೊಳಗಿವೆ ತಿಳಿಯಲುಬಹುದೂ || ಕೇಳ್ದೇವ ||

**ಭಾಮಿನಿ**

ದೂತರಾಡಿದ ಮಾತನಾಲಿಸಿ |
ವಾತಸಂಭವನಾತತೂಕ್ಷಣ |
ನೂತನವನಿದನರಿಯ ಬೇಕೆನುತವರನೊಡವೆರಸೀ ||

ಖ್ಯಾತಧರ್ಮಜನೆಡೆಗೆಬಂದಾ |
ವಾರ್ತೆಯುಸುರಲು ಕೇಳ್ದು ಮುರರಿಪು |
ಧೂರ್ತನೆಸಗಿದ ಕೃತ್ಯವರಿದೊಡನೆಂದ ಧರ್ಮಜಗೇ  || ೧೮೧ ||

**ರಾಗ ಘಂಟಾರವ ಏಕತಾಳ**

ವೊಳ್ಳಿತಾಯ್ತು ಕಾರ್ಯ | ಧರ್ಮರಾಯಾ | ವೊಳ್ಳಿತಾಯ್ತು ಕಾರ್ಯ    || ಪಲ್ಲವಿ ||

ಸುಳ್ಳಿದಲ್ಲನುಡಿ | ಎಲ್ಲವರಿತೆನಿಜ | ಸೊಲ್ಲಿದುಚಿತ ಭಲೆ | ಕಳ್ಳನವನುಧಿಟ ||  || ಅನು ಪಲ್ಲವಿ ||

ಗಂಗೆಯಣುಗನವಗೇ | ಜಲಮಂತ್ರವ | ಭಂಗವಿರದ ಹಾಗೇ ||
ಕಿವಿಯೊಳ | ಗಂಗವರಿದುಪೇಳೇ | ಭೀತಸಲಿಲ | ರಂಗಕಿಳಿದಕೇಳೆ ||
ಪಿಂಗದೆಸಿದ್ಧಿಯೋ | ಳಿಂಗಿತವದುಸಲೆ | ಸಂಘಟಿಸಲುಖಳ | ನುಂಗುವನೆಮ್ಮನು || ವೊಳ್ಳಿತಾಯ್ತು ಕಾರ್ಯಾ  ||೧೮೨||

ಕಾಮಪಾಲಕೃಪನೂ | ಗುರುಸುತ | ರೊರ್ಮೆಬರಲುನೃಪನೂ ||
ಕಾಲದ | ನೇಮವರಿತುಮನದೀ | ನಾಳೆಗೆ | ಭೀಮಬಲನುಧುರದೀ ||
ಭೀಮನೊಳೊದಗುವ | ಕಾಮದೆನಿಂದಿಹ | ನಾಮಹಕೊಳನೊಳು | ತಾಮಸತಂತ್ರದೆ || ವೊಳ್ಳಿತಾಯ್ತು ಕಾರ್ಯಾ  || ೧೮೩ ||

ಬಲಕೃಪರ್ರೈತರಲೂ | ನಮ್ಮೊಳು | ಬಲವಧಿಕರಿಸಿರಲೂ ||
ಧುರದೊಳು | ಗೆಲಲಿಕವರನರಿದೂ | ತ್ವರಿತದೆ | ಛಲಮತಿಯನುತರಿದೂ ||
ಬಲದಿಂದವನನು | ಕೊಳದಿಂಪೊರಡಿಸಿ | ತಳುವದೆಕೈವಶ | ಗೊಳಿಸುವುದತಿಹಿತ || ವೊಳ್ಳಿತಾಯ್ತು ಕಾರ್ಯಾ || ೧೮೪ ||

**ಭಾಮಿನಿ**

ವಾರಿಜಾಂಬಕನೆಂದನುಡಿಯನು |
ವೀರರೈವರು ಕೇಳಿಪೊರಟರು |
ಮೀರಿದುತ್ಸವದಿಂದ ಮಧುರಿಪುಸಹಿತ ಪಾಂಡವರೂ ||
ಚಾರುವೈಶಂಪಾಯನದಸರ |
ತೀರ ಕೈತಂದವರು ಪಜ್ಜೆಯ |
ನೂರಿಪಿಂದಕೆ ಸರಿದ ಚಿತ್ರವಕಂಡು ಯಮಸುತನೂ  || ೧೮೫ ||

**ಕಂದ**

ಭರತಜರೊಳ್ಮನ್ನಿಲ್ಲದ |
ಪರಿಭಾಷೆಯನುಂಟುಮಾಡಿ ಪೆರಗಡಿಯಿಟ್ಟಂ ||
ಕುರುರಾಜನೆಂದು ಲಜ್ಜಾ |
ಭರದಿಂದಂ ತಲೆಯ ಬಾಗಿದ ಯಮಜನಾಗಳ್  || ೧೮೬ ||

ಸೋತರೆ ಮತ್ತೆ ನಯದೀ || ಭಳಿರೆ  || ೧೩೯ ||

**ಭಾಮಿನಿ**

ಬಳಿಕ ಕೌರವ ಜನಪನಾಳಲಿ |
ಇಳೆಯಧರ್ಮದೆ ನೀವುನಾಲ್ವರು |
ಬಳಕೆಗೊಳ್ಳುತೆ ಸೇರುತವನನು ಬಾಳ್ವುದೆಂದೆನಲೂ ||
ಮುಳಿದು ಭೀಮನು ಪೇಳ್ದನಾಕ್ಷಣ |
ಬಲನೆ ಧರ್ಮಜಪಾರ್ಥನಕುಲರ |
ಕೊಲಿಸಲೇತಕೆ ತೋರಿಬಿಡು ನೀನೆನಗೆ ಕೌರವನಾ  || ೧೪೦ ||

ಭೀಮ ಕೌರವರೊಂದೆಮತಗೊಳೆ | ರಾಮಕೃಷ್ಣರ ಸಾಕ್ಷಿಯಿಂದಲೆ |
ಆಮಹಾಭುಜರೊಪ್ಪೆ ಧರ್ಮದಸಮರ ಸಂಧಿಯನೂ ||
ಸೋಮವಂಶದ ಕಿಚ್ಚಿನುಜ್ವಲ | ದೀಮಹಾರಣ ಘಟಿಸೆಕಲಿಗಳು |
ನೇಮದಿಂದಲಿ ಕೈಯ್ಯಪೊಯ್ದುರುಸುರರು ಭಾಪೆನಲೂ  || ೧೪೧ ||

**ಕಂದ**

ಎನಿತುಂ ಕುರುಕ್ಷೇತ್ರದೊಳೆಡೆ |
ಯನಿತುಂಬರಿದಿಲ್ಲದಂತು ಶವಶತದಿಂತೆ ||
ಕ್ಕನೇತಿವೆರಣೋತ್ಸವದಿಂ |
ದನಿಲಸುತಂ ತಾನೆಸವರಿದಂ ಕೊಳ್ಳುಳವಂ  || ೧೪೨ ||

* * *

**ಚತುರ್ಥಾಂಕ ಅವಮರ್ಶಸಂಧಿ**

**ವಾರ್ಧಕ**

ದ್ವಿಜರಾಜ ಗೋತ್ರಜರ ಸಂಗರಂ ದ್ವಾಪರದೆ |
ನಿಜಮಾರ್ಗಶಿರ ಶುಕ್ಲ ತೇರಸಿಯೆ ಭರಣಿಯೊ |
ಳ್ಗಜಪುರದ ಪರಮ ಕುರುರಂಗದೊಳು ಮೊದಲಾಯ್ತು ಕೊನೆಮೂಲದಮವಾಸ್ಯೆಗೆ ||
ವಿಜಯಮದ ಪೆರ್ಚುಗೆಯ ಭೀಮದುರ್ಯೋಧನರ್ |

ಭುಜಬಲದ ಸಾಸದಿಂ ಕಾದಲನುವಾಗುತಿರ |
ಲಜಮುಖರ್ಪೊಗಳೆ ಮಾಭಾರತದ ವೀರರಂ ನೆರೆಯೆಸುರರಂಬರದೊಳೂ || ೧೪೩ ||

**ವಚನ ||** ಅಗಳ್ ಭೀಮದುರ್ಯೋಧನರ್ ||

**ಭಾಮಿನಿ**

ಗುರುವಿನಂಘ್ರಿಗೆ ಮಣಿದು ಮನದಲಿ |
ಮರುತ ಸಂಭವನಿರಲು ಬಲನಡಿ
ಗೆರಗಿಕೌರವ ಪರಕೆಗೊಂಡತಿ ಜವದಿ ಕಾಳಗಕೆ ||
ತಿರಿದರೀರ್ವರು ಮತ್ತೆ ಗದೆಗಳ |
ನರಿದಿದುತ್ತಮ ಮಧ್ಯಮಾಧಮ
ದೆರಕವೆನುತಲಿ ಪರಿಕಿಸಿದರಾ ಗುರುಲಘುತ್ವಗಳ ||೧೪೪||

**ವಾರ್ಧಕ**

ಜಗಜಟ್ಟಿಕಲಿಗಳಾ ಭೀಮದುರ್ಯೋಧನರ್ |
ನೆಗೆದಾರ್ದು ಮಾಲೀಢನಾಲೀಢನದೆನಿಂದು |
ಮಗುಳೆಸಮಪಾದ ವೈಷ್ಣವಮಂಡಲಂಗಳೆನಿಪ್ಪೈದುತಾನಂಗಳಿಂದಾ ||
ಬಗೆದೋರಿಸವ್ಯಾಪಸವ್ಯಗಳಗತಿಯಿಂದ |
ಲೊಗುಮಿಗೆಯೊಳಾಸ್ಫಾಲನವನೆಸಗಿ ಬಿಗಿದೋರಿ |
ಚಿಗಿದೊರ್ಮೆ ಕುಂಚಿತಂ ಮಾಸ್ಫೋಟಮೆನಿಪೆಂಟು ಪಗರಣದೆ ಪಂಕ್ತಿವರಿದೂ || ೧೪೫ ||

**ರಾಗ ಭೈರವಿ ತ್ರಿವುಡೆತಾಳ**

ನಿಂದರಾಗ | ಸಮರಕೆ ನಿಂದರಾಗ || ಪಲ್ಲವಿ ||

ಕಿರಿದು ಕಿರಿದೆನೆ ಮೆಟ್ಟಿಮುಂದಕೆ | ಕಿರಿದು ಕಿರಿದೆನೆ ಸಾರ್ಚಿಗದೆಗಳ ||
ಕಿರಿದು ಕಿರಿದೆನೆ ತಿರುಪಿಮಾಣದೆ | ಕಿರಿದು ಕಿರಿದೆನೆ ನೊಂದಿತೂಂಕಿದ |
ರರಿದು ಬಲದಡಿ ಪುಗಿಸುತೆಡದಡಿ | ಪೊರಗೆ ನೀಡುತೆ ನೀಳ್ಕಿದಂಡೆಯ |
ಭರದಿ ಗದೆಯನು ಬೀಸಿತೋರುವ | ಬೆರಗುರಂಜಿಸೆ ಮಲ್ಲಕಲಿಗಳು || ನಿಂದರಾಗಾ || ೧೪೬ ||

ತಪ್ಪದಪ್ಪರಿತಟ್ಟು ಪೊಟ್ಟೆನೆ | ಧೊಪ್ಪ ಧೊಗಲುಲಿ ದಿದಿಲು ಬಧಿಲೆಂ |
ದೊಪ್ಪೆಗದೆಗಳ | ನೇರ್ಪುನೇರ್ಪಿನೊ | ಳಪ್ಪೆ ಹತಿಗಳು ಪೊಯ್ದರವರುರೆ |
ಭಾಪು ಭಾಪೆನೆ ಗದೆಯ ಗದೆಯಿಂ | ಬೇರ್ಪುಗೊಂಡಿಡೆ ಘಟ್ಟ ಘಡರೆನೆ |
ತೋರ್ಪಕಿಡಿಗಳದೆಂಟು ಮೂಲೆಯೊ | ಳಿರ್ಪನೋಟಕರೆದೆಗೆ ಜುಮ್ಮೆನೆ || ನಿಂದರಾಗಾ || ೧೪೭ ||

**ರಾಗ ಶಂಕರಾಭರಣ ಮಟ್ಟೆತಾಳ**

ಪೂತುಮಝುರೆ ಭೀಮಸೇನನನೇ || ಬೀತನಾಗ ಬೇಡನಿಲ್ಲು |
ಆತುಕೊಳ್ಳಿದೆನ್ನಗದೆಯ | ಘಾತಕೋಡಬೇಡನಿಲ್ಲೆಲಾ || ಪೂತು || ೧೪೮ ||

ಭಳಿರೆ ಭಾಪು ಕೌರವೇಂದ್ರನೇ || ತಿಳಿದುದಿಲ್ಲವೆನ್ನ ಕರದ |
ಕಲಿತ ಮಹದ ಗದೆಯ ಸವಿಯ | ದಲಿತ ಬಲನೆ ನೋಡು ನೋಡೆಲಾ || ಭಳಿರೆ ಭಾಪು || ೧೪೯ ||

ಕರಿಕಳಿಂಗರನ್ನು ಕೊಂದ | ಗರುವಕಿದಕೊ ಕೊಳ್ಳಿದೊಂದ |
ಧುರದೊಳನುಜರನ್ನು ಕೊಂದ | ಬಿರಿದಿಗಿದಕೊ ಕೊಳ್ಳಿದೆರಡನೂ || ಪೂತು ಮುಝುರೆ ||೧೫೦||

ಅನುಜನಾದುಶ್ಶ್ಯಾಸಗಿರಿದು | ಮನುಜಮಾಂಸತಿಂದ ಧೂರ್ತ |
ದನುಜಕೊಳ್ಳೊ ಮೂರನಿದಕೊ | ತಿನಿಸ ನೋಡುಗದೆಯ ಸವಿಯನೂ || ಪೂತು ಮಝುರೆ || ೧೫೧ ||

ಇದುವೆಲಾಕ್ಷಗೇಹ ಕೊಂದು | ಇದುವೆಗರಳದನ್ನ ಕೊಂದು |
ಇದುವೆ ನಾಡ ಜೂದಿಗೊಂದು | ಇದುವೆ ಕೊಳ್ಳೊ ವಸ್ತ್ರಹರಣಕೇ | ಭಳಿರೆ ಭಾಪು || ೧೫೨ ||

ಕೃತಕ ಸಭೆಯ ಮಾಟಕೊಂದು | ಜತನ ನೋಡೆನುತ್ತಪೊಯ್ದು |
ಖತಿಯೊಳುರಕೆತರಕೆ ಕಾಲ್ಗೆ | ಜೊತೆಗೆ ನೆತ್ತಿಗೆನುತಲೀ || ಭಳಿರೆ ಭಾಪು || ೧೫೩ ||

ಭಾರತಾಹವ ತೀರಿತಿಂದಿಗೆ |
ವೀರನಶ್ವತ್ಥಾಮನೈತಹ |
ಮಾರಮಥನನಿಗರಿದು ಜಯಿಸಲು ರಣದ ಪಂಡಿತನಾ ||
ಮೀರಲಾರಿಗೆ ಸಾಧ್ಯ ವಿಧಿಯನು |
ಬೇರೆ ಗತಿಯನು ಕಾಣೆನೆಂದಾ |
ಮಾರಜನಕನು ಜರುವನಾಗತಬಾಧೆಯರಿತೊಡನೇ || ೧೬೦ ||

**ಕಂದ**

ಕಿರಿಯರ್ ಕೃಷ್ಣೆಯ ತನುಜಾ |
ತರ ಕಾಪಿಡುತಂಕರಿಪುರಕತಿ ಜತನದೊಳಂ||
ಹರಿನೀಲಾಚಲ ಕೈವರ |
ಕರೆದೊಯ್ಯಲ್ ದ್ರೌಪದಿ ಸಹಿತವರಂ ಜವದೊಳ್ || ೧೬೧ ||

**ವಚನ ||** ನೀಲಾಂಗನ ಮತದಿಂ, ನೀಲಾಚಲಕ್ಕೈದಲ್ಪಾಂಡವರನ್ನೆಗಂ ಗಾಂಗೇಯನರುಪೆ
ಕೌರವೇಶ್ವರನಿರ್ದೆಡೆಯನಶ್ವತ್ಥಾಮನರಿದಾಗಳ್ ||

**ಕಂದ**

ಕೊರಲಕರೆ ಶಿರದ ಪೆರೆನೊಸ |
ಉರಿಗಣ್ ಧೃತಚಾಪ ಹಸ್ತ ಶಾಕ್ವರ ಚಿಹ್ನಂ ||
ವಿರಚಿಸೆ ಕೃಪ ಕೃತವರ್ಮ |
ಬೆ೯ರಸಾಗಳ್ಕುಳಿದು ಬಂದನಶ್ವತ್ಥಾಮಂ || ೧೯೧ ||

**[ಧರ್ಮರಾಯಾದಿಗಳು ಭೀಮಸೇನನ ಗದಾದಂಡಕ್ಕೆ ಪುಷ್ಪ, ಗಂಧ, ಅಕ್ಷತೆ, ಫಲ, ತಾಂಬೂಲ, ಧೂಪ, ದೀಪ, ನೈವೇದ್ಯಾದಿ ದ್ರವ್ಯಗಳಿಂದ ಸಾತ್ವಿಕ ಪೂಜೆಯನ್ನು ಮಾಡಿ ತೀರಿಸಿದ ಭೀಮನು ಕಠೋರ ತಂತ್ರೋಕ ಕ್ರಮದಂತೆ ಗದಾದಂಡವನ್ನರ್ಚಿಸುವನು – ಕಠೋರ ತಂತ್ರದಂತೆ ಗದಾರ್ಚನೆಗೆ ಬೇಕಿದ್ದ ದ್ರವ್ಯಗಳು ಮತ್ತು ಅರ್ಚನಾ ಕ್ರಮ : ಶತ್ರುಗಳ ಮಾಂಸವೇ ನೈವೇದ್ಯ, ರಕ್ತವೇ ಮಧು, ವೈರಿಗಳ ತಲೆಗಳೆಂಬುದೇ ಕಮಲವು–ಶತ್ರುಗಳ ಕಠೋರವಾದ ದಂತಕುಲಗಳೇ ಮೊದಲಾದ, ರೌದ್ರಾರ್ಚನಾ ದ್ರವ್ಯಗಳಿಂದ ಭೀಮನು ಗದಾದಂಡವನ್ನರ್ಚಿಸುವನು. ಇದೇ ಕಠೋರ ತಂತ್ರೋಕ್ತವಾದ ತಾಮಸ ಪೂಜೆಯು.]**

**ರಾಗ ಶಂಕರಾಭರಣ ಅಷ್ಟತಾಳ**

ಕಂಡನಶ್ವತ್ಥಾಮ ನಾರಿಯನೋರ್ವಳಾ || ದಾರಿಯೊಳಲ್ಲಿ ಬರುತಿರೆ |
ಕಂಡನಶ್ವತ್ಥಾಮ ನಾರಿಯನೋರ್ವಳಾ || ||ಪಲ್ಲವಿ ||

ಕಂಡನುಜ್ವಲ ರೂಪ ಶೋಭಿತೆಯಾ | ಸುಪ್ರ |
ಚಂಡ ಲೋಕದ ಭಾಗ್ಯಸಂಪದೆಯಾ | ಆಹಾ |
ಪುಂಡರಿಕಾಕ್ಷಿಯ ಕನಕ ಚಾಮರೆಯಾ ||
ತುಂಡು ಮಾಡಿದ ಬಟ್ಟೆ | ಮಂಡಲೇಶ್ವರಿಯುಟ್ಟು |
ಮಂಡೆದೋರದೆ ಮೌನ | ಗೊಂಡು ದೇವಿಯು ಸಾರೆ ||
ಕಂಡನಶ್ವತ್ಥಾಮ ನಾರಿಯನೋರ್ವಳಾ || ೧೯೩ ||

ಕಂದಿದಾನನ ಜೋಲ್ವ ಕುಂತಳದಾ | ಚೆಲ್ವ |
ಚಂದನಗಂಧಿ ಪದ್ಮಲೋಚನದಾ | ಬಾಲೆ |
ಮುಂದಡಿಗೊಳ್ಳೆ ಶೋಕಸಾಗರದಾ ||
ನಿಂದು ಕೇಳಿದನಾಗ | ಸುಂದರಾಂಗಿಯೆ ನಿನ್ನ
ಚಂದದಾಸ್ಯವು ಬಾಡಿ | ನೊಂದುಕೊಂಡಿಹುದೇಕೆ ||
ಕಂಡನಶ್ವತ್ಥಾಮ ನಾರಿಯನೋರ್ವಳಾ || ೧೯೪ ||

ಪೋಗುವದೆಲ್ಲಿ ವಾರಿಜಾಂಬಕಿಯೇ | ರಾಜ್ಞಿ |
ಮಾಗರುವೆ ನೀನಾರ್ಗೆ ಕಾಮಿನಿಯೇ | ಚೋದ್ಯ |
ವೀಗಲೆನ್ನೊಳು ಪೇಳು ಯೋಗಿನಿಯೇ |
ಸೋಗು ನೋಡಲು ಚಿತ್ರ | ಬೇಗ ಪೇಳೆನಲಾಕೆ |
ಸಾಗದಲ್ಲಿಯೆನಿಂದು | ಬಾಗಿ ಪೇಳ್ದಲು ಸೊಲ್ಲ ||
ಕಂಡನಶ್ವತ್ಥಾಮ ನಾರಿಯನೋರ್ವಳಾ || ೧೯೫ ||

**ರಾಗ ಮಧ್ಯಮಾವತಿ ಏಕತಾಳ**

ಕೇಳುಕೇಳೆನ್ನ ಮಾತಾ | ೧

[1]ಶಾಕ್ವರ ಚಿಹ್ನ | ಪೇಳ್ವೆ ಕೇಳ್ಸುಪ್ರಖ್ಯಾತಾ || ಕೇಳುಕೇಳೆನ್ನ ಮಾತಾ ||ಪ||
ಚೆನ್ನಾಯ್ತು ಕೇಳಯ್ಯುಯೆನ್ನಾದಿ ಕಥೆಯ |
ಮುನ್ನೀರ ಕಡೆಯಲ್ಕೆ ಮುನ್ನೊಂದು ಯುಗದೀ |
ಕನ್ನೆನಾಜನಿಸುತ್ತೆ ಪುಣ್ಯಾತ್ಮ ಹರಿಯಾ |
ಪೊನ್ನೀರ್ದವುರಕೇರ್ದೆ ಯಿನ್ನೇನು ಜಗದಾ || ಕೇಳು ಕೇಳೆನ್ನ || ೧೯೬ |

ಜನನಿ ತಾನೆನ್ನುವರ್ ಜನರೆಲ್ಲ ತಿರೆಯಾ |
ಜನಪಾಲ ದುರ್ಯ್ಯೋಧನನ ಸೇರಿ ಮುದದೀ ||
ಇನಿತೊಂದು ದಿನವಿರ್ದೆ ಕೊನೆಗೀಗ ತೊರೆದೂ |
ಜನನಾಥ ಯಮಜಾತ ನನು ಸೇರಲೊಲಿದೂ || ಕೇಳು ಕೇಳೆನ್ನ || ೧೯೭ ||

ವಸುದೇವಸುತನಿಂದು | ಬೆಸಸಲ್ಕೆ ಪೊರಟೇ |
ಕಸುವಿರ್ಪ ಕಲಿವೀರ | ರೆಸದಂತೆ ಹಿತದೇ ||
ವಶವಾಗಿ ನೆಲಸಿರ್ಪೆ | ಪೊಸತಲ್ಲ ಜಗದೀ |
ವಸುಧೀಶನನು ಸೇರ್ವೆ | ಬಿಸಜಾಕ್ಷ ಮತದೀ || ಕೇಳುಕೇಳೆನ್ನ || ೧೯೮ ||

**ಕಂದ**

ಇಂದಿರೆಯಾಡಿದ ಮಾತಂ |
ಕಂದುಗೊರಳನೇರ್ಪಿನ ಗುರುಜಂ ಕೇಳ್ದಾಗಳ್ |
ಬೆಂದೊಡಲಿನ ಮರುಕದೊಳಾ |
ಕುಂದೊರೆದವಳಂ ಕನಲ್ದು ಮಗುಳಿಂತೆಂದಂ || ೧೯೯ ||

**ರಾಗ ಸುರುಟಿ ಅಷ್ಟತಾಳ**
ಸಿರಿಯೆ ನಿನ್ನಯ ಲೀಲೆ ಬಹುಚೋದ್ಯವಾಗಿಹುದೂ || ಪಲ್ಲವಿ ||

ಅರಿಯಲಾರಿಗೆ ಸಾಧ್ಯ | ನಿನ್ನಯನಂಟು | ಬರೆಗಂಟು || ಸಿರಿಯೆ || ಅ. ಪಲ್ಲವಿ ||

ಜಡದಿ ಪುಟ್ಟಿದೆ ನೀನು | ಜಡಜದಿನೆಲಸಿದೆ | ಜಡಗುಣದಾಕೆಯಾದೇ ||
ಬಡವರ್ಗೆ ಕೊಡದೆನೀ | ಬೆಡಗ ತೋರಿಸುತೆ | ಪೊಡವಿಗೆ ಮಾತೆಯಾದೇ |
ಸಿರಿಯೆ ನಿನ್ನಯ ಲೀಲೆ || ೨೦೦ ||

ಕಲಿವೀರರನು ಪಂದೆ | ಗೊಳಿಸಿ ನೀನಲಿದು | ಕುಲಜರ ಬಿಟ್ಟುಪೋದೇ ||
ಕುಲಹೀನರರನು ಸೇರ್ದೆ | ವೊಲಿದುನೀ ವೃದ್ಧರ | ಚೆಲುವಿನ ವಿಟರಗೈದೇ ||
ಸಿರಿಯೆ ನಿನ್ನ ಲೀಲೆ || ೨೦೧ ||

ತಂದೆ ಮಕ್ಕಳ ಜುಟ್ಟ | ನೊಂದುಗೂಡಿಸಿದೆ | ಕೊಂದೆನೀಗುರುಶಿಷ್ಯರಾ ||
ಬಂದುನಿಂದೆಡೆಯಲ್ಲಿ | ಹಿಂದುಮುಂದೆನದೆ | ಗೊಂದಲಗೈದೆ ಜನರಾ ||
ಸಿರಿಯೆ ನಿನ್ನಯ ಲೀಲೆ || ೩೦೧ ||

**ವಾರ್ಧಕ**

ಸುರಗಜದ ವಿಪರೀತ ಕೌಸ್ತುಭದ ಕಾಠಿಣ್ಯ |
ಸರಸತಿಯವಾಚಾಳ ಚಂದ್ರಮನ ಕೌಟಿಲ್ಯ |
ಗರಳದತಿ ಚಿತ್ರವಧೆ ನಾರದನ ಕಲಹತ್ವಸುರೆಯ ಸೊರ್ಕೆಂಬುದಿನಿತೂ ||
ಸರಿನಿನಗೆ ಸಂಸರ್ಗಪಾಲ್ಗಡಲ ಮಥನದೊಳ್ |
ಸಿರಿನಿನ್ನ ಜೊತೆಪುಟ್ಟಿದರಗುಣಂ ನಿನಗಿರ್ಕೆ |
ಹರಿಯಿದಕೆ ಮೆಚ್ಚಿದನೆ ಸಾಧ್ವಿಯೇ ಕಡುಧೂರ್ತೆ ನೀಲೋಕಮಾತೆಯಹುದೇ || ೩೦೨ ||

**ರಾಗ ಮಾರವಿ ಏಕತಾಳ**

ನಡೆನಡೆಮೂಳಿಯೆ | ನುಡಿಯದಿರೆನ್ನೊಳು | ಬೆಡಗನು ಪಾಂಡವರಾ ||
ಕಡುಗಲಿಯೇನ್ನರ | ಗಡಭೀಮನೆ ಬಿಡು | ಜಡಮತಿ ಧರ್ಮಜನಾ || ೩೦೪ ||

ಗುರುಸುತನಾರಿಹನೆಂಬುದನರಿವೆಯ | ಬರಡರ ಗಣಿಸುವೆನೇ ||
ಪೊರೆದಾ ಕುರುಪತಿ ಬಳಿಯಿಂ ನಿನ್ನನು | ಮುರಹರ ತೊಲಗಿಪನೇ || ೩೦೫ ||

ಪುರುಷೋತ್ತಮನಳವರಿವೆನು ಕಪಟಿಯ | ತುರುಗಳ ಕಾವವನಾ ||
ಕುರುಕುಲದೊಲ್ಲಭನಿರುತಿರೆ ನಿನ್ನನು | ಕರೆಯುವ ಚೌರ್ಯಗನಾ || ೩ ||

ಕೇಳದೆ ಪೋದರೆ ಸೀಳುವೆ ನಿನ್ನಯ | ಬಾಳಿನ ಮುಂದಲೆಯಾ ||
ತೋಳಿನ ಬಲದೊಳು ಪಾಲಿಪನಾರಿಹ | ಪೇಳ್ಮಲೆಯುವತಲೆಯಾ || ೩೦೬ ||

**ವಚನ ||** ಎಂದಶ್ವತ್ಥಾಮಂ ಕೋಪಾಟೋದಿಂದಾಡಲ್ ||

**ಕಂದ**

ಅತ್ತಲಸುರಾರಿ ಬೆಸಸಿದ |
ನಿತ್ತಲ್ ರುದ್ರಾವತಾರ ನೆಳೆದೊಯ್ದಪನೆಂ ||
ದತ್ತಪುಲಿಯಿತ್ತದರಿಯೆಂ |
ದತ್ತಿತ್ತಡಿಯಿಡದೆ ಲಕ್ಷ್ಮಿತಳವೆಳಗಾದಳ್ || ೩೦೭ ||

**ಭಾಮಿನಿ**

ಬೆದರುತಿಂದಿರೆಯಳುಕಿನಿಂದಿರೆ |
ಗದರಿಸುತ ಗುರುಸುತನು ಕೋಪದಿ |
ಪದುಮನಾಭನ ಸತಿಯ ಮುಂದಲೆವಿಡಿದು ರಭಸದಲೀ ||
ಮದದ  ಮೋಡಿಗೆ ಮದ್ದಿದೆನುತಲಿ |
ಸುದತಿಯನು ಸೆಳೆದೊಯ್ದು ತಂದನು |
ಕದನರಂಗದೆ ಬಿದ್ದನೃಪನೆಡೆಗಾಗ ತವಕದಲೀ  || ೩೦೮ ||

**ರಾಗ ಆರಭಿ ರೂಪಕತಾಳ**

ಗದೆಯ ಘಾತದೊಳೂರು | ಪದದ ಘಾತದೆಮಕುಟ | ಸದೆದಲ್ಲಿ ಭಂಗಮಾಗಿರ್ದಾ ||
ಅಧಿರಾಜ ಕೌರವೇಶ್ವರನಿರ್ಪ ದುಸ್ಥಿತಿಯ || ಮದನಾರಿ ಪ್ರತಿರೂಪನೋಡೇ || ೩೦೯ ||

ನೆತ್ತಿಯೊಳ್ಮಿದುಳೊಡೆದು | ನೆತ್ತರಿನಧಾರೆಗಳ್ | ಮೆತ್ತಿರಲು ಸುರಿಯುತ್ತೆ ಮೊಗದೀ ||
ನೆತ್ತರನೆಕಾರುತ್ತ ಕುರುಭೂಪ ಮುಳುಗಿರ್ದ | ನೆತ್ತರಿನ ಕೆಸರೊಳಾಕಣದೀ || ೩೧೦ ||

ಕಳಶಸಂಭವ ಪುತ್ರನಿಂತಿರ್ಪಭೂವರನ | ಗಳಿತಾಶ್ರುಲೋಚನದೊಳಾಗಾ ||
ತಲೆದೂಗುತೀಕ್ಷಿಸುತೆ ಕಾಣಲಾರದೆನೊಂದು | ಬಳಿ ಸಾರ್ದುಪಳಿದೆಂದವಿಧಿಯಾ || ೩೧೧ ||

**ರಾಗ ನೀಲಾಂಬರಿ ರೂಪಕತಾಳ**

ಹಾ ಕುರುಕುಲ ಚೂಡಾಮಣಿ | ಹಾ ಕುರುನೃಪಕುಲಸಿಂಹನೆ |
ಹಾ ಕುರುನೃಪಗಣಕೌಸ್ತುಭ | ಹಾ ಕುಂಭಜ ಶಿಷ್ಯಾ || ಹಾ ಕುರುಕುಲ || || ೩೧೨ ||

ಹಾ ಕೃಪಚರಣಾನತಶಿರ | ಹಾ ಕುಲನೃಪತತಿಪೂಜಿತ |
ಹಾ ಕುರುವಂಶ ಮಹಾಕಮ | ಲಾಕರಹಂಸಾ ||
ಏಕಾದುದೋ ನಿನಗೀವಿಧಿ | ನಾಕೇಶನ ಸಮದಂಡಿಗ |
ಮಾಕಾಮಿನಿಯನು ತಂದಿಹೆ | ಬೇಕೇನೊರೆ ಜನಪಾ || ಹಾ ಕುರುಕುಲ  || ೩೧೩ ||

ಎಂದಳ್ಗತೆ ಗುರುನಂದನ | ಕಂದಿದಪದಹತ ಧೂಳಿ |
ಮುಂದಲೆಯನು ಸೆರಗಿನ ತುದಿ | ಯಿಂದೊರೆಸುತೆ ಮರುಗೀ ||
ಸಂದುದೆ ತನ್ನನುವಂಚಿಸಿ | ಬಂದುದರಿನ್ನಿನಗೀಗತಿ |
ಮುಂದೆನಗರುಹೈ ಕಜ್ಜವ | ನೆಂದೆನೆನೃಪನುಡಿದಾ || ಹಾಕುರುಕುಲ  || ೩೧೪ ||

**ಕಂದ**

ಅರಿಚರಣಪಾಂಸುಪತ್ತಿರೆ |
ಕರಾಗ್ರದಿಂ ತೊಡೆದು ಕಳೆದೆ ವಸ್ತ್ರಾಂಚಲದಿಂ ||
ಗುರುನಂದನನೀನೆನ್ನೀ |
ಪರಿಭವಪಾಂಸುವನದೆಂದು ಪೇಳ್ಕಳೆದಪೆಯಾ  || ೩೧೫ ||

**ಭಾಮಿನಿ**

ಕ್ರಾಂತಿಗೊದಗಿದ ಜೀವನದೊಳೀ |
ಕ್ರಾಂತಿಯಾದುದು ಪಾಂಡುಪುತ್ರರ |
ಕ್ರಾಂತಿಯೊದಗಿದ ಪಂಚಪಂದಲೆಗಳನು ಕಂಡೊಮ್ಮೆ ||
ಶಾಂತಿಯಿಂದಸುವಿದನು ನೀಗುವೆ |
ಕಾಂತಿಗುಂದುವ ಮೊದಲೆ ನೀನು |
ತ್ಕ್ರಾಂತಿಯಿಂದಿದನೆಸಗು ಪೋಗೆನೆ ಗುರುಜನಾಕ್ಷಣದೀ || ೩೧೬ ||

**ವಚನ ||** ಅಂತೆಸಗುವೆನೆಂದಶ್ವತ್ಥಾಮಂ, ಧೈರ್ಯವನೊರೆದಲ್ಲಿಂದಂ ಪೊರವಂಟತಿಸಹಸ ದೊಳಂ ||

**ಕಂದ**

ಚಂದಿರ ನಿಲ್ಲದೆಬಾನೊಳ್ ||
ಕಂದಿರೆ ಮೀಂಗಳಮವಾಸಿಯಮಹಾತಮದೊಳ್ ||
ಮಂದಿಗಳೊರಗಿರೆ ಬಳಲಿದ |
ಪಿಂದಣಲವರದತಿಬೇಸರದೆ ಗಜಪುರದೊಳ್ || ೩೧೭ ||

**ಭಾಮಿನಿ**

ಸಮಯವರಿದಾ ರುದ್ರರೂಪನು |
ಯಮನೆತಾನೆನುವಂತೆ ಪೊಗುತಲಿ |
ಸಮದೆಮಲಗಿಹ ಪುರದಕಾವಲ ಭಟರಕುರಿದರಿಯೇ ||
ಭ್ರಮೆಯೊಳೊರಗಿದ ಪಲರುನಿದ್ದೆಯೊ |
ಳಮಮಹಾಯೆನುತೆದ್ದು ಕಣ್ಗಳ |
ನಿಮಿರೆ ಪೊಸೆಯುತ ಕೈದುಗೊಂಡರು ತಲೆಯದಿಸೆಗಿರ್ದಾ || ೩೧೮ ||

**ರಾಗ ತುಜಾವಂತು ಮಟ್ಟೆತಾಳ**

ಆರೆಲೋ ದುರಾತ್ಮಚೋರನೇ || ಪಲ್ಲವಿ ||

ಮೀರಿರಜನಿಯೊಳಗೆ ಬಂದು | ಸೇರಿಪುರವಧಾಳಿಗೊಡುವ |
ಚೋರನಾರು ತಲೆಯಕಡಿದು | ಮಾರಿಗುಣಿಸಮಾಳ್ಪೆನೆಂದು |
ವೀರ ದ್ರುಪದಸುತನುಪೇಳಲೂ | ಕೇಳುತ್ತ ಗುರುಜ |
ಹಾರಿಪೊಯ್ದನವನ ಶಿರವನೂ | ಕಾಣುತ್ತ ಭರದೊ |
ಳೇರಿಬಂದಡಾಶಿಖಂಡನೂ || ಆರೆಲೋ || ೩೧೯ ||

ಕರದಬಾಳ ಬೀಸುತವನ | ತರಿಯೆಗುರುಜ ಚೇಕಿತಾನ |
ನುರಿದು ಬಂದಡವನ ಶಿರವ | ಧರೆಗೆಕೆಡಹಿ ಭಟರನೆಲ್ಲ |

ಬರಿದುಗೈದನೊಂದೆ ಚಣದೊಳೂ || ಶ್ರುತಸೋಮಕಾದಿ |
ಕಿರಿಯಪಂಚಪಾಂಡವರ್ಕಳಾ | ಮೇಲೇರಿಪಿಡಿದು |
ಶಿರವನೆಣಿಸಿ ಕಡಿದನೈಗಳಾ || ಆರೆಲೋ || ೩೧೦ ||

**ಭಾಮಿನಿ**

ಸಂದುದೆನ್ನಯ ಭಾಷೆ ಕೌರವ |
ಗಿಂದುವಿಜಯದಹಬ್ಬವಾಗಲಿ |
ಕೊಂದೆನೈವರನೆನುತ ಮಂಡೆಗಳೈದ ಕೈಗೊಳಿಸೀ ||
ಮುಂದೆನೇಸರು ಮೂಡುವನ್ನೆಗೆ |
ಬಂದು ಭೂಪನ ಚರಣಕರ್ಪಿಸು |
ತೆಂದಕೊಳ್ಳಿದೊ ನಿನ್ನ ಪಾಂಡವರೈದು ತಲೆಗಳನೂ || ೩೧೧ ||

**ಕಂದ**

ನನ್ನಿಯೊಳಾಡಿದ ಗುರುಜನ |
ಮನ್ನಿಸಿಮತ್ತಾ ಸುಯೋಧನ ಮುದದೊಳಾಗಂ ||
ಕಣ್ಣರೆತೆರೆದದ ನೀಕ್ಷಿಸಿ |
ಬಣ್ಣವನರಿದತಿ ವಿಷಾದಗೊಳುತಂಮನದೊಳ್ || ೩೧೨ ||

**ರಾಗ ನೀಲಾಂಬರಿ ರೂಪಕತಾಳ**

ಗುರುವರಸುತನೇನೆಸಗಿದೆ | ಹರಹರ ಬಾಲರವಧೆಯನು |
ಮರುತಜನಾಸ್ಯವಿದಾದೊಡೆ | ಪರಿಕಿಸಲೊಪ್ಪುವುದೇ ||
ಮಿರುಗುತ ಪಟ್ಟದೆನೋಳ್ಪದು | ಅರಿವಿಲ್ಲದೆ ನೀಗೈದುದು
ಗುರುತಿಸಲಿದು ಕೃಷ್ಣೆಯ ತರ | ಳರಶಿರಗಳೆ ನಿಜವು || ೩೧೩ ||

ಪರಮೇಶ್ವರನವತಾರನೆ | ಪರಮಪವಿತ್ರನೆ ಭೂಸುರ |
ಬರಿದೀ ವಿಕಳರ ಕಾರ್ಯವ | ಗುರುಜನೀನೆಸಗುವುದೇ ||
ತರಳರ ಶಿರವಿದ ತರಿದೆಯ | ದೊರಕೊಳದೇನ್ಪಾತಕನಿನ |
ಗರಿಯದೆ ದುಷ್ಕೀರ್ತಿಯಕರೆ | ಮಿರುಗದೆ ಇಹಪರದೀ || ೩೧೪ ||

ಕ್ರಾಂತಿಯಿದಾಯಿದು ಮನಕತಿ | ಶಾಂತಿಯಿದಾಯಿತು ಶಿವ ಶಿವ |
ಕುಂತಿಯ ಸುತರೊಳು ತೀರಿತು | ಪಂಥಗಳಿಲ್ಲೆನಗೇ ||
ಸಂತಸವಾದುದು ನಡೆನೀ | ನಿಂತಿರಬೇಡೆನೆ ಮರುಕದೆ |
ಪಿಂತಿರುಗಿದ ಕಲಶಜಸುತ | ಚಿಂತೆಯ ಪರಿಭವದೀ || ೩೧೫ ||

**ಕಂದ**

ಗುರುಜಂ ಮರೆದಿಹ ಭೋಗವ |
ತೆರಳಿದತುಹಿನಾಚಲದೆಡೆಗಂ ತಪಮೆಸಗಲ್ ||
ಕುರುಪತಿ ಯೋಗಧ್ಯಾನದೆ |
ತೊರೆದವನೆಲ್ಲವ ದಿನಾವಸಾನದೆ ಬಳಿಕಂ || ೩೧೬ ||

ನಗೆಮೊಗದಿಂ ಮಾಡಿದಕ |
ರ್ಮಗಳಂ ತಿಳಿಯಲ್ರುದಧ್ಬಿರನು ಭೂಯಾತ್ತೆಂ ||
ದೊಗುಮಿಗೆಯಿಂದುಣೆಲೋಕಂ |
ಬಗೆಗೊಳೆನದನೆಂದಸುವನು ತೊಲಗಿಸೆ ಜಡದಿಂ || ೩೧೭ ||

**ಭಾಮಿನಿ**

ಬಳಿಕ ಮರುದಿನ ಪಾಂಡುತನನಯರು |
ತಿಳಿದರೊದಗಿದ ವಿಘ್ನಕೋಟಿಯ |
ನಳಿನನಾಭನೊಳರುಹೆ ವಾರ್ತೆಯ ಕೇಳ್ದು ಮುರಹರನೂ ||
ಕಳೆದ ರಜನಿಯೊಳಾಯ್ತೆ ವಿಧಿಹಾ |
ಕಳಶಸಂಭವ ಪುತ್ರನಲ್ಲದೆ |
ಕೊಲುವರಿಲ್ಲೆನುತಿಳಿದ ನೀಲಾಚಲವ ರಭಸದಲೀ || ೩೧೮ ||

**ರಾಗ ಕಾಂಭೋಜಿ ಝಂಪೆತಾಳ**

ಇತ್ತಲಸುರಾಂತಕನು | ಮತ್ತವರನೊಡಗೊಂಡು | ತತ್ತರಿಸುತೈತರಲುಪುರಕೇ ||
ಕತ್ತಲೆಯೆ ಕವಿದಂತೆ | ಚಿತ್ತವಿರೆ ಧರ್ಮಜನ | ಹತ್ತಿರಕೆ ಹರಿ ಬಂದು ನುಡಿದಾ || ೩೧೯ ||

ಮರುಗದಿರು ಧರ್ಮಜನೆ | ಧುರದೊಳಿದೆ ಸದ್ಗತಿಯು | ನರನಾಥ ನೀನರಿಯದವನೇ ||
ಸಿರಿಮೆರೆವಳನುದಿನದಿ | ಚಿರಪರಾಕ್ರಮಸತ್ವ | ದುರುವಿನಯ ಶೀಲಗುಣ ಬಳಿಕಾ || ೩೨೦ ||

ವರಧರಾಪ್ರಣಯತ್ವ | ಪರಮೇಶಸಂಪ್ರೀತ | ಕರಮೆಸೆಯಲರ್ಥಿಯಿಂ ಜಗದೀ ||
ಪಿರಿದೆನಿಪುದೀಗುಣವು | ತಿರೆಯಾಣ್ಮಗತಿಶಯವು | ಧರಿಸಿರುವೆ ನೀನಿದನುಜನಪಾ || ೩೨೧ ||

ಆಕೆವಾಳರು ನಿನಗೆ | ಬೇಕೆನಿಪಸೋದರರು | ಭೂಕಾಂತೆ ಮಾಕಾಂತೆಯರನೂ ||
ಈಕಡೆಗೆ ಬರಿಸಿಹರು | ಸಾಕವರ ಸಾಹಸವ | ನಾಕೇಶ ಪೊಗಳುವನುಯಮಜಾ || ೩೨೨ ||

ಬಾರಿತ್ತ ಬಾಹುಬಲ | ವಾರಿಧಿಯೆ ಜಗಜಟ್ಟಿ | ಮಾರುತಿಯೆ ನಿನಗೆಣೆಯಕಾಣೆ ||
ಧಾರಿಣಿಯೊಳೇಕಾಂಗ | ವೀರರೊಳು ಸಲೆಕೀರ್ತಿ | ಮಾರಮಣಿ ಭೂಕಾಂತೆಯರನೂ || ೩೨೩ ||

ನಿನ್ನಂತೆ ನಿಜಭುಜದೆ | ಮುನ್ನಾಂತರಾರಿಲ್ಲ | ಪೊನ್ನಾಯ್ತು ನೀನುಡಿದ ಭಾಷೇ ||
ಕುನ್ನಿಗಳ ಸದೆಬಡಿದೆ | ಧನ್ಯಮತನೀನಾದೆ | ಸನ್ನುತನೆ ಕಲಿ ಭೀಮರಾಯಾ || ೩೨೪ ||

**ಭಾಮಿನಿ**

ಧರೆಯಭಾರವು ತಗ್ಗಿತಿಂದಿಗೆ |
ಧುರದಿವಿಜಯವ ಪಡೆದಿರೈವರು |
ಸರಸಿಜಾಂಬಕಿ ವೀರಮಾನಿನಿ ಮರುಗಲೇಕಿನ್ನೂ ||
ತಿರಿಯೊಳೊರಗಿದ ವೀರಭಟರಿಗೆ |
ಪಿರಿದುಸಂಸ್ಕಾರವನು ಮಾಡಿಸು |
ನೆರೆವಿಚಾರಿಸಿ  ಶಾಸ್ತ್ರಮಾರ್ಗದೆ ಧರ್ಮನಂದನನೇ  || ೩೩೫ ||

**ವಚನ ||** ಎನೆಧರ್ಮನಂದನಂ ಹರಿಯಾಜ್ಞೆಯಂ ಕೈಕೊಳ್ಳುತ್ತಂ ||

**ವಾರ್ಧಕ**

ಅಳಿದಖಿಲಸುಭಟರ್ಗೆ ಜಲದಾನತರ್ಪಣವ |
ಬಳಿಕಿತ್ತು ಸದ್ಗತಿಯಗೊಳಿಸಲ್ಕೆ ನೃಪವರಂ |
ತಿಳಿದಲ್ಲಿ ಗಾಂಧಾರಿ ಧೃತರಾಷ್ಟ್ರ ಕೌರವನ ಮಡದಿಯರ್ ಕೊಂತಿ ಸಹಿತಾ ||
ಮಲಿನ ಜಡದೇಹಮಂ ಮರೆದುಗ್ರ ದೀಕ್ಷೆಯಂ |
ತಳೆದವರ್ ಪ್ರಾಯೋಪವೇಶದಿಂದಾತ್ಮನಂ |
ತಿಳಿದೊಲಿಸಿ ನಿತ್ಯಸುಖ ಸಾಮ್ರಾಜ್ಯಮಂ ಪಡೆಯೆ ತೆರಳಿದರ್ ವಿಪಿನಕಾಗೀ || ೩೩೬ ||

**ವಚನ ||** ಮತ್ತಾ ಧರ್ಮನಂದನಂ ಮುಕುಂದಂಗೆ ಕೈಯ್ಯಂ ಮುಗಿದು ||

**ರಾಗ ನೀಲಾಂಬರಿ ಮಾತ್ರಾ ಝಂಪೆತಾಳ**

ಶ್ರೀ ರಮಾಧವಾ | ಮಹದುದಾರನೇ  || ಪಲ್ಲವಿ ||

ಭಾರತಾಹವ ತೀರಿತಲ್ಲವೆ | ಸೇರಿತೆಮ್ಮೊಳು ಜಯದ ಕೀರ್ತಿಯೂ ||
ಭಾರತಾಬ್ಧಿಯ ಮಥನವೆಸಗಿದಾ | ಭಾರ ನಿನ್ನದೂ || ಶ್ರೀರಮಾಧವಾ || ೩೩೭ ||

ಕಿರಿಯನಿರ್ಪನು ಪಾರ್ಥನಚ್ಯುತ | ತೊರೆದೆ ನಾನಿದ ರಾಜ್ಯಭೋಗವ |
ಕುರುಕುಲೇಂದ್ರರ ತರಿದ ವೀರನು | ಭರಿತ ಸತ್ವನೂ || ಶ್ರೀರಮಾಧವಾ || ೩೩೮ ||

ದಿಟ್ಟನೀತನು ಭೀಮಸೇನನು | ಪಟ್ಟವೀತಗೆ ಕಟ್ಟು ದೇವನೆ |
ನೆಟ್ಟನೊದಗುತೇ ಶೀಘ್ರದಿಂದಲಿ | ಇಷ್ಟವೆನಗಿದೂ || ಶ್ರೀರಮಾಧವಾ || ೩೩೯ ||

ಇಳೆಯು ಬೆಳಗಲಿ ಧರ್ಮ ನೆಲಸಲಿ | ನಳಿನನಾಭನೇ ಪಾಲಿಸೆಮ್ಮನು |
ದಳಿತ ಬಾಂಧವ ನಿನ್ನ ಮರೆಯದ | ನೆಲೆಯದೋರಿಸು || ಶ್ರೀರಮಾಧವಾ || ೩೪೦ ||

**ಕಂದ**

ಧರ್ಮಜನಾಡಿದ ನುಡಿಗಂ |
ಧರ್ಮಮಿದೆನುತೆಲ್ಲರೊಪ್ಪಲಾ ಸಹದೇವಂ ||
ಕರ್ಮಾಂಗವನರಿದಾಗಳ್ |
ಧರ್ಮಾಂಗದ ಶುಭ ಮಹೂರ್ತಮಂ ಪೇಳಲೊಡಂ || ೩೪೧ ||

**ವಚನ ||** ಎಂಬುದು ಭೀಮಂಗೆ ಪಟ್ಟಬಂಧಮಂ ಮಾಳ್ಪುದೆಂದು ವಾಸುದೇವಂ ಮುಂತಾಗಿ, ಸಹದೇವಂ ನಿರೂಪಿಸಿದ ಭವ್ಯ ಮುಹೂರ್ತದೊಳ್ ಹಸ್ತಿನಾಪುರಮಂ ಪೊಕ್ಕು ||

**ಮತ್ತೇಭವಿಕ್ರೀಡಿತ ವೃತ್ತಂ**

ದೆಸೆಯಂ ತೆಕ್ಕನೆ ತೀವೆತಾಟಿತ ಮಹಾಭೇರೀರವಂ ವಿಪ್ರರೇ |
ಣ್ದೆಸೆಯೊಳ್ವೇದ ನಿನಾದದಿಂ ಪರಸೆ, ಪಂಕೇಜಾಕ್ಷಿಯರ್ಕೂಡಿಸಂ ||
ತಸದಿಂ ಸೇಸೆಯನಿಕ್ಕೆ ಪಾಂಡವ ಬಲಪ್ರಾಕಾರ ವೀರಂಗ ಸಾ |
ಹಸಭೀಮಂಗೆ ಮನೋಮುದಂ ಬೆರಸುಕೃಷ್ಣಂ ಕಟ್ಟಿದಂ ಪಟ್ಟಮಂ || ೩೪೨ ||

**ರಾಗ ಢವಳಾರ ಏಕತಾಳ**

ಈಶನ ಸಮಬಲಗೇ | ಕುರುಕುಲ | ಭೂಷಣ ಪವನಜಗೆ ||
ಭಾಸುರ ಮಣಿಗಣ | ಭಾಸವಿನೂತನ | ದೋಷವಿನಾಶನ | ವಾಸವನುತನಿಗೆ ||
ತೋಷದೊಳಂಗನೆಯ | ರಾರತಿಯ ಬೆಳಗಿರೆ || ಶೋಭಾನಂ || ೩೪೩ ||

ನೀರಜಗಂಧಿಯರು | ಕುಣಿಯುತೆ | ಮಾರಮಯೂರಿಯರೂ |
ವಾರಿಜನಾಭಗೆ | ವೀರವಿನೋದಗೆ | ಭಾರತದೈವರ | ಭಾರವನಾಂತಗೆ ||
ವಾರಿಜಾಕ್ಷಿಯರುಗ | ಳಾರತಿಯ ಬೆಳಗಿರೆ || ಶೋಭಾನಂ || ೩೪೪ ||

**ಕಂದ**

ಸುಲಲಿತ ಜನಕಂ ಪೇಳ್ದೀ |
ಚೆಲುವಿನ ಕೃತಿಯ ಗಿರಿಜಾವರಂತೂರ್ಮೆಯೊಳಂ ||
ಸಲೆಪರಸುಗೆಸಬ್ಬಾಣಿಯೆ |
ನಲವಿಂದೊಲಿದೊಲ್ಮೆವೆತ್ತು ಸಲಹುಗೆ ಸತತಂ || ೩೪೫ ||

**ಭಾಮಿನಿ**

ಶರಧಿಯಂಬರ ಹಸ್ತಿ ಚಂದ್ರಮ |
ರಿರವು ನೃಪಶಕಶಾಲಿವಾಹನ |
ಕಿರಲು ಪಾರ್ಥಿವನಾಮ ವತ್ಸರ ಮಾಸ ಧನುವಿನೊಳೂ ||
ಸರಿದ ದಿನವೇಳೆನಿಪ ರವಿ ವಾ |

ಸರದಿ ರೋಹಿಣಿ ಧವಳ ಶುಭ ತಿಥಿ |
ವರ ಚತುರ್ದಶಿ ಶುದ್ಧಪಕ್ಷದ ಮಾರ್ಗಶೀರ್ಷದೊಳೂ || ೩೪೬ ||

[ಶಾ. ಶ. ೧೮೦೭ ಇಸವಿ ೧೮೮೫] ಜನಕ ಸಂಕಪ್ಪಾಖ್ಯ ಸೆಟ್ಟಿಗೆ | ಜನಿಸಿದಾತನು ಜನನಿ ಮುಂಡ್ಯಕೆ |
ತನಗೆ ವೆಂಕಪ್ಪಾಖ್ಯೆ ಸಂದಿರೆ ತಾಯಜನಕನದೂ ||
ಜನನಗೊಂಡಿಹ ನಾಡು ಪಾವೂ | ರೆನುವ ಪಳಮನೆ ಬೀಡು ಮೂಲದ |
ಮನೆಯು ಮುನ್ನೂರಾಯ ಮನೆತನಗುತ್ತು ಕುತ್ಯಾರಾ || ೩೪೭ ||

**ರಾಗ ಕಾಂಬೋಧಿ ತ್ರಿವುಡೆತಾಳ**

ಶಾಲ್ಯಗೋತ್ರದ ಭಟರ ಕುಲದೊಳು | ತಾಳ್ದೆ ಜನ್ಮವ ಬರೆದೆನೀ ಮಹ |
ಮೂಲ್ಯ ಕಥೆಯನು ಯಕ್ಷಗಾನದ | ನಲ್ಮೆಯಿಂದಾ || ೩೪೮ ||

ತೊಳಪ ರನ್ನನ ಕರದ ಕೈಪಿಡಿ | ಮಲಿನಗೊಂಡಿರಲೆನ್ನ ಕರದೊಳು ||
ಪೊಳೆವ ತೆರನಿದನೊಪ್ಪುಗೊಂಬುದು | ತಿಳಿದ ಬುಧರೂ || ೩೪೯ ||

ಧಾತೃನಾಮದ ವತ್ಸರದೆ ಕೃತಿ | ಪೂರ್ತಿಗೊಂಡುದು ಕಣ್ವಪುರ ಪತಿ |
ದಾತಗರ್ಪಿತಗೈದೆ ಕೃಷ್ಣಗೆ | ಪ್ರೀತಿಯಿಂದಾ || ೩೫೦ ||

**ರಾಗ ಸಾವೇರಿ ಝಂಪೆತಾಳ**

**ಭರತವಾಕ್ಯ**
ಮಂಗಳಂ ಶ್ರೀಕಾಂತ ಪದ ಪದ್ಮಕೇ | ನಿತ್ಯ ಶುಭಮಂಗಲಂ | ಶ್ರೀಕಾಂತ ಪದಪದ್ಮಕೇ || ಪ ||

ಪದಿನೆಂಟಕ್ಷೊಹಿಣಿಯ | ಬಲಗಳನು ಧುರಕಿಕ್ಕಿ |
ಪದಿನೆಂಟು ದಿನದೊಳಗೆ ನೆಲಕುಣಿಸಿ ಕೈತವದೆ |
ಸಹೃದಯಿ ಪಾಂಡವರಿಗೀ ಧರೆಯ ನೊಲಿದಿತ್ತ |
ಮಾಧವಗೆ ಮಂಗಳಂ | ಶ್ರೀಕಾಂತ ಪದ ಪದ್ಮಕೇ || ೩೫೧ ||

ಯುಗ ಯುಗದೊಳವತರಿಸಿ | ಪಗೆಗೊಂಡ ದುರುಳರನು |
ಬಗಿದಿಕ್ಕಿ ಸಾಧುಗಳ | ತೆಗೆದೆತ್ತಿ ಪಾಲಿಸಿದ |
ಜಗದೇಕನಾಥನಿಗೆ | ಖಗವರೂಥನಿಗೆ ಕವಿ
ಭೂಷಣಗೆ ಮಂಗಳಂ | ಶ್ರೀಕಾಂತ ಪದಪದ್ಮಕೇ || ೩೫೨ ||

**– ಸಂಪೂರ್ಣಂ –**

[1] ೧ ಶಾಕ್ವರ ಚಿಹ್ನ = ವೃಷಭಧ್ವಜ

# ಯಕ್ಷಗಾನ ಗದಾಪರ್ವ

## ಪಾತ್ರಗಳು

| | | | | |
|---|---|---|---|---|
| ಪಾಂಡವರು | ಹನುಮಂತ | ದುರ್ಯೋಧನ | ಅಶ್ವತ್ಥಾಮ | ಕೃಪಾಚಾರ್ಯ |
| ಸುಶರ್ಮ | ಸಂಶಪ್ತಕರು | ಶುಕತುಂಡ | ಧೃತರಾಷ್ಟ್ರ | ಚಾರಕರು |
| ಉತ್ತರೆ | ಬೇಹಿನ ಚರರು | ಶ್ರೀಕೃಷ್ಣ | ಶಲ್ಯ | ಕಲುಷಗಾಮಿನಿ |
| ಜಗಳಗ್ರಂಥಿ | ಕರಂಡಕಾಸುರ | ಸಂಜಯ | ಸಾತ್ಯಕಿ | ವೇದವ್ಯಾಸ |
| ಬಲರಾಮ | ಸೈನಿಕರು | | | |

# ಯಕ್ಷಗಾನ ಗದಾಪರ್ವ

**ರಾಗ ನಾಟಿ ರೂಪಕತಾಳ**

ಜಯ ಜಯ ಮಾತಂಗಾನನ | ಜಯ ಜಯ ತ್ರಿಜಗತ್ಪಾವನ |
ಜಯ ಜಯ ಮೂಷಿಕವಾಹನ | ಜಯ ವಿಘ್ನವಿಹರಣ ||
ಜಯ ಜಯ ಕರುಣಾಪೂರಣ | ಜಯ ಜಯ ದುರಿತನಿವಾರಣ |
ಜಯ ಜಯ ದೀನೋದ್ಧಾರಣ | ಜಯ ನಾಗಾಭರಣ || ಜಯ ಜಯ ಜಯ ಜಯತು || ೧ ||

ಬಾಲಾರ್ಕಾಮಿತ ಭಾಸುರ | ಬಾಲಶಶಾಂಕಕಲಾಧರ |
ಶೈಲಜೆಯಣುಗ ಕೃಪಾಕರ | ಸಾಲಂಕೃತ ಶೂರ |
ಪಾಲಿತಸರ್ವಚರಾಚರ | ಲಾಲಿತಗಗನಶುಭಾಕರ |
ವ್ಯಾಳೇಂದ್ರಾಸನ ಪ್ರಿಯಕರ | ಫಾಲಾಂಬಕಕುವರ | ಜಯ ಜಯ ಜಯ ಜಯತು || ೨ ||

ಹರಿಗಂಧಾಗರುಲೇಪಿತ | ನಿರುಪಮಚರಿತ ಗುಣಾನ್ವಿತ |
ಸುರುಚಿರಮಣಿಗಣಭೂಷಿತ | ಮರಕತಮಣಿಖಚಿತ |

ಪರಶುಪಾಶಾಂಕುಶಕರಧೃತ | ದುರಿತಾವಳಿ ವಿಚ್ಛೇದಿತ |
ಸರಳ ಸದಾ ಮೃದುಭಾಷಿತ | ಸ್ಮರಿಸುವೆನನವರತ || ಜಯ ಜಯ ಜಯ ಜಯತು || ೩ ||

**ವಾರ್ಧಕ**

ಸಚ್ಚಿದಾನಂದನಂ ಸಕಲಗುಣವೃಂದನಂ |
ಸ್ವಚ್ಛಂದರೂಪನಂ ಸ್ಮರಭಸ್ಮ ಲೇಪನಂ |
ಸಚ್ಚರಿತಸಾರನಂ ಸರ್ವಶೃಂಗಾರನಂ ಶರ್ವನಂ ಸರ್ವೇಶನಂ ||
ಅಚ್ಯುತಪ್ರೀಯನಂ ಅತಿಧವಳಕಾಯನಂ |
ದುಶ್ಚರಿತದೂರನಂ ದುರಿತಸಂಹಾರನಂ |
ನಿಶ್ಯಂಕ ನಿಪುಣನಂ ನಿರ್ದ್ವಂದ್ವಮಚಲನಂ ನೆನೆದೊರೆವೆನೀ ಕೃತಿಯನು || ೪ ||

ವನಚರೋತ್ತುಂಗನಂ ವನಧರನಿಭಾಂಗನಂ |
ವನಕಿಳಿದನೀತನಂ ವನದಿ ನಗ ಪೊತ್ತನಂ |
ವನಭೂಮಿಚೋರನಂ ವಧಿಸಿದಾಕಾರನಂ ಸಾರನಂ ಶೃಂಗಾರನಂ ||
ವನಮೃಗಾಧ್ಯಕ್ಷನಂ ವಟು ದೈತ್ಯಶಿಕ್ಷನಂ |
ಜನನಿಯೊಳ್ ಮುನಿದನಂ ವನವಾಸಕಯ್ದನಂ |
ವನಧಿ ಮನೆ ಗೆಯ್ದನಂ ವರ ಬುದ್ಧ ಕಲ್ಕ್ಯನಂ ಬಲಗೊಂಬೆ ದಶರೂಪನಂ || ೫ ||

ವನಚಾರಿಯಾದವನ ಹೆಮ್ಮಗನ ಸೋದರನ |
ತನಯನಂ ಬಗಿದವನ ಬಾಗಿಲಂ ಕಾಯ್ದವನ |
ಮನೆಯನುಂ ನೆಗಹಿದನ ಸುತನ ಗೆಲಿದವನಗ್ರಜನ ಪೆಗಲೊಳಾಂತು ಕುಣಿವ ||
ಘನಮಹಿಮನಯ್ಯನ ಕುಮಾರಕನ ಸೋದರನ |
ವನ ರಥದ ಸಾರಥಿಯ ಸೋದರಿಯ ಸಂಭವನ |
ತನುಜನನು ಚುಚ್ಚಿದನ ಕುಲದಂತಕನ ಪಿತಾಮಹ ಬ್ರಹ್ಮ ಶರಣು ಶರಣು || ೬ ||

**ಭಾಮಿನಿ**

ಶಾರದಾಂಬೆಗೆ ಶಂಕರಿಗೆ ವರ |
ಮಾರಮಾತೆಗೆ ಹಿಮಕರೆಗೆ ಸರ |
ಸೀರುಹಾಪ್ತಗೆ ಮುಖ್ಯ ದಿಕ್ಪಾಲರಿಗೆ ಋಷಿಗಳಿಗೆ ||
ಚಾರು ಕವಿ ವಾಲ್ಮೀಕಿಯಂಘ್ರಿಗೆ |
ಸಾರಿ ಕರಗಳ ಮುಗಿದು ವಂದಿಸಿ |
ವೀರ ಷಣ್ಮುಖಗೆರಗಿ ಪೇಳುವೆನೀ ಪ್ರಬಂಧವನು || ೭ ||

**ದ್ವಿಪದಿ**

ಶ್ರೀರಾಮಚರಣಾಬ್ಜಯುಗಭೃಂಗಕೆರಗಿ |
ನಾರದಾದಿ ಮುನೀಂದ್ರರಡಿಗೆ ತಲೆವಾಗಿ || ೮ ||

ಭಾರತಪುರಾಣದೊಳಗಂದು ಧರ್ಮಜನು |
ವೀರ ಶಲ್ಯನಗೆಲಿದ ಬಳಿಕ ಫಲುಗುಣನು || ೯ ||

ಸಮಸಪ್ತಕಾದಿ ದಾನವರನೆಲ್ಲರನು |
ಸಮರದೊಳು ಗೆಲಿದಾ ಕರಂಡಕಾದ್ಯರನು || ೧೦ ||

ಬಳಿಕ ಭೀಮನು ಕೌರವನನು ಸಂಹರಿಸಿ |
ಇಳೆಯಾಧಿಪತ್ಯವನು ಧರ್ಮಜಗೆ ರಚಿಸಿ || ೧೧ ||

ಹರಿಯ ಕಾರುಣ್ಯದಲಿ ಮೆರೆದ ಸಂಗತಿಯ |
ಒರೆವೆನೈ ಯಕ್ಷಗಾನದಲಿ ಸತ್ಕಥೆಯ || ೧೨ ||

ತಪ್ಪು ಸಾವಿರವಿರಲು ತಿದ್ದಿ ಬಲ್ಲವರು |
ಒಪ್ಪುಗೊಂಡಿದ ಮೆರೆಸಬೇಕು ಸಜ್ಜನರು || ೧೩ ||

ಯತಿ ಗಣ ಪ್ರಾಸ ವಿಷಮಾಕ್ಷರಗಳರಿಯೆ |
ಅತಿ ದೋಷಗಳ ಕ್ಷಮಿಸಬೇಕು ಶ್ರೀಹರಿಯೆ || ೧೪ ||

ನ್ಯೂನಾತಿರಿಕ್ತ ಬರಲದನೆಲ್ಲ ಮರೆದು |
ಸಾನುರಾಗದಿ ಪಂಚಲಿಂಗ ರಕ್ಷಿಪುದು || ೧೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂದುಕುಲ ಜನಮೇಜಯಗೆ ನಲ | ವಿಂದ ವೈಶಂಪಾಯ ಮುನಿಪತಿ |
ಚಂದದಿಂ ಭಾರತದ ಕಥನವ | ನಂದು ಮುದದಿ || ೧೬ ||

ವಿಸ್ತರಿಸುತಿರಲೊಂದು ದಿನ ಬಲು | ಭಕ್ತಿಯಲಿ ಋಷಿಯಂಘ್ರಿಗೆರಗುತ |
ಪೃಥ್ವಿಪಾಲಕನೆಂದನಾ ಮುನಿ | ಪೋತ್ತಮನೊಳು || ೧೭ ||

ಯತಿಕುಲಾಗ್ರಣಿ ಕೇಳು ಧರ್ಮಜ | ನತಿರಥರೊಳಗ್ಗಳೆಯ ಶಲ್ಯನ |
ಮಥಿಸಿದಂದವದೆಂತು ನರ ಶ್ರೀ | ಪತಿಯ ದಯದಿ || ೧೮ ||

ದುರುಳ ಸಮಸಪ್ತಕರ ಮಿಗೆ ಸಂ | ಹರಿಸಿ ದೈತ್ಯ ಕರಂಡಕಾದ್ಯರ |
ಧುರದಿ ಹನುಮನು ಗೆಲಿದ ಕಾರಣ | ದಿರವದೆಂತು || ೧೯ ||

ದುರುಳ ಕೌರವನೃಪನ ರಣದಲಿ | ಮರುತಜನು ಸಂಹರಿಸಿ ಯಮಜಗೆ |
ಧರೆಯ ಪಟ್ಟವ ರಚಿಸಿದಂದವ | ನೊರೆವುದಾರ್ಯ || ೨೦ ||

ಎನುತ ಚರಣದಿ ಮಣಿದ ಭೂಪನ | ವಿನಯದಿಂ ಪಿಡಿದೆತ್ತಿ ಮುನಿಪತಿ |
ವನಧಿಶಯನನ ಪಾದಕಮಲವ | ನೆನೆದುಸಿರ್ದ || ೧೧ ||

**ವಾರ್ಧಕ**

ಶರಧಿವಸನೇಶ ಜನಮೇಜಯ ನರೇಂದ್ರ ಗುಣ |
ಶರಧಿಸಮ ಗಂಭೀರ ಲಾಲಿಸೈ ಶಶಿವಂಶ |
ಶರಧಿ ಪೂರ್ಣಶಶಾಂಕ ಕೇಳಾದಡೊರೆವೆನವಧರಿಸೇಕಚಿತ್ತದಿಂದ ||
ಹರಿಯೊಲುಮೆಯಿಂದಲಾ ಹರಿಸೂನು ಸಂಗರದಿ |
ಹರಿಯಣುಗನಂ ಕೊಲಲು ಹರಿಸುತಂ ಕೇಳ್ದಾಗ |
ಹರಿಪುತ್ರನಳಿದ ವ್ಯಥೆ ಹರಿದು ಮನದೊಳಗೆ ಶ್ರೀಹರಿಯ ಧ್ಯಾನಿಸುತಿರ್ದನು || ೧೨ ||

ಇರಲಿತ್ತ ವಿಗತಾಕ್ಷನೃಪತಿಗಾ ಸಂಜಯಂ |
ಒರೆಯಲೀ ಹದನಮಂ ಕೇಳ್ದು ಚಿಂತಾಗ್ನಿಯೊಳು |
ಮರುಗಿ ಮೂರ್ಛಿತನಾದ ಧೃತರಾಷ್ಟ್ರನಂ ಬಳಿಕ ಪಿಡಿದೆತ್ತಿ ತವಕದಿಂದ ||
ಒರೆದನೈ ನೀ ಮೊದಲು ಬಿತ್ತಿದ ವಿಷದ್ರುಮಾಂ |
ಕುರಿಸಿ ಫಲವಾಯಿತದನುಣ್ಣಬೇಕಲ್ಲದೀ |
ಪರಿಯೊಳಳಲಿದರಹುದೆ ಪರಿಹಾರವೆನುತಲತಿ ಧೈರ್ಯಮಂ ಪೇಳ್ದನವಗೆ || ೧೩ ||

ಕುರುರಾಯ ಬಳಿಕಿತ್ತ ಕಲಿ ಕರ್ಣನಳಿದುದಂ |
ಪರಿಕಿಸುತ ಮೂರ್ಛೆಯಂ ತಾಳಿ ಬಿದ್ದಿರಲಾಗ |
ಗುರುಸೂನು ಕೃತವರ್ಮ ಕೃಪರಂದು ಸಂತವಿಸಿ ಧೈರ್ಯಗಳನೊರೆದು ನೃಪಗೆ |
ವರ ಮಾದ್ರಿಪತಿಯ ದಳದರಸುತನಕೊಡಬಡಿಸಿ |
ತರತರದ ನಿಸ್ಸಾಳ ವಾದ್ಯದಬ್ಬರದಿಂದ |
ವರಮಹಾಸೇನಾಧಿಪತ್ಯಮಂ ಪರುಠವಿಸುತನುವಾದರಿತ್ತ ರಣಕೆ || ೧೪ ||

**ಭಾಮಿನಿ**

ಈಸು ಪರಿ ವಾರ್ತೆಗಳನಾ ಧರ |
ಣೀಶ ಧರ್ಮಜನರಿತು ಬಂದಾ |
ವಾಸುದೇವನ ಚರಣಕೆರಗುತ ವಿನಯಪರನಾಗಿ ||
ಕೇಶವಾಚ್ಯುತ ಪದ್ಮನಾಭ ಸು |
ರೇಶ ಪೂಜಿತ ಮದನಜನಕಬು |
ಜಾಸನಾರ್ಚಿತ ಶರಣೆನುತ್ತಿಂತೆಂದನವನೀಶ || ೧೫ ||

**ರಾಗ ಮಧುಮಾಧವಿ ಏಕತಾಳ**

ದೇವಾಧಿದೇವ ಚಿತ್ತವಿಸು ಬಿನ್ನಪವ | ಭಾವಜಜನಕನೆ ಶರಣಸಂಜೀವ |
ಮಾವ ಶಲ್ಯಗೆ ಸೇನೆಯಧಿಪತಿತ್ವವನು | ಠೀವಿಯಿಂ ರಚಿಸಿದನಂತೆ ಕೌರವನು || ೧೬ ||

ನಾವಿನ್ನು ಮಾಡುವ ಯತ್ನಗಳೇನು | ಜೀವನದೊಡೆಯ ನೀ ಬಲ್ಲೆ ಕಾರ್ಯವನು |
ತೀವಿದ ಸಂಗರವೆಸಗುವ ಬಗೆಯ | ಸಾವಧಾನದಿ ಪೇಳ್ದು ಸಲಹಬೇಕಯ್ಯ || ೧೭ ||

ಎಂದು ಧರ್ಮಜನು ಶ್ರೀಹರಿಪಾದಕಂದು | ವಂದಿಸಿ ಪೇಳಲು ಕಲಿ ಭೀಮ ಬಂದು ||
ಇಂದೆನ್ನ ಕಳುಹು ಯುದ್ಧಕೆ ಸಾಕಿದೆಂದು | ಬಂದೆಲ್ಲ ಭಟರು ಗರ್ಜಿಸಿದರು ನಿಂದು || ೧೮ ||

**ಭಾಮಿನಿ**

ಆ ಸಮೀರಜ ಸುರಪಸೂನು ಮ |
ಹಾ ಸುಭಟರೆಲ್ಲವರು ಮಿಗೆ ಮಾ |
ದ್ರೀಸುತರು ನಾ ಮುನ್ನ ತಾ ಮುನ್ನೆನುತ ಗರ್ಜಿಸಲು ||
ವಾಸುದೇವನು ನಗುತ ನಿಮ್ಮಯ |
ವಾಸಿ ಕೊಳ್ಳದು ಶಲ್ಯಭೂಪನ |
ಗಾಸಿ ಮಾಳ್ಪರೆ ಧರ್ಮಸುತ ಹೊರತಿಲ್ಲ ಭಟರೆಂದ || ೧೯ ||

**ರಾಗ ಭೈರವಿ ತ್ರಿವುಡೆತಾಳ**

ಮುರಹರನು ಬಳಿಕಿತ್ತಲೀ ತೆರ | ನರುಹುತಿರುತಿರಲತ್ತ ಮಾದ್ರೇ |
ಶ್ವರನು ರಣಕಯ್ತುರುವ ವಿಭವವ | ಪರಿಕಿಸುವೆನೆಂದೆನುತ ಬೇಗದಿ |
ತರಣಿಯುದಯಾಚಲದ ಶಿಖರದಿ | ಮೆರೆಯಲಂದತಿ ರಭಸದಲಿ ಮುಂ |
ಬರಿದು ಧರೆ ಬಿರಿವಂದದಲಿ ಬಲ | ವೆರಸಿ ಶಲ್ಯನೃಪಾಲ ಭರದಲಿ ||
ಬಂದನಾಗ | ಸಮರಕೆ | ನಿಂದನಾಗ || ೨೦ ||

ಹತ್ತು ಸಾವಿರದೇಳುನೂರರು | ವತ್ತು ಗಜ ಮಿಗಿಲೆರಡು ನೂರರು |
ವತ್ತು ಲಕ್ಷ ತುರಂಗಗಳು ಸಹ | ಪತ್ತಿ ಮೂರ್ಕೋಟಿಯನು ನೃಪ ಕೈ |
ವರ್ತಿಸಿದ ಸಮಸಪ್ತಕರು ಗುರು | ಪುತ್ರ ಮೊದಲಾದಖಿಳ ಸುಭಟರ |
ಮೊತ್ತದೊಗ್ಗಿನಲಂದು ರಥವೇ | ರುತ್ತಧಿಕ ರೋಷದಲಿ ಸಮರಕೆ || ಬಂದನಾಗ || ೨೧ ||

ಇದಿರಲೌಕಿತು ಗಾಳಿ ಪಟ್ಟದ | ಮದ ಗಜಾವಳಿ ಮುಗ್ಗಿತಾ ಧ್ವಜ |
ವುದುರಿದುದು ದಳಪತಿಯ ನಿಮಿಷದಿ | ಬಿದಿರಿದುದು ಕೆಂಧೂಳುತಾರಕೆ | ಯುದುರಿತಭ್ರದೊಳಿಂತು ದುಶ್ಯಕು | ನದ

ಪರೀಕ್ಷೆಯ ಗಣಿಸದಯ್ದಿದ |
ರಥಟುತನದಲಿ ಕದನಕೆನುತಲಿ | ಮದಮುಖರು ಗರ್ಜಿಸುತ ಭರದಲಿ || ಬಂದನಾಗ || ೨೨ ||

**ಭಾಮಿನಿ**

ಇಳೆಯಧೀಶ್ವರ ಲಾಲಿಸೀ ಪರಿ |
ಯೊಳಗೆ ಮಾದ್ರಾಧೀಶ ತನ್ನಯ |
ದಳ ಸಹಿತ ನಡೆತಂದು ಮಣಿಹಾರಕನ ಕರೆದೆಂದ ||
ನಿಲದೆ ಹೋಗಾ ಧರ್ಮಜನ ಕೊಳು |
ಗುಳಕೆ ಬರಹೇಳೆನಲು ನಡೆದಾ |
ನಳಿನಸಖಸುತನಣುಗನೊಡನಿಂತೆಂದನತಿ ಭರದಿ || ೩೩ ||

**ರಾಗ ಮುಖಾರಿ ಏಕತಾಳ**

ಕೇಳು ಕೇಳಯ್ಯ ಧರ್ಮರಾಯ | ಸಂಗರಕೆ ಬೇ | ಗೇಳು ನೋಡಿಂದಿನ ಹೊಸ ಪರಿಯ |
ಕಾಲನಂದದೊಳಿಹ | ನಾಲಿಸು ಶಲ್ಯನು | ಮೇಲೆಮ್ಮಯದಳ | ಕಾಳಿದನಾದನು |
ಕಾಳಗಕೆನುತಲೆ | ಮೇಳಯಿಸುತ ಬಹ | ನೇಳೇಳೀ ಕ್ಷಣ | ಪೇಳಲಿನ್ನೇನು || ೩೪ ||

ತಮ್ಮಂದಿರೆಲ್ಲರ ನೀ ಕೂಡಿ | ಉಳಿದಿರ್ದ ಸೈನ್ಯ | ವೊಮ್ಮುಖ ಮಾಡಿ ಜೋಡುಗೂಡಿ ||
ಹಮ್ಮುಗೆಯುಳ್ಳರೆ | ನೆಮ್ಮಿ ಧುರವನಿದು | ಸುಮ್ಮನೆ ಪೋಗದು | ನಮ್ಮರಸನ ಬಗೆ |
ಸಮ್ಮತ ಬೇಡಿಕೊ | ನಿಮ್ಮಯ ಕೃಷ್ಣನ | ನುಮ್ಮಳಿಸದೇ ನೀ | ಘಮ್ಮನೆ ಹೊರಡು || ೩೫ ||

ಸತ್ತ್ವಾತಿಶಯದ ನಿನ್ನ ಪಡೆಯ | ಸಂಗರದಿ ನು | ಗ್ಗೊತ್ತಿ ನಿಮ್ಮಯ ಜಯಸಿರಿಯ ||
ಅತ್ತಲೆಳದು ಕುರು | ಪೃಥ್ವಿಪತಿಗೆ ಕೈ | ವರ್ತಿಪೆನೆಂದಾ | ಮತ್ತಾ ಶಲ್ಯನು |
ಚಿತ್ತದೊಳಗೆ ಖತಿ | ವೆತ್ತು ಬಂದಿರುವನು | ಹೊತ್ತುಗಳೆಯದೇ | ಳಿತ್ತ ಸಂಗರಕೆ || ೩೬ ||

**ಭಾಮಿನಿ**

ಚರರ ನುಡಿಯನು ಕೇಳ್ದು ಧರ್ಮಜ |
ನರುಹಿದನು ಬಹರೀ ಕ್ಷಣದೊಳೆಂ |
ದರುಹು ನಿಮ್ಮೊಡೆಯಂಗೆ ಲಯಕಾಮಿನಿಯ ಪರಿಣಯಕೆ ||
ಪರುಠವಿಸಿ ಸನ್ನಾಹಗಳನನು |
ಕರಿಸಿಕೊಂಡಿರಹೇಳು ಹೋಗೆಂ |
ದರಸನವನನು ಕಳುಹುತತ್ತಲು ಸಮರಕನುವಾದ || ೩೭ ||

**ರಾಗ ಆಹೇರಿ ಝಂಪೆತಾಳ**

ಕೊಳುಗುಳಕೆ ಬರುತಿರ್ದ ಭರದಿ | ಚತುರಂಗ |
ಬಲವೆರಸಿ ಧರ್ಮಜನು ಸಕಲ ಸಂಭ್ರಮದಿ || ಪ ||

ಮುಂದೆ ಪಾಠಕರು ಪೊಗಳುತ ಬರಲು ಬಳಿಕದರ |
ಹಿಂದೆ ಬಿಲ್ಲಾಳುಗಳು ಬರಲವರು ಸಹವಾಗಿ |
ಮಂದಿ ಕುದುರೆ ಸಮೂಹ ಗಜಘಟೆಗಳೊಗ್ಗಿನಲಿ |

ಸಂದಣಿಯ ರಾಯದಳ ಸಹಿತ | ಅಧಿಕತರ |
ಚಂದದಿಂಮಣಿ ರಥನಿಕಾಯದೊಳಗಿರುತ || ೩೮ ||

ಧುರದಿ ಸಹದೇವ ಶಕುನಿಯ ಸೈನ್ಯಮಂಬೆರಸ |
ಲರಸ ದಳಪತಿಯೊಡನೆ ವರ ಸಾತ್ಯಕಿಯ ರಥವ |
ಗುರುಸೂನು ತಡೆಯೆ ಮುಂದುರವಣಿಸಿ ಗೌತಮಿಯ |
ಭರದಿಂದ ನಕುಲಾಂಕ ತಡೆದು | ಸಂಗರದಿ |
ಬೆರಸಿ ಕೋಪಾಗ್ನಿಯೊಳು ಹೊಯ್ದಾಡಿ ಜಡಿದು || ೩೯ ||

ಕಂಡು ದಳಪತಿ ಕಾಲರುದ್ರನಂದದಿ ರೋಷ |
ಗೊಂಡು ಫಡ ಧರ್ಮಸುತ ನಿಲ್ಲೆನುತ ಬಳಿಕವು |
ದ್ದಂಡ ಸತ್ತ್ವದಿ ಸರಳಮಳೆಗರೆದು ಮುಸುಕಿದನು |
ದಂಡಧರ ಸುಕುಮಾರನ | ಸೈನ್ಯವನು |
ಗಂಡುಗಲಿ ಧರಿಸಿ ಕಡುರೋಷಪಾವಕನ || ೪೦ ||

**ರಾಗ ಶಂಕರಾಭರಣ ಮಟ್ಟೆತಾಳ**

ಅರಸ ಕೇಳು ದಂಡಧರನ | ವರ ಕುಮಾರನಖಿಳ ಸೈನ್ಯ |
ವಿರದೆ ವೈರಿದಳಗಳನ್ನು | ಬೆರಸಿ ಹೊಕ್ಕುದು ||
ಅರರೆ ಕವಿಯೆನುತ್ತಲಿವರು | ಭರದಿ ನಿಂತರಿಂತು ಬಾಣ |
ಪರಶು ತೋಮರಂಗಳಿಂದ | ತರುಬುತಿರ್ದರು || ೪೧ ||

ಹರಿಯ ಹಯದಿ ಗಜವ ಗಜದಿ | ವರ ವರೂಥಗಳನು ರಥದಿ |
ಮುರಿದು ರಾವುತರನು ರಾವ್ತ | ರಿರದೆ ಹೊಯ್ದರು |
ಧುರದಿ ರೋಷವೆತ್ತು ಶಲ್ಯ | ಧರಣಿಪಾಲನೊಡನೆ ಯಮಜ |
ಶರವ ತೂಗುತೆಂದನವನ | ಪರಿಕಿಸುತ್ತಲಿ || ೪೨ ||

**ರಾಗ ದೇಶಿ ಅಷ್ಟತಾಳ**

ನಿಲ್ಲು ನಿಲ್ಲೆಲೊ ಫಡ ಫಡ ಮಾದ್ರೇಶ |
ಬಲ್ಲೆ ನಿನ್ನಯ | ಖುಲ್ಲತನಗಳ | ನಿಲ್ಲಿಸುವೆನೀ ಕ್ಷಣದಲಿ || ೪೩ ||

ನಮ್ಮ ಬಂಧುತ್ವದವನಾಗಿ ನೀನಿಂದು |
ದುರ್ಮದಗಳಿಂ | ದೆಮ್ಮರಿಯ ಸೇ | ರ್ದುಂ ಮದತ್ವದಿ ಬಂದೆಯ || ೪೪ ||

ಗಳಿಗೆ ಸೈರಿಸಿ ನೋಡಿಂದಿನಲಿ ನಿನ್ನ |
ಬಲಿಯ ಕೊಡುವೆನು | ಭೂತನಿಕರಕೆ | ತೊಲಗದಿದಿರಾಗೆಂದನು || ೪೫ ||

**ವಾರ್ಧಕ**

ವಸುಧೀಶ ಕೇಳಿಂತು ಕಿನಿಸಿಂದ ಮುನಿಸಿಂದ |
ಲಸಮ ಸಾಹಸಸತ್ತ್ವದೊಲವಿಂದ ಗೆಲವಿಂದ |
ವಸುಮತೀಪತಿ ಯಮಜ ಭರದಿಂದ ಕರದಿಂದ ಧುರದೊಳಸ್ತ್ರಂಗಳಿಂದ ||
ಮುಸುಕಿದಂ ಮಾದ್ರೇಶನಂಗಮಂ ಭಂಗಮಂ |
ಕುಸುಕಿದಂ ಸಾರಥಿ ವರೂಥಮಂ ಯೂಥಮಂ |
ದೆಸೆಗೆಡಿಸಿ ಬಿಡದೆ ರಿಪುಸೈನ್ಯಮಂ ದೈನ್ಯಮಂ ಬರಿಸಿದಂ ಸಂಗರದೊಳು || ೪೬ ||

**ಕಂದ**

ಇಂತಸ್ತ್ರದ ವರ್ಷಗಳಂ |
ಕುಂತೀಸುತ ಕರೆದು ಗಜರಿ ಗರ್ಜಿಸಲಾಗಳ್ ||
ತಾಂ ತಳುವದೆ ಮಾದ್ರೇಶಂ |
ಪಂಥದೊಳದ ಸವರುತೆಚ್ಚು ಧರ್ಮಜಗೆಂದಂ || ೪೭ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲೆ ಧರ್ಮಜಾತನೆ ಕೇಳಿಂದು | ಪಗೆ | ಗಳ ಕೂಡಿ ಬಂದಿಹೆ ನಾನೆಂದು |
ಬಲುಮೆಯ ಮಾತೇಕಾಡುವೆ | ನಿನ್ನ | ಬಲುಹನೀ ಕ್ಷಣದೊಳೀಡಾಡುವೆ  || ೪೮ ||

ಧರಣಿಪಾಲರ ನೀತಿಗುಣದಿಂದ | ಕೌರ | ವರ ರಾಯ ಕರೆತಂದನದರಿಂದ |
ಧುರಕೆ ಬೆಂಬಲವಾತಗಾದೆನು | ಯೆಂದು | ಕೆರಳಿ ಕೆಂಗರಿಗೋಲ ಕರೆದನು || ೪೯ ||

ಎಚ್ಚ ಕೋಲಾ ರಣರಂಗದಿ | ಬಂದು | ಚುಚ್ಚಿ ಭೂವರನ ಸರ್ವಾಂಗದಿ ||
ಬಿಚ್ಚಿ ತೊಟ್ಟಿರುವ ಸೀಸಕವನ್ನು | ಎದೆ | ಗುಚ್ಚಿ ಸೂಸಿತು ರಕ್ತಜಲವನ್ನು || ೪೭ ||

ಅನಿತರೊಳ್ ಮಾದ್ರಿಕುಮಾರರು | ಬಂದು | ಧನುವಿಗಸ್ತ್ರವ ಪೂಡುತೆಂದರು ||
ಜನನಿಯಗ್ರಜನಾಗಿ ನೀನಿಂದು | ನಮ್ಮ | ಕೆಣಕಿದೆ ಪಗೆಯೊಡನಯ್ತಂದು || ೪೮ ||

ಕಾಯದಾಸೆಯ ಬಿಡು ಸಾಕಿನ್ನು | ನಿನ | ಗಾಯುಷ್ಯಕವಧಿ ಬಂದಿಹುದಿನ್ನು ||
ಸಾಯದಿರೆಮ್ಮಗ್ರಜನೊಳೆಂದು | ಬಲು | ಸಾಯಕಗಳನೆಚ್ಚರವರಂದು || ೪೯ ||

**ವಾರ್ಧಕ**

ಅರಸ ಕೇಳ್ ಮಾದ್ರಿಸಂಜಾತರಿಂತೆನಲವರ  |
ಶರವರ್ಷಮಂ ತರಿದು ಧಿಕ್ಕರಿಸಿ ತರುಬಿದಂ |
ಧುರದಿ ಮಾದ್ರೇಶನರಿಸೇನೆಯೊಳು ಬೀದಿವರಿದತಿರಥ ಮಹಾರಥರನು ||
ಸರಳ ಮಳೆಗರೆದು ಮುಂದುರವಣಿಸಲಿತ್ತಲುಂ |
ಉರಿಗಣ್ಣನಂತೆ ರೋಷಿತನಾಗಿ ಫಲುಗುಣಂ |
ಗುರುಜ ಗೌತಮಿ ಸುಶರ್ಮಾದಿಗಳ ನೆರವಿಯಂ ಪೊಕ್ಕು ಕೋಲ್ಮಳೆಗರೆದನು || ೫೦ ||

**ರಾಗ ಶಂಕರಾಭರಣ ಮಟ್ಟೆತಾಳ**

ಎರಡು ಬಲ ವಿರೋಧದಿಂದ ಕದನಮಧ್ಯದಿ |
ತುರಗ ಗಜ ವರೂಥಗಳನು ಸವರಿ ತ್ವರಿತದಿ ||
ಉರಿಯನುಗುಳುತಾಗ ಪಾರ್ಥನಿದಿರು ರೋಷದಿ |
ಗುರು ಕುಮಾರನಂದು ಪೇಳ್ದನಧಿಕ ರೌದ್ರದಿ || ೫೧ ||

ಎಲೆ ಕಿರೀಟಿ ಸೂತಸುತನ ಗೆಲಿದೆನೆನುತಲಿ |
ನಲವಿನಿಂದ ಪಿತ್ತವೇರಿ ಕುಣಿವೆ ಮನದಲಿ ||
ಇಳೆಯು ಸಿಕ್ಕಿತೆಂದು ಹಿಗ್ಗಬೇಡ ಸುಮ್ಮನೆ |
ಹಳುವವನ್ನು ಹೊಗಿಸದಿರೆನು ನಿನ್ನ ಧಮ್ಮನೆ || ೫೨ ||

ಹಳುವದಲ್ಲಿ ಸೇರಿ ತಳಿರ ಗುಡಿಯೊಳಿರ್ಪುದು |
ಮುಳುಗಿ ನೀರ ಜಪ ತಪಂಗಳನ್ನೆ ಮಾಳ್ಪುದು ||
ಇಳೆಯ ಸುರರ ಧರ್ಮವೆನ್ನೊಳಾಡಲೇತಕೊ |
ಉಳಿಯಗೊಡೆನು ನಿನ್ನ ಮನದಿ ಗ್ರಹಿಸಿ ನೋಡಿಕೊ || ೫೩ ||

ತಿಳಿದು ಬಲ್ಲೆ ಹಿಂದೆ ನಾನು ದ್ಯೂತಮುಖದಲಿ |
ಇಳೆಯ ತೆತ್ತು ವನವ ಸಾರ್ದ ಪರಿಯನೆನ್ನಲಿ ||
ಗಳಹ ಬೇಡ ನಿನ್ನನೀಗಲೀ ರಣಾಗ್ರದಿ |
ಬಲಿಯ ಕೊಡುವೆ ಭೂತಗಣಕೆ ನೋಡು ಶೀಘ್ರದಿ || ೫೪ ||

ಎನುತಲಗಣಿತಾಸ್ತ್ರವೆಸೆಯೆ ಕಂಡು ಪಾರ್ಥನು |
ಕ್ಷಣದೊಳದರ ತರಿದು ಗುರುಜನೊಡನೆ ಪೇಳ್ದನು ||
ಬಣಗೆ ಬಗುಳಬೇಡ ಪಶುವಿಗಾಗಿ ಪೂರ್ವದಿ |
ಕೆಣಕಿ ನೊಂದುದನ್ನು ಮರೆತು ನುಡಿವೆ ಗರ್ವದಿ || ೫೫ ||

ಎನಲು ನೂರು ಬಾಣದಿಂದ ನರನನೆಚ್ಚನು |
ಕನಲಿ ಪ್ರತಿ ಶರೌಘದಿಂದ ಕಡಿದು ಪಾರ್ಥನು ||
ಧನುವನೊದರಿಸುತ್ತ ಮೂರು ಸರಳನೆಸೆದನು |
ಮನದಿ ನೊಂದು ಗುರುಕುಮಾರ ಕೆಲಕೆ ಸಾರ್ದನು || ೫೬ ||

**ರಾಗ ಮಾರವಿ ಏಕತಾಳ**

ಧರಣಿಪ ಕೇಳೀ | ತೆರದಿಂ ಪಾರ್ಥನು | ಗುರುಸುತನಂಗವ |
ಶರದಲಿ ಕೀಲಿಸಿ | ಕರಿ ರಥ ಪದಚರ | ತುರಗವ ನುಗ್ಗರಿ |
ದೊರೆಸುತ ರಣದಲಿ | ಪರಿಶೋಭಿಸಿದ | ನೇನನೆಂಬೆ || ೫೭ ||

ಹತ್ತು ಕೃಪಗೆ ತೊಂ | ಭತ್ತು ಶಲ್ಯಗೆ ಮೂ | ವತ್ತು ಸುಶರ್ಮಗೈ |
ವತ್ತು ಶಕುನಿಗೆಂ | ಭತ್ತು ಮಹಾಸ್ತ್ರವ | ನಿತ್ತು ಬಿದ್ದಿಹ ದಳ |
ಪತ್ತಿ ಸಮೂಹವ | ತೊತ್ತ ಳದುಳಿದ | ನೇನನೆಂಬೆ || ೫೮ ||

ಕೆರಳ್ದನು ಸೌಬಲ | ಹೊರಳ್ದನು ಕೃಪ ನೆಲ | ಕುರುಳ್ದನು ರಥದಿಂ |
ಪೊರಳ್ದ ಸುಶರ್ಮಕ | ನೊರಲ್ದವು ಗಜಘಟೆ | ನರಳ್ದುದು ಹಯಗಳು |
ಮರುಳ್ದುದು ರಥಬಲ | ವುರುಳ್ದುದು ರಣದಿ | ಏನನೆಂಬೆ || ೫೯ ||

ಚಟುಳ ಪರಾಕ್ರಮಿ | ಪಟುತರ ಕೋಪದೊ | ಳಟಿಕಟಿಸುತ ಧೂ |
ರ್ಜಟಿಯಂದದೊಳಾ | ರ್ಭಟಿಸುತ ಶಲ್ಯನು | ಕುಟಿಲತನದೊಳರಿ |
ಕಟಕದಿ ಯಮಜನ | ನಟಕಿಸುತೆಂದನೇನನೆಂಬೆ || ೬೦ ||

**ರಾಗ ಭೈರವಿ ಏಕತಾಳ**

ಎಲೆ ಕಾಲಾತ್ಮಜ ಕೇಳು | ಈ | ನೆಲ ನಿನಗಾಹುದು ತಾಳು |
ತಳುವದೆ ಕೊಡಿಸುವೆನೆನುತಾ | ಕೋಲ್ | ಮಳೆಗರೆದನು ಗರ್ಜಿಸುತ || ೬೧ ||

ಅನುವರದಲಿ ಸೂತಜನ | ಹಯ | ವನು ನಡೆಸುತಲಿರ್ದವನ ||
ಘನ ಪೌರುಷವೇನೆಂದು | ಬಹ | ಕಣೆಗಳ ಕಡಿದಿಡಲಂದು || ೬೨ ||

ಚತುರಾನನ ಮಾಧವರು | ಸಾ | ರಥಿತನವನು ಗೆಯ್ದಿಹರು |
ಅತಿಶಯವೆನ್ನೊಳಗಲ್ಲ | ಛೀ | ಮತಿಹೀನನೆ ಬಿಡುಸೊಲ್ಲ || ೬೩ ||

ಕುಲಧರ್ಮಗಳನು ಮೀರಿ | ಕುರು | ಕುಲಜನ ಕೂಳಿಗೆ ಸೇರಿ ||
ಗಳಹುವ ಮೂಢನು ನೀನೋ | ಪೇ | ಳೆಲೊ ಮತ್ತಿದರೊಳಗಾನೋ || ೬೪ ||

ಎನಲತಿ ರೋಷದಿ ಶಲ್ಯ | ನಿ | ನ್ನನು ರಣದಲಿ ನಿರ್ಮಾಲ್ಯ |
ವನು ಮಾಡದೆ ಬಿಡೆನೆಂದು | ಎಸೆ | ದನು ಘನ ಶಕ್ತಿಯೊಳಂದು || ೬೫ ||

**ಭಾಮಿನಿ**

ಕ್ಷಿತಿಜ ಕೇಳ್ ವಾತಾಶನನು ಹರಿ |
ರಥನುರುಬೆಗೆದೆ ಬಿರಿವವೋಲ್ ದಳ |
ಪತಿಯ ಶಕ್ತಿಯ ಹತಿಗೆ ಧರ್ಮಜನೊರಗೆ ಮೂರ್ಛೆಯಲಿ ||
ಖತಿಯೊಳಾ ಕಲಿಭೀಮ ಮಾದ್ರಾ |
ಪತಿಯ ಸಮ್ಮುಖಕಾಗಿ ನಡೆತಂ |
ದತಿರಥನನಡಹಾಯ್ದುತೆಂದನು ಸಿಂಹನಾದದಲಿ || ೬೬ ||

**ರಾಗ ಮಾರವಿ ಏಕತಾಳ**

ಫಡ ಫಡ ಭಂಡ ನೃಪಾಧಮ ನಿಲು ಮುಂ | ದಡಿಯಿಡದಿರು ನಿನ್ನ ||
ಪಡೆಪತಿಯೆನ್ನುವ ಗರುವವ ನಿಲಿಸುವೆ | ಕೊಡು ಬವರವ ಮುನ್ನ || ೬೭ ||

ಎನುತಿಟ್ಟಣಿಸುತ ಭಾರಿ ಗದೆಯೊಳಂ | ದಣಕಿಸಿ ಶಲ್ಯನನು |
ಮಣಿರಥವನು ಪುಡಿಗೆಯ್ಯಲು ಪ್ರತಿರಥ | ವನು ಸಾರ್ದುಸಿರಿದನು || ೬೮ ||

ಭಳಿರೆ ಸಮೀರ ಕುಮಾರಕ ರಣ ಕೈ | ಚಳಕದಿ ಬಲ್ಲಿದನು ||
ಕೊಳುಗುಳದೊಳಗೆ ಸಮರ್ಥನೆನುತ ಕೋಲ್ | ಮಳೆಯನು ಸುರಿಸಿದನು || ೬೯ ||

ಆ ಸಮಯದಿ ಯಮಸುತನೆಚ್ಚರ್ತತಿ | ರೋಷದಿ ಹುಂಕರಿಸಿ ||
ಬಾ ಸಮ್ಮುಖಕೆನುತೆಚ್ಚನು ಶಲ್ಯನ | ದೂಷಿಸಿ ಭೀಕರಿಸಿ  || ೭೦ ||

ಎಚ್ಚ ಮಹಾಸ್ತ್ರವು ಮಾದ್ರಾಧಿಪನುರ | ಕುಚ್ಚಲು ರಣದೊಳಗೆ |
ಎಚ್ಚರಿಕೆಯ ತೊರೆದೊರಗಲು ಸೇನೆಯು | ಬೆಚ್ಚಿತು ಕ್ಷಣದೊಳಗೆ || ೭೧ ||

**ಕಂದ**

ಅರೆನಿಮಿಷದಿ ಶಲ್ಯನು ಮೈ |
ಮುರಿದೇಳುತ್ತ ಗಜರಿ ಘನ ರೋಷದೊಳಾಗಲ್ ||
ಧರೆ ಬಿರಿವಂದದಿ ಬಳಿಕಾ |
ಶರವರುಷವ ಕರೆವುತ್ತೆಂದನು ಧರ್ಮಜಗಂ  || ೭೨ ||

**ರಾಗ ಭೈರವಿ ಅಷ್ಟತಾಳ**

ಎಲವೊ ಧರ್ಮಜನೆ ಕೇಳು | ಸಂಗರದಲ್ಲಿ | ಬಲು ಸತ್ತ್ವದಿಂದೆನ್ನೊಳು ||
ಗೆಲಿದೆನೆನುತ ಹಿಗ್ಗಬೇಡ ನಿನ್ನಧಟನು | ನಿಲಿಸುವೆ ನಿಮಿಷ ತಾಳು || ೭೩ ||

ಸಾಕದಂತಿರಲಿ ನಿನ್ನ | ಭಂಗಿಸಿ ರಕ್ತ | ದೋಕುಳಿಯೊಳಗೆ ಮುನ್ನ ||
ಶಾಕಿನಿಗಣಕೆ ತೃಪ್ತಿಯ ಗೆಯ್ವೆನೆನುತೆಚ್ಚ | ನೇಕ ಬಾಣದಿ ಶಲ್ಯನ  || ೭೪ ||

ಎಸೆದ ಬಾಣವ ತರಿದು | ಮಾದ್ರೇಶ ಗ | ರ್ಜಿಸುತಲಿ ಪಲ್ ಮೊರೆದು ||
ಬಿಸಜಾಕ್ಷ ಭೀಮ ಪಾರ್ಥರ ಕರೆಯೆಂದೆಚ್ಚ | ನಸಮ ಶರವ ಸುರಿದು || ೭೫ ||

ಕೊಳಚೆ ನೀರೊಳು ತೇಲುವ | ಮಾನವನಿಗೆ | ಜಲಧಿ ಕಾಲ್ಹೊಳೆಯೆನ್ನುವ ||
ಬಲು ಗರ್ವವೇಕಿದರೊಳು ಜೀವಿಸೆನುತೆಚ್ಚ | ನಳವಿಯೊಳುರು ಶರವ || ೭೬ ||

**ವಾರ್ಧಕ**

ಸಿಂಧೂರನಗರದಧಿಪತಿ ಲಾಲಿಸಿಂತು ಯಮ |
ನಂದನನು ಬಿಡದಧಿಕ ಕೋಪದೊಳು ಚಾಪದಿಂ |

ಸಂಧಿಸಿದ ಸರಳು ಫಣಿಪತಿಯಂತೆ ಕಿಡಿಯನುಗುಳುತ್ತ ತಾರಾಪಥದೊಳು ||
ಮುಂದರಿದು ಮಾದ್ರದೇಶಾಧಿಪನ ಪೇರುರಕೆ |
ಬಂದೆರಗಿ ಕರುಳನುಚ್ಚಳಿಸಿ ಬಳಿಕಾ ತೇರಿ |
ನಿಂದ ಧೊಪ್ಪನೆ ಧರಣಿಗೊರಗಿಸಿದ ಪರಿಯ ನಾ ಪೇಳಲೇನದ್ಭುತವನು || ೭೭ ||

**ರಾಗ ಸಾಂಗತ್ಯ ರೂಪಕತಾಳ**

ಧರಣಿಪಾಲಕ ಕೇಳು ಯಮಜನಸ್ತ್ರದ ಹತಿ | ಗೊರಗಲು ಮಾದ್ರೇಶನಂದು ||
ಮರುಗುತಾತನ ತಮ್ಮ ಸರಳಸಮ್ಮೇಳದಿ | ಧುರಕಿದಿರಾದನಯ್ತಂದು || ೭೮ ||

ಕಂಡು ಧರ್ಮಜ ರೋಷಗೊಂಡಸ್ತ್ರಚಯದಿಂದ | ಖಂಡಿಸಿ ಹಯಸಾರಥಿಯನು ||
ತುಂಡಿಸಿ ರಥವ ತಾ ಕೆಡಹಿದನವನನು | ದ್ದಂಡಸತ್ತ್ವದಿ ಪೇಳಲೇನು || ೭೯ ||

ಈ ಪರಿ ವಾರ್ತೆಯ ಕೇಳ್ದು ಕೌರವರಾಯ | ತಾಪವ ತಾಳಿ ಮತ್ತಂದು |
ಕೋಪದಿ ಕಿಡಿಕಿಡಿಯಾಗಿ ಮಾರ್ಬಲ ಕೂಡಿ | ತಾ ಪೊರಟನು ರಣಕೆಂದು || ೮೦ ||

**ರಾಗ ಸುರುಟಿ ರೂಪಕತಾಳ**

ಪೊಡವಿಪ ಲಾಲಿಸು ಕೌರವ | ಪಡೆ ಸಹಿತಲೆ ಬಹು ರೋಷವ |
ಕಡುಗಲಿ ತನದೊಳು ಮುಂದವ | ಫಡಿಸಿದ ರಿಪುಬಲವ |
ಘುಡುಘುಡಿಸುತಲರಿಸೈನ್ಯವ | ಕಡಿಕಡಿದೊಟ್ಟುತ ತುರಗವ |
ಪುಡಿ ಪುಡಿ ಗೆಯ್ದು ವರೂಥವ | ಕೆಡಹಿದ ಮದಗಜವ || ೮೧ ||

ಜವಗೆಡಿಸಿದ ಸಹದೇವನ | ಬವರದಿ ಬಡಿದನು ನಕುಲನ |
ತವಕದಿ ಧೃಷ್ಟದ್ಯುಮ್ನನ | ನವಘಡಿಸಿದ ನೃಪನ |
ಕವಿಕವಿದೆಸುತಿಹ ಸೈನ್ಯವ | ಸವರುತಲಾ ನೃಪನಿವಹವ |
ಕವಲಂಬಿಲಿ ಪರಿಹರಿಸುತ | ದಿವಿಜರ ಮೆಚ್ಚಿಸುತ || ೮೨ ||

ವಾತಜಮುಖ್ಯರ ಚಿತ್ತಕೆ | ಭೀತಿಯ ತೋರುತ ಮುಂದೆ ವ |
ರೂಥವ ನಡೆಸುತ ಕುರುಪತಿ | ಘಾತಿಸಿದನು ಬಲವ |
ಪೂತನಿ ಭಂಜನನರಿತು ವ | ರೂಥವ ಹಾರಿಸಿ ರಿಪುಗಳ |
ಘಾತಿಸು ನೀನೆನುತಾ ಹರಿ | ಜಾತನಿಗುಸಿರಿದನು || ೮೩ ||

**ವಾರ್ಧಕ**

ಹರಿಕುಲಜ ಕೇಳ್ದಲ್ಲೈ ಹರಿಯಾತ್ಮಜಾತನೊಳ್ |
ಹರಿ ನಿರೂಪಿಸುತಿಂತು ಹರಿವೇಗದಿಂದಾಂತು |
ಹರಿಗಳಂ ಚಪ್ಪರಿಸಿ ಹರಿಸಿದ ವರೂಥಮಂ ಹರಿಯುತಿ ವಿಲಾಸದಿಂದ ||
ಹರಿಬಲದಿ ನೃಪರ ಸಂಹರಿಸುತ ಧನಂಜಯಂ |

ಹರಿಗಳಂ ಬಹಳ ಪರಿಹರಿಸುತಲಿ ರೋಷದಿಂ |
ಹರಿ ಕರಿಯ ಹಿಂಡಿನೊಳು ಹರಿವಂತೆ ಕುರುಬಲದಿ ಹರಿಮೈದುನಂ ಧುರದೊಳು || ೮೪ ||

**ಭಾಮಿನಿ**

ಅರುಹಲೇನಾ ಧುರದಿ ಮುರಿದುದು |
ವರ ವರೂಥವು ನೂರು ಸೂತರ |
ಶಿರ ಶತವು ಕಡಿವಡೆಯೆ ಸಮರಥರೆಂಟುನೂರಯ್ದು ||
ಬಿರಿದ ಸುಭಟರು ಸುರಗಿಯನು ನೆಲ |
ಕಿರಿಸಿದರು ಧುರಧುರಿಪ ನೆತ್ತರ |
ಶರಧಿಯನು ದಾಟುತ್ತ ಹಾಯ್ದರು ಭೀತಿಗರ ಹೊಡೆದು || ೮೫ ||

**ಕಂದ**

ಈ ಪರಿಯಂ ಕಾಣುತ ಕುರು |
ಭೂಪಾಲಕ ಗಜರಿ ಗಾಢ ಶೌರ್ಯದೊಳಾಗಲ್ ||
ಶ್ರೀಪತಿಮೈದುನನಿದಿರೊಳು |
ಚಾಪಕೆ ಸರಳೊಡ್ಡಿ ಬರಲು ಫಲುಗುಣನೆಂದಂ || ೮೬ ||

**ರಾಗ ಘಂಟಾರವ ಮಟ್ಟೆತಾಳ**

ಎಲೆ ಸುಯೋಧನ | ಕಪಟ ಜೂಜಿನ ||
ಗೆಲವ ತೋರಿ ಕೊಡುವೆನೀಗ | ಕರೆಸು ರವಿಜನ || ೮೭ ||

ಕೇಳ್ದ ನುಡಿಯನು | ಸೀಳ್ದ ನಿನ್ನನು ||
ಸೋಲ್ದ ರವಿಜನಲ್ಲಿಗಟ್ಟು | ತಾಳ್ದನಾಹೆನು || ೮೮ ||

ಎನುತ ಧನುವನು | ಝೇಂಕರಿಸಿದನು ||
ಕಿನಿಸಿನಿಂದ ದಿವ್ಯ ಶರವ | ಕನಲುತೆಚ್ಚನು || ೮೯ ||

ಬರುವ ಸರಳನು | ತರಿದು ಪಾರ್ಥನು ||
ಉರಿಯನುಗುಳುತಸ್ತ್ರಮಳೆಯ | ಸುರಿವುತೆಂದನು || ೯೦ ||

ಎಲವೊ ಭೀಮನ | ಮಾತಿಗೀಗ ನಾ ||
ಕೊಲುವನಲ್ಲ ನಿನ್ನ ಪಿಂತೆ | ತೊಲಗು ತತ್‌ಕ್ಷಣ || ೯೧ ||

ಎನುತ ಫಲುಗುಣ | ಕನಲುತಾ ಕ್ಷಣ ||
ಜನಪನನ್ನು ಮಿಕ್ಕಿ ನಡೆದ | ಘನ ವಿಚಕ್ಷಣ || ೯೨ ||

**ಭಾಮಿನಿ**

ಕುಮುದಬಾಂಧವವಂಶಜನೆ ಕೇ |
ಳಮರಪತಿಸುತನಿಂತು ಕುರುಭೂ |
ರಮಣನನು ಮಿಕ್ಕಯ್ದಲಿತ್ತಲು ಕೌರವನು ಮುಳಿದು ||
ಯಮಸುತನ ಸಮ್ಮುಖಕೆ ರೋಷ |
ಕ್ರಮನು ಗಜ ರಥ ತುರಗ ಸೈನಿಕ |
ಧುಮುಕಿನಲಿ ಮುಸುಕಿದನು ವೀರಾವೇಶದುಬ್ಬಿನಲಿ || ೯೩ ||

**ರಾಗ ಮಾರವಿ ಏಕತಾಳ**

ಭರದಿಂ ಕುರುಕುಲ | ಧರಣಿಪ ಕರಿ ರಥ |
ತುರಗ ಪದಾತಿಯ | ನೆರವಿಯ ತರುಬುತ |
ಧುರದೊಳು ಯಮಜನ | ಸರಿಸಕೊದಗಿ ಬಲು |
ಶರದಿಂ ಸೈನ್ಯವ | ನೊರೆಸುತ ಬಂದ || ಕೇಳ್ನೈ ಭೂಪ || ೯೪ ||

ನೂರು ಮುನ್ನೂರ್ರೈ | ನೂರು ಪದಾತಿಯ |
ತೂರಿ ಸಹಸ್ರ ಮ | ಹಾರಥವರ್ಗವ |
ಗಾರುಗೆಡಿಸಿ ಯಮ | ನೂರಿಗೆ ಕ್ಷಣದಲಿ |
ಸೇರಿಸಿದನು ನೃಪ | ಧೀರತನದೊಳು || ಏನನೆಂಬೆ || ೯೫ ||

ಮತ್ತೆರಡೈನೂರ್ | ಮತ್ತ ಗಜಂಗಳ್ |
ಪೃಥ್ವಿಪ ಕೌರವ | ಚಿತ್ತದೊಳಗೆ ಖತಿ |
ವೆತ್ತು ಭರದಿ ಮುಂ | ದೊತ್ತುತ ಧರ್ಮಜ |
ನೆತ್ತಲೆನುತ್ತರ | ಸುತ್ತಾ ಕ್ಷಣದಿ || ಬಂದನಾಗ || ೯೬ ||

ಸಿಕ್ಕಿದ ನೃಪನ ವ | ಶಕ್ಕೆಮಜನು ಯೆಂ |
ದೆಕ್ಕತುಳದಿ ಪಡೆ | ಪೊಕ್ಕು ದಳವ ಮುರಿ |
ದಿಕ್ಕಲು ಮರುತಜ | ನಕ್ಕರದಲಿ ಕಂ |
ಡುಕ್ಕಿ ಖತಿಯ ಸಮ | ರಕ್ಕಯ್ತಂದ || ಗಾಢದಿಂದ || ೯೭ ||

**ವಾರ್ಧಕ**

ಬಂದು ಕಲಿ ಭೀಮನೀ ತೆರದೊಳಂ ಭರದೊಳಂ |
ಮುಂದಕುರವಣಿಪ ಮದದಾನೆಯಂ ಸೇನೆಯಂ |
ಕೊಂದನಗಣಿತ ಚಾತುರಂಗಮಂ ಭಂಗಮಂ ಪಡಿಸಲೊಂದೇ ಕ್ಷಣದೊಳು ||
ಮುಂದುವರಿಯುತ್ತ ಗಜಬಲದಿಂದ ಛಲದಿಂದ |

ಲಂಧನೃಪನಣುಗಹಂಕೃತಿಯಿಂದ ಖತಿಯಿಂದ |
ಗಂಧವಾಹಾತ್ಮಜನ ಕಡುಹಿಂದ ಪೊಡೆವಂದದಿಂದಲಡಹಾಯ್ತುತೆಂದಾ || ೯೮ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲೆ ಸಮೀರಜಾತದಳದಿ ಹೀನಬಲರನು |
ಗೆಲಿದು ಗಜ ತುರಂಗಗಳನು ಮುರಿದ ಬಲುಹನು ||
ನಿಲಿಸಿದಪೆನು ಬಗಿದು ನಿನ್ನ ಜಠರದಿಂದಲಿ |
ಸೆಳೆವೆನೆನ್ನ ಸಹಜರನ್ನು ನಿಲ್ಲು ಕ್ಷಣದಲಿ ||೯೯ ||

ಎನುತ ಗದೆಯ ಕೊಂಡು ತಿರುಹಿ ಕುರುನೃಪಾಲನು |
ಕನಲಿ ವಾಯುತನುಜನಂಗಕಿಡಲು ಭೀಮನು ||
ಗಣಿಸದದನು ಪೇಳ್ದನೆಲವೊ ಖೂಳ ನಿನ್ನನು |
ಅನುಜತನುಜರಿದ್ದ ಬಳಿಗೆ ಕಳುಹದುಳಿಯೆನು || ೧೦೦ ||

ಎನುತ ತೇರಿನಿಂದ ಧರೆಗೆ ಧುಮುಕಿ ಶುಗಜನು |
ಅಣಕಿಸುತ್ತ ಗಜದೊಳೌಕಿ ಗಜದ ಹಿಂಡನು |
ಹಣಿದು ಹೆಟ್ಟಿ ಕುಟ್ಟಿ ಬರುವ ಭರವನೀಕ್ಷಿಸಿ |
ಜುಣುಗಿ ಕುರುಕುಲೇಶ ಪಿಂದೆ ಸರಿಯೆ ಪರಿಕಿಸಿ || ೧೦೧ ||

**ಭಾಮಿನಿ**

ಧುರದೊಳೀ ಪರಿ ಗಜಘಟಾಳಿಯ |
ಮರುತಸುತ ನುಗ್ಗರಿದು ಕೌರವ |
ರರಸನಾವೆಡೆ ಸರಿದನೆಂದೆನುತರಸುತಯ್ತಂದ ||
ಭರದೊಳಾಗ ಸುಶರ್ಮ ತಡೆಯಲಿ |
ಕಿರದವನ ಲೆಕ್ಕಿಸದೆ ಮುಂದ |
ಯ್ತರಲು ಸಮಸಪ್ತಕರು ತಡೆದಿಂತೆಂದರಾರ್ಭಟಿಸಿ || ೧೦೨ ||

**ರಾಗ ಮಾರವಿ ಮಟ್ಟೆತಾಳ**

ಯಾರೊ ನೀನು ವಾಯುಕುವರ | ಬಾರೆಲೊ ಭಂಡಾಟಗಾರ |
ಭಾರಿ ಗದೆಯ ಚಳಕ ಧನುವ | ತೋರು ನಮ್ಮಲಿ || ೧೦೩ ||

ಭಂಡನೆಂಬ ಬಾಯ ಹೊಯ್ದು | ರುಂಡದಲ್ಲಿ ರಕ್ತವೆರೆದು |
ಹಿಂಡು ಭೂತಗಣಕೆ ಕೊಡುವೆ | ನುಂಡು ದಣಿಯಲಿ || ೧೦೪ ||

ಎಂದು ವಾಯುಪುತ್ರನವರ | ಸಂಧಿಸುತ್ತ ಗದೆಯತಿರುಹು |
ತಂದು ಹೊಯ್ದು ಧರಣಿಯದುರು | ವಂದದಿಂದಲಿ || ೧೦೫ ||

**ಕಂದ**

ಭರದೊಳ್ ಗದೆಯಿಂದನಿಲಜ |
ನೆರಗಲ್ಕಾ ದೈತ್ಯರಯ್ದೆ ಸಮರಾಂಗಣದೊಳ್ ||
ಪರಿಹರಿಸುತ ಘನ ರೋಷದೊ |
ಳುರಿಯುಗುಳುತ ಪೇಳ್ದರೊಡನೆ ಮಾರುತಿಗಂದುಂ || ೧೦೬ ||

**ರಾಗ ಪಂಚಾಗತಿ ಮಟ್ಟೆತಾಳ**

ಎಲವೊ ಮರುತಜಾತ ಕೇಳು | ಬಳಲಬೇಡ ಬರಿದೆ ನೀನು |
ಫಲುಗುಣನ್ನ ಕರೆಸು ನಮ್ಮೊ | ಳಳವಿ ಗೆಯ್ಯಲು |
ಚಳಕದಲ್ಲಿ ನೋಡು ನಿನ್ನ | ಬಲುಹ ಮುರಿವೆವೆನುತ ಕೋಲ |
ಮಳೆಯ ಕರೆದು ಬಳಲಿಸಿದರು | ಮಲೆವ ಭೀಮನ || ೧೦೭ ||

ಇತ್ತಲಾ ಸುಶರ್ಮನಿದಿರು | ನಿತ್ತು ಪಾರ್ಥ ಧುರದೊಳವನ |
ಪೃಥ್ವಿಗೊರಗಿಸುತ್ತ ಪೇಳ್ದ ಮತ್ತೆ ಹರಿಯೊಳು |
ದೈತ್ಯರೊಡನೆ ಧುರವು ವಾಯು | ಪುತ್ರಗರಿದು ನೋಡು ರಥವ |
ನತ್ತ ತಿರುಗಿಸೆನಲು ತೋಷ | ವೆತ್ತು ಕೃಷ್ಣನು || ೧೦೮ ||

ಶರಧಿಯಂತೆ ಭೋರುಗುಡಿಸಿ | ಮೊರೆದು ಮೇಲುವರಿಯೆ ಸೈನ್ಯ |
ದಿರವನುಳಿದು ಜುಣುಗಿ ಜಾರಿ | ವರಿದು ನಿಮಿಷಕೆ |
ತುರಗಗಳನು ಚಪ್ಪರಿಸುತ | ದುರುಳರೆಡೆಗೆ ರಥವ ನೂಕೆ |
ನರನು ಸರಳನೆಸೆವುತೆಂದ | ನಿರದೆ ಖಳರಿಗೆ || ೧೦೯ ||

**ಭಾಮಿನಿ**

ಎಲವೊ ಭಂಡ ಖಳಾಧಮರರಿಂ |
ದಳವಿಯಲಿ ಬಲುಗೈಗಳಾದಿರಿ |
ತಿಳಿಯಬಹುದೆಂದೆನುತ ಪವನಾತ್ಮಜನ ಹಿಂದಿಕ್ಕಿ ||
ಪ್ರಳಯಕಾಲದ ರುದ್ರನಂತು |
ಜ್ವಲಿಸಿ ಕೋಪಾಟೋಪದಿಂದಲಿ |
ಹೊಳೆವ ಹೊಸ ಕೆಂಗರಿಯ ಶರಮಳೆಗರೆವುತಿಂತೆಂದ || ೧೧೦ ||

**ರಾಗ ಭೈರವಿ ಏಕತಾಳ**

ಫಡ ಫಡ ರಾತ್ರಿಂಚರಿರಾ | ಹೆ | ಬ್ಬಿಡಿ ಗೋಲಾಕೃತಿಗಳಿರಾ ||
ಬಿಡಿ ಬಿಡಿ ಜಡಮತಿಗಳಿರಾ | ಮುಂ | ದಡಿಯಿಡಬೇಡಧಮರಿರಾ || ೧೧೧ ||

ಎನುತ ಮಹಾಸ್ತ್ರವ ಸುರಿದು | ಆ | ದನುಜಪಡೆಯ ನುಗ್ಗರಿದು ||
ಕನಲುತ ಮಿಗೆ ಭೋರ್ಗರೆದು | ಎಸೆ | ದನು ದಿವ್ಯಾಸ್ತ್ರವ ತೆಗೆದು || ೧೧೨ ||

ನರನೆಸೆದಸ್ತ್ರವ ತರಿದು | ಆ | ದುರುಳ ಖಳರು ಬೊಬ್ಬಿರಿದು |
ಧುರದಲಿ ನಮ್ಮಯ್ಯನನು | ಕೊಂದ | ನರಗುರಿ ಕೇಳ್ ನಿನ್ನುವನು || ೧೧೩ ||

ಘಕ್ಕನೆ ಮುರಿದಸುವೆಳೆದು | ದಿಕ್ಕು | ದಿಕ್ಕಿಗೆ ರಕ್ತವನೆರೆದು ||
ಸೊಕ್ಕನು ಮಾಜಿಸದಿರೆವು | ನ | ಮ್ಮಕ್ಕರ ಸಲಿಸದೆ ಬಿಡೆವು || ೧೧೪ ||

ಎಂದಾರ್ಭಟಿಸುತ ಮುಳಿದು | ಶರ | ವೃಂದವನೆಚ್ಚಡೆ ತರಿದು |
ವೃಂದಾರಕಪತಿಸುತನು | ಖಳ | ಸಂದಣಿಗುರೆ ಪೇಳಿದನು || ೧೧೫ ||

**ಭಾಮಿನಿ**

ಖೂಳರಿರ ನೀವ್ ಕೇಳಿ ಕುರುಭೂ |
ಪಾಲಕನ ಬರಹೇಳಿ ಸಾಯದ |
ಹೋಲುವೆಯ ಮೊದಲೇ ವಿಚಾರಿಸಿ ನಿಮ್ಮ ನೃಪನೊಡನೆ ||
ಕಾಲನರಮನೆಗೆಯ್ಯಲನುವನು |
ಕೇಳಿರೀ ನೆಲನಾಸೆ ಬೇಡೆನು |
ತಾಳೊಳಗ್ಗದ ಪಾರ್ಥನೆಚ್ಚನು ಪಾಶುಪತಶರವ || ೧೧೬ ||

**ರಾಗ ನವರೋಜು ಮಟ್ಟೆತಾಳ**

ಏನನೆಂಬೆನಸ್ತ್ರದುರುಬೆಯ | ಧರಣಿಪಾಲ | ಏನನೆಂಬೆನಸ್ತ್ರದುರುಬೆಯ || ಪ ||

ಭುಗಿಲು ಭುಗಿಲು ಭುಗಿಲೆನುತ್ತ | ಹೊಗೆಯ ಸೂಸುತಾಗಲಸ್ತ್ರ |
ಧಗ ಧಗಿಸಿ ಧನುಸ್ಸನೊದೆದು | ಗಗನಕಾವರಿಸುತ ಬರಲು |
ಬೆಗಡುಗೊಂಡು ದೈತ್ಯರುರುಬಲು | ಬಿಡದೆಯವರ |
ತಗಲಿ ತನುವ ಸೀಳಿ ತೆಗೆಯಲು | ನಭದಿ ಸುರರು |
ಪೊಗಳಿ ನರನ ಭಳಿರೆನುತ್ತ | ನಗಧರಾದ್ಯರೊಪ್ಪುಗೊಳಲು || ಏನನೆಂಬೆ || ೧೧೭ ||

ಉಳಿದ ಭಟರು ಶಸ್ತ್ರದುರುಬೆ | ಗಳಲಿ ತೃಣವ ಕಚ್ಚಿ ತಲೆಯ |
ನುಳುಹಬೇಕೆನುತ್ತಲಾಗ | ವಿಳುಹಿ ಧನುಶರಂಗಳನ್ನು |
ಫಲುಗುಣನ್ನ ಬೇಡಿಕೊಂಡರು || ಬಹಳ ಭಯವ |
ತಳೆದು ಕಂಡಕಡೆಗೆ ಹಾಯ್ದರು | ಸುಶರ್ಮಕಾದಿ |
ಬಲುಭಟಾಗ್ರಗಣ್ಯರಿಳೆಗೆ | ಮಲಗಿ ಪ್ರಾಣ ತೊರೆದರವರು || ಏನನೆಂಬೆ || ೧೧೮ ||

**ವಾರ್ಧಕ**

ಇಳೆಯರಸ ಕೇಳಿಂತು ಸಮಸಪ್ತಕಾದಿ ಖಳ |
ರಳಿಯಲವರೊಡನಿರ್ದ ಶುಕತುಂಡನೆಂಬವಂ |
ತಳುವದೋಡಿದನವರ ಜಾಮಾತನಾಗಿಹ ಕರಂಡಕಾಸುರನಲ್ಲಿಗೆ ||
ನಿಳಯವಾತಗೆ ವಣಶಿಲಾ ನಗರದೊಳಗಧಿಕ |
ಖಳರ ಮೇಳದೊಳಿರ್ಪವನ ಬಳಿಗೆ ಬರುವವನ |
ಕಲುಷಗಾಮಿನಿ ಜಗಳಗ್ರಂಥಿಯರ್ ಕಂಡಗ್ರಜರ ಪರಿಯ ಬೆಸಗೊಂಡರು || ೧೧೯ ||

**ಭಾಮಿನಿ**

ಅಗ್ಗಳೆಯ ಶುಕತುಂಡ ಕೇಳೆ |
ಮ್ಮಗ್ರಭವರೆಲ್ಲಿರ್ಪರೆನುತಲಿ |
ವಿಗ್ರಹದಿ ನಾವ್ ಕಾಣದಳಲುತ ಬಹೆವು ಭೂತಳಕೆ ||
ಅಗ್ರಭುಜಬಲರೊಡನೆ ಪೋಗಿ ಸ |
ಮಗ್ರದಲಿ ನೀನೋರ್ವನೇ ಮನ |
ಕುಗ್ಗಿ ಪೋಪೆಯದೆಲ್ಲಿಗೆನಲವನೆಂದನವರೊಡನೆ || ೧೨೦ ||

**ರಾಗ ಕಾಂಭೋಜಿ ಅಷ್ಟತಾಳ**

ಕಲುಷಗಾಮಿನಿ ಕೇಳು ಕಥೆಯ | ಹೇಳ | ಲಳವಲ್ಲ ನಮಗಾದ ಸ್ಥಿತಿಯ |
ಇಳೆಗಯ್ದಿ ಕುರುನೃಪಾಲರಿಗೆ ಬೆಂಬಲವಾಗಿ |
ಕೊಳುಗುಳದಿ ಕೃಷ್ಣಾರ್ಜುನರ ಮುಂ | ದಳವಿಗೊಟ್ಟೆವು ಭರದಲಿ || ೧೨೧ ||

ಕೇಣಿಗೊಂಡಾಜಿಗಯ್ದಿದೆವು | ರಿಪು | ಸೇನೆಯ ಜಡಿದು ಮುಕ್ಕಿದೆವು |
ಬಾಣ ತೋಮರ ಕುಂತ ಮುಸಲ ಮುದ್ಗರದಿಂದ |
ಹೂಣಿಗರ ಹೊಯ್ದೊರಸಿ ಹಾಣಾ | ಹಾಣಿಯಲಿ ಸದೆಬಡಿದೆವು || ೧೨೨ ||

ಮತ ಕಿರೀಟಿಯೆಂಬವನು | ಬಲು | ಒತ್ತಾಯಗೆಯ್ದು ಕಾದಿದನು ||
ಬತ್ತೀಸಾಯುಧದಿಂದ ಬಳಲದೆಚ್ಚನು ಶಿವ |
ನಿತ್ತ ಪಾಶುಪತಾಸ್ತ್ರದಿಂದಲಿ | ಕುತ್ತಿ ಕೆಡಹಿದನಿವರನು || ೧೨೩ ||

ಬಿಡದಿನ್ನಾದರು ಕೃಷ್ಣಾರ್ಜುನರ | ಹೆಡ | ಮುಡಿ ಮುರಿದಿಕ್ಕಿ ಮಾನವರ ||
ಬಡೆಯಬೇಕೆಂದು ಕರಂಡಕಾಸುರನಿಗೆ |
ಒಡನೆ ದೂರುವೆ ಪಾಂಡುಪುತ್ರರ | ಬೆಡಗ ನಿಲಿಸುವೆ ನಿಮಿಷದಿ || ೧೨೪ ||

**ಕಂದ**

ಎನೆ ಕೇಳ್ದಗ್ರಜರಿರಮಂ |
ಮನದೊಳು ಮರುಗುತ್ತಲೊಡನೆ ಖಾತಿಯ ತಳೆದುಂ ||

ದನುಜೆಯರಾರ್ಭಟೆವೆತ್ತಾ |
ರಣಧಾರಿಣಿಗಯ್ತಂದುಸಿರಿದರರ್ಜುನಗಂ || ೧೨೫ ||

**ರಾಗ ಮಾರವಿ ಅಷ್ಟತಾಳ**

ಏನೆಲೊ ಮನುಜ | ನಿನ್ನಯ ಪೆಸ | ರೇನೆಲೊ ಮನುಜ || ಪ ||

ಏನೆಲವೊ ನಮ್ಮಗ್ರಜರ ನಿ | ನ್ನೀ ನಿರೋಧಕೆ ಬರಿಸಿದಾತನು |
ನೀನೆಲೋ ನಿನ್ನೆದೆಯ ಗುಂಡಿಗೆ | ಗೋಣ ಮುರಿದೀ ಕ್ಷಣದಿ ತಿಂಬೆವು || ಏನೆಲೊ ಮನುಜ || ಅ||

ಸಂದುಸಂದನು ಗುಮ್ಮಿ ಮುರಿದು | ನಿನ್ನ | ನೊಂದೊಂದು ತುಂಡಾಗಿ ಸಿಗಿದು |
ತಿಂದು ರಕ್ತಪಾನ ಮಾಡಿ | ಬಂಧುಬಳಗವೆಲ್ಲ ಕೂಡಿ |
ಸಂದುಗೊಂದು ಮೂಲೆ ನೋಡಿ | ಹೊಂದಿಸೀ ಮುರಿಮುರಿದು ತಿಂಬೆವು ||
ಏನೆಲೊ ಮನುಜ || ೧೨೬ ||

ಎಲುಬು ತೋಳನು ತೋಟಿಗೆಯ್ದು | ರಕ್ತ | ಹೊಳೆಯ ಕಾಣಿಸಿ ಮೊಗೆ ಮೊಗೆದು |
ನಿಳಯಕೊಯ್ದು ನೀರ ಹೊಯ್ಯುತ | ತಲೆಬುರುಡೆಯ ಕರಡಿಗೆ ಗೆಯ್ದು |
ಉಳಿಸದೆಮ್ಮವರುಗಳ ನೆರೆದು | ಗಳಗಳನೆ ಬಾಯ್ಗೆರೆದು ನಲಿವೆವು || ಏನೆಲೊ ಮನುಜ || ೧೨೭ ||

**ವಾರ್ಧಕ**

ಅರರೆ ಯಮನಬ್ಬಟೆಯೊ ಮೃತ್ಯುವಿನ ಹೋರಟೆಯೊ |
ಹರನ ಕಣ್ಗಿಚ್ಚುರಿಯೊ ಹಾಲಾಹಲದ ನೊರೆಯೊ |
ಬರಸಿಡಿಲ ಗರ್ಜನೆಯೊ ಭೈರವನ ಬಾಯ್ದೆರೆಯೊ ರಕ್ಕಸಿಯರಾರುಭಟೆಯೋ ||
ಒರೆಯಲಾನದನರಿಯೆ ವಸುಧೆ ಬಿಕ್ಕನೆ ಬಿರಿಯೆ |
ಶರಧಿಗಳು ಮೇಲ್ವರಿಯೆ ಶೇಷ ಪೆಡೆಯೊಳಸರಿಯೆ |
ಕುರುಕುಲಾಂಬುಧಿ ಜರಿಯೆ ನರಕೃಷ್ಣರುಬ್ಬಿರಿಯೆ ಹರಿ ಹನುಮನೊಡನೆಂದನು || ೧೨೮ ||

**ರಾಗ ಮಾರವಿ ಝಂಪೆತಾಳ**

ನೋಡಿದೆಯ ಹನುಮ ನೀ | ಜೋಡು ದಿಂಡೆಯರಿವರು |
ರೂಢಿಸುವ ಶೌರ್ಯದ ಸ | ಗಾಢತನದಿರವ ||
ಹೇಡಿಗೊಳಿಸಿದರಿಲ್ಲಿ | ಕೂಡಿರುವ ಸೈನಿಕಕೆ |
ಜೋಡು ಜೋಡಿಯರ ಮಾ | ತಾಡಿಸೈ ನೀನು || ೧೨೯ ||

ನಿನಗಿವರು ಪಾಡಲ್ಲ | ರಣದಿ ಮೊದಲಿವರಿಂದ |
ಘನವಾದ ದೈತ್ಯರನು | ಹಣಿದಾತನೈಸೆ ||
ಎನಲುರೋಷದಿ ಹನುಮ | ಮನದೊಳುಬ್ಬೇರಿದನು |
ವನಜಾಕ್ಷ ಶರಣೆನುತ | ಲನುಗೆಯ್ದನವನು || ೧೩೦ ||

**ಭಾಮಿನಿ**

ಕಡಲಶಯನನ ನುಡಿಗೆ ಮಾರುತಿ |
ಯೊಡನೆ ಜೀಯ ಹಸಾದವೆನುತು |
ಗ್ಗಡಸಿ ಬಾಲವ ಸಡಲಿಸುತಲುಬ್ಬೇರಿ ಹೂಂಕರಿಸಿ ||
ಎಡೆಬಿಡದೆ ಬೆಳೆಯಲ್ಕೆ ಭೂತಳ |
ನಡುಗಿತಾ ಬ್ರಹ್ಮಾಂಡಖರ್ಪರ |
ವೊಡೆದುದೋಯೆನೆ ಧರೆಗೆ ಹಾಯ್ದನು ಸುರರು ಭಾಪೆನಲು || ೧೩೦ ||

**ಕಂದ**

ಹನುಮನ ಭರಮಂ ಕಂಡಾ |
ದನುಜೆಯುಬ್ಬೇರ್ದು ಸಿಡಿಲಿನಂತೆ ಗರ್ಜಿಸುತಂ ||
ಕನಲಿದು ಬಳಿಕ ಕಲುಷಗಾ |
ಮಿನಿಯಾ ಜಗಳಗ್ರಂಥಿಯೊಳೀ ತೆರನೊರೆದಳ್ || ೧೩೧ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಇವನಾವ ಕಾಡಿಂದಲಡಹಾಯ್ದ ಮರ್ಕಟ | ನೀತನ್ಯಾರೆ | ಬಲು |
ಬವರಿ ಗಡ್ಡದ ಗುಜುಗುಜುರು ಕೇಶದ ಕಪಿ | ಯೀತನ್ಯಾರೆ ||
ಹವಣಿಸಿ ಬಾಲವ ನಭಕೇರಿಸಿರುವಾತ | ನೀತನ್ಯಾರೆ | ಕೇಳು |
ಬವರಕೆ ನಡೆತಂದು ಕೀರುಗುಟ್ಟುವ ಮಂಗ | ನೀತನ್ಯಾರೆ || ೧೩೩ ||

ತಂಗಿ ಕೇಳಿವ ಹಿಂದೆ ಪಾತಾಳ ಲಂಕೆಗೆ | ಬಂದಕಾಣೆ | ದೈತ್ಯ |
ಪುಂಗವ ಮೈರಾವಣನ ಕೊಂದ ಕೋಡಗ | ನೀತ ಕಾಣೆ ||
ಹಿಂಗದೆ ದುರುದುಂಡಿ ಮಗಗೆ ಪಟ್ಟವ ಕಟ್ಟಿ | ದಾತ ಕಾಣೆ | ಸಮ |
ರಾಂಗಣಕಿಂದಿಲ್ಲಿ ಯಾರಿಗೋಸುಗ ಬಂದ | ನೀತ ಕಾಣೆ || ೧೩೪ ||

ಬೆಂಬಲಕೆನುತೀತ ಬಂದರೇನಾಯ್ತೀಗ | ಅಕ್ಕ ಕೇಳು | ಲಂಕೆ ||
ಗಂಬುಧಿಯನು ದಾಟಿ ಬಾಲ ಸುಡಿಸಿಕೊಂಡ | ನಕ್ಕ ಕೇಳು ||
ಕುಂಭಕರ್ಣನ ಮೂಗಿನುಸಿರೊಳ್ ಸಿಕ್ಕಿದನೀತ | ನಕ್ಕ ಕೇಳು | ಈ |
ಡೊಂಬಿಯ ಬಗೆಯೆಲ್ಲ ನಾ ಕೇಳಿ ಬಲ್ಲೆನು | ಅಕ್ಕ ಕೇಳು || ೧೩೫ ||

**ರಾಗ ಮಾರವಿ ಏಕತಾಳ**

ಇಂತು ಕೂಲಂಕಷಗಳನುಸಿರುತ್ತ ಮ | ಹಾಂತ ಪರಾಕ್ರಮದಿ |
ನಿಂತಾರ್ಭಟಿಸುತ ಪೇಳಿದರಾ ಹನು | ಮಂತನೊಳತಿ ಭರದಿ || ೧೩೬ ||

ಎಲೆ ಎಲೆ ಕೇಳ್ಮ್ಯಾ ಹಳೆ ಮುದಿ ಮರ್ಕಟ | ಕೊಳುಗುಳ ನಿನಗ್ಯಾಕ್ ಮ್ಯಾ ||
ಹಳುವದಿ ಮರ ಮರ ಹಾರ್ಹಾರ್ಹಣುಹಂ | ಪಲುಗಳ ತಿನು ಹೋಗ್ ಮ್ಯಾ || ೧೩೭ ||

ಛಲರೇನೆಂಬ್ತೀ ಹೆಣಗಳ ತಿಂಬ್ತೀ | ಕುಲಗೆಡುಕರ ಹೆಂಡ್ತೀ ||
ನಿಲು ನೋಡ್ ನಮ್ತಾವ್ ಗಮಜಾಲ್ ಮಾಡ್ನಿ | ನ್ನೆಲುಗಳ ಜಾಳ್ಮಾಡ್ತ್ನೀ || ೧೩೮ ||

ಅರೆಯಾದೇನ್ ಮ್ಯಾ ಮೈಮೇಲಂಘಿಸಿ | ಹರಣ ಕೊಡಲು ಬೇಡ್ ಮ್ಯಾ |
ತರುಚರ ನಿನ್ನನು ಸರ್‍ರನೆ ಸೀಳುತ | ಕರುಳ ತೆಗೆವೆ ತಾಳ್ ಮ್ಯಾ || ೧೩೯ ||

ಎನುತಬ್ಬರಿಸುತ ಹತ್ತಾಹತಿಯಲಿ | ದಣುವಾಯಿತು ಎನುತ |
ಅಣಕಿಸಿ ಹೆಮ್ಮರಗಳ ಕಿತ್ತೆರಗಲು | ಹನುಮನು ಗರ್ಜಿಸುತ || ೧೪೦ ||

ಬಲಿದಾ ವಜ್ರದ ಮುಷ್ಟಿಯ ಹಳೆಹಳೆ | ಹುಲು ರಕ್ಕಸಿಯೆನುತ ||
ಕಲುಷಾಗಾಮಿನಿಗೆರಗಲು ಮೂರ್ಛೆಯ | ತಳೆಯಲು ಗೋಳಿಡುತ || ೧೪೧ ||

**ಭಾಮಿನಿ**

ಕುಲಿಶಹತಿಯಲಿ ಗಿರಿಶಿಲಾವಳಿ |
ಘಳಿಸಿ ಜರಿವಂದದಲಿ ರಕ್ಕಸಿ |
ಕಳವಳಿಸಿ ಹಮ್ಮಯ್ಸಿ ಧೊಪ್ಪನೆ ಬೀಳುತವನಿಯಲಿ ||
ತಳುವದೆಚ್ಚರ್ತೆದ್ದು ಪಲ್ಮೊರೆ |
ದುಲಿದು ಬಾಹ್ವಪ್ಪಳಿಸಿ ಬಾ ಬಾ |
ಹಳೆಯ ಮರ್ಕಟ ಫಡ ಎನುತ ಮರ ಮುರಿಯುತೆರಗಿದಳು || ೧೪೨ ||

**ರಾಗ ಮಾರವಿ ಮಟ್ಟೆತಾಳ**

ಮರವ ಮುರಿದು ಮರುತಸುತನ | ನೆರಗಲವಳ ಬಾಲದಿಂದ |
ತರುಬಿ ಹಾಯ್ದು ಗರ್ಜಿಸುತ್ತ | ದುರುಳೆಗೆಂದನು || ೧೪೩ ||

ಭ್ರಷ್ಟೆ ಮೂಳಿ ಫಡ ಬಜಾರಿ | ದಿಟ್ಟೆಯೆನುತ ತಿವಿಯಲವಳ |
ರಟ್ಟೆ ಮುರಿದು ಬಿದ್ದಳಮರ | ಬೆಟ್ಟದಂದದಿ || ೧೪೪ ||

ಆರುಭಟಿಸುತವಳು ಸಮರ | ಧಾರಿಣಿಯಲಿ ಬಿದ್ದು ಹೊರಳ |
ಲೋರುಗುಡಿಸಿತವನಿಯಮರ | ವಾರ ಬೆದರಲು || ೧೪೫ ||

ಭೂರಿ ಸೈನ್ಯದೆಡೆಯೊಳವಳು | ಜಾರಿವರಿಯೆ ಮತ್ತೆ ಹನುಮ |
ನಾರುಭಟಿಸಿ ಹೊಡೆಯಲಸು ಸ | ಮೀರ ತೊಲಗಿತು || ೧೪೬ ||

**ಕಂದ**

ಅಗ್ರಜೆ ಮಡಿಯಲ್ ಕಂಡ |
ತ್ಯುಗ್ರದಿ ಭೋರ್ಗರೆದು ಜಗಳಗ್ರಂಥಿನಿಯಾಗಳ್ ||
ಘರ್ಗರನೇ ಪಲ್ಮೊರೆಯುತ |
ದೀರ್ಘಸ್ವರವೆತ್ತು ಪೇಳ್ದಳಾ ಮಾರುತಿಗಂ || ೧೪೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ಕೋಡಗ ತೀರಿದಗ್ರಜೆ | ಬಳಿಗೆ ನಿಮಿಷಾರ್ಧದಲಿ ನಿನ್ನನು |
ಕಳುಹುವೆನು ಫಡ ಗೆಲಿದೆನೆಂಬ | ಗ್ಗಳಿಕೆಯೇಕೆ || ೧೪೮ ||

ಎನುತ ಹನುಮನ ಮೂದಲಿಸಿ ದ್ರುಮ | ವನು ಮುರಿದು ಪಿಡಿದಾರ್ಭಟಿಸಿ ಬಹ |
ದನುಜೆಯನು ಪರಿಕಿಸುತ ಸರ್ವರು | ಮನದಿ ಬೆದರೆ || ೧೪೯ ||

ಕಂಡು ಹನುಮನು ಗಣಿಸದದನು | ದ್ದಂಡ ಸತ್ತ್ವದಿ ಮರವನೆಳೆದಾ |
ಚಂಡವಿಕ್ರಮನಾಗ ದನುಜೆಯ | ಮಂಡೆಗಿಡಲು || ೧೫೦ ||

ಧೂರ್ತೆ ಬಾಯೊಳಗೋಸರಿಸಿ ಬಿಸಿ | ನೆತ್ತರನು ಕಾರುತ್ತ ಬಿದ್ದಳು |
ಮತ್ತೆ ದಿವಿಜರು ನಗುವ ತೆರದಿ ಧ | ರಿತ್ರಿಗವಳು || ೧೫೧ ||

**ವಾರ್ಧಕ**

ಧುರದೊಳಂದತ್ಯಂತ ಬಲದೊಳಂ ಛಲದೊಳಂ |
ದುರುಳ ನೈಶಾಚರಿಯ ರಂಗಮಂ ಭಂಗಮಂ |
ಬರಿಸುತಾಶುಗಜಾತ ಕೆಡಹಿದಂ ಮಡುಹಿದಂ ಭೋರ್ಗರೆವ ರಕ್ಕಸಿಯರ ||
ಇರಲಿತ್ತ ಶುಕತುಂಡನಳಲುತಂ ಬಳಲುತಂ |
ಪರಿತಂದು ವಣಶಿಲಾವಾಸಮಂ ಭಾಸಮಂ |
ಧೊರೆ ಕರಂಡಕ ದೈತ್ಯಗರುಹಿದಂ ನೆರಹಿದಂ ಬಳಿಕವಂ ಫೌಜುಗಳನು || ೧೫೨ ||

ಮಾತುಳರ ಮರಣವಂ ಶುಕತುಂಡನಿಂದರಿತು |
ಭೂತಳಕ್ಕತಳದಿಂ ಬಹ ದಾರಿಯಂ ನೋಡು |
ತಾ ತತುಕ್ಷಣದಿ ನವಕೋಟಿ ಕರ್ಬುರಸೈನ್ಯವೆರಸಿ ಕೃಷ್ಣಾರ್ಜುನರನು ||
ಈ ತಳಾತಳಕಿರದೆ ತಹೆನೆಂದು ಪಡೆ ಸಹಿತ |
ಜ್ಯೋತಿಂಗೆ ಮೇಲ್ವಾಯ್ದು ಖದ್ಯೋತದಂತೆ ನಾ |
ನಾತಿರೇಕದ ಕೋರೆದಾಡೆಯ ನಿಶಾಚರರನೊಡಗೊಂಡು ನಡೆತಂದನು || ೧೫೩ ||

**ಭಾಮಿನಿ**

ಅರರೆ ವಡಬಾನಲನ ಸರಿಸಕೆ |
ಬರುವ ಹೆದ್ದೊರೆಗಡಲೊ ಗರುಡನ |

ತರುಬಲೆಂದಯ್ತುರುವ ಹಾಲಾಹಲದ ಹೆಮ್ಮಡುವೋ ||
ತರಣಿಯನು ಬೆದರಿಸುವೆನೆಂದ |
ಯ್ತುರುವ ಕತ್ತಲೆಯೊಡ್ಡೊಯೇನೆಂ |
ದರಿಯೆನೈ ಬಪ್ಪಾ ಕರಂಡಕದೈತ್ಯ ಸೈನಿಕವ || ೧೫೪ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಈ ತೆರದಿಂದಲಾರ್ಭಟಿಸುತ್ತ | ಧಾರಿ | ಣೀತಳದಲಿ ಬಂದು ಕೆದರುತ್ತ |
ಭೀತಿಯಿಲ್ಲದೆ ರಣರಂಗದಿ | ಬೇ | ಗಾತು ನಿಂದರು ಕುರುಕ್ಷೇತ್ರದಿ || ೧೫೫ ||

ಹೆಣದ ಬೆಟ್ಟಗಳನೇರ್ದಿಳಿಯುತ್ತ | ಕೊಳೆ | ಕುಣಪಗಳನು ಕಂಡು ಹೇಸುತ್ತ |
ಕಣದಿ ಕರಂಡಕದೈತ್ಯನು | ನೋಡಿ | ಪೆಣಗಳೊಟ್ಟಿನೊಳು ಮಾತುಳರನು || ೧೫೬ ||

ನಿರುಕಿಸಿ ಕಲುಷಗಾಮಿನಿಯನು | ನೆಲ | ಕುರುಳಿದ ಜಗಳಗ್ರಂಥಿನಿಯನು ||
ಹರಹರೆನ್ನುತ ಶೋಕ ತಾಳಿದ | ಖಾತಿ | ವೆರಸಿ ಬೊಬ್ಬಿರಿವುತಾರ್ಭಟಿಸಿದ || ೧೫೭ ||

**ರಾಗ ಕಾಂಭೋಜಿ ಝಂಪೆತಾಳ**

ಧಡಿಗ ದಾನವನಟ್ಟಹಾಸದಾರ್ಭಟೆಗೆ ಜಗ | ನಡುಗಿ ದಿಗ್ಗಜವು ಘೀಳಿಡಲು ||
ಜಡಜಭವಸುಮನಸಾದಿಗಳೆಲ್ಲ ಭಯದಿಂದ | ಮೃಡನಡಿಯ ಸೇರಿ ಜಯವೆನಲು || ೧೫೮ ||

ವರ ಯುಧಿಷ್ಠಿರ ಭೀಮ ಪಾರ್ಥ ಯಮಳಾದಿಗಳು | ಹರಿಯೆ ಗತಿ ನಮಗೆನ್ನುತಿರಲು |
ಕುರುರಾಯನುಬ್ಬಿ ಸಂತೋಷದಲಿ ನಾಳೆ ಜಯ | ಸಿರಿ ನಮ್ಮೊಳೊಲವಾಹಳೆನಲು || ೧೫೯ ||

ಹೇರೊಡಲ ಕೋರೆದಾಡೆಯ ಕೊಂಕುಮೀಸೆಯ ಕ | ಠೋರ ಹಲುಗಳ ತೋರ ಕೊರಳ |
ಘೋರ ದಾನವನು ಕಂಗಳೊಳು ಕೆಂಗೆಂಡಗಳ | ಕಾರಿ ಫಲುಗುಣಗೆಂದ ದುರುಳ || ೧೬೦ ||

**ರಾಗ ಮಾರವಿ ಏಕತಾಳ**

ಛಡ ಗಾಂಡೀವಿ ವೃಥಾ ಗೋಪಾಲರ | ಹುಡುಗನ ಬಲದಿಂದ ||
ಬಿಡದೆಮ್ಮಯ ಮಾತುಳರನು ಮಡುಹಿದ | ಬೆಡಗನು ತೋರೆಂದ || ೧೬೧ ||

ಮಾರಿಗೆ ತೃಪ್ತಿಯ ಪಡಿಸುವೆ ನಿನ್ನನು | ಹೀರಿ ಬವರದೊಳಗೆ ||
ಪಾರು ಮಾಡುವೆನೀಕ್ಷಣದೊಳು ದಧಿ ಘೃತ | ಚೋರನ ರಣದೊಳಗೆ || ೧೬೨ ||

ತಿಕ್ಕುವೆ ಕೀಶನ ರಕ್ತವ ಮೊಗೆ ಮೊಗೆ | ದಿಕ್ಕುವೆ ನಾಲ್ದೆಸೆಗೆ |
ಅಕ್ಕರದಿಂದೀ ಧರೆಯನು ಕುರುಪತಿ | ಗಿಕ್ಕುವೆ ನಾ ಕಡೆಗೆ || ೧೬೩ ||

ಎನುತ ಮಹಾಸ್ತ್ರವ ಧನುವಿನೊಳೇರಿಸಿ | ಕನಲಿ ಕರಂಡಕನು ||
ಕಿನಿಸಿಂ ಕಿವಿವರೆಗೆಳೆದಾರ್ದೆಚ್ಚನು | ರಣಗಲಿಗಳನವನು || ೧೬೪ ||

**ಕಂದ**

ದುರ್ಧರ ಖಳನೆಚ್ಚಸ್ತ್ರವ |
ನರ್ಧದೊಳಂ ಕಡಿದು ವಿಜಯನತ್ಯುಗ್ರದೊಳಂ ||
ಚೇರ್ದುಬ್ಬುವ ದನುಜಾತನ |
ಕೋರ್ದಾಡೆಯ ಕಳಚುವೆನೆನುತಾ ಖಳಗೆಂದಂ || ೧೬೫ ||

**ರಾಗ ಘಂಟಾರವ ಮಟ್ಟೆತಾಳ**

ಖೂಳ ನಿನ್ನನು | ಸೀಳಿ ತೆಗೆವೆನು ||
ಕಾಳುಗೆಡೆವ ನಾಲಿಗೆಯನು | ಬೀಳ ಹೊಯ್ವೆನು || ೧೬೬ ||

ಮಾವನೆನುತಲಿ | ಬಂದೆ ಸೊಬಗಿಲಿ |
ಮಾವ ಹೋದ ಠಾವ ನಿನಗೆ | ತೋರ್ಪೆ ಜವದಲಿ || ೧೬೭ ||

ಎಂದು ವಿಜಯನು | ಎಸೆದ ಶರವನು ||
ಮುಂದುವರಿದು ಕಡಿದು ದೈತ್ಯ | ಮೂದಲಿಸಿದನು || ೧೬೮ ||

ಎಲವೊ ಮಾನವ | ಎದೆಯೊಳುಮ್ಮುವ ||
ಬಲುಹ ತೋರಿ ಕೆಡುವೆ ನಿನ್ನ | ಛಲದ ಗರ್ವವ || ೧೬೯ ||

ಮುರಿದು ಕೊಡುವೆನು | ಭರದಿ ತನುವನು ||
ಮರುಳುಭೂತಗಡಣಕೀವೆ | ಕ್ಷಣದಿ ನೋಡಿನ್ನು || ೧೭೦ ||

**ಭಾಮಿನಿ**

ಹಂದೆ ಖಳ ಕೇಳೆಲವೊ ಬಾಯಿಗೆ |
ಬಂದ ಪರಿಯಲಿ ಬಗುಳಿ ಮೊದಲೇ |
ಹೊಂದಿ ಹೋದರು ನಿನ್ನವರು ಫಡ ಮೂಢ ನಿನಗವರ ||
ಸಂದ ಹರಿಬವ ತೋರ್ಪೆ ನಿಲು ನಿ |
ಲ್ಲೆಂದು ಶರಮಳೆಗರೆಯಲಸುರನು |
ನೊಂದು ಮಾಯೆಯನೊಡ್ಡಿ ಕೈವೀಸಿದನು ಕಾಳಗಕೆ || ೧೭೧ ||

**ರಾಗ ಆಹೇರಿ ಝಂಪೆತಾಳ**

ಬವರ ಬಿರುಸಾದುದರ್ಜುನಗೆ | ಆ ದೈತ್ಯ |
ಜವದಿ ಬಲು ಮಾಯಕವ ಮುಸುಕಲೆಣ್ಣಿಸೆಗೆ || ಪ ||

ಬರಸಿಡಿಲು ಮಳೆ ಗಾಳಿ ಹೆಮ್ಮರವು ಹೆಬ್ಬೆಟ್ಟ |
ಜರಿದು ಬೀಸಲು ಖಡ್ಗ ಮುಸಲ ಮುದ್ಗರ ಖೇಟ |
ತರತರದ ಶಸ್ತ್ರಾಸ್ತ್ರ ಕಲ್ಗುಂಡುಗಳಲಿಟ್ಟ |
ನಿರದೆ ಕೃಷ್ಣಾರ್ಜುನರ ಮುಂದೆ | ದನುಜರುಗ |
ಳುರುಬಿದರು ಫಲುಗುಣನ ಸೈನ್ಯದೊಳು ಹಿಂದೆ || ೧೭೨ ||

ಆನೆ ಕುದುರೆಯ ತರಿದು ಸೇನೆಯೊಳು ಬೊಬ್ಬಿರಿದು |
ಶೋಣಿತದ ಮಳೆಗರೆದು ಸಾಣೆಯಲಗಿನೊಳಿರಿದು |
ಹೂಣಿಗರ ಹೊಯ್ದರೆದು ಹಾನಿಗೆಯ್ದರು ಜರೆದು |
ಕಾಣಿಸುತ ಕಣ್ಗೆ ಕತ್ತಲೆಯ | ಪಡೆ ಮುಂದು |
ಗಾಣದಂದಲಿ ಪಾರ್ಥನ ಪತಾಕಿನಿಯ || ೧೭೩ ||

ಹೊಡೆದುರಾವ್ತರ ಶಿರವ ಕಡಿದು ಮಾವ್ತರ ಕರವ |
ಬಡಿದು ಪಟುಭಟರುರವ ಕೆಡಹಿ ರಥ ಸಂಕುಲವ |
ಪುಡಿಗೆಯ್ದು ಮಾರ್ಬಲವ ಜಡಿದಟ್ಟಿ ಸೈನಿಕವ |
ಕೊಡಹಿ ಮೊಗೆ ಮೊಗೆದು ಶೋಣಿತವ | ಕುಂತಿಜನ |
ಪಡೆಯೊಳಗೆ ತೋರಿದರು ಬಹಳಮಾಯಕವ || ೧೭೪ ||

**ರಾಗ ಕೇದಾರಗೌಳ ಅಷ್ಟತಾಳ**

ಈ ಪರಿಯೊಳು ನಾನಾವಿಧದಿಂದಲೊಂದೊಂದು | ರೂಪುಗಳನೆ ತೋರುತ ||
ಕಾಪಟ್ಯದಿಂದಲಿ ಶರಮಳೆಗರೆದು ಪ್ರ | ತಾಪದಿ ಗರ್ಜಿಸುತ || ೧೭೫ ||

ಇರಲಾಗ ಯಮಜಭೀಮಾದಿಗಳ್ ಮನದೊಳ | ಚ್ಚರಿಯಲಿದೇನೆನಲು ||
ಕುರುರಾಯನಧಿಕ ಸಂತಸದಿ ದೂರದೊಳಿರ್ದು | ಧುರವನೀಕ್ಷಿಸುತಿರಲು || ೧೭೬ ||

ನರನು ರಕ್ಷೆಘ್ನಸಾಯಕವನ್ನು ಜಪಿಸಿ ಹೂಂ | ಕರಿಸಿ ವೀರಾವೇಶದಿ ||
ಭರದಿ ಗಾಂಡೀವದೊಳಳವಡಿಸುತಲೆಚ್ಚ | ನರಿವಿಜಯನು ಧುರದಿ || ೧೭೭ ||

ಎಸೆದಡಾಕ್ಷಣದಿ ರಾಕ್ಷಸರ ಮಾಯಕವೆಲ್ಲ | ಪುಸಿಯಾಗಿ ಬಯಲಾಗಲು ||
ಕುಸುಮನಾಭನು ಹನುಮಗೆ ಕಣ್ಣಸನ್ನೆಯೊ | ಳುಸಿರಲು ನಿಮಿಷದೊಳು || ೧೭೮ ||

ಪ್ರಳಯಭೈರವನಂತೆ ಧ್ವಜದಿಂದ ದುಮ್ಮಿಕ್ಕಿ | ಖಳಸೈನ್ಯ ಪೊಕ್ಕು ತಾನು ||
ಕೊಳುಗುಳದೊಳಗಾನೆ ನಳಿನವ ತುಳಿವ ವೋ | ಲಳಿಸಿದನಸುರರನು || ೧೭೯ ||

ಕೋಟಿ ದಾನವರ ವಿಘಾತಿಸಿ ಭುಜದಿಂದ | ಮೀಟಿ ಕರ್ಬುರ ಭಟರ ||
ಲೂಟಿಯ ಗೆಯ್ವುತುಬ್ಬಾಟದಿಂದಲಿ ಯಮ | ಕೋಟೆಗಟ್ಟಿದನು ವೀರ || ೧೮೦ ||

ಬಳಿಕ ಕರಂಡಕಾಸುರ ಕಂಡು ಹನುಮನ | ಬಳಲಿಸಿ ಬಾಲವನು ||
ಖಳ ಸೈನ್ಯಗಳು ಕೂಡಿ ಪಿಡಿದೆಳೆಯಲುರೋಷ | ಗೊಳುತಾಗ ಹನುಮಂತನು || ೧೮೧ ||

**ಭಾಮಿನಿ**

ವೀರ ಹನುಮನ ಬಾಲವನು ಮ |
ತ್ತಾರುಭಟಿಸಿ ಕರಂಡಕಾಸುರ |
ನೋರುಗುಡಿಸುತ ಪಡೆವೆರಸಿ ಪಿಡಿದೆಳೆಯಲನಿತರೊಳು ||
ತೋರಿ ಬಾಲವನಂಬರಕೆ ಮದ |
ವೇರಿ ಪುಟ ನೆಗೆದಾಗ ಮಾರುತಿ |
ಭಾರಿ ಖತಿಗೊಂಡುಬ್ಬಿ ಕೊಬ್ಬಿರ್ದಸುರಗಿಂತೆಂದ || ೧೮೨ ||

**ರಾಗ ಶಂಕರಾಭರಣ ಮಟ್ಟೆತಾಳ**

ಏನೆಲಾ ಕರಂಡಕಾಖ್ಯ ದಾನವಾಧಮ |
ತ್ರಾಣದಲ್ಲಿ ದಿಟ್ಟನಯ್ಸೆ ಭಳಿರೆಯಾಮಮ ||
ಕಾಣಬಹುದು ನೋಡೆನುತ್ತ ಬಾಲದಿಂದಲಿ |
ಗೋಣಿಗೌಕಿ ಬಿಗಿಯಲಸುರನುರುಳಿ ಧರೆಯಲಿ || ೧೮೩ ||

ಧಡಧಡಿಸುತ ಮಿಡುಕಿ ಪ್ರಾಣ ಬಿಡಲು ದೈತ್ಯನ |
ಕಡಲಿಗಿಕ್ಕಿ ಬಡೆದ ಮಿಕ್ಕ ಪಡೆಯನಾಕ್ಷಣ ||
ಮಿಡುಕಲೀಸದವನ ಯಮನ ಬಿಡೆಯ ಕಟ್ಟಲು |
ಕಡಲಶಯನಮುಖ್ಯರವನ ಬಿಡದೆ ಪೊಗಳಲು || ೧೮೪ ||

**ರಾಗ ಸಾಂಗತ್ಯ ರೂಪಕತಾಳ**

ಜನನಾಥ ಕೇಳಿಂತು ನವಕೋಟಿ ದೈತ್ಯರ | ನನುವರದೊಳಗೆ ಮಾರುತಿಯು |
ಇನಜಾತನೆಡೆಗಟ್ಟಿ ವನಜಾಕ್ಷಗೆರಗಿ ಸ್ಯಂ | ದನತುದಿಗೇರಿ ಕುಳ್ಳಿರಲು || ೧೮೫ ||

ಸುರಿದರಂಬರದಿಂದ ಸುಮದ ವೃಷ್ಟಿಯನಾಗ | ಸುರರು ಕೊಂಡಾಡಿ ಭಾಪೆನುತ |
ಮರುತಜಾರ್ಜುನರನ್ನು ಪೊಗಳಿದರೊಲಿದು ಶ್ರೀ | ಹರಿಯ ಕಟಾಕ್ಷದೆಂದೆನುತ || ೧೮೬ ||

ಕುರುರಾಯನದನೆಲ್ಲ ಕಂಡು ಸಂತಾಪದಿ | ಮರುಗಿ ತನ್ನಯ ಭಾಗ್ಯವೆನುತ |
ಬರಿದಿನ್ನಿವರೊಳು ನಾ ಕಾದಲೇಕೆನುತೊಳ | ಸರಿದನು ಮನದಿ ಚಿಂತಿಸುತ || ೧೮೭ ||

ಬಳಿಕಸುಶರ್ಮಕನರ್ಜುನನೊಳು ಕಾದಿ | ಬಳಲಿ ಬೆಂಡಾಗಲಾಚೆಯಲಿ ||
ಮುಳಿದು ಸೌಬಲ ಸಹದೇವನ ಯುದ್ಧದೊ | ಳಿಳೆಗೊರಗಿದನು ಮೂರ್ಛೆಯಲಿ || ೧೮೮ ||

**ಭಾಮಿನಿ**

ಅರಸ ಕೇಳಾ ಬಳಿಕ ಕೌರವ |
ಧರಣಿಪತಿ ಧರ್ಮಜನ ಗರ್ಜಿಸಿ |
ಜರೆದು ಭಂಗಿಸುತಿರಲು ಕಂಡಾ ಪವನನಂದನನು ||
ಉರಗನಿದಿರಿಗೆ ಬರುವ ವಿಹಗೇ |
ಶ್ವರನ ತೆರದಲಿ ಗಜರಿ ಮೀಸೆಯ |
ತಿರುಹಿ ವೀರಾವೇಶದಲಿ ಕುರುಪತಿಯನಡಹಾಯ್ದು || ೧೮೯ ||

**ರಾಗ ಕಾಂಭೋಜಿ ಝಂಪೆತಾಳ**

ಮರುತಸಂಭವನಿಂತು ಮೂದಲಿಸಿ ಬರುತಿರಲು | ಕುರುಪತಿಯು ಭಯದೊಳತಿ ಮರುಗಿ ||
ಸರಿದನಿಂದ್ರಾದಿಶಾಮುಖನಾಗಿ ಕಣನೊಳಗೆ | ಜರುಗಿ ತಾನೇಕಾಂಗಿಯಾಗಿ || ೧೯೦ ||

ಪೇಳಲೇನದ ಛತ್ರಚಾಮರಾದಿಗಳ ತಾ | ಬೀಳುಗೊಟ್ಟತಿ ದುಗುಡದಿಂದ ||
ಕಾಲುನಡೆಯಲಿ ಹೆಣನ ಪರ್ವತವನೇರಿಳಿವು | ತಾಳೊಳಗ್ಗಳನು ನಡೆತಂದ || ೧೯೧ ||

ಧರಣಿಪತಿ ಲಾಲಿಸೇಕಾದಶಕ್ಷೌಹಿಣಿಯೊ | ಳರಸ ಕೃತವರ್ಮ ಕೃಪರುಗಳು |
ಗುರುಸೂನು ಸಹ ನಾಲ್ವರುಳಿದರೀ ಪರಿಯಿಂದ | ಕುರು ನೃಪಾಲಕನ ಸೈನ್ಯದೊಳು || ೧೯೨ ||

ಎನಿತು ಬಲವಿರಲು ಮತ್ತೆನಿತು ಸಂಪದವಿರಲು | ಎನಿತು ಭಟರಿರಲು ಮುದದಿಂದ ||
ಎನುವದೇನ್ನೈ ದೈವಬಲವಿಲ್ಲದುದರಿಂದ | ಲಿನಿತಾದುದರಸ ಕೇಳೆಂದ || ೧೯೩ ||

ಇತ್ತ ಧರ್ಮಜಗುಳಿದುದೈದು ಸಾವಿರ ತುರಗ | ಮತ್ತೆ ಸಾವಿರ ವರೂಥಗಳು ||
ಮತ್ತ ಗಜವೆರಡು ಸಾವಿರದೇಳುನೂರುಮಿಗೆ | ಹತ್ತು ಲಕ್ಷವು ಪದಾತಿಗಳು || ೧೯೪ ||

ತೊತ್ತಳದ ಭಟರು ಸಾತ್ಯಕಿ ಯುಧಾಮನ್ಯುಗಳು | ಉತ್ತಮೌಜಸ ದ್ರುಪದಸೂನು ||
ಮತ್ತೆ ದ್ರೌಪದಿಸುತರು ಮಿಗೆ ಶಿಖಂಡಿಯು ತೋಷ | ವೆತ್ತಿರ್ದರರಸ ಕೇಳ್ ನೀನು || ೧೯೫ ||

**ಭಾಮಿನಿ**

ಜನಪ ಕೇಳಿನ್ನೇನೊರೆವೆ ನಿ |
ನ್ನಣುಗನಾವೆಡೆ ಕಾಣೆನರಸಲು |
ತನಗೆ ನೇಮವೆನುತ್ತ ಸಂಜಯನಂಧನೃಪತಿಯನು ||
ವಿನಯದಿಂ ಬೀಳ್ಕೊಂಡು ರಣಧಾ |
ರಿಣಿಯೊಳಾ ಕುರುಭೂಪನಾವೆಡೆ |
ಯೆನುತ ಹುಡುಕುವ ವೇಳೆಯಲಿ ಸಾತ್ಯಕಿಯು ತಡೆದೆಂದ || ೧೯೬ ||

**ರಾಗ ಭೈರವಿ ಅಷ್ಟತಾಳ**

ಎಲವೊ ಸಂಜಯನೆ ಕೇಳು | ಪೋಪೆಯದೆಲ್ಲಿ | ತಿಳುಹು ನೀ ಬೇಗೆನ್ನೊಳೂ ||
ಕೊಳುಗುಳಕಿದಿರಾಗೆಂದೆನುತಲಿ ಖಡ್ಗವ | ಸೆಳೆದು ಗರ್ಜಿಸುತಾಗಳು || ೧೯೭ ||

ರಣದ ಸಂಗತಿಯನೆಲ್ಲ | ಗತಾಕ್ಷನಿ | ಗನುವಾಗಿ ಪೇಳ್ದೆಯಲ್ಲ ||
ಬಣಗೆ ನೀನೀಗಿಲ್ಲಿ ಜುಣುಗಿದರೊಪ್ಪೆನೆಂ | ದೆನುತ ಪೇಳಿದನು ಸೊಲ್ಲ || ೧೯೮ ||

ಎಂದು ಕಠಾರಿಯನು | ಆತನ ಗೋಣಿ | ಗ್ಹೊಂದಿಸುತಿರೆ ವ್ಯಾಸನು ||
ಬಂದು ಸಾತ್ಯಕಿ ಕಯ್ಯ ಖಡ್ಗವ ಪಿಡಿವುತಿಂ | ತೆಂದನು ಋಷಿವರನು || ೧೯೯ ||

**ರಾಗ ಸಾಂಗತ್ಯ ರೂಪಕತಾಳ**

ಏನಯ್ಯ ಸಾತ್ಯಕಿ ನಮ್ಮ ಶಿಷ್ಯನ ಮೇಲೆ | ನೀನಿಷ್ಟು ಮುನಿವರೇನಯ್ಯ |
ಸಾನುರಾಗವಿದಲ್ಲ ಬಿಡು ಬಿಡೆಂದೆನೆ ಬಿಟ್ಟು | ಮೌನಿಗೆ ಮುಗಿದನು ಕಯ್ಯ || ೨೦೦ ||

ಅರಿಯದೆನ್ನಿಂದಾದುದಪರಾಧ ಕ್ಷಮಿಸೆಂದು | ಚರಣದೊಳೆರಗಿ ಸಾತ್ಯಕಿಯು |
ವರ ಸಂಜಯನ ಬಿಟ್ಟು ಸರಿಯಲು ಶಿಷ್ಯನ | ಪರಸಿ ಬೀಳ್ಗೊಟ್ಟನಾ ಋಷಿಯ || ೨೦೧ ||

**ವಾರ್ಧಕ**

ಶರಧಿವಸನೇಶ್ವರನೆ ಕೇಳಿಂತು ಕರುಣದಿಂ |
ಪರಮಋಷಿ ಸಂಜಯನ ಬೀಳ್ಗೊಟ್ಟು ತೆರಳಲ್ಕೆ |
ಕರುರಾಯನಂ ಕಾಂಬ ಲವಲವಿಕೆಯಿಂದಿತ್ತ ಸಂಜಯಂ ಬರುತಿರ್ದನು ||
ಕರದ ಗದೆಯಂ ಪೆಗಲೊಳಾಂತಾ ಸುಯೋಧನಂ |
ಪರಿವುತಿಹ ರಕ್ತದೋಕುಳಿಯ ಹೆಮ್ಮಡುವನು |
ತ್ತರಿಸುತ್ತ ರಣಧಾರಿಣಿಯೊಳೊರ್ವ ಬರುತಿರ್ದನೇನೆಂಬೆನದ್ಭುತವನು || ೨೦೨ ||

ಎಲ್ಲಿ ನೋಡಿದರುಲಿವ ಭೂತರವ ಪ್ರೇತರವ |
ವೆಲ್ಲಿ ನೋಡಿದರೊರಲ್ವ ಕಾಕರವ ಘೂಕರವ |
ಘಲ್ಲಿಸುವ ಜಂಬುಕಾನೇಕರವ ಭೀಕರವ ಶಾಕಿನೀಗಣದ ರವವು ||
ನಿಲ್ಲದಾರ್ಭಟಿಪ ಭೇತಾಳರವ ಕಾಳರವ |
ವಲ್ಲಲ್ಲಿ ಬಿಸಿರಕುತ ಹರಿವ ರವ ಸುರಿವ ರವ |
ಝಲ್ಲೆಂಬ ಗೃಧ್ರಗೋಮಾಯುರವ ವಾಯುರವದೊಳು ನಡೆದ ಕುರುರಾಯನು || ೨೦೩ ||

ತಂಡ ತಂಡದ ಶವಗಳಟ್ಟೆಮಯ ಬೆಟ್ಟಮಯ |
ದೊಂಡೆಗರುಳುರುಳ್ವ ಕಡಿ ಖಂಡಮಯ ಮುಂಡಮಯ |
ತುಂಡುತುಂಡಾದ ಗಜದಿಂಡುಮಯ ರುಂಡಮಯ ಮಡಿದಿರುವ ತುರಗಮಯವು ||
ದೆಂಡಣಿಸಿ ಬಿದ್ದ ಸ್ಯಂದನಮಯವ ಹೆಣಮಯವ |

ಹಿಂಡುಹಿಂಡಾಗಿರುವ ಗಣಮಯವ ನೊಣಮಯವ |
ನಂಡಲೆದು ಭಕ್ಷಿಸುವ ಖಗಮಯವ ಮೃಗಮಯವ ಮಜ್ಜೆ ಮಾಂಸಗಳ ಮಯವ || ೧೦೪ ||

ಅರಸ ಕೇಳ್ ಸಂಜಯಂ ಕೌರವನನರಸುತ |
ಯ್ತರಲಿತ್ತ ಕುರುಪತಿಯು ಗದೆಯ ಪೆಗಲೊಳಗಾಂತು |
ಪರಿವುತಿಹ ರಕ್ತದೋಕುಳಿಯ ಹೆಮ್ಮಡುವನುತ್ತರಿಸಿ ರಣಧಾರಿಣಿಯೊಳು |
ಒರಲುತಿಹ ಭೂತಬೇತಾಳ ಶಾಕಿನಿ ಹದ್ದು |
ನರಿ ನಾಯಿ ಕಾಗೆಗಳು ಕುಣಿದು ಹೆಣಗಳ ತಿನ್ನು |
ತಿರಲದನು ನೋಡಿ ಕೊಳೆ ಕುಣಪಗಳ ಹತ್ತಿಳಿದು ತೆರಳುವನ ಕಂಡೆಂದನು | || ೧೦೫ ||

**ಭಾಮಿನಿ**

ಭೂತಳಾಧೀಶ್ವರನೆ ಕೇಳಂ |
ದೀ ತೆರದ ರಣಭೂಮಿಯೊಳಗತಿ |
ಭೀತಿಯಲಿ ಮನನೊಂದು ಬೀಳುತ್ತೇಳುತಡಿಗಡಿಗೆ ||
ಧಾತುಗೆಡದಯ್ತುರುವ ಕುರುಕುಲ |
ನಾಥನನು ಕಾಣುತ್ತ ಸಂಜಯ |
ನೋತು ಮನದೊಳು ಚಿಂತಿಸುತ ಕಾಲ್ಗೆರಗಿ ಬೆಸಗೊಂಡ || ೧೦೬ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಪೊಡವಿಪಾಲಕ ಭಾಗ್ಯದಾಯಕ | ನುಡಿಯದೆಲ್ಲಿಗೆ ನಡೆವೆ ಮೆಲ್ಲನೆ ||
ಬಡಿವೆ ರಿಪುಗಳನೆಂಬ ಛಲಗಳ | ನುಡಿಯಡಗಿ ಹೀಗಾಯಿತೆ | ಪುಣ್ಯ ಫಲವೆ || ೧೦೭ ||

ಬಿಡದೆ ಬಾಗುತ ನೃಪರು ಮಕುಟವ | ನಿಡುವ ಕೋಮಲ ಚರಣವಿದರೊಳು |
ನಡೆವೆನೀನೆಂತಕಟ ಪೇಳ್ಕೈ | ಮಡುವಿನಂತಿಹ ರಕ್ತದಿ | ರಣಕೆ ಬೆದರಿ || ೧೦೮ ||

ಇಂದುನಿನ್ನಯ ಮಂದಮತಿಯೊಳು | ಸಂದರೆಲ್ಲರು ಉಳಿದೆಯೊಬ್ಬನೆ |
ಮಂದಭಾಗ್ಯರು ನಾವು ಶಿವ ಶಿವ | ಯೆಂದು ಸಂಜಯ ಮರುಗಿದ | ಚಿಂತೆಗೊಂಡು || ೧೦೯ ||

**ಭಾಮಿನಿ**

ಆದಡೆಲೆ ಸಂಜಯನೆ ನೀ ಕೇ |
ಳಾದಿಸುಕೃತವಿಶಾಲವನವದು |
ಸೀದು ಹೋದರೆ ಜಯಸಿರಿಯು ಜಂಗುಳವ ಜಾರಿದರೆ ||
ಆದರಿಸುವವರಾರು ವಿಧಿ ಬರೆ |
ದಾದಿಯಕ್ಷರಕಿಂದು ಪ್ರತಿಕೂ |
ಲಾದಿಯುಂಟೇಯೆಂದು ಕಂಬನಿದುಂಬುತುಸಿರಿದನು || ೧೧೦ ||

**ರಾಗ ಭೈರವಿ ಝಂಪೆತಾಳ**

ಎಲವೊ ಸಂಜಯ ಕೇಳು | ಏನ ಪೇಳಲಿ ನಿನಗೆ |
ತಲೆಯ ಕಡಿವೆನು ಪಾಂಡು | ತನಯರನು ನಾಳೆ || ೧೧೧ ||

ನರನ ಶಿರವನು ಹೊಡೆದು | ನಳಿನಬಾಂಧವಸುತನ |
ಹರಿಬವನು ತೆಗೆವೆ ನಾ | ಹದನವನು ನೋಡು || ೧೧೨ ||

ಮರುತಸುತನೊಡಲಿರಿದು | ಮಮ ಸಹೋದರರನ್ನು |
ಭರದಿಂದ ತೆಗೆವೆನ್ನೈ | ಬದ್ಧವಿದು ಕೇಳು || ೧೧೩ ||

ಮಿಕ್ಕ ಭಟರೆಲ್ಲರನು | ಮಾರಿಗೀಯದಿರೆ ನೂರ್ |
ಮಕ್ಕಳೊಳು ಧೃತರಾಷ್ಟ್ರ | ನಿಗೆ ತನಯನಲ್ಲ || ೧೧೪ ||

ಇದೆ ಸರೋವರವೊಂದು | ಇಲ್ಲಿಗೆ ಸಮೀಪದಲಿ |
ಹುದುಗಿರುವೆನ್ನೈ ಪಗೆಗ | ಳರಿಯದಂದದಲಿ || ೧೧೫ ||

ತಂದೆಗತಿ ಧೈರ್ಯವನು | ತಾರತಮ್ಯದಿ ಪೇಳು |
ಇಂದು ಜನನಿಗೆ ದೃಢದೊ | ಳಿನಿತೆಲ್ಲ ತಿಳುಹು || ೧೧೬ ||

ತರುಣಿಗತಿ ಧೈರ್ಯವನು | ತಳುವದುಸಿರೈ ನೀನು |
ಅರಮನೆಯ ಜನಕೆಲ್ಲ | ಅರುಹು ಭಾಷೆಯನು || ೧೧೭ ||

**ಭಾಮಿನಿ**

ಎಂದು ಸಂಜಯಗುಸಿರಿ ಕೌರವ |
ಮುಂದೆ ನಡೆಯಲು ಕಂಡು ಮರುಗುತ |
ಬಂದನಾ ಸಂಜಯನು ಸಂತಾಪದಲಿ ಮನ ಮರುಗಿ ||
ನೊಂದು ನಡೆತರುವವನ ಕಾಣು |
ತ್ತಂದು ಗುರುಸುತ ನೃಪನ ವಾರ್ತೆಯ |
ನಿಂದು ಕೇಳಲು ಪೇಳ್ದನಾ ಭೂವರನ ದುಃಸ್ಥಿತಿಯ || ೧೧೮ ||

**ರಾಗ ಕಲ್ಯಾಣಿ ಝಂಪೆತಾಳ**

ಕೇಳಾದಡೆಲೆ ಕಲಶಜಾತಸಂಭವನೆ | ಪೇಳಲೇನನುಮಾನ ವಾರ್ತೆ ನಿನ್ನೊಡನೆ || ಪ ||

ಧುರದಿ ತಾನೇಕಾಂಗಿಯಾಗಿ ಕೌರವನು | ಮರಳಿದನು ಕಣವನ್ನುಳಿದು ಜವದಿ ತಾನು ||
ಭರದಿಂದ ದಕ್ಷಣದಿಶಾಭಿಮುಖದೊಳಗೆ | ತೆರಳ್ವ ಭೂಪನಕಂಡು ಸರಿದೆನವನೆಡೆಗೆ || ೧೧೯ ||

ಪೋಗಿ ನಾ ಕಾಲ್ಗೆರಗಿ ಕೇಳಲೆನ್ನೊಡನೆ | ಆಗ ಅವನೆಲ್ಲ ತಿಳುಹುತ ಧೈರ್ಯಗಳನೆ ||
ಬೇಗದಿಂ ಪೇಳಿ ದ್ವೈಪಾಯನದ ತಡಿಗೆ | ಸಾಗಿದನು ನಾ ಪೇಳ್ವುದೇನು ನಿಮ್ಮೊಳಗೆ || ೧೧೦ ||

**ಭಾಮಿನಿ**

ಎಂದು ಸಂಜಯನಂಧನೃಪನೆಡೆ |
ಗಂದು ಸರಿದೀ ಪರಿಯ ವಾರ್ತೆಯ |
ಬಂದುಸಿರಿಸಂತಯಿಸಲಿತ್ತಲು ಗುರುಸುತಾದಿಗಳು ||
ಕುಂದಿ ಕೌರವನಿರವನೀಕ್ಷಿಸ |
ಲೆಂದು ಬರೆ ಕೊಳನೊಳಗೆ ಮುಳುಗಿರು |
ತಂದು ಸಲಿಲಸ್ತಂಭ ವಿದ್ಯೆಯೊಳಿಹನ ನುಡಿಸಿದರು || ೧೧೧ ||

**ರಾಗ ಕಾಪಿ ಅಷ್ಟತಾಳ**

ಕುರುರಾಯ ಕೇಳೆಮ್ಮ ಮಾತ | ಈಗ | ಬರಿದೆ ನೀರೊಳಗಿರಲೇಕೆ ವಿಖ್ಯಾತ || ಪ ||

ದುರುಳ ಭೀಮಾರ್ಜುನರುಗಳ | ಶಿರ | ವರಿದು ಕೊಡುವೆವೀಗ ಹಿಡಿನಂಬುಗೆಗಳ |
ಗರುವರಿಹರೆ ಜಲದೊಳಗೆ | ಏಳೆಂ | ದೊರೆಯಲು ಕೇಳುತ್ತ ಪೇಳ್ದ ನೀರೊಳಗೆ || ೧೧೧ ||

ಕದನಕಲಿಗಳು ನೀವಹುದು | ಚಳ | ಕದಿ ಭೀಮಾದ್ಯರ ಕೊಲ್ವರೆಂದು ತೋರುವುದು ||
ಸದನಕೆ ಪೋಗಿ ನೀವಿಂದು | ಎನ | ಲದ ಕೇಳ್ದು ಗುರುಸೂತನೊರೆದನಿಂತೆಂದು || ೧೧೩ ||

ನಮ್ಮೊಳಿನಿತು ಮುನಿಸೇಕೆ | ಜೀಯ | ನಿಮ್ಮ ಪೂರ್ವದ ಸುಕೃತದ ಪುಣ್ಯಫಲಕೆ ||
ನಮ್ಮಿಂದಾದಪರಾಧವೇನು | ಎನ | ಲೊಮ್ಮೆ ಮತ್ತವರೊಡನೆಂದ ಕೌರವನು || ೧೧೪ ||

ಬಿಡದೆ ಸೌಬಲ ಮುಂತಾದವರು | ಯುದ್ಧ | ಗೊಡುವ ವೇಳ್ಯದೊಳಗಿಂತಾದ ಪ್ರವುಢರು ||
ಮಿಡುಕುತ್ತವರ ಮಡುಹಿದಿರಿ | ಸಾಕು | ಬಿಡಿ ಬಿಡೀ ಬಡಿವಾರವೇನ ಪೇಳುವಿರಿ || ೧೧೫ ||

**ರಾಗ ಶಂಕರಾಭರಣ ಏಕತಾಳ**

ಎಂದಾಡೆ ಗುರುಸೂನು ಮತ್ತಿಂ | ತೆಂದನು ಭೀಷ್ಮಾದ್ಯರಂತೆ |
ಇಂದುಗತರಾಗದೆ ನಾವು | ಬಂದುದರಿಂದ ||
ಕಂದಿ ನಿನ್ನಾನನಕೆ ಕಿನಿಸು | ಹೊಂದಿತಾದರಾಗಲಿನ್ನು |
ಮುಂದೆ ನೋಡೆಮ್ಮಧಟನು ನೀ | ನಿಂದೇಳು ಜೀಯ || ೧೧೬ ||

ಖೂಳ ಪಾಂಡುಸುತರ ಕಾಲ | ನಾಲಯಕಯ್ದಿಸಿ ರಾಜ್ಯ |
ಪಾಲನೆಗೆ ನೀನಲ್ಲದಿಲ್ಲೆಂ | ದೆನಿಸುವೆವಿಂದು ||
ಬೀಳುಗೊಂಡೀ ಜಲವನು ನೀ | ನೇಳು ಪಾಂಡುಸುತರ ಯುದ್ಧ |
ಕೇಳಿಗೆ ಕರೆಯೆಂದಾಡೆ ಭೂ | ಪಾಲನುಸಿರಿದ || ೧೧೭ ||

ನಂಬಿದೆ ಭೀಷ್ಮನ ಮತ್ತೆ | ಹಂಬಲಿಸಿದೆ ದ್ರೋಣನ ನಾ |
ನೆಂಬುದೇನು ಕರ್ಣನಿಹನೆಂ | ದಿಂಬು ಮಾಡಿದೆ ||
ಬೆಂಬಿಡದಿಹ ವಿಧಿಯು ತನ | ಗಂಬ ತೋರಿತಿನ್ನೇನದರ |
ಎಂಬುವೇ ನಾನಷ್ಟಕಿಲ್ಲಿ | ಇಂಬುಗೊಂಡಿರ್ಪೆ || ೧೧೮ ||

ತೆಗೆ ತೆಗೆ ಭೀಷ್ಮಾದ್ಯರಿಂದ | ಮಿಗಿಲಾಗಿ ಸಂಗರದೊಳಿಂದು |
ಮೃಗಧರನಡ್ಡೈಸಿದರು | ಬಗೆಗೊಳ್ಳೈವೀಗ ||
ವಿಗಡ ಭಿಮಾರ್ಜುನರ ಹಿಡಿದು | ಬೆಗಡುಗೊಳಿಸಿ ನಿನ್ನ ಪಾದ |
ಯುಗದೊಳು ತಂದೊಪ್ಪಿಸುವೆವು | ನಗೆಯಲ್ಲ ಜೀಯ || ೧೧೯ ||

ಧುರಸಮರ್ಥರಹುದು ನೀವು | ಒರೆಯಲೇನಿನ್ನದರ ನಾನಿ |
ಲ್ಲಿರುವೆನೀ ಹೊತ್ತಿನಲಿ ನೀವು | ತೆರಳುವದೆಲ್ಲ ||
ಮರುತಸುತನ ಬೇವಿನಾಳ್ಗ | ಳರಸುತ್ತ ಬರುವರಿನ್ನಿ |
ಲ್ಲಿರದೀಗ ನೀವ್ ಪೋಗಿರೆಂದ | ಕುರುರಾಯನಂದು || ೧೨೦ ||

**ವಾರ್ಧಕ**

ಅರಸ ಕೇಳಿವರಿಂತು ಮಾತಾಡುತಿರಲಿತ್ತ |
ಮರುತಸುತನರಮನೆಯ ಮೃಗ ಬೇಟೆಗಾರತತಿ |
ಭರದಿ ನೀರಡಸಿ ಮಾಂಸವನಿಳುಹಿ ಸರಸಿಯಂ ಹುಡುಕುತಯ್ದಿದರಲ್ಲಿಗೆ ||
ಚರಣಮೊಗಮಂ ತೊಳೆದು ಮಿಗೆ ನಿರ್ಮಲೋದಕವ |
ನಿರದೀಂಟಿ ಗುರುಜಕೃಪರೆಂಬುದಂ ಕೇಳುತವ |
ರರಿದರಾ ನಡುನೀರೊಳಯ್ದೆ ಮಾತಾಡುತಿಹ ಕುರುನೃಪಾಲಕನಿರವನು || ೧೨೧ ||

**ಭಾಮಿನಿ**

ಧಾರಿಣಿಪ ಕೇಳ್ ದೈವಘಟನೆಯ |
ಮೀರಲಳವೇನಿವರ ನುಡಿಗಳ |
ಸಾರವನು ಸಂಗ್ರಹಿಸಿ ಮನದೊಳಗಾ ಮೃಗಾರಿಗಳು ||
ಸಾರಿದರು ಪಾಳೆಯವನಿತ್ತಲು |
ವೀರ ಪಾಂಡುಕುಮಾರರಟ್ಟಿದ |
ಚಾರಕರು ಮಿಗೆ ಬಂದು ಧರ್ಮಜಗೆರಗುತುಸುರಿದರು || ೧೨೨ ||

**ರಾಗ ಸಾವೇರಿ ಅಷ್ಟತಾಳ**

ರಾಯ ನೀ ಲಾಲಿಸಯ್ಯ | ನಾವೆಂಬುದ | ಪ್ರೀಯದೊಳೊಲಿದು ಜೀಯ ||
ಬಾಯಾರಿ ನಾವೆಲ್ಲ ಹುಡುಕಿದೆವಾ ಕುರು | ರಾಯನ ನೆಲೆಗಾಣೆವು || ಏನೆಂಬೆವು || ೧೨೩ ||

ಧುರಭೂಮಿಯಲಿ ಸತ್ತರಾ | ಕಾಯವ ಮಗು | ಚಿರದೆ ನೋಡಿದೆವೆಲ್ಲರ |
ಇರವ ಕಾಣೆವು ಕುರುಧಾರಿಣಿಪಾಲನೆ | ಲ್ಲಿರುವ ತಾನೆಂಬುದನು || ನಾವಿನ್ನು || ೧೩೪ ||

ನೆರೆ ಭಗದತ್ತನಂದು | ಯೇರಿದ ಮದ | ಕರಿಯನು ಸಹಿತಲಿಂದು |
ಹೊರಳಿಚಿ ನೋಡಿದರರಿಯೆ ನಾವಿನ್ನೆಲ್ಲಿ | ಸರಿದನೊ ಕೌರವನು || ನಿಮ್ಮವನು || ೧೪೫ ||

ಅಷ್ಟದಿಕ್ಕುಗಳನೆಲ್ಲ | ನೋಡಿದರೆಳ್ಳಿ | ನಷ್ಟನು ತಿಳಿಯಲಿಲ್ಲ ||
ದುಷ್ಟ ಕೌರವನ ಕಂಡವರಿಲ್ಲಿನ್ನವ ಮತಿ | ಗೆಟ್ಟೆಲ್ಲಿ ಗಯ್ದಿದನು || ಮತ್ತವನು || ೧೩೬ ||

**ಕಂದ**

ಇಂತೆಂದಾ  ಚರರರುಹಲು |
ಸಂತಾಪವ ತಾಳ್ದು ಮನದಿ ಪಾಂಡವತಿಲಕಂ ||
ಚಿಂತಿಸುತಿನ್ನೇನೆಂಬುದ |
ಕಂತುಪಿತನೆ ಬಲ್ಲನೆನುತ ಮತ್ತಿಂತೆಂದಂ || ೧೩೭ ||

**ರಾಗ ನೀಲಾಂಬರಿ ರೂಪಕತಾಳ**

ಎಲ್ಲಿಗೆ ಪೋದನೊ ಕುರುಕುಲ | ಮಲ್ಲನು ನಮ್ಮನು ವಂಚಿಸಿ |
ನಿಲ್ಲದೆ ತಾನೇನ್ ಗೆಯ್ದನೊ | ಬಲ್ಲವರಾರಿದನು ||
ಎಲ್ಲರ ಮಾತನು ಕೇಳದೆ | ಖುಲ್ಲರ ನುಡಿಯನು ಲಾಲಿಸಿ |
ಕೊಲ್ಲಿಸಿದನು ಗುರುಹಿರಿಯರ  | ಮೆಲ್ಲಗೆ ಜಾರಿದನು || ೧೩೮ ||

ಏತಕೆ ಭೀಷ್ಮನ ದ್ರೋಣನ | ನೇತಕೆ ಗೆಲಿದೆವು ಕರ್ಣನ |
ಏತಕೆ ಮಾದ್ರಾಧೀಶನ | ನೇತಕೆ ಸೌಬಲನ ||
ಏತಕೆ ಕೊಂದೆವು ಕಡೆಯಲಿ | ಪಾತಕಕೆಡೆಯಾಯ್ತಲ್ಲದೆ |
ಭೂತಳ ದೊರಕದು ಕುರುಕುಲ | ನಾಥನುಳಿಯಲಕಟ  || ೧೩೯ ||

ಕಪಟದಿ ದ್ಯೂತವನಾಡಿಸಿ | ದ್ರುಪದಜೆಯಳ ಮನ ಮರುಗಿಸಿ |
ವಿಪಿನಕ್ಕೆಮ್ಮನು ಕಳುಹಿಸಿ | ವಿಪರೀತವ ನಡೆಸಿ ||
ಚಪಳತ್ವದಿ ಸುಯ್ಧಾನವ | ನಪಹರಿಸಿದ ಧುರವೆಂದವ |
ಗುಪಿತದೊಳಿಂದಡಗಿದನೇನ್ | ಕಪಟಿಗನೋ ಶಿವನೆ  || ೧೪೦ ||

**ಕಂದ**

ಇಂತೆಂದಾ ಧರ್ಮಜನತಿ |
ಚಿಂತಿಸುತಿರಲಿತ್ತ ಕಿರಾತರು ಭಯದಿಂದಂ ||
ಸಂತಸದಿಂ ಮಾರುತಿಯೆಡೆ |
ಗಂ ತಳುವದೆ ಬಂದು ಪೇಳ್ದರೀ ವಾರ್ತೆಗಳಂ || ೧೪೧ ||

**ರಾಗ ಘರಜು ಏಕತಾಳ**

ಭರದಿಂ ನೇಮ್ತೆವು ಸಾಮಿ ನಿಮ್ಮೆಡೆಯ | ಸಲಾಮು ಒಡೆಯ |
ಭರದಿಂ ನೇಮ್ತೆವು ಸಾಮಿ ನಿಮ್ಮೆಡೆಯ || ಪ ||

ಈಟೀಟ್ಮಂದಿ ಕೂಡಿ ನಾವು | ಓಟೋಟಾಗಿ ಹೊಲಕಾಯ್ದೇವು |
ಗೂಟ ಹಾಕಿ ಬಲೆ ಬೀಸಿದೆವು || ಮಿಗೆ ಮೊಲನಾ ಹಿಂಡ |
ಕಾಟಿ ಕಾಡ್ಗೋಣಗಳ ದುಮುಕಿದೆವು || ಬಹು ಪರಾಕು ದೊರೆಯೆ || ಭರದಿಂ || ೧೪೧ ||

ಈಟಿ ಕಠಾರಿಯಿರಿತಕಾಗಿ | ಬೇಟೆಯಾಡಿ ಬೇಜಾರಾಗಿ |
ಮೀಟಾದ ದ್ವೈಪಾಯನಕೆರೆ ದಡಕೆ || ಬಂದಲ್ಲಿ ನಾವ್ ನೀ |
ರಾಟಕಿಳಿದೆವು ಕಳೆಯೆ ಬೇಸರಿಕೆ || ಬಹು ಪರಾಕು ದೊರೆಯೆ || ಭರದಿಂ || ೧೪೩ ||

ಕೃತವರ್ಮ ಕೃಪರುಗಳ ಕೂಟ | ಜತೆಯಾಗಶ್ವತ್ಥಾಮನಲ್ಲಿ |
ಕುತುಕುತೆಮ್ತಾ ಮಾತನಾಡ್ತೌನೆ || ನೀರಾಗೆ ಮುಳುಗಿ |
ಕೃತಕದಿ ಕುರುರಾಯನಿರುತವುನೆ || ಬಹು ಪರಾಕು ದೊರೆಯೆ || ಭರದಿಂ || ೧೪೪ ||

ಭೀಮಸೇನನ ಬೇವಿನ ಮಂದಿ | ತಾವು ಕಾಂಬರ್ ಪೋಗೆಂಬ್ತವನೆ ||
ನೇಮಿಸುತ್ತ ನೀರೊಳಿರುತವನೆ | ಈ ಹೊತ್ತು ಸುಮ್ಕೆ |
ಗಾಮ್ಜಾಲ್ನಡೆಸಲೆಂದು ಕುಂತವನೆ || ಬಹು ಪರಾಕು ದೊರೆಯೆ || ಭರದಿಂ | || ೧೪೫ ||

**ಭಾಮಿನಿ**

ಪೃಥ್ವಿಪತಿ ಕೇಳ್ ಶಬರರೆಂದುದ |
ಕತ್ಯಧಿಕ ಹರುಷದಲಿ ಮರುತಜ |
ಮುತ್ತಿನೇಕಾವಳಿಯ ಸರಗಳ ವೀರ ಮುದ್ರಿಕೆಯ ||
ಇತ್ತನವರಿಂಗಂಗಚಿತ್ತವ |
ಮತ್ತವರ ಮನ್ನಿಸುತ ಕಳುಹಿಸು |
ತಿತ್ತ ಧರ್ಮಜನೆಡೆಗೆ ಬಂದುಸಿರಿದನು ವಿನಯದಲಿ || ೧೪೬ ||

**ರಾಗ ದೇಶಿ ಏಕತಾಳ**

ಲಾಲಿಸಿ ಕೇಳಿಂದೀ ವಸಗೆ | ಅಣ್ಣದೇವ | ಮನದೊ |
ಳಾಲಸ್ಯವ ಮಾಡಬೇಡ | ಅಣ್ಣದೇವ ||
ಖೂಳ ಕೌರವೇಂದ್ರನಿರವ | ಅಣ್ಣದೇವ | ಈಗ |
ಕೇಳಿದ ನಾನೆಲ್ಲ ಪರಿಯ | ನಣ್ಣದೇವ || ೧೪೭ ||

ಕಾಯದಾಸೆಗಾಗಿಯವನು | ಅಣ್ಣದೇವ | ಈದ್ವೈ |
ಪಾಯನದ ಸಲಿಲದಲ್ಲಿ | ಅಣ್ಣದೇವ |

ಮೈಯ ಮರೆಸಿಯಿರುವನೆಂದು | ಅಣ್ಣದೇವ | ಪೇಳ್ದ |
ರಾಯತಿಕೆಯಿಂದ ಶಬರ | ರಣ್ಣದೇವ  || ೧೪೮ ||

ಎಂದ ಮಾತ ಕೇಳ್ದು ಬೇಗ | ಧರ್ಮರಾಯ | ತಾ ಮು |
ಕುಂದನಿದ್ದ ಬಳಿಗೆ ಬಂದ | ಧರ್ಮರಾಯ ||
ನಿಂದು ಕರವ ಮುಗಿದು ಪೇಳ್ದ | ಧರ್ಮರಾಯ | ಸ್ವಾಮಿ |
ಇಂದಿರೇಶ ಲಾಲಿಸೆಂದ | ಧರ್ಮರಾಯ  || ೧೪೯ ||

**ರಾಗ ರೇಗುಪ್ತಿ ಅಷ್ಟತಾಳ**

ಸ್ವಾಮಿ ಲಾಲಿಪುದು ಮಾತ | ಲೋಕವಿಖ್ಯಾತ | ಸ್ವಾಮಿ ಲಾಲಿಪುದು ಮಾತ  || ಪ ||

ಸ್ವಾಮಿ ಲಾಲಿಪುದು ಮಾತ | ಪ್ರೇಮ ಭಕ್ತಸುಪ್ರೀತ |
ಕಾಮನಯ್ಯ ಮುಕುಂದ | ಕೋಮಲಾಂಗ ಗೋವಿಂದ || ಸ್ವಾಮಿ ||   || ಅ ||

ದುರುಳ ಕೌರವನೋರಂತೆ | ದ್ವೈಪಾಯನ | ಕೆರೆಯೊಳ್ ಮುಳುಗಿರ್ಪನಂತೆ |
ತೆರನಾವುದಿನ್ನು ನಮಗೆ | ಸರಸಿಯೊಳಡಗಿದವರ |
ನಿರಿದು ಕೊಲ್ಲುವುದಾವದು ಪರಿ ನೀತಿಯಿದು ಭಾವ || ಸ್ವಾಮಿ || ೧೫೦ ||

ಧುರದಿ ಬಳಲಿದಾತನ | ಶಸ್ತ್ರಾಸ್ತ್ರವು | ವಿರಥನಾಗಿಹ ಭಟನ ||
ಪರಿಕಿಸಿ ಕೊಲುವುದಾವ | ತೆರ ಶಾಸ್ತ್ರನೀತಿ ದೇವ |
ಒರೆಯಲಿನ್ನೇನು ನೀನೆ | ಕರುಣಿಸು ಲಕ್ಷ್ಮೀವರನೆ  || ಸ್ವಾಮಿ || ೧೫೧ ||

ಹಿಂದೆ ಭೀಷ್ಮಾದಿ ಹಿರಿಯರ | ನೆಲ್ಲರ ನಾವು | ಕೊಂದುದನ್ಯಾಯ ಮುರಹರ |
ಮುಂದಿನ್ನು ಗತಿ ಯಾವು | ದೆಂದು ಪೇಳಲು ಕೇಳ್ದು |
ಇಂದಿರೇಶನು ನಗು | ತೆಂದ ನೃಪತಿಯೊಡನೆ || ಸ್ವಾಮಿ || ೧೫೨ ||

**ರಾಗ ನವರೋಜು ಏಕತಾಳ**

ಕೇಳು ಧರ್ಮಜ ಮಾತ | ನಾ | ಪೇಳುವೆನೈ ಯಮಜಾತ ||
ಖೂಳರಮಥಿಸಿ ಸು | ಶೀಲರ ಪಾಲಿಪ | ಶೀಲವು ನಿಮ್ಮ ನೃಪಾಲರ ಬಿರುದಿದು || ೧೫೩ ||

ಮರಣವು ಬಾರದ ತೆರದಿ | ಆ | ಹಿರಣ್ಯಕನಂದತಿ ಭರದಿ ||
ವರವನು ಪಡೆಯಲು | ನರಹರಿರೂಪವ | ಧರಿಸಿ ಮುಕುಂದ ಸಂ | ಹರಿಸಿದುದರಿಯೆಯ || ೧೫೪ ||

ಕಪಟದಿ ದ್ಯೂತವನಾಡಿ | ನಿಮ್ಮ | ವಿಪಿನಕಟ್ಟಿದ ಖೋಡಿ ||
ದ್ರುಪದಜೆಸೀರೆಯ | ನಪಹರಿಸಿದ ಕುರು | ನೃಪನನು ಮಥಿಸಿ ನೀ | ನಿಪುಣನೆಂದೆನಿಸೈ || ೧೫೫ ||

ಮಾತೆಯಣ್ಣನ ನಾನು | ಹಿಂದೆ | ಘಾತಿಸಿದ ಬಗೆಗಳನು ||
ನೀ ತಿಳಿದದನಿ | ನ್ಯಾತಕೆ ಮರುಗುವೆ | ನೀತಿಯಿದೆನೆ ಯಮ | ಜಾತನು ಪೊರಟನು || ೧೫೬ ||

**ಭಾಮಿನಿ**

ಭೂತಳಾಧಿಪ ಕೇಳು ಹರಿ ಯಮ |
ಜಾತ  ಭೀಮಾರ್ಜುನರು ಮಾದ್ರೀ |
ಜಾತರಖಿಳ ಭಟಾಗ್ರಣಿಗಳೊಗ್ಗಿನಲಿ ಸಂದಣಿಸಿ ||
ಭೂತಳವು ಬಿರಿವಂತೆ ಬರಲಾ |
ರೀತಿಯನು ಗುರುಸುತನು ಕಾಣುತ |
ಭೀತಿಯನು ಬಿಟ್ಟಾಗ ಕುರುಪತಿಗೆಂದನೀ ತೆರದಿ || ೧೫೭ ||

**ರಾಗ ಸಾರಂಗ ಅಷ್ಟತಾಳ**
ಬಂದ ಧರ್ಮಜ ನೋಡು ಜೀಯ | ಇನ್ನು | ಮುಂದೇನುಪಾಯ ಪೇಳಯ್ಯ ||
ಮಂದಿ ಮಾರ್ಬಲ ಕೂಡಿ ಗಜ ರಥ ತುರಗಗ |
ಳಿಂದ ಸಮರಕೆ ಮುಂದುವರಿದೈ | ತಂದನಿದಕೋ ಭರದೊಳು || ೧೫೮ ||

ನಂದನ ಕಂದನರ್ಜುನರು | ವಾಯು | ನಂದನ ಮಾದ್ರಿಯಾತ್ಮಜರು ||
ಸಂಧಿಸಿದರಿಭಟರ್ಗಿಂದು ನಾವಿದಿರಾಗಿ |
ನಿಂದು ಯುದ್ಧವ ಮಾಡುವೆವು ಜಲ | ದಿಂದ ಹೊರಡತಿ ಬೇಗದಿ  || ೧೫೯ ||

ಸಲಿಲದೊಳಿಹುದಿನ್ನು ವ್ಯರ್ಥ | ಬಂದ | ರಲಘುವಿಕ್ರಮರು ಗರ್ಜಿಸುತ ||
ಕೊಳುಗುಳವನು ಗೆಯ್ವೆವಲಸದೀ ಕ್ಷಣದಿ ನೀ |
ಕೊಳನ ಹೊರವಡುಗಳಿಗೆಯೊಳು ರಿಪು | ಬಲವನೆಲ್ಲವ ಗೆಲುವೆವು || ೧೬೦ ||

**ಕಂದ**

ಎಂದೆನಲವರೊಡನೆಂದಂ |
ಮುಂದಿರದಿಂದೊಡನೆ ಪೋಪೆ ಪಾತಾಳಕ್ಕಂ ||
ಬಂದಾ ರಿಪುಗಳು ಮಾಡುವ |
ದಿಂದೇನೈ ನೀವು ಪೋಗಿರಿಲ್ಲಿರದೆಂದಂ || ೧೬೧ ||

**ರಾಗ ಸಾಂಗತ್ಯ ರೂಪಕತಾಳ**

ಎನಲವರಯ್ದಲಿತ್ತಲು ಧರ್ಮಜಾದಿಗ | ಳನುವಾಗಿ ಕೊಳನೆಡೆಗಯ್ದಿ ||
ವಿನಯದಿಂದಲಿ ಧರ್ಮಪುತ್ರನು ಕೌರವ | ಜನಪನ ಕರೆದೆಂದ ಭರದಿ || ೧೬೨ ||

ಕೇಳು ಕೌರವ ಪುತ್ರ ಮಿತ್ರಾದಿ ಬಾಂಧವ | ಜಾಲವನಿಕ್ಕಿ ಸಂಗರದಿ ||
ಬೀಳಲು ಬಹುದೆ ನೀನೀ ಸರೋವರದೊಳು | ಏಳಿತ್ತ  ಬಾರಯ್ಯ ಮುದದಿ || ೧೬೩ ||

ಭೀತಿಯೊಳಗೆ ನೀರ ಹೊಕ್ಕಿಂದು ಕುಲಕಪ | ಖ್ಯಾತಿಯ ಬರಿಸಿದೆ ರಾಯ |
ಪೇತುಗರೂ ಸಹ ನಗುವಂತೆ ಮಾಡಿದೆ | ಭೂತಳಾಧಿಪನೆ ಬಾರಯ್ಯ || ೧೬೪ ||

ಪೊಡವಿ ತಿಲಾಂಶ ಮಾತ್ರವ ಕೊಡೆನೆಂದು ನೀ | ನುಡಿದ ಭಾಷೆಗಳನ್ನು ಮರೆತು ||
ಒಡೆತನ ಸಕಲ ಮಹೀತಳವನು ಬಿಟ್ಟು | ಅಡಗಿದುದಿದು ಚಿತ್ರವಾಯ್ತು || ೧೬೫ ||

ಎಲವೊ ಭಂಡರ ಭಾವ ಷಂಡರ ತಿಲಕ ಕೇ | ಳಿಳೆಯೊಳು ಹೇಡಿಗಳೊಡೆಯ |
ಜಲದಿಂದ ತಡಿಗಯ್ದಿ ಬಾರಿಂದು ಕೆಡುಕರ | ಕುಲ ಶಿರೋಮಣಿಯೆ ಕೇಳಯ್ಯ || ೧೬೬ ||

ಇಂದುಕುಲದಿ ಪುಟ್ಟಿ ಈ ರೀತಿಯಪಕೀರ್ತಿ | ತಂದೆಯ ವಂಶಕ್ಕೆ ಬರಿದೆ ||
ಇಂದು ಪೇಳುವದೇನು ಸುಡು ನಿನ್ನ ಜನ್ಮವ | ನೆಂದನು ಧರ್ಮಜನಿರದೆ || ೧೬೭ ||

**ಭಾಮಿನಿ**

ಈ ತೆರದೊಳಾ ಧರ್ಮಜನು ಬಲು |
ಖಾತಿಯಿಂದಲಿ ಜರೆದು ಕರೆಯಲು |
ಮಾತನಾಡದೆ ಕೌರವೇಂದ್ರನು ಮೌನದಿಂದಿರಲು ||
ಭೂತಳವು ಬಿರಿವಂತೆ ಗರ್ಜಿಸಿ |
ವಾತಸಂಭವನಂದು ಬಹು ರೋ |
ಷಾತಿರೇಕದಿ ಜರೆದು ನುಡಿದನು ಸುಪ್ರತಾಪಕವ || ೧೬೮ ||

**ರಾಗ ಸವಾಯ್ ಏಕತಾಳ**

ಎಲಾ ಎಲಾ ಛೀ ನೃಪಕುಲಕುನ್ನಿ | ಕಳವಿನ ಜೂಜಾಡುವ ಬಾರೈ ||
ಸಲಿಲದೊಳ್ಯಾತಕೆ ಸುಮ್ಮನೆ ಮುಳುಗಿಹೆ |
ಸುಲಿಸೈ ದ್ರುಪದಜೆಸೀರೆಯ ಘಡ ಘಡ || ಎಲಾ ಎಲಾ || ೧೬೯ ||

ಹಳುವಕೆ ರಿಪುಗಳನಟ್ಟಿದೆನೆಂಬಾ | ಬಲು ಬೆಡಗನು ತೋರಿಸು ಬಾರೈ ||
ಗೆಲುವೆನು ನಮ್ಮೈವರನೆಂದುಬ್ಬುವ |
ಛಲವೇನಾಯಿತು ನಿರುಕಿಸು ಮುಖವನು || ಎಲಾ ಎಲಾ || ೧೭೦ ||

ಧುರದೊಳು ನಿನ್ನ ಸಹೋದರರನು ಯಮ | ಪುರಕಟ್ಟಿದ ಭಟ ನಾನಲ್ಲೈ ||
ದುರುಳ ದುಶ್ಯಾಸನನುರವ ಬಗಿದು ಕೆಂ |
ಗರುಳನು ತೆಗೆದುದ ಮರೆತೆಯ ಘಡ ಘಡ || ಎಲಾ ಎಲಾ || ೧೭೧ ||

ಮಡದಿಗೆ ನೀನೇನ್ ದೃಢವನು ಪೇಳಿದೆ | ಜಡಪಂಕದೊಳಿಂತಡಗುವರೆ ||
ಬಡಿದು ನಿನ್ನ ಯಮಬಿಡೆಯಕೆ ಕಳುಹುವೆ |
ಕಡಿಕಡಿದೆಲುಗಳ ನಾಚಿಕೆಗೆಡುಕನೆ || ಎಲಾ ಎಲಾ || ೧೭೨ ||

**ವಾರ್ಧಕ**

ಇನಿತು ಭೀಮಂ ಪಚಾರಿಸುತಿರಲು ಬಳಿಕ ಫಲು |
ಗುಣ ಯಮಳ ಸಾತ್ಯಕಿಗಳಂದು ದೃಷ್ಟದ್ಯುಮ್ನ |
ಕನಲಿ ಸೃಂಜಯ ಸೋಮಕಾದಿಗಳ್ ತಮತಮಗೆ ಜಲಧಿಘೋಷಂಗಳಿಂದ ||
ಅನುಚಿತವು ಸಲಲಿಪ್ರವೇಶವೆಂದೆನುತಿರಲು |
ಮನದೊಳದ ಲೆಕ್ಕಿಸದೆ ಜನಪ ಕೌರವನಾಗ |
ಕನಲಿದಂ ಭೀಮಸೇನನ ನುಡಿಯ ಕೇಳ್ದು ಮಿಗೆ ಪೇಳಲೇನದ್ಭುತವನು || ೨೭೩ ||

**ಭಾಮಿನಿ**

ಮರುತಜಾತನ ಕರ್ಕಶದ ನುಡಿ |
ಕುರುಕುಲೇಶಗೆ ನಾಟಿತಂಬಿನ |
ತೆರದಿ ಮರೆದುದು ಬಳಿಕ ಸಲಿಲಸ್ತಂಭವಿದ್ಯೆಗಳು ||
ಘುರುಘುರಿಪ ಬಿಸುಸುಯ್ಲಿನುರಿ ಗತಿ |
ತುರುಗಿ ಕುದಿದುಕ್ಕಿದುದು ಜಲ ಮಿಗೆ |
ಭರದೊಳಾ ಛಲದಂಕ ಕೌರವನಡರಿದನು ತಡಿಗೆ || ೨೭೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತಡಿಗಡರಿ ಕೌರವನು ಧರ್ಮಜ | ನೊಡನೆ ನುಡಿದನು ಹಿಡಿ ಧನುವ ನೆರೆ |
ಪೊಡವಿಪಾಲಕ ಮಾರುತಾತ್ಮಜ | ತುಡುಕು ಗದೆಯ || ೨೭೫ ||

ಫಲುಗುಣನೆ ಗಾಂಡೀವವನು ಪಿಡಿ | ತೊಲಗದಿರಿ ಮಾದ್ರೀಕುಮಾರರು |
ಕೊಳುಗುಳಕೆ ಸಾತ್ಯಕಿ ಭಟಾದ್ಯರು | ನಿಲುವದೀಗ || ೨೭೬ ||

ಎಂದು ಗದೆಯನು ತಿರುಗಿಸುತ ಖತಿ | ಯಿಂದ ನಿಂದಿರೆ ಕಾಣುತಂತಕ |
ನಂದನನು ಪೇಳಿದನು ವಿನಯದೊ | ಳಂಧಸುತಗೆ || ೨೭೭ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಕೇಳಯ್ಯ ಕುರುಕುಲಾಧೀಶ ಸಂತಸದಿ | ಮೂಲೋಕದೊಳು ನಿನಗೆಣೆಗಾಣೆ ಛಲದಿ || ಪ ||

ಕದನದೊಳೆಲ್ಲರು ಸೋತರು ಮನದಿ | ಬೆದರದೆಮ್ಮನು ಗೆಲ್ವೆನೆಂದೆಯ್ಯೆ ದೃಢದಿ ||
ಅದರಿಂದ ನಿನಗೆಣೆಗಾಣೆ ನಾ ಜಗದಿ | ಚದುರ ನೀ ಕೇಳು ಕೋಪಿಸಬೇಡ ಮುದದಿ || ೨೭೮ ||

ಧುರಕೆ ಬೆದರಿ ನೀನು ಜಲದೊಳಗಿಂದು | ಅರಿಯದಂತಡಗಿದೆಯೆಂಬುದಿದೊಂದು ||
ಕೊರತೆಯೆ ಹೊರತೀಗ ನಿನ್ನಂತ ಭಟರು | ಸುರನರೋರಗರೊಳಗಿಲ್ಲ ಸಾಹಸರು || ೨೭೯ ||

ಆದರೆಮ್ಮೈವರೊಳೊಬ್ಬನ ನೀನು | ಸಾಧಿಸುತಿಂದು ಗೆಲ್ದರೆ ಮುಂದೆ ನಾನು ||
ಮೇದಿನಿಯನು ಬಿಟ್ಟು ಮಿಕ್ಕವರ್ ನಿನ್ನ | ಪಾದಸೇವೆಯೊಳಿರುವೆವು ಕೇಳು ಮುನ್ನ || ೧೮೦ ||

ಅರಸ ನೀ ತೊಡು ಸಂಭ್ರಮದಿ ಕವಚವನು | ವರ ವಜ್ರಮಯವಾದ ಸೀಸಕಗಳನು ||
ವರದುಕೂಲ ವರಾನುಲೇಪನಗಳನು | ಹರುಷದಿ ಪೂಸುವರಿದಕೊ ವೀಳ್ಯವನು || ೧೮೧ ||

ಎನುತಲಾಭರಣಪೆಟ್ಟಿಗೆಗಳ ತರಿಸಿ | ಜನಪ ಧರ್ಮಜ ಕೊಡಿಸಿದನನು ಕರೆಸಿ |
ಕಿನಿಸಿನಿಂದದ ಕಂಡು ತೋಷಗೊಂಡಂತೆ | ಜನಪನೊಳೊರೆದ ಕೌರವನು ಕಂಡಂತೆ || ೧೮೨ ||

**ರಾಗ ಸುರುಟಿ ಅಷ್ಟತಾಳ**

ನಿನ್ನಯ ಬಲುಹೇನು | ಮಾರುತಿ | ಯನ್ನು ನಿರೀಕ್ಷಿಪೆನು ||
ಸಣ್ಣವನರ್ಜುನ | ಚೆಣ್ಣರು ಯಮಳರು | ಇನ್ನೀ ಭೀಮನ | ನೆನ್ನಿದಿರಿಗೆ ಬಿಡು || ೧೮೩ ||

ಮಾರುತಿಯೆಂಬವನು | ಬಲಮದ | ವೇರಿ ನುಡಿಯುತಿಹನು |
ತೋರಲಿ ಬಂದವ | ನಾರುಭಟೆಯ ರಣ | ಧಾರಿಣಿಯಲಿ ಮ | ತ್ತ್ಯಾರೊಡನ್ಯಾತಕೆ || ೧೮೪ ||

ಭಾಷೆಯನಿತ್ತಿಹನು | ಯೆನ್ನನು | ಘಾತಿಪೆನೆನುತವನು ||
ಈ ಸಮಯದಿ ಬಂ | ದೋಸರಿಸದೆ ಕ | ಟ್ಟಾಸುರವಾದು | ಲ್ಲಾಸವ ತೋರಲಿ || ೧೮೫ ||

ಎಂದಾ ಧರ್ಮಜಗೆ | ಕುರುವರ | ನೆಂದೆನಲಾಯೆಡೆಗೆ ||
ಮಿಂದು ತೀರ್ಥಗಳ | ನಂದು ಹಲಾಯುಧ | ಬಂದನಖಿಳ ಮುನಿ | ವೃಂದ ಸಮೇತದಿ || ೧೮೬ ||

**ಕಂದ**

ಬಂದಾ ರಾಮನ ಕಾಣುತ |
ಲಂದಾ ಪಾಂಡುಸುತರೈದೆ ಭಕ್ತಿಯೊಳಾಗಳ್ ||
ಇಂದಿರೆಯರಸ ಸಮೇತದಿ |
ವಂದಿಸೆ ಬಲಭದ್ರನಡಿಗೆ ಕೌರವ ಮಣಿದಂ || ೧೮೭ ||

**ರಾಗ ಕೇದಾರಗೌಳ ಅಷ್ಟತಾಳ**

ಚರಣದೊಳೆರಗಿದ ನೃಪನನ್ನು ಪಿಡಿದೆತ್ತಿ | ಕರುಣದಿ ಬಲರಾಮನು ||
ವರಪಾಂಡುಸುತರನೀಕ್ಷಿಸುತ ಕೃಷ್ಣನ ನೋಡಿ | ಕುರುರಾಯಗಿಂತೆಂದನು || ೧೮೮ ||

ಉಳಿದುದಾಚೆಯೊಳೀಸು ಬಲಗಳೀ ಕಡೆಯೊಳ | ಗುಳಿದೆಯೋರ್ವನೆ ನೀನಿಂದು ||
ಜಲಜಸಂಭವ ಬರೆದಂತ ಬರಹವೆನು | ತಳಲಿದ ಮನದಿ ನೊಂದು || ೧೮೯ ||

ಬಳಿಕ ಕೃಷ್ಣನ ಮೊಗವನು ನೋಡಿ ಪೇಳ್ದ ನೀ | ನುಳುಹಿದೆ ನಿನ್ನವರ ||
ಛಲದಿಂದೆಮ್ಮಯ ಶಿಷ್ಯಗೀ ಹದನವ ಮಾಡಿ | ಗೆಲಿದೆ ಶಾಭಾಸು ಧೀರ || ೧೯೦ ||

ಎಂದುಸಿರ್ದಾಗ ನೀಲಾಂಬರ ಮನದೊಳು | ನೊಂದುಕೊಂಡಿರೆ ಕಾಣುತ ||
ಬಂದು ತನ್ನಗ್ರಜನೊಡನುಸಿರಿದನು ಗೋ | ವಿಂದನು ನಸುನಗುತ || ೧೯೧ ||

**ರಾಗ ಕಾಂಭೋಜಿ ಅಷ್ಟತಾಳ**

ಅಣ್ಣ ನೀನೀ ರೀತಿ ನುಡಿವರೆ | ಪಕ್ಷ | ವನ್ನು ಮಾಡಲು ಸುರರ್ ಜರೆಯರೆ ||
ಇನ್ನವರಲಿ ಹೆಚ್ಚು ನಮಗೇನು | ನೋಡೆ | ಮುನ್ನಿವರಿಂದಾದ ಕುಂದೇನು || ೧೯೨ ||

ಕುರುಪತಿಪಕ್ಷದಿ ನೀನಿಂತು | ಯೆನ್ನೊ | ಳೊರೆದಿರೆಂದೆನುತ ಕೌರವಗಿಂತು ||
ನಿರತ ಹಂಗಿಗನಾಗಲಿಲ್ಲಯ್ಯ | ರಥ | ತುರಗವ ನಡೆಸುವೆನಲ್ಲಯ್ಯ || ೧೯೩ ||

ನಮಗಿವರಿತ್ತಂಡ ಸರಿಯೀಗ |  ಮಾಳ್ಪ | ಸಮರವನೀಕ್ಷಿಪುದೆನುತಾಗ ||
ಅಮರಿನೋಟಕೆ ತಾಗುತಿರ್ದರು | ಕಂಡು | ಸುಮನಸರಭ್ರದಿ ನೆರೆದರು || ೧೯೪ ||

**ವಾರ್ಧಕ**

ದಂತಿಪುರದರಸ ಕೇಳ್ ದಂತಿವಾಹನನು ದಿಗ್ |
ದಂತಿಯನಡರ್ದು ಬರೆ ದಂತಿಚರ್ಮಾಂಬರಂ |
ದಂತಿಮುಖ ಮೊದಲಾದನಂತ ಗಣ ಸಹಿತ ಬಂದಂತರಿಕ್ಷದಿ ನೆರೆಯಲು ||
ದಂತಿನಗರಾಧೀಶ ದಂತಗಳ ಭರದಿ ಮಸೆ |
ದಂತರಿಸದುಸಿರಿದಂ ದಂತಿವರದಾದ್ಯರೊಳು |
ನಿಂತು ನೀವೆಲ್ಲವರು ಮುಂತೆನ್ನಧಟ ನೋಡಿರಿಂತೆನಲು ಭೀಮ ನುಡಿದ || ೧೯೫ ||

**ರಾಗ ಕಾಂಭೋಜಿ ಝಂಪೆತಾಳ**

ಜಲದೊಳಡಗಿಹನಧಟನೀಕ್ಷಿಸುವದೇನೆನ್ನ | ಬಲುಹ ಪರಿಕಿಪುದು ಭಟರೀಗ ||
ಗೆಲುವೆ ನಿಮಿಷಾರ್ಧದೊಳು ತಾನಿವನನೆನಲು ಮೂ | ದಲಿಸಿ ಕೌರವನೆಂದನಾಗ || ೧೯೬ ||

ಊಟದಲಿ ನಿಪುಣನೆಂಬುದ ಬಲ್ಲೆ ಸಾಕು ವಾ | ಚಾಟವನು ಬಿಡು ಪರಾಕ್ರಮದ ||
ತೋಟವನು ತರಿವೆ ಜೂಜಾಟದಲಿ ನಿನ್ನ ಬೊ | ಬ್ಬಾಟವೇನಾಯ್ತೆನಲು ನುಡಿದ || ೧೯೭ ||

ಅಂದು ಶಕುನಿಯ ಕುಮಂತ್ರದಿ ಗೆಲಿದ ಫಲವೀಗ | ಬಂದುದೈ ದುಶ್ಯಾಸನನನು ||
ಕೊಂದಾತನಾರು ನೀ ತಿಳಿಯೆಯಾಯೆನಲು ಬಳಿ | ಕೆಂದ ಗಾಂಧಾರಿಯಾತ್ಮಜನು || ೧೯೮ ||

ಪುಟ್ಟಿದವರೆಲ್ಲ ಸಾಯದಲಿಹರೆ ಕಮಲಜನ | ಸೃಷ್ಟಿಯೊಳು ನಿನ್ನೊಳಹುದೇನು |
ಹುಟ್ಟು ಸಾವುಗಳಾರಿಗರಿವುದೆಲೆ ಬರಿದೆ ಮತಿ | ಗೆಟ್ಟು ಮಾತಾಡದಿರು ನೀನು || ೧೯೯ ||

ಪೂರ್ವಾಪರ ಜ್ಞಾನವಿರಲು ನೀನೇತಕೆ | ಮೂರ್ವಿಗಾಸೆಯ ಮಾಡಿ ಧುರದಿ ||
ನಿರ್ವಹಿಸಲಾರದೋಡಿದೆ ಮರುಳೆ ನಾ ನಿನ್ನ | ಸರ್ವಥಾ ಕೊಲದೆ  ಬಿಡೆ ಜವದಿ || ೨೦೦ ||

ಎಲವೊ ದೈವಾಧೀನವಾಗಿಹುದು ಜಗವು ಮ | ತ್ತಿಳೆಯ ಜನರಿಂದಾಹುದೇನು ||
ಕೊಳುಗುಳದಿ ನಿನ್ನೊಡಲ ಬಗಿದನುಜರನು ತೆಗೆದು | ನಲಿವೆನೆನಲೆಂದ ಮರುತಜನು || ೩೦೧ ||

**ಭಾಮಿನಿ**

ಎಲವೊ ದುರ್ಮತಿ ನಿನ್ನ ಕಾಯ್ವಡೆ |
ಕೊಲುವಡೆಯು ನಾ ದೈವವಲ್ಲದೆ |
ಹಲವು ದೈವವದುಂಟೆ ನೋಡುವೆನದರನೆಂದೆನುತ ||
ನಿಲದೆ ಗದೆಯನು ತಿರುಹಿ ಕುರುಕುಲ |
ತಿಲಕನನು ಹೊಯ್ಯಲ್ಕೆ ತಡೆದಾ |
ಛಲದಿ ವಿಕ್ರಮನಾರ್ದು ಹೊಯ್ದನು ಬಳಿಕ ಪವನಜನ || ೩೦೨ ||

**ರಾಗ ಸಾವೇರಿ ಮಟ್ಟೆತಾಳ**

ಏನನೆಂಬೆನವರ ಯುದ್ಧವ | ಗತಾಕ್ಷನೃಪನ |
ಸೂನು ಹೊಡೆದ ಘಾತ ತಡೆವು | ತಾ ನರೇಂದ್ರನನುಜ ಹೊಯ್ದ || ನೇನನೆಂಬೆ  || ಪ ||

ಸುಳಿದು ಪಕ್ಷಿ ರಾಜನಂತೆ | ಸಿಲುಕಿ ನಿಲುಕಿ ಭುಜಗನಂತೆ |
ಹಳಿದು ಸುಳಿಸಮೀರನಂತೆ | ಬಳಿಕ ಲೆರಗಿ ಸಿಡಿಲಿನಂತೆ || ಏನನೆಂಬೆ || ೩೦೩ ||

ಇರಿಕಿದರು ಗ್ರಹಂಗಳಂತೆ | ತರುಬಿದರು ಮೃಗೇಂದ್ರನಂತೆ |
ಉರುವಣಿಸುತ ಮುಗಿಲಿನಂತೆ | ಭರದೊಳೆರಗುತಿರ್ದರಂತೆ || ಏನನೆಂಬೆ || ೩೦೪ ||

ಧರಣಿ ನಡುಗಿತುಭಯ ಭಟರ | ಚರಣಹತಿಗೆ ನಭದೊಳೀಶ |
ಸುರಪ ಮುಖ್ಯರೆಲ್ಲ ಪೊಗಳೆ | ಹರಿಯು ಶಿರವ ತೂಗುತಿರ್ದ || ನೇನನೆಂಬೆ || ೩೦೫ ||

**ಭಾಮಿನಿ**

ಗಂಡುಗಲಿ ದುರ್ಯೋಧನನು ಖತಿ |
ಗೊಂಡು ಬಳಿಕಾ ವಾಯುಜನನು |
ದ್ದಂಡ ಸತ್ತ್ವದೊಳೆರಗಿದನು ಕಂಧರವನಾರ್ಭಟಿಸಿ ||
ಡೆಂಡಣಿಸಿ ಮಾರುತಿ ಧರಿತ್ರಿಗೆ |
ದಿಂಡುಗೆಡೆಯಲು ಧರ್ಮಜಾದ್ಯರು |
ಕಂಡು ಮರುಗಲು ಚೇತರಿಸಿ ಬಳಿಕೆದ್ದು ನಿಮಿಷದಲಿ || ೩೦೬ ||

**ಕಂದ**

ಪೊಡವಿಪ ಕೇಳ್ ಮಾರುತಿ ಕೆಲ |
ಸಿಡಿದಿರ್ದಾ ಗದೆಯ ಕೊಂಡು ಚಚ್ಚರದಿಂದಂ ||

ಘುಡುಘುಡಿಸುತ ಕುರುಪತಿಯ |
ನ್ನಡಹಾಯ್ದುಬ್ಬುತ್ತರೋಷವೆತ್ತು ಕಾದಿದರ್ || ೨೦೭ ||

**ರಾಗ ಸುರುಟಿ ಮಟ್ಟೆತಾಳ**

ಎಡೆಬಿಡದವರು | ಹೊಡೆದಾಡಿದರು || ಪ ||

ಧಡಿಧಡಿಸುತ ಭೋರ್ಗರೆವುತ | ಲಡಿಯಿಡುತೊಡನೊಡನೆ ||
ತುಡುಕುತ ಪಿಡಿದೆಳೆವುತ ಬಡಿ | ದಡಗೆಡ ದಡಫಡನೆ || ೨೦೮ ||

ಕಂಡವರೆದೆ ನಡುಗುವ ಪೋಲ್ | ಕೊಂಡಾ ಗದೆಯೊಳಗೆ ||
ದಿಂಡುದರಿವೆನೆನುತಂದೆಡ | ದಂಡೆಯೊಳಡಿಗಡಿಗೆ || ೨೦೯ ||

ಫಡ ಫಡ ನಿಲು ನಿಲ್ಲೆಂದೆನು | ತೊಡನತಿ ರೋಷದಲಿ ||
ನುಡಿವುತ ಕನಲುತ ನೇತ್ರದಿ | ಕಿಡಿಯಿಡುತುಗ್ರದಲಿ || ೨೧೦ ||

ಉಬ್ಬದಿರಲೊ ಮರುತಾತ್ಮಜ | ಬೊಬ್ಬೆಯದೇಕೀಗ |
ಗಬ್ಬರಿಪುದು ಗದೆ ನೋಡೆನು | ತುಬ್ಬುತ ಹೊಯ್ದಾಗ || ೨೧೧ ||

ಮೂರ್ಖನೆ ಕೇಳ್ ನಿನಗಂತಕ | ನೂರ್ಕಾಣಿಪೆನೆನುತ ||
ಮೂರ್ಕಣ್ಣಿನ ಹರನಂದದಿ | ಭೋಗರೆದಡಿಯಿಡುತ || ೨೧೨ ||

ನಿಲ್ಕೊಗದೋರೆಂದೆನುತತಿ | ಬಲ್ಮೆಯೊಳ್ ಮರುತಜನು ||
ಪಲ್ಮೊರೆವುತ ಭೂಪನ ಕೊರ | ಳೊಳ್ಮತ್ತೆರಗಿದನು || ೨೧೩ ||

ಹಾರಿತು ಗದೆಯೊಂದೆಸೆ ಮಿಗೆ | ಕಾರುತ ರಕ್ತವನು ||
ಧಾರಿಣಿಪತಿ ಮನದೆಚ್ಚರು | ಜಾರಲು ಮಲಗಿದನು || ೨೧೪ ||

**ಕಂದ**

ಅರೆನಿಮಿಷದಿ ಮೈ ಮರೆದಾ |
ಕುರುನೃಪನೆಚ್ಚರ್ತೇಳುತ ಭರದಿಂದಾಗಳ್ ||
ಮರುತಕುಮಾರಕನಂ ಮಿಗೆ |
ಪರಿಕಿಸುತುರುತರ ರೋಷದಿ ಗದೆಗೊಂಡೆಂದಂ || ೨೧೫ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲೆ ಸಮೀರನಣುಗ ಕೇಳು ಧುರದೊಳೆನ್ನನು | ಗೆಲಿದೆನೆಂದು ಹಿಗ್ಗಬೇಡ ನಿನ್ನ ಬಲುಹನು ||
ತಳುವದೀಗ ನಿಲಿಸಿ ರಾಜ್ಯ ವೈಭವಗಳನು | ಗೆಲವಿನಿಂದಲಾಳ್ವೆ ತಾನೆನುತ್ತ ಹೊಯ್ದನು || ೨೧೬ ||

ಹೊಯ್ದು ಘಾತಕೊಡನೆ ದಂಡನೊಡ್ಡಿ ಪವನಜ | ಬೈದು ಪೇಳ್ದ ನಿನ್ನ ಕರುಳ ಬಗೆವೆನಂಧಜ ||
ಕಾಯ್ದುಕೊಂಬರಿಲ್ಲವೀಗಲೆನುತ ಗದೆಯೊಳು | ಹೊಯ್ದಡಾಗ ಧರಣಿಪಾಲ ಬಿದ್ದ ಕಣದೊಳು || ೨೦೭ ||

ಎದ್ದು ಭೀಮನೊಡನೆ ಪೇಳ್ದನೆಲವೊ ನಿನ್ನಯ | ಉದ್ದುರುಟುತನವ ನಿಲಿಸಿಕೊಡುವೆ ನಿರ್ಣಯ |
ಕದ್ದು ಬೆಣ್ಣೆ ಮೊಸರ ಮೆಲುವ ಗೊಲ್ಲರಣುಗನ | ಬುದ್ಧಿಯನ್ನು ಕೇಳಿ ಕೆಟ್ಟೆನೆನಲಿಕಾ ಕ್ಷಣ ||೨೦೮||

ಹರಿಯ ಮಾತನುಳಿದು ಬಂಧು ಬಳಗವೆಲ್ಲವ | ಧುರದಿ ಕೊಲಿಸಿದಧಮ ನಿನ್ನ ಕೊಂದು ರಾಜ್ಯವ ||
ಹರುಷದಿಂದಲಾಳ್ವೆನೆನಲು ಕೇಳ್ದು ಭರದಲಿ | ಕುರು ನೃಪಾಲ ಗದೆಯ ತಿರುಹುತೆಂದ ಖತಿಯಲಿ ||೨೦೯||

ಭರದ ಹೊಡೆತವಿದಕೊ ಸೈರಿಸೀಗ ಕರೆಸಿಕೋ | ಹರಿ ಧನಂಜಯಾದ್ಯರನ್ನು ಬಲಕೆ ಕೂಡಿಕೋ ||
ಮರಳಬೇಡ ನಿಲ್ಲೆನುತ್ತ ಶಿರದೊಳೆರಗಿದ | ಮರುತಸುತ ಧರಿತ್ರಿಗಾಗ ಜವದೊಳುರುಳಿದ ||೨೧೦||

**ಭಾಮಿನಿ**

ಪೃಥ್ವಿಪತಿ ಕೇಳಿಂತು ಭೀಮನ |
ನೆತ್ತಿಗೆರಗಲು ಕರದ ಗದೆ ನೆಲ |
ಕತ್ತಹಾರಲು ಡೆಂಡಣಿಸಿ ಮಲಗಿದನು ಮೂರ್ಛೆಯಲಿ ||
ಮತ್ತಧಿಕ ಸಂತೋಷ ಮಬ್ಬಿನೊ |
ಳಿತ್ತ ಕೌರವ ಧರ್ಮಜಾದಿ ಭ |
ಟೋತ್ತಮರ ಕರೆಕರೆದು ನುಡಿದನು ಮದದ ಮೋಡಿಯಲಿ || ೨೧೧ ||

**ರಾಗ ತೋಡಿ ಏಕತಾಳ**

ನೋಡಿರಿ ಧರ್ಮಜ ಫಲುಗುಣಾದಿಗಳು |
ರೂಢಿಯೊಳನಿಲಜ ಬಿದ್ದ ಚಂದಗಳು || ಪ ||

ತನ್ನ ಮಾನಿನಿಗಿತ್ತ | ಮುನ್ನಿನ ಭಾಷೆ ವ್ಯರ್ಥ |
ಕನ್ನಡಿಗಂಟಾಯ್ತು | ಇನ್ನು ತಾಳುವಳೆಂತು || ನೋಡಿರಿ || ೨೧೨ ||

ಮಿಡುಕುಳ್ಳರ್ಜುನ ನೀನು | ತೊಡು ಗಾಂಡೀವವನು |
ಕೆಡೆದ ಭೀಮನ ಕಂಡು | ಕೆಡುಕರಂತಿಹೆಯಿಂದು || ನೋಡಿರಿ || ೨೧೩ ||

ಧೃಷ್ಟದ್ಯುಮ್ನನೆ ನೋಡಿ | ದೃಷ್ಟಾಂತಗಳ ಮಾಡಿ |
ದಿಟ್ಟ ಭೀಮನ ಪ್ರಾಣ | ನಷ್ಟವೈವುದೊ ಜಾಣ | ನೋಡಿರಿ || ೨೧೪ ||

ನಕುಲಸಹದೇವರೆಲ್ಲ | ಚಕಿತರಾಗಿಹರೆಲ್ಲ |
ಯುಕುತಿಯಿನ್ನೇನು ಮುಂದೆ | ಪ್ರಕಟಿಸಿರೆನ್ನೊಳಿಂದೆ || ನೋಡಿರಿ || ೨೧೫ ||

ಕಪಟನಾಟಕ ರಂಗ | ಗುಪಿತವೇನೊ ನಿನ್ನಂಗ |
ನಿಪುಣ ಭೀಮನ ನೋಡು | ಚಪಳತ್ವದಿ ಮಾತಾಡು || ನೋಡಿರಿ || ೩೧೬ ||

**ಭಾಮಿನಿ**

ವಿಗತಲೋಚನ ಲಾಲಿಸಿಂತಾ |
ವಿಗಡ ದುರ್ಯೋಧನನು ಧರ್ಮಜ |
ನಗಧರಾದ್ಯರ ಕರೆದು ಗಜರಿದನಧಿಕ ಗರ್ವದಲಿ ||
ಮಿಗೆ ಕಿರೀಟಿಯು ಭೀಮಸೇನನ |
ಬಗೆಯನೀಕ್ಷಿಸುತುಸಿರ್ದನಾರೈ |
ದಘಹರನ ಪದಕೆರಗಿ ಕೈಗಳ ಮುಗಿವುತಿಂತೆಂದ || ೩೧೭ ||

**ರಾಗ ಬೇಗಡೆ ಏಕತಾಳ**

ಇಂದಿರೇಶ ಮುಕುಂದ ಲಾಲಿಸು | ಈ ವಾಯುಸುತನುಸಿ |
ರಿಂದು ಪಸರಿಸುವಂದ ತೋರಿಸು ||
ಮಂದರಾಧರ ಸುಂದರಾನನ | ನಂದಕಂದ ಸನಂದನಾದಿ ಮು |
ನೀಂದ್ರವರದ ಸುರೇಂದ್ರವಂದ್ಯ ಖ | ಗೇಂದ್ರವಾಹನ ಸಿಂಧು ಶಯನನೆ || ೩೧೮ ||

ಬ್ರೂಹಿ ತಾವಾಯ್ತಿಂದಿನೀವರೆಗೆ | ಪಾಂಡವರು ಮಮ ಪ್ರಾ |
ಣಾಹಿಯೆನ್ನುವರಿನ್ನು ನಿಮ್ಮಡಿಗೆ ||
ಊಹಿಸಲದೇಕಿನ್ನು ದಿವಿಜ ಸ | ಮೂಹ ಕರೆದುದು ಪುಷ್ಪವೃಷ್ಟಿಯ |
ಸ್ನೇಹದಿಂದಲಿ ಕೌರವೇಂದ್ರಂ | ಗೀ ಹದನವೆಂತೈ ವಿಚಿತ್ರವು || ೩೧೯ ||

ಎಂದರಾಲಿಸುತಂದು ಕರುಣದಿ | ಶ್ರೀಕೃಷ್ಣ ಮಾರುತ |
ನಂದನನ ಬಳಿಗಯ್ದಿ ಶೀಘ್ರದಿ ||
ಗಂಧವಾಹಕುಮಾರ ಭೀಮನೊ | ಳಂದವಿಟ್ಟಾ ಪ್ರಾಣಪವನನ |
ಹೊಂದಿಸಲು ಬಳಿಕೆದ್ದು ಭೀಮನು | ಮುಂದುವರಿದುಬ್ಬೇರುತಿರ್ದನು || ೩೨೦ ||

**ವಾರ್ಧಕ**

ವಾರಣಪುರಾಧೀಶ ಕೇಳಿಂತು ಪವನಜಂ |
ವಾರಿಜಾಂಬಕನೊಲುಮೆಯಿಂದ ಚೇತರಿಸಿ ಕೆಲ |
ಸಾರಿದ ಗದಾದಂಡಮಂ ಕೊಂಡು ಗರ್ಜಿಸಿ ಸುಯೋಧನಂಗಿದಿರಾದನು ||
ತೋರಿದಂ ಕೃಷ್ಣ ಮರುತಜಗೊಂದು ಕುರುಹಮಂ |
ಧೀರ ಕೌರವ ಗೆದ್ದನೆಮ್ಮ ಮಯ್ದುನನಯ್ಸೆ |
ಮಾರುತಿಯು ಸೋತನೊಮ್ಮೆಗೆಯೆನುತ ತೊಡೆಗಳಂ ತಟ್ಟಿ ಸೂಚನೆಗೆಯ್ದನು || ೩೨೧ ||

**ರಾಗ ಶಂಕರಾಭರಣ ಮಟ್ಟೆತಾಳ**

ಭಳಿರೆ ಧಿಟ್ಟ ಕುರುಕುಲೇಶನೊಮ್ಮೆಗೆನ್ನನು |
ಕೊಳುಗುಳದಲಿ ಗೆಲಿದ ಹಮ್ಮ ನಿಲಿಸಿಕೊಡುವೆನು ||
ತಲೆಯೊಳೂರುಗಳಲಿ ಹೊಡೆಯಲಾಗದೆನ್ನುತ |
ಬಲಿದ ತಹವ ಮೀರ್ದೆ ತನಗೆ ಬರದು ಪಾತಕ || ೩೩೧ ||

ಎನುತ ಕಂಸಹರನ ಕುರುಹ ನೆನೆದು ಭೀಮನು |
ಕನಲಿ ಘೋರ್ಗರೆವುತಲಂಧನಣುಗಗೆಂದನು ||
ಘನದೊಳೆಮ್ಮ ಜರೆದ ಬಲುಹ ತೋರೆನುತ್ತಲಿ |

ತೊನೆದು ಗದೆಯ ತಿರುಹಿ ಲಾಗು ಲವಣೆಯಿಂದಲಿ || ೩೩೩ ||

ಕುಪ್ಪಳಿಸುತ ಧಣುರೆ ಧಣುರೆನುತ್ತ ಭುಜವನು |
ಚಪ್ಪರಿಸುತ ಹೊಯ್ದನಾಗ ನೃಪನ ತೊಡೆಯನು ||
ಧೊಪ್ಪೆನುತ್ತಲೂರ್ಗಳುಡಿದು ನೆಲಕೆ ನಿಮಿಷದಿ |
ದರ್ಪವಳಿದು ಬಿದ್ದ ಕೌರವೇಂದ್ರ ಸಮರದಿ || ೩೩೪ ||

**ಭಾಮಿನಿ**

ಅವನಿಪತಿ ಕೇಳ್ ಕಾಳುಗಿಚ್ಚೆ |
ದ್ದವಘಡಿಸೆ ನೀರೆರೆದ ತೆರದಲಿ |
ಪವನಜನ ದುರ್ಧರ ಗದಾಘಾತದಲಿ ತೊಡೆಯುಡಿದು ||
ಅವನಿಯೊಳು ಕುರುರಾಯ ರಣದಲಿ |
ಪವಡಿಸಲು ಕಾಣುತ್ತ ಮಾರುತಿ |
ಸವಡಿ ಗದೆಯಲಿ ಬಳಿಕ ಝೇಂಕಿಸುತವನ ನುಡಿಸಿದನು || ೩೩೫ ||

**ರಾಗ ಮುಖಾರಿ ಏಕತಾಳ**

ಭೂಪ ಏನಾಯ್ತು ಪ್ರತಾಪ | ಯುದ್ಧದಿ ಬಳಲಿ |
ಈ ಪಾಟಿಯಾಯ್ತೆ ಸುಕಲಾಪ | ಯಾರಿಲ್ಲದೆ ಪಾಪ |
ಈ ಪರಿ ಕಲುನೆಲ | ದೊಳು ಮಲಗಿರುವರೆ |
ಭೂಪರೊಳಧಮ ಸ್ವ | ರೂಪನೆ ಹಾ ಹಾ || ಭೂಪ || ಪ ||

ಕೃತ್ರಿಮ ಜೂಜಾಡಿಸಿದೆ ಮೊದಲು | ಸತಿಯುಟ್ಟ ಸೀರೆ |
ಒತ್ತಾಯದಿಂದೆಳೆಸಿದ ಗರ್ವದೊಳು | ಕಾನನವಾಸ |
ದತ್ತಲಟ್ಟಿಸಿದೆ ತೋಷದೊಳು | ಬೆರಳೊಳೇಡಿಸುತ |

ನಿತ್ತು ನೋಡಿದೆಯ ಹಾಸ್ಯದೊಳು | ನಾನಾ ರೀತಿಯೊಳು ||
ಹೊತ್ತಿಸುತರಗಿನ | ಕೃತ್ಯದಿ ಪಿಂದಕೆ | ವತ್ತಿ ದಣಿಸಿದುದು | ಕುತ್ತರವಿದಕೋ | ಭೂಪ || ೩೩೬ ||

ಹಳುವಕಟ್ಟಿದೆನೆಂಬ ಛಲಕೆ | ನಾರಿಯ ಸೀರೆ |
ಸೆಳೆದನೆಂದೆಂಬ ನಿನ್ನಾಳ್ತನಕೆ | ಅರಗಿನ ಗೃಹದೊ |
ಳಳವಟ್ಟಗ್ನಿಯನೊಟ್ಟಿದುದಕೆ | ಬಾಲ್ಯದೊಳೆನ್ನ |
ಬಳಲಿಸಿ ವಿಷವನುಣಿಸಿದುದಕೆ | ಕೊಳನೊಳಿಕ್ಕಿದಕೆ ||
ತಿಳಿದೊಂದಿದ ನೀ | ಕೊಳಬೇಕೆನುತವ | ನಲಸದೆ ನೃಪಶಿರ | ತುಳಿದುಸಿರಿದನು || ಭೂಪ ||೩೩೭||

**ವಾರ್ಧಕ**

ನಾಗನಗರಾಧೀಶ ಕೇಳಿಂತು ಪವನಜಂ |
ನಾಗನಿದಿರೊಳು ಮಲೆವ ಮೃಗ ರಾಜನಂದದಿಂ |
ನಾಗಪುರದರಸನಂ ಭಂಗಿಸುತ ಹಲುಗಳಂ ಕಳಚಿದಂ ಖಾತಿಯಿಂದ ||
ಆ ಗರುವ ನೆಗಳಿದಾಟೋಪಮಂ ನೆನೆನೆನೆದು |
ನಾಗಭೂಷಣನಂತೆ ಕನಲಿ ಕಡು ರೋಷಮನ |
ನಾಗಿ ಮತ್ತೊಡನೊಡನೆ ಸದೆದೊದೆದು ಮಕುಟಮಂ ಕಳಚಿದಂ ಕಲಿ ಭೀಮನು || ೩೩೮ ||

**ಭಾಮಿನಿ**

ಈ ತೆರದೊಳಾ ವಿಗತನೇತ್ರನ |
ಜಾತನಾಗಿಹ ಕುರುಕುಲೇಶನ |
ವಾತಸುತನೊಡನೊಡನೆ ನೋಯಿಸುತಿರಲು ಬಳಿಕಂದು ||
ನೀತಿಯಲ್ಲೆಂದೆನುತ ದೇವ |
ವ್ರಾತ ಬಯ್ದುದು ಪವನಜನ ಯಮ |
ಜಾತ ಮಿಗೆ ನಯನೀತಿಯಿಂದೊಡಬಡಿಸುತುಸಿರಿದನು || ೩೩೯ ||

**ರಾಗ ಕಾಂಭೋಜಿ ಝಂಪೆತಾಳ**

ಬವರದೊಳು ಸೋತವನನಿಂದು ನೀನೀ ಪರಿಯ | ಬವಣೆಬಡಿಸುವರೇನೊ ತಮ್ಮ ||
ಅವನಿಪತಿ ಲೋಕೈಕಮಾನ್ಯನಿವನೈಸೆ ಪಾ | ರ್ಥಿವವಂಶರತ್ನವಲೆ ತಮ್ಮ || ೩೪೦ ||

ಕದನಕರ್ಕಶನಿವನ ತೊಡೆಗಳನು ರಣದಿ ಹೋಯ್ | ದುದೆ ನೀತಿಯಲ್ಲವೆಲೊ ತಮ್ಮ ||
ವದನಕೊದೆದಿಂದು ಹಲ್ಲುಗಳ ಕಳಚಬಹುದೆ ಕೇ | ಳಿದುವೆ ತಪ್ಪಾಯ್ತಲ್ಲೊ ತಮ್ಮ || ೩೪೧ ||

ಆವ ರೀತಿಯೊಳಿನ್ನು ಹಿರಿಯಪ್ಪನಾದವನ | ನಾವು ನೋಡುವುದಯ್ಯೊ ತಮ್ಮ ||
ದೇವಿ ಗಾಂಧಾರಿ ದುಃಖವನಾವ ಪರಿಯಲ್ಲಿ | ನಾವು ನಿಲಿಸುವುದೆಂತು ತಮ್ಮ || ೩೪೨ ||

**ರಾಗ ಮಾರವಿ ಏಕತಾಳ**

ಎಂದಾ ಧರ್ಮಜ ಪವನಕುಮಾರಕ | ಗಂದುಸಿರುತ್ತಿರಲು ||
ಮುಂದುವರಿದು ಬಲರಾಮನು ಗರ್ಜಿಸು | ತೆಂದನು ರೋಷದೊಳು || ೩೪೩ ||

ನುಡಿದ ತಹಂಗಳ ಮರೆದೀ ಕುರುಕುಲ | ದೊಡೆಯನ ಸಂಗರದಿ ||
ತೊಡೆಯನು ಮುರಿದನ್ಯಾಯದೊಳೀ ಪರಿ | ನಡಸಿದೆಯುನ್ಮದದಿ || ೩೪೪ ||

ತಕ್ಕುದ ಕೂಡಲೆ ಮಾಡುವೆನಿದಕೆನು | ತುಕ್ಕುವ ಕ್ರೋಧದಲಿ |
ಮುಕ್ಕಣ್ಣನ ತೆರದಲಿ ಹಲಧರ ಮಿಗೆ | ಧಿಕ್ಕರಿಸುತ ಕನಲಿ || ೩೪೫ ||

ಎನುತೆಡಗಯ್ಯಲಿ ನೆಗಹುತ ಮುಸಲವ | ಘನ ಪೌರುಷದಿಂದ ||
ಅಣಕಿಸಿ ನೇಗಿಲ ತುಡುಕುತ ಸಮರಾಂ | ಗಣಕಿಳಿದಯ್ತಂದ || ೩೪೬ ||

ಬರುತಿಹ ರೋಹಿಣಿಕುವರನ ಕಾಣುತ | ಮರುತಜ ಖಾತಿಯೊಳು ||
ತಿರುಹಲು ಗದೆಯನು ಬಳಿಕಾ ಪಾರ್ಥನು | ವರ ಗಾಂಡೀವದೊಳು || ೩೪೭ ||

ಸರಳನು ಸಂಧಿಸೆ ತವಕದಿ ಮಾದ್ರೀ | ತರಳರು ಪಂಥದೊಳು ||
ಭರದಿಂ ತಮ್ಮಾಯುಧಗಳ ತುಡುಕಲು | ಧರಣಿಪ ಭೀತಿಯೊಳು || ೩೪೮ ||

ನೆನೆದನಿದೇನೇನಾಗುವುದೆಂಬುದ | ಮನುಮಥಪಿತ ಬಲ್ಲ ||
ಎನುತಿರೆ ಮುರರಿಪು ನಡೆತಂದುಸಿರಿದ | ವಿನಯದಿ ಬಲಗೆಲ್ಲ || ೩೪೯ ||

**ರಾಗ ಬೇಗಡೆ ಏಕತಾಳ**

ಚಂದವಾಯ್ತಿನ್ನಣ್ಣದೇವನೆ | ಇದೇನು ರೋಷ | ಬಂದುದೇಕಿಂತು ಸುಮ್ಮನೆ ||
ಮಂದಮತಿಗಳು ಹಿಂದೆ ಕೌರವ | ರೊಂದುಗೂಡಿದರಂದು ಛತ್ರದಿ |
ಸಂದ ದ್ಯೂತವನಾಡಿ ಪಾಂಡವ | ನಂದನರು ದಣಿದಂದವರಿಯೆಯ || ಚಂದವಾಯ್ತಿನ್ನಣ್ಣದೇವನೆ || ಪ ||

ಬಾಲೆಯಾ ಪಾಂಚಾಲೆಯುಟ್ಟಿಹ | ಶಾಲೆ ಸುಲಿದಂದು | ಅರಗಿನೊ |
ಳಾಲಯವ ಸಮ್ಮೇಳವಿಸಿ ಸುಡೆ | ಪೇಳಲೇನಿಂದು | ಜೂಜಿನ |
ಪಾಳಿಯಲಿ ವನಕೇಳಿಸಿದನಾ | ಕಾಲದೊಳಗಂದು || ನೀವದ |
ಕೇಳಿ ದುಗುಡವ ತಾಳಿಯಂಧನೃ | ಪಾಲನಣುಗನ ಖೂಳನೆಂದಿರಿ |
ಪೇಳಲೇನೀ ಕಾಲದೊಳಗತಿ | ಜ್ವಾಲೆ ಕುರುಭೂಪಾಲಗೋಸುಗ || ಚಂದ || ೩೫೦ ||

ಮಾಡಿದೆವು ತಹ ಯುದ್ಧರಂಗದಿ | ಕೂಡಿ ನಾವಿಂದು | ಮಿಗೆ ಕೈ |
ಮಾಡದಿರಿ ಶಿರವೂರುಗಳಿಗೆಂ | ದಾಡಲದನಿಂದು | ಮರೆತದ |
ರೂಢಿಪಾಲಕ ಮಾರುತಿಯ ಶಿರ | ಕೀಡಿರಿದನಿಂದು || ಮತ್ತದ |
ನಾಡಲೇಕನ್ಯಾಯವಾರದು | ಕೂಡಿತಾ ಪ್ರಾರಬ್ಧಕರ್ಮದ |
ಕೇಡು ಕೌರವಗಿಂದು ನೀವ್ ದಯ | ಮಾಡಿ ಬಿಡಿ ಬಿಡಿ ಬೇಡ ಪೌರುಷ || ಚಂದ || ೩೫೧ ||

ಎಂದ ಕೃಷ್ಣನ ಮಾತನಾಲಿಸು | ತಂದು ಹಲಧರನು | ನಿನ್ನಯ |
ಸಂದ ಮಾಯಕದಿಂದಳಿದನಿ | ನ್ನೆಂದು ಫಲವೇನು | ಕೌರವ |
ವೃಂದವನು ನೀನಿಂದು ಕೊಲಿಸಿದೆ | ಯೆಂದಡದಕೇನು || ಸುಡಲಿ |
ನ್ನೆಂದು ಮನದಲಿ ನೊಂದು ತೆರಳಿದ | ನಂದು ಸಾತ್ಯಕಿ ಸಹಿತಲಿತ್ತಲು |
ಮಂದರಾಧರಗೆಂದ ಕೌರವ | ನಂದಹಂಕೃತಿಯಿಂದ ಗರ್ವದಿ | ಚಂದ || ೩೫೧ ||

**ರಾಗ ಮಧ್ಯಮಾವತಿ ಅಷ್ಟತಾಳ**

ಶ್ರೇಷ್ಠನಹುದೋ | ಗೋವಳರಾಯ | ಶ್ರೇಷ್ಠನಹುದಹುದೊ || ಪ ||

ಶ್ರೇಷ್ಠನಹುದೊ ಬ್ರಹ್ಮ | ಸೃಷ್ಟಿಯೊಳ್ ನಿನ್ನಂತ |
ದುಷ್ಟ ಮಾನವರ ಕಾಣೆ | ಗೊಲ್ಲತಿಯರೊ |
ಳಿಷ್ಟದೊಳಿರುವವನೆ | ಮೊಸರ ಕದ್ದು |
ಪೆಟ್ಟನು ತಿಂದವನೆ ನಾರಿಯರು ಬಿ |
ಚ್ಚಿಟ್ಟ ಶಾಲೆಯನೊಯ್ದನೆ || ಗೋವಳರಾಯ | ಶ್ರೇಷ್ಠನಹುದಹುದೊ || ೩೫೨ ||

ಓರ್ವಳ ಬಸಿರಲಿ ಜನಿಸಿ | ಮ | ತ್ತೋರ್ವಳ ಪುತ್ರನೆಂದೆನಿಸಿ |
ಊರ್ವಿಗೋಸುಗ ನಮ್ಮೊ | ಳುರ್ವಿ ಯುದ್ಧವ ಬಿತ್ತಿ |
ಬೇರ್ವರಿಸಿದೆಯಿನ್ನೇನು | ಲೋಕದೊಳು ನೀ |
ಸರ್ವರ್ಗೆ ಕಪಟಿಗನು | ನಿನ್ನನು ಪೊತ್ತ |
ಊರ್ವಿಗುಬ್ಬಸವುಯಿನ್ನು | ಮೌನದಲಿ ನಿಂ |
ತಿರ್ವೆ ತಸ್ಕರನೆ ನೀನು | ಗೋವಳರಾಯ | ಶ್ರೇಷ್ಠನಹುದಹುದೋ || ೩೫೪ ||

ಧುರದಿ ಮಾಗಧಗಂಜಿ ಓಡಿ | ಹೇಡಿ | ಶರಧಿಮಧ್ಯದಿ ಮನೆ ಮಾಡಿ |
ವರ ಪಾಂಡುಪುತ್ರರ | ತುರಗ ಚಪ್ಪರಿಸಿ ನೀ |
ಧರಣಿಪಾಲಕರನೆಲ್ಲ | ಯೆನ್ನನುಜರ |
ಧುರದಿ ಕೊಲ್ಲಿಸಿದೆಯಲ್ಲ | ನನಗೆ ವೈರಿ |
ಯರ ತೆರನಾದೆಯಲ್ಲ | ಧರ್ಮಜನಿಂಥಾ |
ಪರಿಯ ತಾನೇನ ಬಲ್ಲ | ಗೋವಳರಾಯ | ಶ್ರೇಷ್ಠನಹುದಹುದೋ || ೩೫೫ ||

**ವಾರ್ಧಕ**

ಶುಂಡಾಲನಗರಪತಿ ಲಾಲಿಸೀ ತೆರದೊಳಂ |
ಪುಂಡರೀಕಾಕ್ಷನಂ ನೋಡಿ ಕುರುಪತಿ ಕಿನಿಸು |
ಗೊಂಡು ಜರೆಯಲು ಕೇಳದವನಂತೆ ಶ್ರೀಹರಿಯು ಮೌನದಿಂದಿರಲು ಬಳಿಕಾ ||
ಚಂಡಕರನಾದ ದಿನಮಣಿ ಕೃಷ್ಣನಂ ಜರೆವ |
ಭಂಡ ನೃಪನಿವನಿರವ ನೋಡಲರಿದೆಂದು ಮರೆ |
ಗೊಂಡು ಜವದಿಂ ಪಶ್ಚಿಮಾಂಬುಧಿಯ ಪೊರೆಗಯ್ದನೆನೆ ಸಂಜೆ ಮೊಳೆದೋರಿತು || ೩೫೬ ||

**ಭಾಮಿನಿ**

ಆ ಸಮಯದಲಿ ಸೋಮಕಾದಿ ಮ |
ಹಾ ಸುಭಟರೆಲ್ಲವರ ಕರೆದಾ |
ವಾಸುದೇವನು ನಿಜ ನಿಕೇತನಕವರನುರೆ ಕಳುಹಿ ||
ತೋಷದಿಂ ಯಮಜಾತ ಫಲುಗುಣ |
ನಾ ಸಮೀರ ಕುಮಾರ ಯಮಳರ |
ಕೇಶವನು ಮತ್ತೊಡನೆ ಕರೆದಿಂತೆಂದನತಿ ಮುದದಿ || ೩೫೭ ||

**ರಾಗ ನಾದನಾಮಕ್ರಿಯೆ ಆದಿತಾಳ**

ಕೇಳಿ ಧರ್ಮಜಾದಿಗಳೆಲ್ಲ ಮಾತ | ಏಳಿ ಪಾಳಯದೊಳು ಚರಿಸುವರೀತ || ಪ ||

ಧರಣಿಪಾಲರ ಸೈನ್ಯ | ಶರಧಿಯ ನೋಡುತ |
ತರಣಿಸುತಾದ್ಯರ | ಪರಿಯನೀಕ್ಷಿಸಲಿಂದು || ೩೫೮ ||

ಹರಿ ಪೇಳ್ದ ನುಡಿ ಕೇಳಿ | ನರನು ಸಂತಸ ತಾಳಿ |
ವರ ವರೂಥವನೇರಿ | ಪೊರಟ ಸಂಭ್ರಮದಿಂದ || ೩೫೯ ||

ಬೇರೆ ನಾಲ್ವರು ತಮ್ಮ | ತೇರಿನೊಳ್ ಕುಳಿತಾಗ |
ಹಾರಿಸಿ ರಥ ರಣ | ಧಾರಿಣಿಯೊಳಗಂದು || ೩೬೦ ||

ಮಲಗಿರ್ದ ಕರ್ಣನ | ನಿಳೆಯಾಧಿಪಾಲನ |
ನಿಲವ ನೋಡುತ ಮನ | ವಳಲಿದ ನೃಪತಿಯು || ೩೬೧ ||

ಅರಸ ಧರ್ಮಜ ಮಾದ್ರಿ | ತರಳ ಭೀಮಾದ್ಯರು |
ಧರೆಗಿಳಿದರು ರಥ | ತುರಗವ ನಿಲಿಸುತ್ತ || ೩೬೨ ||

**ಭಾಮಿನಿ**

ಲಾಲಿಸೈ ಜನಮೇಜಯ ಕ್ಷಿತಿ |
ಪಾಲ ಧರ್ಮಜ ಭೀಮ ಮಾದ್ರೀ |
ಬಾಲಕರು ಧರೆಗಿಳಿಯೆ ಮುರರಿಪು ವಿಜಯನೊಡನೆಂದ ||
ಕೇಳು ಫಲುಗುಣ ರಥವ ನಿಳಿಯಿಳಿ |
ಯೇಳೆನುತ ವನಮಾಲಿ ನುಡಿಯಲು |
ಶ್ರೀಲಲಾಮನೆ ಮೊದಲಿಳಿವುದೆನಲೆಂದನಸುರಾರಿ || ೩೬೩ ||

**ಮಾಲಿನೀವೃತ್ತ**

ಮರುಳೆ ವಿಜಯ ಮುನ್ನಾ ರಥವನಿಳಿ ಬೇಗ ನಿನ್ನ |
ಧುರಪರಾಕ್ರಮವನೆಲ್ಲ ಮತ್ತೆ ನಾ ಪೇಳ್ವೆ ಸೊಲ್ಲ ||
ಗರುವ ಬಿಟ್ಟೀಗಲಿಳೆಗೆ ಇಳಿ ಬೇಗ ಸಾರ್ದೆ ನಿನಗೆ |
ಒರೆದ ನುಡಿಯಿಲ್ಲದಾಯ್ತೆ ಒಳ್ಳಿತೆ ನೋಡು ಮತ್ತೆ || ೩೬೪ ||

**ಕಂದ**

ರಕ್ಕಸವೈರಿಯ ನುಡಿಗಂ |
ಬೆಕ್ಕಸಮಂ ತಾಳಿ ಧರಣಿಗಿಳಿಯಲು ಪಾರ್ಥಂ ||
ನಕ್ಕಸುರಾರಾತಿಯು ಮಿಗೆ |
ಯಕ್ಕರದಿಂದಿಳಿಯಲ್ ಸುಟ್ಟುರುಹಿತು ರಥವುಂ || ೩೬೫ ||

**ವಾರ್ಧಕ**

ಛಿಟಿ ಛಿಟಿಲ್ ಛಿಟಿಲೆಂದು ರಥದ ಹಲಗೆಗಳೊಡೆಯೆ |
ನಿಟಿ ನಿಟಿಲ್ ನಿಟಿಲೆಂದು ಚಮ್ಮಟಿಕೆ ಮುರಿಯಲ್ಕೆ |
ಲಟಕಟಿಸಿ ಹೇಯೆನುತ್ತಿರದೆ ಹೇಷಾರವದಿ ತೇಜಿಗಳು ಚೀರುತಿರಲು ||
ಮಿಟಿ ಮಿಟಿಲ್ ಮಿಟಿಲೆಂದು ಕೇತನಂ ಮುರಿದಿಳೆಗೆ |
ಲಟ ಲಟಿಲ್ ಲಟಿಲೆನುತ ಕಳಚಲಾ ಕ್ಷಣದೊಳಂ |
ಪಟು ಪರಾಕ್ರಮಿ ಹನುಮ ಟರ್ರೆನುತ ಹಾರಲುರಿ ಧಗಧಗಿಸಿ ರಥವುರಿದುದು || ೩೬೬ ||

**ಕಂದ**

ಇಂತು ವರೂಥವು ದಹಿಸಲು |
ಕುಂತಿಜರೀಕ್ಷಿಸಿ ಭಯಗೊಳುತಚ್ಚರಿವಡುತಂ ||
ಚಿಂತಿಸುತಿರೆ ಮಿಗೆ ಲಕ್ಷ್ಮೀ |
ಕಾಂತನು ನಸುನಗೆಯಿಂದಂ ಪೇಳ್ದರ್ಜುನಗಂ || ೩೬೭ ||

**ರಾಗ ಕೇದಾರಗೌಳ ಝಂಪೆತಾಳ**

ಕಂಡೆಯಾ ಪಾರ್ಥ ನೀನು | ರಥವನುರಿ | ಗೊಂಡು ದಹಿಸಿದ ಪರಿಯನು ||
ಚಂಡವಿಕ್ರಮನೆ ನಿನಗೆ | ಮೊದಲೆ ನಾ | ಕಂಡೆಂದೆನೀಸು ಬಗೆಗೆ || ೩೬೮ ||

ಎನುತ ಹರಿನುಡಿಯಲಂದು | ಏನಿದೇ | ನೆನುತ ಕೌಂತೇಯರಂದು ||
ಮನದಿ ಭಯವನು ತಾಳುತ | ಕೇಳಿದರು | ವನಜಾಕ್ಷನನು ಸ್ಮರಿಸುತ || ೩೬೯ ||

ಆದರಾಲಿಪುದು ಹದನ | ಭೀಷ್ಮದ್ರೋ | ಣಾದಿನಾಯಕರಂಬಿನ ||
ವೇದಮಂತ್ರಾಸ್ತ್ರದುರಿಯು | ರಥವನುರಿ | ದೂದಿ ಹೋದುದು ಭೀತಿಯು || ೩೭೦ ||

**ವಾರ್ಧಕ**

ಯಾಮಿನೀವಲ್ಲಭನ ಕುಲಜಾತ ಲಾಲಿಸೈ |
ಭೂಮಿಪಾಲಕನನೀ ತೆರದಿ ಹರಿಸಂತಯಿಸೆ |
ಭೀಮವಿಕ್ರಮ ಗುರುಕುಮಾರನಿತ್ತಲು ಸುಯೋಧನಗೆ ಭಾಷೆಯನುಸಿರುತ |
ಆ ಮಹೀಪತಿ ಪಾಂಡವಾತ್ಮಜರನೀ ರಾತ್ರಿ |
ಶ್ಯಾಮಳಾವಲ್ಲಭನ ಸದನಕಯ್ದಿಸುವೆನೆಂ |
ದಾ ಮಹಾಭಟ ಬರಲ್ಕಿದಿರಿನೊಳು ನಿಂದುದದ್ಭುತ ದೈವ ಭೀಕರದೊಳು || ೩೭೧ ||

ಅಗ್ಗಳೆಯ ದೈವದುಪಹತಿಗಂಜದಾಗಲ |
ತ್ಯುಗ್ರದಿಂದಭವನಂ ಭಜಿಸಿ ಮೆಚ್ಚಿಸುತಲಿ ಸ |
ಮಗ್ರದಿಂದೀಶನೊಲುಮೆಯ ಪಡೆದು ಭೂತಗಳನುಚ್ಚಾಟನಂ ಗೆಯ್ಯುತ |
ಉಗ್ರದಿಂದಯ್ದಿ ಮತ್ತಿರದೆ ಕೋಟೆಯ ಕದವ |
ನುಗ್ಗರಿವುತೊಳಪೊಕ್ಕು ಬೀದಿಬೀದಿಯೊಳಯ್ದು |
ತುಗ್ಗಡಿಸಿ ಬಂದು ಪಾಂಚಾಲನೃಪನಣುಗನಾಲಯಕಯ್ದನೇನೆಂಬೆನು || ೩೭೨ ||

**ರಾಗ ಮಾರವಿ ಏಕತಾಳ**

ಕೇಳ್ ಗುಣಮಣಿ ಕ | ಟ್ವಾಳ್ಗಳ ದೇವನು |
ಕಾಳ್ಗತ್ತಲೆಯೊಳು | ಬಿಲ್ಗೊಂಡಯ್ದಿ ಭ |
ಟಾಳ್ಗಳ ಕಡಿದು ಬಾ | ಗಿಲ್ಗಳ ಮುರಿಯುತ |
ಮೇಲ್ ಗರ್ಜಿಸುತೆಮ | ನಾಳ್ಗಳ ತೆರದಿ || ಬಂದನಾಗ || ೩೭೩ ||

ಅಸಮಪರಾಕ್ರಮಿ | ಮಿಸುನಿಯ ಜ್ಯೋತಿಯು |
ದೆಸೆದೆಸೆ ಬೆಳಗಲು | ಕುಶಲದಿ ಮಲಗಿಹ |
ರಸೆಪತಿ ದ್ರುಪದನಿ | ಗೆಸೆವ ಕುಮಾರನ |
ಮುಸುಕ ತೆಗೆದು ಮಿಗೆ | ಮುಸುಡಿನೊಳೊದೆದ || ಏನನೆಂಬೆ || ೩೭೪ ||

ಒದ್ದ ಭರಕೆ ಕಂ | ಡೆದ್ದತಿ ರೋಷದಿ
ನಿದ್ದೆಯಳಿಸಬಂ | ದಿದ್ದವರಾರೆನೆ |
ರುದ್ರನಂತೆ ನಿಂ | ತಿದ್ದನ ಕಾಣುತ |
ಯುದ್ಧಕೆ ನಿಲೆ ನೆಲ | ಕುದ್ದುತಲವನ || ಕೊಂದನಾಗ || ೩೭೫ ||

**ವಾರ್ಧಕ**

ಕುಂಜರಪುರಾಧೀಶ ಕೇಳಿಂತು ಗುರುಸುತಂ |
ಭಂಜಿಸುತ ದ್ರುಪದಸುತನಂ ದ್ರೌಪದೇಯರಂ |
ಸೃಂಜಯಾದಿಗಳ ಶಿರಮಂ ಕಡಿದು ಕನಕರಥದೊಳಗಿರಿಸಿ ಕೊಂಡು ಬಳಿಕ ||

ಕುಂಜರನ ಪಡೆಗೆ ಪಂಚಾನನಂ ಪೊಕ್ಕಂತೆ |
ಪಂಜರದ ಗಿಳಿಯಂ ಬಿಡಾಲ ಮುರಿದೊಯ್ದಂತೆ |
ಕುಂಜರ ತುರಂಗ ಕಾಲಾಳ್ಗಳಂ ರಜನಿಯೊಳು ಮಡುಹಿದಂ ಗುರುತನುಜನು || ೩೭೬ ||

**ಭಾಮಿನಿ**

ಇಳೆಯರಸ ಕೇಳ್ ಧರ್ಮಪುತ್ರನ |
ಬಲದಿ ಸಾವಿರ ನೃಪರ ನಾರಿಯ |
ರುಳಿದುದಲ್ಲದೆ ಮಿಕ್ಕ ಮಾಗಧ ಸೂತ ವಂದಿಗಳ ||
ಸುಳಿವ ಕಾಣೆನು ಕೈದುವಿಡಿದರ |
ದಳದ ಮಧ್ಯದೊಳಾನೆ ಕುದುರೆಗ |
ಳೊಳಗೆ ಜೀವಗಳಿಲ್ಲವೇನೆಂಬೆನು ಮಹಾದ್ಭುತವ || ೩೭೭ ||

**ರಾಗ ಕಾಂಭೋಜಿ ಝಂಪೆತಾಳ**

ಪೊಡವಿಪತಿ ಕೇಳಿಂತು ಗುರುವಿನಾತ್ಮಜ ಭರದಿ | ಮಡುಹಿ ಪಾಂಡವರ ಕಟಕವನು ||
ತಡೆಯದಾ ಕೌರವೇಂದ್ರನ ಬಳಿಗೆ ಬಂದು ಮ | ತ್ತೊಡನೆಚ್ಚರಿಸುತಿರ್ದನವನು || ೩೭೮ ||

ಗಂಡುಗಲಿಯವಧಾನ ಚಿತ್ತವಿಸು ಕುರುಕುಲಪ್ರ | ಚಂಡ ನೀನೆನುತಲಾ ನೃಪನ ||
ಕಂಡು ಕಂಬನಿದುಂಬುತೆಚ್ಚರಿಸಿದನು ಧರಣಿ | ಮಂಡಲಾಧಿಪ ಸುಯೋಧನನ || ೩೭೯ ||

ಯಾರು ಮರಣಾಂತ್ಯಸಮಯದಿ ಬಂದು ಕರೆವರೆನೆ | ವೀರ ನಿಮ್ಮವರು ನಾವೆನುತ |
ನಾರಿ ದ್ರೌಪದಿ ಸುತರ ಶಿರವ ತೋರಿದನು ಕ | ಣ್ಣಾರೆ ನೋಡೆಂದು ಹರಹಿಸುತ || ೩೮೦ ||

ಕೊಂದೆನೈ ಪಾಂಡುಸುತರೈವರುಳಿದರು ಮಿಕ್ಕ | ದೊಂದನುಳಿಸದೆರಣದಿ ನಾನು ||
ಇಂದಿರೇಶನು ಧರ್ಮಜಾದಿಗಳಪಾಯ ಗತಿ | ಯಿಂದುಳುಹಿಕೊಂಡನೆನಲವನು || ೩೮೧ ||

ಅಳಿದರೇ ಪಾಂಡುಸುತರಾತ್ಮ ಸಂಭವರೆಲ್ಲ | ಉಳಿಯಲಿಲ್ಲವೆ ಎನುತಲಂದು ||
ಭಳಿಭಳಿರೆ ಭೀಷ್ಮ ಗುರು ಕರ್ಣ ಕೃಪರಿಂದ ಹೆ | ಚ್ಚಳವಿಗೊದಗಿದಿರಿ ನೀವಿಂದು || ೩೮೨ ||

ಎನುತ ಮಾತಾಡಿ ಕಣ್ಮುಚ್ಚಿ ಮರೆದೊರಗಲಾ | ಜನಪನಿರವನು ನೋಡುತಿವರು |
ಮನದಿ ಮರುಗುತಲಿ ಕೈದುವ ಬಿಸುಟು ಪೋದರಿ | ನ್ನೆನುವುದೇನಿತ್ತ ಪಾಂಡವರು || ೩೮೩ ||

ಕುರುನೃಪಾಲನ ಪಾಳೆಯವ ಪೊರಟು ಬರುತಿರಲು | ತರುಣಿ ದ್ರೌಪದಿಯು ಬಾಲಕರ ||
ಮರಣವನು ಕಂಡು ಕಲ್ಮರ ಕರಗುವಂತೆ ಮಿಗೆ | ಮರುಗಿದಳು ಹಂಬಲಿಸುತವರ || ೩೮೪ ||

**ರಾಗ ನೀಲಾಂಬರಿ ಏಕತಾಳ**

ಕಂದರಿಂಗೇನಾದುದು | ಈ ರಾತ್ರಿಯಲ್ಲಿ | ಬಂದ ಹಾವಳಿಯೇನಿದು ||
ಇಂದಿಲ್ಲ ಕಾಂತರ್ ಯಾರು | ಬಂದುದ ಕಾಣೆ | ಮುಂದಾರಿಗೆಂಬೆ ದೂರು || ೩೮೫ ||

ಪುಂಡರೀಕಾಕ್ಷ ಬಲ್ಲ | ಎನ್ನಣುಗರ | ಕೊಂಡೊಯ್ದು ಪರಿಯನೆಲ್ಲ ||
ಕಂಡವರೊಬ್ಬರಿಲ್ಲ | ಶ್ರೀಸಾಂಬಶಿವನೆ | ಕಂಡು ನೀ ಮರೆತೆಯಲ್ಲ || ೩೮೬ ||

ಎಂತಿನ್ನು ತಾಳಲಯ್ಯೊ | ಈ ದುಃಖದೊ | ಳೆಂತು ನಾ ಬಾಳಲಯ್ಯೊ ||
ಕಂತುಪಿತನೆ ರಕ್ಷಿಸೊ | ಈ ಶೋಕ ನಿಲಿಸಿ | ಸಂತೋಷಗಳ ಪಾಲಿಸೊ || ೩೮೭ ||

**ರಾಗ ಆನಂದಭೈರವಿ ಏಕತಾಳ**
ಇಂತೆಂದು ಪಾಂಚಾಲೆ ಬಹಳ | ಚಿಂತೆಯಿಂದ ಮನದಿ ಮರುಗಿ |
ನೊಂದಳು | ಕೃಷ್ಣ | ಎಂದಳು || ೩೮೮ ||

ಅರಸರಿಲ್ಲದ ವೇಳ್ಯದೊಳು | ಭರದೊಳಾರೀ ಸರಿ ರಾತ್ರೆಯೊಳು |
ಬಂದರೋ | ಸುತರ | ಕುಂದರೋ || ೩೮೯ ||

ಅರಿಯೆನವರ್ ಯಾರೆಂದು ಲಕ್ಷ್ಮೀ | ವರನೆ ಬಲ್ಲನೆನುತ ಹಾಹಾ |
ಎಂದಳು ಹಲುಬಿ | ನೊಂದಳು || ೩೯೦ ||

**ವಾರ್ಧಕ**

ಇಂತು ದ್ರೌಪದಿ ಪ್ರಲಾಪಿಸಿ ಮರುಗುತಿಹ ಸಮಯ |
ಕಂತಕಾಂತಕನ ಪ್ರಿಯಸಹಿತ ಸಂಭ್ರಮದಿಂದ |
ಕುಂತಿಸುತರಯ್ತರಲು ಕೇಳಿದಂ ಭೀಮ ನಿಜವಲ್ಲಭೆಯ ರೋದನವನು ||
ಸಂತವಿಸಿ ಬಳಿಕ ಧೈರ್ಯವನೊರೆದು ಗುರುಪುತ್ರ |
ನಂತಿಕಕ್ಕಡಹಾಯ್ದು ಮುಂದುವರಿದನಿತರೊಳ್ |
ಮಂತ್ರಶಕ್ತಿಯೊಳೊಂದು ತೃಣವನೆಸೆದಂ ದ್ರೌಣಿ ಪೇಳಲೇನಾ ಕ್ಷಣದೊಳು || ೩೯೧ ||

**ಭಾಮಿನಿ**

ಅತ್ರಿಸುತಕುಲತಿಲಕ ಕೇಳ್ ಗುರು |
ಪುತ್ರನೆಸೆದ ತೃಣಾಸ್ತ್ರದುರುಬೆಗೆ |
ಹೊತ್ತಿತೆನೆ ಮೂಲೋಕ ಭಯಗೊಳೆ ಸಕಲಜನನಿಕರ ||
ಕೃತ್ತಿವಾಸನ ಫಣಿಯ ಕಣ್ಣಿ |
ಚ್ಯೊತ್ತಿ ದಹಿಪಂದದಲಿ ಧಾವರಿ |
ಸುತ್ತಲುತ್ತರೆ ಗರ್ಭಮಂ ಪೊಗಲರಚಿ ಹಲುಬಿದಳು || ೩೯೨ ||

**ರಾಗ ನೀಲಾಂಬರಿ ಏಕತಾಳ**

ರಕ್ಷಿಸೈಯನಾಥಬಂಧು | ಕೃಷ್ಣ ಕೃಷ್ಣ | ಕಮ | ಲಾಕ್ಷಪರಮಪುರುಷ ಸಲಹೊ | ಕೃಷ್ಣ ಕೃಷ್ಣ ||
ಪಕ್ಷಿಗಮನ ಶ್ರೀಮುಕುಂದ | ಕೃಷ್ಣ ಕೃಷ್ಣ | ಕರುಣಾ | ಧ್ಯಕ್ಷ ನುದರಜ್ವಾಲೆ ತಣಿಸೊ | ಕೃಷ್ಣ ಕೃಷ್ಣ || ೩೯೩ ||

ಸೃಷ್ಟಿಗೊಡೆಯನಯ್ಯ ಪಾಹಿ | ಕೃಷ್ಣ ಕೃಷ್ಣ | ಪಾಲಿ | ಸಷ್ಟಭೂತಿಗೊಡೆಯ ಜವದಿ | ಕೃಷ್ಣ ಕೃಷ್ಣ
ಹೊಟ್ಟೆಯಳಲ ತಡೆಯಲಾರೆ | ಕೃಷ್ಣ ಕೃಷ್ಣ | ಬಹಳ | ಕಷ್ಟವಾಯಿತಲ್ಲೊ ಸ್ವಾಮಿ | ಕೃಷ್ಣ ಕೃಷ್ಣ || ೩೯೪ ||

ತಾಳಲಾರೆನಯ್ಯೊ ಹರಿಯೆ | ಕೃಷ್ಣ ಕೃಷ್ಣ | ಉದರ | ಜ್ವಾಲೆಗೊಂದೌಷಧಿಯ ಪೇಳು | ಕೃಷ್ಣ ಕೃಷ್ಣ ||
ಪೇಳಲಾನಿನ್ನಾರಿಗಯ್ಯೋ | ಕೃಷ್ಣ ಕೃಷ್ಣ | ಎನ್ನ | ಮೇಲೆ ದಯವ ತೋರಿ ಸಲಹೊ | ಕೃಷ್ಣ ಕೃಷ್ಣ || ೩೯೫ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಇಂತು ಮಾನಿನಿ ಹಲುಬುತಿರೆ ಶ್ರೀ | ಕಾಂತನಾ ಕ್ಷಣ ಸೂಕ್ಷ್ಮರೂಪವ |
ನಾಂತು ತಾನತಿ ಕರುಣದಿಂದಲಿ | ಕಾಂತೆಯುದರವ ಪೊಕ್ಕನು | ತವಕದಿಂದ || ೩೯೬ ||

ವರ ಸುದರ್ಶನದಿಂದ ಜಠರದಿ | ಕೊರೆವ ತೃಣಸಾಯಕವ ತರಿತರಿ |
ದಿರದೆ ಬಳಿಕಾ ತರಳೆಯಂಗಕೆ | ಪರಮಸೌಖ್ಯವನಿತ್ತನು | ಹರಿಯು ತಾನು || ೩೯೭ ||

ಆ ಸಮಯದಲಿ ದ್ರೋಣಪುತ್ರನ | ನಾ ಸಮೀರಕುಮಾರ ಪಿಡಿತಂ |
ದೋಸರಿಸದಸಿಯಿಂದ ಶಿರವನು | ಬಾಸಣಿಸಲನುಗೆಯ್ದನು | ಖಾತಿಯಿಂದ || ೩೯೮ ||

**ವಾರ್ಧಕ**

ಏಣಾಂಕಕುಲತಿಲಕ ಕೇಳಿಂತಮರಭವನ |
ಬಾಣಸಿನ ಮಿತ್ರಾತ್ಮಭವನಧಿಕ ರೋಷದಿಂ |
ದ್ರೋಣಪುತ್ರನ ಕಂಠಮಂ ಕತ್ತರಿಪೆನೆಂದು ನಿಂತುಕೊಂಡಿರ್ಪಾಗಲು ||
ಏಣಾಂಕವದನೆ ದ್ರೌಪದಿ ಕಂಡು ಭೂಸುರನ |
ಸೂನುವಂ ಕೊಂದಡಪಕೀರ್ತಿ ಬಹುದೆಂದು ಪವ |
ಮಾನಿಯಂ ಸಂತಯಿಸಲಿತ್ತ ಧೃತರಾಷ್ಟ್ರನಿಗೆ ಸಂಜಯಂ ತಿಳಿದೆಂದನು || ೩೯೯ ||

**ಭಾಮಿನಿ**

ಒಂದ ಕದ್ದೊಯ್ದೆರಡನೆಯ ಘನ |
ಮಂದಿರದೊಳಿರಿಸಿದನ ಕೊಂದನ |
ಕಂದನಿಗೆ ಮೊಮ್ಮಗನ ಸುತನಾ ಮೂರರಧಿಪತಿಗೆ ||
ಚಂದದಿಂದುದಿಸಿದನ ಕುವರನ |
ತಂದೆಯರಸಿಗೆ ನಾಲ್ಕರಿಂದೊಗೆ |
ದಿಂದು ಐದರಲಯ್ದುವನೆ ಕೊಂದನು ತವಾತ್ಮಜನ || ೪೦೦ ||

ಧಾರಿಣೀಪಾಲಕನೆ ಲಾಲಿಸು | ತೀರಿತಿಲ್ಲಿಗೆ ರಣವಿದರ ವಿ |
ಸ್ತಾರದಿಂದುಸಿರಿದೆ ಪರಾಶರಮಗನ ಕರುಣದಲಿ ||
ಮಾರಮರ್ದನನಂತೆ ರೋಷದಿ | ಭಾರತಾಹವದೊಳಗೆ ನಿನ್ನಯ |
ನೂರು ಮಕ್ಕಳ ಕೊಂದನೋರ್ವನೆ ಪವನಸುತನೆಂದ || ೪೦೧ ||

**ವಾರ್ಧಕ**

ಎಂದ ನುಡಿಗರಸ ದುಃಖಿಸಲು ವ್ಯಾಸಂ ಬರ |
ಲ್ಕಂದು ನಮಿಸುತ ಪುತ್ರ ಶೋಕದಿಂ ಮೆಯ್ ಮರೆಯೆ |
ಲಂಧನೃಪತಿಯನೆತ್ತಿ ನಯ ನೀತಿ ಧರ್ಮಗಳನೊಲಿದು ಮುನಿನಾಥನುಸಿರಿ ||
ಕುಂದದತಿ ಧೈರ್ಯಮಂ ಪೇಳ್ದು ಮತ್ತೊಡನೆ ಸತಿ |
ವೃಂದಮಂ ಸಂತಯಿಸಿ ಪಾಂಡುಪುತ್ರರ ಮನ್ನಿ |
ಸೆಂದೊಡಂಬಡಿಸಿ ಸರ್ವರ ಕೂಡಿ ರಣಭೂಮಿಗರಸನನು ಕರೆತಂದನು || ೪೦೨ ||

ರಣದೊಳಗೆ ಮಡಿದಿರ್ದ ಹೆಣಗಳಟ್ಟೆಯ ಕಂಡು |
ವನಿತೆಯರು ಘೋಳೆಂದು ಬಾಯ್ಬಿಟ್ಟು ಮರುಗುತಿರ |
ಲನಿತರೊಳಗಾಚೆಯೊಳು ಕುಂತಿ ದ್ರೌಪದಿ ಸುಭದ್ರೆಯರತ್ತಲೊಂದೆಸೆಯೊಳು ||
ವನಜಾಕ್ಷ ಪಾಂಡುಸುತರೊಂದೆಸೆಯೊಳಿರುತಿರಲು |
ತನತನಗೆ ಸರ್ವರುಂ ಮರುಗಲು ಚತುರ್ವಿಧದೊ |
ಳೆನುವದೇನ್ ಬಾದರಾಯಣನಾಗ ಶೋಕಮಂ ನಿಲಿಸಿ ಸಂಧಿಯ ಗೆಯ್ದನು || ೪೦೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳಾ ಸಮಯದಲಿ ಮುರ | ಹರನು ಧರ್ಮಜಗೆಂದನೆಲ್ಲರು |
ವೆರಸಿ ವಂದಿಸಿರೈ ಗತಾಕ್ಷನ | ಚರಣಕೆನಲು || ೪೦೪ ||

ಎಂದ ಮಾತಿಗೆ ಪಾಂಡುಪುತ್ರರು | ವಂದಿಸಲು ಪಿಡಿದೆತ್ತಿ ಬಾ ಬಾ |
ಕಂದ ಬಾರೈ ಭೀಮನೀ ಬಾ | ರೆಂದು ಕರೆಯೆ || ೪೦೫ ||

ಅನಕ ಲೋಹದ ಕೃತಕರೂಪವ | ಜನಪನಿದಿರೊಳು ನಿಲಿಸಿ ಮಾರುತಿ |
ಯೆನಲು ಪಿಡಿದೆತ್ತಿದನು ಮನದೊಳು | ಕಿನಿಸಿನಿಂದ || ೪೦೬ ||

ವಾಯುಸುತನೆಂದೌಕಲುಕ್ಕಿನ | ಕಾಯವದು ಪುಡಿ ಚೂರ್ಣವಾಗಲಿ |
ಕಾಯತಾಕ್ಷನು ಬಳಿಕ ಪೇಳ್ದನು | ವಾಯುಸುತಗೆ || ೪೦೭ ||

**ರಾಗ ಭೈರವಿ ಝಂಪೆತಾಳ**

ಮರುತಸುತ ನೋಡಿದೆಯ | ಹಿರಿ ತಂದೆಯವರ ಮನ |
ದಿರವ ಭಯವಿಲ್ಲಿನ್ನು | ಚರಣಕೆರಗೆನಲು || ೪೦೮ ||

ಮನದಿ ಭಯವನು ತಾಳು | ತನುನಯದಿ ಮಾರುತಿಯು |
ಮಣಿಯಲೆತ್ತುತಲೆಂದ | ವಿನಯಪರನಾಗಿ || ೪೦೯ ||

ತರಳರೈವರು ನಿಮ್ಮೊ | ಳೆರಡಿಲ್ಲವಿನ್ನೆನಗೆ |
ಮರೆಯ ಮಾತಲ್ಲೆಂದ | ನರಸನವರೊಡನೆ || ೪೧೦ ||

ಬಳಿಕ ಗಾಂಧಾರಿ ಮನ | ದಳಲನುರೆ ಸಂತಯಿಸಿ |
ತಿಳುಹಿದರು ಮಿಕ್ಕಾದ | ಲಲನೆಯರಿಗೆಲ್ಲ || ೪೧೧ ||

ಒಲಿದು ಯಮಜಾತ ಕುರು | ತಿಲಕ ಮುಂತಾದರ್ಗೆ |
ಬಳಿಕ ಸಂಸ್ಕಾರಾದಿ | ಗಳನು ಮಾಡಿಸಿದ || ೪೧೨ ||

ಮುರಮಥನ ಸಕಲರನು | ವೆರಸಿ ಸಂತೋಷದೊಳ |
ಗರಮನೆಗೆ ಕರೆತರಲು | ಪರಮವೈಭವದಿ || ೪೧೩ ||

ವ್ಯಾಸ ನಾರದ ಕೃಷ್ಣ | ರಾ ಸಕಲ ಜನರು ಭೂ |
ಮೀಶನನು ಪಟ್ಟಸಿಂ | ಹಾಸನದ ಮೇಲೆ || ೪೧೪ ||

ಭೂಸುರಾಶೀರ್ವಾದ | ಘೋಷದಿಂದಲಿ ತರಣಿ |
ವಾಸರದಿ ಸರ್ವರು ವಿ | ಲಾಸದಿಂದಾಗ || ೪೧೫ ||

ತರಿಸಿ ಮಂಗಲವಸ್ತು | ಪರಿಕರದ ದ್ರವ್ಯದಿಂ |
ದುರೆ ಶುಭ ಮುಹೂರ್ತದೊಳು | ವರ ಧರ್ಮಸುತನ || ೪೧೬ ||

ಕರೆತಂದು ಕುಳ್ಳಿರಿಸಿ | ವರ ಗಾರ್ಗ್ಯ ಜೋಯಿಸರು |
ಸುರುಚಿರದ ನವರತ್ನ | ಭರಿತ ಕುಂಭವನು || ೪೧೭ ||

ಕರದಿ ಪಿಡಿದೆಲ್ಲವರು | ವೆರಸುತಭಿಷೇಕವನು |
ವಿರಚಿಸಿದರುತ್ಸಹದಿ | ನೆರೆದ ಸಭೆ ಮುದದಿ || ೪೧೮ ||

**ದ್ವಿಪದಿ**

ಇಂತು ವೈಭವದಿ ಪಟ್ಟಾಭಿಷೆಕವನು |
ಸಂತಸದಿ ರಚಿಸಿ ಯುವರಾಜ ಪಟ್ಟವನು || ೪೧೯ ||

ಕೌಂತೇಯ ಭೀಮಸೇನಂಗಿತ್ತು ಮುದದಿ |
ಕಂತುಪಿತ ಮೈದುನಗೆ ಪರಮವೈಭವದಿ || ೪೨೦ ||

ಸೇನಾಧಿಪತ್ಯವಿತ್ತರು ಮಾದ್ರಿಜರಿಗೆ |
ಸಾನಂದದಿಂದ ಹಿರಿಯರ ಸೇವೆಯೊಳಗೆ || ೪೨೧ ||

ಸಾನುರಾಗದೊಳಾ ಯುಯುತ್ಸುವೆಂಬವಗೆ |
ಮಾಣದಾ ಸರ್ವಾಧಿಕಾರವಾಯ್ತುವಗೆ || ೪೨೨ ||

ಮುನಿಜನರನಖಿಳ ದೇಶಾವಳಿಯ ಜನರ |
ಕನಕ ಗೋ ಭೂಮಿ ದಾನದಲಿ ಭೂಸುರರ || ೪೨೩ ||

ವಿನಯದಿಂದುಪಚರಿಸಿ ಪೌರ ಪರಿಜನವ |
ಜನಪ ಧರ್ಮಜ ಪಾಲಿಸಿದನು ಭೂತಳವ || ೪೨೪ ||

**ಭಾಮಿನಿ**

ಧರಣಿಪತಿ ಕೇಳಿಂತು ಧರ್ಮಜ |
ಭರತ ನಳನೃಪ ನಹುಷರಿಂದಲಿ |
ಯೆರಡು ಪರಿ ಮಿಗಿಲೆನಿಸಿ ಮೆರೆದನು ಸಕಲ ವೈಭವದಿ ||
ಪರಿಪರಿಯ ಶೋಭನವ ಪಾಡುತ |
ಹರಿಗೆ ಪಾಂಡುಕುಮಾರಕರಿಗತಿ |
ಹರುಷದಲಿ ನಾರಿಯರು ರತುನಾರತಿಯ ಬೆಳಗಿದರು || ೪೨೫ ||

**ರಾಗ ಢವಳಾರ ಅಷ್ಟತಾಳ**

ವಸುಧೆಯನಳೆದಿಹ ವಾಮನಗೆ | ಬಿಸಜೋದ್ಭವಪಿತ ಕೇಶವಗೆ |
ಪಶುಪತಿ ಸಖನಿಗೆ ಪಾರ್ಥಸಾರಥಿಗೆ |
ಕುಸುಮಗಂಧಿನಿಯರು ಪಾಡುತ ಪೊಗಳುತ ||
ಕುಶಲದಾರತಿಯ ಬೆಳಗಿರೆ | ಶೋಭಾನೆ || ೪೨೬ ||

ಧರಣಿಪಾಲಕನಿಗೆ ಮಾರುತಿಗೆ | ಹರನೊಡನಸ್ತ್ರವ ಪಡೆದವಗೆ |
ತರುಣಿ ಮಣಿ ಶಶಿಮುಖಿ ದ್ರೌಪದಿಗೆ |
ತರುಣಿಯರೆಲ್ಲರು ಪಾಡುತ ಪೊಗಳುತ |
ಸುರುಚಿರದಾರತಿಯ ಬೆಳಗಿರೆ | ಶೋಭಾನೆ || ೪೨೭ ||

ನಾರಿಯರೆಲ್ಲರು ತಾವ್ ನೆರೆದು | ಚಾರು ಭೂಷಣವಿಟ್ಟುರೆ ಮೆರೆದು |
ವೀರಾಧಿವೀರರಿಗರಸ ನೀನಾಗೆಂದು |
ವಾರಿಜಮುಖಿಯರಕ್ಷತೆಗಳನಿಡಿಸುತ |
ಸಾರಸದಾರತಿಯ ಬೆಳಗಿರೆ | ಶೋಭಾನೆ || ೪೨೮ ||

**ವಾರ್ಧಕ**

ಹರಿಣಾಂಕಕುಲಜಾತ ಲಾಲಿಸೀ ತೆರದಿಂದ |
ಕುರುಸೇನೆಯಂ ಸವರಿ ಧರಣಿಪತಿ ಧರ್ಮಜಂ |

ಧರೆಯನೇಕಚ್ಛತ್ರದಿಂದ ಪಾಲಿಸುತಿರ್ದ ಪೂರ್ವನೃಪರಿಂದ ಮಿಗಿಸಿ ||
ಸುರಪಾಲನೊಪ್ಪುವೊಡ್ಡೋಲಗಕೆ ಮಿಗಿಲಾಗಿ |
ಮೆರೆದರಚ್ಯುತನ ದಯದಿಂದ ಕೌಂತೇಯರೆಂ |
ದೊರೆದ ವೈಶಂಪಾಯ ಜನಮೇಜಯಗೆ ಪರಮ ಭಾರತಕಥಾಮೃತವನು || ೪೨೯ ||

ಪರಮ ಭಕ್ತಿಯೊಳೋದಿ ಕೇಳ್ವ ಪುಣ್ಯಾತ್ಮರಿಗೆ |
ದುರಿತಗಳ ಪರಿಹರಿಸಿ ಸುಜ್ಞಾನಗಳನಿತ್ತು |
ಕರುಣದಿಂ ವಿಠಲಪುರ ಶ್ರೀ ಪಂಚಲಿಂಗೇಶ ನಿರತ ರಕ್ಷಿಪನವರನು ||
ಒರೆದೆನೀ ಸತ್ಕಥೆಯ ಯಕ್ಷಗಾನಕ್ರಮದಿ |
ವರ ಶಾರದಾಂಬೆಯ ಕಟಾಕ್ಷದಿಂದೀ ಧರೆಯ |
ಪರಮ ಸತ್ಕವಿಗಳಿದ ನೋಡಿ ಜರೆಯದೆ ಮೆರೆಸಬೇಕು ಬಲ್ಲರು ಪ್ರೌಢರು || ೪೩೦ ||

**ಭಾಮಿನಿ**

ವೇದ ಶಾಸ್ತ್ರ ಪುರಾಣ ತತ್ತ್ವದ |
ಹಾದಿ ನೋಡಿದುದಿಲ್ಲ ಕಾವ್ಯವ |
ನೋಡಿ ಕೇಳ್ದವನಲ್ಲ ಕವಿತಾಕೃತಿಗೆ ಗುರುವಾದ ||
ಆದಿಮಾಯಾಶಕ್ತಿಯೊಲುಮೆಯೊ |
ಳಾಧರಿಸಿ ಶ್ರೀಪಂಚಲಿಂಗನ |
ಪಾದಕಮಲವನೊಲಿದು ಪೇಳಿದೆನೀ ಪ್ರಬಂಧವನು || ೪೩೧ ||

**ರಾಗ ಢವಳಾರ ಆದಿತಾಳ**

ಮಂಗಲ ಮಂಗಲ ಈಶ್ವರಗೆ | ಜಯ |
ಮಂಗಲ ಪಾರ್ವತಿರಮಣನಿಗೆ || ಮಂಗಲಂ || ಪ ||

ಪಂಚಾನನನಿಗೆ ಶಶಿಧರಗೆ | ಪಂಚಶರನ ತನು ಶಿಕ್ಷನಿಗೆ |
ಪಂಚಾಕ್ಷರದೊಲು ನಲಿವ ಮಹಾತ್ಮಗೆ | ಪಂಚಾಸ್ಯನ ಶಿರ ನಾಶನಿಗೆ || ಮಂಗಲಂ || ೪೩೨ ||

ಭುಜಗಭೂಷಣನಿಗೆ ತ್ರಿಣಯನಿಗೆ | ಅಜಸುರವಂದಿತಚರಣನಿಗೆ |
ವಿಜಯಗೆ ಪಾಶುಪತವನಿತ್ತ ಮಹಿಮಗೆ | ಸುಜನರಕ್ಷಾಮಣಿ ಮೂರುತಿಗೆ || ಮಂಗಲಂ || ೪೩೩ ||

ದುರಿತಕುಲಾರಿಗೆ ಪುರಹರಗೆ | ಸರಸಿಜನಾಭನ ಮಿತ್ರನಿಗೆ |
ಧರೆಯೊಳಗುತ್ತಮ ಶೃಂಗ ಪುರೀಶಗೆ | ಪರಮಮೂರುತಿ ಮಲ್ಲಿಕಾರ್ಜುನಗೆ |
ಮಂಗಲಂ | ಜಯ | ಮಂಗಲಂ | ಶುಭ | ಮಂಗಲಂ || ೪೩೪ ||

**ರಾಗ ಢವಳಾರ ಏಕತಾಳ**

ಇಂದು ಶೇಖರನಿಗೆ ಈಶ್ವರಗೆ | ಇಂದಿರೆಯರಸನ ಮಿತ್ರನಿಗೆ |
ಇಂದ್ರಾದಿ ವಂದ್ಯಗೆ ಪುರಹರಗೆ | ಇಂದುವಿಭವಸು ಇನಸಂಕಾಶನಿಗೆ || ೪೩೫ ||

ಅಂಬುಜಭವನುತ ಪರಶಿವಗೆ | ಅಂಬುಜನೇತ್ರೆಗೆ ಅಂಬಿಕೆಗೆ |
ಅಂಬರಮಣಿಬಿಂಬನ ಸಂಕಾಶಗೆ | ಅಂಬುಧರನ ಸತಿ ಶಂಕರಿಗೆ || ೪೩೬ ||

ಇಂದುಕಲಾಪೆಗೆ ಈಶ್ವರಿಗೆ | ಸುಂದರ ರೂಪೆಗೆ ಸುರನುತೆಗೆ |
ವಂದಿತ ಸನಕಸನಂದನಾರಾಧ್ಯೆಗೆ | ವಂದೇ ತ್ರೈಪುರ ಸುಂದರಿಗೆ || ೪೩೭ ||

*ಯಕ್ಷಗಾನ ಗದಾಪರ್ವ ಮುಗಿದುದು*

# ಯಕ್ಷಗಾನ ದ್ರೋಣಪರ್ವ

## ಪಾತ್ರಗಳು

| | | | | |
|---|---|---|---|---|
| ಪಾಂಡವರು | ದುರ್ಯೋಧನ | ಕರ್ಣ | ಅಶ್ವತ್ಥಾಮ | ಸಾತ್ಯಕಿ |
| ಮಾಯಾದ್ರೋಣ | ದೃಷ್ಟದ್ಯುಮ್ನ | ವಿರಾಟ | ಕೃಪ | ದ್ರೋಣ |
| ಶ್ರೀಕೃಷ್ಣ | ಸುಭದ್ರೆ | ಘಟೋತ್ಕಚ | ಅಲಂಬುಸ | ಮಾಯಾ ದುರ್ಯೋಧನ |
| ಸಪ್ತರ್ಷಿಗಳು | ದ್ರುಪದ | ವೇದವ್ಯಾಸ | | |

## ಯಕ್ಷಗಾನ ದ್ರೋಣಪರ್ವ

**ಮೊದಲನೆಯ ಸಂಧಿ**

**ಶಾರ್ದೂಲವಿಕ್ರೀಡಿತಂ**

ಶ್ರೀಮನ್ಮಂಗಳದೇವತಾಪ್ರಿಯತಮಂ ಸೋಮಾಖ್ಯ ದೈತ್ಯಾಂತಕಂ |
ಕೂರ್ಮೇಣೋದ್ಧೃತಮಂದರಾದ್ರಿವಿಭವಂ ಹೇಮಾಕ್ಷವಿಧ್ವಂಸಕಮ್ ||
ಶ್ರೀಮತ್ಕಾರ್ಯಾರ್ಥಹರಿಂ ಪಟುಂ ಬಲಿಜಯಂ ಭೂಮೀಶದರ್ಪಾಪಹಂ |
ರಾಮಂ ಯಾದವಮಂಗನಾವ್ರತಹರಂ ನೌಮೀಷ್ಟದಂ ಕಲ್ಕಿನಮ್ || ೧ ||

**ರಾಗ ಕಾಂಭೋಜ ಝಂಪೆತಾಳ**

ಶ್ರೀಶಿವನ ತನುಜಾತ ವಂದಿಸುವೆ ವಿನಯದೊಳ್ | ಈಶಾನನಂಕದೊಳ್ ಕುಣಿವಾತ ಗಣಪ ||
ದೋಷಲೇಶಗಳ ದೊರಕಿಸದೆ ಮುಂದಣದ ಮನ | ದಾಸೆ ಪೂರಯಿಸುವುದು ಮುದದಿ || ೨ ||

ಶ್ರೀ ಸತ್ಯಕಾಂತನಂ ನಮಿಸಿ ವಾಕ್ಪತಿಯ ಸಂ | ತೋಷಿಸುತ ವಾದಿರಾಜರನು ||
ವಾಸವೀ ಯದುಪತಿಯು ಭೀಮ ಮೊದಲಾಗಿ ಶರ | ದೈಶಿಕರ ರಣದಿ ಜಯಿಸಿದರು || ೩ ||

ಎಂತೆನುವ ಕಥೆಯ ಲೇಶದಲಿ ನಾನೊರೆವೆ ಶ್ರೀ | ಕಾಂತನನು ಭಜಿಸಿ ಭಕ್ತಿಯಲಿ ||
ಸಂತರಿದ ಮನ್ನಿಪುದು ಹರಿಕಥಾಮೃತವೆಂದು | ಎಂತು ಪೇಳಲು ಬಾಲನೆನುತ || ೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಾಯ ಜನಮೇಜಯನು ವೈಶಂ | ಪಾಯಮುನಿಪದಕೆರಗಿ ಕೇಳಿದ |
ನ್ಯಾಯದಲಿ ಪಾಂಡವರು ಹರಿಯ ಸ | ಹಾಯದಿಂದ || ೫ ||

ಸಿಂಧುದೇಶಕ್ಕೊಡೆಯ ಸೈಂಧವ | ನೆಂದೆನಿಪ ಖೂಳನನು ಸಂಯಮಿ |
ಮಂದಿರಕೆ ಕಳುಹಿಸಿದ ಫಲುಗುಣ | ನೆಂದಮೇಲೆ || ೬ ||

ಹೀನ ಕೌರವ ಸೋತು ರಣದಲಿ | ಭಾನುಜಾದ್ಯರ ಕೂಡಿ ತಾ ಮುಂ |
ದೇನು ಗೆಯ್ದಿದನೆಂಬ ಕಥೆಯ ನಿ | ಧಾನ ದಿಂದ || ೭ ||

ಅರುಹಬೇಕೆನಲಾಗ ಮೌನಿಗ | ಳರಸ ವೈಶಂಪಾಯನಾಖ್ಯನು |
ಹರಿಯ ಚರಣಾಂಬುಜಕೆ ವಂದಿಸು | ತೊರೆದ ಕಥೆಯ || ೮ ||

**ವಾರ್ಧಕ**

ಅರಸ ಕೇಳ್ ಸಂಗರದಿ ಸೈಂಧವನ ತಲೆಯ ಕ |
ತ್ತರಿಸಿ ವಿಜಯನು ಜಯವ ಹೊಂದಿ ಕೃಷ್ಣಾದಿಗಳ |
ಚರಣಮಂ ಪಿಡಿದಪ್ಪಿ ಸಂತಸದಿ ಶಿಬಿರದೊಳು ತರುಣಿ ಸೌಭದ್ರೆ ಸಹಿತ ||
ಇರುತಿರಲು ಮೋದದಿಂ ಪಾಳಯದ ಷಡುರಥರು |
ಬರುತ ಕಾಲಜನಂಘ್ರಿಗೆರಗಲ್ಕೆ ತಕ್ಕಯ್ಸು |
ತುರುಮಾನದೊಳಗವರ ಕುಳ್ಳಿರಿಸಿ ಕಾಳಗದ ಕುಶಲಮಂ ಕೇಳುತೆಂದಂ || ೯ ||

**ದ್ವಿಪದಿ**

ಭೂಮಿಪತಿ ಕೇಳು ಜನಮೇಜಯನೆ ಮತ್ತಾ | ಕಾಮಪಿತನೊಡಗೂಡಿ ಜಯಿಸುತಿರಲಿತ್ತ ||೧೦||

ಕುರುಪತಿಯು ಬೆಚ್ಚಿ ಬೆರಗಾಗುತಿರಲಂದು | ಶರದ ಪಂಡಿತ ಧೈರ್ಯ ಪೇಳ್ದ ನಡೆತಂದು ||೧೧||

ತೊಟ್ಟು ಕವಚವ ಪಾರ್ಥನಿದಿರು ಬರೆ ನರನು | ಸಿಟ್ಟಿನಿಂದಲಿ ಸೋಲಿಸಿದನು ಗುರುಗಳನು ||೧೨||

ಮತ್ತೆ ಕೌರವನಾಜ್ಞೆಯಿಂದ ಸೂತಜನು | ಶಕ್ತಿಸಹಿತಲಿ ಬರಲ್ಕಿತ್ತ ಮಾಧವನು ||೧೩||

ಸಾತ್ಯಕಿಯ ಕಳುಹು ರಾಧೇಯನಿದಿರೀಗ | ಯುಕ್ತಿಯಿಂ ಗೆಲುವ ವೈರಿಯನೆನಲು ಬೇಗ ||೧೪||

ಕಳುಹಿದನು ಸಾತ್ಯಕಿಯ ನರನು ಜಯಿಸೆಂದು | ಕೊಳುಗುಳದಿ ಸೂತಜನ ಜಯಿಸುತರಲಿಂದು ||೧೫||

ಅರಸನಾಜ್ಞೆಯೊಳಲಂಬುಸನು ಬರಲಿತ್ತ | ನರನ ವಾಕ್ಯದಿ ಭೈಮಿಯಾತನನು ಕೊಲುತ ||೧೬||

ಅದ್ಭುತದ ಮಾಯದಲಿ ಕುರುಧೊರೆಯ ಚಮುವ | ಸದೆಗೊಳಿಸೆ ರವಿಸೂನು ನೋಡಿ ರಿಪುಭರವ ||೧೭||

ಯುಕ್ತಿ ಕಾಣದೆ ಒಲಿದು ಸುರಪ ತನಗಿತ್ತ | ಶಕ್ತಿ ಹೊಡೆಯಲು ಪೋದ ಸುರಧಾಮಕಾತ ||೧೮||

ಅಂಧಕನ ಸುತನಾಜ್ಞೆಯಿಂದ ಕಲಶಜನು | ಅಂಧಕಾರಿಯ ತೆರದಿ ಬರಲಿತ್ತ ನರನು ||೧೯||

ಉತ್ತರನ ಪಿತ ದ್ರುಪದರನ್ನು ಕಳುಹಿದನು | ಮತ್ತೆ ಕಾಲನ ಪುರಕೆ ದ್ರೋಣ ಕಳುಹಿದನು ||೨೦||

ಹರಿಯಾಜ್ಞೆಯಿಂದ ದುರ್ನುಡಿಯ ಧರ್ಮಜನು | ಧುರಮಧ್ಯದಲಿ ಪೇಳೆ ಕೇಳಿ ಕಲಶಜನು ||೨೧||

ಬಿಟ್ಟು ಪೊಡವಿಯ ಪೋಗಲಿತ್ತಲಾಹವದಿ | ಧೃಷ್ಟದ್ಯುಮ್ನನು ಕಾಯ ಖಂಡಿಸಿದ ಭರದಿ ||೨೨||

ಪಿತನಯ್ದ ಸುರಪುರಕ್ಕೆನುವ ವಾರ್ತೆಯನು | ಸುತ ಭವಾಂಶಜ ಕೇಳಿ ಧುರಕೆ ಬರೆ ತಾನು ||೨೩||

ಖತಿಗೊಂಡು ಬಿಡಲು ನಾರಾಯಣಾಸ್ತ್ರವನು | ರತಿಪತಿಯ ಪಿತನದನು ವ್ಯರ್ಥಗೆಯ್ಸಿದನು ||೨೪||

ಕಾಣುತಲಿ ಕಲಹ ತನಗೇತಕೆಂದೆನುತ | ದ್ರೌಣಿ ತೆರಳಲು ವೇದವ್ಯಾಸ ತಡೆವುತ್ತ ||೨೫||

ಮಾಡು ಸಂಗರವೆಂದು ನುಡಿಯೆ ಋಷಿವರನು | ಕೂಡದಿಂದಿಲಿ ತೋರ್ಪೆ ನಾಳೆ ಧುರ ತಾನು ||೨೬||

ಎಂದು ನಮಿಸುತ ಜವದಿ ನಡೆಯೆ ಗುರುಸೂನು | ಮಂದಹಾಸದಿ ಪಾರ್ಥರೊಡನೆ ಹರಿ ತಾನು ||೨೭||

ಬಂದು ಶಿಬಿರದೊಳಿರ್ದರೆಂಬ ಕಥನವನು | ಇಂದು ವಂಶಜ ಕೇಳಿ ನಮಿಸಿ ಪೇಳಿದನು ||೨೮||

ಚಂದದಲಿ ಇನ್ನೊಮ್ಮೆ ಪೇಳಿ ಕಥನವನು | ಇಂದುಸಿರು ಎನಲೆಂದ ಮುನಿವರ್ಯ ತಾನು || ೨೯ ||

**ಭಾಮಿನಿ**

ಚಿಂತೆಗಳ ಬಿಡುತಾಗ ಧರ್ಮಜ |
ನಂತರಂಗದಿ ಯೋಚಿಸಿದ ಶ್ರೀ |
ಕಂತುಜನಕನು ಪಾರ್ಥ ಶೋಕದಿ ಪೇಳ್ದ ಭಾಷೆಗಳ ||
ನಿಂತು ರಥದೊಳಗರಿಯ ನಿವಹವ |
ಪಂಥದಲಿ ಗೆಲಿಸುತಲಿ ಸಲಹಿದ |
ನೆಂತು ದಯವೋ ಭಕುತರಲಿ ಶ್ರೀಕಾಂತಗೆಂದೆನುತ || ೩೦ ||

ಶಕಟ ಪದ್ಮವ್ಯೂಹ ಮೊದಲಾ |
ದಖಿಲ ಕಪಟಾಹವದಿ ಲಕ್ಷ್ಮೀ |

ಸಖನ ದಯದಿಂದಿನಲಿ ಸೈಂಧವನನ್ನು ಜಯಿಸಿದೆವು ||
ಸುಖದಿ ನಾವಿನ್ನಾವ ಪರಿಯಲಿ |
ಸಕಲರನು ಜಯಿಸುವೆವೊ ಹಾ ಶ್ರೀ |
ಲಕುಮಿಯಾಳ್ದನೆ ಬಲ್ಲನೆಂದೆನುತಾಗ ಯೋಚಿಸುತ || ೩೧ ||

**ರಾಗ ಕಾಂಭೋಜ ಝಂಪೆತಾಳ**

ಸೋಮವಂಶಜ ಧರ್ಮರಾಯ ಸೋದರನನ್ನು | ಪ್ರೇಮದೊಳಗಪ್ಪಿ ಪೇಳಿದನು ||
ಕಾಮಪಿತ ನಮ್ಮಗಳನುದ್ದಂಡಸ್ನೇಹದೊಳ | ಗಾ ಮಹಾ ಮಹಿಮ ಸಲಹಿದನು || ೩೨ ||

ಕುಟಿಲಪಗಡೆಯ ವಿದ್ಯದಿಂದ ನಮ್ಮನು ಜಯಿಸಿ | ಭಟನು ತಾನೆಂದಿರ್ಪ ನೃಪನ ||
ಕಟಿತಟವ ಪುಡಿಗೆಯ್ವನನುಜ ದುಶ್ಶಾಸನುರ | ದಿಟ ಬಗಿವೆ ರಕುತವನು ಕುಡಿವೆ || ೩೩ ||

ಶ್ವೇತವಾಹವ ಪೇಳ್ದ ಪೀತವಾಸನ ದಯದಿ | ಭೂತಳದ ಸಾಮ್ರಾಜ್ಯದೊಡೆತನವ ನಿಮಗೆ ||
ವಾತಸುತನೊಡಗೊಂಡು ನಾ ಮಾಳ್ಪೆ ಮನದೊಳರಿ | ಭೀತಿ ಬೇಡೆಂದು ನಮಿಸಿದನು || ೩೪ ||

ಸಹದೇವ ನಕುಲರಾಡಿದರಹಿತರೆಮ್ಮ ಜತು | ಗೃಹದಿ ಮೋಸವ ತೋರ್ದರವರು ||
ವಿಹಗವಾಹನ ದಯದಿ ಸಹಜ ಯುದ್ಧದಿ ಗೆದ್ದು | ಮಹಿಯ ಕೈವಶ ಗೆಯ್ವೆವೆನುತ || ೩೫ ||

**ಭಾಮಿನಿ**

ಜನಪ ಕೇಳೀ ತೆರದೊಳನುಜನರ |
ಘನಪರಾಕ್ರಮದಿಂದ ತನ್ನಯ |
ಮನದ ಚಿಂತೆಯ ಬಿಟ್ಟು ಧರ್ಮಜನೊರೆದ ಹರುಷದಲಿ ||
ಇನಿತು ಚಂದ್ರಾನ್ವಯದ ಸಿರಿಯೊಡೆ |
ತನವು ಸೋದರರಿಂದಲಾಯ್ತೆಂ |
ದೆನುತ ನೆಲೆಗೊಂಡಿರ್ದ ಭೀತಿಯ ಬಿಡುತಲಿರಲಂದು || ೩೬ ||

**ವಾರ್ಧಕ**

ಅತ್ತಲಾ ಕುರಕುಲದಿ ಮತ್ತೇಭಸದೃಶ ಭೂ |
ಪೋತ್ತಮನು ಮನದಿ ಮರುಗುತ್ತ ಚಿಂತಿಸುತೆಂದ |
ಶಕ್ತಿಯಲಿ ಪಾಂಡುಸುತರೆತ್ತಲೊಡಿವಡೆಯೆ ಈ ಹೊತ್ತಿನಲಿ ನಮ್ಮ ಬಲದಿ ||
ಮುತ್ತಯ್ಯನವರು ಮಾರುತನ ಸುತಮುಖ್ಯರಂ |
ಸತ್ಯದಿಂದಲಿ ಜಯಿಪೆನೆನುತ ಪೊರಟವರು ಬಳಿ |
ಕಿತ್ತ ಬಾರದೆ ಶರ ಸುಪತ್ತಿಯೊಳು ಮಲಗಿರಲು ಶಕ್ತಿ ಸಾಲದು ರಣದಲಿ || ೩೭ ||

**ರಾಗ ನೀಲಾಂಬರಿ ರೂಪಕತಾಳ**

ಇಂತೆಂದು ಮರುಗುತ್ತ ಲಂತರಂಗದಿ ಕುರು | ಕಾಂತನು ಚಿಂತಿಸುತೆಂದ ||
ಕಂತುಪಿತನ ಬಲದಿಂದ ಪಾಂಡವರು ತಾ | ವೆಂತೆಂಥ ಶಪಥ ಮಾಡಿದರು || ೩೮ ||

ಸೋದರಿಪತಿಯು ತಾ ಮೋದದಿ ಯುದ್ಧದಿ | ಸಾಧಿಪೆನೆನುತ ಮಾರ್ಬಲವ ||
ಕ್ರೋಧದಿಂ ವೆರಸುತ್ತ ಬಂದು ಪಾರ್ಥನ ಶರ | ಬಾಧೆಯ ಸಹಿಸದೆ ಧುರದಿ || ೩೯ ||

ಮಲಗಿರ್ಪನಿನ್ನೇನು ಗೆಲುವುಪಾಯವ ಕಾಣೆ | ಫಲುಗುಣ ಪಾರ್ಷತರೊಡನೆ ||
ಬಲಶಾಲಿ ಕಲಶಜ ಮುಖರಿದ್ದು ಸೋಲಾಯ್ತು | ಗೆಲುವ ಸುಭಟರನ್ನು ಕಾಣೆ || ೪೦ ||

**ಭಾಮಿನಿ**

ಈ ತೆರದಿ ಯೋಚಿಸುತಲಿರಲಾ |
ಭೂತಲೇಶನ ಕಂಡು ಕಲಶಜ |
ನಾ ತತುಕ್ಷಣ ಬಂದು ನಯನದ ವಾರಿಗಳನೊರಸಿ ||
ಕಾತರವ ಬಿಡು ಭೂಪ ಸಮರದೊ |
ಳಾತತಾಯಿಗಳನ್ನು ನಿಮಿಷದಿ |
ಧಾತುಗೆಡಿಸುವೆನೆಂದು ಧನುಶರಗೊಂಡು ಗರ್ಜಿಸಲು || ೪೧ ||

**ರಾಗ ಸಾಂಗತ್ಯ ರೂಪಕತಾಳ**

ಶಸ್ತ್ರಪಂಡಿತರೆ ಕೇಳಿರಿ ನಿಮ್ಮ ಸಾಹಸ | ವ್ಯರ್ಥವಾಯಿತು ವ್ಯೂಹ ರಚಿಸಿ ||
ಪಾರ್ಥ ಸಾತ್ಯಕಿ ಭೀಮರೊಡಗೂಡಿ ನಮ್ಮಯ | ಸಾರ್ಥವೆಲ್ಲವ ಸೂರೆಗೊಳ್ಳೆ || ೪೨ ||

ತೋಷವಾಯಿತೆ ನಿಮಗಿನಿತು ಸಂಗರದೊಳು | ವಾಸವಸುತನೊಳು ಕರುಣ ||
ಭಾಷೆಯೆಲ್ಲಿಹುದು ಸೈಂಧವನ ಪಾಲಿಪೆನೆಂಬ | ಲೇಸಾಯ್ತೆ ಸೈಂಧವನೃಪಗೆ || ೪೩ ||

ಶಿಷ್ಯವಾತ್ಸಲ್ಯ ಕೈಗೊಂಡೀಗ ನಮ್ಮಭ | ವಿಷ್ಯವ ಮರೆತಿರಿ ಧುರದಿ ||
ಪೋಷ್ಯವಾಗಿಹ ನಮ್ಮ ಕುಂದಿರ್ದ ಬಲ ನೋಡಿ || ತೋಷಪಡುವರೀಗ ಪರರು || ೪೪ ||

**ಭಾಮಿನಿ**

ಅಂದುದನು ಕೇಳ್ದಾಗ ಕಲಶಜ |
ಬಂಧಿಸುತ ಭ್ರುಕುಟಿಯನು ಪ್ರಳಯದ |
ನಂದಿಯೇರ್ದನ ತೆರದಿ ಬಾಯೊಳಗಾರ್ಭಟಿಸುತಲೆಂದ ||
ಅಂಧಭೂಪನ ಸುತನೆ ಕೇಳ್ ನಾ |
ಬಂಧಿಸಿದ ಕವಚವನು ತೆಗೆಯದೆ |
ಇಂದುಶೇಖರ ಬರಲು ನಾ ಬಿಡೆನೆಂದು ಕಿಡಿಗೆದರಿ || ೪೫ ||

**ರಾಗ ಮಾರವಿ ಏಕತಾಳ**

ಭೂಪತಿ ಬಿಡು ಬಿಡು ಚಿಂತೆಯ ಧುರದಲಿ | ಚಾಪವ ಪಿಡಿಯುತಲಿ ||
ಶ್ರೀಪತಿ ಮೆಚ್ಚುವ ತೆರದೊಳು ಶೌರ್ಯವ | ನಾ ಪರರಿದಿರಿನಲಿ || ೪೬ ||

ಹಗಲಿರುಳಲಿ ಹಿಮ್ಮೆಟ್ಟದೆ ಸಮರದಿ | ಜಗ ನಡುಗುವ ತೆರದಿ ||
ಹಗೆಯವರನು ಹಿಮ್ಮೆಟ್ಟಿಸುವೆನು ನಾ | ನಗಧರನಿದಿರಿನಲಿ || ೪೭ ||

ಕಟ್ಟುವೆ ಮತ್ಸ್ಯ ವಿರಾಟನ ದ್ರುಪದನ | ನಟ್ಟುವೆ ಸುರಪುರಕೆ ||
ತಟ್ಟನೆ ನಿಲಿಸುವೆ ಪಾರ್ಥನ ರಣದಿ ನಾ | ಕೆಟ್ಟೆನೆಂಬುವ ತೆರದಿ || ೪೮ ||

ಉಳಿದವರನು ಕಳವಳಿಸುತ ಸರ್ವರು | ಭಳಿರೆಂಬುವ ತೆರದಿ ||
ನಳಿನಭವಾದ್ಯರು ನೋಡಲಿ ವೃದ್ಧನ | ಚಳಕವ ಸಮರದಲಿ || ೪೯ ||

**ಭಾಮಿನಿ**

ಕ್ಷಿತಿಪತಿಯೆ ಪಾಂಚಾಲರೆಲ್ಲರ |
ತತಿಯನುಳುಹದಿರೆಂದು ತನ್ನಯ |
ಸುತನಿಗರುಹೆಂದೆನುತ ಬೀಳ್ಕೊಟ್ಟಾಗ ಕಲಶಜನು ||
ಅತಿರಥರನೊಡಗೊಂಡು ಶಸ್ತ್ರಾ |
ಹತಿಯೊಳಿಂದಿನ ಧುರದಿ ಪಾರ್ಥನ |
ಪೃತನ ಮುಂಬರದಂತೆ ಗೈವೆನೆನುತ್ತ ಧುರಗೈದಂ || ೫೦ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಗೂಢಚಾರನು ಪಾರ್ಥನ | ಬೇಗದೊಳ್ | ನೋಡುತ್ತ ಭಯದಿ ತನ್ನ ||
ರೂಢಿಪಪೃತನವ ಪೊಗುತಾಗ ಪಾರ್ಥನೊ |
ಳಾಡಿದನು ಶುಚಿತುರಗ ಕೇಳ್ ಗುರು | ವಾಡಿದನು ಕುರುವರನೊಳ್ ಭಾಷೆಯ || ೫೧ ||

ಮಾಧವ ಸಖನೆ ಕೇಳೊ | ದ್ರೋಣನು | ಕ್ರೋಧದಿ ಭೂಪನೊಳು ||
ಪೇಳ್ದ ವೈರಿಗಳನ್ನು ಹಗಲಿರುಳೊಳು ತಾನು |
ಕಾದುತಾಹವದೊಳಗೆ ದ್ರುಪದರ | ನೈದಿಸುವೆ ಯಮಧಾಮಕೆನುತಲಿ || ೫೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದ್ರೋಣ ಪೊರಟಿಹನೆಂಬ ವಾರ್ತೆಯ | ತ್ರಾಣಿ ಪಾರ್ಥನು ಕೇಳಿ ಚಾರರ |
ವಾಣಿಮುಖದಿಂದಾಗ ಸೈನ್ಯದ | ಶ್ರೇಣಿಸಹಿತ || ೫೩ ||

ಭರದಿ ಮಣಿಮಯ ರಥವನೇರುತ | ಪರಮಪಾವನ ಯದುಕುಲೇಶನ |
ಸ್ವರಥದಲಿ ಕುಳ್ಳಿರಿಸಿ ಭಕ್ತಿಯೊಳ್ | ಪೊರಟನಾಗ || ೫೪ ||

ಹರಿಯನುಜೆ ತಾ ಕಂಡು ಮಾಧವ | ನರರ ಶಿಬಿರದ್ವಾರಭಾಗದಿ |
ಹರುಷದಿಂ ನಡೆತಂದು ಪೇಳ್ದಳು | ಕರವ ಮುಗಿದು  || ೫೫ ||

**ರಾಗ ಸೌರಾಷ್ಟ್ರ ಏಕತಾಳ**
ಕಾಂತ ಲಾಲಿಪುದೆನ್ನ ಬಿನ್ನಪ ಮನವಿಟ್ಟು | ಪಂಥ ಮಾಡಿದ ಕಲಶಜನು ||
ಎಂತು ಯುದ್ಧದಿ ಜಯ ಬರುವುದೆಂಬುದನೀಗ | ಕಂತುಪಿತನು ತಾನೆ ಬಲ್ಲ || ೫೬ ||

ತೊಟ್ಟಿರ್ದ ಕವಚವ ಬಿಚ್ಚದೆ ರಣದಿ ಹಿಂ | ಮೆಟ್ಟದೆ ಪಾಂಡುಜಾತರಿಗೆ ||
ಪಟ್ಟ ಕೌರವಗೆತಾ ಸ್ಥಿರವ ಮಾಡುವೆನೆಂದು | ಸಿಟ್ಟಿನೊಳ್ ನಡುಗಿ ಪೇಳಿದನು || ೫೭ ||

ಹಗಲಿರುಳೊಳು ರಣರಂಗವ ಬಿಡದೆ ವೈ | ರಿಗಳ ದರ್ಪವ ನಿಲಿಸುವೆನು ||
ಮೃಗರಾಜನಂತೆ ಗರ್ಜಿಸುತ ಪೇಳಿಹನಂತೆ | ಅಗಸಮ ವಿಪ್ರ ಕೇಳ್ ರಮಣ || ೫೮ ||

**ವಚನ**
ಈ ತೆರದಿ ಭಾಮಾಮಣಿ ನುಡಿಯಲ್ ಸುತ್ರಾಮನ ಸುತ ಕೋಪಿಸುತಂ ಭೀತಿಯ ಬಿಡು ಮನದೊಳ್ ಶಾತೋದರಿ ಕೇಳೆನುತೆಂದ -

**ರಾಗ ಕೇದಾರಗೌಳ ಝುಂಪೆತಾಳ**

ಮತ್ತೇಭಗಮನೆ ಕೇಳೆ | ನಾ ನುಡಿವ | ದರ್ಥಿಯಿಂ ಸಾಧುಶೀಲೆ ||
ಶಸ್ತ್ರಪಂಡಿತರ ಧುರದಿ | ಭಾಷೆಗಳ | ವ್ಯರ್ಥಗೆಯ್ವೆನು ನಿಮಿಷದಿ  || ೫೯ ||

ಹಿಂದೆ ಸೈಂಧವನೃಪತಿಯ | ಬದುಕಿಸುವೆ | ನೆಂದು ಪೇಳಿದ ಭಾಷೆಯ ||
ಇಂದುಮುಖಿ ಕೇಳೆ ಬಲಿಯ | ಯೆನ್ನ ಶರ | ಕಂದು ಕೊಟ್ಟಿಹೆ ಮರೆತೆಯ || || ೬೦ ||

ಯಾದವೇಶ್ವರನು ಧುರದಿ | ಇಲ್ಲದಿರೆ | ಆದಪುದೆ ನೋಡು ಮನದಿ ||
ಕಾದುವುದು ಸಾಕು ಗೈಸು | ಮಾಧವನ | ಪಾದಸಂಸ್ತುತಿಯೆ ಲೇಸು || ೬೧ ||

ಸಾಕು ನುಡಿಯದಿರೀ ಪರಿ | ಎನ್ನೊಡನೆ | ಕಾಕುವಾಕ್ಯವನೀ ಪರಿ ||
ನಾಕ ನಾಯಕನ ದಯವು | ಭಕ್ತರಿಗೆ | ಸೋಕುವುದೆ ಪುಣ್ಯಫಲವು || ೬೨ ||

ಪ್ರಾಣಪತಿ ಜಾಣ ನೀನು | ಮುಂದಿರುವ | ಕ್ಷೆಣೀಶರೊಳು ಬಲ್ಲೆನು ||
ಹೀನ ರಿಪುಗಳ ಧುರದೊಳು | ಜಯಿಸೆಂದು | ತಾನೆ ತಿಲಕವನಿಟ್ಟಳು || ೬೩ ||

**ರಾಗ ಹಿಂದುಸ್ಥಾನಿ ಕಾಪಿ ಆದಿತಾಳ**

ಮಂಗಳಾರತಿ ಪಾಡಿರೆ | ಅಂಗನೆಯರು | ಮಂಗಳಾರತಿ ಪಾಡಿರೆ   ||ಪ||

ಮಂಗಳಾರತಿ ಕುರು | ಪುಂಗವ ಪಾರ್ಥಗೆ ||
ಅಂಗಜಪಿತ ಮೋಹ | ನಾಂಗ ಶ್ರೀಕೃಷ್ಣಗೆ || ಮಂಗಳಾರತಿ  || ೬೪ ||

ಅಂಗರಾಗಕೆ ತ್ರಿ | ಭಂಗಿ ಕುಬ್ಜೆಯನು ||
ತ್ತುಂಗ ಭೋಗದೊಳಾಳ್ದ | ಮಂಗಳಮಹಿಮಗೆ || ಮಂಗಳಾರತಿ || ೭೫ ||

ಅಂಗಧೀಶನ ಮಾನ | ಭಂಗ ಗೋಗ್ರಹ ರಣ ||
ರಂಗದಿ ಗೆಯ್ದ ಶ್ರೀ | ರಂಗನ ಸಖನಿಗೆ || ಮಂಗಳಾರತಿ || ೭೬ ||

**ಭಾಮಿನಿ**

ಕ್ಷಣಿಪತಿ ಕೇಳಿನಿತು ಕಿನ್ನರ |
ವಾಣಿ ನುಡಿಯಲ್ ಕಂಡು ಪನ್ನಗ |
ವೇಣಿಯನು ಮುದ್ದಿಸುತ ಶಿಬಿರಕೆ ಕಳುಹುತಲಿ ಪಾರ್ಥ ||
ದ್ರೋಣ ಮೊದಲಾಗಿರುವ ಷಡುರಥ |
ಶ್ರೇಣಿಯನು ಕಂಡಾಗ ಝೇಂಕಿಸು |
ತಾಣಿಶರಗಳನೆಸೆದ ನಿಜಸೈನಿಕರನೊಡಗೊಂಡು || ೭೭ ||

**ವಚನ**

ಈ ತೆರದಿಂದ ನರವರ ಶರವ್ರಾತದಿ ಮುಸುಕಲ್ ಕಂಡಾ ದ್ರೋಣಂ ಭೂತೇಶನ ಪರಿ ಖತಿಗೊಂಡಾಗಳ್ ಪಾರ್ಥನೊಳಿಂತೆಂದಂ -

**ರಾಗ ಕಾಂಭೋಜ ಮಟ್ಟೆತಾಳ**

ಬಲ್ಲೆ ಬಲ್ಲೆ ನಿನ್ನ ಸರಳ ನಿಲ್ಲು ಪಾರ್ಥನೆ |
ಹುಲ್ಲು ವಿಪ್ರನೆಂತಲೆಣಿಸಬೇಡ ಸುಮ್ಮನೆ ||
ನಿಲ್ಲು ಶರದ ಸವಿಯ ನೋಡಲಿಲ್ಲವೇನೆಲಾ |
ಬಿಲ್ಲವಿದ್ಯೆ ಗುರುಗಳೆಂದು ಮರೆತೆಯೇ ಭಲಾ || ೭೮ ||

ಸರಳ ಸವಿಯ ನೋಡಲಿಕ್ಕೆ ತರಳನಲ್ಲವೆ |
ಗರಳ ಕೊಟ್ಟ ದುರುಳ ಭೂಪನರುಹನಲ್ಲವೆ ||
ಗುರುಗಳೆಂಬ ಭಾವ ತಿಳಿದು ಶರವ ಪಿಡಿಯದೆ |
ಚರಣ ಪಿಡಿದು ಬೇಡಿದಾಗ ಮರೆತಿರಲ್ಲವೆ || ೭೯ ||

ತರಳನಿಂದಲಧಿಕ ಭಾವದಿಂದ ನಿನಗೆಲಾ |
ಸರಳು ವಿದ್ಯೆ ಕಲಿಸಿದಕ್ಕೆ ಫಲವಿದೇನೆಲ ||
ಹರನ ಕೂಡೆ ಸೆಣಸಿ ತಂದ ಶರವ ತೋರೆಲ |
ಧುರಜಯಾಶೆ ತೊರೆದು ಸಮರಕಿದಿರು ನಿಲ್ಲೆಲ || ೮೦ ||

ಸರಳಗುರುವೆ ಜನಕಸದೃಶನೆಂದು ಬಿಡುವೆನೆ |
ಕುರುಕುಲೇಶ ಬರಲು ಮೃಡನ ಶರವ ತೋರ್ಪೆನು ||

ಪರಮಮಾನ್ಯರಹುದು ನೀವು ದ್ವಿಜಕುಲೇಂದ್ರರು |
ಶರದ ಗುರಿಗೆ ಪಾತ್ರರಲ್ಲ ಶೂರವರ್ಯರು || ೭೧ ||

ಜಾಣನಹುದೊ ಪಾರ್ಥ ನಿನಗೆ ಕುರುಕುಲೇಶನೆ |
ಚೂಣಿಪತಿಗಳಿರಲುಯಿಂಥ ವಾಣಿ ಸುಮ್ಮನೆ ||
ಆಣಿಶರವ ನೋಡಬಹುದು ತ್ರಾಣವುಳ್ಳಡೆ |
ದ್ರೋಣನಿಂತು ಸರಳ ಮಳೆಯ ಕರೆದನಾಗಲೆ || ೭೨ ||

ಪೃತನ ಪುಡಿಯ ಗೆಯ್ದ ಪರಿಯ ಕಂಡು ಪಾರ್ಥನು |
ಸತತ ಸರಳ ಮಳೆಯ ಕರೆದು ಖತಿಯಕೊಂಡನು ||
ಶತಮಖಾಸ್ತ್ರ ನರನು ಜಪಿಸಿ ತೊಡಲು ಭರದೊಳು |
ತತೂಕ್ಷಣದಿ ಬೆದರಿ ರಿಪುವ್ಯೂಹವೊಡೆಯಲು || ೭೩ ||

**ಭಾಮಿನಿ**

ಅರಸ ಕೇಳಾಕ್ಷಣದಿ ನಿರ್ಜರ |
ರರಸಸುತನಾಹವದ ವಿಶಿಖವು |
ಕುರುಬಲವ ಭೋರ್ಗುಡಿಸೆ ವಿಪ್ರನು ಬೆರಗುತಿಂತೆಂದ ||
ಅರರೆ ನಮ್ಮಯ ಬಲದ ಬಾಹುಜ |
ರರಿಶರಕೆ ಭಯಪಡುವುದುಚಿತವೆ |
ಸುರಪಸದನವು ರಣದೊಳಲ್ಲದೆ ದೊರಕಲಸದಳವು || ೭೪ ||

**ರಾಗ ಮಾರವಿ ಏಕತಾಳ**

ಈ ಪರಿಯಲಿ ಕುಂಭಜನು | ಪೇಳುತ | ಕೋಪದೊಳೇರಿದ ರಥನು ||
ಕಾಪಾಡುತ ಸೇನೆಯನು | ಧೈರ್ಯದಿ | ಚಾಪವ ಪಿಡಿದೆತ್ತಿದನು || ೭೫ ||

ಪಾರ್ಥನೆ ಕೇಳ್ ನೀ ನಮ್ಮಾ | ನೀಕಿಯ | ಸ್ವಾರ್ಥಕೆ ಸವರಿದೆ ವರ್ಮಾ ||
ವರ್ಧಿಯಿಂದಲಿ ನಾ ಬೊಮ್ಮ | ನಸ್ತ್ರದಿ | ಕತ್ತರಿಸಿದೆ ನೋಡ್ಮುನ್ನ || ೭೬ ||

ಕತ್ತರಿಸಿದ ಕಣೆಗಳನು | ಕಾಣುತ | ಗೋತ್ರಾರಿಯ ಸುತ ತಾನು ||
ಸತ್ತ್ವದಿ ಗುರುಭೂಸುರನ | ಸೂತನ | ಯತ್ನದಿ ಮೈಮರೆಸಿದನು || ೭೭ ||

ಕಂಡಾಕ್ಷಣ ದ್ವಿಜವರನು | ಶೌರ್ಯದಿ | ಭಂಡಿಯ ನಡೆಸುತ ತಾನು ||
ಪಂಡಿತ ನೀನಹುದೆನುತ | ಪಡೆಯನು | ಚಂಡಾಡಿದ ಪೊಗಳುತ್ತ || ೭೮ ||

ಮೆಚ್ಚಿದೆ ಫಲುಗುಣ ನಿನ್ನ | ಸಾರಥಿ | ಯಚ್ಚುತವಾಘೆಯ ಮುನ್ನ ||
ಬೆಚ್ಚದೆ ಕತ್ತರಿಸಿದೆನು | ಸಾಹಸ | ವೆಚ್ಚವ ಮಾಡುವುದಿನ್ನು || ೭೯ ||

**ಭಾಮಿನಿ**

ಕಲಶಜನ ಸಾಹಸಕೆ ಕೃಷ್ಣನು |
ತಲೆಯ ತೂಗುತಲಾಗ ಬಲು ಮೂ |
ದಲಿಸಿ ಪಾರ್ಥನೊಳೆಂದ ಗುರುವರ ಗೆಯ್ದ ಸಾಹಸವ ||
ನೆಲನ ಬಯಸುವೆ ವೈರಿಗಳ ಕೊಳು |
ಗುಳದಿ ಜಯಿಸದೆ ಹೇಡಿಯಂದದೊ |
ಳಳುಕುವುದು ಸರಿಯಲ್ಲ ನೋಡೆನಲೆಂದನಾ ದ್ರೋಣ || ೮೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪರಮಪುರುಷನೆ ಕೇಳು ಪಾರ್ಥನೊ | ಳರುಹಿದುದ ನಾನೆಲ್ಲ ಬಲ್ಲೆನು ||
ಕರುಣವುಭಯತರಲ್ಲಿ ಸಮ ನಿನ | ಗಿರುವುದಿಂದು || ೮೧ ||

ನರನ ಸಾರಥಿಯಾಗಿ ಸರ್ವರ | ಧುರದಿ ಕೊಲಿಸುವುದಾವ ನೀತಿಯು |
ಶರಣರಲಿ ನೀಚೋಚ್ಚಭಾವವ | ಮೆರೆವುದೇನ್ಯೆ || ೮೨ ||

ಭಕ್ತನಲ್ಲವೆ ನಿನಗೆ ನಾ ಪರ | ಮಾತ್ಮ ನೀನಾಗಿರಲು ಶಿಷ್ಟರ |
ಪೊತ್ತವನು ತಾನೆಂಬ ಬಿರುದುಗ | ಳೆತ್ತ ತೆಗೆದೆ || ೮೩ ||

ಅಂತಿರಲಿ ನಡತೆಗಳ್ ಜಗದೊಳೇ | ಕಾಂತ ಭಕ್ತರು ಪಾಂಡವರು ನಿಜ |
ಕಂತುಜನಕನು ಬಿಡನು ಬಿರುದುಗ | ಳಿಂತು ಧುರದಿ || ೮೪ ||

ಹರಿಯೆ ನೀ ನೋಡೀಗ ಜರಠನ | ಧುರಪರಾಕ್ರಮವೆಂದು ಪಾರ್ಥನೊ |
ಳರುಹಿದನು ನೀನಂದು ಕಲಿತಿಹ | ತರಗಳಲ್ಲ || ೮೫ ||

ಭಾರ್ಗವಾಸ್ತ್ರವ ತೆಗೆದು ಭೂಸುರ | ಮಾರ್ಗಣದಿ ತಾ ಜಪಿಸಿ ಬಿಡುತಿರೆ ||
ಭೋರ್ಗುಡಿಸುತಿರಲಗ್ನಿ ಪರಿಯೊಳ್ | ಸ್ವರ್ಗಪಥದಿ || ೮೬ ||

ಪಾರ್ಥ ವಿಸ್ಮಯಗೊಂಡು ಸೈನ್ಯದ | ಪಾರ್ಥಿವರಿಗುತ್ಸಾಹಗೊಳಿಸಿ ಸ ||
ರ್ವಾಸ್ತ್ರಘಾತಕ ವೈಷ್ಣವಾಸ್ತ್ರದಿ | ವ್ಯರ್ಥಗಯ್ದೆ || ೮೭ ||

ಇಂತು ಮಂತ್ರಿಸಿ ಬಿಟ್ಟ ಮಾರ್ಗಣ | ವೆಂತು ಪೋದುದೊ ಸಮರಮಧ್ಯದೊ |
ಳಂತರಂಗದೊಳಾಗ ಪಾರ್ಥನು | ಚಿಂತಿಸುತ್ತ || ೮೮ ||

ಇರಲು ಯದುವರ ಕಂಡು ತನ್ನಯ | ಕರದ ವಾಘೆಯ ಬಿಸುಟು ಪಾರ್ಥನ |
ಶರ ನಿರರ್ಥಕವಾಗಲದ ತಾ | ಕರದಿ ಪಿಡಿದು || ೮೯ ||

ಕೊರಳಿನೊಳಗಾ ಭಾರ್ಗವಾಸ್ತ್ರವ | ಧರಿಸುತಿರೆ ಹರಿ ಹಾರದಂದದೊಳ್ |
ನರನು ಬಿನ್ನವಿಸಿದನು ವೈರಿಯ | ಶರವ ನೀವು || || ೯೦ ||

ಧರಿಸುವರೆ ಕಾರಣವಿದೇನೆನೆ | ಹರಿಯು ನರನೊಡನೆಂದ ಶರಣರ ||
ಪೊರೆವೆನುದರದಿ ಸರ್ವವನು ನಾ ನಾ | ಶ್ಚರಿಯವಲ್ಲ || ೯೧ ||

ಪಗೆಯವರ ಜಯಿಸುವಡೆ ಪೂರ್ವದೊ | ಳಗಜೆಯಿತ್ತೈಷಿಕವ ಬೇಗದೊಳ್ ||
ತೆಗೆಯೆನಲು ಕೇಳ್ದಾಗ ಪಾರ್ಥನು | ಸೊಗಸಿನಿಂದ || ೯೨ ||

ಬಿಡಲು ಕಂಗೆಟ್ಟಾಗ ಕುರುಬಲ | ಪೊಡವಿಯಲಿ ಮೈಮರೆಯಲಿತ್ತಲು |
ಕೊಡನ ಸುತ ಪಿಂತಿರುಗೆ ಕೌರವ | ನಡುವೆ ನುಡಿದ || ೯೩ ||

**ಭಾಮಿನಿ**

ಏನನೆಂಬೀ ರಣದಿ ಪಾರ್ಥನ |
ಬಾಣಕಂಗವನಿತ್ತು ಬಲುಬಲ |
ಕ್ಷೆಣಿಪಾಲಾಯ್ತಿನ್ನು ಷಡುರಥರೆಲ್ಲಿಗಯ್ದಿದರೋ ||
ಕಾಣೆ ಜಯಲೇಶವನು ಕಲಿಗುರು |
ದ್ರೋಣ ತತ್ಸುತರುಎನ್ನಯ |
ಗೋಣ ಕೊಯ್ದರು ಶಿವ ಶಿವಾ ದುರ್ವಿಧಿಯನೇನೆಂಬೆ || ೯೪ ||

ಭೂಪತಿಯ ಶೋಕವನು ಕಾಣುತ |
ಲಾ ಪರಕ್ರಮಿ ಕರ್ಣ ವರಶರ |
ಚಾಪವನು ಝೇಂಕರಿಸುತಾ ಕುರುಭೂಪಗಿಂತೆಂದ ||
ತಾಪವನು ಬಿಡು ಭೂಪ ವೈರಿಪ್ರ |
ತಾಪ ನಿಲಿಸುವೆ ಧುರದಿ ದಿಟವಿದು |
ಲೋಪವಿಲ್ಲದ ತೆರದಿ ನಿನ್ನಯ ಭಾಷೆ ಪಾಲಿಪೆನು || ೯೫ ||

**ರಾಗ ಕೇದಾರಗೌಳ ಝಂಪೆತಾಳ**

ಕುರುವರನೆ ಕೇಳು ಎನ್ನ | ಸಾಹಸವ | ಧುರದಿ ನಿನ್ನರಿಗಳನ್ನ ||
ಸೆರೆಪಿಡಿದು ಸಾಕೆನಿಸುವೆ | ಸಂಗ್ರಾಮ | ಶರಧಿ ನಮಗೇಕೆನಿಸುವೆ || ೯೬ ||

ಯಾದವನ ಬಲದಿ ಜೀಯ | ಯುದ್ಧಜಯ | ವಾದುದವರಿಗೆ ನಿಶ್ಚಯ ||
ಕಾದಲಸದಳ ಎನ್ನೊಳು | ನೀ ನೋಡು | ಹಾದಿ ತೋರ್ಪೆನು ಕ್ಷಣದೊಳು || ೯೭ ||

ಹಿಂದೆ ದೇವೇಂದ್ರನೆನಗೆ | ಒಲಿದಿತ್ತ | ನೊಂದು ಶಕ್ತಿಯ ನರನಿಗೆ ||
ಎಂದು ಇಟ್ಟಿರುವೆನದರ | ತೆಗೆವೆ ನೋ | ಡೆಂದೆನಲ್ಕಂಧಕುವರ || ೯೮ ||

ನುಡಿದನೀವರೆಗೆ ನೀನು | ಪಾರ್ಥನಿಗೆ | ಬಿಡದಿರಲು ಬೀಜವೇನು ||
ಕೆಡುಕು ಮಾಡಿದೆ ಕಾರ್ಯವ | ಎಂದೆನಲ್ | ನುಡಿದ ಕನ್ಯಾತನುಭವ || ೯೯ ||

ಕುಂಭಜಾದಿಗಳಿರುತಿರೆ | ಅಪಜಯವ | ಹಂಬಲಿಸಲುರೆ ಬಿಡುವರೆ ||
ಎಂಬುದನು ನೋಡಿ ನಿತ್ತೆ | ನಲ್ಲದಿರ | ಲಿಂಬುಗೊಡೆ ನರಗೆ ಮತ್ತೆ || ೧೦೦ ||

ಅಕ್ಷಯೇಷುಧಿ ಬೆನ್ನಿಲಿ | ರಥದಲ್ಲಿ | ಪಕ್ಷಿವಾಹನ ಧುರದಲಿ ||
ಲಕ್ಷ್ಯಗೊಂಬನೆ ನಮ್ಮನು | ಗಾಂಢೀವಿ | ದಕ್ಷನಂತಿಹನು ತಾನು  || ೧೦೧ ||

**ಭಾಮಿನಿ**

ಎಂದೆನಲು ಭೂಪನೊಳು ಕೋಪಿಸು |
ತೆಂದನೆಲೆ ನೋಡಕ್ಷಯೇಷುಧಿ |
ಸ್ಯಂದನವು ವಿಜಯಾಖ್ಯ ಭಾರ್ಗವನಿತ್ತ ಧನು ಶರವು ||
ಇಂದಿನಾಹವದೊಳಗೆ ಪಾರ್ಥನ |
ಚಂದ ನೋಡೈ ಬರಲು ನಾ ಬಿಡೆ |
ನೆಂದು ಕಂಗಳನುರುಹಿ ನರಗಿದಿರಾಗುತಿಂತೆಂದ  || ೧೦೨ ||

**ರಾಗ ಕಾಂಭೋಜ ಮಟ್ಟೆತಾಳ**

ಅರರೆ ಪಾರ್ಥ ಕೇಳು ಭೀಷ್ಮ ಗುರುಗಳನ್ನು ನೀ |
ಧುರದಿ ಗೆಲಿದೆನೆಂಬ ಗರ್ವ ಬೇಡ ಸುಮ್ಮನೆ ||
ತರಣಿಸುತನು ಬಂದನೆಚ್ಚರಿಕೆಯಿಂದಲಿ |
ಹರಿಯೊಳಾಲೋಚನೆಯ ಗೆಯ್ದು ನಿಲ್ಲು ಭರದಲಿ  || ೧೦೩ ||

ಎನಲು ಕೇಳುತುಬ್ಬಿ ಪಾರ್ಥ ಕಿಡಿಯನುಗುಳುತ |
ಇನಕುಮಾರನಿದಿರು ಬರಲು ಸಂತವೀಸುತ ||
ವನಜನಾಭನೆಂದ ನರನ ಕರವ ಪಿಡಿಯುತ |
ಶಿನಿಯತನಯನನ್ನು ಕಳುಹು ಧುರಕೆ ಕರೆಯುತ  || ೧೦೪ ||

ಇಂದ್ರದತ್ತ ಶಕ್ತಿಯನ್ನು ಧರಿಸುತಿದಿರಲಿ |
ಬಂದನಾತನೊಡನೆ ಸಮರ ಬೇಡವಿಂದಿಲಿ ||
ಒಂದು ನಿಮಿಷದಿಂದಲರಿಯ ಗರ್ವ ನಿಲಿಸುವ |
ಸ್ಯಂದನವು ನಮ್ಮದಿಹುದು ನೋಡು ಜಯಿಸುವ  || ೧೦೫ ||

ಹರಿಯ ಮಾತ ಕೇಳಿ ಸಾತ್ಯಕಿಯ ಪಾರ್ಥನು |
ಕರೆದು ಕರ್ಣನಿದಿರು ಯುದ್ಧಕ್ಕಾಗಿ ನಿನ್ನನು ||

ಭರದಿ ಕಳುಹಿಸುವೆನು ಪೋಗೆನುತ್ತ ವೀಳ್ಯವ |
ಧುರದಿ ಜಯಿಸಿ ಬಾರೆನುತ್ತಲಿತ್ತ ಪಾಂಡವ || ೧೦೭ ||

**ಭಾಮಿನಿ**

ನರನೊಳಪ್ಪಣೆಗೊಂಡು ಸಾತ್ಯಕಿ |
ಪರಮಹರುಷಿತನಾಗಿ ಕೃಷ್ಣನ |
ಚರಣಕಭಿವಂದಿಸಲು ಹರಿ ನಿಜರಥದೊಳೇರಿಸುತ ||
ನರಿಗಳಿದಿರಲಿ ಗರ್ಜಿಸುವ ಕೇ |
ಸರಿಯವೋಲ್ ತೆರಳೆಂದು ಕಳುಹಲು |
ತರಣಿಸುತಗಿದಿರಾಗಿ ಶರಮಳೆಗರೆವುತಿಂತೆಂದ || ೧೦೭ ||

**ರಾಗ ಯರಕಲಕಾಂಭೋಜ ಆದಿತಾಳ**

ಕೀಳುವಂಶಜನೆ ನೀನು | ಕೌರವನೊಳು | ಬಾಳಿ ಬದುಕಿದವನು ||
ಕಾಳಗದೊಳಗಿದಿರಾಗುತೆನ್ನಯ ಕ | ಟ್ಟಾಳುತನವ ನೀ ನೋಡು || ೧೦೮ ||

ಬಾಯಿಗೆ ಬಂದ ಪರಿ | ಪೇಳಲು ಯಾವ | ರಾಯನ ಮಗನುಸಿರೈ ||
ಆ ಯಯಾತಿಯ ಶಾಪದಿಂದ ನಿಮ್ಮವರೊಳು | ರಾಯತನವು ಉಂಟೇನೈ || ೧೦೯ ||

ಆಧಿರಥಿಯೆ ನೀ ಕೇಳು | ಕ್ಷತ್ರಿಯರಲ್ಲಿ | ಯಾದವರಲ್ಲೊ ಪೇಳು ||
ಸಾಧುಗ್ರಸೇನಗೆ ದಯದಿ ರಾಜ್ಯವನಿತ್ತು | ಮಾಧವ ಪಾಲಿಪನೈ || ೧೧೦ ||

ಸರಿ ಹಿಂದೆ ಬೇಗ ನೀನು | ನಿನ್ನೊಡನೆ ಸಂ | ಗರ ತರವಲ್ಲ ನಾನು ||
ನರನ ಬರಿಸು ಶೌರಿಯಿದಿರೊಳು ಶರಗಳ | ಪರಿಯನೆಲ್ಲವ ತೋರ್ಪೆನು || ೧೧೧ ||

ಹೊಳೆಯನು ದಾಟದವ | ವಾರಿಧಿ ಕಾಲ್ | ಹೊಳೆಯೆಂಬುದಾವ ಭಾವ ||
ಕಲಹದೊಳೆನ್ನೊಳಗುಳಿದು ಮತ್ತರ್ಜುನ | ಗಳವಿ ಕೊಡುವುದುಚಿತ || ೧೧೨ ||

ಹಿಂದೆ ನಿಮ್ಮಯ ಸಾಂಬನು | ಸ್ವಯಂವರ | ಕೆಂದು ಬಂದಿರಲು ತಾನು ||
ಮಂದಗಮನೆ ಲಕ್ಷಣೆಯ ಸೆಣಸಲು ಕಟ್ಟಿ | ದಂದವ ಮರೆತೆ ನೀನು || ೧೧೩ ||

ಹಲಧರ ನೋಡು ಮತ್ತೆ | ಹಸ್ತಿನಾವತಿ | ನೆಲವ ಕೋಪಿಸುತಲೆತ್ತೆ ||
ಕಳವಳಗೊಂಡು ಕೌರವನ ಪ್ರಾಣವ ಸಂಧಿ | ಯೊಳಗುಳುಹಿದ ಮರೆತೆ || ೧೧೪ ||

ರಣದಿ ಭೂರಿಶ್ರವಸ | ಬಿದ್ದಿರೆ ಕಂಡಾ | ಕ್ಷಣ ತೋರಿದೆ ಸಾಹಸ ||
ಘನ ಪರಾಕ್ರಮಿ ನಿನಗಣೆ ಕಾಣೆ ವೀರರೊ | ಳೆನಲೆಂದ ಶೈನೇಯನು || ೧೧೫ ||

ಹಿಂದಿನಿಂದಲಿ ಪಾರ್ಥಿಯ | ತೋಳ್ಗಳ ಶರ | ದಿಂದ ಭೇದಿಸುತ ಜಯ ||
ಹೊಂದಿದ ವೀರಾಧಿವೀರ ನೀನೈಸೆ ನೋ | ಡಿಂದೆನ್ನ ಶರಸವಿಯ || ೧೧೬ ||

**ಭಾಮಿನಿ**

ಯಾದವರು ಬಾಯ್‌ಬಡುಕರೆಂಬುದ |
ನಾದಿಯಲಿ ನಾನರಿತಿಹೆನು ಕುರು |
ಮೇದಿನೀಶನ ಕಾರ್ಯ ಸಾಧಿಸಲಾಡಿ ಫಲವೇನು ||
ನೀ ಧನಂಜಯನಾಜ್ಞೆಯನು ಬೇ |
ಕಾದ ಪರಿಯಲಿ ತೋರೆನುತ ಬಲು |
ಮೂದಲಿಸಿ ಸಾತ್ಯಕಿಗೆ ಬಾಣವನೆಚ್ಚನಾ ಕರ್ಣ || ೧೧೭ ||

**ರಾಗ ನೀಲಾಂಬರಿ ಪಂಚಾಗತಿ ಮಟ್ಟೆತಾಳ**

ಬಿಟ್ಟ ಬಾಣವ ಕಡಿದು ಯಾದವ | ಸಿಟ್ಟಿನಿಂದಲಿ ಮಸೆದ ಕಣೆಗಳ ||
ಬಿಟ್ಟು ಕರ್ಣನ ರಥವ ಮುಚ್ಚುತ | ದುಷ್ಟ ನಿನ್ನಯ ತೋರು ಸತ್ತ್ವವ || ೧೧೮ ||

ಎನಲು ಕೇಳುತಲಿನತನೂದ್ಭವ | ಮನದಿ ರೋಷವಗೊಂಡ ಚಾಪವ ||
ಬಿನುಗು ಯಾದವ ನಿಲ್ಲೆನುತ್ತಲಿ | ಅನಲಬಾಣವನೆಚ್ಚ ರಣದಲಿ || ೧೧೯ ||

ಕಂಡು ಯಾದವ ವಾರುಣಾಸ್ತ್ರವ | ಗೊಂಡು ಮಂತ್ರಿಸಿ ಬಿಡಲು ಶರದಲಿ ||
ಪುಂಡರೀಕಗಳಂತೆ ರಥಿಕರ | ಮಂಡೆ ತೋರ್ಪುದೇನೆಂಬೆ ಚೋದ್ಯವ || ೧೨೦ ||

**ಭಾಮಿನಿ**

ಈ ತೆರದ ಶಸ್ತ್ರಾಸ್ತ್ರದಲಿ ದಿನ |
ನಾಥಸುತ ಸಾತ್ಯಕಿಯರಿರ್ವರು ||
ಧಾತುಗೆಡುತೆಚ್ಚರಿಸಿ ಸರಿಸಮವಾಗುತಿರಲಂದು ||
ಸೂತಜನು ಕೋಪಿಸುತ ಕಲ್ಪದ |
ಭೂತನಾಥನ ತೆರದಿ ವೈರಿವ ||
ರೂಥವನು ಪುಡಿಗೆಯ್ದು ಚಾಪವ ಪಿಡಿವುತಿಂತೆಂದ || ೧೨೧ ||

**ರಾಗ ಮಾರವಿ ಏಕತಾಳ**

ಫಡ ಸಾತ್ಯಕಿ ನಿನ್ನಸ್ತ್ರದ ಪೌರುಷ | ನುಡಿಯದಿರೀ ತೆರದಿ ||
ಪಿಡಿದಿಹ ಚಾಪದಿ ಹೊಡೆದೊಡಲರಿವೆನು | ತಡೆಯುವರನು ಕರೆಸೈ || ೧೨೨ ||

ನಾನಿರಲನ್ಯರ ಕರೆಸುವುದೇತಕೆ | ಕಾನೀನನೆ ಕೇಳೈ ||
ತ್ರಾಣವುಳ್ಳಡೆ ನಿಲ್ ನಿಲ್ಲೆನುತಾಕ್ಷಣ | ಶೈನೇಯನು ಕರದಿ || ೧೨೩ ||

ವರಚಾಪವ ಗೊಂಡೀರ್ವರು ಪ್ರಹರಿಸ | ಉರಿಯೇಳುವ ತೆರದಿ ||
ಸುರರಾಶ್ಚರ್ಯವ ಕೊಂಡಂಬರದಲಿ | ಬೆರಗಾದರು ಭಯದಿ || ೧೨೪ ||

ಮತ್ತೆ ಸೂತಜನ ಧನುವೆತ್ತುತ ಸಾತ್ಯಕಿ | ಮಸ್ತಕದಲಿ ಹೊಡೆಯೆ ||
ಪೃಥ್ವಿಗೊರಗಿ ಬಲು ಸತ್ವದೊಳರ್ಧ ಮು | ಹೂರ್ತದೊಳೆದ್ದು ಮಿಗೆ || ೧೨೫ ||

**ಭಾಮಿನಿ**

ಕೂರಸಿಯ ಕೊಂಡಾಗ ಕರ್ಣನ |
ತೀರಿಸುವೆನೆಂದೆನುತ ಕಲ್ಪದ |
ಘೋರ ಭೈರವನಂತೆ ಗರ್ಜಿಸಿ ಯೋಚಿಸುತಲಂದು ||
ವೀರಪಾರ್ಥನ ಭಾಷೆ ನಿನಗುಪ |
ಕಾರವಾಯ್ತೆಂದೆನಲು ಸೂತಜ |
ನಾರುಭಟಿಸುತ ದಿವ್ಯ ಕರವಾಲವನು ಕೈಗೊಂಡು || ೧೨೬ ||

**ರಾಗ ಘಂಟಾರವ ಅಷ್ಟತಾಳ**

ಭೂವರೇಣ್ಯನೆ ಕೇಳಿತ್ತಲಸಿಯುದ್ಧ |
ಕೋವಿದರು ಪುಲಕಾದಿ ಬಹುಪರಿ | ಭಾವಗಳ ತೋರಿಸಿದರು || ೧೨೭ ||

ಅಂಗದೇಶಾಧಿಪತಿಯು ಕೋಪಿಸಿ ಯದು |
ಪುಂಗವನ ಕರದಸಿಯ ಕೋಪದಿ | ಭಂಗಗಯ್ದನು ನಿಮಿಷದಿ || ೧೨೮ ||

ಗದೆಯ ಗೊಂಡೆದುಕುಲಜಮರ್ಷದೊಳೆಂದ |
ನಧಮ ನಿನ್ನೆದೆ ಬಗಿವೆ ರಣದೊಳ | ಗಿದಿರು ನಿಲ್ ನಿಲ್ಲೆನುತಲಿ || ೧೨೯ ||

ಆಗ ಕರ್ಣ ಮಹಾಗದೆಗೊಂಡಿದಿ |
ರಾಗುತೀರ್ವರು ರಣದಿ ಸರಿಸಮ | ವಾಗುತಿರಲಾ ಸಮಯದಿ || ೧೩೦ ||

ಗದೆಯ ಬಿಟ್ಟೆದಿರಿದಿರಿನಲಿ ಮಲ್ಲ |
ಕದನವನು ಕೈಕೊಂಡರೀರ್ವರು | ಅದುಭುತವನೇನೆಂಬೆನು || ೧೩೧ ||

**ಭಾಮಿನಿ**

ಸೃಷ್ಟಿಪತಿ ಕೇಳುಭಯತರು ಬಲು |
ಸಿಟ್ಟಿನಿಂದಾರ್ಭಟಿಸುತಲಿ ನಿಜ |
ಮುಷ್ಟಿಯುದ್ಧವನೆಸಗಿದರು ಸಿಡಿಲೆರಗಿದಂದದಲಿ ||
ಕೃಷ್ಣನಂಘ್ರಿಯ ನೆನೆದು ಪಾಂಡವ |

ರಿಷ್ಟವನು ಸಾಧಿಸುತ ಕರ್ಣನ |
ರಟ್ಟೆಯನು ಪಿಡಿದೆತ್ತಿ ಬಿಸುಟನು ನೆಲದೊಳೇನೆಂಬೆ || ೧೩೨ ||

ಧರಣಿಪತಿ ಕೇಳತ್ತ ರವಿಸುತ | ಧುರದಿ ಸಾತ್ಯಕಿಯೊಡನೆ ಮಲ್ಲರ |
ತೆರದಿ ಬಹುಪರಿ ಬಾಹುಯುದ್ಧದೊಳ್ ಧರೆಗೆ ಮೈಗೊಡಲು ||
ಭರದೊಳದ ಕಾಣುತ್ತ ಕರಿಪುರ | ದರಸ ಚಿಂತಾಭಾರದಲಿ ತರ |
ಹರಿಸಿದನು ತನಗಾರು ಮುಂದಕೆ ಕದನಕೋವಿದರು || ೧೩೩ ||

**ರಾಗ ಶಂಕರಾಭರಣ ರೂಪಕತಾಳ**

ಶಿವ ಶಿವ ಸಂಗರದೊಳಗರಿ | ನಿವಹವ ನಿಮಿಷದಿ ಕರ್ಣನೆ |
ಸವರುವೆಯೆಂದೆನುತೀಪರಿ | ಭವಣೆಯು ನಿನಗಾಯ್ತೆ || ೧೩೪ ||

ನೀನಿರೆ ರಣದಲಿ ಪಾಂಡವ | ಕಾನನಕನಲನ ಪೋಲ್ ನದಿ |
ಸೂನು ಕೃಪಾದ್ಯರನೊಲಿಸದೆ | ಮಾನದಿ ಸಲಹಿದೆನೈ || ೧೩೫ ||

ಈ ತೆರಮಾದುದೆ ಹಾ ಪುರು | ಹೂತನ ಸುತಗಿದಿರ್ಯಾರು ||
ಭೂತದಳದೊಳಗೆಂದೆನುತಲಿ | ಕಾತರಿಸಿದನಂದು || ೧೩೬ ||

**ಭಾಮಿನಿ**

ಕುಂಭಿನೀಶನೆ ಕೇಳು ಬಳಿಕಾ |
ಲಂಬುಸನು ನಡೆತಂದು ಧುರಕಾ |
ರೆಂಬುದನು ಯೋಚಿಸುವ ಕುರುಭೂವರನ ಸಂತವಿಸಿ ||
ಕಂಬನಿಯನೊರಸುತ್ತ ಪಾರ್ಥನ |
ಬೆಂಬಿಡದೆ ಸೋಲಿಸುವೆ ವೀಳ್ಯ ವಿ |
ಲಂಬಿಸದೆ ಎನಗಿತ್ತು ಕಳುಹೆಂದೆನುತಲಿರಲಂದು || ೧೩೭ ||

**ವಚನ**

ಆಸುರನೆಂದುದ ಕೇಳ್ದಾ ನೃಪ ಸಂತೋಷದೊಳಪ್ಪಣೆಯಿತ್ತು ಕಳುಹಲ್ ವಾಸವಸುತನಿದಿರಿಗೆ ಖಳ
ಕೇಸರಿಯಂತಾರ್ಭಟಿಸುತ್ತೈತಂದಂ

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಖಳನು ಬರುತಿರೆ ಕಂಡು ಯಾದವ | ತಿಲಕ ಪಾರ್ಥನ ಕರೆದು ಪೇಳಿದ |
ನಳಿನಸಖನಸ್ತಮಿಸಿದನು ಕ | ತ್ತಲೆಯೊಳಿಂದು || ೧೩೮ ||

ಅರಿಗಳಾರೆಮ್ಮವರು ಯಾರೆಂ | ದರಿಯದೆಲೆಸಾದಿಗಳು ರಥಿಕರು |
ಧುರದಿ ಕಂಗೆಟ್ಟಿಹರು ಶಕ್ತಿಯ | ತರಣಿಸುತನು || ೧೩೯ ||

ಇಟ್ಟಿಹನು ನಿನಗೆಂದು ಮುಂದಿನ | ದೃಷ್ಟನಮಗೆಂತಿಹುದೊ ಭೀಮಗೆ |
ಪುಟ್ಟಿಹನ ಕಳುಹೀಗ ಬಂದಿಹ | ದುಷ್ಟನಿದಿರು || ೧೪೦ ||

ನಿನ್ನಸುವ ಪಾಲಿಸುವ ಕೌರವ | ರನ್ನು ಕಂಗೆಡಿಸುವನು ಕರ್ಣನ |
ಘನ್ನತಿಗೆ ನಿಲಿಸುವನು ನೋಡೀ | ಗನ್ಯರೇಕೆ || ೧೪೧ ||

ಅಂಬುಜಾಕ್ಷನ ನುಡಿಗೆ ನರ ಹೈ | ಡಿಂಬಿಯನು ಕರೆದೆಂದ ವೈರಿ ಕ |
ದಂಬವನು ಜಯಿಸೆಂದು ಕಳುಹಿದ | ಸಂಭ್ರಮದಲಿ || ೧೪೨ ||

**ಭಾಮಿನಿ**

ಅಪ್ಪಣೆಯಗೊಂಡಾಗ ಕರಗಳ |
ಚಪ್ಪಳಿಸುತಾರ್ಭಟಿಸಿ ಕಂಗಳ |
ರೆಪ್ಪೆಯನು ಹಾರಿಸುತ ಬಂದಾಲಂಬುಸನ ಕಂಡು ||
ಸರ್ಪನಿದಿರಿಗೆ ಕಪ್ಪೆಯಂದದೊ |
ಳೊಪ್ಪಿಸಿದರಾರೆನುತ ವೈರಿಯ |
ನಪ್ಪಳಿಸಿ ಪುಡಿಗೆಯ್ವೆ ಧುರದೊಳಗೆಂದು ಗರ್ಜಿಸಿದ || ೧೪೩ ||

**ರಾಗ ಮಾರವಿ ಏಕತಾಳ**

ಘಡ ದಾನವ ನಿನ್ನಣ್ಣನಿಗನುದಿನ | ಬಡ ಪಾರ್ವರು ಬಲಿಯೆ ||
ಕೊಡುತಿರೆ ಕಂಡೆಮ್ಮಯ್ಯನು ಕೋಪದಿ | ಕಡೆ ತೋರಿದನರಿಯೆ || ೧೪೪ ||

ಮರುಳು ಘಟೋತ್ಕಚ ನಿಶಿಗಣ್ಣನು ಮೈ | ಮರೆತಿರೆ ಕಂಡದನು ||
ಭರದಲಿ ಕೆಡಹಿದ ತೆರವಲ್ಲಿಂದಿನ | ಧುರದಲಿ ಬರಹೇಳು || ೧೪೫ ||

ಮರುಳು ನಿನಗೆ ಬಲು ಬಿರು ನುಡಿಯನು ಸಂ | ಗರದೊಳು ನೀ ನಮಗೆ ||
ದುರುಳನೆ ಜನಕನ ಬರಲೆನ್ನುವ ನಿನ್ನ | ಕೊರಳನು ದಿಟ ಮುರಿವೆ || ೧೪೬ ||

ದಾನವ ಕೇಳ್ ನಿನಗೇತಕೊ ರಣದಭಿ | ಮಾನವು ಕದನ ಮುದಿ ||
ಕೋಣಗೆ ಕೋಡ್ಕಲ್ಲಿನ ಮೇಲಣ ತೃಣ | ಶ್ರೇಣಿಯಂದದೊಳಿಹುದೈ || ೧೪೭ ||

**ಭಾಮಿನಿ**

ಕೊಡತಲೆಯ ದನುಜೇಂದ್ರ ನೀ ಕೇಳ್ |
ಪೊಡವಿಪತಿ ಕಾಲಜನು ನಿನ್ನಯ |
ಒಡಲ ತೀರ್ಚುವಡಿನಿತು ನಮ್ಮಯ ಕಡೆಗೆ ಕಳುಹಿದನು ||
ಸಡಗರದೊಳದನರಿಯದಲೆ ರಣ |

ಪೊಡವಿಗೆಯ್ತಂದಿರುವೆ ಮರುಳೆಲೆ |
ಕೊಡಲಿಕಾವ್ ಕೇಡ್ಕುಲಕೆಯೆಂಬುವ ನಡತೆಗಳ ನೋಡು || ೧೪೮ ||

ಬಪ್ಪನಿಗೆ ಪೂರ್ವದೊಳು ನೀನೆಲೊ | ತಪ್ಪಿ ಬದುಕಿದ ಹೇಡಿ ಭೂಮಿಯೊ |
ಳಿಪ್ಪ ಮನ ನಿನಗಿದ್ದಡೀ ಕ್ಷಣ ಭಜಿಸು ಧರ್ಮಜನ ||
ತಪ್ಪುಗಳನೆಲ್ಲವನು ಪಾಲಿಪ | ತಪ್ಪಿದರೆ ನಿನ್ನಸುವನೀಗಳೆ |
ಒಪ್ಪಿಸುವೆ ಕೂರಸಿಗೆ ದಿಟವೆಂದೆನುತ ಗರ್ಜಿಸಿದ || ೧೪೯ ||

**ರಾಗ ಮಾರವಿ ಏಕತಾಳ**

ಇಂತೀರ್ವರು ಧುರದೊಳಗೆ ಸರಿಸರಿ | ಪಂಥದಿ ಹೊಡೆಯುತಲಿ ||
ನಿಂತರು ಜೊತೆಯೊಳಗಾ ಕ್ರವ್ಯಾದರು | ದಂತೀಶ್ವರರಂತೆ || ೧೫೦ ||

ಆಗ ಘಟೋತ್ಕಚ ಬೇಗದೊಳರಿಶರ | ಪೂಗಗಳನು ತರಿದು ||
ವೇಗದೊಳಗವನನು ಎತ್ತುತ ಸೈನ್ಯದ | ಭಾಗವ ಪುಡಿಗೆಯ್ದು || ೧೫೧ ||

ಬಲ್ಲಿದವರು ಶರವೆಲ್ಲ ಬಿಡುತ ಮನ | ತಲ್ಲಣಿಸಲು ಕಂಡು ||
ಬಿಲ್ಲು ಶರಗಳನು ಬಿಡುತಲಿ ಮಾಯವ ಗೊಳ್ಳುತಲಂಬುಸನು || ೧೫೨ ||

ಅಂಬರದೊಳಗವಲಂಬಿಸಿ ಧುರ ಸಾ | ಕೆಂಬುವ ತೆರದಿಂದ ||
ಅಂಬುಗಳನು ಸೌರಂಭದಿ ಬಿಡುತಲಿ | ಡಂಭಕದನ ಗೆದ್ದ || ೧೫೩ ||

**ಭಾಮಿನಿ**

ಕ್ಷತ್ರಿವರ ಕೇಳಿತ್ತ ಸಮರದಿ |
ರಾತ್ರಿಚರರೀತೆರದ ಮಾಯದೊಳ್ |
ಧಾತ್ರಿ ನಡುಗುವ ತೆರದಿ ರಥಿಕರ ಗಾತ್ರ ನಡನಡುಗೆ ||
ಕೃತ್ರಿಮವ ಕಡಿದಾ ಘಟೋತ್ಕಚ |
ಶತ್ರುವರ ಕುರುರಾಯನೆದೆಯೊಳ್ |
ಚಿತ್ರದಲಿ ಚೆಂಡಾಡಿದಾಲಂಬುಸನ ಶಿರ ಕಡಿದು || ೧೫೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರುಂಡವನು ಚೆಂಡಾಡಿ ದೈತ್ಯನು | ಚಂಡವಿಕ್ರಮದಿಂದ ನಲಿಯುತ |
ಭಂಡ ಕೌರವಗೆಂದ ತಾನು | ದ್ದಂಡತನದ || ೧೫೫ ||

ಮಾನವಾಧಿಪ ಕೇಳು ರಾಜನ | ಕಾಣುವಡೆ ಬಹರೆಲ್ಲ ಕಯ್ಯೊಳು |
ಕಾಣ್ಕೆ ತಂದೀವರಿದು ನೋಡೈ | ಶಾಣೆ ಶಿರವು || ೧೫೬ ||

ಮುನ್ನ ನೋಡೈ ತರಿವೆ ನಿನ್ನಯ | ರನ್ನ ಕರ್ಣನ ಶಿರವನೀಕ್ಷಣ |
ಮನ್ನಿಸಷ್ಟರ ವೇಳ್ಯ ತತ್ಕ್ಷಣ | ನಿನ್ನ ಮುರಿವೆ || ೧೫೭ ||

ದಯವು ಎನ್ನೊಳಗಿರಲಿ ಯುದ್ಧದ | ರಯವು ನೋಡೆಂದೆನುತು ತಾ ನಿ |
ರ್ಭಯದಿ ಭೈಮಿಯು ಕೂಗುತಲಿ ಮುಂ | ಪಯಣಗೆಯ್ಯೆ || ೧೫೮ ||

**ಭಾಮಿನಿ**

ಉರಕೆ ಬಿದ್ದಿಹ ದೈತ್ಯಕಂಧರ |
ಪೊರಳುವುದ ಕಂಡಾಕ್ಷಣದ ಕುರು |
ದೊರೆಯು ವಿಸ್ಮಿತನಾಗಿ ಶೋಕದೊಳ್ ಧರೆಗೆ ಮಕುಟವನು ||
ಭರದಿ ಚಾಚುತ ಬೀಳುತಿರುವುದ |
ತರಣಿಸುತ ತಾ ನೊಡುತಲಿ ಮನ |
ಕರಗಿ ಬಂದೆಬ್ಬಿಸುತ ಪೇಳಿದ ದೊರೆಗೆ ಮೂದಲಿಸಿ || ೧೫೯ ||

**ರಾಗ ಯರಕಲಕಾಂಭೋಜ ಝಂಪೆತಾಳ**

ಎಲವೊ ಕೌರವರರಸನರುಹುವುದ ನೀ ಕೇಳು | ಕಲಹದೊಳು ಮಲಗಿರ್ಪ ಸುಭಟರನು ಕಂಡು ||
ಅಳಲದಿರು ಮನದಿ ಕೊಳುಗುಳದೊಳಗೆ ಮೈ ಮರೆವು | ದಿಳೆಯಪಾಲರಿಗೆ ಕೈವಲ್ಯಕಾರಣವು ||೧೬೦||

ಸತತ ಸಂಗರದೊಳಗೆ ಮತಿಗೆಟ್ಟು ಮಲಗಿ ಭೂ | ಪತಿಯಾಗಿ ಮಲಗಿರ್ಪೆಯಲ್ಲೊ ನೀನಿಂದು ||
ಅತುಳ ಬಲಗಳನು ಪರಿಮಿತಿ ತಪ್ಪಿ ಸವರುವ | ಸ್ಥಿತಿ ನೋಡಿ ಬಳಲುತಿಹ ಗತಿಯಾಯಿತಲ್ಲೊ ||೧೬೧||

ನಾವು ಕದನವ ಮಾಡಲೆಂದರೀ ದೊರೆಪತಿಯ | ಸೋವು ನೋಡುತಲಿರ್ಪ ಪಾವಮಾನಿಯನು||
ಆವ ಭೂಪನು ತಡೆಯುವನು ಭೂಪತಿಯನಾರು | ಕಾವಾತ ಭೈಮಿಯನು ಗೆಲುವಾತನಾರು ||೧೬೨||

ಹೊಳೆಯ ತರಳನು ಪೇಳ್ದ ಸರಳಮಾರ್ಗವ ಬಿಟ್ಟೆ | ಇಳೆಗಾಗಿ ಸಹಜರನು ಅಡವಿಯೊಳಗಿಟ್ಟೆ ||
ಬಳಲುವುದು ನೀನಿಂದು ಕೊಳುಗುಳದಿ ಜಯವೆಂತೊ | ತಿಳಿಯೆ ನಾ ನಳಿನಾಕ್ಷನೊಲವೆಂತೊ ನಿನಗೆ ||೧೬೩||

**ಭಾಮಿನಿ**

ರವಿಜನೆಂದುದ ಕೇಳ್ದು ಕೌರವ |
ಪವಿಧರನವೊಲ್ ಧೈರ್ಯದಲಿ ತಾ |
ವಿವಿಧ ವ್ಯಸನವ ಬಿಟ್ಟು ಕರ್ಣನ ಜರೆವುತಿಂತೆಂದ ||
ಅವಿಯ ಹೆಬ್ಬುಲಿಗಿತ್ತ ತೆರದೊಳ |
ಗಿವನ ರಿಪುಬಲದೊಳಗೆ ಸಿಲುಕಿಸು |
ತವನಿಗರ್ಪಿಸುತುಳಿದ ಷಡ್ರಥರಿದ್ದು ಫಲವೇನು || ೧೬೪ ||

ಕುರುಪತಿಯ ನುಡಿ ಕೇಳುತಲಿ ರವಿ | ತರಳ ಕೋಪದೊಳಾಗ ಧನು ಶರ |
ಕರದಿ ಪಿಡಿದಿಂತೆಂದ ಭೂಪತಿಯೊಡನೆ ಗರ್ಜಿಸುತ ||
ಧುರದೊಳಗೆ ದಾನವನ ಕೊರಳನು | ತರಿದ ಹೈಡಿಂಬಿಯನು ನೈಋತ ||
ಪುರಕೆ ಕಳುಹುವೆನೆಂದು ನಂಬಿಗೆಯಿತ್ತನಾ ಕರ್ಣ || ೧೬೫ ||

**ಕಂದ**

ಈ ಪರಿಯಲಿ ರವಿಜಂ ಕುರು |
ಭೂಪನ ಸಂತಯಿಸುತ ಜಯ ಧೈರ್ಯೋಕ್ತಿಗಳಿಂ ||
ದಾ ಪುರುಹೂತಸುತನ ಪ್ರ |
ತಾಪವ ನಿಲಿಸುವೆನೆಂದಾರ್ಭಟಿಸುತಯ್ತಂದಂ || ೧೬೬ ||

**ರಾಗ ಕೇದಾರಗೌಳ ಅಷ್ಟತಾಳ**

ಕಡು ಕೋಪದಿಂದಲಾರ್ಭಟಿಸಿ ವರೂಥವ | ನಡರಿ ಬರುವ ವೀರನ ||
ತಡೆದು ಘಟೋತ್ಕಚನಿದಿರು ನಿಲಿಸಿಕೊಂಡು | ನುಡಿಸಿದ ಸೂರ್ಯಜನ || ೧೬೭ ||

ಸೃಷ್ಟಿಯೊಳಗೆ ವೀರನೆಂದು ನಿನ್ನನು ಧೃತ | ರಾಷ್ಟ್ರನ ಸುತನು ತಾನು ||
ಇಷ್ಟರಾಜ್ಯವನಿತ್ತು ಸಲಹಿ ಧೈರ್ಯದಿ ನಂಬಿ | ಕೆಟ್ಟನೈ ಧುರದೊಳಿಂದು || ೧೬೮ ||

ಕೆಟ್ಟತನವು ನಿಮ್ಮ ದನುಜರೊಳಗೆ ದಿಟ | ದಿಟ್ಟೆ ನಿನ್ನಯ ಮಾತೆಯು ||
ಪುಷ್ಟ ಭೀಮಗೆ ಮರುಳಾಗುತಣ್ಣಗೆ ತನ್ನ | ಕೆಟ್ಟತನವ ತೋರ್ದಳು || ೧೬೯ ||

ಮೂಢ ಕೇಳೆಲೊ ಮಾತೆ ಭೀಮಾದಿಗಳಿಗೆ ನೀ | ನಾಡುವೆ ಕೆಡುಮಾತನು ||
ಕೇಡನರಿಯೆ ವೀರಪಾರ್ಥ ಕೇಳಲು ನಿನ್ನ | ಝಾಡಿಸಿ ಬಿಡುವ ನೋಡು || ೧೭೦ ||

ಹುಲ್ಲು ದಾನವ ಕೇಳಿನ್ನೊಂದು ಪೇಳುವೆ ಪಾರ್ಥ | ಬಿಲ್ಲುಮಂಗಳ ದಿನದಿ ||
ಬಲ್ಲವನ್ಯಾರೆಂದು ನೋಡಿ ನಮ್ಮನು ಮುಖ | ತಲ್ಲಣಿಸಿದನರಿಯೆ || ೧೭೧ ||

ಬಲ್ಲೆ ನಿನ್ನನು ಧನುರ್ಧರನೆಂದು ದ್ರುಪದನ | ಬಿಲ್ಲನೆತ್ತಲು ಕೂಡದೆ ||
ಫುಲ್ಲಲೋಚನೆಯನ್ನು ಬಿಟ್ಟೆ ಯುದ್ಧದಿ ಪಾರ್ಥ | ಕೊಲ್ಲದೆ ಬಿಟ್ಟನಲ್ಲೈ || ೧೭೨ ||

ಹಿಂದೆ ನಮ್ಮಯ ಕರಿಪುರದೊಡೆಯನ ಜರಾ | ಸಂಧ ನೃಪತಿಯ ತಾನು ||
ಬಂಧಿಸಿ ಕೊಂಡೊಯ್ಯೆ ಕಾಶಿದೇಶಕೆ ಪೋಗಿ | ಚಂದದಿ ಬಿಡಿಸಿದೆನೈ || ೧೭೩ ||

ಅಂಗಧೀಶನೆ ನಿನ್ನ ಕೂಡಿ ಕೌರವ ಕಾ | ಳಿಂಗಪುತ್ರಿಯ ವಿವಾಹ ||
ಭಂಗಿಸೆ ಮಗಧೇಶ ಕಟ್ಟೊಯ್ಯೆ ಭೀಮನು | ಹಿಂಗದೆ ಬಿಡಿಸಲಿಲ್ಲೈ || ೧೭೪ ||

ಹುಚ್ಚರಂದದಿ ಯುದ್ಧಮಧ್ಯದಿ ನೀ ಮಾತ | ನುಚ್ಚರಿಸುವುದೇತಕೆ ||
ಹೆಚ್ಚಿನ ಪೌರುಷ ಪಾರ್ಥ ಬಂದರೆ ಮತ್ತೆ | ಬೆಚ್ಚದೆ ತೋರಿಸುವೆ || ೧೭೫ ||

ಮಾಧವಸಖ ಪಾರ್ಥ ನಿನಗೇಕೊ ಮೂಢನೆ | ಕಾದಲು ತಾನಿರಲು ||
ಮೇದಿನಿಯೊಳು ಬಾಲರ್ ಚಂದ್ರನ ಬಯಸುವ | ಗಾದೆಯಂತಾಯಿತಲ್ಲೊ ||೧೭೬||

**ಭಾಮಿನಿ**

ಎಲೆ ಘಟೋತ್ಕಚ ಕೇಳು ಕಲಹದೊಳ್ |
ನೆಲನ ಪಾಲಾಗುವೆಯೊ ನಮ್ಮನು |
ಗೆಲುವ ಸಾಹಸವೆಲ್ಲ ನಿಲಿಸುವೆ ಘನಸಮರ್ಥಿಕೆಯ ||
ಗೆಳೆಯರಿದಿರಲಿ ವಿಶಿಖಶರಧಿಯೊಳ್ |
ಬಳಲುತಿರೆ ತಡೆಯುವರು ಯಾರೀ |
ಕೊಳುಗುಳದೊಳೆನುತೆಚ್ಚ ಕರ್ಣನು ಸ್ವರ್ಣಪುಂಖಗಳ || ೧೭೭ ||

**ರಾಗ ಭೈರವಿ ಏಕತಾಳ**

ಮತ್ತಾ ದಿನಪತಿಸುತನು | ಬಲು | ಯತ್ನದಿ ರಿಪುಸೇನೆಯನು ||
ಕತ್ತರಿಸುತ ವೇಗದಲಿ | ರಿಪು | ಮಸ್ತಕದಲಿ ಹೊಡೆಯುತಲಿ || ೧೭೮ ||

ಕತ್ತಲೆಯೊಳಗಟವಿಯಲಿ | ತಿರು | ಹುತ್ತಲೆ ತಾಪಸರಲ್ಲಿ ||
ಸತ್ವವ ತೋರ್ದುದನಲ್ಲಿ | ನಿಲಿ | ಸುತ್ತಿರ್ಪೆನು ಧುರದಲ್ಲಿ || ೧೭೯ ||

ಧೈರ್ಯದಿ ನಿನ್ನನು ನಂಬಿ | ದೊರೆ | ಕಾರ್ಯವ ಸಾಧಿಪೆನೆಂಬೀ ||
ಶೌರ್ಯವ ನಿಲಿಸುವೆನಿಲ್ಲಿ | ಕುರು | ಮರ್ಯಾದೆಯ ತೋರಿಲ್ಲಿ || ೧೮೦ ||

ಸೂತನ ಸುತ ಕೇಳಿನ್ನು | ಪುರು | ಹೂತನ ಸುತ ಧುರವನ್ನು ||
ಘಾತಿಪೆ ತಾನೆಂದೆನುತ | ಬರೆ | ಮಾತುಗಳಾಡಿದೆ ವ್ಯರ್ಥ || ೧೮೧ ||

**ರಾಗ ನೀಲಾಂಬರಿ ಅಷ್ಟತಾಳ**

ಎಲೆ ಘಟೋತ್ಕಚ ನಿನ್ನ ಶೌರ್ಯವ | ನೀಗ | ನಿಲಿಸುವೆನೆನುತಗ್ನಿ ಬಾಣವ ||
ಸೆಳೆದಾತಗಾಕ್ಷಣ ಬಿಡಲು | ದೈತ್ಯ | ಬಲವೆಲ್ಲ ಬೆದರಿತು ಭರದೊಳು || ೧೮೨ ||

ವಾಯುಜತರಳನು ಕೋಪಿಸಿ | ರಿಪು | ನಾಯಕರಿಗೆ ಬಾಣ ಮಂತ್ರಿಸಿ ||
ತೋಯಮಯವ ಮಾಡೆ ರಥಿಕರು | ಧನು | ಸಾಯಕಸಹಿತ ತೇಲಿದರು || ೧೮೩ ||

ಬೆದರದೆ ರವಿಜ ಭೈಮಿಯೊಳು | ಪೇಳ್ದ | ಕದನದಿ ನೋಡೀ ಚಿತ್ರಗಳು ||
ಇದ ನೋಡು ಗಿರಿಗಳ ಮಳೆಯ | ನೆಂ | ದೊದರಿ ಬಿಟ್ಟನು ಬಲು ಗಿರಿಯ || ೧೮೪ ||

ದಿಟ್ಟ ಸೂತಜನೆ ಕೇಳಿದನು | ನೀನು | ಬಿಟ್ಟ ಮಾರ್ಗಣ ಧುರದೊಳಿನ್ನು ||
ಬೆಟ್ಟದ ನಿಕರಕ್ಕೆ ನಾ ಪವಿ | ಶರ | ತೊಟ್ಟು ಕಡಿದೆ ನೋಳ್ಪುದೀ ಸವಿ || ೧೮೫ ||

**ವಾರ್ಧಕ**

ಅರಸ ಕೇಳಾದಿತ್ಯಸುತ ಭೀಮತನುಜರೀ |
ಪರಿಯಿಂದ ಕಾದುತ್ತಲಿರಲಾಗಲಂಬರದಿ |
ಸುರರೆಲ್ಲ ಬೆರಗಾಗಿ ಪರಿಮಳದ ಸುಮಗಳನು ಸುರಿದರೇನೆಂಬೆನದನು ||
ಪರಿಪರಿಯ ಶಸ್ತ್ರಾಸ್ತ್ರವೆಸೆದು ಸರಿಸಮದಿಂದ |
ಲಿರುತಾಗಲುದ್ರಿಕ್ತ ವಿದ್ವೇಷದಿಂದ ಕೇ |
ಸರಿಯವೋಲ್ ಹರಣಾಸೆ ಬಿಡುತವರು ತಮ್ಮೊಳಗೆ ಧುರನೆಲವು ತೋರದಿರಲು || ೧೮೬ ||

ಅತ್ತಲಾ ಕುರುವರನ ಸಖಶಿಖಾಮಣಿ ಕರ್ಣ |
ನೆತ್ತ ನೋಡಲು ಸುಭಟರ್ ನಾಲ್ದೆಸೆಯೊಳ್ ಕಾಣದಿರೆ |
ಕತ್ತಲೆಯು ಕುರುಭಟರ ಮೊತ್ತವನು ಮುಸುಕಲ್ಕೆ ಬಳಲುವುದ ಕಂಡಾಗಳು ||
ನೆತ್ತಿನೇತ್ರನ ತೆರದಿ ಕಿಡಿಗೆದರಿ ಕೋಪದೊಳು |
ವಿಸ್ತರಿಪ ಬಾಣಗಳನೆಡೆಬಿಡದೆ ತಡೆವೆನೆಂ |
ದೊತ್ತಿರಲು ದೈತೇಯಬಲವು ಕಾಣದೆ ತನ್ನ ಚಿತ್ತ ವಿಸ್ಮಯಗೊಳ್ಳಲು || ೧೮೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪೊಡವಿಗೊಡೆಯನೆ ಕೇಳು ಭೀಮನ | ಹುಡುಗ ಸೌಬಲಿಸುತನನುರೆ ಕಂ |
ಗೆಡಿಸಿ ಮಾಯದಿ ಮಾಂಸರುಧಿರವ | ಹೊಡೆದನಾಗ || ೧೮೮ ||

ಅಂತರಿಕ್ಷದೊಳಸುರ ಗಿರಿಗಳ | ನಿಂತು ಹೊಡೆದನು ರವಿಜಸೈನ್ಯಕೆ |
ನಂತರದಿ ಕಲ್ಮಳೆಯು ಸಿಡಿಲುಗ | ಳಂತೆ ತೋರ್ದ || ೧೮೯ ||

ಕಂಡು ಕಪಟದ ಯುದ್ಧದೊಳು ಜನ | ತಂಡ ಮರುಗಲು ರವಿಜ ಪೇಳಿದ |
ಪುಂಡ ಭೈಮಿಯ ಮಥಿಸದೀರ್ದಡೆ ಗಂಡುಸಹುದೇ || ೧೯೦ ||

ಬೊಬ್ಬಿರುವ ಸೈನಿಕಕೆ ಕೋಪದೊ | ಳುಬ್ಬಿ ಪೇಳ್ದನು ಭೀರುಜನರಿಂ |
ಗಬ್ಬರಿಸಿದನು ಬೆದರದಿರಿಯೆಂ | ದಾರ್ಭಟಿಸುತ || ೧೯೧ ||

ಧೀರನಾಗಿರೆ ನಿಲ್ಲು ಸಮ್ಮುಖ | ತೋರು ಸತ್ತ್ವವ ಕದನರಂಗದೊಳ್ |
ನಾರಿಯಂದದಿ ಮರೆಯ ಕದನವು | ವೀರಗೇಕೈ || ೧೯೨ ||

**ಭಾಮಿನಿ**

ಅಕ್ಷಯಾಸ್ತ್ರವ ಜಪಿಸಿ ರವಿಸುತ |
ಲಕ್ಷ್ಯನೋಡಲು ಕಾಣದಿರೆ ರಿಪು |
ಕಕ್ಷ ಬೆದರುವ ತೆರದಿ ಶರಗಳ ಪಸರಿಸುತಲಿರಲು ||
ವೃಕ್ಷಗಳ ತೆಗೆತೆಗೆದು ಬಡೆಯುವ |
ದಕ್ಷ ಭೀಮನ ತರಳನಂತ |
ರಿಕ್ಷದಲಿ ಸ್ಥಿತಿ ತೋರದಿರೆ ಬೆರಗಾಗುತಿಂತೆಂದ || ೧೯೩ ||

**ವಾರ್ಧಕ**

ಧರಣಿಪನೆ ದಾನವರ ಕುಲತಿಲಕಕನೀಪರಿಯ |
ಶರಮಳೆಯ ಧಿಕ್ಕರಿಸುತ ತೌಶನಸವಿದ್ಯದಿಂ |
ದುರುಮಾಯಮಂ ತಾಳಿ ಹರದಶ್ವಕುವರನಂ ಬೆರಗಿಸುವೆನೆಂದು ಮನದಿ ||
ಕುರುರಾಯವೇಷದಿಂದಾ ಬಲವ ಪೊಗುತಾಗ |
ವರರಥಿಕ ವೃಂದದಿಂದುದಯಾದ್ರಿಪೀಠದೊಳು ||
ಮೆರೆವ ಮಾರ್ತಾಂಡನಂತಿರುವ ಭಾಸ್ಕರಿಯ ಕುರುಧರೆಯೊಳಗೆ ಮೋಹಿಸಿದನು || ೧೯೪ ||

**ರಾಗ ಮುಖಾರಿ ಝುಂಪೆತಾಳ**

ಬಲಶಾಲಿ ರವಿಜ ಕೇಳ್ | ಬಳಲಿರುವೆ ಬಹುಪರಿಯ | ಕಲಹದೊಳಗೀಗ ದೈತ್ಯನಲಿ ||
ಚೆಲುವ ಚಂದ್ರಾನ್ವಯದಿ | ಜನಿಸಿರುವ ಕುರುಕುಲಕೆ | ಬಳಗ ನೀನೆಂದು ನಂಬಿದೆನು || ೧೯೫ ||

ಈಗ ಕೇಳುವುದೆನ್ನ | ಭಾಷಣವ ನಿಜವು ನೋಡ್ | ಸಾಗದೀ ಕದನ ಪಾರ್ಥರೊಳು ||
ಬೇಗದೊಳ್ ಕರೆದೀಗ | ಸಾನುರಾಗದಿದಾಯ | ಭಾಗ ಧರ್ಮಜಗೆ ಕೊಟ್ಟವನ || ೧೯೬ ||

ಮನ್ನಿಸುವೆನವನ ಕೇ | ಳಿನ್ನು ವೈರವ ಬಿಟ್ಟೆ | ಘನ್ನತಿಕೆಗಳ ತೋರಿಸುವಡೆ ||
ಎನ್ನ ಯತ್ನಗಳಿಲ್ಲ | ಇನ್ನು ಜಯವೆಂತಿಹುದೊ | ಮುನ್ನ ಸಂಧಾನವೇ ಲೇಸೈ || ೧೯೭ ||

ಕರೆಸು ಧರ್ಮಜನ ಕೈ | ಸರಿಸು ಯುದ್ಧವು ಬೇಡ | ಧರೆಯ ಕೊಡಿಸುವೆನೆಂದು ನುಡಿಯೆ ||
ಗಿರಿಯ ಮೇಲೆಸದಿರ್ಪ | ಪವಿಯ ಪೋಲ್ ಕಿಡಿಗೆದರಿ | ದೊರೆಯೊಡನೆ ಕೋಪಿಸುತ ಪೇಳ್ದ || ೧೯೮ ||

**ಭಾಮಿನಿ**

ಕಡಲತನುಜಾನ್ವಯದ ಕೇಸರಿ |
ನುಡಿವೆಯಾ ಸಂಗರದಿ ನಮ್ಮಯ |
ಷಡುರಥರ ವೃಂದವನು ಬಹುಪರಿ ಪುಡಿಯಗಯ್ದಿರ್ಪ ||
ಕಡು ವಿರೋಧಿಗಳೊಡನೆ ಕಲಹವ |
ಬಿಡುವೆನೆಂಬೀ ತೆರದ ನಿನ್ನಯ |
ನಡತೆ ಸಲ್ಲದು ಧುರದಿ ಮಾರ್ಗಣ ತೊಡುವನಲ್ಲಿನ್ನು || ೧೯೯ ||

ಧರೆದೊರೆಯೆ ಕೇಳಿತ್ತ ದನುಜಪ |
ರರಸ ಮಾಯದಿ ಮೋಹಿಸಲು ದಿನ |
ಕರತರಳ ಧುರಕಂಕಣವ ಕುರುವರಗೆ ಬಿಸುಟೆಂದ ||
ಸುರನದಿಜ ಸೈಂಧವನು ಮುಂತಾ |
ಗಿರುವ ಷಡುರಥರೆಲ್ಲ ಪೋದರು |
ಧುರದಿ ಪೊರೆವೆನುತಾಗ ಶೌರ್ಯದೊಳ್ಮೆರೆದು ಫಲವೇನು || ೧೦೦ ||

**ರಾಗ ನೀಲಾಂಬರಿ ರೂಪಕತಾಳ**

ಸೂರ್ಯಸುತನು ಬಲು | ಕೋಪಿಸಿ ಭೂಪನ |
ಕಾರ್ಯದಿ ಮೋಹಿಸಿ | ನಡೆಯೆ ದಾನವನು || ೧೦೧ ||

ಬಂದು ನೋಡುತ್ತ ರವಿ | ಕಂದ ಯುದ್ಧವ ಬಿಟ್ಟ |
ನೆಂದು ಮನದಿ ಸಾಂದ್ರ | ನಂದವ ಪಟ್ಟ || ೧೦೨ ||

ಜಗಳ ಜಯಿಸಿದ ಧೊರೆ | ಯೆಂದಾಗ ಮಾರ್ಬಲವು |
ಸೊಗಸಿನಿಂದಲಿ ಜಯ | ಭೇರಿ ಬಡೆದವು || ೧೦೩ ||

ಮೋದದ ನಿನದವ | ಕೇಳುತ ಕುಂಭಜನು |
ಮೇದಿನೀಶನ ಕೇಳ್ದ | ಜಯದ ಬೀಜವನು || ೧೦೪ ||

ಅರಿಯೆ ನಾನಿದನೆಂದು | ಕುರುರಾಯ ಭಯದಿಂದ |
ಮರುಗುತ್ತ ರವಿಜನ | ಹುಡುಕಲೀಕ್ಷಿಸಿದ || ೧೦೫ ||

ನೋಡಲು ರವಿಜ ಸೈ | ನ್ಯದಿ ಕಾಣದಿರುತಿರಲ್ |
ರೂಢಿಪ ವಿಪ್ರರು | ನಡೆದರ್ ಶಿಬಿರಕೆ || ೧೦೬ ||

ಸಡಗರದಿಂದಲಾ | ಜಡಜಾತಬಾಂಧವನ |
ಹುಡುಗನೆಡೆಗೆ ಬರೆ | ಮಲಗಿರಲವನ || ೧೦೭ ||

ಪಿಡಿದು ಕೌರವನೆಬ್ಬಿ | ಸಲು ಏಳದಿರುತಿರಲ್ |
ಕೊಡನ ತರಳ ನೀ ನೊಂ | ದೆಯೊ ಪೇಳೆನಲು || ೧೦೮ ||

**ಭಾಮಿನಿ**

ಕಿಡಿಗೆದರಿ ಕೋಪದಲಿ ರವಿಸುತ |
ಸಿಡಿಲಗರ್ಜನೆಯಂತೆ ವಿಪ್ರನೊಳ್ |
ನುಡಿದನೆಮ್ಮನು ಜರೆವುದೇಕೈ ಕಡು ವಿರೋಧಗಳ ||
ಬಿಡುವೆ ಪಾಂಡವರೊಡನೆ ಹಿತದಲಿ |

ಕೊಡುವೆ ಮೇದಿನಿಭಾಗವನುಯೆಂ |
ದೊಡೆಯ ಪೇಳ್ದುದರಿಂದ ಯುದ್ಧವು ಸಡಲಿಸಿರಲಾಯ್ತು || ೧೦೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನ ಪೇಳುವೆ ಬರಿದೆ ಭ್ರಮಿಸಿದೆ | ವಾಣಿಯಹುದೇ ಬಿಡು ಬಿಡಾ ನುಡಿ |
ಕ್ಷೊಣಿ ಪಾಂಡವರಿಂಗೆ ಕೊಡುವೆನೆ | ಭಾನುಕಂದ || ೧೧೦ ||

ಕನಸು ಕಂಡವನಂತೆ ನುಡಿವೆಯೊ | ಸನುಮತಿಯು ತನಗಾಪುದೇ ಯಮ |
ತನುಜರಲಿ ಸೌಹಾರ್ದ ಬರುವುದೆ | ರಣದ ನಡುವೆ || ೧೧೧ ||

ಕಲಶಜನು ಯೋಚಿಸುತ ಪೇಳಿದ | ನಿಳೆಯಪಾಲನೆ ಕೇಳು ಪಾಂಡವ |
ಬಳಗ ರಕ್ಕಸ ಗೆಯ್ದ ಮಾಯದ | ಬಲುಮೆಯಹುದೈ || ೧೧೨ ||

ಭೇದಬುದ್ಧಿಯು ಜನಿಸಿ ನಮ್ಮೊಳಗಾದುದೀ ತೆರವೆಂದು ಪೇಳಲು |
ಮೇದಿನೀಶನು ಮರುಗೆ ರವಿಜನು | ಕಾದಲೆದ್ದ || ೧೧೩ ||

**ವಾರ್ಧಕ**

ಕ್ಷೊಣಿಪನೆ ಕೇಳಾಗ ರಾಧೇಯ ರೋಷದೊಳು |
ಬಾಣಚಯ ಧನುಶರವ ಕೊಂಡೇಳೆ ಭೂಸುರನು |
ಧ್ಯಾನಿಸುತ ಪೇಳಿದನು ಸಾನುರಾಗದೊಳರ್ಕಸೂನುವಿನ ಸಮ್ಮೇಳದಿ ||
ಮಾನನಿಧಿ ಕೇಳ್ ನೀನು ದಾನವನ ಸಾಹಸಗ |
ಳಾಣೆಶರಗಳ ತೊಟ್ಟು ಕಾಣಗೊಡದಂತೆ ನೀ |
ಶಾಣೆತನ ತೋರ್ದಾಗ ತಾನು ಬಾರದೆ ಧುರದ ಕ್ಷೊಣಿ ಬಿಡಲಾಗದೆಂದ || ೧೧೪ ||

**ಭಾಮಿನಿ**

ಸೇನೆಗೊಡೆಯನ ನುಡಿಯ ಕೇಳುತ |
ಭಾನುತನುಜನು ಸನುಮತದಿ ರಿಪು |
ಚೂಣಿಸಮ್ಮುಖಕೆಂದು ಪೊರಡಲು ಆ ನರಾಶನಿಯು |
ಮಾನವರ ದೃಕ್ಪಥಕೆ ಮಾಯದಿ |
ಕಾಣಗೊಡಿಸದೆ ಕೇಳುತಲಿ ಧುರ |
ಕಾನುವರೆ ನಿಶಿಯೊಳಗೆ ಮಾನವರೆಂದು ಯೋಚಿಸಿದ || ೧೧೫ ||

**ರಾಗ ಮಾರವಿ ಏಕತಾಳ**

ದಿನನಾಥನ ಸುತ ಧನುವೆತ್ತುತಲರಿ | ಸನುಮುಖಕಯ್ತಂದು ||
ದನುಜನೊಳರುಹಿದನಂದಿನ ಮಾಯವ | ಸೆಣಸಿ ತೀರ್ಚುವೆನೆಂದು || ೧೧೬ ||

ಸೆಣಸುವ ಸಾಹಸ ನಿಲಿಸುವೆ ನಾ ಮುಂ | ದಣದಾಹವದೊಳಗೆ ||
ಎಣೆಗಾರರು ತ್ರಿಭುವನದೊಳಗಂಧಕ | ನಣುಗನಿಗಿನ್ಯಾರೈ || ೧೦೭ ||

ಬಾಯಬಡಿಕತನವೇತಕೆ ನಿನ್ನನು | ಕಾಯ್ವರ ಕರೆಸೆಂದು ||
ಘಾಯವಡದ ಹುಲಿಯಂದದಿ ಬಹುತರ | ಸಾಯಕ ಬಿಡುತೆಂದ || ೧೦೮ ||

ಭೂರಿ ಶರಗಳುರಿಗಾಪಿಶಿತಾಶನ | ಪಾರಗೊಳದೆ ಭರದಿ ||
ಹೇರಂಬನ ಪಿತನಿತ್ತಿಹ ಶಕ್ತಿಯ | ನಾರುಭಟಿಸುತೆಚ್ಚ || ೧೦೯ ||

**ಭಾಮಿನಿ**

ಬರುವ ಶತಯೋಜನದ ಶಕ್ತಿಯ |
ತರಣಿತನಯನು ಕಂಡು ಧೈರ್ಯದಿ |
ಶರಧಿಗರ್ಭದೊಳಿಪ್ಪ ಬಡಬಾನಲವೆ ಬರುತಿಹುದೊ ||
ಪರಿ ಪರಿಯ ಯೋಚನೆಯ ಗೆಯ್ಯುತ |
ತಿರುಗಿ ತನ್ನೊಳಗರಿಯ ಶರವೆಂ |
ದರಿತು ರಥದೊಳಗಡರಿ ಪಿಡಿದನು ಕರದೊಳೇನೆಂಬೆ || ೧೧೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶಕ್ತಿಯನು ಪಿಡಿದಾಗ ಕರ್ಣನು | ಚಿತ್ತದಲೆ ಧೃತಿಗೊಂಡು ಭೀಮನ |
ಪುತ್ರನಿಗೆ ಮಗುಳೆಸೆದ ತನ್ನಯ | ಸತ್ವದಿಂದ || ೧೧೧ ||

ಬಂದು ಶಕ್ತಿಯು ಭೈಮಿಯೇರಿದ | ಸ್ಯಂದನವ ಪುಡಿಗೆಯ್ಯೆ ರಥಿಕರ |
ವೃಂದ ನಡನಡುಗುತಿರೆ ಕಾಣುತ | ಲಂದುಭಟನು || ೧೧೨ ||

ಸಾಯಕವಗೊಂಡಾಗ ವಿವಿಧೋ | ಪಾಯದಲಿ ಶಕ್ತಿಯನು ವಂಚಿಸಿ ||
ವಾಯುಮಾರ್ಗದಿ ಚರಿಸಿದನು ಖಗ | ರಾಯನಂತೆ || ೧೧೩ ||

ಇರಲು ಭಾಸ್ಕರಭವನು ಮಾಯದ | ಪರಿಯನರಿಯದೆ ಹರುಷಗೊಳ್ಳುತ |
ಲರಿಜಯವು ತನಗಾಯಿತಿಂದಿನ | ಧುರದೊಳೆಂದು || ೧೧೪ ||

ಈ ತೆರದಿ ಭಾವಿಸುತ ಭಾಸ್ಕರ | ಜಾತನಿರುತಿರಲಿತ್ತ ಭೈಮಿಯು |
ವಾತಪಥದಲಿ ನಿಂತು ಬಹುಶರ | ವ್ರಾತವನ್ನು || ೧೧೫ ||

ಬಿಟ್ಟು ರಥಿಕರನಟ್ಟಿದನು ಸುರ | ಪಟ್ಟಣಕೆ ನಿಮಿಷಾರ್ಧದಲಿ ಜಗ |
ಜಟ್ಟಿ ಪಾಂಡವರಿಷ್ಟ ಗೆಯ್ದನು | ದಿಟ್ಟತನದಿ || ೧೧೬ ||

**ಭಾಮಿನಿ**

ಅಂಗುಳದ ದೇಹಗಳು ವಿಧವಿಧ |
ದಂಗಗಳ ಧರಿಸುತಲಿ ನೋಳ್ಪರ |
ಕಂಗಳಿಗೆ ಭಯ ಜನಿಸಿತಾ ರಣರಂಗದೊಳಗಂದು ||
ಅಂಗನೃಪತಿಯು ಕಂಡು ನಿಜ ಸ |
ರ್ವಾಂಗ ಪುಳಕಿತನಾಗಿ ವರನೂ |
ರಂಗವೇರುತ ದಿವ್ಯತ್ವಾಷ್ಟ್ರಾಸ್ತ್ರವನು ಬಿಡುತೆಂದ || ೧೧೭ ||

**ರಾಗ ನೀಲಾಂಬರಿ ರೂಪಕತಾಳ**

ಎಷ್ಟು ಭಾರಿ ಖಳನ ಮಾಯ | ದಟ್ಟುಳಿಯನು ತೆಗೆವೆನೆನುತ |
ತ್ವಾಷ್ಟ್ರ ಶರವ ಬಿಡಲು ನಮ್ಮ | ನಟ್ಟಿ ಬರುವನು ||
ತ್ವಾಷ್ಟ್ರಶರವ ಬಿಡಲು ನಮ್ಮ | ನಟ್ಟಿ ಬರುವ ಭೈಮಿಯನ್ನು |
ಸೃಷ್ಟಿಯೊಳಗೆ ಗೆಲುವನ್ಯಾವ | ದಿಟ್ಟನಿರುವನು || ೧೧೮ ||

ಮುನ್ನ ಕುರುಕುಲೇಶ ಭೂಮಿ | ಯನ್ನು ಬಯಸಿ ಪ್ರೇಮದಿಂದ |
ಎನ್ನ ನಂಬಿದವನ ಭಾಷೆ | ಯನ್ನು ಸಲಿಸದೆ ||
ಎನ್ನ ನಂಬಿದವರ ಭಾಷೆ | ಯನ್ನು ಸಲಿಸದೀಗ ಭಾರ್ಗ |
ವನ್ನ ಸೇರಿ ಕಲಿತ ವಿದ್ಯ | ತಣ್ಣಗಾಯಿತೆ || ೧೧೯ ||

ಭಾರಿ ಭಾರಿ ಸಾರಶರವ | ಭೂರಿ ಜಪಿಸಿ ಬಿಡಲು ದೈತ್ಯ |
ಸೂರೆಗೊಂಡನೆಂತು ಜಯದ | ಪಾರ ದೊರೆವುದೆ ||
ಸೂರೆಗೊಂಡನೆಂತು ಧುರದ | ಪಾರ ದೊರೆವುದಲ್ಲದೀಗ |
ಧೀರನಾಗಿ ಕದನ ಬಿಟ್ಟಿ | ನ್ಯಾರ ಸೇರಲಿ || ೧೨೦ ||

ಎಲ್ಲಿ ನೋಡಲಿಲ್ಲ ವೈರಿ | ಬಿಲ್ಲುಧ್ವನಿಯ ಗೆಯ್ವನಲ್ಲಿ |
ಕೊಲ್ಲಲಿವನು ಮಡಿವನಲ್ಲ | ಹುಲ್ಲುಶರದಲಿ ||
ಕೊಲ್ಲಲಿವನು ಮಡಿವನಲ್ಲ | ಬಲ್ಲಿದವನು ತಾನೆನುತ್ತ |
ನಿಲ್ವೆನಲ್ಲದೀಗ ಧುರವು | ಸಲ್ಲದಿವನೊಳು || ೧೨೧ ||

ಯುಕ್ತಿಯೊಳಗೆ ರಿಪುವ ಗೆಲಿವ | ಹೊತ್ತಿದಲ್ಲ ದಿಟವು ದೈತ್ಯ |
ತುತ್ತುಗೊಂಬನೇನೊ ಬಹಳ | ಶಕ್ತಿಯಿಂದಲಿ ||
ತುತ್ತುಗೊಂಬನೇನೊ ಬಹಳ | ಶಕ್ತಿಯಿಂದ ಖಳನ ಗೆಲಲು |
ಕೃತ್ತಿವಾಸಗಾದಡೊಮ್ಮೆ | ಸತ್ತ್ವಸಾಲದು || ೧೨೨ ||

**ಭಾಮಿನಿ**

ಇಂತೆನುತ ರಣನೆಲದಿ ಚಿಂತಿಸಿ |
ಪಂಥ ತಾ ಬಿಡೆನೆಂದು ರವಿಜನು |

ನಿಂತಿರಲು ದೈತೇಯ ಮಾಯವನಾಂತು ನಡೆತಂದು ||
ಸಂತಸದಿ ಶರಪಂಡಿತಾಕೃತಿ |
ಯಂತೆ ತೋರಿಸುತರ್ಕಸುತ ತಾ |
ನಿಂತ ಬಳಿಗಯ್ತಂದು ಮೋಹಿಸುತೆಂದನವನೊಡನೆ || ೧೩೩ ||

**ರಾಗ ಕೇದಾರಗೌಳ ಅಷ್ಟತಾಳ**

ಭಾನುಜ ಕೇಳ್ ಕುರು ಸೇನೆಯೊಳಗೆ ನಿನ | ಗಾನುವರುಂಟೆ ನೋಡು ||
ದಾನವನೊಳು ಸರಿಸರಿ ಕದನದಿ ಬಹು | ಮಾನ ಪಡೆದೆ ಜಗದಿ || ೧೩೪ ||

ಕಂಡು ಕಪಟಯುದ್ಧದಿಂದ ನಮ್ಮಯ ಧುರ | ಬಂಡಾಯಿತಯ್ಯ ನೋಡು ||
ಚಂಡ ದಾನವ ಮಾಯದಿಂದಲಿಂದ್ರನ ಶಕ್ತಿ | ಕೊಂಡೊಯ್ವನೆಂದರಿತು || ೧೩೫ ||

ಬಂದೆ ನಿನ್ನೆಡೆಗೆ ನಾನಿಂದುಶೇಖರನಾಣೆ | ಸಂದೇಹಿಸದೆ ಶಕ್ತಿಯ ||
ಇಂದೆನ್ನೊಳಿತ್ತರೆ ದನುಜನ ಜಯದ ಮೇಲ್ | ತಂದುಕೊಡುವೆ ದಿಟವು || ೧೩೬ ||

ನುಡಿದ ಮಾತಿಗೆ ರವಿತರಳ ಸಂಶಯಗೊಳ್ಳೆ | ಕಡುಕೋಪದಿಂದಲಾಗ ||
ನಡೆವೆ ನಾನೆನುತೇಳಲ್ ಮೋಹಿಸುತಲಿ ವೀರ | ತಡೆಯೆ ಕಪಟ ವಿಪ್ರನ || ೧೩೭ ||

ಮಾಯಾಸಂಗರದಲ್ಲಿ ಮತಿಗೆಟ್ಟು ಮಲಗಿರ್ಪ | ರಾಯರ ನೋಡುತಲಿ ||
ವಾಯ ತಪ್ಪಿತು ಧುರದೊಳಗೆನುತಲಿ ಕುರು | ರಾಯ ಕರ್ಣನ ಬಳಿಗೆ || ೧೩೮ ||

ಬರುತ ಕರ್ಣನ ಕಂಡು ಪಿಡಿದಪ್ಪಿ ಪೇಳ್ದನು | ದುರುಳ ಮಾಯದಿ ನಮ್ಮಯ ||
ವರರಥಿಕರನೆಲ್ಲ ಶರಮಳೆಗರೆದೀಗ | ಬೆರಗು ಮಾಡಿದನಿಂದಿಲಿ || ೧೩೯ ||

ಗೆಲ್ಲಲಿವನ ಪೂರ್ವದಲಿ ಶಚಿಯ ಧವ | ಗಲ್ಲಿ ಕವಚ ಕುಂಡಲ ||
ಎಲ್ಲ ಕೊಡುತ ತಂದ ಬಲ್ಲಿದ ಶಕ್ತಿಯ | ಬಿಲ್ಲಿನೊಳ್ತೊಡು ಬೇಗದಿ || ೧೪೦ ||

ಪಾರ್ಥಗಿಟ್ಟಿಹಶಕ್ತಿ ಬಿಡೆನನ್ಯರಿಗೆ ಕುರು | ಸಾರ್ಥದೊಡೆಯ ಕೇಳಯ್ಯ ||
ತೀರ್ಥಯಾತ್ರೆಗೆ ಪೂರ್ವದೊಳಗೊಬ್ಬ ಚಕ್ರಿಯ | ನರ್ಥಕ್ಕೆ ಮಾರಿದಂತೆ || ೧೪೧ ||

**ಭಾಮಿನಿ**

ಕೇಳುತಲಿ ಕೃತ್ರಿಮದ ಭೂಸುರ |
ಮೇಲುವರಿದುದು ಕಾರ್ಯವೆನುತಲಿ |
ಗೋಳುಗುಡಿಸುವೆ ಕರ್ಣ ಕುರುನರಪಾಲರೊಳಗೆಂದು ||
ಕಾಳಗದಿ ಕಲಿಕರ್ಣ ನಿನ್ನಯ |
ಸೋಲುಗೊಡಿಸುವೆನೆಂದು ಬಂದಿಹ |
ಖೂಳನಿವನಾಡಿದುದ ಕೇಳದೆ ಕೊಡುವುದೆನಗೆಂದ || ೧೪೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕಪಟ ವಿಪ್ರನ ನುಡಿಯ ಕೇಳುತ | ತಪನಸುತ ಬಂಧಿಸುತ ಭ್ರುಕುಟಿಯ |
ಕುಪಿತನಾಗುತ ಕುರುಕುಲೇಶಗೆ | ವಿಪುಲಹತಿಯ || ೧೪೩ ||

ಕೊಡಲು ಕಂಗೆಡುತಾಗ ಕೌರವ | ನುಡಿದನೆಲೆ ರಾಧೇಯ ನಮ್ಮನು |
ಬಡಿವೆ ಏತಕೆ ನಿಜವನರಿಯದೆ | ತಡೆತಡೆನುತ || ೧೪೪ ||

ಅಂಗರಾಜ್ಯವನಿತ್ತುದಕೆ ನ | ಮ್ಮಂಗವನು ಪುಡಿಗೆಯ್ದೆ ಸಾಕೆಂ |
ದಂಗುಲಿಯ ಮುಖಕಿಡುತ ನುಡಿದನು | ತ್ತುಂಗರವದಿ || ೧೪೫ ||

ಆ ಮಹಾಧ್ವನಿ ಕೇಳುತಶ್ವ | ತ್ಥಾಮ ಬಂದಾ ಕ್ಷಣದಿ ಸಂಗರ |
ಭೂಮಿಯಲಿ ಕೌರವನ ಬಿಡಿಸಲು | ದ್ದಾಮ ಬಲನು || ೧೪೬ ||

**ಭಾಮಿನಿ**

ಅರುಹಿದನು ಕುರುದೊರೆಯ ದ್ರೋಣನ |
ತರಳನೊಳಗಾ ವೇಳ್ಯದಲಿ ತಾ |
ಮರುಗುತಲಿ ಸಖ ಕರ್ಣನೆನ್ನನು ಬರಿದೆ ಬಡಿದಿರ್ಪ ||
ದುರುಳ ರಕ್ಕಸ ನಿಮ್ಮ ಜನಕನ |
ತೆರದಿ ವೇಷವ ಧರಿಸುತೆನ್ನನು |
ತರಣಿಜಾತಗೆ ಕಪಟದೊರೆಯೆಂದೊರೆದು ಮೋಹಿಸಿದ || ೧೪೭ ||

**ರಾಗ ಮೆಚ್ಚು ಅಷ್ಟತಾಳ**

ಕುರುಪತಿನುಡಿಯನ್ನು ಕೇಳುತ್ತ | ದ್ವಿಜ | ವರನತಿರೋಷವ ತಾಳುತ್ತ ||
ಬರಲು ಕಪಟ ವಿಪ್ರನೆಡೆಗಿತ್ತ | ಕಂಡು | ಬೆರಗಾದ ಭೈಮಿಯು ನಡುಗುತ್ತ || ೧೪೮ ||

ತವಕದಿ ಕರವನ್ನು ಪಿಡಿಯಲು | ದೈತ್ಯ | ರವಗೆಯ್ದು ನಿಜವೇಷ ತಾಳಲು ||
ಅವನಿಸುರನು ಪೇಳ್ದನವನೊಳು | ಮಿತ್ರ | ತವ ಜನಕನು ಯುದ್ಧ ಬೇಡೇಳು || ೧೪೯ ||

ಕಮಲಿನಿಕಂದನು ಪೇಳ್ದನು | ರಿಪು | ಕುಮತಿ ಕೌರವ ನಿಮ್ಮ ಒಡೆಯನು ||
ಭ್ರಮಿತದ ನುಡಿಗಳು ಬೇಡೀಗ | ಯುದ್ಧ | ಕ್ರಮವಾಗಿ ಮಾಡು ನಮ್ಮೊಳು ಬೇಗ || ೧೫೦ ||

ಅಶ್ವತ್ಥಾಮನು ಕೇಳಿ ಕೋಪದಿ | ಪೃಷ | ದಶ್ವಮೊಮ್ಮಗನಿಗೆ ಬೇಗದಿ ||
ಉಶ್ವಾಸ ಬಿಡುತ ಮುಷ್ಟಿಯೊಳು | ರಾಕ್ಷ | ಸೇಶ್ವರನುರಕಾಗಿ ಹೊಡೆಯಲು || ೧೫೧ ||

ರಾಕ್ಷಸ ಕೂಗಿದ ಭರ ಕೇಳಿ | ಕುರು | ಪಕ್ಷವೆಲ್ಲವು ಬೆಚ್ಚಿ ಭಯದಲ್ಲಿ ||
ದಕ್ಷ ದ್ರೋಣನು ಬರೆಪುತ್ರನು | ನೋಡು | ತಾ ಕ್ಷಣ ಧುರ ಬಿಟ್ಟು ಪೋದನು || ೧೫೨ ||

ಕಡುಕೋಪದಿಂಲಾರ್ಭಟಿಸುತ್ತ | ರಿಪು | ಕಡೆಯ ಭಟರನೆಲ್ಲ ಬಡಿಯುತ್ತ ||
ಫಡಫಡಯೆನುತಾಗ ಮಾಯದಿ | ನಭ | ಕಡರಿ ಪೋದನು ದೈತ್ಯ ನಿಮಿಷದಿ || ೧೫೩ ||

ಹೊಡೆಯಲು ಗಿರಿಮರರಾಶಿಯ | ಕುರು | ಕಡೆಯ ಜನರು ಕಯ್ಯ ಜ್ವಾಲೆಯ ||
ಬಿಡುತೆಲ್ಲರೋಡಲು ಭಯದಲ್ಲಿ | ರಣ | ಪೊಡವಿ ತೋರದು ಗಾಢ ತಮದಲ್ಲಿ || ೧೫೪ ||

ಕೊಡನ ಕುವರ ಕುರುರಾಯರು | ಈರ್ವ | ರೊಡಗೂಡಿ ರವಿಜಗೆ ಪೇಳ್ದರು ||
ತಡೆಯಲಾರೆವು ದೈತ್ಯ ಬಾಧೆಯ | ನೀಗ | ತೊಡು ಬೇಗದಿಂದ್ರನ ಶಕ್ತಿಯ || ೧೫೫ ||

**ಭಾಮಿನಿ**

ಫಲುಗುಣನ ಧುರಕೆಂದು ನಾನದ |
ನೊಲವಿನೊಳಗಿಟ್ಟಿಹೆನು ಬಿಡೆನೆಂ |
ದಿಳೆಯಪಾಲನೊಳರುಹೆ ಮಗುಳಾ ದ್ರೋಣನಿಂತೆಂದ ||
ಕಲಹದೊಳಗಿವನಲ್ಲಿ ದೇಹವ |
ನುಳುಹಿ ಮೇಲರ್ಜುನನ ಗೆಲುವೆವು |
ಛಲವು ಬೇಡಿಂದಿನಲಿ ತೆಗೆತೆಗೆ ದಿವ್ಯ ಶಕ್ತಿಯನು  || ೧೫೬ ||

**ರಾಗ ಭೈರವಿ ಝಂಪೆತಾಳ**

ಕ್ಷೆಣೀಶ ಕೇಳಿನಿತು | ಬಾಣಪಂಡಿತನೆಂದ | ವಾಣಿಯನು ಕೇಳಿ ನಿಜ | ಪ್ರಾಣದಂತಿರುವ || ೧೫೭ ||

ಶಕ್ತಿಯನು ತೆಗೆದಾಗ | ಮಿತ್ರಸುತ ಬೇರೇನು | ಯುಕ್ತಿ ಕಾಣದೆ ಭೀಮ | ಪುತ್ರಗಿದಿರಾದ || ೧೫೮ ||

ಪಾರ್ಥಗಿಟ್ಟಿಹ ಶಕ್ತಿ | ವ್ಯರ್ಥವಾಯ್ತೀ ಘೋರ | ರಾತ್ರಿಚರನಿಂದೆನುತ | ಲೆತ್ತಿ ಬಿಡಲಂದು || ೧೫೯ ||

**ಭಾಮಿನಿ**

ಅಂಬರದಿ ಜ್ವಲಿಪರ್ಕಸಾವಿರ |
ಬಿಂಬದಂದದೊಳುರಿಯುತಲಿ ಹೈ |
ಡಿಂಬಿಯನು ಸಿಡಿಲೆರಗಿದಂದದಿ ಬಡಿಯಲಾ ಶಕ್ತಿ ||
ಭೊಂಭೆನುತ ನಳಿನಾಕ್ಷ ನಗುತಲಿ |
ಕಂಬುಧ್ವನಿಯನು ಗೆಯ್ಯುತಿರೆ ಕುರು |
ಕುಂಭಿನೀಶನ ಬಲವ ಪುಡಿಗೆಯ್ದಿದನು ಹೈಡಿಂಬಿ  || ೧೬೦ ||

**ರಾಗ ನೀಲಾಂಬರಿ ಆದಿತಾಳ**

ಖ್ಯಾತ ದನುಜ ಧುರದೊಳರ್ಕ | ಜಾತ ಶಕ್ತಿಗೆರಗೆ ||
ಪಾರ್ಥ ಶೋಕದಿಂದ ಮರುಗಿ | ನಾಥಹರಿಗೆ ಪೇಳ್ದ  || ೧೬೧ ||

ತರಳನಭಿಮನ್ಯುವಿಗೆ ಸಮನು | ಧುರದಿ ಭೀಮಸುತನು ||
ಪರಮಪುರುಷನಿವನನುಳಿಸ | ದಿರುವ ಶೌರ್ಯವೇಕೆ || ೨೬೨ ||

ಅಟವಿಯೊಳಗೆಯಿರಲು ತಾನು | ನಿಟಿಲನೇತ್ರನೆಡೆಗೆ ||
ಹಠದಿ ಪೋಗಲಿವನು ಬಂದು | ಕಟಕ ಸಲಹಿದವನು || ೨೬೩ ||

ಇಂಥ ಭಟನ ಬಿಟ್ಟು ಧುರದಿ | ಪಂಥ ನಮಗಿನ್ಯಾಕೈ ||
ಕಂತುಪಿತನೆ ರಣವಿನ್ನ್ಯಾಕೆ | ಎಂತು ಸಹಿಪೆ ಹರಿಯೆ || ೨೬೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶೋಕಿಸುವ ಪಾರ್ಥರನು ಕಾಣುತ | ಲೋಕನಾಯಕ ನುಡಿದ ನಿಮ್ಮೊಳು |
ಪಾಕಶಾಸನಿಯುಳಿದ ನಿಮಗಿ | ನ್ನೇಕೆ ದುಗುಡ || ೨೬೫ ||

ಕೇಳಿರುವೆನೀ ದುರುಳ ಮುನಿಗಳ | ಗೋಳುಗುಡಿಸಿದನೆಂದು ನಿಮ್ಮಯ |
ಪಾಳಯಕೆ ಬಹನೆಂದು ಬಿಟ್ಟೆನು | ಜಾಲವಲ್ಲ || ೨೬೬ ||

ಇಂದಿವಗೆ ಫಲವಾಯ್ತು ಪರಮಾ | ನಂದಗೊಳಿರೆಂದೆನುತ ಪೇಳಿದ |
ಮಂದರವನೆತ್ತಿರುವ ಶ್ರೀಗೋ | ವಿಂದ ನಗುತ || ೨೬೭ ||

**ಮೊದಲನೆಯ ಸಂಧಿ ಮುಗಿದುದು**

**ಎರಡನೆಯ ಸಂಧಿ**

**ದ್ವಿಪದಿ**

ಭೂಮಿಪತಿ ಕೇಳಿಂತು ರಾತ್ರಿಯುದ್ಧದಲಿ | ಭೈಮಿಕಾಯವು ಬೀಳೆ ಬಲದ ಮಧ್ಯದಲಿ || ೨೬೮ ||

ಕಂಡು ಕೌರವ ಹರುಷಗೊಂಡು ನಗುತಿರಲು | ಪಾಂಡವರ ಬಲ ದುಗುಡದಿಂದಲಿರುತಿರಲು || ೨೬೯ ||

ಮಾಧವನು ನಸುನಗುತನೆಂದನೆಲೆ ಪಾರ್ಥ | ರಾಧೇಯ ನೆನೆದ ಕಾರ್ಯಗಳಿಂದು ವ್ಯರ್ಥ || ೨೭೦ ||

ಆದುದೀವರೆಗೆ ನಿನ್ನಸುವ ಕಾದಿಹೆನು | ಮೋದದಲಿ ಜಯಿಸು ನಿರ್ಭಯನಾದೆ ನೀನು || ೨೭೦ ||

ಕರೆಸೀಗ ಪಾಳಯದ ಪಾಂಚಾಲದೊರೆಯ | ಬರಿಸವನ ತನಯನೀ ಸೇನೆದಳಪತಿಯ || ೨೭೨ ||

ಸುತ್ತ ಮತ್ಸ್ಯೇಶ ಮುಂತಾದ ಷಡುರಥರ | ಮತ್ತೆ ಕರಿಶತಾಧಿಕಬಲದ ಬಾಹುಜರ || ೧೭೩ ||

ಕೂಡುತಲಿ ಪೊರಡೀಗ ಸಾನುರಾಗದಲಿ | ಮಾಡು ಕದನವ ದ್ರೋಣ ಮೊದಲಾದವರಲಿ || ೧೭೪ ||

ದುಃಖಿಸಲು ಬೇಡ ರಣಕೇಳುಯೇಳೆನುತ | ರಕ್ಕಸಾರಿಯು ನುಡಿಯೆ ಕೇಳ್ದು ಕಲಿ ಪಾರ್ಥ || ೧೭೫ ||

ಜಡಜಸಖಸುತನಿದಿರು ರಥವ ನಡೆಸೆಂದು | ಜಡಜನಾಭನೊಳುಸಿರುತಿರಲು ಖತಿಗೊಂಡು || ೧೭೬ ||

**ಭಾಮಿನಿ**

ಮಾಧವನು ಮಣಿರಥವ ಮನದೊಳು |
ಮೋದಗೊಳುತಾ ಕ್ಷಣದಿ ಸಂಗರ |
ಮೇದಿನಿಯನಡಹಾಯ್ದು ರವಿಸುತನಿದಿರು ನಿಂದಿರಿಸೆ ||
ಕ್ರೋಧದಲಿ ಕಂಡಾಗ ಕರ್ಣನ |
ಮೂದಲಿಸಿ ಮಾರ್ಗಣಗಳೆಸೆವು |
ತ್ತಾಧನಂಜಯ ನುಡಿದ ಭಾನುಜ ಭಳಿರೆ ಭಳಿರೆಂದು ||೧೭೭||

**ರಾಗ ಶಂಕರಾಭರಣ ರೂಪಕತಾಳ**

ಭಳಿರೆ ಸೂತಸುತನೆ ಕೇಳು | ಕಲಹದಲ್ಲಿ ಶಕ್ರಶಕ್ತಿ |
ಯೊಳಗೆ ಭೀಮಸುತನ ಗೆದ್ದ | ನೊಲನ ನಿಲಿಸುವೆ || ೧೭೮ ||

ಬಲನವೈರಿತರಳ ಸಾಕು | ಗೆಲುವುದೆಲ್ಲ ಬಲ್ಲೆ ನಿಲ್ಲು |
ಸುಲಭದಲ್ಲಿ ಶಕ್ತಿ ಹೊರತು | ಗೆಲುವೆ ಶೀಘ್ರದಿ || ೧೭೯ ||

ವೃದ್ಧನೊರ್ವ ತನ್ನ ತಲೆಯೊಳ್ | ಬಿದ್ದ ತಿಲವ ತೆಗೆದು ತಾ ಸ |
ಮೃದ್ಧನಾದ ರೀತಿ ನಿನ್ನ | ಬುದ್ಧಿ ಸಮರದಿ || ೧೮೦ ||

ಅಡವಿಪಾಲರಿಂಗೆ ಸ್ವರ್ಣ | ಕೊಡದ ಧನವು ಸಿಕ್ಕಬಹುದೆ |
ಮೃಡನ ಒಲಿಸಿ ಯಮಜ ರಣದಿ | ಪೊಡವಿ ಬೇಡಲಿ || ೧೮೧ ||

ಮೃಡನನೊಲಿಸಿ ತಂದ ಶರವ | ತೊಡುವೆ ನಿನಗೆ ನಿಲ್ಲೆನುತ್ತ |
ಸಿಡಿಲಿನಂತೆ ಗರ್ಜಿಸುತ್ತ | ಹೊಡೆದ ಶರಗಳ || ೧೮೨ ||

**ಭಾಮಿನಿ**

ಪರಿಪರಿಯ ಮಂತ್ರಾಸ್ತ್ರವೆಸೆವು |
ತ್ತಿರಲು ವೈಮಾನಿಕರು ಭಳಿಭಳಿ |
ರರರೆ ಮೂಜಗ ನಡುಗುತಿದೆಯೆಂದುಸಿರುತಿರಲಂದು ||
ಗಿರಿಯ ಸಂಘಕೆ ಮೊದಲು ಸುರಪನು |

ಕರದ ವಜ್ರಾಯುಧದಿ ಬಡಿದಂ |
ತರಿಯ ಬಡಿಯಲು ಮರುಗಲಾ ಕುರುಬಲದ ಭೂಭುಜರು || ೧೮೩ ||

ಕುಂಭಿನೀಪತಿ ಕೇಳು ಸುಭಟರು |
ಹಂಬಲಿಸೆ ಕಾಯ್ವರನು ಕಾಣದೆ |
ಕುಂಭಜನು ಕಿಡಿಗೆದರಿ ಕುರುಮಂಡಲಕೆ ನಡೆತಂದು ||
ಅಂಬುಜಾಕ್ಷನ ಸಮ್ಮುಖದಿ ಝಷ |
ಕುಂಭಿನಿಯ ದೊರೆಯೊಡನೆ ಸಂಗರ |
ಕಂಬುಗ ಳನೆಸೆದೆಂದ ಕಲ್ಪದಶಂಭುಶೌರ್ಯದಲಿ || ೧೮೪ ||

**ರಾಗ ತುಜಾವಂತು ಅಷ್ಟತಾಳ**

ಮತ್ಸ್ಯಾಧಿಪತಿಯೆ ನೀನು | ನಿನ್ನಯ ಬಂಧು | ವಾತ್ಸಲ್ಯಗುಣಗಳನು ||
ಉತ್ಸಾಹದಿಂದಲಿ ನೆನೆದು ಬಂದುದಕೀಗ | ವತ್ಸವ ಬಗಿವೆನಿನ್ನು || ೧೮೫ ||

ಬಡ ಪಾರ್ವ ಕೇಳು ನೀನು | ಜೀವನಕಾಗಿ | ಪೊಡವೀಶಪುತ್ರರನು ||
ಒಡಗೂಡಿ ಶರವಿದ್ಯೆ ಕಲಿಸಿ ಮತ್ತವರಲ್ಲಿ | ಕೆಡುಕ ಯೋಚಿಪೆಯಲ್ಲಿನ್ನು || ೧೮೬ ||

ತುಂಡುರಾಜನೆ ನೀ ಕೇಳು | ನಿನ್ನಯ ಭಾವ | ಪುಂಡ ಕೀಚಕನು ತಾನು ||
ಷಂಡಧೊರೆಯ ತೆರ ಕುಳ್ಳಿರಿಸಿ ಮೆರೆದುದ | ಕಂಡು ಕೂತೆಯೊ ಪೇಳಿನ್ನು || ೧೮೭ ||

ಬಲ್ಲೆ ನಿಮ್ಮಯ ಸಾಹಸ | ಪೂರ್ವದಿ ನಮ್ಮ | ಗೊಲ್ಲರ ಬೆದರಿಸುತ ||
ಎಲ್ಲ ಗೋವ್ಗಳ ಕೊಂಡುಪೋಗೆ ಪುತ್ರನು ಬಿಡಿಸಿ | ಕೊಲ್ಲದೆ ಬಿಟ್ಟನಲ್ಲೈ || ೧೮೮ ||

ಬಲು ಪರಾಕ್ರಮಿಯವನು | ಓಡಲು ಧುರ | ನೆಲದಲ್ಲಿ ನರ ತಂದನು ||
ಕಲಹದಿ ತ್ರೈಗರ್ತಕಟ್ಟೆ ಪೋಗಲು ನಿನ್ನ | ತಲೆಯ ಕಾದಿಹ ಭೀಮನು || ೧೮೯ ||

ಇನಿತು ಮೂದಲಿಸುತಲಿ | ಶೌರ್ಯದಿ ತಾವು | ಸೆಣಸುತ್ತ ಶರಜಾಲದಿ ||
ರಣರಂಗದೊಳಗೀರ್ವರಾರ್ಭಟಿಸುತ ಮಂತ್ರ | ಕಣೆಗಳನೆಸೆದಿರ್ದರು || ೧೯೦ ||

**ಭಾಮಿನಿ**

ಅರಸ ಕೇಳಾಕ್ಷಣದಿ ಮುಖಜರ |
ವರನು ವೈಷ್ಣವಶರವ ಜಪಿಸುತ |
ಅರಿಗೆ ಬಿಡೆ ಮೈಮರೆತು ಮತ್ಸ್ಯನು ಅರುಣಮಂಡಲವ ||
ಹರುಷದಲಿ ಭೇದಿಸುತ ನಡೆವುದ |
ನರಿತು ದ್ರುಪದನು ಹುಂಕರಿಸಿ ಬಲು |
ಶರಮಳೆಯ ತೋರಿದನು ಪೂರ್ವದ ವೈರವನು ನೆನೆದು || ೧೯೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರರೆ ವಿಪ್ರರೆ ಸಹಜಧರ್ಮವ | ತೊರೆದು ಬಕನೊಲು ಧ್ಯಾನದಲಿ ನೀ |
ವಿರುವ ಮುನಿಯೆಂದರಿಯದರ್ಜುನ | ಧುರದಿ ಬಿಡುವ || ೧೯೧ ||

ಮರುಳು ದ್ರುಪದನೆ ಪೂರ್ವದೊಳು ನೀ | ಬಿರುನುಡಿಯ ಪೇಳುತಲಿ ಸಭೆಯೊಳು |
ಜರೆದು ಗೋವ್ ಕೊಡದಿರಲು ಕೆಡಹಿದೆ | ಚರಣದೆಡೆಗೆ || ೧೯೩ ||

ಬಿಡೆನು ಸಮರಾಂಗಣದಿ ನಿಮ್ಮಯ | ಒಡಲ ತೀರ್ಚುವೆ ದಿಟವು ಶಿಷ್ಯರು |
ಕಡು ವಿರೋಧಿಗಳೈಸೆ ಕಾವರ | ಹುಡುಕಿ ಬೇಗ || ೧೯೪ ||

ಎನಲು ದ್ರೋಣನು ಭಲ್ಲದಲಿ ರವಿ | ತನಯನಲ್ಲಿಗೆ ಕಳುಹುವೆನು ನೋ |
ಡೆನುತ ಚಂದ್ರಾಕೃತಿಯ ಶಸ್ತ್ರವ | ಜನಪಗೆಸೆದ || ೧೯೫ ||

**ಭಾಮಿನಿ**

ಈ ತೆರದಿ ಗುರುದ್ರೋಣ ದ್ರುಪದನ |
ಧಾತುಗೆಡಿಸಲ್ಕಿತ್ತ ಕಮಲಿನಿ |
ನಾಥ ಪೂರ್ವಾಂಗನೆಯ ನಾಸಾಮಣಿಯ ಭಾಸದಲಿ ||
ಭೂತಳವ ಬೆಳಗಿಸುತ ಕರಗಳ |
ಜಾತದಲಿ ಸಂಗರವ ನಿಲಿಸುವ |
ನೀತನೆಂಬುವ ತೆರದಿ ಗಗನಾಂಗಣದಿ ಶೋಭಿಸಿದ || ೧೯೬ ||

ಸೃಷ್ಟಿಯರಸನೆ ಕೇಳು ದ್ರುಪದನ |
ನಟ್ಟಿದನು ಭೂಸುರನು ಸುರಪತಿ |
ಪಟ್ಟಣಕೆ ದಿಟವೆಂದು ನೋಡುತ ಭರದಿ ನಡೆತಂದು ||
ಸಿಟ್ಟಿನಲಿ ಪಲ್ ಧ್ವನಿಯ ಗೆಯ್ಯುತ |
ತಟ್ಟನಾಹವಕೆದ್ದು ದ್ರೋಣಗೆ |
ತೊಟ್ಟು ಶರಗಳ ಕಡುಗಿ ಧೃಷ್ಟದ್ಯುಮ್ನನಿಂತೆಂದ || ೧೯೭ ||

**ರಾಗ ಶಂಕರಾಭರಣ ಮಟ್ಟೆತಾಳ**

ಅತಿರಥಾಗ್ರಗಣ್ಯ ದ್ರೋಣ ಕೇಳು ಎನ್ನಯ |
ಪಿತನ ರಣದಿ ತಾನೆ ಗೆಲಿದೆನೆಂಬ ನಿನ್ನಯ ||
ಅತುಳ ಬಲವನೆಲ್ಲ ತೋರು ನಿಲ್ಲು ನಾಕದ |
ಪಥವ ತೋರ್ಪೆ ನಿಮಿಷಮಾತ್ರದಿಂದ ದುರ್ಮದ || ೧೯೮ ||

ಪಿತನು ಪೋದ ಗತಿಗೆ ಬವರದೊಳಗೆ ಲೋಕದಿ |
ಸುತರು ಪೋಪುದುಚಿತ ರಣಕೆ ನಿಲ್ಲು ನಿಮಿಷದಿ ||

ಮತಿವಿಮೂಢ ಗುರುವಿನೊಡನೆ ಕದನವೇನೆಲ |
ಗತಿಯ ತೋರ್ಪೆನುಳಿದರೆನ್ನಜಾತ ಬಿಡನೆಲ || ೧೯೯ ||

ಎನುತ ರೋಷದಿಂದ ಸಮದಿ ಕಾದುತೀರ್ವರು |
ಘನತರಾಸ್ತ್ರ ಬಿಡಲು ಕಾಣುತಾಗ ವೀರರು ||
ಮನದಿ ಚೋದ್ಯಗೊಳಲು ಕಾಣುತಾಗ ಪಾರ್ಥನು |
ಕನಲಿ ಪಾರ್ಷತನ್ನ ಬಿಡಿಸಿ ತಾನೆ ನಿಂತನು || ೨೦೦ ||

**ರಾಗ ಅಹೇರಿ ಝುಂಪೆತಾಳ**

ಗುರುವರನೆ ನಮ್ಮ ಬಲದ | ವೀರರನು | ಬರಿದೆ ಪುಡಿಗೆಯ್ವೆ ಧುರದ ||
ಶರಧಿಯಲಿ ಬಳಲಿರ್ಪನು | ಪಾರ್ಷತನು | ನರನೀಗ ಬಂದೆ ತಾನು || ೨೦೧ ||

ಸಿಟ್ಟಿನಲಿ ಘುಡಿಘುಡಿಸುತ | ಕರೆಸೀಗ | ಧೃಷ್ಟದ್ಯುಮ್ನನ ಧುರದಿ ತಾ ||
ನಟ್ಟುವೆನು ಪಾಂಚಾಲರ | ಸಂಯಮಿನಿ | ಪಟ್ಟಣಕೆ ಮಿಗೆ ಸರ್ವರ || ೨೦೨ ||

ಎಂದೆನುವ ಗುರುವ ನೋಡಿ | ಅರ್ಜುನನು | ಮಂದಹಾಸದಲಿ ಕೂಡಿ ||
ಇಂದು ಸಮರವ ಗೆಯ್ವೆನು | ಎನುತಾಗ | ಚಂದದಾಹವ ಗೆಯ್ದನು || ೨೦೩ ||

**ಭಾಮಿನಿ**

ಪೃಥಿವಿಪತಿ ಕೇಳಿನಿತು ಸಮರದೊ |
ಳತುಲಬಲರೊಂದಾಗಿ ಕಾದುತ |
ಶತಮಖಾದ್ಯಸ್ತ್ರಗಳ ಬಿಡುತಿರಲಂದು ಕಲಶಜನು ||
ರತಿಪತಿಯ ಪಿತ ಸಖನ ಬಾಣದ |
ಹತಿಗೆ ಭ್ರಮಣೆಯ ಗೊಳ್ಳುತಲಿ ತಾ ||
ರಥದಿ ಬಿದ್ದವನಿಯಲಿ ಮೂರ್ಛಿಸಲೆಂದನಾ ಪಾರ್ಥ || ೨೦೪ ||

**ರಾಗ ಪಂಚಾಗತಿ ಮಟ್ಟೆತಾಳ**

ಹರಹರ ಎನ್ನಯ ಗುರುಗಳ | ಧುರದಲಿ ಕೆಡಹಿದೆ ಸರಳಿಲಿ ||
ಧರಣಿಯು ಹೊರುವುದೆ ನಿಂದಿಸ | ದಿರುವರೆ ತ್ರಿಜಗದಲಿ || ೨೦೫ ||

ಶಿಶುತನದೊಳಸ್ತ್ರವನೆಸೆಯುವ | ಕುಶಲವನೆಲ್ಲವ ಕಲಿಸಿದ ||
ದೆಸೆಯಲಿ ಗರಡಿಯೊಳೆನ್ನೊಳ | ಗುಸಿರಿದ ತಾ ಮರೆತೆ || ೨೦೬ ||

ವಿದ್ಯವ ಕಲಿಸಿದ ಲೋಕಪ್ರ | ಸಿದ್ಧರ ಹೊಡೆಯದಿರೆನುತಲಿ ||
ಬುದ್ಧಿಯ ಕಲಿಸಿದ ವೃದ್ಧರು | ಯುದ್ಧದಿ ಮಲಗಿಹರೈ || ೨೦೭ ||

ನೊಂದಿರೆ ಬಹುಪರಿ ರಣದೊಳ | ಗೆಂದೆನುತಲಿ ದ್ರೋಣನ ಕರ ||
ದಿಂದೆಬ್ಬಿಸಲೇಳದೆ ಮುಖ | ಕಂದಲು ಮರುಗಿದನು  || ೩೦೮ ||

ಇಂದಿರೆಯರಸನು ವಿಜಯನ | ಅಂದವ ಕಾಣುತ ಬಹುಪರಿ ||
ನಿಂದಿಸುತೆಂದನು ವೈರಿಯೊಳ್ | ಬಂದುದೆ ದಯೆ ನಿನಗೆ  || ೩೦೯ ||

ಅಂದಿಲಿ ದ್ರೋಣನು ತನ್ನಯ | ಸ್ಯಂದನವೇರುತ ಸುರಪನ ||
ನಂದನ ಶೋಕಿಸೆ ಕಾಣುತ | ನಿಂದಿರೆ ಹರಿ ನುಡಿದ  || ೩೧೦ ||

ತೊಡು ಶರ ಬೇಗದೊಳೆಂದುದ | ನುಡಿಯನು ಕೇಳದ ಪಾರ್ಥನ ||
ದೃಢಮನ ನೋಡುತ ಮಾಧವ | ಕಿಡಿಗೆದರುತಲೆಂದ  || ೩೧೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶ್ವೇತವಾಹನ ಕೇಳು ಎಮ್ಮಯ | ಮಾತ ಕೇಳದೆ ಕುಳಿತೆಯಲ್ಲವೋ
ವಾತ ತರಳನ ಕರೆದು ವೈರಿಯ | ವ್ರಾತವನ್ನು  || ೩೧೨ ||

ಜಯಿಸುವೆನು ನೋಡಿನ್ನು ತಂಗಿಯ | ಬಯಕೆಯನು ಪೂರೈಸುವೆನು ನಿ |
ಶ್ಚಯದೊಳೆನ್ನುತ ಕರೆಯೆ ಭೀಮನಿ | ರ್ಭಯದೊಳಾಗ  || ೩೧೩ ||

ಕೃಷ್ಣನಂಘ್ರಿಗೆ ನಮಿಸೆ ಪಾಂಡವ | ರಿಷ್ಟ ಭೀಮಗೆ ಪೇಳ್ದ ಫಲುಗುಣ |
ನೆಷ್ಟು ಪೇಳ್ದರು ದ್ರೋಣನನು ತಾ | ಬಿಲ್ವ ಸಿಕಿದು  || ೩೧೪ ||

ಕರೆದೆ ನಿನ್ನನು ವೇಗದಲಿ ಶರ | ಗುರುವಿಗಸ್ತ್ರವ ತೊಡುವುದೆಂದೆನ |
ಲರಿಯ ಬಳಿಗೆದ್ದಾಗ ನಮಿಸಲು ಭರದಿ ಕಳುಹೆ  || ೩೧೫ ||

**ರಾಗ ಭೈರವಿ ಏಕತಾಳ**

ಬಂದಾ ಬೀಮನು ರಣದಿ | ಋಷಿ | ನಂದನನಿದಿರಲಿ ಭರದಿ ||
ನಿಂದಿರೆ ದ್ರೋಣನು ಕಂಡು | ಶರ | ವೃಂದದಿ ಮುಸುಕಿದನಂದು  || ೩೧೬ ||

ಮಾರ್ಗಣಗಳ ತರಿಯುತಲಿ | ಸಿತ | ಕೂರ್ಗಣೆಗಳನೆಸೆವುತಲಿ ||
ಭೋರ್ಗರೆಯುತ ವಾಯುಜನು | ರಥ | ಮಾರ್ಗವ ತಡೆದು ಪೇಳಿದನು || ೩೧೭ ||

ದಾಯಾರ್ಹದ ಭಾಗವನು | ಕುರು | ರಾಯನು ಕೊಡದಿರೆ ತಾನು ||
ನ್ಯಾಯದಿ ಕಾದುವೆನಿಂದು | ತಮಗ | ನ್ಯಾಯವು ನಮ್ಮೊಳಗಿಂದು || ೩೧೮ ||

ದ್ವಿಜವರರಿಗೆ ಲೋಕದಲಿ | ಹರಿ | ಭಜನೆಯುಚಿತ ಶಾಸ್ತ್ರದಲಿ ||
ನಿಜ ನಡತೆಯ ಬಿಡುತಿಂದು | ಭೂ | ಭುಜರಲಿ ರಣ ಬೇಡಿಂದು  || ೩೧೯ ||

ದಂಡಧರನ ಪೋಲಿಂದು | ಬಲ | ಚೆಂಡಾಡಿಸಬೇಡಿಂದು ||
ಭಂಡಿಯ ಪಿನ್ನೆಲೆ ತಂದು | ರಣ | ಮಂಡಲದೊಳಗಿರಲಂದು || ೩೧೦ ||

ಕಿಡಿಕಿಡಿಯೆನುತಿರೆ ದ್ರೋಣ | ರಥ | ತಡೆಯಲು ಧುರದೊಳು ಜಾಣ ||
ಕಡು ಕೋಪವ ಕಂಡಾಗ | ನಭ | ಕಡೆಯಲಿ ಋಷಿಗಳು ಬೇಗ || ೩೧೧ ||

**ಭಾಮಿನಿ**

ಬಂದು ಸಪ್ತರ್ಷಿಗಳು ವ್ಯೋಮದಿ |
ನಿಂದು ಕಲಶಜನಿರವ ನೋಡುತ |
ರೆಂದರೆಲೆ ಗುರುವರ್ಯ ಧುರ ಸಾಕಿಂದು ಬಾರೆನಲು ||
ಕಂಧರವನೆತ್ತುತಲಿ ಮುನಿಗಳ |
ವೃಂದವನು ನೋಡುತಲಿ ತಾ ಮನ |
ಗುಂದಿ ಮರುಗುತ ನುಡಿದ ಕುರುಭೂಪತಿಯ ನೆನೆನೆನೆದು || ೩೧೨ ||

**ರಾಗ ನೀಲಾಂಬರಿ ಆದಿತಾಳ**

ಅಹಹ ನಾನೇಂಬೆನೆನ್ನ | ಮಹಿಪನ ದುರ್ವಿಧಿಯ ||
ಅಹಿತರೊಡನೆ ಕಾದಲಿಂದು | ಮಹಿತರೆಂದ ನುಡಿಗೆ || ೩೧೩ ||

ದ್ರೋಣನಂತಃಪ್ರಾಣವೆಂದು | ಕ್ಷೋಣೀಶ ನಂಬಿಹನು |
ತ್ರಾಣದಿಂದ ಗೆಲಲು ಚಕ್ರ | ಪ್ರಾಣಿ ನರನ ಬಿಡನು || ೩೧೪ ||

ಮಗನ ಹೇಗೀ ನೃಪತಿಗಾಗಿ | ಪಗೆಗಳಿದಿರು ಬಿಟ್ಟು ||
ಅಗಲಿ ನೃಪನ ಪೋದರೆನ್ನ | ಜಗವು ನಗುವುದಾಯ್ತು || ೩೧೫ ||

**ಭಾಮಿನಿ**

ಇಂತಧಿಕ ಶೋಕದಲಿ ಕುರುವರ |
ನೆಂತಿರುವನೆಂಬುದನು ಮನದಲಿ |
ಚಿಂತಿಸುತ ಮಗುಳೆದ್ದು ಧನು ಝೇಂಕರಿಸುತಲಿ ದ್ರೋಣ ||
ಪಂತಿಮುಖದವ ಬರಲಿ ಮಿಗೆ ಕಾ |
ಲಾಂತಕನು ನಿಲಲೊಮ್ಮೆ ಬಿಡೆನೆಂ |
ದಿಂತುಸಿರಿ ಪಾಂಚಾಲರನು ಪುಡಿಗೆಯ್ದುನವನಾಗ || ೩೧೬ ||

**ರಾಗ ತುಜಾವಂತು ಅಷ್ಟತಾಳ**

ಪೃಥ್ವೀಶ ಕೇಳಿಂತು ದ್ರೋಣ | ಧನು | ವೆತ್ತಿ ಜೋಡಿಸುತಲಿ ಬಾಣ ||
ಹತ್ತಾರು ಸಾವಿರ ದ್ರೌಪದೇಯರ ಸವ |
ರುತ್ತ ಭೈರವನಂತೆ ಬರುತಿರ | ಲಿತ್ತ ಪಾರ್ಥನೊಳೆಂದ ಮಾಧವ | || ೩೧೭ ||

ಜಾಮದಗ್ನಿಯ ಶಿಷ್ಯನೀತ | ದ್ರೋಣ | ನಾಮಾಗ್ನಿ ದಿವ್ಯಾಸ್ತ್ರಸಹಿತ |
ಕಾಮಾರಿಯಂತೆ ಪಾಂಚಾಲಾದಿ ಬಲವ ನಿ |
ರ್ನಾಮ ಗೆಯ್ದಯ್ತುರುವವನು ಸಂ | ಗ್ರಾಮ ಕೊಡುವರ ಕಾಣೆ ನಮ್ಮೊಳು || ೩೧೮ ||

ಎಷ್ಟು ಯುದ್ಧವ ಮಾಡಲೀತ | ಹಿ | ಮ್ಮೆಟ್ಟನು ರಣದಿ ವಿಖ್ಯಾತ ||
ಸೃಷ್ಟಿಯ ನಿಷ್ಪಾಂಡವ ಮಾಡುವೆನೆಂದು |
ದುಷ್ಟಭಾವದಿ ಬಂದ ನಿಮ್ಮಯ | ದೃಷ್ಟ ಮುಂದೆಂತಿಹುದೊ ಕಾಣೆನು || ೩೧೯ ||

ಆದರೊಂದಿಹುದೀಗುಪಾಯ | ನೀವು | ಸಾಧಿಸಲುಳಿವುದು ಕಾಯ ||
ಈ ದಿನದೊಳಗಶ್ವತ್ಥಾಮ ಸ್ವರ್ಲೋಕಕ್ಕೆ |
ಪೋದನೆನುತಲೆ ನುಡಿಯೆ ನಮ್ಮೊಳು | ಕಾದದಾಹವ ಬಿಡುವ ದಿಟವಿದು || ೩೨೦ ||

ಅಚ್ಯುತನಿಂತೆನಲಾಗಿ | ಬಲು | ಬೆಚ್ಚುತ ನರ ಬೆರಗಾಗಿ ||
ಉಚ್ಚರಿಸದೆ ತನ್ನ ಕರಗಳಿಂದ ಕಿವಿ |
ಮುಚ್ಚುತಲಿ ನಿಂತಿರಲು ಭೀಮನ | ನೆಚ್ಚರಿಸಿ ಚಿನ್ಮಯನು ಪೇಳಿದ  || ೩೨೧ ||

**ಭಾಮಿನಿ**

ಭೀಮನಶ್ವತ್ಥಾಮನಾಮದ |
ಸಾಮಜವ ಕೊಂದಾಗಲಶ್ವ |
ತ್ಥಾಮಹತನೆಂದೆನುತ ಪೇರ್ಧ್ವನಿಯಿಂದ ನುಡಿಯಲ್ಕೆ ||
ಆ ಮಹಾಧ್ವನಿ ಕೇಳಿ ಕಲಶಜ |
ಭೂಮಿಯಲಿ ದುರ್ಜಯನು ಸುತನೀ |
ಭೀಮನಾಡಿದ ನುಡಿಯು ನಿಜವಲ್ಲೆಂದು ಯೋಚಿಸಿದ  || ೩೨೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆ ಸಮಯದೊಳಗಿತ್ತ ಲೋಕನಿ | ವಾಸಿ ಯಮಜನ ಕರೆದು ಪೇಳಿದ |
ಬೇಸರಿಸದೀ ದ್ರೌಣಿ ಸುರರ ನಿ | ವಾಸಕಯ್ದ  || ೩೨೩ ||

ಎಂದೆನುತ ಪೇಳೆನಲು ಯಮಜನು | ನೊಂದು ಮನದಲಿ ನುಡಿಯದಿರೆ ಗೋ |
ವಿಂದ ನುಡಿದನು ಗಜವ ನೀ ನೋ | ಡೆಂದು ನಗುತ  || ೩೨೪ ||

**ಭಾಮಿನಿ**

ಹರಿಯ ಮಾಯದ ನುಡಿಗೆ ಧರ್ಮವ |
ಮರೆತು ಧರ್ಮಜನೆಂದನಿಂದಿನ |
ಧುರದೊಳಶ್ವತ್ಥಾಮ ನಾಕಿಯ ಪುರಕೆ ತೆರಳಿದನು ||
ಕರಿಯುಯೆಂದೆನಲಾ ರಮಾಪತಿ |
ದರವ ಧ್ವನಿಯನು ಗೆಯ್ಯೆ ಕುಂಭಜ |
ಖರೆಯೊ ಪೇಳೆಂದೆನಲು ನಿಜ ನಿಜ ನಿಜವು ಗಜವೆಂದ || ೩೩೫ ||

ಧರ್ಮಜನ ನುಡಿ ಕೇಳಿ ಕುಂಭಜ | ಮರ್ಮಭೇದಿತನಾಗಿ ಕದನದ |
ಕರ್ಮ ಸಾಕೆಂದೆನುತ ತನ್ನೊಳು ಯೋಚಿಸಿದನಂದು ||
ವರ್ಮ ಪಾಂಡವರಲ್ಲಿ ಬಿಡೆ ಸ | ದ್ಧರ್ಮದಲಿ ಗೆಲಲೆಮ್ಮ ಧೊರೆ ದು |
ಷ್ಕರ್ಮಿಯಾಗಿಹನಿಂತು ಪಾರ್ಥಗೆ ಸುಕೃತ ಕೂಡಿಹುದೊ || ೩೩೬ ||

ಬಡತನದೊಳಾತ್ಮಜಗೆ ಕ್ಷೀರವ | ಕೊಡಲು ದಾರಿದ್ರ್ಯದಲಿ ಗೋವ್ಗಳ |
ಹುಡುಕುತಲಿ ಬರೆ ಹಸ್ತಿನಾವತಿಪುರದ ಬಳಿಗೆಂದು ||
ಪೊಡವಿಪತಿ ಧೃತರಾಷ್ಟ್ರ ಭೀಷ್ಮರು | ನಡತೆಗಳ ನೋಡುತಲಿ ತನ್ನಯ |
ಹುಡುಗನಿಗೆ ಕ್ಷೀರಾನ್ನ ಮೋದದಿ ಕೊಡುತ ಸಲಹಿದರು || ೩೩೭ ||

ಮತ್ತೆ ಭೂಪತಿಯಣುಗರಿಗೆ ಸ | ರ್ವಾಸ್ತ್ರ ವಿದ್ಯವ ಕಲಿಸೆ ತಮ್ಮೊಳು |
ಲತ್ತೆಯಾಟದಿ ಪಾಂಡುಜರು ಸೋಲುತ್ತ ವನಕೆಂದು ||
ಅತ್ಯಧಿಕ ದುಗುಡದಲಿ ಪೊರಡಲು | ಹಸ್ತಿನೇಶನು ದ್ರೌಪದಿಯ ಬಾ |
ರಿತ್ತ ತನ್ನಂಕವನುಯೇರೆಂದೆನಲು ಮಾರುತಿಯು || ೩೩೮ ||

ಬಡಿವೆ ನಿನ್ನಯ ತೊಡೆಯ ತಮ್ಮನ | ಒಡಲ ಪುಡಿಗೈಯ್ಯುವೆನು ದಿಟವೆಂ |
ದೊಡೆಯ ದುರ್ಯೋಧನಗೆ ಪೇಳಲು ನಡುಗಿ ನಮ್ಮಡಿಯ ||
ಬಿಡದೆ ನಮಿಸುತಲೆಂದ ನಿಮ್ಮಯ | ಹುಡುಗ ಭೀಷ್ಮಾದಿಗಳು ನಮ್ಮಯ |
ಕಡೆಗೆ ನೀವೆಂದವನ ಯುದ್ಧದಿ ಬಿಡುವೆ ತಾನೆಂತು || ೩೩೯ ||

ವಿಷಸಹಿತ ಬಾಣಗಳು ತನ್ನೆದೆ | ಗೆಸೆದವೋಲಾ ದ್ರೋಣ ಧನುಶರ |
ಬಿಸುಟು ಕಾಂಚನರಥದಿ ಚಿತ್ರಾರ್ಪಿತನ ಭಾವದಲಿ ||
ಅಸುರಹರ ಶ್ರೀಕೃಷ್ಣನಂಘ್ರಿಯ | ವಶದಿ ಮಾನಸವಿಟ್ಟು ಕಾಯವ |
ವಸುಧೆಯೊಳಗೀಡಾಡಿ ಸುರಮಂಡಲಕೆ ತೆರಳಿದನು || ೩೪೦ ||

**ರಾಗ ಮಾರವಿ ಏಕತಾಳ**

ಏನೆಂಬೆನು ರಣಮಂಡಲದಲಿ ಮಹ | ದ್ರೋಣನ ಕಾಯವನು ||
ಕಾಣುತ ಧೃಷ್ಟದ್ಯುಮ್ನನು ದಿವ್ಯ ಕೃ | ಪಾಣವನೆತ್ತಿದನು || ೩೪೧ ||

ಕಡಿವೆನು ಖಡ್ಗದಿ ಬಡಪಾರ್ವನ ಕೈ | ತಡೆವರು ಯಾರೆನುತ ||
ನುಡಿಯುತ ಮುಂದಡಿಯಿಡಲಾ ಪಾರ್ಥನು | ತಡಿ ತಡಿ ತಡಿಯೆಂದ || ೩೪೧ ||

ಈ ತೆರವೆಂದುದ ಕೇಳದೆ ಪಾರ್ಷತ | ಭೀತಿಯಿಲ್ಲದೆ ಭರದಿ ||
ಭೂತಳದೊಳಗಾ ದ್ರೋಣನ ಖಡ್ಗದಿ | ಘಾತಿಸುತಲಿ ಬಿಸುಟ || ೩೪೩ ||

**ರಾಗ ಯರಕಲಕಾಂಭೋಜ ಝಂಪೆತಾಳ**

ಫಲುಗುಣನು ನೋಡುತ್ತ ಕುಂಭಜಾತನ ದೇಹ | ವಿಳೆಯ ಪಾಲಾಗಿರ್ಪ ಭವಣೆಗಳನಾಗ ||
ಬಳಲುತಲಿ ಶೋಕದೊಳಗಿಳೆಯೊಳಗೆ ಬಿದ್ದ ಗುರು | ಚೆಲುವ ದೇಹವ ನೋಡಿ ನುಡಿದ || ೩೪೪ ||

ಸೇನಾಧಿಪತಿಯೆ ನೀ ಕೇಳು ನಮ್ಮವರ ಗುರು | ಮಾನನಿಧಿಗಳನೀಗ ಏನ ಗೆಯ್ದಿರ್ಪೆ ||
ಮಾನಸದೊಳವರಷ್ಟ ಪದ್ಮಪೀಠದಿ ಕೃಷ್ಣ | ಧ್ಯಾನದಲಿ ಮೈಮರೆತ ಮುನಿಯ || ೩೪೫ ||

ಕಟುಕರಂದದಿ ನಮ್ಮ ಮಾತ ಕೇಳದೆ ಮರುಳೆ | ಕುಟಿಲಭಾವದೊಳಸ್ತ್ರಗುರುಗಳನು ತರಿದೆ ||
ಭಟನು ನೀನೆಂದರಿತು ಕೊಟ್ಟಿಹೆವು ಸೇನೆಗಳ | ಕಟಕದೊಡೆತನವ ತಾನಕಟ || ೩೪೬ ||

**ರಾಗ ಸುರುಟಿ ಆದಿತಾಳ**

ಶ್ವೇತವಾಹನ ಕೇಳು | ಎನ್ನಯ | ಮಾತನು ಸಮರದೊಳು ||
ನೀತಿಯೆ ಭೂರಿಶ್ರವಸನ ಕರವನು | ಘಾತಕರಂದದಿ ತರಿದೆಯೊ ನೀನು || ೩೪೭ ||

ಭಾರಿ ಮಾತುಗಳೇಕೊ | ನಡತೆ ವಿ | ಚಾರಿಸಿ ನೋಡಿದಕೊ ||
ಶೂರ ಸಾತ್ಯಕಿ ಮೆಯ್ಮರೆಯಲು ಶಿರವನು | ಕೂರಸಿಲರಿವುದ ತರಿದಿಹೆ ಕರವನು || ೩೪೮ ||

ಸವ್ಯಸಾಚಿ ತಾಳು | ದ್ರೋಣನು | ಕ್ರವ್ಯಾದನ ವೋಲು ||
ದಿವ್ಯಾಸ್ತ್ರದಿ ಪಿತ ಮೊದಲಾಗಿಹರನು | ಹವ್ಯವಾಹನ ತೆರ ಭಕ್ಷಿಸೆ ಬಿಡುವೆನೆ || ೩೪೯ ||

ಫಡ ದ್ರುಪದಜ ನೀನು | ಕಡಿದೆಯೊ | ಕೊಡನ ಕುವರನನ್ನು ||
ನಡೆ ನಿನ್ನಯ ವಿಪ್ರಘ್ನನ ನೋಡಲು | ಜಡಜಸಖನ ಮೊಗವೀಕ್ಷಿಸ ಬೇಕೈ || ೩೫೦ ||

ಅಂಗದಿ ಮಾರ್ಗವನು | ಕೊಟ್ಟು ಮ | ತಂಗಜಮಿಗೆ ತಾನು ||
ಭಂಗವ ಪಡುವವೋಲಾಯಿತು ದುರ್ನುಡಿ | ತಂಗಿಯ ಕೊಟ್ಟುದರಿಂದಲಿ ಸಹಿಸಿದೆ || ೩೫೧ ||

ಸಿಟ್ಟಿಲಿ ಫಲುಗುಣನು | ಪೇಳಿದ | ನಿಷ್ಠುರ ನುಡಿಗಳನು ||
ಎಷ್ಟು ನುಡಿವೆ ಸಾಕೀ ಕ್ಷಣ ನಡೆನಡೆ | ದೃಷ್ಟಿಯೊಳೀಕ್ಷಿಸಲಾರೆನು ನಿನ್ನನು || ೩೫೨ ||

**ಭಾಮಿನಿ**

ದುಷ್ಟ ನುಡಿಗಳ ಕೇಳಿ ಪಾರ್ಷದ |
ಧೃಷ್ಟದ್ಯುಮ್ನನು ಕೋಪದಲಿ ತಾ |
ನಿಟ್ಟುಸಿರ ಬಿಡುತೆಂದ ಸಹಜೆಯ ಪುಟ್ಟ ಬಾಲಕರ ||
ಇಷ್ಟ ಸಾಧಿಪೆನೆಂದು ಬರುತಿರ |
ಲಿಷ್ಟು ಪೇಳಿದೆಯಲ್ಲೊ ಬವರದಿ ||
ದಿಟ್ಟತನ ತೋರ್ದುದಕೆ ಫಲವೆಂದೆನಲು ಸಾತ್ಯಕಿಯು  || ೩೫೩ ||

**ರಾಗ ನೀಲಾಂಬರಿ ಅಷ್ಟತಾಳ**

ದ್ರುಪದನಂದನನೆ ಕೇಳು | ದ್ರೋಣನ ಶಿರ | ಕಪಟದಿ ಕಡಿದೀಗಳು ||
ವಿಪರೀತ ಮಾತುಗಳಾಡುವ ವಿಪ್ರಘ್ನನ | ಶಪಥದಿ ಕಡಿವೆ ನೋಡು || ೩೫೪ ||

ಘಾತಕವೃತ್ತಿಯೊಳು | ಜೀವಿಪೆಯಲ್ಲೊ | ಸಾತ್ಯಕಿಯನ್ಯರೊಳು ||
ಪಾತಕವೆಣಿಸುವೆ ಭೂರಿಶ್ರವನ ಪಾರ್ಥ | ಘಾತಿಸೆ ಕೊಂದೆಯಲ್ಲೊ  || ೩೫೫ ||

ಸೇನಾಧಿ ಪತ್ಯವನ್ನು | ಕೈಕೊಳ್ಳುತ್ತ | ವಾನರಕೇತನನು ||
ಜಾಣನೆಂದೆಣಿಸುತ್ತ ಜಗಳಗೆಯ್ದರೆ ಯಮ | ಠಾಣ್ಯವ ತೋರ್ಪೆನಿನ್ನು || ೩೫೬ ||

**ಭಾಮಿನಿ**

ಇಂತು ಸಾತ್ಯಕಿ ದ್ರುಪದತರಳರು |
ನಿಂತು ಜೊತೆಯಲಿ ಕಾದಲಾ ಕ್ಷಣ |
ಕಂತುಜನಕನು ನೋಡಿ ಬೇಗದಿ ಭೀಮ ಬಿಡಿಸೆನಲು ||
ಪಂಥವೇಕೆಂದೆನುತ ಭೀಮನು |
ಸಂತವಿಸಿ ನೀವೆಂದೆನುತಲುರೆ |
ದಂತಿರಾಜನ ತೆರದೊಳೀರ್ವರ ನಿಲಿಸುತಿಂತೆಂದ  || ೩೫೭ ||

**ರಾಗ ಭೈರವಿ ಅಷ್ಟತಾಳ**

ಕೇಳಯ್ಯ ಪಾರ್ಥ ಕೇಳಯ್ಯ |  ||ಪ||

ಕೇಳಯ್ಯ ಪಾಂಚಾಲಸುತ ಸಾತ್ಯಕಿಯರು | ಕಾಳಗಕನುವಾಗುತಿರ್ಪರಲ್ಲಯ್ಯ ||
ಪಾಳಯದೊಳು ಕಡಿದಾಟವಿದೇನು | ಪೇಳದೆ ಬುದ್ಧಿಯ ಕುಳಿತೆಯಲ್ಲಿನ್ನು || ೩೫೮ ||

ಕೇಳಲೀ ವಾರ್ತೆಯ ದ್ರುಪದಜೆ ನಮ್ಮ | ಮೇಲೆ ಕೋಪಿಸುವಳೊ ಏನೆಲೊ ತಮ್ಮ ||
ಕಾಳಗದೊಳು ಗುರುಬಂಧುಗಳೊಳಗೆ | ಸೋಲಬಹುದೆ ಕ್ಷತ್ರಿಪದ್ಧತಿಯೊಳಗೆ || ೩೫೯ ||

ಬಾಲಕನಲ್ಲವೆ ದ್ರುಪದನ ಕಂದ | ಪೇಳಿದ ವಚನದಿ ಕ್ರೋಧ ಬೇಡೆಂದ ||
ಕಾಳಗಕನುವಾಗಿ ತಂದಿರ್ಪ ಸುಬಲ | ಪಾಲಕನೊಳು ಕೋಪಿಸಲು ಬೇಡ ಬಾಲ || ೩೬೦ ||

**ಭಾಮಿನಿ**

ವಿಧವಿಧದ ಬೋಧನೆಯ ಭೀಮನು |
ಕದನರಂಗದಿ ಪೇಳ್ದು ಪಾರ್ಥಗೆ |
ಮೃದುಳ ವಾಕ್ಯವನುಸಿರಿ ಸಾತ್ಯಕಿದ್ರುಪದಸುತರಿಂಗೆ ||
ಅಧಿಕ ಮೈತ್ರಿಯ ಕೊಳಿಸಲಿತ್ತಲು |
ವಿಧುಕುಲೇಶ ಕಿರೀಟಿ ಹರಿಯೊಳು |
ಮದಗಜದವೋಲ್ ಬರುವ ದ್ರೌಣಿಯ ತಡೆವರಾರೆನಲು || ೩೯೦ ||

**ರಾಗ ಜಂಜೂಟಿ ಆದಿತಾಳ**

ದ್ರೋಣಪುತ್ರನನ್ನು ತಾನೆ ತಡೆವೆ ಪಾರ್ಥ | ರಣದಿ |
ಜಾಣ ತಾನೆ ಭೀಮನಿರಲು ಶೋಕ ವ್ಯರ್ಥ || ೩೯೧ ||

ತ್ರಾಣವಿರಲು ಧುರದೊಳಶ್ವತ್ಥಾಮ ಬೇಗ | ಬರಲು |
ಶಾಣೆತನವನೆಲ್ಲ ತೋರ್ಪೆನರಿಯೊಳೀಗ || ೩೯೩ ||

ಇನಿತು ಪೇಳಲ್ ಬಂದು ಕೃಪನು ಭಾವನನ್ನು | ಕರೆದು |
ಕುಣಪ ಖಂಡಿಸಿದುದ ನೋಡಿ ಮನದಿ ತಾನು || ೩೯೪ ||

ಅಹಹ ಏನಿದೇನು ದ್ರೋಣಕಾಯವನ್ನು | ಕಡಿದ |
ಕುಹಕರಿಂದು ಬಿಡರೆನ್ನುತ್ತ ನಡೆದ ತಾನು || ೩೯೫ ||

**ರಾಗ ಸುರುಟಿ ಅಷ್ಟತಾಳ**

ಅಷ್ಟರೊಳಗೆ ಕೃಪನೊಳ್ ಧೃತ | ರಾಷ್ಟ್ರಸುತನು ಬಂದು ನಮ್ಮ |
ಬಿಟ್ಟು ಭಯದಿ ಪೋಗಲೀಗ | ಕಷ್ಟವೇನು ಪೇಳಿರೆಂದ || ೩೯೬ ||

ಅಂದುದನ್ನು ಕೇಳಿ ಕೃಪನು | ಕುಂದಿ ಮರುಗಿ ಪೇಳ್ದ ದ್ರುಪದ |
ಕಂದ ತಾನು ದ್ರೋಣಾ | ತ್ಯಂತ ಶ್ರೇಷ್ಠ ಗುರುಗಳೆಂದು |
ಪಂಥದಿಂದ ಕಾದಿ ಪೋದ | ರಿಂತು ನಮಗೆ ಕದನವೇಕೈ || ೩೯೭ ||

**ಭಾಮಿನಿ**

ಎನಲು ಕುರುಬಲವೆಲ್ಲ ಮರುಗಲು |
ಕನಲುತಾರ್ಭಟಿಸುತ್ತ ದ್ರೋಣನ |
ತನಯನಾ ವೇಳೆಯದಲಿ ಕಲ್ಪದ ಸಿಡಿಲಿನಂದದಲಿ ||
ಘನ ಪರಾಕ್ರಮದಿಂದ ಬಂದಾ |

ಕ್ಷಣದಿ ಭೂಪನ ಭುಜವ ಪಿಡಿಯುತ |
ಹನನವಾಗಿದೆ ಬಲವು ಭೀತಿಯ ಬೀಜವೇನೆಂದ || ೩೯೮ ||

**ರಾಗ ಪಂಚಾಗತಿ ಮಟ್ಟೆತಾಳ**

ಗುರುಕೃಪರನು ಪಿಡಿದಪ್ಪುತ | ಕುರುಪತಿಯರುಹಿದ ಶರಗುರು |
ತರಳನಿಗರುಹುವುದೆಂದೆನೆ | ಶರದ್ವಂತಜ ನಡುಗೆ || ೩೯೯ ||

ಬಿಡಿ ಬಿಡಿ ಭಯವನು ನಡುಗದೆ | ನುಡಿಯಿರಿ ತನ್ನೊಳು ರಿಪುಗಳ |
ಕಡೆ ವೀರರ ಧುರವೇನ್ನೈ | ಕೊಡನಾತ್ಮಜರೆಲ್ಲಿ || ೩೮೦ ||

ತವ ಪಿತನನು ಪಾಂಚಾಲಿಯು | ಸವರಿದ ದಿಟ ತಾ ನೋಡಿದೆ |
ಬವರದೊಳೆಂದೆನಲಾ ಕೃಪ | ಭವಶೌರ್ಯದಿ ನುಡಿದ || ೩೮೧ ||

**ಭಾಮಿನಿ**

ಸಿಟ್ಟಿನೊಳಗುರೆ ದ್ರೌಣಿ ಕರಗಳ |
ನೊಟ್ಟಿನಲಿ ಚಟಚಟನೆ ಸೆಳೆಯುತ ||
ಸೃಷ್ಟಿಯರಸನೆ ನಡೆ ಶಿಬಿರಕೆಂದಟ್ಟಿ ಧನುಗೊಂಡು ||
ಅಷ್ಟರಲಿ ಕೃಪ ನೇತ್ರಜಲಗಳ |
ಬಟ್ಟೆಯೊಳಗೊರಸಲ್ಕೆ ಕ್ರೋಧದಿ |
ತಟ್ಟನಾಹವಕೇಳೆ ನಡುಗಿತು ವಿಷ್ಟಪವು ಭಯದಿ || ೩೮೨ ||

ಕಂದನಶ್ವತ್ಥಾಮ ನಾನಿರ |
ಲಿಂದು ಜನಕನ ಕಚವ ಧೈರ್ಯದಿ |
ಬಂಧಿಸುತ ಪಿಡಿದೆಳೆದು ಖೂಳನು ತೋರ್ದ ಸಾಹಸವ ||
ಕಂಧರವ ಕಡಿದಿಪ್ಪ ದ್ರೋಹಿಯ |
ಬಂದು ಪಾರ್ಥರು ಬಿಡಿಸೆ ಬಿಡೆ ಬಿಡೆ |
ನಿಂದು ಹರಿಶರ ತೊಟ್ಟು ವೈರಿಯ ಬಡಿವೆ ದಿಟ ದಿಟವು || ೩೮೩ ||

ಅರ್ಭುತದ ಶೌರ್ಯದಲಿ ವೀರರ |
ಗರ್ಭ ನಡುಗುವ ತೆರದಿ ಕೇಸರಿ |
ಯಾರ್ಭಟೆಯ ಗೆಯ್ಯುತ್ತಲಶ್ವತ್ಥಾಮ ಬರೆ ಧುರಕೆ ||
ನಿರ್ಭಯದಿ ಬೇಗದಲಿ ದ್ರುಪದನ |
ಅರ್ಭಕನು ನಡೆತಂದು ಸೈನಿಕ |
ದರ್ಬುದವ ನೆರಸುತ್ತ ನಿಂತನು ಭಲರೆ ಭಲರೆಂದು || ೩೮೪ ||

**ರಾಗ ಕಾಂಭೋಜ ಮಟ್ಟೆತಾಳ**

ರಿಪುವ ಕಾಣುತಶ್ವತ್ಥಾಮ ನುಡಿದ ಕೋಪದಿ |
ಕಪಟದಿಂದ ಪಿತನ ಕಡಿದ ಹೇಡಿ ನಿಮಿಷದಿ ||
ಶಪಥದಿಂದ ಯಮನ ಪುರವ ತೋರ್ಪೆ ಧುರದಲಿ |
ವಿಪುಳಹತಿಯ ಸಹಿಸೆನುತ್ತ ಹೊಡೆಯೆ ಸರಳಲಿ || ೩೭೫ ||

ಫಡಫಡೆಂದು ಧೃಷ್ಟದ್ಯುಮ್ನ ನಿಮ್ಮ ಜನಕನ |
ಕಡಿದ ಖಡ್ಗವೆಂದು ನುಡಿದು ತೋರುತಾಕ್ಷಣ ||
ಕೊಡುವುದೀಗ ನಿಮಗೆ ಬವರದೊಳಗಿದುತ್ತರ |
ಒಡನೆ ಕಡಿವೆ ಕೌರವೇಂದ್ರ ಕಡೆಯ ವೀರರ || ೩೭೬ ||

ಇನಿತು ನುಡಿದು ಕಾದುತಿರ್ಪ ಕ್ಷಣದಿ ದ್ರೋಣನ |
ತನಯ ಧೃಷ್ಟದ್ಯುಮ್ನ ಸೆರೆಯ ಪಿಡಿವೆ ತತ್‌ಕ್ಷಣ |
ಎನುವ ಸಮಯದಲ್ಲಿ ಭೀಮ ಪಾರ್ಥರೀರ್ವರು |
ಘನತರಾಸ್ತ್ರವೆಸೆದು ಬೇಗ ಬಿಡಿಸಿ ನಿಂತರು || ೩೭೭ ||

**ರಾಗ ಶಂಕರಾಭರಣ ಮಟ್ಟೆತಾಳ**

ಅಷ್ಟರೊಳಗೆ ಗುರುಸುಪುತ್ರ | ಸಿಟ್ಟಿನಲ್ಲಿ ಪಾರ್ಥಗೆಂದ |
ಇಷ್ಟಶಿಷ್ಯನೆಂದು ಜನಕ | ನಿಟ್ಟ ಪ್ರೀತಿಗೆ || ೩೭೮ ||

ಇಷ್ಟು ಫಲವ ಧುರದಿ ಪಿತಗೆ | ಕೊಟ್ಟೆಯಲ್ಲ ಶಿಷ್ಯನಾಗಿ |
ಸೃಷ್ಟಿಯೊಳಗೆ ನಿನ್ನ ಪೋಲ್ವ | ದಿಟ್ಟನಾವನು || ೩೭೯ ||

ದ್ರೋಣತನಯ ನಿಮ್ಮ ಜನಕ | ಗೋಣ ಕೊಯ್ವೆನೆಂದು ಬರಲು |
ತ್ರಾಣ ತೋರ್ದೆವಲ್ಲಿ ನಾವು | ಪ್ರಾಣ ಪೊರೆಯಲು || ೩೮೦ ||

ಶಕ್ರಸುತನೆ ಸಾಕು ನಿನ್ನ | ವಕ್ರಮಾತು ನಿಲ್ಲಿಸುವೆನು |
ಚಕ್ರಧಾರಿದಯದಿ ಪೇಳ್ದ | ವಿಕ್ರಮಂಗಳ || ೩೮೧ ||

ಪಾಕಶಾಸನಿಯು ನುಡಿದ | ಲೋಕಧರನು ನಮ್ಮ ಬಿಡನು |
ಕಾಕು ನುಡಿಗಳೇಕೆ ಜಯದ | ಸೋಕು ದೊರೆವುದೆ || ೩೮೨ ||

**ಭಾಮಿನಿ**

ಕಿಡಿಯುಗುಳಿ ಕಂಗಳಲಿ ಕಲ್ಪದ |
ಸಿಡಿಲೆರಗಿ ಭೂವಲಯ ಸುಡುವುದೊ |
ಮೃಡನು ಬಂದನೊಯೆನುತ ಗಗ್ಗಡ ನಡುಗೆ ಸೈನಿಕರು ||
ಕೊಡನ ಸುತನಾತ್ಮಜನು ಶುಚೆಯಲಿ |

ಪಿಡಿದು ನಾರಾಯಣಕಳಂಬವ |
ತೊಡಲು  ಸಮರಾಂಗಣವು ಭಯದಲಿ ಚಿತ್ರದಂತಾಯ್ತು  || ೩೮೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರಿಯು ಪಾರ್ಥಗೆ ಪೇಳ್ದ ತನ್ನಯ | ಶರವ ವೈರಿಯು ಬಿಟ್ಟನಿದಕಿಂ |
ದಿರವು ಬೇರಿಲ್ಲಿಂದು ನಮಿಸಿರಿ | ಭರದೊಳೆಂದ  || ೩೮೪ ||

ಪಾರ್ಥ ಮುಂತಾಗಿರುವ ಸೇನೆಯ | ಪಾರ್ಥಿವರು ವಂದಿಸಲು ಭೀಮನು |
ವ್ಯರ್ಥ ಜನಿಸಿದಿರೆಂದ ಕ್ಷತ್ರಿಯ | ಸಾರ್ಥದೊಳಗೆ  || ೩೮೫ ||

ಷಂಡರಂದದೊಳರಿಯ ಶರಗಳ | ಕಂಡು ನಮಿಸುವ ಭೀರು ರಥಿಕರೆ |
ಗಂಡುತನ ಸುಡಲೆನಲು ಭೀಮನ | ಮಂಡೆಯೊಳಗೆ  || ೩೮೬ ||

ಗಿರಿಯ ಶೃಂಗದೊಳರುಣತೇಜದಿ | ಶರವು ಜ್ವಲಿಸಲು ಕಂಡು ಪಾರ್ಥನು |
ಶಿರದ ಸುತ್ತಲು ವಾರುಣಾಸ್ತ್ರದಿ | ಸುರಿಸೆ ನೀರ  || ೩೮೭ ||

ಆ ಕ್ಷಣದಿ ಶರಜ್ವಾಲೆಯಿಂ | ದಕ್ಷೆಹಿಣೀ ಸೈನಿಕರು ಬೀಳಲು |
ಪಕ್ಷಿರಥ ಮಾರುತಿಯ ತನ್ನಯ | ಪಕ್ಷಕಾಗ  || ೩೮೮ ||

ಸೆಳೆಯೆ ದೇಹವು ಬಳುಕಿ ಬಗ್ಗಲು | ತೊಳಕಿಪೋದುದು ಶರವು ಭೀಮನ |
ತಲೆಯ ಕೂದಲ ಕೂಡ ದಹಿಸದೆ | ಸುಲಭದೊಳಗೆ  || ೩೮೯ ||

**ಭಾಮಿನಿ**

ಹರುಷಗೊಂಡರು ಪಾರ್ಥಿವರು ಮಿಗೆ |
ನರನು ಪುರುಷೋತ್ತಮನ ಮೋಹದೊ |
ಳೆರಗುತಪ್ಪುತ ಕಾಯ್ದಿರೆಂದನು ಪರಮದಯದಿಂದ ||
ಹರಿಯು ಸ್ಮಿತಮುಖನಾಗಿ ಪೇಳ್ದನು |
ಪರಮಭಕ್ತನು ಭೀಮನದರಿಂ |
ತೊರೆದು ಪೋದುದು ರೋಮಗಳ ಸಹ ತರಿಯದಾ ಶರವು  || ೩೯೦ ||

**ರಾಗ ಮಾರವಿ ಏಕತಾಳ**

ದ್ರೋಣಾತ್ಮಜ ತಾ ರೋಷದಿ ಕಾಣುತ | ದಾನವರಿಪು ಗೆಯ್ದ ||
ಶಾಣೆತನವತಾ ನೋಡುತಲಗ್ನಿಯ | ಬಾಣವ ಮಿಗೆ ಬಿಸುಟ  || ೩೯೧ ||

ಬಂದಾಕ್ಷಣ ಶರ ಸೇನೆಯ ವೇಗದೊ | ಳೊಂದಕ್ಷೆಹಿಣಿಯ ||
ವೃಂದವ ಸುಡುತಿರೆ ಮಂದರಧರ ಗೋ | ವಿಂದನು ನರಗೆಂದ  || ೩೯೨ ||

ಬಂದಿಹ ಶರವಿದಕಾಗದು ವಾರುಣ | ಮುಂದರಿಸಿತು ಶರವು ||
ಕುಂದದೆ ವೈಷ್ಣವಮಂತ್ರದಿ ರಿಪುಶರ | ವೃಂದವ ಶಮಿಸೆಂದ || ೩೯೩ ||

ಕಂತುಪಿತನ ನುಡಿ ಕೇಳುತ ಧೈರ್ಯದಿ | ಕುಂತಿಯ ಸುತ ತಾನು ||
ನಿಂತಾಕ್ಷಣ ಹರಿಮಂತ್ರವ ಜಪಿಸುತ | ಸಂತೋಷದಿ ಬಿಡಲು || ೩೯೪ ||

**ಭಾಮಿನಿ**

ಭರದಿ ವೈಷ್ಣವಶರವು ವಹ್ನಿಯ |
ಹರಿಬಕನುವಾಗುತ್ತ ಶಮಿಸಲು |
ಪರಮಹರುಷದಿ ನುತಿಸೆ ಮಾರ್ಬಲವೆಲ್ಲ ಜಯವೆನುತ ||
ಅರಿತು ದ್ರೋಣನ ತರಳ ಕೋಪದಿ |
ಪರಮ ಋಷಿಗಳು ಪೇಳ್ದ ಮಂತ್ರಗ |
ಳರಿಯೊಳಿಂದಿಲಿ ವ್ಯರ್ಥವಾದುದೆನುತ್ತ ಧನು ಬಿಸುಟು || ೩೯೫ ||

ತೊಟ್ಟ ಕವಚವ ಬತ್ತಳಿಕೆ ಶರ |
ವೊಟ್ಟಿನಲಿ ಬಿಸುಟೆದ್ದು ನಡೆಯಲು |
ಸೃಷ್ಟಿಪತಿ ಧೃತರಾಷ್ಟ್ರಸುತ ಭೋ ಕೆಟ್ಟೆನೆನುತೆಂದ ||
ಬಿಟ್ಟು ಸಮರಾಂಗಣದಿ ನೀವು ಗ |
ಳಿಷ್ಟು ಸಿಟ್ಟಲಿ ನಡೆದರೆಮ್ಮಯ |
ಕಷ್ಟಗಳ ಪರಿಹರಿಪರಾರಿನ್ನೊಮ್ಮೆ ಬಿಡಿ ಶರವ || ೩೯೬ ||

ಅಷ್ಟರಲಿ ಗುರುಜಾತ ಕೋಪಿಸಿ |
ಸೃಷ್ಟಿಪತಿಯೊಡನೆಂದ ನಾವುಗ |
ಳೆಷ್ಟು ಸಾಹಸ ತೋರ್ದೆವೀ ರಣದೊಳಗೆ ನಿನ್ನಿದಿರು ||

ಕೃಷ್ಣ ದಯದಲಿ ಸತತ ಪಾಂಡವ |
ರಿಷ್ಟ ಸಲಿಸುವ ಮರುಳೆ ಪುನರಪಿ |
ಬಿಟ್ಟ ಹರಿಶರ ತೊಡಲು ತನಗಧಿಕಾರವಿಲ್ಲೆಂದ || ೩೯೭ ||

**ಕಂದ**

ಈ ಪರಿಯೊಳ್ ದ್ರೌಣಿಯು ಕುರು |
ಭೂಪತಿಗರುಹುತ ತೆರಳಲಿಕಿತ್ತಲು ತಿಳಿದುಂ ||
ತಾಪಸ ವೇದವ್ಯಾಸ ಸ್ವ |
ರೂಪಿಯು ಬಂದಾಗ ದ್ರೌಣಿಯಂ ತಡೆದೆಂದಂ || ೩೯೮ ||

**ವಾರ್ಧಿಕ**

ಗುರುಸುತನೆ ಕೇಳು ಪಿಂತಿರುಗಿ ಪೋಪೆಯದೆಲ್ಲಿ |
ಗರಿತು ನೋಡಂತರದೊಳಾರೆಂದು ನಿನ್ನ ನಿಜ |
ಧರಣಿಯೊಳು ದುಷ್ಟನಿಗ್ರಹಕಾಗಿ ಪುಟ್ಟಿರುವ ಹರ ಮಹಾದೇವ ನೀನೇ ||
ಕುರುವರನ ಮಧ್ಯಸಂಗರದಿ ಬಿಡಲನುಚಿತವು |
ಧರಿಸು ಚಾಪಾಂಬುಗಳನೆಂದೆನಲು ನಾಳೆ ಸಂ |
ಗರ ಕೊಡುವೆನೆನುತಾತನಾಜ್ಞೆಯಂ ಕೈಗೊಂಡು ತೆರಳಿದಂ ಮೌನದಿಂದ || ೩೯೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶ್ರೀರಮಣ ತಾನಿತ್ತ ಪಾರ್ಥಸ | ಮೀರಸುತರನು ಕಾಣುತಲಿ ಜಯ |
ಭೇರಿ ಹೊಡಿಸೀಗೆಮಗೆ ಜಯ ಕೈ | ಸೇರಿತೆನುತ  || ೪೦೦ ||

ಶಂಖ ಭೇರಿ ಕಹಾಳೆ ಧ್ವನಿಗಳ | ಪಂಕಜಾಂಬಕನಿದಿರು ಪಾರ್ಥನ |
ಕಿಂಕರರು ಗೆಯ್ದಿದರು ಬಲು ನಿ | ಶ್ಯಂಕೆಯಿಂದ  || ೪೦೧ ||

ಭೀಮ ಬಲಭಾಗದಲಿ ಪೊಗಳುತ | ವಾಮಭಾಗದಿ ವಿಜಯನೀಪರಿ |
ಕಾಮಪಿತ ತಾ ನಡುವೆ ನಡೆದನು | ಧಾಮವನ್ನು  || ೪೦೨ ||

ರೋಮಹರ್ಷಣಿ ಪೇಳ್ದ ಗುಣನಿ | ಸ್ಸೀಮ ಜನಮೇಜಯನೊಳೀಪರಿ |
ಶ್ರೀ ಮಹಾಭಾರತದ ಕಥೆಯನು | ಪ್ರೇಮದೊಳಗೆ  || ೪೦೩ ||

ಈ ಜಗದಿ ಗುರುರಾಜ ಸೇವಕ | ರಾಜಗೋಪಾಲಾಖ್ಯ ಸುಜನಸ ||
ಮಾಜಕೊಂದಿಸಿ ಪೇಳ್ದ ಪಾಂಡುಜ | ರಾಜಕಥೆಯ  || ೪೦೪ ||

ಕವಿಗಳಿದ ಮನ್ನಿಪುದುಯೆನ್ನಯ | ಕವಿತೆಯಲಿ ತಪ್ಪಿರಲು ಶ್ರೀ ಮಾ |
ಧವನ ಚರಿತಾಮೃತದ ಮಧುರಸ | ಸವಿಯ ನೋಡಿ  || ೪೦೫ ||

**ಮಂಗಳ**

**ರಾಗ ಧವಳ ಆದಿತಾಳ**

ಮಂಗಳ ಮಾಧವಗೆ | ಯದುಕುಲ | ಪುಂಗವ ಶ್ರೀಹರಿಗೆ ||
ಅಂಗನೆ ದ್ರೌಪದಿಗಕ್ಷಯವಹವಸ |
ನಂಗಳನಿತ್ತ ವಿಹಂಗಮಗಮನಗೆ || ಮಂಗಳಂ  || ೪೦೬ ||

ಸಾದರದಲಿ ನಿನ್ನ | ಭಜಿಸುವೆ | ಬಾದರಾಯಣರನ್ನ ||
ಸೋದೆಯ ಮಠದಲಿ ಭಾವಿ ಪ್ರಭಂಜನ |
ವಾದಿರಾಜರಿಗೊಲಿದಿಹ ಹಯವದನಗೆ || ಮಂಗಳಂ  || ೪೦೭ ||

ಭೂದೇವಿಯ ಕರದಿ | ಸುಸೇವ್ಯ | ಶ್ರೀದ ಹರಿಯ ಭರದಿ ||
ಆದಿವರಾಹನ ರೂಪದಿ ಮೋದವ |
ಸೋದೆಯ ಮಠದೊಳನವರತ ಕೊಡುವಗೆ || ಮಂಗಳಂ || ೪೦೮ ||

ಗೋತ್ರವನೆತ್ತಿಹಗೆ | ಯತಿಗಳ | ಸ್ತೋತ್ರದಿ ಮೋದಿಪಗೆ ||
ಧಾತ್ರಿಯೊಳಗೆ ವಿಧುನಾಮದಿ ಮೆರೆಯುವ |
ಕ್ಷೇತ್ರದೊಳಿರ್ಪ ಶ್ರೀಕೃಷ್ಣಮೂರುತಿಗೆ || ಮಂಗಳಂ || ೪೦೯ ||

*ಯಕ್ಷಗಾನ ದ್ರೋಣಪರ್ವ ಮುಗಿದುದು*

# ಯಕ್ಷಗಾನ ಭೀಷ್ಮಾರ್ಜುನರ ಕಾಳಗ

## ಪಾತ್ರಗಳು

| | | | | | |
|---|---|---|---|---|---|
| ಪಾಂಡವರು | ಶ್ರೀಕೃಷ್ಣ | ದೂತರು | ಶಲ್ಯ | ದೃಷ್ಟದ್ಯುಮ್ನ | ಇರಾವಂತ |
| ಅಶ್ವತ್ಥಾಮ | ರಾಜರು | ಭೀಷ್ಮ | ದುರ್ಯೋಧನ | ಕರ್ಣ | ಭಗದತ್ತ |
| ಘಟೋತ್ಕಚ | ಅಭಿಮನ್ಯು | ಶಿಖಂಡಿ | ಸೈನಿಕರು | | |

# ಯಕ್ಷಗಾನ ಭೀಷ್ಮಾರ್ಜುನರ ಕಾಳಗ

**ಶಾರ್ದೂಲವಿಕ್ರೀಡಿತಂ**

ಗೋಪಾಲಂ ಕರುಣಾಕರಂ ಗುಣನಿಧಿಂ ದೈತ್ಯಾಂತಕಂ ಕೇಶವಂ
ಶ್ರೀ ಪದ್ಮಾಕ್ಷಸುರತ್ನಭೂಷಣಯುತಂ ಶ್ರೀಶಂ ಸುರೇಶಾರ್ಚಿತಮ್ |
ಗೋಪಸ್ತ್ರೀಪರಿವೇಷ್ಟಿತಂ ಮುರರಿಪುಂ ಕ್ಷೀರಾಬ್ಧಿವಾಸಂ ಹರಿಂ
ಅಪದ್ಭಾಂಧವಭಕ್ತ ವತ್ಸಲವಿಭುಂ ಲಕ್ಷ್ಮೀನೃಸಿಂಹಂ ಭಜೇ ||

**ರಾಗ ನಾಟಿ ಝಂಪೆತಾಳ**

ಕರಿವದನ ಹರಜಾತ | ಶರಣಜನಸಂಪ್ರೀತ |
ಪೊರೆಯೆನ್ನ ಗಣನಾಥ | ಗಿರಿಜೆಸಂಭೂತ || ಜಯ ಜಯತು ಜಯತು || ೧ ||

ತರುಣಾರ್ಕಕೋಟಿಸಂ | ಕಾಶ ಕುಂಡಲಭೂಷ |
ಸುರನರೋರಗನಮಿತ | ಸದ್ಗುಣಭರಿತ | ಜಯ ಜಯತು ಜಯತು || ೨ ||

ನಂಬಿದೆನು ನಾ ನಿನ್ನ | ಸಂಭ್ರಮದಿನೀನೆನ್ನ |
ಬೆಂಬಿಡದಿರು ಮುನ್ನ | ಭಜಿಪೆ ಸಂಪನ್ನ | ಜಯ ಜಯತು ಜಯತು || ೩ ||

**ಭಾಮಿನಿ**

ಕಾಳಿ ಕಾತ್ಯಾಯನಿ ಕಪರ್ದಿನಿ |
ಫಾಲಲೋಚನೆ ಚಂಡಿ ಶಾಂಭವಿ |
ಜ್ವಾಲಿನೀ ತ್ರಿಪುರೇಶಿ ಭ್ರಾಮರಿ ದುರ್ಗಿ ವಾರಾಹಿ ||
ಕಾಲರಾತ್ರೇಂದ್ರಾಣಿ ಭಗವತಿ |
ಶೂಲಿನೀ ಹ್ರೀಂಕಾರಿ ಪಾರ್ವತಿ |
ಪಾಲಿಸೆನ್ನನು ತ್ರಿಪುರಸುಂದರಿ ರಾಜರಾಜೇಶಿ || ೪ ||

**ದ್ವಿಪದಿ**

ಹರಿ ಹರಬ್ರಹ್ಮಾದಿಗಳಿಗೆ ವಂದಿಸುವೆ |
ಸಿರಿ ಗೌರಿ ವಾಗ್ದೇವಿಯರನು ಪೂಜಿಸುವೆ || ೫ ||

ಪರಮವೇದವ್ಯಾಸಮುನಿಪಗಭಿನಮಿಸಿ |
ವರಮಾತೃಪಿತೃವರ್ಗಗಳನು ಸಂಸ್ತುತಿಸಿ || ೬ ||

ನರಹರಿಯ ಕರುಣದೊಳಗೆಕ್ಷಗಾನದೊಳು |
ವಿರಚಿಸುವೆ ಸಕಲರಿದ ಮೆರೆಸಿ ಮೋದದೊಳು || ೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮುನಿಪ ವೈಶಂಪಾಯ ಜನಮೇ | ಜಯಗೆ ಬೋಧಿಸೆ ಭಾರತಾಮೃತ |
ವನಧಿಯೊಳು ಕುರುಪಾಂಡುಸೇನೆಯ | ಧುರದ ಪರಿಯ || ೮ ||

ಸುರ ತರಂಗಿಣಿತನಯ ಸೇನಾ | ಶರಧಿಯಧಿಪತಿಯೆನಿಸಿ ದಶದಿನ |
ಧುರವೆಸಗಿ ಶಯನಿಸಿದನೇತಕೆ | ಶೂರನವನು || ೯ ||

ಅರುಹಬೇಹುದೆನುತ್ತಲೆರಗಿದ | ಧರಣಿಪನ ತಕ್ಕೈಸಿ ಪೇಳಿದ |
ವರಮುನಿಪ ಸತ್ಕಥೆಯನೆಲ್ಲವ | ವಿವರವಾಗಿ || ೧೦ ||

ಒಂದು ದಿನ ಧರ್ಮಜನು ವಿಭವದಿ | ಬಂದು ಒಡ್ಡೋಲಗದಿ ಮಂಡಿಸಿ |
ಚಂದದೊಳಗನುಜಾತರೆಲ್ಲರ | ಕರೆದು ಪೇಳ್ದ || ೧೧ ||

**ರಾಗ ಕೇದಾರಗೌಳ ಅಷ್ಟತಾಳ**

ಅನುಜಾತರಿರ ಕೇಳಿ ಧುರದೊಳು ರಾಜ್ಯವ | ನನುಕರಿಸುವುದೆನ್ನುತ ||
ಚಿನುಮಯನೊಳು ಪೇಳಿ ಕಳುಹಿದ ಕೌರವ | ನೆಣಿಸೆ ದುರ್ಬುದ್ಧಿಗಳು || ೧೨ ||

ಹರಿಯ ನೇಮದಿ ಧುರಕೋಸುಗ ಸಹಯಕೆ | ಪುರಜಿತು ದ್ರುಪದ ಶೈಬ್ಯ |
ಧರಣಿಪ ಪ್ರತಿವಿಂಧ್ಯ ಕಾಶೀಶ ವೈರಾಟ | ಸರುವರ ಕರೆಸಿಹೆವು || ೧೩ ||

ಸೇನಾಧಿಪತ್ಯವ ಧೃಷ್ಟದ್ಯುಮ್ನಗೆ ನಾವು | ಮಾನಿಸಿರ್ಪೆವು ಮೊದಲೆ |
ಚೂಣಿಗಳೆಣಿಸಲೇಳಕ್ಷೌಹಿಣಿಗಳಾಯ್ತು | ದಾನವಾರಿಯ ದಯದಿ || ೧೪ ||

ಒಂದೇ ವಂಶಾವಳಿಯೊಳು ಪುಟ್ಟಿ ದುಷ್ಕರ್ಮ | ಬಂಧದಿ ಬಿಗಿವಡೆದು ||
ಬಂಧುಬಾಂಧವಗುರುಹಿರಿಯರೊಳ್ ಕಲಹವ | ತಂದನು ಕೌರವನು || ೧೫ ||

ಮೂರು ದಿನದ ಹಗರಣಕೀಗ ನಮ್ಮೊಳು | ಹೋರುವುದೇಕೆನಲು ||
ಮಾರುತಾತ್ಮಜ ಖತಿಯೇರಿ ಗರ್ಜಿಸಿ ಹೂಂ | ಕಾರದೊಳಿಂತೆಂದನು || ೧೬ ||

**ರಾಗ ಭೈರವಿ ಏಕತಾಳ**

ಕೂಡಿದ ಸಭೆಯೊಳು ಸತಿಯ | ಎಳೆ | ದಾಡುತ ಬಿಚ್ಚಿದ ಮುಡಿಯ |
ಗಾಢದಿ ಸೀರೆಯ ಸೆಳೆದು | ಮತಿ | ಗೇಡಿಯು ಕುಣಿದಿಹ ನಲಿದು || ೧೭ ||

ಕಂಡಿರೆ ನೀವದ ಹಿಂದೆ | ಬಹು | ಭಂಡರು ನಾವೈ ಮುಂದೆ |
ಮಂಡೆಯ ತಗ್ಗಿಸಿ ವನಕೆ | ಹೋ | ಗ್ಯಂಡಲೆದೆವು ಜೀವನಕೆ || ೧೮ ||

ಮುನಿಪತಿ ದುರ್ವಾಸನನು | ಬಲು | ಘನತೆಯೊಳ್ ಕಳುಹಿದನವನು ||
ಚಿನುಮಯ ಕಾಪಾಡಿದನು | ಇದ | ನೆಣಿಸದೆ ಎನ್ನಗ್ರಜನು || ೧೯ ||

ಕುರುಪತಿಯನು ಪೊಗಳುತಲಿ | ತಾ | ತೆರಳಲಿ ವಿಪಿನಕಿಂದಿನಲಿ |
ಹರನಡ್ಡೈಸಲು ಬಿಡೆನು | ಸಂ | ಹರಿಪೆನು ಕೌರವರನ್ನು || ೨೦ ||

ತಿರುಹುತಲಾ ಕ್ಷಣ ಗದೆಯ | ಹೆ | ಮ್ಮರಗಳ ನೋಡುವ ಪರಿಯ ||
ಪರಿಕಿಸಿ ಧರ್ಮಜನಾಗ | ತಾ | ಳರೆಕ್ಷಣವೆನ್ನುತ ಬೇಗ || ೨೧ ||

**ಭಾಮಿನಿ**

ತಮ್ಮ ಲಾಲಿಸು ತಾತ ಗುಣಸಂ |
ಪನ್ನ ನಿನ್ನಭಿಮತವ ಮೀರೆನು |
ನಮ್ಮವರು ಮತ್ತೊಮ್ಮೆ ಸಾರುತ ಕೊಲಲು ದೋಷಿಲ್ಲ ||
ತಮ್ಮ ಸೈರಿಸು ಸೈರಿಸೆನುತಲಿ |

ಧರ್ಮಜನು ಫಲುಗುಣನ ನೋಡುತ |
ಲೊಮ್ಮೆ ನಿನ್ನಯ ಮತಗಳೇನೆನೆ ಪೇಳ್ದ ಕೈಮುಗಿದು || ೧೧ ||

**ವಾರ್ಧಕ**

ಸಂಧಿಗಯ್ದಿದ ಹರಿಯ  ದುರುಳರತ್ಯುಗ್ರದಿಂ |
ಬಂಧಿಸಲ್ ಮನಮಾಡಿಯಪಮಾನಗೆಯ್ದಿಹರು |
ಹಿಂದೆ ಲಾಕ್ಷಾಗೃಹದೊಳುರಿಯಿಕ್ಕಿ ಗರಳಮಂ ಮೆಲಲಿತ್ತ ಕಡುಮೂರ್ಖರ ||
ಹಿಂದೆಗೆಯದೀಗ ಸಂಹರಿಸಿ ರಾಜ್ಯವ ಸೆಳೆವು |
ದೊಂದೆ ಛಲವಿಹುದೆನಗೆ ಮರುಕವಿಲ್ಲಗ್ರಜನೆ |
ವಂದಿಪೆನು ಕ್ಷಾತ್ರಧರ್ಮಗಳಂತೆ ಸಂಗರವ ವಿರಚಿಪುದೆ ಸರಿಯೆಂದನು || ೧೩ ||

**ಭಾಮಿನಿ**

ಸುರಪಸುತನಿಂತೆನಲು ಧರ್ಮಜ |
ಸೊರಗಿ ಚಿಂತಾಂಬುಧಿಯೊಳಾಳು |
ತ್ತಿರುವ ಕಾಲದೊಳಲ್ಲಿಗಯ್ತಂದನು ಮುರಾಂತಕನು ||
ಹರುಷದಿಂದಭಿನಮಿಸಿ ವೇಗದಿ |
ಸುರುಚಿರಾಸನವಿತ್ತು ಮನ್ನಿಸಿ |
ಪರಿಪರಿಯ ಸತ್ಕರಿಸೆ ಮಗುಳಿಂತೆಂದ ಶ್ರೀಹರಿಯು || ೧೪ ||

**ರಾಗ ಸುರುಟಿ ಏಕತಾಳ**

ಅರಿಗಳು ಶೌರ್ಯದೊಳು | ಮುಂದೈ | ತರುವರು ಸಮರದೊಳು ||
ಪರಿಭವ ಕಾಂಬುತ್ಸಾಹದೊಳಿಲ್ಲದೆ | ಮರುಕವಕೊಂಡಿಹುದೇತಕೆ ಧರ್ಮಜ  || ೧೫ ||

ಕುಂಭಿನಿಪರ ಬಿರುದು | ಸಮರಾ | ರಂಭದಿ ಖತಿವೆರೆದು |
ಮುಂಬರಿದುತ್ಸಾಹದೊಳುರೆ ಪೋಪುದು | ಸಂಭ್ರಮಕಾಲದಿ ಮರುಗುವುದೇತಕೆ || ೧೬ ||

ಕಾರ್ಯಾರಂಭದೊಳು | ಶೋಕಿಸ | ಲಾರರು ತಿಳಿದವರು ||
ಭೋರನೆ ಸಮರಕೆ ಪೊರಡೇಳೇಳೆನೆ | ವಾರಿಜನಾಭಗೆ ನಮಿಸುತಲೆಂದನು || ೧೭ ||

**ರಾಗ ಶಂಕರಾಭರಣ ಆದಿತಾಳ**

ಶ್ರೀಲಲನಾಪತೇ | ಪಾಹಿ ಮುರಾರೇ || ಭೂಲಲನೆಯು ಬೇಡ | ಬೇಡೆಲೊ ಶೌರೇ   || ಪ ||

ಬಂಧುಬಾಂಧವ ಗುರು | ಹಿರಿಯರೊಳಿಂದು ||
ನಿಂದು ಕಾದುವುದೆಂತು | ಸದ್ಗುಣಸಿಂಧು || ಶ್ರೀಲಲನಾಪತೇ || ೧೮ ||

ಲೇಸೆನಗಾರಣ್ಯ | ವಾಸವೆ ಕೇಳು ||
ದೋಷಕಾರ್ಯವ ಗೆಯ್ಯ | ಲಾರೆ ದಯಾಳು | ಶ್ರೀಲಲನಾಪತೇ || ೧೯ ||

ಅಸ್ಥಿರ ಸಾಮ್ರಾಜ್ಯ | ಕನಸಿನ ನಂಟು ||
ಅಸ್ಥಿರದೇಹದ | ರ್ಪಣದೊಳಗಂಟು || ಶ್ರೀಲಲನಾಪತೇ || ೨೦ ||

**ರಾಗ ಕೇದಾರಗೌಳ ಝಂಪೆತಾಳ**

ಅಂತಕಾತ್ಮಜನುಡಿಯನು | ಕೇಳುತಲಿ | ಕಂತುಪಿತ ಮಗುಳೆಂದನು |
ಪಿಂತೆ ಕೌರವ ಮೂರ್ಖನು | ಉಪಕೃತಿಯ | ಸಂತಸದೊಳೆಸಗಿರ್ಪನು || ೭೧ ||

ಹಿರಿಯರೆಂದುದ ಕೇಳದೆ | ಧಾತ್ರಿಯನು | ಬರಸೆಳೆದ ನಿಮಗೀಯದೆ ||
ಪೊರಡಿಸಿದ ಪುರದಿಂದಲಿ | ಪರಿಪರಿಯ | ಮರುಗಿಸಿದ ದುರ್ಮದದಲಿ || ೨೨ ||

ಇರೆ ನಿನಗೆ ಕೃಪೆಯವನಲಿ | ನರವೃಕೋ | ದರರಿಂದ ಸಂಗರದಲಿ ||
ದುರುಳನನು ಸಂಹರಿಸುವೆ | ಎನ್ನಳಲ | ಹರುಷದಿಂದಲಿ ತೀರ್ಚುವೆ || ೩೩ ||

ಎನುತ ಚಿನ್ಮಯನೇಳಲು | ಯಮತನುಜ | ಮನದಿ ಯೋಚಿಸುತಾಗಳು ||
ದನುಜಾರಿ ನಿನ್ನ ಮತವ | ಮೀರುವೆನೆ | ಸನುಮತವು ಶ್ರೀಕೇಶವ || ೩೪ ||

**ಭಾಮಿನಿ**

ಇಂತೆನಲು ಗೋವಿಂದನೆಂದನು |
ಸಂತಸದಿ ಕುರುರಂಗಭೂಮಿಗೆ |
ದಂತಿತುರಗಪದಾತಿ ಸೇನೆಗಳೆಲ್ಲ ಪೊರಮಡಲಿ ||
ಕುಂತಿಸುತ ತಡಮಾಡಬೇಡೆನೆ |
ಚಿಂತೆಗಳ ನುಗ್ಗೊತ್ತಿ ಧರ್ಮಜ |
ಕಂತುಪಿತನಾಜ್ಞೆಯಲಿ ಗಜಮುಖನನ್ನು ಪೂಜಿಸುತ || ೩೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧನುಶರಾವಳಿಗಳನು ಧರ್ಮಜ | ವಿನಯದಿಂದರ್ಚಿಸುತ ಮಾತೆಯ |
ಘನಪದಾಬ್ಜಕೆ ಮಣಿದು ಮನದಲಿ | ತವಕದಿಂದ || ೩೬ ||

ಕರೆದು ಧೃಷ್ಟದ್ಯುಮ್ನಗಂತಕ | ತರಳ ಪೇಳಿದ ಸಕಲ ಸೇನೆಯ |
ನನುಕರಿಸಬೇಕೆನಲು ದ್ರುಪದಕು | ಮಾರನಾಗ || ೩೭ ||

**ರಾಗ ಮಾರವಿ ಏಕತಾಳ**

ಕರೆಸುತ ದೊರೆಗಳ ತುರಗಪದಾತಿಯ | ಕರಿಸಮುದಾಯಗಳ |
ಪರುಠವಿಸಲು ಗೋವಿಂದನು ಪಾರ್ಥನ | ಕರೆದುಸಿರಿದನಾಗ || ೩೮ ||

ಏರೈ ರಥವನು ಪಿಡಿ ಗಾಂಡೀವವ | ಸಾರೀ ಕ್ಷಣವೆನಲು ||
ವಾರಿಜನಾಭಗೆ ನಮಿಸುತಸ್ಯಂದನ | ವೇರಿದ ಕ್ಷಣದೊಳಗೆ || ೩೯ ||

ಮುಂದೆಸೆ ಧರ್ಮಜ ಬಲಗಡೆ ಮಾರುತ | ನಂದನ ಪೊರಮಡಲು ||
ಚಂದದಿ ಮಾದ್ರಿಕುಮಾರರು ಪಾರ್ಶ್ವದಿ | ಬಂದರು ವಿಭವದಲಿ || ೪೦ ||

ಏಳಕ್ಷೌಹಿಣಿ ಸೇನೆಯ ಮಧ್ಯದಿ | ಪಾಲಾಂಬುಧಿಶಯನ |
ಭೂಲಲನೆಯು ಬಾಯ್ದೆರೆಯುವ ತೆರದಲಿ | ಶಂಖವಮೊಳಗಿಸಿದ || ೪೧ ||

ಭೇರಿನಗಾರಿಯು ತಮ್ಮಟೆರವಗಳು | ಭೋರಿಡೆ ಮೋಹರವು ||
ಸೂರಿಯಮಂಡಲ ಮುಸುಕಿತು ಕೆಂಧೂ | ಳೇರುತ ರವದಿಂದ || ೪೨ ||

**ವಾರ್ಧಕ**

ತೋರೆ ಮಂಗಲಶಕುನ ಪರಿಕಿಸುತ ಧರ್ಮಜಂ |
ಭೂರಿ ತೋಷವ ತಳೆದು ಕುರುಕ್ಷೇತ್ರಕಯ್ತಂದು |
ಡೇರೆಗಳನಿಕ್ಕಿ ಸಂತೋಷದಿಂ ನೆಲಸಿರಲು ವಾರಿಜಾಕ್ಷನ ನೇಮದಿ ||
ಧಾರಿಣಿಪ ಕೇಳಿತ್ತ ಕುರುರಾಯನೋಲಗಕೆ |
ಸಾರಿ ಮಾದ್ರೇಶ ಗುರು ಶಕುನಿ ಮುಂತಾದ ಮಣಿ |
ಹಾರಕರನೆಲ್ಲ ಸಂತಸದಿಂದ ಕುಳ್ಳಿರಿಸಿ ವೈಭವದೊಳಿಂತೆಂದನು || ೪೩ ||

**ರಾಗ ಕಾಂಭೋಜಿ ಝಂಪೆತಾಳ**

ಕೇಳಿರೈ ಮಾದ್ರೇಶಮುಖ್ಯರೆಲ್ಲರು ಕುಂತೀ | ಬಾಲಕರು ಸೇನೆಗಳ ಕೂಡಿ ಮೋದದಲಿ |
ಕಾಳಗಕೆ ಕುರುಕ್ಷೇತ್ರಕಾಗಿ ಬಂದಿಹರಂತೆ | ವೇಳೆಗಳೆಯಲು ಬಾರದಿನ್ನು (ಯೋಚಿಸಿರಿ) || ೪೪ ||

ಧುರಕಾಗಿ ಕಾಂಭೋಜ ಮಗಧ ಮಾಲವ ಹೂಣ | ದೊರೆಗಳಯ್ತಂದಿಹರು ಪರಮವಿಕ್ರಮರು ||
ಪರುಠವಿಸಿ ಹನ್ನೊಂದಕ್ಷೌಹಿಣಿಯು ಕರಿತುರಗ | ಭರಿತ ಕಾಲ್ಬಲ ರಥವು ಸಂದಣಿಗಳಿಹುದು || ೪೫ ||

ಆರು ಸೇನಾಧೀಶರಹರು ನಮ್ಮಯ ಬಲದಿ | ಶೂರಾಗ್ರೇಸರರಾಗಿ ನಡೆಸುವರು ಪಡೆಯ ||
ಪಾರಮಾರ್ಥದೊಳರುಹಿ ಸೇನಾನಿ ಪಟ್ಟವನು | ಯಾರಿಗೀಯುವುದೀಗ ತೋರಿರೆನಲವರು || ೪೬ ||

ಹರಿಯ ಮಾಯವನುಳಿದು ಮೆರೆದು ಸೇನೆಗಳನ್ನು | ಪರಿಪಾಲಿಸುವನೊಬ್ಬ ಗಾಂಗೇಯ ಶೂರ |
ಧುರ ಪರಾಕ್ರಮಿಯವನ ಬಿಟ್ಟನ್ಯರಿಲ್ಲೆಂದು | ಕುರುರಾಯಗರುಹಿದರು ಸಕಲ ಧರಣಿಪರು || ೪೭ ||

ಸರಿಯೆನುತ ಕೌರವನು ಪೊರಟು ನಿಶಿಕಾಲದಲಿ | ತೆರಳಿದನು ಗಾಂಗೇಯನಿರುವ ಬಳಿಗಾಗಿ ||
ಹರಿಯ ನೆನೆಯುತ ಮಂಚದೊಳಗೆ ಮಲಗಿರೆ ಭೀಷ್ಮ | ಗೆರಗಿದನು ಕುರುರಾಯನೆತ್ತಿ ಮುದ್ದಿಸುತ || ೪೮ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಕುರುಕುಲಾನ್ವಯತಿಲಕ ಬಾ ಬಾ | ತರಳ ಬಾರೀ ನಿಶಿಥಕಾಲದಿ |
ತೆರಳಿ ಬಂದಿಹುದೇತಕೋರ್ವನೆ | ಪೇಳು ಪೇಳ್ಕೆ ಮಾಜದೆ || ೪೯ ||

ಕುಂಭಿನಿಪ ಶಶಿಬಿಂಬದಂತಿಹ | ಸಂಭ್ರಮದ ಮುಖಕಮಲ ನೋಡಲು |
ಡಂಭಕಾವ್ಯಥೆಯೆಂಬ ಬಿಸಿಲಿನೊ | ಳಿಂಬುಗೊಂಡಿಹುದೇತಕೆ || ೫೦ ||

ಧರೆಯ ಸಾಮದಿ ಕೊಡೆನು ಸಂಗರ | ವಿರಚಿಸುವುದೆಂದೆನುತ ಚಿನ್ಮಯ |
ಗರುಹಿ ಕಳುಹಿದೆ ನೀನು ಮುಂದಣ | ಪರಿಯನರಿಯದೆ ತರಳನೆ || ೫೧ ||

**ರಾಗ ಮಾರವಿ ಏಕತಾಳ**

ಹರಿಯೊಳು ಧುರವೆಂದೆನುತಲೆ ಕಳುಹಿದೆ | ಮರುಕದಿ ಪಾಂಡವರ ||
ಪೊರೆಯುವರಾರೈ ಎಮ್ಮನು ಕೆಣಕುತ | ಬರುವರು ದಿನದಿನದಿ || ೫೨ ||

**ರಾಗ ಸಾಂಗತ್ಯ ರೂಪಕತಾಳ**

ಆದಿನಾರಾಯಣ ದುಷ್ಟ ಶಿಕ್ಷಣಕಾಗಿ | ಮೋದದಿ ದೇವಕಿಗುದಿಸಿ ||
ಸಾದರದೊಳು ಪಾಂಡುಜಾತರ ಪೊರೆಯುವ | ಭೇದಿಸಿಹನು ಕಂಸಾದಿಗಳ || || ೫೩ ||

**ರಾಗ ಮಾರವಿ ಏಕತಾಳ**

ಪೊರೆಯುವ ಮಹಿಮನು ವಿಪಿನಾಂತರಗಳ | ಚರಿಸುವ ಕಾಲದೊಳು ||
ಧರಣಿಯ ಕೊಡಿಸದೆ ಬಿಟ್ಟಿಹನೇತಕೆ | ಸರುವಥ ಕೊಡೆನಿನ್ನು || ೫೪ ||

**ರಾಗ ಸಾಂಗತ್ಯ ರೂಪಕತಾಳ**

ಕೆಡುಕ ಯೋಚಿಸಬೇಡ ಸತ್ಯಮಾರ್ಗಗಳನ್ನು | ಪಿಡಿದು ಪೋದರು ವನಕವರು ||
ಕೊಡದಿರೆಯರ್ಧರಾಜ್ಯವ ಕೃಷ್ಣ ಧುರದೊಳು | ಬಿಡದೆ ಹೊಂದಿಪಜಯಗಳನು || ೫೫ ||

**ಭಾಮಿನಿ**

ಧಾರಣಿಯೆ ತಲೆಕೆಳಗೆ ಮಗುಚಲಿ |
ವಾರಿಧಿಗಳೊಣಗೀಗ ಪೋಗಲಿ |
ಮಾರವೈರಿಯೆ ಸಮರಗೆಯ್ಯಲಿ ಪಾಂಡುಕುವರರಿಗೆ |
ಪಾರಮಾರ್ಥಿಕದಿಂದ ಗೋಷ್ಪದ |

ಧಾರಿಣಿಯ ಕೊಡೆ ಸಾಮದಿಂದಲಿ |
ಸೂರೆಗೊಳ್ಳಲಿ ಎನ್ನ ಸಿರಿ ಸಾಮ್ರಾಜ್ಯವಿಂದಿನಲಿ || ೫೬ ||

**ರಾಗ ಬೇಗಡೆ ಏಕತಾಳ**

ಮರುಳೆ ಕೌರವ ಕೇಳು ಪೇಳುವೆನು | ಮೂರ್ಖಂಗೆ ಬುದ್ಧಿಯ |
ನೊರೆಯೆ ಸಾರ್ಥಕವಲ್ಲ ಫಲವೇನು ||
ಉರಗನನು ಮಂತ್ರದಲಿ ಪುಷ್ಪದ | ಸರಗಳಂದದಿ ಮುಡಿಯಬಹುದೈ |
ಶರಧಿ ದಾಟಲು ಬಹುದು ಸಹಸದಿ | ಬರಿಸಬಹುದೈ ತೈಲ ಮಳಲೊಳು || ೫೭ ||

ಪಥ್ಯವಾಗದು ರೋಗಿಗೌಷಧವು | ಪ್ರಾಚೀನ ಕರ್ಮದೊಳ್ |
ಮೃತ್ಯು ಬಾಯ್ದೆರೆದಿರಲು ಸತ್ವಥವು |
ಮತ್ತರಿಗೆ ಕಂಗಾಣದಿರುವುದು | ವ್ಯರ್ಥ ಕೆಡುತಿಹೆಯೆಂಬ ಮನದಲಿ |
ಪೃಥ್ವಿಯರ್ಧವ ಕೊಟ್ಟು ನಿಮ್ಮೊಳು | ಚಿತ್ತಶುದ್ಧವ ತಾಳಿರೆಂದನು || ೫೮ ||

**ರಾಗ ಕೇದಾರಗೌಳ ಝಂಪೆತಾಳ**

ಕೆಟ್ಟವನು ನಾನೀಗಳು | ತತ್ತ್ವಗಳ | ನೆಷ್ಟು ಬೋಧಿಸೆ ಜಗದೊಳು ||
ಪುಟ್ಟಿಕೊಂಡಿಹ ಮನುಜನು | ಸಾಯುತಿಹ | ತೊಟ್ಟ ಛಲಗಳ ತ್ಯಜಿಸೆನು || || ೫೯ ||

**ರಾಗ ಸಾರಂಗ ಅಷ್ಟತಾಳ**

ಕರುಣದಿ ಕಿವಿಯ ಕೊಟ್ಟು | ಲಾಲಿಸು ಕೆಟ್ಟ | ದುರುಳತನಗಳ ಬಿಟ್ಟು |
ಬರಿದೆ ಕೊಡನ ಮಗುಚಿ ಸುರಿದ ಜಲಗಳಂತೆ | ತರಬೇಡ ಬುದ್ಧಿಗಳು | ಸೈರಿಸಿ ತಾಳು || ೬೦ ||

**ರಾಗ ಕೇದಾರಗೌಳ ಝಂಪೆತಾಳ**

ಧರೆಯನೇಕಚ್ಛತ್ರವ | ನಾಳುತಿಹ | ದೊರೆಯೆಂಬ ಬಹುಮಾನವ |
ಧರಿಸಿ ಪಿಂದಕೆ ಸರಿಯಲು | ರಣಹೇಡಿ | ಬರಿದೆಯೆಂಬರು ಸರ್ವರು || ೬೧ ||

**ರಾಗ ಸಾರಂಗ ಅಷ್ಟತಾಳ**

ಇಳೆಯೊಳುತ್ತಮ ಭೂಪನು | ಪೊಂದಿದ ಕೀರ್ತಿ | ಫಲಶೋಭೆ ವೃಕ್ಷವನ್ನು |
ಬಲವಂತನಾವನು ಛೇದಿಸಲಾರನು | ಹಲವರಾಶ್ರಯಿಸುವರು | ತೋಷಿಪರು || ೬೨ ||

**ರಾಗ ಕೇದಾರಗೌಳ ಝಂಪೆತಾಳ**

ಖ್ಯಾತಿವಡೆದಿಹ ಜಗದಲಿ | ಸಕಲಭೂ | ನಾಥರೆನ್ನಯ ವಶದಲಿ ||
ಓತು ಸೇವೆಯ ಗೆಯ್ವರು | ಸಮರಕೆಂ | ದಾತುರದಿ ಬಂದಿರ್ಪರು || ೬೩ ||

**ರಾಗ ಸಾರಂಗ ಅಷ್ಟತಾಳ**

ಸ್ಥಿರವಿದಾರಿಗೆ ಕೌರವ | ಗರ್ವಿಸಬೇಡ | ಬರಿದೆಯಸ್ಥಿರ ಭೋಗವ |
ಸ್ಮರಿಸಿ ದುಷ್ಟರ ಬೋಧೆಗೊಳಗಾಗಿ ಕೆಡದಿರು | ಬರರು ಕಡೆಯೊಳವರು || ನಗುತಿರ್ಪರು || ೬೪ ||

**ರಾಗ ಕೇದಾರಗೌಳ ಝಂಪೆತಾಳ**

ಧೀರ ರಾಧೇಯನಿಹನು | ಶಕುನಿಯತಿ | ಶೂರ ಸಾಹಸವಂತನು ||
ಪಾರಮಾರ್ಥದೊಳೆನ್ನಯ | ಮಾತುಗಳ | ಮೀರಿ ಪೋಗರು ನಿಶ್ಚಯ || ೬೫ ||

**ಭಾಮಿನಿ**

ತರಳ ಲಾಲಿಸು ಧರ್ಮಜಾತನು |
ಪರಮ ಸಜ್ಜನ ಸದ್ಗುಣಾಕರ |
ಕರುಣದಿಂದವನೊಡನೆ ಮೈತ್ರಿಯನೆಸಗಿದರೆ ನಿನಗೆ ||
ಬರುತಿಹುದು ಸಹವಾಸಗುಣದೊಳು |
ಧರೆಯೊಳಗೆ ಸತ್ಕೀರ್ತಿ ಸಹನೆಗ |
ಒರೆಯುವೆನು ಕರ್ಣಾದಿ ಮೂರ್ಖರ ನುಡಿಯ ಕೇಳದಿರು || ೬೬ ||

**ರಾಗ ಕೇದಾರಗೌಳ ಝಂಪೆತಾಳ**

ಜರೆವುದೇತಕೆ ಎನ್ನನು | ಪಾಂಡವರ | ಪರಿಪರಿಯ ಕೀರ್ತನವನು ||
ಮರುಕದಿಂ ಪೊಗಳಲೇಕೆ | ಎನ್ನೊಡನೆ | ಕೆರಳಿ ನುಡಿವಿರಿ ಮೇಲಕೆ || ೬೭ ||

**ರಾಗ ಕೇದಾರಗೌಳ ಅಷ್ಟತಾಳ**

ಭೇದವಿಲ್ಲೆನಗೆ ನಿಮ್ಮುಭಯರೊಳೆಲೆ ಕಂದ | ಕ್ರೋಧದಿ ಸಮರಗೆಯ್ಯೆ ||
ಬಾಧಿಪುದತಿಚಿಂತೆ ಸೈರಿಸಲಾರೆನು | ಮೇದಿನಿ ಕೊಡೊ ಸಾಮದಿ || ೬೮ ||

**ರಾಗ ಕೇದಾರಗೌಳ ಝಂಪೆತಾಳ**

ಭೇದಗಳು ನಿಮಗಿರದಿರೆ | ನಮ್ಮೊಳಗೆ | ವಾದ ಬೇಡೆನ್ನುತಿಹಿರೆ |
ಹೋದ ನುಡಿ ಹಿಂದಾದುದು | ನಮ್ಮಸೇ | ನಾಧಿಪತ್ಯವ ತಾಳ್ವುದು || ೬೯ ||

**ವಾರ್ಧಕ**

ತರಳ ಕೇಳೈ ಪಾಂಡುಪುತ್ರರೊಳಗೆನಗೀಗ |
ಮರುಕವಿರ್ಪುದಕಾಗಿ ಸಮರ ಬೇಡೆಂದೆನುತ |
ಒರೆದವನು ನಾನಲ್ಲ ನೀತಿಸಾರದ ಕಥೆಯ ಧೊರೆ ರಾಯನವಧರಿಪುದು ||
ನಿರತ ಸದ್ಗುಣ ಸತ್ಯಸಂಧರಿಗೆ ಜಯಲಕ್ಷ್ಮಿ |

ಹರುಷದಿಂ ವಶವಹಳು ಬೇಡ ಸಂಗರವೀಗ |
ಕುರುಪರಂಪರೆಯಾಳ್ದ ಧರಣಿಪರ ಖ್ಯಾತಿಯಂ ನೀಗಬೇಡಲೆ ಕುವರನೆ || ೭೦ ||

**ರಾಗ ಭೈರವಿ ಝಂಪೆತಾಳ**

ಎಷ್ಟು ಪೇಳಿದರೇನು ಪಾಂಡವರೊಳಿದೆ ಕರುಣ | ದಿಟ್ಟ ಕ್ಷತ್ರಿಯರಾಗಿ ನಾವು |
ತೊಟ್ಟಿರುವ ಛಲದಂತೆ ರಣಗೆಯ್ಯೆ ನೀವೇಕೆ | ಕಟ್ಟುವಿರಿ ವ್ಯರ್ಥ ಪಥಗಳನು || ೭೧ ||

ತರಳ ಕೇಳ್ಲೊ ಕರುಣವೆಂತಾದಡಾಗಿರಲಿ | ಹಿರಿಯವನು ಭೀಷ್ಮ ಬಾಳಿರ್ದು |
ಧುರವ ಗೆಯ್ಸಿದನೆಂಬ ನಿಂದೆಗಳು ಬರುತಿಹುದು | ಕುರುರಾಯ ತ್ಯಜಿಸೀಗ ಛಲವ || ೭೨ ||

ಬಿಡದೆ ಖಾಡಾಖಾಡಿ ಹಳಚುವೆನು ಖಣವಿರಲು | ಪೊಡವಿ ಕೊಂಬರು ಪಾಂಡುಸುತರು ||
ಕಡು ಮಮತೆಯಿರಲವರ ಸೇರಿಕೊಂಬುವುದೀಗ | ತುಡುಕಿ ಸಮರವ ಗೆಯ್ಯದಿರೆನು || ೭೩ ||

**ಭಾಮಿನಿ**

ಅರಿಯೆ ಕೌರವನೆನ್ನ ಸತ್ತ್ವವ |
ಪರಿಕಿಸೆತ್ತಿದ ಧನುವನಿಳುಹಲು |
ಶಿರವರಿವೆ ಭೂಪರನು ದಶಸಾಸಿರವನನುದಿನದಿ ||
ಹರಿಹರಬ್ರಹ್ಮಾದಿಗಂಜೆನು |
ನಿರತವೆನ್ನಯ ಶಪಥ ಕೇಳಿಕೊ |
ಧುರದಿ ಜಯ ಪೊಂದುವುದು ನಿನ್ನಯ ಪುಣ್ಯಫಲವೆನುತ || ೭೪ ||

**ಕಂದ**

ಬರುವೆನು ಭಾಸ್ಕರನುದಯದಿ |
ತೆರಳೆಂದೆನುತಲೆ ಕಳುಹಿಸಿ ಜನಪನ ಗಂಗಾ ||
ತರಳಂ ತನ್ನಯ ಮನದೊಳ್ |
ಕೊರಗುತ ಮೂರ್ಖರ ಬೋಧನೆಯೆಂತುಟೊಯೆನುತಂ || ೭೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದುರುಳಮೈತ್ರಿಗಳುದಯಕಿರಣದಿ | ನೆರಳು ವೃದ್ಧಿಯನಯ್ದಿ ನಶಿಸುವ |
ತೆರನು ಪೂರ್ವದೊಳೇರಿ ಕ್ಷಯಗಳ | ಪಡೆಯುತಿಹುದು || ೭೬ ||

ಪರಮ ಸಾಧುಸ್ನೇಹವಸ್ತದ | ನೆರಳು ಪೂರ್ವದೊಳಲ್ಪಕಡೆಯೊಳು |
ಭರಿತ ವೃದ್ಧಿಗಳಾಗುವಂದದೊ | ಳಧಿಕವಹುದು || ೭೭ ||

ದುರುಳನೀತನ ಪೊಂದಿಸಂಗರ | ವಿರಚಿಸಲು ಜಯವಿಲ್ಲ ಕಡೆಯೊಳು |
ತರಣಿಪೌತ್ರನ ಸೇರಿ ಪೋದರೆ | ವಿಜಯವಹುದು || ೭೮ ||

ತಿಂದಿಹೆನು ನಾನೀತನನ್ನವ | ನಿಂದೆಗಳು ತ್ಯಜಿಸೀಗ ಪೋದರೆ |
ಇಂದಿರಾಧವ ಮೆಚ್ಚುವಂದದಿ | ಸಮರಗೆಯ್ವೆ || ೭೯ ||

ಎಂದು ಹಂಬಲಿಸುತ್ತ ಜಾಹ್ನವಿ | ನಂದನನು ಪವಡಿಸುತ ನಿದ್ರಿಸೆ |
ಚಂದದಿಂ ಮಾರ್ತಂಡನುದಯದೊ | ಳೆದ್ದು ಭರದಿ || ೮೦ ||

ವಿರಚಿಸಿಯೆ ನಿತ್ಯಾಹ್ನಿಕಂಗಳ | ಸುರನದೀಸುತ ಸಭೆಗೆ ಬರುತಿರೆ |
ಬರವ ಕಾಣುತಲೆರಗಿ ಕೌರವ | ಮುದವ ತಾಳಿ || ೮೧ ||

**ರಾಗ ಮಾರವಿ ಏಕತಾಳ**

ಹರುಷದಿ ಕೌರವನುಪಚರಿಸುತಲಾ | ಸುರನದಿನಂದನನ ||
ಕರೆತಂದಾಸನವೇರಿಸಿ ಸಕಲಾ | ಭರಣವನಿಡಿಸುತಲಿ || ೮೨ ||

ಗುರು ಕೃಪಮುಖ್ಯರ ಮತದೊಳು ಸೇನಾ | ಶರಧಿಗೆ ಪಟ್ಟವನು |
ಸುರನದಿಜಾತಗೆ ರಚಿಸಲು ವಾದ್ಯದ | ರವಗಳು ಭೋರ್ಗುಡಿಸೆ || ೮೩ ||

ಹೊಡೆಸಿದನಾ ಕ್ಷಣ ಕುರುಪತಿ ಡಂಗುರ | ವೊಡನತಿ ವಿಭವದಲಿ ||
ನಡೆಯಲಿ ಗಂಗಾತರಳನ ನೇಮದಿ | ಪಡೆಗಳು ಮುಂದೆನುತ || ೮೪ ||

**ಭಾಮಿನಿ**

ಅರಸ ಕೇಳಾ ಕ್ಷಣದಿ ಭೀಷ್ಮನು |
ಕುರುಪತಿಯೊಳಿಂತೆಂದ ವೇಗದಿ |
ಕರಿ ತುರಗ ರಥ ಪತ್ತಿ ಮಹರಥರೆಲ್ಲ ಪೊರಮಡಲಿ ||
ಸುರನರೋರಗರೆಲ್ಲ ಮೆಚ್ಚುವ |
ತೆರದಿ ರಿಪುಸೇನೆಯಲಿ ಹಳಚುವೆ |
ಕರಿಗೆ ಬೆದರುವುದುಂಟೆ ಕಂಠೀರವನು ಸಂಗರದಿ || ೮೫ ||

**ರಾಗ ಘಂಟಾರವ ಏಕತಾಳ**

ಎಂದು ಭೀಷ್ಮನು ಹರಿನಾದಗೆಯ್ಯುತ್ತ |
ಚಂದದಿಂದಲೆ ಧರಿಸಿ ಚಾಪವ | ಸ್ಯಂದನವ ತಾನೇರಿದ || ೮೬ ||

ಶರಧಿ ಭೋರ್ಗರೆವಂದದಿ ಪಟುಭಟ |
ಕರಿತುರಗರಥಪಂಙ್ಕ್ತಿ ಪೊರಡಲು | ಧರಣಿ ಬಾಯ್ದೆರೆವಂದದಿ || ೮೭ ||

ಭೇರಿಶಂಖ ನಗಾರಿ ದುಂದುಭಿಗಳು |
ಭೋರಿಡಲು ಕಲ್ಪಾಂತಕಾಲದ | ವಾರಿಧಿಯರವದಂದದಿ || ೮೮ ||

**ವಾರ್ಧಕ**

ಅರಸ ಕೇಳಂಧಕನ ಸುತರು ಸ್ಯಂದನವೇರೆ |
ಪರಿವಿಡಿದು ನಡೆತಂದ ಗುರುಕೃಪಾಶ್ವತ್ಥಾಮ |
ವರ ಬೃಹದ್ಬಲ ಶಲ್ಯ ಶರಧನ್ವ ಬಾಹ್ಲಿಕಂ ಸೋಮದತ್ತ ತ್ರಿಗರ್ತರು ||
ಧೊರೆ ಸುಶರ್ಮ ಕ್ಷೇಮಧನ್ವ ಭೂರಿಶ್ರವಂ |
ಭರದೊಳಗೆ ಸಿಂಧುಪತಿ ಸತ್ರಜಿತು ಸೃಂಜಯಂ |
ಪೊರಮಡಲ್ ತಂತಮ್ಮ ಸೇನೆಸಮುದಾಯದಿಂ ಕುರುಕ್ಷೇತ್ರರಣಭೂಮಿಗೆ || ೮೯ ||

**ಭಾಮಿನಿ**

ಪರಿಕಿಸುತಲವಶಕುನ ಗಂಗಾ |
ತರಳ ಚಿಂತೆಯ ತಳೆದು ಸೇನೆಯ |
ತರಣಿಪೌತ್ರನ ಬಿಡದಿಗಿದಿರೊಳು ಡೇರೆಗಳನಿಕ್ಕಿ ||
ಪರಮ ವೀರಾವೇಶದಿಂದಿರೆ |
ಸುರನದೀಸುತನೆತ್ತಿ ಕರವನು |
ಧುರದ ಸಂಕೇತಗಳ ಕೇಳುವುದೆನುತ ಪಡೆಗಳಿಗೆ || ೯೦ ||

**ರಾಗ ಭೈರವಿ ಏಕತಾಳ**

ಕುರುಸೇನೆಯ ಪಟುಭಟರು | ಮುಂ | ದರಿಯುವ ನೃಪರಿಗೆ ನೃಪರು |
ಧುರಕನುವಾಗದೆ ಬಿಡಲು | ಸಂ | ಹರಿಪೆನು ಬಿಡೆ ಕರುಣದೊಳು || ೯೧ ||

ಕರಿಘಟೆಯೊಳು ಕರಿವಿಂಡು | ಬಹ | ತುರಗಕೆ ತುರಗ ಮುಂಗೊಂಡು |
ಹರಿತಂದಿಹ ಕಾಲ್ಬಲಕೆ | ಮುಂ | ಬರಿಯಲಿ ಪತ್ತಿ ಸಂಗರಕೆ || ೯೨ ||

ಧುರಕಂಜುತಲೋಡುವರ | ಪದ | ಕೆರಗಿದ ಶರಣಾಗತರ |
ಬರಿಗಯ್ಯೊಳಗಿರ್ಪವರ | ಸಂ | ಹರಿಸದೆ ಸಲಹುವುದವರ || ೯೩ ||

ಮಾಡಿದ ಶಪಥಗಳಂತೆ | ಮೆರೆ | ದಾಡುತ ಗೆಲದಿರೆ ಪಿಂತೆ |
ಹೇಡಿಗಳಂದದಿ ತಿರುಗೆ | ಚೆಂ | ಡಾಡುವೆ ಶಿರ ನಾ ಕಡೆಗೆ || ೯೪ ||

**ರಾಗ ಕೇದಾರಗೌಳ ಅಷ್ಟತಾಳ**

ಎನುತಲಿ ಸುರಗಂಗಾತನಯನನೀಕಿಯ | ನನುಮೋದಿಸುತ ವೇಗದಿ ||
ಘನವಾಗಿ ಸರ್ವತೋಭದ್ರವ್ಯೂಹವ ಕಟ್ಟಿ | ಕಣನೊಳು ರಥವನೇರಿ || ೯೫ ||

ಘೋರನುಲೂಕನೊಳೆಂದನು ಪಾಂಡುಕು | ಮಾರರನನುವರಕೆ ||
ಸಾರಿಬರಲು ಪೇಳೆಂದಟ್ಟೆ ಪೋಗುತಲೆಂದ | ವೀರಧರ್ಮಜನೊಡನೆ || ೯೬ ||

ಯುದ್ಧಕೆ ಪ್ರತಿಭಟಿಸಲು ಬೇಕು ಭೀಷ್ಮನ | ಬದ್ಧ ಕಟ್ಟಳೆಗಳಿದು ||
ಸಿದ್ಧವಾಗಿದೆ ಬನ್ನಿರೆನುತ ಉಲೂಕ ತಾ | ನಿದ್ದಲ್ಲಿಗಾಗಿ ಬಂದ || ೯೭ ||

**ಭಾಮಿನಿ**

ಪರಮ ವೀರಾವೇಶದಿಂದಲಿ |
ಹರಿಯು ಮೊಳಗಿಸೆ ಪಾಂಚಜನ್ಯವ |
ಮರುತಸುತ ಪೌಂಡ್ರವನು ಪಾರ್ಥನು ದೇವದತ್ತವನು ||
ತರಣಿಪೌತ್ರನನಂತವಿಜಯವ |
ಧರಣಿ ಬಾಯ್ದೆರವಂತೆ ನಾದಿಸೆ |
ಬಿರಿಯಲೆದೆ ಪ್ರತಿಭಟರ ಫಲುಗುಣನಾಗ ಗರ್ಜಿಸುತ || ೯೮ ||

**ರಾಗ ಮಾರವಿ ಏಕತಾಳ**

ತ್ವರಿತದಿ ವಜ್ರವ್ಯೂಹದ ಕೋಟೆಯ | ವಿರಚಿಸಿ ಪರಿಖದೊಳು ||
ಕರಿಘಟೆ ಸ್ಯಂದನಬಲಗಳ ಪಙ್ಕ್ತಿಯೊ | ಳಿರಿಸಿ ಶಿಖಂಡಿಯನು || ೯೯ ||

ಪುರಜಿತು ಕಾಶೀಪತಿಯುಯುಧಾನನು | ಮರುತಜಶೈಬ್ಯರನು ||
ಧರಣಿಪ ಮತ್ಸ್ಯನ ಧೃಷ್ಟದ್ಯುಮ್ನನ | ನಿರಿಸಿದ ಮಸ್ತಕದಿ || ೧೦೦ ||

ನೋಡುತಲಿತ್ತಲು ಗಂಗಾತನಯನು | ಪಾಡಿ ಧನಂಜಯನ |
ಗಾಢದಿ ಕುರುಭೂಪಾಲನಿಗೆಂದನು | ಮೂಡಿದ ಸಂತಸದಿ || ೧೦೧ ||

**ಭಾಮಿನಿ**

ಪರಿಕಿಸತ್ತಲು ವೀರಪಾರ್ಥನ |
ಪರಮವಜ್ರವ್ಯೂಹಕೋಟೆಯ |
ಶರವ ಸಿಂಜಿನಿಯೊಳಗೆ ಪೂಡುತ ನಿಂತ ಪಟುಭಟರ ||
ಪರಮವಿಕ್ರಮರರರೆ ಭಾಪುರೆ |
ಧುರಕೆ ಮಹರಥ ಮತ್ತೆ ಷಡುರಥ |
ಕರವ ನೇವರಿಸುತ್ತಲತಿರಥರರ್ಧರಥರಿಹರು || ೧೦೨ ||

**ಕಂದ**

ಸುರನದಿನಂದನನಿಂತೆನೆ |
ಕುರುಪತಿ ಕೇಳಿದನವರೊಳಗಿರುತಿಹ ರಥಿಕರ ||

ಹರುಷದಿ ತೋರೈ ವಿವರದಿ |
ಪರಿಕಿಪೆ ನಿನ್ನಯ ಕರುಣದೊಳೊರೆಯೆನಲೆಂದಂ || ೧೦೩ ||

**ರಾಗ ಕೇದಾರಗೌಳ ಅಷ್ಟತಾಳ**

ನರ ವೃಕೋದರ ಮತ್ಸ್ಯ ಯುಯುಧಾನ ಸಮರಥ | ಪುರಜಿತು ಕುಂತೀಭೋಜ |
ನರನಸಂಭವ ಧೃಷ್ಟದ್ಯುಮ್ನ ಶಿಖಂಡಿಯು | ಮಹರಥರಾಗಿಹರು || ೧೦೪ ||

ಪ್ರತಿಸೇನ ಚೇಕಿತಾನನು ಧೃಷ್ಟಕೇತನು | ಮತಿಯುತ ಧರ್ಮಜನು ||
ಸುತರು ದ್ರೌಪದಿಯಳ ಮತ್ತೆ ಯುಧಾಮನ್ಯು | ಷಡುರಥರಾಗಿಹರು || ೧೦೫ ||

ಧರಣಿಪನುತ್ತಮೋಜಸ ಶೈಬ್ಯನುತ್ತರ | ಸೃಂಜಯ ದ್ರುಪದಾಖ್ಯನು ||
ವರಮಾದ್ರೇಯರು ಕೃತವರ್ಮ ಸಾತ್ಯಕಿ ಮುಖ್ಯ | ರತಿರಥರಾಗಿಹರು || ೧೦೬ ||

ಉಳಿದಿಹ ಪಟುಭಟರೊಳಗರ್ಧರಥಿಕರು | ಕೆಲವು ಮಂದಿಗಳಿಹರು ||
ಬಲಪರಾಕ್ರಮರೆನೆ ಕೌರವ ವಿನಯದಿ | ಸುರನದೀಸುತನೊಳೆಂದ || ೧೦೭ ||

ಪರಿಭೇದವೇನುಂಟು ರಥಿಕವರ್ಗದಿ ಪೇಳು | ಧರಣಿಪರೆಲ್ಲರಲಿ ||
ಕರೆಯುವುದೇಕಿಂಥ ಭೇದಗಳೆನೆ ಪೇಳ್ದ | ಪರಮ ಸಂತೋಷದಲಿ || ೧೦೮ ||

**ರಾಗ ಸೌರಾಷ್ಟ್ರ ಮಟ್ಟೆತಾಳ**

ಕುರುಕುಲೇಶ ಕೇಳು ಮುದದೊಳು | ಭೇದವೊರೆವೆ | ಪರಿಕಿಸಯ್ಯ ನಿಂತು ರಥದೊಳು ||
ತುರಗ ರಥ ಪದಾತಿ ಸೂತ | ಕರಿಘಟಾಳಿಗಳನು ವೈರಿ |
ಶರದ ಹತಿಗೆ ಸಿಲುಕದಂತೆ | ಹೊರೆವನಾತ ಸಮರಥಾಖ್ಯನು |
ಪಡೆವನಿಂಥ | ಬಿರುದೆ ಮಹಾರಥಿಕನೆಂಬನು || ೧೦೯ ||

ವೀರಷಡುರಥಾಖ್ಯನೆಂಬನು | ತುರಗರಥವ | ಸಾರಥಿಯ ಪೊರೆದುಕೊಂಬನು |
ಸಾರಥಿಯು ತನ್ನ ಸಹಿತ | ಹೋರಿ ಸಲಹಿಕೊಂಬನೋರ್ವ |
ಶೂರನತಿರಥಾಖ್ಯ ಮತ್ತೆ | ಕ್ರೂರಶರದಿ ತಪ್ಪಿಕೊಂಬನು |
ಅರ್ಧರಥಿಕ | ನೊರ್ವ ತನ್ನನುಳುಹಿಕೊಂಬನು || ೧೧೦ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಎಂದು ಕುರುಪತಿಯನ್ನು ತೊಲಗುತೆ | ನಿಂದಿರಲು ರಥವೇರುತ ||
ಬಂದು ಧರ್ಮಜನೆರಗಲಪ್ಪುತ | ಮುದವ ತಾಳಿ || ೧೧೧ ||

ಸತ್ಯಸಂಧನೆ ಸುಗುಣ ಮತ್ಪ್ರಿಯ | ಪೌತ್ರ ನಿನ್ನನು ಕಾಣಲು |
ಹೊತ್ತಿದುದು ಶೋಕಾಗ್ನಿ ಜಠರಕೆ | ಪೇಳ್ವುದೇನು || ೧೧೨ ||

ಕಂದ ಕೇಳ್ಕೈ ವನದಿ ವಿಧವಿಧ | ದಿಂದ ಶೋಕಿಸುತಿರ್ದೆಯ |
ಬಂದುದೇ ಧುರವೀಗ ಗೆಲಿಸುವ | ಇಂದಿರೇಶ || ೧೧೩ ||

ಅರಿಗಳುರೆ ನಾವ್ ನಿಮಗೆ ತರಳನೆ | ಧುರಕೆ ನಿಂದಿಹ ಕಾಲದಿ |
ಬರುವುದನುಚಿತ ಪ್ರತಿಭಟರು ನೀ | ನರಿತು ನೋಡು || ೧೧೪ ||

ಕುಳಿತು ಕೊಳ್ಳೈ ಸತ್ಯಸಂಧನೆ | ಫಳಿಲನೇತಕೆ ಬಂದೆಯ |
ತಿಳುಹೆನುತಲಿರೆ ಭೀಷ್ಮನಿತ್ತುಲು | ಸೇನೆಯೊಳಗೆ || ೧೧೫ ||

**ಭಾಮಿನಿ**

ಪರಿಯ ನೋಡುತಲಿತ್ತ ಫಲುಗುಣ |
ಮರುತಸುತ ಸಾತ್ಯಕಿಯರೆಲ್ಲರು
ಧುರಪರಾಕ್ರಮರಾಗಿ ನಾವಿರೆ ವೈರಿಮೋಹರದಿ ||
ಅರಿಗಳೆಡೆ ಧರ್ಮಜನು ಸಾರುತ |
ಶರಣುವೊಕ್ಕನಿದೇನೆನುತ್ತಿರೆ |
ಪರಮರೋಷದಿ ಭೀಮ ಪಲ್ಗಡಿಯುತ್ತಲಿಂತೆಂದ ||೧೧೬||

**ರಾಗ ಘಂಟಾರವ ಏಕತಾಳ**

ಯುದ್ಧಕೋಸುಗ ಸನ್ನದ್ಧರಾಗಿರೆ |
ಶುದ್ಧ ಕ್ಷತ್ರಿಯಛಲವ ತ್ಯಜಿಸುತ | ಬಿದ್ದನೇತಕೆ ಚರಣಕೆ || ೧೧೭ ||

ಷಂಡರಾದೆವೆ ಧರ್ಮಜನೆಸಗಿದ |
ಭಂಡತನಗಳು ಸರಿಯೆ ರಿಪುಗಳಿ | ಗಂಡಲೆದು ಮಣಿದಿರ್ಪುದು || ೧೧೮ ||

ತರಿವೆನೀ ಕ್ಷಣ ಕುರುಸೇನೆಯೆಲ್ಲವ |
ಧರಣಿ ಸೆಳೆಯದೆ ಬಿಡಲು ಭೀಮನೆ | ಪುರುಷನಲ್ಲವೆ ಶಿವ ಶಿವ || ೧೧೯ ||

ಧುರಕೆ ನಿಂತಪಹಾಸ್ಯವ ತಂದನು |
ಹರನೆ ಮುನಿದರು ಬಿಡೆನು ಗದೆಯೊಳ | ಗೆರಗಿ ರಿಪುಗಳ ಸದೆವೆನು || ೧೨೦ ||

ಎಂದು ಕಂಕಾಲರುದ್ರನಂದದಿ ಭೀಮ |
ಮುಂದುವರಿಯಲು ಕಂಡು ಶ್ರೀಗೋ | ವಿಂದಮೂರುತಿ ನುಡಿದನು || ೧೨೧ ||

**ಭಾಮಿನಿ**

ಅರೆಗಳಿಗೆ ತಾಳೀಗ ಸೈರಿಸು |
ಶರಣುಹೋದವನಲ್ಲ ಧರ್ಮಜ |

ಧುರಕೆ ನೇಮವ ಕೊಳಲು ಹಿರಿಯರ ಬಳಿಗೆ ಗಮಿಸಿಹನು ||
ಪರಮ ಸುಜ್ಞಾನಿಗಳ ಮಹಿಮೆಗ |
ಳಿರುವುದೀ ಪರಿ ಧುರದಿ ಜಯವಹ |
ಪರಕೆಗೊಂಬುದೆನುತ್ತ ಸಂತೈಸಿದನು ಮುರಹರನು || ೧೨೨ ||

**ಕಂದ**

ಅನಿತರೊಳಿತ್ತಲು ಗಂಗಾ |
ತನಯನು ಹರುಷದೊಳಂತಕಸುತನನಪ್ಪುತ ||
ಕನಿಕರದಿಂದಲೆ ಮನ್ನಿಸಿ |
ಯಣುಗನೆ ಬಂದಿಹ ಕಾರಣವರುಹೆನಲೆಂದಂ || ೧೨೩ ||

**ರಾಗ ನವರೋಜು ಆದಿತಾಳ**

ಸುರನದಿನಂದನ ಕೇಳು | ನೀ | ನರಿತಿಹೆ ತಾತ ಕೃಪಾಳು |
ಕರಕೆ ದಾನಗಳಲ್ಲದೊಡವೆಯೊಳೇನಿದೆ | ಹಿರಿಯರಿಗೆರಗದ ಶಿರಕೆ ಮುಕುಟವೇಕೆ  || ೧೨೪ ||

ಪೊರೆದಿರಿ ಬಾಲಾಪ್ಯದೊಳು | ಸ | ದ್ಗುರುಗಳನು ಮೋದದೊಳು ||
ಕರೆಸುತ ಧನುಶರ ವಿದ್ಯೆಯನರುಹಿಸಿ | ಕರುಣವನಿರಿಸಿದಕಾಗಿ ಮಾರ್ಮಲೆತೆವು || ೧೨೫ ||

ಅರಿಗಳ ಜೈಸುವ ತೆರದಿ | ತವ | ತರಳರೊಳ್ ನೀವ್ ದಯದಿ |
ಪರಸುವುದುಚಿತದಿ ಹಿರಿಯರೊಳಸ್ತ್ರವ | ಧರಿಸಿ ಮಾರ್ಮಲೆವುದ ಕ್ಷಮಿಸಬೇಕೆನ್ನಲು || ೧೨೬ ||

**ರಾಗ ಜಂಜೂಟಿ ಅಷ್ಟತಾಳ**

ಮೆಚ್ಚಿದೆ ನಾನೆಮಸೂನು | ಭಕ್ತಿ | ನಿಶ್ಚಲತೆಯ ಪೇಳ್ವುದೇನು |
ಸಚ್ಚರಿತನೆ ಕಂದ ಪೇಳ್ವೆ ನೀತಿಯ ಕುರು |
ದುಶ್ಚರಿತ್ರನು ಮನಕೆ ತಾರದೆ | ಹಚ್ಚಿಹನು ಸಂಗರವನೀಗಳು || ೧೨೭ ||

ಹಲವಿಂದ್ರಿಯಂಗಳು ನರಗೆ | ಮತಿ | ಚಲಿಪುದಾಶ್ಚರ್ಯವೆ ಹೀಗೆ ||
ಜಲದೊಳಗಿಹ ಮತ್ಸ್ಯ ಗಾಳದ ಕ್ರಿಮಿಗಾಗಿ |
ಬಲದೊಳೊಂದಿಂದ್ರಿಯದ ಚಪಲದಿ | ಕೊಲಿಸಿಕೊಂಬುದು ಮಂದಮತಿಯಲಿ || ೧೨೮ ||

ವಿಧಿಯ ಮೀರಲು ಸಾಧ್ಯವಲ್ಲ | ಈ | ಕದನದಿ ನಿಮಗಳುಕಿಲ್ಲ ||
ಮುದದಿ ನಿಮ್ಮೈವರನೆನ್ನ ಸಂಗರದಲ್ಲಿ |
ನಿಧನವಾಗದ ತೆರದಿ ಕಾಯುವೆ | ಹೃದಯದೊಳು ಕಳವಳಿಸಬೇಡೆಲೆ || ೧೨೯ ||

ಕೊಡಲು ಭಾಷೆಯ ಶಂತಸುತನು | ತೋಷ | ಪಡುತ ವಂದಿಸಿ ಯುಧಿಷ್ಠಿರನು ||
ನಡೆತಂದು ದ್ರೋಣನಿಂಗೆರಗಿ ಕೈ ಮುಗಿದಾಗ |
ಮೃಡಸಮೋಪಮ ಗುರುವೆ ಜಯವೆಂ | ದೊಡನೆ ಪೊಗಳುತ್ತಿರಲು ಕಾಣುತ || ೧೨೦ ||

**ರಾಗ ಭೈರವಿ ಝಂಪೆತಾಳ**

ಏನು ಬಂದಿಹೆ ಧರ್ಮ | ಸೂನು ನಿನ್ನಭಿಮತಗ | ಳೇನು ಸಂಗರಕಾಗಿನಿಂತ ಪ್ರತಿಭಟನು ||
ಜ್ಞಾನವಂತನೆ ಸುಗುಣ | ಮಾನನಿಧಿ ನಿನ್ನಿರವ | ಸಾನುರಾಗದಿ ಪೇಳಬೇಕೆನಲು ನುಡಿದ ||೧೨೧||

ಕೇಳಯ್ಯ ಗುರುರಾಯ | ಕಾಳಗಕೆ ನಿಂದಿಹೆಯ | ಶೂಲಿಸಮವಿಕ್ರಮನೆ ಜಯವ ಪೊಂದುವರೆ||
ಪೇಳು ಯತ್ನಗಳನ್ನು | ಶಿಷ್ಯನೊಳು ಕರುಣದಲಿ | ತಾಳದಿರು ಕೋಪವನು ಸದ್ಗುಣಾಕರನೆ ||೧೨೨||

ಇಂತೆನಲು ಪೇಳ್ದ ಗುರು | ಕಂತುಪಿತ ಸಲಹುವನು | ನಿಂತು ಧುರದೊಳಗನೃತ ನುಡಿಯೆ ನೀನಾಗ||
ಸಂತು ಎನ್ನಾಯುಷ್ಯ | ಬಿಡುವೆನಾ ದಿನ ದೇಹ | ಚಿಂತೆಯಿಲ್ಲೆನಗೆ ನಿಮ್ಮೊಳು ಕಾದುವುದಕೆ ||೧೨೩||

**ವಾರ್ಧಕ**

ಲೇಸೆನುತ ಧರ್ಮಜಂ ದ್ರೋಣನಾಜ್ಞೆಯ ಧರಿಸಿ |
ಭಾಷೆಗೊಂಡಾ ಮಾದ್ರಪತಿಕೃಪಾಚಾರ್ಯರೊಳ್ |
ತೋಷದಿಂ ಪಿಂತಿರುಗಿಯುಭಯಸೇನೆಯ ನಡುವೆ ನಿಂತು ಕಯ್ಗಳನೆತ್ತುತ ||
ಆಸೆಯುಳ್ಳರು ಜೀವದೊಳಗೆ ಕುರುಸೇನೆಯೊಳ್ |
ಪೋಷಿಪೆವು ಬಂದೀಗ ಮರೆಗೊಂಬುದೆಂದೆನುತ |
ಘೋಷದಿಂದಾ ಯುಧಿಷ್ಠರನೃಪಂ ಸಾರಲ್ಕೆ ಕೌರವಾನುಜನೋರ್ವನು || ೧೨೪ ||

**ಭಾಮಿನಿ**

ಭರದೊಳಯ್ತಂದಾ ಯುಯುತ್ಸುರೆ |
ಚರಣಕೊಂದಿಸಿ ಧರ್ಮತನಯನೆ |
ಪೊರೆಯಬೇಹುದೆನಲ್ಕೆ ತೋಷದೊಳಭಯವೀಯುತಲಿ ||
ಕರೆದುತರೆ ಶ್ರೀಕೃಷ್ಣನಿತ್ತಲು |
ತುರಗವನು ಚಪ್ಪರಿಸಿ ಮುಂದಕೆ |
ಹರಿಸಿ ಸ್ಯಂದನವರವ ಪಾರ್ಥನ ಕರೆದು ಪೇಳಿದನು || ೧೨೫ ||

**ರಾಗ ಮಾರವಿ ಏಕತಾಳ**

ಪರಿಕಿಸು ಪಾರ್ಥನೆ ನಿಂದಿಹ ರಿಪುಮೋ | ಹರದೊಳು ರಥಿಕರನು ||
ಕರದೊಳು ಶಸ್ತ್ರಾಸ್ತ್ರಗಳುರೆ ಧರಿಸುತ | ತಿರುಹುತ ಮೀಸೆಯನು || ೧೨೬ ||

ಕುರುಪತಿ ಭೀಷ್ಮನು ಗುರು ಮಾದ್ರಾಧಿಪ | ಗುರುಸುತ ಸಮರಥರು ||
ದೊರೆಭೂರಿಶ್ರವ ಕೃಪ ಕರ್ಣಾದ್ಯರು | ಮಹರಥರಾಗಿಹರು || ೧೩೭ ||

ಷಡುರಥ ವರ್ಗವ ನೋಡೈ ಸೈಂಧವ | ದೃಢರಥ ದುರ್ಮದನು ||
ಪೊಡವಿಪನುಗ್ರನು ಚಿತ್ರವಿಕರ್ಣನು | ಶಲಭನು ದುಸ್ಸಹನು || ೧೩೮ ||

ಅತಿರಥನಿವಹವ ಪರಕಿಸು ಪಾರ್ಥನೆ | ಕ್ಷತಜಿತು ದುಶ್ಶ್ಯಾಸ ||
ಪೃಥಿವಿಪ ಸಮಿತಿಂಜಯ ಚಿತ್ರಾಕ್ಷನು | ಶ್ರುತಸೇನಾದ್ಯರನು || ೧೩೯ ||

**ಭಾಮಿನಿ**

ನೋಡು ಪಿಂದೆಸೆಯರ್ಧರಥಿಕರು |
ಹೂಡಿಹರು ಸಿಂಜಿನಿಗೆ ಬಾಣವ |
ಗಾಢದಲಿ ರಿಪುಗಳನು ಕಡಿದೀಡಾಡು ನೀನೆನಲು ||
ಕೂಡೆ ಪರಿಕಿಸುತಾಗ ಪಾರ್ಥನು |
ಮೂಡಿದಶ್ರುಗಳಿಂದ ಶಿರವೊಲೆ |
ದಾಡಿದನು ಹೃತ್ಕಮಲ ದಹಿಸುತ ಪೊರಡೆ ಮೋಹಾಗ್ನಿ || ೧೪೦ ||

**ರಾಗ ಸಾಂಗತ್ಯ ರೂಪಕತಾಳ**

ಧುರಕೆ ಮಾರ್ಮಲೆತಿಹ ಗುರು ಪಿತಾಮಹ ಭಾವ | ವರಮಾತೃವರ್ಗ ಬಂಧುಗಳ ||
ತರಳರ ಸನ್ಮಿತ್ರ ಭ್ರಾತ್ರಮಾತ್ಯರನೆಲ್ಲ | ನಿರುಕಿಸುತೆಂದನು ಹರಿಗೆ || ೧೪೧ ||

ಬಂಧುವರ್ಗವ ನಿಷ್ಕಾರುಣ್ಯದಿಂದಲೆ ಕೊಂದು | ಬಂದಿಹ ರಾಜ್ಯ ಬೇಡೆನಗೆ ||
ಇಂದಿರೇಶನೆ ಧುರಕಾಂಕ್ಷೆಯಿಲ್ಲೆನಗೀಗ | ಬೆಂದಿತೆನ್ನೊಡಲು ಮೋಹದೊಳು || ೧೪೨ ||

**ರಾಗ ಕೇದಾರಗೌಳ ಝಂಪೆತಾಳ**

ಕೆರಳಿ ಮುರಹರನಾಗಳು | ಎಲೆ ಮರುಳೆ | ಧುರದಿ ಮರುಕವೆ ರಿಪುಗಳು ||
ಕರುಣವಿಲ್ಲದೆ ನಿನ್ನನು | ಕೊಲುತಿಹರು | ತ್ವರಿತದಿಂ ಪಿಡಿ ಧನುವನು || ೧೪೩ ||

**ರಾಗ ಸಾಂಗತ್ಯ ರೂಪಕತಾಳ**

ತರಹರಿಪುದು ಎನ್ನ ದೇಹ ಕೇಳ್ ಮುರರಿಪು | ಕರದ ಕಾರ್ಮುಕ ಜಾರುತಿಹುದು ||
ಅರಿಗಳೆಮ್ಮನು ಕೊಂದು ಕಳೆಯಲಿ ಸರ್ವಥಾ | ಧುರಗೆಯ್ಯಲಾರೆ ಕೇಶವನೆ || ೧೪೪ ||

**ರಾಗ ಕೇದಾರಗೌಳ ಝಂಪೆತಾಳ**

ಅರಗಿನಾಲಯ ಗೆಯ್ದನು | ಎಲೆ ಪಾರ್ಥ | ಬೆರೆಸಿ ಮೆಲಿಸಿದ ವಿಷವನು ||
ತರುಣಿಮಾನವ ಕಳೆದನು | ಧರೆ ಸೆಳೆದು | ಧುರಕೆ ಬಂದಿದಿರಾದನು || ೧೪೫ ||

**ರಾಗ ಸಾಂಗತ್ಯ ರೂಪಕತಾಳ**

ಅರಿಗಳು ಪಂಚಪಾತಕರೆಂದು ಬಲ್ಲೆನು | ತರಿಯಲಿವರ ವಂಶವಳಿದು ||
ಪರದೊಳು ತಿಲಜಲಶೂನ್ಯರಾಪರು ಮತ್ತೆ | ತರುಣಿಯರಿಗೆ ಶೋಕವಹುದು || ೧೪೬ ||

**ರಾಗ ಕೇದಾರಗೌಳ ಝಂಪೆತಾಳ**

ಪಿಡಿ ಪಿಡೀ ಕ್ಷಣ ಧನುವನು | ಮರುಗದಿರು | ಕಡು ದುರುಳ ಕೌರವರನು ||
ಬಿಡದೆ ಹನನವ ಮಾಡೆಲೊ | ಕರುಣವ | ನ್ನಿಡಬೇಡ ಮರುಳಾದೆಲೊ || ೧೪೭ ||

**ಭಾಮಿನಿ**

ಬೇಡ ಮುರರಿಪು ಬಂಧುವರ್ಗದ |
ಕೂಡೆ ಸಮರವ ಗೆಯ್ಯೆನೆನ್ನನು |
ಕಾಡದಿರು ಶರಣೆಂಬೆನೆನ್ನುತ ಪಾರ್ಥ ಹಲುಬುತಲಿ ||
ರೂಢಿಯೊಳು ಬೀಳಲ್ಕೆ ಮಧುರಿಪು |
ನೋಡಿ ಬಿಗಿವಿಡಿದೆತ್ತಿ ಪೇಳ್ದನು |
ಮೂಢನಹೆಯೋ ತಾಳು ಸೈರಿಸೆನುತ್ತ ಪೇಳಿದನು || ೧೪೮ ||

ಆರು ನೀನೆಲೆ ಪಾರ್ಥ ಬಂಧುವರ್ಗಗಳೆಲ್ಲಿ | ತೋರಿಸು ರಣಕೆ ನಿಂದು ||
ಕಾರುಣ್ಯದಿಂದ ಶೋಕವ ಕೊಂಡು ಬರಿನಗೆ | ಗೇಡಾದೆ ಹೇಸಿಕೆಯು || ೧೪೯ ||

ನರ ನಿನ್ನೊಳಿಹ ಜೀವ ಕುರುಪತಿಯಾತ್ಮನು | ನೊರಜೆಯೊಳಿಹ ಪ್ರಾಣವು ||
ಸರುವವು ಒಂದೆ ಚೈತನ್ಯಕೆ ಲಯವಿಲ್ಲ | ಮರುಳಾಗದಿರು ಸುಮ್ಮನೆ || ೧೫೦ ||

ಒರೆವೆ ಕೇಳ್ಕೆ ವಿಪ್ರನಿಗೆ ಕರ್ಮ ಮುಖ್ಯವು | ಧುರವೆ ಬಾಹುಜಗಧಿಕ |
ಪರಮ ವಾಣಿಜ್ಯ ವೈಶ್ಯನ ವೃತ್ತಿ ಶೂದ್ರಂಗೆ | ಕೃಷಿಸೇವಾವೃತ್ತಿಗಳು || ೧೫೧ ||

ಡಿಂಭ ಮಾತ್ರವೆ ಪುಟ್ಟೆ ಸಾಯುವುದೈ ಜೀವ | ನೆಂಬಂಗೆ ಚ್ಯುತಿಯಿಲ್ಲವು ||
ಹಂಬಲ ಬಿಡು ತನ್ನ ಕುಲಧರ್ಮದಿಂದಿರೆ | ಸಂಭ್ರಮದಿಂ ಮುಕ್ತಿಯು  || ೧೫೨ ||

ಚರಿಸಿಹ ಸದ್ಧರ್ಮದಿಂದೆನ್ನೊಳಂತ್ಯದಿ | ಸರ್ವ ಚೇತನವೈಕ್ಯವು |
ಪರಿಕಿಸೆನ್ನಯ ಮಾತ ನಿಜವೊ ಸುಳ್ಳೆಂಬುದ | ಸುರರಾಜಸಂಭವನೆ || ೧೫೩ ||

ಕರುಣಿಸುವೆನು ವಿಶ್ವಮೂರ್ತಿಸಂದರ್ಶನ | ವರ ಜ್ಞಾನಚಕ್ಷುವನು ||
ಪರಿಶೋಧಿಸೆನುತಲೆ ತೋರಿದ ಮುರಹರ | ಪರತರ ವಿಶ್ವವನ್ನು || ೧೫೪ ||

ನೋಡಿದನು ಕಲಿಪಾರ್ಥ ವಿಶ್ವಮೂರ್ತಿಯ ದಿವ್ಯ |
ಗಾಢದೇಹದೊಳಷ್ಟವಸು ರುದ್ರ ಸುಮನಸರು |

ಕೂಡಿರುವ ಸಪ್ತರ್ಷಿ ಗರುಡ ಕಿನ್ನರ ಸಾಧ್ಯರುರಗ ನದಿ ಸಾಗರಗಳು ||
ರೂಢಿ ನಭ ಕಾಂತಾರ ಗಿರಿ ತರುನಿಕಾಯದಿಂ |
ಬಾಡಬಾದಿ ಚತುರ್ಥವರ್ಣ ಮೃಗಪಕ್ಷಿಗಳ್ |
ಕೂಡಿರ್ದ ಗುರು ಭೀಷ್ಮ ಕರ್ಣ ಕೌರವ ಧರ್ಮಜಾದಿ ಸಕಲರ ಕಾಣುತ || ೧೫೫ ||

**ರಾಗ ಘಂಟಾರವ ಏಕತಾಳ**

ನರನು ನೋಡುತ | ಹರಿಯ ಪಾಡುತ | ಶಿರವ ಬಾಗಿಸಿ | ಕರವ ಜೋಡಿಸಿ ||
ತೊರೆದೆ ವ್ಯಥೆಯನು | ಹರಿಯೆ ನಿನ್ನನು | ಹೊರತು ಕಾಣೆನು | ಪರಮ ಪುರುಷನು || ೧೫೬ ||

ನಿನ್ನ ನಂಬಿ ನಾ | ಧನ್ಯನಾದೆನು | ನಿನ್ನ ಮಾತಿನೊ | ಳಿನ್ನು ನಡೆವೆನು ||
ಮುನ್ನ ಪೊರೆದಿಹ | ತೆರದಿ ಪಾಲಿಸು | ಸನ್ನುತಾಂಗನೆ | ವಿಜಯ ಪೊಂದಿಸು || ೧೫೭ ||

**ಭಾಮಿನಿ**

ನರನೆ ಕೇಳ್ಳೆ ಮಾರ್ಗಶೀರುಷ |
ಭರಣಿಯುತ ಶುಕ್ಲ ತ್ರಯೋದಶಿ |
ಧುರವನಾರಂಭಿಸುವುದೆನ್ನುತ ಪಿಂತೆ ಕೌರವನು ||
ಒರೆದ ತೆರವೀದಿನದಿ ರಿಪುಗಳ |
ನುರವಣಿಸು ಮುಂದೆಸೆಯ ನಿಂದಿಹ |
ಸುರನದಿಯ ಸುತನೊಡನೆ ಪೌರುಷ ತೋರು ತೋರೀಗ || ೧೫೮ ||

**ವಾರ್ಧಕ**

ಕೆರಳಿ ಮುಂದೊತ್ತಿ ಧರ್ಮಜ ಕೌರವೇಶ್ವರಂ |
ಮರುತಸುತ ದ್ರೋಣಗಂ ಮಾರ್ಮಲೆಯೆ ದುಶ್ಯಾಸ |
ಧರಣೀಶ ದ್ರುಪದಗಂ ಕಲಿ ವಿಕರ್ಣ ವಿರಾಟ ಕೃಪ ಕುಂತಿಭೋಜರಿಂಗೆ ||
ಗುರುತನುಜಗಭಿಮನ್ಯು ಪ್ರತಿವಿಂಧ್ಯಸೋಮಕಂ |
ಶರಮಳೆಯ ಕರೆಯುತ್ತಲೆಚ್ಚು ಬೊಬ್ಬಿಡುತಿರಲ್ |
ನರನು ಗಾಂಗೇಯನೊಳ್ ಕಾದಬೇಕೆಂದೆನುತ ಧನುಶರಾವಳಿಗೊಂದಿಸಿ || ೧೫೯ ||

**ರಾಗ ಸುರುಟಿ ಏಕತಾಳ**

ಹರಿಪದಕೊಂದಿಸುತ | ಫಲುಗುಣ | ಧುರಕಪ್ಪಣೆಗೊಳುತ |
ಹರನಿತ್ತಿಹ ಕಾರ್ಮುಕವನು ನೆಗಹುತ | ಸುರನದಿಸುತನೊಳು ಪೇಳಿದನಾ ಕ್ಷಣ || ೧೬೦ ||

ಸುರನದಿನಂದನನು | ನಮ್ಮನು | ಪೊರೆದ ಪಿತಾಮಹನು |
ಶರಮುಖದೊಳು ತವ ಚರಣವ ಪೂಜಿಪೆ | ಪರಸುತ ಪ್ರತ್ಯಸ್ತ್ರಗಳನು ಕಳುಹೈ || ೧೬೧ ||

ನರನೆಂದುದ ಕೇಳಿ | ಜಾಹ್ನವಿ | ತರಳನು ಮುದ ತಾಳಿ |
ಧುರಗೆಯ್ಯುವ ಪ್ರತಿಭಟ ಜಯಪೊಂದದೆ | ಪರಸುವುದುಂಟೇ ವಿಜಯಕೆ ಮರುಳೆ || ೧೯೨ ||

**ರಾಗ ಶಂಕರಾಭರಣ ಮಟ್ಟೆತಾಳ**

ಬಾಲತನದೊಳೆಮ್ಮ ಸಲಹಿ | ತೋಳತಲ್ಪದೊಳಗೆ ಪೊರೆದ |
ಶೀಲ ತಾತಗಿದುವೆ ಧ್ಯಾನ | ವೆನುತಲೆಚ್ಚನು || ೧೯೩ ||

ಅಸ್ತು ಕೈಗೊಂಬೆನೆನುತ | ಕತ್ತರಿಸುತಲೊಂದು ಶರದಿ |
ಸ್ವಸ್ಥದಿಂದ ನಿಲಲು ಪಾರ್ಥ | ಮತ್ತೆ ಬಾಣವ || ೧೯೪ ||

ತಿರುಹಿನೊಳಗೆ ಪೂಡಿ ದಿವ್ಯ | ಚರಣಕಮಲಪಾದ್ಯಕಿದುವೆ |
ಪರಿಗ್ರಹಿಸಬೇಕು ಹಿರಿಯ | ರೆನುತಲೆಸೆದನು || ೧೯೫ ||

ಅಹಹ ಭಳಿರೆಯೆನುತ ಭೀಷ್ಮ | ಗಹಗಹೀಸಿ ಮುರಿಯೆ ಪಾರ್ಥ |
ಮಹಿಮನಿದಕೊ ಸ್ನಾನಕೆನುತ | ಸುರಿದ ಶರವನು || ೧೯೬ ||

ಮೆಚ್ಚಿತೆನ್ನ ಮನಗಳೆಂದು | ನುಚ್ಚಿನಂತೆ ಚೂರ್ಣಗೆಯ್ಯೆ |
ಸಚ್ಚರಿತನು ಗಂಧ ಪುಷ್ಪ | ಕೆನುತಲೆಚ್ಚನು || ೧೯೭ ||

ನಸುನಗುತ್ತಲಾಗ ಭೀಷ್ಮ | ವಸುಧೆಯೊಳಗೆ ಮುರಿದು ಕೆಡಹೆ |
ಎಸೆವ ಭೋಜ್ಯಕೆನುತ ಪಾರ್ಥ | ನೆಸೆದನಸ್ತ್ರವ || ೧೯೮ ||

**ರಾಗ ಮಾರವಿ ಏಕತಾಳ**

ದಿಟ್ಟತನದಿ ಮುರಿದದರನು ಭೀಷ್ಮನು | ಸೃಷ್ಟಿಗೆ ಕೆಡಹಿಸಿದ |
ಬಿಟ್ಟು ನೀರಾಜನ ಪ್ರಾರ್ಥನೆಗೋಸುಗ | ಸಿಟ್ಟಿನೊಳುರಿಶರವ || ೧೯೯ ||

ಪರಿತೋಷಗಳಾಯ್ತುರರೇ ಫಲುಗುಣ | ಧುರವಿಕ್ರಮನೆನುತ |
ಸುರನದಿನಂದನ ವರುಣಾಸ್ತ್ರದೊಳದ | ಮುರಿದನು ಭರದಿಂದ || ೨೦೦ ||

ತೆರತೆರದಸ್ತ್ರವನಭಿಮಂತ್ರಿಸುತಲಿ | ಗುರಿಯೊಳು ಫಲುಗುಣನು ||
ತ್ವರಿತದಿ ಬಿಡಲದ ಮುರಿಯುತ ಭೀಷ್ಮನು | ನಿಂದಿರೆ ಕಂಡದನು || ೨೦೧ ||

**ವಾರ್ಧಕ**

ಅರಿತೊಮ್ಮೆ ಸಂಗರದಿ ಪರಮಾಸ್ತ್ರಗಳನೆಲ್ಲ |
ಹರಿಸಬಾರದೆನುತ್ತ ಪಾರ್ಥ ಯೋಚಿಸುತಿರಲ್ |
ಹರಿಯು ಸ್ಯಂದನವರವ ನಡೆಸಿದಂ ಸರ್ವತೋಭದ್ರ ವ್ಯೂಹದ ಕೋಟೆಗೆ ||
ಕುರುಬಲವನೆಲ್ಲ ನುಗ್ಗೊತ್ತುತಿರಲಿತ್ತಲಾ |

ಸುರತರಂಗಿಣಿತನಯ ಪಾಂಡವಾನೀಕದೊಳ್ |
ಭರದಿ ರಥಮಂ ನಡೆಸಿ ವಜ್ರವ್ಯೂಹವ ಪೊಗುತ ತರಿದೊಟ್ಟುತಿರೆ ಸೇನೆಯ || ೧೭೨ ||

**ಭಾಮಿನಿ**

ಮರುತನಂದನನಿತ್ತ ಗದೆಯನು |
ತಿರುಹಿ ಕುರುಸೇನಾಸಮುದ್ರವ |
ಕೆರಳಿ ಮಥಿಸುತ್ತಿರಲು ಕಂಡಾ ಕೌರವೇಶ್ವರನು ||
ಕರದಿ ಧನುಶರವಾಂತುರೋಷದಿ |
ಸರಿಸಕಿದಿರಾಗಿರಲು ಕಾಣುತ |
ಹರಿಯ ನಾದವ ಗೆಯ್ದು ಪಲ್ಗಡಿಯುತ್ತಲಿಂತೆಂದ || ೧೭೩ ||

**ರಾಗ ಭೈರವಿ ಅಷ್ಟತಾಳ**

ದುರುಳ ಕೌರವನೆ ನೀನು | ದ್ಯೂತದಿ ಮೋಸ | ವೆರಸಿಯಟ್ಟಿದೆಯೆಮ್ಮನು |
ಧರೆಯನೆಳೆದ ಗರ್ವ ಮುರಿದೀಗೆನ್ನಳಲನ್ನು | ಹರುಷದಿ ತೀರ್ಚಿಕೊಂಬೆ || ೧೭೪ ||

ಸಿಕ್ಕಿದನ್ನಗಳ ತಿಂದು | ಬಂದಿಹ ಡೊಳ್ಳ | ಫಕ್ಕನೆ ಒಡೆಸಿಕೊಂಡು |
ಮುಕ್ಕಬೇಡೆಲೆ ಮಣ್ಣ ಪರರ ಸಂಪತ್ತಿಗೆ | ದುಃಖಿಪುದೇಕೊ ಭೀಮ || ೧೭೫ ||

ಅರಗಿನಾಲಯದಿ ನೀನು | ವಂಚಿಸಿಯೆಮ್ಮ | ನುರುಹಲೆತ್ನವ ಗೆಯ್ದೆಯೊ ||
ಪರಮಪಾತಕಿಗಿಂಥ ರಾಜ್ಯ ದಕ್ಕುವುದುಂಟೆ | ಹೊರಳು ಭೂ ದೇವತೆಯು || ೧೭೬ ||

ಹಸಿದ ಬಕಾಸುರನ | ಕೂಳನು ತಿಂದು | ಯಸಕದೊಳಾ ದೈತ್ಯನ |
ಬಸವಳಿಸುತ ಕೊಂದ ಕ್ರೂರ ಪಾಪಿಯೆ ನೀನು | ವಸುಧೆ ಭಾರಕನಹುದೊ || ೧೭೭ ||

ಬಾಡಬಹತ್ಯವನ್ನು | ಮಾಡ್ದನ ಕೊಂದೆ | ಮೂಢ ಕೌರವನೆ ನೀನು |
ಖೋಡಿ ಬಕಾಸುರಗೆಣೆ ಭೋಜ್ಯದೊಳು ವಿಷ | ಗೂಡಿಸಿ ಮೆಲಿಸಿದೆಯ || ೧೭೮ ||

**ರಾಗ ಮಾರವಿ ಏಕತಾಳ**

ಮಾತುಗಳೇತಕೊ ವ್ಯರ್ಥದಿ ಭೀಮನೆ | ಪೂತುರೆ ತಾಳೆನುತ ||
ಖಾತಿಯೊಳಾಕರ್ಣಾಂತಕೆ ಸೆಳೆಯುತ | ಲಾತುರ ಶರವೆಸೆದ || ೧೭೯ ||

ಗದೆಯೊಳಗದರನು ಬಡಿಯುತ ಭೀಮನು | ಸದೆಯಲು ಕೌರವನ ||
ಚದರಿತು ಪಂಚೇಂದ್ರಿಯಗಳು ಮೂರ್ಛೆಗ | ಳೊದಗುತ ಚೇತರಿಸಿ || ೧೮೦ ||

ಭಳಿಭಳಿರೆನ್ನುತ ಕುರುಪತಿಯಾ ಕ್ಷಣ | ನೆಗಹುತ ಪರಿಘವನು |
ಬಲಿದೆತ್ತುತ ಮರುತಜನನು ಹೊಡೆಯಲು | ತಳೆದನು ಮೂರ್ಛೆಯನು || ೧೮೧ ||

ಹರುಷದೊಳಂಧಕನಣುಗನು ಷಡುರಥ | ಧರಣಿಪವರ್ಗವನು |
ತರಿಯುವೆನೆನ್ನುತ ಪೋಗಲು ಭೀಮನು | ಶಿರವೆತ್ತುತಲಾಗ || ೧೮೨ ||

ನರಕೇಸರಿಯೆನೆ ಭೋರ್ಗರೆಯುತಲಾ | ಮರುತಕುಮಾರಕನು |
ತಿರುಹುತ ಗದೆಯನು ನೋಡಿದ ಕೌರವ | ತೆರಳಿದನೆಲ್ಲೆನುತ || ೧೮೩ ||

**ಭಾಮಿನಿ**

ಇಂದು ಮೊದಲಾಗಂಧಕನ ಸುತ |
ರೊಂದುಶತವೀ ಗದೆಗೆಯಾಹುತಿ |
ಚಂದದಿಂದೀಯದಿರೆ ಕುಂತಿಯ ಪುತ್ರ ನಾನಲ್ಲ ||
ಎಂದು ಭಾಷೆಯ ಗೆಯ್ದು ಮಾರುತ |
ನಂದನನು ರೋಷದಲಿ ಪೊರಡಲು |
ಮುಂದುವರಿಯುತ ಕೌರವೇಂದ್ರನ ಸಹಜರಡ್ಡೈಸೆ || ೧೮೪ ||

**ವಾರ್ಧಕ**

ಮರುತನಂದನನಾಗ ಪಲ್ಗಡಿದು ಹೂಂಕರಿಸಿ |
ತಿರುಹಿ ಗದೆಯನ್ನೆತ್ತುತುಗ್ರದುರ್ಮುಖಚಿತ್ರ |
ವರಸುಷೇಣಕ ವೀರಬಾಹು ಮುಖ್ಯಾಂಧಕನ ತರಳರಷ್ಟಕವರ್ಗವ ||
ಶಿರವ ಚೂರ್ಣಿಸಿ ಕೆಡಹಿ ಗಂಭೀರನಾದದೊಳ |
ಗರಸುತಿರೆ ಕೌರವನನಿತ್ತ ಭೀಷ್ಮಾಚಾರ್ಯ |
ನರಿತು ಭೀಮನಿಗೆದುರು ನರಕಸುತನೆಂದೆನುತ ಕರೆಯೆ ಬಂದಾ ಕ್ಷಣದಲಿ || ೧೮೫ ||

**ಕಂದ**

ಸುರನದಿಯಣುಗಗೆ ನಮಿಸಲ್ |
ಪರಸುತಲೆಂದ ವೃಕೋದರನೆಡೆಗಂ ತ್ವರೆಯೊಳ್ ||
ತೆರಳ್ಕೈ ಸಮರಕೆ ನೀನೆನೆ |
ನರಕನ ಸಂಭವ ಮರುತಜನೆದುರಯ್ತಂದಂ || ೧೮೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭರಿತ ರೋಷದಿ ಸುಪ್ರತೀಕವ | ನರಕಸುತನಡರುತ್ತ ಬರುತಿಹ |
ಪರಿಯ ಕಾಣುತ ಭೀಮ ಗದೆಯನು | ತಿರುಹುತೆಂದ || ೧೮೭ ||

ಆರೆಲವೊ ಮುಂಬರಿದು ಬಂದಿಹ | ಶೂರ ನಿನ್ನಯ ಪೆಸರದೇನ್ಗೈ |
ಭಾರಿ ದರ್ಪವ ತೋರಿ ಬರುತಿಹೆ | ಯಾರ ಸುತನು || ೧೮೮ ||

ನರಕಸುತ ಪ್ರಾಗ್ಜ್ಯೋತಿಷಾಖ್ಯದ | ಪುರದಧಿಪ ಭಗದತ್ತನಾಮಕ |
ಧರಣಿದೇವಿಯ ಪೌತ್ರನೆನುತಲೆ ಶರವನೆಚ್ಚ || ೧೮೯ ||

**ರಾಗ ಶಂಕರಾಭರಣ ಮಟ್ಟೆತಾಳ**

ಬರುವ ಶರವ ತರಿದು ಭೀಮ | ಗದೆಯ ತಿರುಹುತಾಗ ಬಂದು |
ಎರಗಲದರ ಹತಿಗೆ ತಪ್ಪಿ | ಭಿಂಡಿವಾಲವ || ೧೯೦ ||

ಎತ್ತಿ ತೂಗುತಾಗಲೆರಗೆ | ಕೃತ್ತಿವಾಸನಂತೆ ಕನಲಿ |
ಪೃಥ್ವಿಯೊಳಗೆ ಕೆಡೆದನದರ | ಭೀಮ ಭರದಲಿ  || ೧೯೧ ||

ಭಾರಿ ಶೂಲವನ್ನು ನೆಗಹಿ | ಧಾರಿಣೀಯ ಪೌತ್ರ ಕ್ರೋಧ |
ವೇರಿಭೀಮನುರಕೆ ತಿವಿಯೆ | ಮೂರ್ಛೆ ತಾಳಿದ || ೧೯೨ ||

**ಭಾಮಿನಿ**

ಧರಣಿಗುರುಳಿದ ಭೀಮನನು ಕಂ |
ಡುರುತುರಾನಂದದಲಿ ನರಕನ |
ತರಳ ಪ್ರತಿಭಟರನ್ನು ನೋಡುತಲಿರಲು ಗರ್ಜಿಸುತ ||
ಕರಿಯ ಕಂಡಾರ್ಭಟಿಪ ಕೇಸರಿ |
ತೆರದಿ ರೌದ್ರಾವೇಶದಿಂದಲಿ |
ನರನ ಸುತನಭಿಮನ್ಯು ಬಂದಿದಿರಾಗಿ ಮಾರಾಂತ || ೧೯೩ ||

**ರಾಗ ಘಂಟಾರವ ಏಕತಾಳ**

ಬಾರೆಲೊ ಭಗದತ್ತನೆನ್ನೊಳು ಶೌರ್ಯ |
ದೋರು ಪಾಮರನೆನುತ ಕಣೆಗಳ | ತೂರಿದನು ಭೋರ್ಗರೆಯುತ || ೧೯೪ ||

ತಂಡತಂಡದ ಶರಗಳ ಖಂಡಿಸಿ |
ದಂಡಧರನಿಗೆ ಬೆದರೆ ಪೋರನೆ | ಹಿಂಡುವೆನು ನಿನ್ನಸುವನು || ೧೯೫ ||

ಎಂದ ಮಾತನು ಕೇಳುತ್ತ ಪಾರ್ಥನ |
ನಂದನನು ಖತಿಗೊಂಡು ಕೂರ್ಗಣೆ | ಸಂಧಿಸಿದ ಭೋರ್ಗರೆಯುತ || ೧೯೬ ||

ಭಳಿರೆ ಭಾಪುರೆ ಬಾಲ ಸಾಹಸಿ ನೀನು |
ಕಲಿಗಳೊಳು ತೋರುವೆಯ ವಿಕ್ರಮ | ವೆನುತ ಮುರಿದನು ನರಕಜ || ೧೯೭ ||

ಸ್ತಂಭದಿಂದಲೆ ಪೊರಮಟ್ಟ ನರಹರಿ |
ಡಂಬರದ ಗರ್ಜನೆಯನೀಯುತ | ಲಂಬು ಸುರಿಸಿದ ನರಜನು || ೧೯೮ ||

**ರಾಗ ಭೈರವಿ ಏಕತಾಳ**

ಉರಗಾಸ್ತ್ರದಿ ನರಕಜನು | ಹೆದೆ | ಗಿರಿಸುತ ಬಿಡೆ ನರಸುತನು |
ತರಿದನು ಗಾರುಡಶರದಿ | ಬೊ | ಬ್ಬಿರಿಯುತ ಕೇಸರಿರವದಿ || ೧೯೯ ||

ಗಿರಿಮಾರ್ಗಣವನು ತೆಗೆದು | ಶಿರ | ಕೆರಗಿದ ನರಕಜ ಮುಳಿದು ||
ನರಸಂಭವ ಕುಲಿಶದೊಳು | ತುಂ | ಡರಿಯುತಲತಿ ವೇಗದೊಳು || ೨೦೦ ||

ಕಿಡಿಗೆದರುತ ಪಾರ್ಥಜನು | ಮು | ಕ್ಕಡಿಗೆಯ್ದಿರೆ ಚಾಪವನು |
ಖಡುಗವ ತಿರುಹುತ ಬರಲು | ಮುರಿ | ದಡದನು ಬಲು ವೇಗದೊಳು || ೨೦೧ ||

**ಭಾಮಿನಿ**

ಗದೆಯ ತಿರುಹುತ ಬರಲು ನರಕಜ |
ಸದೆದು ಕೆಡಹುತ ಪಾರ್ಥನಂದನ |
ಕುದಿವ ಕೋಪದೊಳೊಂದು ಶರವೆದೆಗೆಸೆಯೆ ಬಲುಮೆಯಲಿ ||
ಒದಗಿ ಮೂರ್ಛೆಯ ತಳೆಯೆ ಕಾಣುತ |
ಲಧಿಕ ರೋಷದಿ ಗಂಗೆಯಣುಗನು |
ಎದುರಿನೊಳು ನಡೆತಂದು ತಡೆದಿರೆ ಕಾಣುತಭಿಮನ್ಯು || ೨೦೨ ||

**ರಾಗ ಕೇದಾರಗೌಳ ಝಂಪೆತಾಳ**

ತಾತ ಸಂಗರಶೂರನೆ | ತ್ರೈಭುವನ | ಖ್ಯಾತ ಶಂತನುಪುತ್ರನೆ ||
ಪ್ರೀತಿಯಿಂ ಬಾಲಕನೊಳು | ಧುರಗೆಯ್ವ | ಖಾತಿಗಳ ಶಮಿಪೆ ತಾಳು || ೨೦೩ ||

ತರಳನಾದರು ರಣದಲಿ | ಪೆಸರ್ವಡೆದ | ಧುರಧೀರನಹೆ ನಿನ್ನಲಿ ||
ಕರಚಮತ್ಕೃತಿ ನೋಡಲು | ಬಂದೆನೆಂ | ದೊರೆದ ಭೀಷ್ಮನು ಮುದದೊಳು || ೨೦೪ ||

ಸುರನರೋರಗಮಧ್ಯದಿ | ಧುರದೊಳಗೆ | ಸರಿಯಿಲ್ಲವೆಂದು ಜಗದಿ ||
ಧರಿಸಿರ್ಪ ಸತ್ಕೀರ್ತಿಯ | ಮಮ ತಾತ | ತರಳನೊಳು ಕಳೆಕೊಂಬೆಯ  || ೨೦೫ ||

ಒಂದೆ ಶರಕೀಡೆ ಕುವರ | ಪೆತ್ತಿರುವ | ತಂದೆ ವೀರಾಗ್ರೇಸರ ||
ಕೊಂದರೆನಗಳುಕಾಪುದು | ನಿನ್ನ ನುಡಿ | ಗಿಂದು ಖತಿಯೇರುತಿಹುದು || ೨೦೬ ||

**ರಾಗ ಭೈರವಿ ಝಂಪೆತಾಳ**

ನಡುಗುತಿವೆ ಎಲೆ ವೃದ್ಧ ನಿನ್ನ ಕೈಕಾಲುಗಳು | ಬಡಿವಾರ ಪೌರುಷವ ನುಡಿವೆ ||
ಹುಡುಗನೆನ್ನೊಳು ತೋರು ಶಸ್ತ್ರವಿದ್ಯೆಯನೆನುತ | ಕಿಡಿಗೆದರುತೆಚ್ಚನಭಿಮನ್ಯು || ೨೦೭ ||

ಹಸುಳೆ ಕೇಳೆಲೊ ವೀರಕ್ಷಾತ್ರಿ ನಿನ್ನನು ಪಡೆದು | ವಸುಧೆಯೊಳ್ ಕೃತಕೃತ್ಯನಾದ ||
ಶಶಿಕುಲಾನ್ವಯದೀಪ ಸುಕುಮಾರ ಭಳಿರೆನುತ | ಕುಶಲದಿಂದದ ತರಿದ ಭೀಷ್ಮ || ೧೦೮ ||

ಕೇಶಧ್ವಜಾತ್ಮಜನು ಧನುವ ಝೇಂಕರಿಸುತ್ತ | ರೋಷದಿಂ ಮಾರ್ಗಣಗಳುಗಿದ |
ಗಾಸಿಗೆಯ್ಯುವೆನೆನುತ ತೂರುತಿರೆ ಗಾಂಗೇಯ | ತೋಷದಿಂ ಚೂರ್ಣಿಸಿದನಾಗ || ೧೦೯ ||

**ರಾಗ ಪಂಚಾಗತಿ ಮಟ್ಟೆತಾಳ**

ಕೆರಳಿ ನರಜನು | ಶರವನೊಂದನು |
ಶಿರಕೆ ಗುರಿಯೊಳಿಡಲು ಭೀಷ್ಮ | ಗಾಯವಡೆದನು || ೧೧೦ ||

ಪ್ರಳಯಭೈರವ | ನಂತೆ ಭೀಷ್ಮನು |
ಜ್ವಲಿಪ ತೀವ್ರ ಶರಧಿ ಧನುವ | ಮುರಿದು ಕೆಡೆದನು || ೧೧೧ ||

ಗದೆಯ ಕೊಳುತಲಿ | ತಿರುಹಿ ಭರದಲಿ |
ಸದೆಯೆ ಕಸಿದು ಭೀಷ್ಮ ಸೆರೆಯ | ಪಿಡಿದ ಖತಿಯಲಿ || ೧೧೨ ||

**ವಾರ್ಧಕ**

ಸೆರೆಯು ಸಿಕ್ಕಿದನರರೆಯಭಿಮನ್ಯುವೆಂದೆನುತ |
ಹರುಷದೊಳು ಗುರುಜಕೃಪ ದುಶ್ಯಾಸ ಮುಖ್ಯರ |
ಯ್ತರುತಿರಲು ಗಾಂಗೇಯನರಿತು ತನ್ನೊಳಗಾಗ ತರಳ ಮಹರಥನೀತನು ||
ಕುರುಕುಲದ ಬಾಲಕರೊಳಿವನ ಪೋಲುವರಿಲ್ಲ |
ಪರಮಸತ್ಕೀರ್ತಿಯುತನೆಂದು ಬಿಡಲಾ ಕ್ಷಣವೆ |
ಹರಿನಾದದಿಂ ಖಡ್ಗ ಝಳಪಿಸುತಲಭಿಮನ್ಯು ಸುರನದೀಸುತಗೆಂದನು || ೧೧೩ ||

**ಭಾಮಿನಿ**

ಹಿರಿಯನೆಂಬುದಕಾಗಿ ತಡೆದರೆ |
ಪರಮ ಶೂರತ್ವಗಳ ತೋರಿದೆ |
ಶಿರವರಿವೆನೆಂದೆನುತ ಕಿಡಿಕಿಡಿಯೇರಿ ಪಲ್ಮೊರೆದು ||
ಭರದಿ ಮುಂದಯ್ತುರಲು ದ್ರುಪದಜ |
ನರಜನನು ಮನ್ನಿಸುತ ಭೀಷ್ಮನ |
ಧುರಕೆ ಬಂದಿದಿರಾಗಿ ಮೂದಲಿಸುತ್ತ ಪೇಳಿದನು || ೧೧೪ ||

**ರಾಗ ಭೈರವಿ ಅಷ್ಟತಾಳ**

ಧುರಪರಾಕ್ರಮವೆನ್ನೊಳು | ತೋರುವುದೀಗ | ತರಳನ ಗರ್ವದೊಳು ||
ಸೆರೆವಿಡಿದೆನು ಎಂಬ ಪೌರುಷ ಬೇಡ ನಾ | ದ್ರುಪದಜ ಧೃಷ್ಟದ್ಯುಮ್ನ || ೧೧೫ ||

ಅಕ್ಷಿ ಮೂರಿಹುದೆ ಪೇಳು | ಷಡಾನನ | ಪಕ್ಷಿವಾಹನನೊ ತಾಳು ||
ಮಕ್ಷಿಕವದ್ರಿಯ ಭಕ್ಷಣೆಗೆಯ್ದುದೆ | ದಕ್ಷ ನಾ ಭೀಷ್ಮ ನೋಡು || ೧೧೯ ||

ಹರವಿಧಿಗಂಜೆ ನಾನು | ಚಂದ್ರಾನ್ವಯ | ಹಿರಿಯ ಪಿತಾಮಹನು ||
ಶಿರವ ಖಂಡಿಸಿ ಕೀರ್ತಿ ಪಡೆವೆನೆನುತ ಶರ | ವರುಷವ ಕರೆದನಾಗ || ೧೧೭ ||

ಪುಡಿಗೆಯ್ದು ಭೀಷ್ಮನಾಗ | ಧೃಷ್ಟದ್ಯುಮ್ನ | ಪಿಡಿದ ಕಾರ್ಮುಕವ ಬೇಗ ||
ನಡುವೆ ಖಂಡಿಸಿ ಕೆಡಹಲ್ಕೆ ಖಡ್ಗವ ಕೊಂಡು | ಝಳಪಿಸುತಯ್ತಂದನು || ೧೧೮ ||

**ರಾಗ ಶಂಕರಾಭರಣ ಮಟ್ಟೆತಾಳ**

ಕಸಿದು ಖಡ್ಗವನ್ನು ಭೀಷ್ಮ | ವಸುಧೆಯೊಳಗೆ ಬಿಸುಡಲಾಗ |
ಲಸಮ ಸಹಸಿ ದ್ರುಪದಜಾತ | ಗದೆಯೊಳೆರಗಿದ || ೧೧೯ ||

ಭರಕೆ ತಪ್ಪುತಾಗ ಭೀಷ್ಮ | ಭಿಂಡಿವಾಲದಿಂದ ಪೊಯ್ಯೆ |
ಶಿರವು ಕಂಪಿಸುತ್ತ ಮೂರ್ಛೆ | ತಳೆಯುತೆದ್ದನು || ೨೨೦ ||

ಕೆರಳಿ ಧೃಷ್ಟದ್ಯುಮ್ನನಾಗ | ಭರದಿ ಮುಂದಕೊತ್ತಿ ಪೊಗಲು |
ಪರಿಕಿಸುತ್ತ ಪಾರ್ಥ ತಡೆದು | ಧುರಕೆ ನಡೆದನು || ೨೨೧ ||

**ಭಾಮಿನಿ**

ಫಲುಗುಣನು ಸಮ್ಮುಖಕೆ ಬರುತಿರೆ |
ಜಲಜಬಾಂಧವನಸ್ತಶೈಲಕೆ |
ಚಲಿಸುತಿಹುದನು ಕಂಡು ಭೀಷ್ಮನು ರಜನಿಯೊದಗಿಹುದು ||
ಹಳಚುವುದು ಕಮಲಾಪ್ತನುದಯದಿ |
ನಿಲಿಸು ಸಮರವನೆನಲು ಕೇಳುತ |
ಬಲಸಹಿತ ತಂತಮ್ಮ ಶಿಬಿರವ ಪೊಕ್ಕು ಸಂತಸದಿ || ೨೨೨ ||

**ರಾಗ ಕಾಂಭೋಜಿ ಝಂಪೆತಾಳ**

ನಿಶಿಥಕಾಲದೊಳುಭಯಸೇನೆ ಸೇನಾಧ್ಯಕ್ಷ | ರೆಸಗಿರುವ ನೇಮದೊಳು ಶಿಬಿರವನು ಪೊಕ್ಕು ||
ಕುಶಲದಿಂ ಪವಡಿಸುತ ಯಾಮಿನಿಯ ಕಳೆಯುತಿರೆ | ಬಿಸಜಬಾಂಧವನುದಯಶೈಲವಡರಿರಲು || ೨೨೩ ||

ಸುರನದೀನಂದನನು ನಿತ್ಯ ಕರ್ಮವ ರಚಿಸಿ | ಹುರಿಗೊಳಿಸುತಿರೆ ಸೈನ್ಯವಿತ್ತ ಫಲುಗುಣನು ||
ಸರಸಿರುಹನಾಭನಡಿಗೊಂದಿಸುತ ದೈನ್ಯದಿಂ | ಕರವ ಜೋಡಿಸುತೆಂದ ಕುಂದಿ ವ್ಯಥೆಯೊಳಗೆ ||೨೨೪||

ಆರು ದಿನವಾಯ್ತೀಗ ಧುರದಿ ಭೀಷ್ಮನು ರಥಿಕ | ಶೂರರನು ದಿನದಿನದಿ ಹತ್ತು ಸಾಸಿರವ ||
ಧಾರಿಣಿಗೆ ಕೆಡಹುತಿಹ ಪನ್ನೆರಡು ದಿನವಿಹುದು | ವಾರಿಜಾಕ್ಷನೆ ಜಯದ ಹಂಬಲಿಲ್ಲೆನಗೆ || ೨೨೫ ||

ಗುರು ಗುರುಜಕೃಪ ಶಲ್ಯ ಕೌರವಾದಿಗಳಿಹರು | ಧುರಧೀರ ಕರ್ಣನಿಹನೆಂತು ಹಳಚುವರೊ ||
ತರಿದ ಗಾಂಗೇಯನೊರ್ವನೆ ಬಹಳ ಸೇನೆಯನು | ಧುರದಿ ಜಯವಿಲ್ಲೆನಲು ಹರಿಯು ನಸುನಗುತ || ೧೧೬ ||

**ರಾಗ ಕೇದಾರಗೌಳ ಅಷ್ಟತಾಳ**

ನರನೆ ನೋಡರಿಬಲದಲಿ | ಹನನವಾ | ಗಿರುವಂತೆ ಎಮ್ಮವರಲಿ ||
ಧುರದಿ ಸಂಹೃತರಾಗದೆ | ಹೆಣಗುತಿಹ | ರರಿಯದೀ ಪರಿ ಪೇಳ್ವುದೆ || ೧೧೭ ||

ಎಷ್ಟು ಬಲವಿರಲವನಿಗೆ | ಜಯವಿಲ್ಲ | ಕೆಟ್ಟ ಕುರುಪತಿ ಮೂರ್ಖಗೆ ||
ಸೃಷ್ಟಿಭಾರಕನಾತನು | ಭೀಷ್ಮಮನ | ವಿಟ್ಟು ಕಾದನು ಪ್ರಾಜ್ಞನು || ೧೧೮ ||

ಮರುತನಂದನತನುಜನು | ಮಾಯಕದ | ಧುರಧೀರ ಹೈಡಿಂಬನು ||
ಬರಲಿಲ್ಲ ನೆನೆ ಬೇಗನೆ | ಈ ದಿನದೊ | ಳರಿವಿಜಯಕೆಲೆ ಪಾರ್ಥನೆ || ೧೧೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಿತು ಮನದೊಳಗಾಗ ಪಾರ್ಥನು | ಸರಿಯೆನುತ ರಿಪು ವಿಜಯ ಕೋಸುಗ |
ಪರುಠವಿಸಿ ಕಟ್ಟಿದನು ಸೇನಾ | ವ್ಯೂಹವನ್ನು || ೧೨೦ ||

ಮರುತಸುತ ಮುಖದಲ್ಲಿ ನೇತ್ರಗ | ಳೆರಡರೊಳಗೆ ಶಿಖಂಡಿ ದ್ರುಪದಜ |
ಶಿರದಿ ಸಾತ್ಯಕಿ ಕಂಠದೇಶದಿ | ಸವ್ಯಸಾಚಿ || ೧೨೧ ||

ಅರಸ ದ್ರುಪದ ವಿರಾಟರೆಡಬಲ | ವೆರಡು ರೆಕ್ಕೆಯೊಳ್ ವಾಹಿನಿಯು ಸಹಿ |
ತಿರಲು ನರಜನು ದ್ರೌಪದೇಯರು | ಬೆನ್ನಿನೊಳಗೆ || ೧೨೨ ||

ವಾಲದೊಳು ಮಾದ್ರೇಯ ಧರ್ಮಜ | ಪಾಳೆಯದ ಮೊತ್ತದಲಿ ನಿಲಿಸುತ |
ಕಾಳಗಕೆ ಕಳುಹುವರೆ ನೆನೆದನು | ಭೀಮಸುತನ || ೧೨೩ ||

ಘೋರನಾದದಿ ದಾಡೆ ಮಸೆಯುತ | ಭೋರನಯ್ತಂದಾ ಘಟೋತ್ಕಚ |
ಕಾರಿಯವ ನೇಮಿಪುದು ನೆನೆದಿಹು | ದೇತಕೆನಲು || ೧೨೪ ||

ಕುರುಪತಿಯ ವಾಹಿನಿಯ ಸಮರದಿ | ತರಿದು ಗಂಗಾಸುತನ ದರ್ಪವ |
ಮುರಿಯೆನುತ ಕಳುಹಲ್ಕೆ ಸೇನೆಯೊ | ಳತ್ತ ಭೀಷ್ಮ || ೧೨೫ ||

**ವಾರ್ಧಕ**

ಗರುಡವ್ಯೂಹವ ಗೆಯ್ದು ಕೊಕ್ಕಿನೊಳ್ ಗಾಂಗೇಯ |
ನೆರಡಕ್ಷಿಯೊಳ್ ದ್ರೋಣಕೃಪರು ನಿಂದಿರಲಾಗಿ |
ಶಿರದೊಳಶ್ವತ್ಥಾಮ ಕಂಠದೊಳಗೆ ವಿಕರ್ಣ ಮಾದ್ರನರಕಜರುರದಲಿ ||
ಧರಣಿಪತಿ ವಿಂದಾನುವಿಂದ ಕಾಳಿಂಗೇಶ |

ರಿರೆ ವಾಮದಕ್ಷಿಣದ ಪಕ್ಷದೊಳ್ ಬಲಸಹಿತ |
ಕುರುರಾಯರನುಜಾತರೊಡಗೊಂಡು ಪುಚ್ಛದಲಿ ಮೆರೆದಿರ್ದ ತಾನಂದದಿ || ೧೩೬ ||

**ರಾಗ ಭೈರವಿ ಏಕತಾಳ**

ಕಟ್ಟಿಹ ಕೋಟೆಯ ನೋಡಿ | ಕರ | ತಟ್ಟುತ ಶಿರವೊಲೆದಾಡಿ ||
ಕುಟ್ಟಿ ನುಗ್ಗೊತ್ತುವೆನೆನುತ | ಜಗ | ಜಟ್ಟಿ ಘಟೋತ್ಕಚ ನಗುತ || ೧೩೭ ||

ಖಡುಗವ ಝಳಪಿಸುತಾಗ | ಖಳ | ಕಿಡಿಗಳನುಗುಳುತ ಬೇಗ ||
ತುಡುಕಿ ಮುಂದಯ್ತರೆ ಕಂಡು | ಕುರು | ಪೊಡವಿಪ ಕೋಪವ ಕೊಂಡು || ೧೩೮ ||

ದುರುಳಖಳಾಧಮ ಕೇಳೊ | ಶಿರ | ವರಿಯುವೆನರೆಕ್ಷಣ ತಾಳೊ ||
ಕುರುಪತಿ ಬಂದಿಹೆ ನಾನು | ನೀ | ಪರಿಕಿಸು ಶರವಿದ್ಯೆಯನು || ೧೩೯ ||

ಗಳಹದಿರೆಲೊ ಪೌರುಷವ | ಬಾ | ಕೊಳುಗುಳದೊಳು ನಿನ್ನಸುವ ||
ತೊಲಗಿಪೆ ಖಡುಗದೊಳೀಗ | ಕೈ | ಚಳಕವ ತೋರೈ ಬೇಗ || ೧೪೦ ||

**ರಾಗ ಭೈರವಿ ಅಷ್ಟತಾಳ**

ವನಮೃಗಗಳ ತರಿದು | ತಿಂಬುವ ಘೋರ | ದನುಜನೆ ಸಮರವಿದು ||
ಘನತೆಯಾಗಿದೆ ದುಷ್ಟ ಖಳರು ಕ್ಷತ್ರಿಯರೊಳ | ಗನುವರವೆಸಗುವುದು || ೧೪೧ ||

ಕುರುಪತಿ ಕೇಳೊ ನಿನ್ನ | ಸೇನೆಗಳೆಂಬ | ವರಘೋರತರದಾರಣ್ಯ ||
ಗುರುಭೀಷ್ಮಕೃಪಶಲ್ಯರೆಲ್ಲ ಮೃಗಂಗಳ | ತೆರನೀಗ ತಿಂಬೆ ನೋಡು || ೧೪೨ ||

ದಶಶಿರವೃತ್ತ ಬಲ | ಹಿರಣ್ಯಕ | ನಸಿಲೋಮ ಜಂಭ ಕೇಳಾ ||
ಅಸಮ ಸಾಹಸರಗ್ರಗಣ್ಯರೆಲ್ಲ್ಯಯ್ದಿದ | ರುಸಿರೆಂದ ಕೌರವನು || ೧೪೩ ||

ಖಳರಿಗೆ ನಾಶಗಳು | ಬರ್ಪುದ ನಾನು | ತಿಳಿದಿರ್ಪೆ ಪೂರ್ವದೊಳು ||
ಕಳುಹಿದೆ ವನಕೆ ಗೋಳ್ಗುಡಿಸಿ ಸೋದರರನ್ನು | ಖಳ ನೀನು ಬಾಳುವೆಯ || ೧೪೪ ||

ಎಂದಾ ಮಾತನು ಕೇಳುತ್ತ | ಕೌರವ ಕ್ರೋಧ | ದಿಂದ ಚಾಪವನೆತ್ತುತ್ತ ||
ಸಂಧಿಸಿದನು ನೂರು ಬಾಣವನನಿಲಜ | ನಂದನನಿಗೆ ಭರದಿ || ೧೪೫ ||

**ರಾಗ ಶಂಕರಾಭರಣ ಮಟ್ಟೆತಾಳ**

ಶರವ ತರಿದು ಭೀಮಸುತನು ಭಿಂಡಿವಾಲದಿ |
ಕರದ ಚಾಪವನ್ನು ಮುರಿದು ಕೆಡೆದ ವೇಗದಿ || ೧೪೬ ||

ಚಾಪ ಪೋಗೆ ಖಡುಗವೆತ್ತಿ ಕೌರವೇಂದ್ರನು |
ಕೋಪದಿಂದಲೆಸೆಯೆ ಚೂರ್ಣಗೆಯ್ದು ಬಿಸುಟನು || ೨೪೭ ||

ಚಂಡಕೋಪದಿಂದ ಗದೆಯನೆತ್ತಿ ಎಸೆಯಲು |
ಖಂಡಿಸುತ್ತಲದರ ಹೈಡಿಂಬಿ ಖತಿಯೊಳು || ೨೪೮ ||

ಮುಷ್ಟಿಯನ್ನು ಬಲಿದು ಶಿರಕೆ ಥಟ್ಟನೆರಗಲು |
ಸೃಷ್ಟಿಯೊಳಗೆ ಮೂರ್ಛೆತಳೆದ ಭೂಪನಾಗಳು || ೨೪೯ ||

**ವಾರ್ಧಕ**

ಅಸುರಕೋಟಿತ್ರಯವ ಸೃಜಿಸಿದಂ ಕ್ಷಣದೊಳಗೆ |
ಮುಸುಕಿದಂ ಕೈದುಗಳ ಮಳೆಯ ಭೋರ್ಗರೆಯುತ್ತ |
ಮಸಗಿರುವ ಕಾರ್ಬೊಗೆಯ ಜ್ವಾಲೆ ದಳ್ಳುರಿಗಳೊಳ್ ಮಿಂಚು ಸಿಡಿಲಾಗೆರಗುತ ||
ವಿಷಜಂತು ವಾರಾಹ ಸಿಂಹ ಚಮರಿ ಗಜಾಶ್ವ |
ದೆಸೆಗೆಡಿಪ ಪುಲಿ ಕರಡಿ ಖಡ್ಗಿ ಗೋಮಯು ಶರಭ |
ಅಸುರ ನಿರ್ಮಿಸುತಾಗ ರಿಪುಸೇನೆಗಳಿಗೆರಗಿ ಕಂಗೆಡಿಸೆ ಕ್ಷಣಮಾತ್ರದಿ || ೨೫೦ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಖಡುಗವ ಝಳಪಿಸಿ ಪೊಕ್ಕನು | ಖಳ | ಕಡಿದಿಳುಹುತ ಕೋಟೆ ಮುರಿದನು ||
ತುಡುಕಿ ಮಹಾರಥವರ್ಗವ | ಕಂ | ಗೆಡಿಸಲು ಕುರುಸೇನೆಯೆಲ್ಲವ || ೨೫೧ ||

ಕರಿಗಳ ತಂಡವ ತರಿದನು | ರಥ | ತುರಗ ಕಾಲ್ಬಲಗಳ ಮುರಿದನು ||
ಧುರಧೀರರನು ಭಿಂಡಿವಾಲದಿ | ಬಡಿ | ದುರುಳಿಸಿದನು ಕ್ಷಣ ಮಾತ್ರದಿ || ೨೫೨ ||

ಕೆಲರೋಡಿದರು ದೆಸೆದೆಸೆಗಾಗ | ಮತ್ತೆ | ಕೆಲರು ಚಾಪವ ಬಿಸುಡುತ ಬೇಗ ||
ಸಲಹಬೇಕೆನ್ನುತ್ತ ಕೆಲವರು | ಬೀಳು | ತ್ತಿಳೆಯೊಳು ಸ್ತುತಿಗೆಯ್ಯುತಿರ್ದರು || ೨೫೩ ||

**ಕಂದ**

ಕರಗಳ ಜೋಡಿಸಿ ದೈನ್ಯದಿ |
ಮರುಗುತಲಿಹರಂ ಕಾಣುತ ಮಾರುತಿ ತನಯಂ ||
ಭರವಸೆಯೀಯುತ ಮುದದಿಂ |
ತಿರುಗಲು ಕೌರವ ಚೇತರಿಸುತ ಕಂಡಾಗಳ್ || ೨೫೪ ||

**ರಾಗ ಸಾಂಗತ್ಯ ರೂಪಕತಾಳ**

ಶಿವ ಶಿವ ಕರ್ಬುರನೆಸಗಿದ ವಿಕ್ರಮ | ತವಕದಿ ಕಂಡಿರೆ ಭಟರು |
ಬವರಕೆ ನಿಂದಿಹ ರಥಿಕರೆಲ್ಲರು ನಿಮ್ಮೊಳ್ | ಕವಲು ಬುದ್ಧಿಯ ಯೋಚಿಸಿದಿರೆ || ೧೫೫ ||

ಗುರು ದ್ರೋಣ ಭೀಷ್ಮಾದ್ಯರೆಲ್ಲ ಲಾಲಿಪುದೀಗ | ಹರವಿಧಿಗಳಿಗಸಾಧ್ಯಕರು ||
ಧುರಪರಾಕ್ರಮರು ಪಾಂಡವರನ್ನು ಸತ್ಯದಿ | ತರಿಯುವಿರೆಂದರಿತಿರ್ದೆ || ೧೫೬ ||

ಅಂತರಂಗದಿ ಪೂರ್ಣ ಕರುಣ ಪಾಂಡವರೊಳು | ನಿಂತಿರಿ ಎನ್ನ ಪಕ್ಷದೊಳು ||
ಪಿಂತೆನಗರಿತಿರೆ ಕರ್ಣನೊಂದಿಗೆ ಮನ | ವೆಂತು ತೋರ್ಪುದೊ ಗೆಯ್ಯುತಿರ್ದೆ || ೧೫೭ ||

ಕೂಡಿದ ಸಭೆಯೊಳು ನಿಂದೆಗೆಯ್ದುದಕಾಗಿ | ಮಾಡಿದ ಶಪಥವ ಕರ್ಣ ||
ಮಾಡೆನು ಸಮರವ ಭೀಷ್ಮ ಸೌರಂಭದಿ | ಹೂಡೆನಸ್ತ್ರವನೆಂದು ನಡೆದ || ೧೫೮ ||

ಮೊದಲೆ ಪಾಂಡವರ ಪಕ್ಷಕೆ ಪೋದರೊಳಿತೆಂದ | ಹೃದಯದೊಳ್ ಗರಳವನಿರಿಸಿ ||
ಸುಧೆಯುಕ್ತ ವಚನ ಬೀರಿರೆ ನಂಬಿ ಎನಗಿಂಥಾ | ಕದನದೊಳಪಹಾಸ್ಯವಾಯ್ತು || ೧೫೯ ||

**ರಾಗ ಮಾರವಿ ಏಕತಾಳ**

ಇನಿತೀ ಪರಿ ಧಿಕ್ಕರಿಸುವ ಕುರುಕುಲ | ಜನಪನನೀಕ್ಷಿಸುತ ||
ಘನ ಕ್ರೋಧಗಳನು ತಾಳುತ ಗಂಗಾ | ತನಯನು ಪೇಳಿದನು || ೧೬೦ ||

ಖರೆ ಖರೆ ಕರ್ಣನು ನಿನ್ನಯ ಜೀವವ | ಪೊರೆಯುವ ವಿಕ್ರಮನು ||
ಬರಿದೇ ಕಲಹವ ತಂದಿಕ್ಕಿದ ಮಹ | ಪುರುಷನೆ ಹಿತ ನಿನಗೆ || ೧೬೧ ||

ಶರಧಿಯೊಳಡಗಿಹ ಚಿಪ್ಪಿನ ಮಧ್ಯದಿ | ಮೆರೆಯುವ ಮೌಕ್ತಿಕಕೆ ||
ಸರಸಿಜಪತ್ರದೊಳಿರುತಿಹ ಜಲಕಣ | ಸರಿಸಮವಾಗುವುದೆ || ೧೬೨ ||

ಗಳಿಸಿದೆ ಋಣ ಕೌರವನೊಳಗೆನ್ನುತ | ಛಲವಿಡಿದೀವರೆಗೆ ||
ಹಳಚಿದೆ ಖಾಡಾಖಾಡಿಯೊಳಹಿತರ | ಬಲಗಳ ತರಿದಿಹೆನು || ೧೬೩ ||

ಆದರೆ ಎನ್ನಯ ಶಪಥವ ಲಾಲಿಸು | ಮಾಧವನನು ಧುರಧಿ ||
ಮೋದದಿ ಚಕ್ರವ ಪಿಡಿಸದಿರಲು ನಾ | ಮೇದಿನಿಯೊಳಗಿರೆನು || ೧೬೪ ||

**ವಾರ್ಧಕ**

ಒರೆಯುತೀ ಪರಿ ತನ್ನ ಮನದೊಳಗೆ ಯೋಚಿಸುತ |
ದುರುಳಸಹವಾಸವೇನೆಂಬೆ ಮೌನದೊಳಿರಲು |
ಬರುತಿಹುದು ಮೂಕನೆಂದಭಿಧಾನ ಮಾತಾಡೆ ಬಹುಭಾಷಿಯೆಂತೆಂಬರು ||
ಬರಲು ಹತ್ತಿರೆ ಗರ್ವಿಯೆಂಬುವರು ದೂರಿರಲು |

ಪುರುಷರೊಳಗಧಮನಿವನೆಂಬರನ್ಯರ ಸೇವೆ |
ಪರಮಸಂಕಟವೆನುತ ಪೊರಮಟ್ಟು ಗಾಂಗೇಯ ಮಾದ್ರೇಶನೊಡನೆಂದನು || ೧೬೫ ||

**ರಾಗ ತೋಡಿ ಅಷ್ಟತಾಳ**

ಕೇಳು ಕೇಳೈ ಶಲ್ಯ ಕರ್ಬುರ | ಖೂಳನೊಳು ಕುರುಸೇನೆ ಬಳಲುತ |
ಕೋಳುಗೊಂಡೋಡಿಹುದು ದಿಗ್ದೆಸೆಗೆ ||
ಜಾಲವನು ನೆರಹೀಗ ಧೈರ್ಯವ | ಪೇಳಿ ಸಂತೈಸುವೆನು ವೇಗದಿ |
ಕಾಳಗಕೆ ನೀ ಪೋಗು ರಿಪುಗಳಲಿ  || ೧೬೬ ||

ಮುರಹರಂಗೆಣೆ ನೀನು ಧುರದೊಳ | ಗರಿತಿರುವ ಮಹರಥಿಯು ಕುಂತಿಯ |
ತರಳರೊಳು ಹಳಚೆನಲು ಸಂತಸದಿ |
ಧರಿಸಿ ಚಾಪವ ಪೊರಟು ಬರುತಿಹ | ಪರಿಯರಿತು ಹರಿಯೊಳಗೆ ಪಾರ್ಥನು |
ಧುರಕೆ ಬರುತಿಹ ರಥಿಯ ನೋಡೀಗ   || ೧೬೭ ||

ಇವನೊಡನೆ ಹಳಚುವರೆ ಎನ್ನಯ | ಕುವರನೋರುವನಿಹನು ಪನ್ನಗ |
ಯುವತಿ ಲೂಪಿಯ ಸುತನಿರಾವಂತ ||
ತವಕದಿಂ ಬಹನೆನುತ ನೆನೆಯಲು | ಪವನವೇಗದಿ ಬಂದು ನಮಿಸುತ |
ಲವಲವಿಕೆಯಿಂದಾಗ ಪಿತನೊಡನೆ  || ೧೬೮ ||

**ರಾಗ ಜಂಜೂಟಿ ಅಷ್ಟತಾಳ**

ಯಾತಕೆ ನೆನಸಿದೆಯೆನ್ನ | ಸಂ | ಪ್ರೀತಿಯೊಳರುಹು ಸಂಪನ್ನ |
ಆತುರಗೊಂಡಿಹುದೇನೆನೆ ಕುರುಕುಲ |
ವ್ರಾತವನು ಮಾಯಕದ ಸಮರದಿ | ಘಾತಿಸೆನೆ ಕೈ ಮುಗಿಯುತೆದ್ದನು || ೧೬೯ ||

ಸ್ಯಂದನ ಕಾರ್ಮುಕಂಗಳನು | ಬೇಗ | ದಿಂದ ನಿರ್ಮಿಸಿ ಲೂಪಿಸುತನು ||
ಬಂದನು ಹರಿನಾದಗೆಯ್ಯುತ್ತಾ ಸಮರಕೆ |
ಮುಂದೆ ಬರುತಿಹ ಮಾದ್ರಪಾಲನ | ನಂದಗೆಡಿಸುವೆನೆನುತರೋಷದಿ || ೧೭೦ ||

**ರಾಗ ಕೇದಾರಗೌಳ ಝಂಪೆತಾಳ**

ಕೆರಳಿ ಮಾದ್ರೇಶನೊಡನೆ | ಪೇಳಿದನು | ಗರಳದುರಿಯಲಿ ನಿನ್ನನೆ ||
ಉರುಹುವೆನು ನೋಡೆನ್ನುತ | ಅಹಿಕುಲದ | ಪರಿಯ ಕಾಂಬುದು ಸಂತತ  || ೧೭೧ ||

ಅಳಿಯು ಸಂಪಿಗೆಮಧುವನು | ಸೇವಿಸಿದ | ರುಳಿಯುವುದೆ ಮಾದ್ರೇಶನು |
ಮಲೆತಿಹೆನು ರಾಜನ್ಯನು | ಪನ್ನಗಕೆ | ಕಲಿತಾರ್ಕ್ಷ್ಯಸಮರೂಪನು || ೧೭೨ ||

ಕೊಚ್ಚದಿರು ಪೌರುಷವನು | ಮಾದ್ರೇಶ | ಮುಚ್ಚು ನಿನ್ನಯ ಬಾಯನು |
ಬೆಚ್ಚುವೆನೆ ನಾನೀಗಳು | ದೇಹಗಳ | ಕೊಚ್ಚಿ ಕೆಡಹುವೆ ಧುರದೊಳು || ೧೭೩ ||

ತರಳನುತ್ತರನೊರ್ವನು | ಮಾದ್ರಪತಿ | ಶರ ಹತಿಯೊಳೆಮನೂರನು ||
ತೆರಳಿ ಪೊಂದಿದ ಮುದದೊಳು | ಧುರಗೆಯ್ದು | ಮರುಳೆ ಕೇಳಿಕೊ ಭರದೊಳು || ೧೭೪ ||

ಪವನಾಶನನ್ವಯದೊಳು | ಪುಟ್ಟಿರ್ದ | ಯುವತಿ ಫಲುಗುಣರಿಂದಲು ||
ಭುವನದೊಳಗುದಿಸಿರ್ದರೆ | ಗೆಲುತಿಹೆನು | ತವಕದಿಂ ನೋಡೈ ಖರೆ || ೧೭೫ ||

**ರಾಗ ಶಂಕರಾಭರಣ ಮಟ್ಟೆತಾಳ**

ಪೂತು ಮಝರೆ ಎನುತ ಶಲ್ಯ | ಖಾತಿಯಿಂದಲುಗಿದು ವಿಶಿಖ |
ವ್ರಾತಗಳನು ಸುರಿದನಿರಾವಂತನಂಗಕೆ  || ೧೭೬ ||

ಒಡನೆ ಬರುವ ಶರವ ತರಿದು | ಕಿಡಿಯ ಸೂಸುತಾಗ ಶಲ್ಯ |
ಪಿಡಿದ ಧನುವ ಮುರಿದನಿರಾವಂತ ಗರ್ಜಿಸಿ || ೧೭೭ ||

ಅನ್ಯಧನುವ ಪಿಡಿದು ಶಲ್ಯ | ಘನ್ನಘಾತಕಿ ತಾಳೆನುತ್ತ |
ಪನ್ನಗೇಂದ್ರ ಸುತೆಯ ಕುವರಗೆಸೆದ ಶರಗಳ || ೧೭೮ ||

ಮತ್ತೆ ಧನುವ ಮುರಿಯೆ ಶಲ್ಯ | ಕತ್ತಿಯನ್ನು ನೆಗಹಿ ಬರಲು |
ಕಿತ್ತು ಸೆಳೆದನದರನಿರಾವಂತ ಕನಲುತ  || ೧೭೯ ||

ಮಲ್ಲಯುದ್ಧಕೊದಗಿ ಶಲ್ಯ | ಹಲ್ಲ ಕಡಿಯುತಾಗ ನಿಲಲು |
ಖುಲ್ಲ ತಾಳೆನುತ್ತಲಿರಾವಂತ ಮಾಯದಿ || ೧೮೦ ||

**ಭಾಮಿನಿ**

ಘೋರ ಸರ್ಪಾಕೃತಿಯ ತಾಳುತ |
ಭೋರೆನುವ ನಾದದಲಿ ಶಲ್ಯನ |
ಚಾರು ತನು ಕರಚರಣವೆಲ್ಲವ ಸುತ್ತಿ ಬಿಗಿವಡೆದು ||
ಕಾರುತಿಹ ವಿಷಯುಕ್ತ ಪೆಡೆಯೊಳ |
ಗೂರಿ ಭುವನದಿ ಕೆಡಹೆ ವೇಗದಿ |
ಮೀರಿತೆಂದರಿತಾಗ ಧನುಶರವಾಂತು ಗುರುತನುಜ || ೧೮೧ ||

**ರಾಗ ಘಂಟಾರವ ಏಕತಾಳ**

ಎತ್ತಿ ಚಾಪವ ಗರುಡಾಸ್ತ್ರವನು ಪೂಡಿ |
ಕೃತ್ತಿವಾಸನ ತೆರದಿ ಗರ್ಜನೆ |  ಯಿತ್ತು ಹೊಡೆದನು ವೇಗದಿ || ೧೮೨ ||

ಬಿಟ್ಟನಾ ಕ್ಷಣ ಶಲ್ಯನಂಗವ ಧುರ |
ಕಟ್ಟಹಾಸದಿ ಬಂದು ನಿಲ್ಲುತ | ದಿಟ್ಟ ಲೂಪಿಕುಮಾರಕ || ೧೮೩ ||

ಎಲೆಲೆ ಭೂಸುರ ನಿನಗೇಕೊ ರಣರಂಗ |
ಛಲದಿ ತರತರ ಭಕ್ಷ್ಯಮೆಲ್ಲುವ | ಪರಿಗಳಲ್ಲವೊ ಸಂಗರ || ೧೮೪ ||

ತೋರೋ ನಿನ್ನಯ ಬಲಪರಾಕ್ರಮಗಳ |
ಗಾರುಗೆಡಿಸುವೆನೆನುತ ಗುರುಜನು | ತೂರಿದನು ಶರಜಾಲವ || ೧೮೫ ||

**ರಾಗ ಭೈರವಿ ಏಕತಾಳ**

ಬರುವಸ್ತ್ರವ ಪುಡಿಗೆಯ್ದು | ಪಲ್ | ಮೊರೆವುತ ಬಾಣವನುಗಿದು |
ಗುರಿಯೊಳಗೆಸೆಯಲ್ ಮುರಿದ | ಗುರು | ತರಳನು ಕ್ರೋಧವ ತಳೆದ || ೧೮೬ ||

ವೀರಾಗ್ನ್ಯಸ್ತ್ರವ ತೆಗೆದು | ಹೆದೆ | ಗೇರಿಸಿ ಗುರಿಯೊಳಗುಗಿದು |
ಭೋರನೆ ಗುರುಜನು ಬಿಡಲು | ಧರೆ | ಗೂರಿದ ಶಿರ ಮೂರ್ಛೆಯೊಳು || ೧೮೭ ||

**ಭಾಮಿನಿ**

ಭರದೊಳಯ್ತಂದಾಗ ಶಲ್ಯನ |
ಶಿರಚರಣ ತಡವರಿಸಿ ಗುರುಜನು |
ಗರುಡಮಂತ್ರವ ಜಪಿಸಲೆದ್ದನು ನೋಡುತೆಡಬಲವ ||
ದುರುಳನೆಲ್ಲಿಹನೆಂದು ಧನು ಝೇಂ |
ಕರಿಸಿ ಮುಂದಯ್ತುರುವ ಕಾಲದಿ |
ಸುರನದೀಸುತ ಬಂದು ಸಂತಯ್ಸುತ್ತಲಿಂತೆಂದ || ೧೮೮ ||

**ರಾಗ ಕೇದಾರಗೌಳ ಅಷ್ಟತಾಳ**

ಲಾಲಿಸು ಮಾದ್ರ ನೀ ಸೈರಿಸು ಪನ್ನಗ | ಜಾಲಮಾಯಾವಿಯಾತ |
ಕಾಳಗದೊಳು ಜಯವಿಲ್ಲ ಮಂತ್ರೌಷಧ | ಮೂಲದಿ ಗೆಲಬೇಕಯ್ಯ || ೧೮೯ ||

ತೆರಳುವೆ ನಾನೀಗ ಸಮರಕೆ ಸೈರಿಸು | ಅರೆಕ್ಷಣವೆನ್ನುತಿರೆ ||
ಶಿರವನೆತ್ತುತಲಿರಾವಂತ ತನ್ನಯ ವೈರಿ | ಯರಸುತ್ತಲಿರೆ ಪಾರ್ಥನು || ೧೯೦ ||

ತರಳನೆ ತಾಳು ನೀ ಸೈರಿಸರೆಕ್ಷಣ | ಗುರುಜನ ದರ್ಪವನ್ನು ||
ಮುರಿಯಬಹುದು ನಾಳೆ ವೈರಿಮೋಹರಕಾನು | ತೆರಳುವೆನೆನುತೆದ್ದನು || ೧೯೧ ||

ಬಂದು ಪಾರ್ಥನು ರಥವೇರೆ ಮುರಾಂತಕ | ನಂದು ಚಮ್ಮಟಿಕೆಯನ್ನು ||
ಚಂದದಿ ಪಿಡಿದು ಚಪ್ಪರಿಸಲು ತುರಗವ | ಮುಂದರಿಯುತ ಭೀಷ್ಮನು || ೧೯೨ ||

ಮುರಹರನನು ನೋಡಿ ನಗುತ ಗಾಂಗೇಯನು | ಶರಣರ ಪೊರೆಯುವರೆ ||
ನಿರತ ವ್ಯಾಮೋಹಗಳೆಷ್ಟಿರಬಹುದೀತ | ಗೆನುತಾಗ ಪೇಳಿದನು || ೧೯೩ ||

**ರಾಗ ಕಾಂಭೋಜಿ ಝಂಪೆತಾಳ**

ಚಿನ್ಮಯನೆ ಲಾಲಿಪುದು ಪುಣ್ಯವಂತಗೆ ಘೋರಾ | ರಣ್ಯಗಳು ಪಟ್ಟಣಗಳ್ ಮಣ್ಣೆ ಹೊನ್ನಹುದು||
ಪುಣ್ಯಹೀನಗೆ ರಾಜ್ಯ ಕಾನನವೆ ಕೇಳ್ ಮತ್ತೆ | ಚಿನ್ನಗಳು ಮೃತ್ತಿಕೆಗಳಂತೆ ತೋರುವುವು || ೧೯೪ ||

ಮಂದಮತಿ ಕೌರವನು ಧುರಕೆ ಸಹಯವ ಪಡೆಯೆ | ಬಂದವನು ನಿನ್ನ ಯಾಚಿಸದೆ ಬಿಟ್ಟಿಹನು ||
ಮುಂದಿನ್ಯೋಚನೆಯುಳ್ಳ ಪಾರ್ಥ ನಿನ್ನನು ನಂಬಿ | ಹೊಂದಿದಕೆ ಧನ್ಯನವನೆಂದು ನಾ ಪೇಳ್ವೆ || ೧೯೫ ||

ಪೇಳಲಾರೆನು ಕರ್ಮ ಸಕಲರನು ಬಾಧಿಪುದು | ಶೂಲಿಯನು ಬಳಲಿಸಿತು ಬ್ರಹ್ಮನ ಕಪಾಲ ||
ಕೂಲಿಯಾಳುಗಳಂತೆ ಸೃಷ್ಟಿಗೆಯ್ಯುವನಜನು | ಶ್ರೀಲಲನೆಪತಿ ನಿನ್ನ ಬೆನ್ನನಟ್ಟಿಹುದು || ೧೯೬ ||

ಧರಿಸಿದೆಯ ಮತ್ಸ್ಯಾದಿ ರೂಪುಗಳ ನೋಡೀಗ | ನರನ ಸಾರಥಿಯಾದ ವಿಧಿಯನೇನೆಂಬೆ ||
ಕುರುಪತಿಯ ದುಷ್ಕರ್ಮವೇಕೆ ನಿಂದಿಪುದೀಗ | ಧರೆ ಚತುರ್ದಶ ಪೊರೆವ ಮಹಿಮಗಿಂತಾಗೆ || ೧೯೭ ||

**ರಾಗ ಮಾರವಿ ಏಕತಾಳ**

ಗರುಡಧ್ವಜನದ ಕೇಳುತ ಗಂಗಾ | ತರಳನ ನುಡಿಗಳನು ||
ದುರಿತಗಳೊದಗದ ತೆರದೊಳು ಶರಣರ | ಪೊರೆವುದೆ ಬಿರುದೆನ್ನ || ೧೯೮ ||

**ರಾಗ ಕಾಂಭೋಜಿ ಏಕತಾಳ**

ಪಂಕಜಾಕ್ಷ ಭೇದವೇಕೊ | ಕಿಂಕರನಲ್ಲವೆ ನಾನು ||
ಶಂಕೆಯೇನ್ಯೆ ಪಾರ್ಥನಧಿಕ | ಕಿಂಕರನಾಗಿಹನೇ ನಿನಗೆ || ೧೯೯ ||

**ರಾಗ ಮಾರವಿ ಏಕತಾಳ**

ಭೇದವು ನಿಮ್ಮೊಳಗುಭಯರ ಪಾಲಿಪ | ನಾದಿಪಿತಾಮಹನು |
ಕಾದಿಹ ತೈಲವ ತೊಡೆದನೆ ಧರ್ಮಜ | ಹೋದೆಯೊ ಕುರುಬಲಕೆ || ೨೦೦ ||

**ರಾಗ ಕಾಂಭೋಜಿ ಆದಿತಾಳ**

ಕುರುಪತಿಯೊಳಿರ್ದು ಜೀವ | ಪೊರೆದು ಋಣವ ಗಳಿಸಿದೆನು ||
ತೊರೆಯಲಾರೆ ಹರಿಯೆ ಕುಂತೀ | ತರಳರ ಹಂಗೇನೊ ನಿನಗೆ || ೨೦೧ ||

**ರಾಗ ಮಾರವಿ ಏಕತಾಳ**

ನಿಶ್ಚಲ ಭಕ್ತಿ ದೃಢಾತ್ಮದಿ ನಂಬಿಹ | ಸಚ್ಚರಿತರ ಬಿಡದೆ ||
ಮೆಚ್ಚುತ ದುರಿತವ ಹರಿಪುದೆ ಎನ್ನಯ | ಹೆಚ್ಚಿನ ಬಿರುದಹುದು || ೨೦೨ ||

**ರಾಗ ಕಾಂಭೋಜಿ ಆದಿತಾಳ**

ಅಂಬುಜಾಕ್ಷ ನಿನ್ನ ನಾನು | ನಂಬಿದನಲ್ಲವೆ ಪೇಳು |
ಸಂಭ್ರಮದೊಳನ್ನ ತೊರೆದು | ಬೆಂಬಲನಾಗಿಹೆ ನರಗೆ || ೨೦೩ ||

**ರಾಗ ಮಾರವಿ ಏಕತಾಳ**

ದುಷ್ಟ ಸುಯೋಧನನೊಡಗೊಂಡಿಹೆ ನೀ | ನೆಷ್ಟಾಡಿದರೇನು ||
ತಟ್ಟನೆ ನಿನ್ನನು ಸಮರದಿ ಗೆಲುವರೆ | ತೊಟ್ಟಿಹೆ ಛಲಗಳನು || ೨೦೪ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರಿಯೆ ಲಾಲಿಸು ಭಾಪು ಭಕ್ತರ | ಪೊರೆವ ಬಿರುದಿರೆ ನಿನ್ನ ಪದಗಳ |
ಶರಣು ಪೊಂದಿದ ನರನೊಳೆನ್ನನು | ವಿಜಯಪಡಿಸೊ || ೨೦೫ ||

ಭಳಿರೆ ಗಂಗಾ ತನಯ ಭಕ್ತರ | ನೊಲಿದು ಪಾಲಿಪೆನಾದಡೀ ದಿನ |
ಕಲಿ ಕಿರೀಟಿಯ ಧುರದಿ ನಿನ್ನನು | ಗೆಲಿಸುತಿಹೆನು || ೨೦೬ ||

ದೇವದೇವ ಮುರಾರಿ ನಿನ್ನನು | ಸಾವಧಾನದಿ ಭಜಿಪನಾದಡೆ |
ದೇವರಾಜನ ಸುತನ ಗೆಲುವನು | ಭೀಷ್ಮನಿಂದು || ೨೦೭ ||

**ವಾರ್ಧಕ**

ಮುರಮಥನನುಗ್ರದೊಳ್ ಫಲುಗುಣನೊಳಿಂತೆಂದ |
ಕುರುಪತಿಯನೆಳೆದೊಯ್ದ ಚಿತ್ರಸೇನನ ಗೆಲಿದೆ |
ಸುರಲೋಕದಿಂದ ಮದಕರಿಯನಿಳಿಸಿದೆ ಧರೆಗೆ ದಹಿಸಿರ್ಪೆ ಖಾಂಡವನವ ||
ದುರುಳ ದೈತ್ಯ ನಿವಾತಕವಚಾದಿಗಳ ಕೊಂದೆ ||
ಧರೆಯೊಳೀ ಪರಿ ಕೀರ್ತಿ ಧರಿಸಿರ್ದಡೀ ದಿನದಿ |
ಧುರದಿ ಭೀಷ್ಮನ ಜಯವ ಪೊಂದೆನಲ್ ಕಿಡಿಗೆದರಿ ಧನುವ ಝೇಂಕೃತಿಗೆಯ್ಯುತ || ೨೦೮ ||

**ಭಾಮಿನಿ**

ಕೇಳು ಕಮಲಾಂಬಕನೆ ಸೇತುಹಿ |
ಮಾಲಯದ ಮಧ್ಯದಲಿ ಬಾಹುಜ |
ಮೌಳಿರಂಜಿತಪಾದಕಮಲಾನ್ವಿತ ನದೀಸುತನ ||
ಶೂಲಿಸನ್ನಿಭ ಭೀಷ್ಮನನು ನಾ |

ಕಾಳಗದಿ ಜಯ ಪೊಂದದಿರ್ದಡೆ |
ನೀಲಮೇಘಶ್ಯಾಮ ನಿನ್ನಯ ಭಜಕ ನಾನಲ್ಲ || ೩೦೯ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಂದು ಶಪಥ ಗೆಯ್ದು ಪಾರ್ಥ | ನಂದು ಗಾಂಡೀವ ನೆಗಹಿ |
ಮುಂದೆ ರಥದೊಳಿರ್ಪ ಭೀಷ್ಮ | ಗೆಂದನಾ ಕ್ಷಣ || ೩೧೦ ||

ಧುರದಿ ಪ್ರಾಜ್ಞ ನಿನ್ನೊಳೆನ್ನ | ಶರದ ಪಾಂಡಿತ್ಯಗಳನು |
ಪರಿಪರಿಯ ತೋರಿ ಕೀರ್ತಿ | ಪಡೆವೆ ನೋಡೆಲ  || ೩೧೧ ||

ಎನ್ನ ಪೌತ್ರನಸ್ತ್ರಕುಶಲ | ವನ್ನು ನೋಳ್ಪ ತವಕವಿಹುದು |
ಧನ್ಯನಹೆನು ಗೆಲಿದರೆನ್ನ | ಕುಲದಿ ಶೂರನು || ೩೧೨ ||

ಶೂಲಿಯೊಡನೆ ಕಾದಿ ವಿಜಯ | ತಾಳಿ ಪಾಶುಪತವ ಕೊಂಡೆ |
ಶೀಲ ಸದ್ಗುಣಾಢ್ಯ ತಾತ | ಬಲ್ಲೆಯೆನ್ನನು || ೩೧೩ ||

ಬೇಡ ಬೇಡ ಗರ್ವ ಪಾರ್ಥ | ಖಾಡಾಖಾಡಿ ಭೃಗುಜನೊಡನೆ |
ಮಾಡಿ ಧುರವ ಜಯವ ಪಡೆದೆ | ಕೇಳಿ ಬಲ್ಲೆಯ || ೩೧೪ ||

**ರಾಗ ಭೈರವಿ ಝಂಪೆತಾಳ**

ಬಾಲತನದೊಳು ನಿಮ್ಮ ತೊಡೆಯ ಮೇಲೇರಿಸುತ | ಲಾಲಿಸುವ ಕಾಲದೊಳಗೆಮ್ಮ ||
ಸೀಳಿ ಬಿಸುಡದೆ ವಿದ್ಯೆ ಕಲಿಸಿ ಗುರುಮುಖದಿಂದ | ಕಾಳಗಕೆ ಮನ ಬಂತೆ ತಾತ || ೩೧೫ ||

ಬಿತ್ತುವುದು ಬೀಜ ಮೊಳೆಯುತ್ತ ಬರೆ ಕೃಷಿಗೆಯ್ದು | ಅರ್ತಿಯಿಂ ಬೆಳೆಸುವುದು ತರುವ ||
ಚಿತ್ತರಂಜಕ ಫಲವ ಕೊಂಬರಲ್ಲದೆ ವೃಕ್ಷ | ಕತ್ತರಿಪುದುಂಟೆ ಬಲ್ಲವರು || ೩೧೬ ||

ಅನುಜನಾದ ವಿಚಿತ್ರವೀರ್ಯಕ್ಷೇತ್ರೋತ್ಪನ್ನ | ತನುಜಾತರ್ ಯುಗ್ಮಕಟಕದಲಿ ||
ಸನುಮತವೆ ಕರುಣ ಕೌರವರಲ್ಲಿ ತೋರುವಿರಿ | ಘನತರದ ಕ್ರೋಧವೆಮ್ಮೊಳಗೆ || ೩೧೭ ||

ಇರುವೆ ಹಂಗಿಲಿ ಕೌರವೇಂದ್ರಗಹಿತರು ನಿಮ್ಮ | ಧುರದಿ ಜಯಿಸದೆ ಪಿಂದೆ ಸರಿಯೆ ||
ಸುರನರೋರಗರೆನ್ನ ನಿಂದಿಪರು ಕಾಶ್ಯಪಿಯು | ಹೊರಳೆನ್ನ ಬಲವೈರಿಜಾತ || ೩೧೮ ||

**ರಾಗ ಮಾರವಿ ಏಕತಾಳ**

ಕರುಣಗಳಿರೆ ಕೌರವನೊಳಗೀ ಪರಿ | ಧುರದೊಳು ಖೇಚರನು ||
ಕರಗಳ ಬಂಧಿಸುತೊಯ್ಯುವ ಕಾಲದಿ | ತೆರಳಿದಿರ್ಯಾವೆಡೆಯ || ೩೧೯ ||

ತೆರಳಿದ ಮದ್ವಚನವನುರೆ ಮೀರುತ | ಪುರದೊಳಗೆನ್ನಿರಿಸಿ |
ಕುರುಪತಿ ಸೋತಿಹ ಖಚರಗೆ ನಾನಿರೆ | ಬರದಪಜಯ ಪಾರ್ಥ || ೨೦೦ ||

ಬಲ್ಲೆನು ತಮ್ಮಯ ಸ್ವಾರಿಗೋಗ್ರಹಣದಿ | ಬಿಲ್ಲನು ಪಿಡಿದಿಹುದು ||
ಮೆಲ್ಲನೆ ಪಿಂದಕೆ ತಿರುಗಿದಿರೇತಕೆ | ಗೆಲ್ಲದೆ ರಿಪುಭಟರ || ೨೦೧ ||

ವನದೊಳು ತೊಳಲಿದಿರೆಂಬ ಕಾರುಣ್ಯದಿ | ರಣದೊಳು ಜಯಸಿರಿಯ |
ಮನವೊಲಿದಿತ್ತೆನು ಫಲುಗುಣ ಸೋತವ || ನೆನುತಲೆ ತಿಳಿದಿಹೆಯ || ೨೦೨ ||

ಎತ್ತಿದೆ ಧನು ಪಾಂಚಾಲೆವಿವಾಹದಿ | ಪೃಥ್ವಿಪರೆಲ್ಲರಿಗೆ ||
ಚಿತ್ತದಿ ತಲ್ಲಣಗೊಳಿಸಿಹೆ ತಾತನೆ | ಸತ್ಯವ ತಿಳಿದಿಹೆಯ || ೨೦೩ ||

ತಂದಿಹೆನನುಜಗೆ ನೃಪರನು ದಂಡಿಸಿ | ಪಿಂದೆ ಕಾಶೀಪತಿಯ ||
ನಂದನೆಯನು ನಿನಗರಿಯದು ಪೌರುಷ | ದಿಂದೇತಕೆ ನುಡಿವೆ || ೨೦೪ ||

**ರಾಗ ಕೇದಾರಗೌಳ ಝಂಪೆತಾಳ**

ಮಾತೆಯಭಿಮತದಂದದಿ | ಸುರಗಜವ | ಭೂಳತಕೆ ತರಿಸಿ ಮುದದಿ ||
ಖ್ಯಾತನೆಂಬುವ ಬಿರುದನು | ಪೊತ್ತಿರುವೆ | ತಾತ ಬಿಡು ಬಿಡು ಛಲವನು || ೨೦೫ ||

ತೊರೆದೆ ಸಕಲ ಸುಖಂಗಳ | ಪಿತಗಾಗಿ | ವರಬ್ರಹ್ಮಚರ್ಯಂಗಳ ||
ಧರಿಸಿಹೆನು ಸುರನರರಲಿ | ಛಲದಂಕ | ಬಿರುದ ಮೂರ್ಲೋಕಗಳಲಿ || ೨೦೬ ||

ಪ್ರತಿಪಗೇತಕೆ ಸಮರವು | ಮುನಿವರರ | ಜೊತೆಗೊಂಬುದತಿ ವಿಹಿತವು ||
ಅತಿ ದುರುಳ ಕೌರವನೊಳು | ಬೆರೆತಿಹುದು | ವ್ಯಥೆಯಾಪುದೆನಗೀಗಳು || ೨೦೭ ||

ಬಾಲ ಭಾಷೆಗಳೇತಕೊ | ನಿಂದಿಹೆವು | ಕಾಳಗಕೆ ಪನ್ನಿ ಸಾಕೊ |
ಶ್ರೀಲಲನೆಪತಿ ಬಲ್ಲನು | ಅಂತರವ | ಕೋಳುಗೊಂಬುವೆ ನಿನ್ನನು || ೨೦೮ ||

**ರಾಗ ಭೈರವಿ ಏಕತಾಳ**

ತೋರಿಸು ಸಹಸಗಳೆನುತ | ಖತಿ | ಯೇರುತ ಚಾಪವ ಕೊಳುತ ||
ಏರಿಸಿ ಸಿಂಜಿನಿಯೊಳಗೆ | ಶರ | ವಾರವ ಬಿಡೆ ಭೀಷ್ಮನಿಗೆ || ೨೦೯ ||

ಸುರನದಿ ಸುತನಾ ಕ್ಷಣದಿ | ಬಹ | ಶರಗಳ ತುಂಡಿಸಿ ರವದಿ ||
ವರಮಂತ್ರಾಸ್ತ್ರವ ತೆಗೆದ | ಹೆದೆ | ಗಿರಿಸಿ ಯುಗಂಧರವೆಸೆದ || ೨೨೦ ||

ಪ್ರಶಮನಶರವನು ಪೂಡಿ | ಮುರಿ | ದೆಸಗಿದನಿಂದ್ರಜ ನೋಡಿ ||
ಕುಶಲದೊಳೈಂದ್ರಾಸ್ತ್ರವನು | ಬೇ | ಗೆಸೆಯಲು ಗಂಗಾಸುತನು || ೨೨೧ ||

ಸರಸಿಜಭವಶರವನ್ನು | ತೆಗೆ | ದಿರಿಸುತ ಮುರಿದದರನ್ನು |
ಹರುಷದಿ ನಿಂದಿರೆ ನರನು | ಖತಿ | ವೆರಸುತ ಗಂಗಾಸುತನು || ೩೩೨ ||

**ರಾಗ ಮಾರವಿ ಮಟ್ಟೆತಾಳ**

ಕಾಲಚಕ್ರವನ್ನು ತೆಗೆಯು | ತೆಸೆದನುಗ್ರದಿ ||
ಸೀಳಿ ಬಿಸುಟನದರ ನರನು | ದಂಡಚಕ್ರದಿ || ೩೩೩ ||

ಪರತೇಜೋಪಕರ್ಷಬಾಣ | ಬಿಡಲು ಭೀಷ್ಮನು ||
ಮುರಿದ ಕಾಮರುಚಿರವೆಂಬ | ಶರದಿ ಪಾರ್ಥನು || ೩೩೪ ||

ಭಳಿರೆ ಭಳಿರೆ ಪಾರ್ಥ ಸಹಸಿ | ಭಾಪು ಮೆಚ್ಚಿದೆ ||
ಕಲಿಯೆ ಸಹಜ ಪುಟ್ಟಿ ಕೀರ್ತಿ | ವಡೆದೆ ಮಾಜದೆ || ೩೩೫ ||

**ರಾಗ ಭೈರವಿ ಅಷ್ಟತಾಳ**

ಸಾರಥಿ ಬಲುಮೆ ಕೇಳೊ | ಎನ್ನಸ್ತ್ರವ | ವೀರ ನೀ ಗೆಲಿದೆ ತಾಳೊ ||
ವಾರಿಜನಯನ ಸ್ಯಂದನದೊಳಗಿರಲಿಂತು | ಘೋರ ಮುರಿದೆ ಗರ್ವದಿ || ೩೩೬ ||

ಧರಣಿ ಬಾಯ್ದೆರೆಯಲೀಗ | ಮೇರೆಯ ತಪ್ಪಿ | ಶರಧಿಯೆ ಮಗುಚೆ ಬೇಗ |
ನರನಿನ್ನ ಸೂತನ ಕಪಟವ ನಿಲಿಸುವೆ | ಪರಿಕಿಸೆಂದೆನುತ ಭೀಷ್ಮ || ೩೩೭ ||

ಅಸಿರತ್ನ ಶರವನಾಗ | ಬಿಲ್ಲಿಗೆ ಪೂಡು | ತೆಸೆಯಲು ಭೀಷ್ಮ ಬೇಗ |
ಎಸಕದಿ ತರಿವೆನೆಂಬನಿತರೊಳ್ ದೇವನ | ನೊಸಲ ಭೇದಿಸೆ ಭರದಿ || ೩೩೮ ||

**ರಾಗ ಘಂಟಾರವ ಏಕತಾಳ**

ಕಡು ಮಹೋಗ್ರದಿ ಮುರರಿಪು ರಥದಿಂದ |
ಪೊಡವಿಯೊಳು ಪುಟನೆಗೆದು ಫಣೆಯನು | ಪಿಡಿದು ರಕ್ತವನೊರೆಸುತ || ೩೩೯ ||

ಭರದೊಳೀ ಕ್ಷಣ ಭೀಷ್ಮನ ಕೊರಳನ್ನು |
ಗರಗರನೆ ತರಿದೀಗ ಕೆಡಹುವೆ | ಕರುಣವೇನೀಗವನೊಳು || ೩೪೦ ||

ನೆನೆಯಲಾಗ ಸುದರ್ಶನ ಕರದೊಳ |
ಗನುವಿನಿಂದಲೆ ಬಂದು ಕೂರಲು | ಘನದಿ ತಿರುಹುತ ಚಿನ್ಮಯ || ೩೪೧ ||

**ಭಾಮಿನಿ**

ಪ್ರಳಯ ಭೈರವನಂತೆ ಖತಿಯೊಳು | ಚಲಿಸುತಿಹ ಮುರಹರನ ಕಾಣುತ |
ಘಳಿಲನಾ ಕ್ಷಣ ಪಾರ್ಥ ಬಂದಡಗಟ್ಟಿ ಚರಣವನು ||

ಒಲವಿನಿಂದಲೆ ಪಿಡಿದು ಕೇಶವ | ಹಳಚುವೆನು ರಿಪುಯೋಧರೆಲ್ಲರ |
ಕಳುಹಿಸುವೆನಂತಕನ ನಿಳಯಕೆ ನಿನ್ನ ಕೃಪೆಯಿಂದ || ೩೪೧ ||

**ವಾರ್ಧಕ**

ಕ್ಷೀರಾಬ್ಧಿವಾಸ ಕೇಳ್ ಪಾರ್ಥನಿಂದೀ ದಿನಂ |
ದಾರುಣದಿ ಗೆಲಿಸುತಿಹೆನೆಂಬ ಭಾಷೆಯನುಳಿದು |
ಕ್ರೂರಕೋಪದಿ ಚಕ್ರವಿಡಿದು ಪೋಗುವುದೇಕೆ ಚರಣಕಿಂಕರ ನಾನಿರೆ ||
ಧೀರತನದಿಂ ಮಲೆತು ನಿಂದ ಗಾಂಗೇಯನಂ |
ಘೋರನೀ ಕ್ಷಣ ಗೆಲುವೆನೆಂದು ಸಂತವಿಸುತಿರೆ |
ವಾರಿಜಾಕ್ಷನಿಗೆರಡು ಕರಗಳಂ ಜೋಡಿಸುತ ಶಂತನುಜನತಿ ದೈನ್ಯದಿ || ೩೪೩ ||

**ರಾಗ ಆಹೇರಿ ಆದಿತಾಳ**

ಅಕ್ಷಯಾತ್ಮಕ ಕೇಶವ | ಸುರನರಭುಜಗ | ಪಕ್ಷಿವಂದಿತ ಮಾಧವ || ಪಲ್ಲವಿ ||

ತ್ರ್ಯಕ್ಷಸಖನೆ ಖಳ | ಶಿಕ್ಷ ಸಜ್ಜನರಕ್ಷ | ರಕ್ಷ ಮಾಂ ಚೇತನ | ವೃಕ್ಷ ಕೌಸ್ತುಭವಕ್ಷ || ಅ.ಪ ||

ಧರಣಿ ನಿನ್ನಯ ಪಾದವು | ಮೇಲಂತರಿಕ್ಷ | ದುರಿತಾರಿ ತವ ನಾಭಿಯು ||
ಮೆರೆವ ದಿಕ್ಕುಗಳ್ ನಿನ್ನ | ಶ್ರೋತ್ರ ರವಿ ಶಶಿನೇತ್ರ | ಮರುತ ಶ್ವಾಸವು ಪರಮ | ವಿಶ್ವಮೂರುತಿ ದೇವ || ೩೪೪ ||

ಹರಿ ನೀನಾಡುವೆ ಪಗಡೆಯ | ಧರಣಿಯೆ ದಿವ್ಯ | ತರದ ದ್ಯೂತದ ಮಣೆಯ ||
ಹರುಷದಿಂದಲೆ ಸೃಜಿಸಿ | ದಿವನಿಶಿ ಕವಡೆಯ | ಭರದಿ ಲತ್ತೆಯನಿಕ್ಕಿ | ಜೀವಕಾಯ್ಗಳ ನಡಿಪೆ || ೩೪೫ ||

ಪರರಿಗೀಯದೆ ಕಷ್ಟವ | ತೃಣಗಳ ಮೆದ್ದು | ಚರಿಸಿಕೊಂಡಿಹ ಹರಿಣವ |
ನಿರಪರಾಧಿಗೆ ಬಾಣವೆಚ್ಚ ಶಬರನಂತೆ | ಹರಿಯೆ ನಿನ್ನನು ಪೊಯ್ದೆ | ಕರುಣದಿ ರಕ್ಷಿಸು || ೩೪೬ ||

ಬಿಡು ಬಿಡೀ ಕ್ಷಣ ಚಕ್ರವ | ದುಷ್ಕಾರ್ಯ ಗೆಯ್ದೆ | ಪೊಡವಿಗಿಳಿಸು ಶಿರವ ||
ಜಡಜಲೋಚನ ಕೇಳು | ಕುರುಪತಿಯೊಳು ನಾನು | ನುಡಿದು ಬಂದಿಹ ಶಪಥ |
ದಂತೆ ಪಿಡಿದೆ ಚಕ್ರ || ಅಕ್ಷಯಾತ್ಮಕ ಕೇಶವ || ೩೪೭ ||

**ಭಾಮಿನಿ**

ಸುರನದೀಸುತ ಕೇಳು ನಿನ್ನಯ |
ಶಿರವ ಗರಗರನರಿವೆನೀ ಕ್ಷಣ |
ಕುರುಬಲವ ಸಂಹರಿಸಿ ಧರಣಿಯನಿತ್ತು ಧರ್ಮಜಗೆ ||
ಧರಿಪೆ ಪಾಂಡವ ವೀರರಯ್ವರ |
ನಿರತಸ್ಥಾಪಕನೆಂಬ ಬಿರುದನು |
ಪರಿಕಿಸೆನುತಾ ಕ್ಷಣದಿ ಚಕ್ರವ ತಿರುಹುತಯ್ತರಲು || ೩೪೮ ||

**ರಾಗ ಕೇದಾರಗೌಳ ಝಂಪೆತಾಳ**

ಹೃದಯಕಮಲಸುಪೀಠವ | ನಡರಿರ್ಪ | ಸದಮಲಾತ್ಮಕ ತೇಜವ ||
ನದಿತನಯ ನಂಬಿರ್ಪೆನು | ಮಾನಸದಿ | ಮುದದಿಂದಲರ್ಚಿಸುವೆನು || ೨೪೯ ||

ತೊರೆಯೆ ಭವಭಯದೋಷವ | ಗೆಯ್ಯುತಿಹೆ | ವರ ಶ್ರದ್ಧೆಯಭಿಷೇಕವ ||
ಚರಣಭಕ್ತಿಯ ಗಂಧದಿ | ತಪವೆಂಬ | ಪರಮಕುಸುಮಸಮೂಹದಿ || ೨೫೦ ||

ಅಂತರಂಗದಿ ನೋಡದೆ | ಮುಂದೆಸೆಯ | ನಿಂತ ಮೂರ್ತಿಯೊಳೇನಿದೆ ||
ಕಂತುಪಿತ ಛಲವಿಡಿದೆಯ | ಬೆದರೆ ನಾ | ನೆಂತು ಮರಣಕೆ ನಿಶ್ಚಯ || ೨೫೧ ||

ಬಿಡು ಬಿಡೀ ಕ್ಷಣ ಚಕ್ರವ | ನಿನ್ನಿಂದ | ಮಡಿದರೆನ್ನಯ ಶಪಥವ |
ನುಡಿವೆ ಲಾಲಿಸು ಭಕ್ತನು | ನಾನಲ್ಲ | ಕಡು ದುರುಳರೊಳಗಾಹೆನು || ೨೫೨ ||

ಹರಿಯು ಮನದೊಳಗರಿಯುತ | ಪರರಿಂದ | ಮರಣವಿಲ್ಲಿವಗೆನ್ನುತ ||
ತಿರುಗಿ ರಥವನ್ನಡರಿದ | ಪಾರ್ಥನನು | ಪರಿಕಿಸುತಲಾಗ ನುಡಿದ || ೨೫೩ ||

ಕೇಳು ಫಲಗುಣ ರಣದಲಿ | ವಿಜಯವನು | ತಾಳು ಶಪಥದ ತೆರದಲಿ ||
ಕಾಲಹರಣಗಳೇತಕೆ | ಕಳುಹು ಶರ | ಜಾಲಗಳ ರಿಪುಮಥನಕೆ || ೨೫೪ ||

**ವಾರ್ಧಕ**

ಅಸುರಮರ್ದನನೆಂದ ನುಡಿ ಕೇಳಿ ಫಲುಗುಣಂ |
ಶಶಿಜೂಟನಿತ್ತಗಾಂಡೀವ ಝೇಂಕರಿಸುತ್ತ |
ಲುಸಿರಿದಂ ಗಾಂಗೇಯನೊಡನೆ ಶಪಥಗಳಂತೆ ವಿಜಯ ಪೊಂದುವುದೆಂದನು ||
ಎಸೆವ ಕಾರ್ಮುಕವೆತ್ತಿ ಪಾರ್ಥನೊಡನೆಂದ ನೆಲೆ |
ದಶಸಹಸ್ರದ ರಥಿಕವರ್ಗವನು ದಿನ ತರಿದೆ |
ಎಸಗಿರ್ದ ಶಪಥದಂದದಿ ದಿವಸವೊಂಭತ್ತು ಛಲದಂತೆ ಸಂದಿರ್ಪುದು || ೨೫೫ ||

**ರಾಗ ಮಾರವಿ ಏಕತಾಳ**

ತೊಟ್ಟ ಛಲವ ನಾ ಬಿಟ್ಟರೆ ಗಂಗೆಗೆ | ಪುಟ್ಟಿಹ ಸುತನಹೆನೆ ||
ದಿಟ್ಟನೆ ಮಹಶರ ತೊಟ್ಟೀ ಕ್ಷಣ ಬಿಡು | ಶ್ರೇಷ್ಠತೆ ಕಾಂಬುವೆನು || ೨೫೬ ||

ರಕ್ಷಾಕರಿ ಶರ ತೆಗೆಯುತ ಪಾರ್ಥನು | ದಕ್ಷಾರಿಯ ನೆನೆದು ||
ವಕ್ಷಕೆ ಗುರಿಯೊಳು ಸಿಂಜಿನಿಗೇರಿಸು | ತಾ ಕ್ಷಣ ಪೇಳಿದನು || ೨೫೭ ||

ಪರಿಕಿಸು ಗಂಗಾತನಯನೆ ಶರವಿದ | ಮುರಿಯಲು ವಿಜಯವನು |
ಧರಿಸಿಹ ಶೂರನು ನೀನೆನೆ ಕೇಳುತ | ಲೊರೆದನು ನದಿಸುತನು || ೨೫೮ ||

ಕಾಲಾಂಜನಶರ ಪೂಡಿಹೆ ಪಾರ್ಥನೆ | ಮೇಲಿದನೀ ಮುರಿಯೆ ||
ತಾಳಿದೆ ವಿಜಯವನೆನ್ನೊಳಗಿಂದಿಗೆ | ಶೂಲಿಸಮೋಪಮನು || ೩೫೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏಕಕಾಲದೊಳುಭಯಶೂರರು | ಸಾಕರದಿ ಕರ್ಣಾಂತಕುಗಿಯುತ |
ಭೀಕರದ ಶರವೆಸೆಯುಲಾ ಕ್ಷಣ | ಲೋಕ ನಡುಗೆ || ೩೬೦ ||

ನರನ ಶರ ಕಿಡಿಸೂಸಿ ಭೀಷ್ಮನ | ಕರದ ಚಾಪವ ಮುರಿದು ಕೆಡಹಲು |
ಭರದಿ ಭೀಷ್ಮನ ಸರಳು ಪಾರ್ಥನ | ಶಿರಕೆ ಎರಗೆ || ೩೬೧ ||

ಸುರಿವ ನೆತ್ತರಮಯದಿ ಮೂರ್ಛೆಯೊ | ಳೊರಗೆ ಪಾರ್ಥನು ಕಂಡು ಶ್ರೀಹರಿ |
ಭರದಿ ಶೈತ್ಯುಪಚರಿಸಲೆದ್ದನು | ನಾಚಿ ಮನದಿ || ೩೬೨ ||

**ರಾಗ ಕೇದಾರಗೌಳ ಅಷ್ಟತಾಳ**

ನೋಡಿ ಗಾಂಗೇಯನು ನಗುತಾಗ ಪೇಳಿದ | ಮಾಡಿದ ಶಪಥದಂತೆ ||
ಗಾಢದಿ ಗೆಲಿದವನಾರೆನೆ ಪಾರ್ಥನು | ಕೂಡೆರೋಷವ ತಳೆಯೆ || ೩೬೩ ||

ಮುರಹರನೆಂದನು ಧುರದಿ ಶೂರನು ಪೊತ್ತ | ಕರದ ಚಾಪಕೆ ಭಂಗವು ||
ದೊರೆತರೆ ಪ್ರತಿಭಟ ಗೆಲಿದಂತೆಯಾದುದು | ಬರಿಯಹಂಕೃತಿಯೇತಕೆ || ೩೬೪ ||

ಸರಿಸಮಬಲರೆಂದು ತೋರಿತಿಂದಿಗೆ ಸಾಕು | ತರಣಿಯಸ್ತಕೆ ಪೋದನು ||
ತೆರಳುವ ಶಿಬಿರಕೆಂದೆನಲು ಮುರಾರಿಯು | ಸರಿಯೆಂದು ಪೊರಟರಾಗ || ೩೬೫ ||

ಉಭಯ ಸೈನಿಕರು ಶಸ್ತ್ರಾಸ್ತ್ರವನಿಳುಹುತ | ಶಿಬಿರಕಯ್ತುರಲಿತ್ತಲು ||
ಸೊರಗಿ ಚಿಂತೆಯ ತಾಳಿ ಧರ್ಮಜ ಮುರರಿಪು | ಚರಣಕೆ ನಮಿಸುತೆಂದ || ೩೬೬ ||

**ರಾಗ ದೇವಡಿ ರೂಪಕತಾಳ**

ಪುಂಡರೀಕಾಕ್ಷನೆ ಚಂಡಭೀಷ್ಮನು ದಿನಕೆ | ಖಂಡಿಸಿ ದಶಸಾವಿರ ಭಟರ ||
ಕೊಂಡ ಛಲಗಳಂತೆ ತೆರಳಿತು ನವದಿನ | ಖಂಡಿತ ಜಯವಿಲ್ಲವೆಮಗೆ || ೩೬೭ ||

ಧುರಸಹಯಕೆ ಸಕಲ ಧೊರೆಗಳ ಕರೆತಂದು | ಕರಿ ತುರಗವು ಪತ್ತಿಸಹಿತ ||
ಧುರಯಜ್ಞದೀಕ್ಷಿತ ಭೀಷ್ಮಶಸ್ತ್ರಾಗ್ನಿಗೆ | ನಿರತ ಪಶುವ ಗೆಯ್ದುದೆಂತು || ೩೬೮ ||

ಇಷ್ಟು ಸೇನೆಯ ಕೊಲಿಸಿ ಸೃಷ್ಟಿ ಕೈಗೊಂಬುದು | ವಿಟ್ಠಲ ಮೂರುತಿ ಬೇಡ ||
ಶ್ರೇಷ್ಠವೆ ಕಾಂತಾರವಾಸ ಮೌನೀಶರ | ನೊಟ್ಟುಗೂಡಿರುವುದೆ ಸೌಖ್ಯ || ೩೬೯ ||

**ರಾಗ ರೇಗುಪ್ತಿ ಅಷ್ಟತಾಳ**

ತಾಳು ಧರ್ಮಜ ಸೈರಣೆಯನು | ನಾ | ಪೇಳುವೆ ಯುಕ್ತಿಗಳನ್ನು ||
ಶೀಲ ಭೀಷ್ಮನು ದಿವ್ಯಜ್ಞಾನಿ ನಿಮ್ಮೈವರ | ಮೇಲವಗತಿ ಪಾರಮಾರ್ಥಕವಿಹುದಯ್ಯ || ೩೭೦ ||

ಈ ರಾತ್ರೆಯೊಳಗಲ್ಲಿ ಪೋಗಿ | ಧುರ | ಧೀರಾಗ್ರಗಣ್ಯಗೆ ಬಾಗಿ ||
ಭೂರಿ ದೈನ್ಯದಿ ಬೇಡಿಕೊಳಲು ಕಾಪಾಡುವ | ಪಾರಮಾರ್ಥದಿ ಜಿತನಾಗುವನಾತನು || ೩೭೧ ||

ಪೊರಡಿರೆಂದಯ್ವರ ಕೂಡಿ | ಹರಿ | ತೆರಳಿದ ಸಮನಿಸಿ ನೋಡಿ ||
ಸುರನದಿತನಯನ ಶಿಬಿರದ್ವಾರದಿ ನಿಂದು | ಚರನೊಳು ಸೂಚಿಸಿ ಕಳುಹಿದ ಭೀಷ್ಮಗೆ || ೩೭೨ ||

**ಭಾಮಿನಿ**

ಚರನು ನಡೆತಂದಾಗ ಭೀಷ್ಮನ |
ಚರಣಕೊಂದಿಸಿ ದ್ವಾರದೊಳು ಮುರ |
ಹರನು ಪಾಂಡವರೊಡನೆ ಬಂದಿಹನೆಂದು ಬಿನ್ನವಿಸೆ ||
ಶಿರವನೊಲೆದಾಡುತ್ತ ಜಾಹ್ನವಿ |
ತರಳ ತನ್ನೊಳು ಯೋಚಿಸುತ್ತಲಿ |
ಕುರುಪತಿಯು ತಾ ಕೆಟ್ಟನೆನ್ನನು ನಂಬಿ ದೃಢದೊಳಗೆ || ೩೭೩ ||

**ವಾರ್ಧಕ**

ಸುರರು ತ್ರಿಂಶತ್ಕೋಟಿಗಧಿಪ ತಾನೆಂದೆನಿಸಿ |
ಶರಧಿಸಂಜಾತ ಪುನ್ನಾಗ ವಾಹನ ಕುಲಿಶ |
ಧರಿಸಿ ಸುರತರುಕಾಮಧೇನು ತುರಗಾದ್ಯಖಿಳ ಸರುವ ಸಂಪದಶೋಭಿತ ||
ಧರೆ ಮೂರಕರಸನಾಗಿರ್ಪ ವಾಸ್ತೋಷ್ಪತಿಗೆ |
ವಿರಚಿಸಿಹ ಪ್ರಾಚೀನಕರ್ಮದಲಿ ದಾನವರು |
ಪರಿಪರಿಯ ಪೀಡೆಗಳನಿತ್ತ ಮೇಲದ ನೋಡೆ ಶರಣೆಂಬೆ ಕರ್ಮಗಳಿಗೆ || ೩೭೪ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಕುರುಪತಿಯ ಪ್ರಾಚೀನಕರ್ಮಗ | ಳರಿಯಲೀ ಪರಿ ತೊಡಕು ಬಂದುದು |
ನರನು ನಾನಾಗಿರ್ಪೆ ಕರ್ಮದಿ | ಶಾಪದಿಂದ ವಸಿಷ್ಠನ || ೩೭೫ ||

ಪರಮ ಪುರುಷನು ದ್ವಾಪರಾಂತ್ಯದಿ | ಧರಣಿಭಾರಕರನ್ನು ಮಡುಹಲು |
ಧರಿಸಿದವತಾರವಿದು ಕೃಷ್ಣನು | ಹರಿ ಜಗನ್ಮಯಮೂರುತಿ || ೩೭೬ ||

ದುಷ್ಟನಿಗ್ರಹ ಮಾಳ್ಪ ಕಪಟದಿ | ಶಿಷ್ಟಪಾಲನೆ ಗೆಯ್ಯಲೋಸುಗ |
ತಟ್ಟನಯ್ತಂದಿಹನು ಶರಣನ | ಗುಟ್ಟ ತಿಳಿಯೆ ವಿನೋದದಿ || ೩೭೭ ||

ವಸುಗಳೊಳು ನಾ ಜನಿಸಿ ಧರೆಯೊಳ | ಗೆಸಗಿದೆನು ಮನಬಂದ ಕಾರ್ಯವ |
ವ್ಯಸನವಹುದಾನಿರಲು ಮುಂದಕೆ | ಅಸುವ ನೀಗುವ ಕುರುಪತಿ || ೩೭೮ ||

ಅಷ್ಟಶತವತ್ಸರಗಳಾಯಿತು || ಪುಟ್ಟಿದೆನು ಗಂಗೆಯೊಳು ಜಗದಲಿ |
ತಟ್ಟನಯ್ದುವುದೊಳಿತು ವ್ಯೋಮಕೆ | ಕೆಟ್ಟ ಕಲಿಯುಗ ಬರುವುದು || ೩೭೯ ||

**ರಾಗ ಕಾಂಭೋಜಿ ಝಂಪೆತಾಳ**

ನೆನೆಯುತೀ ಪರಿ ಗಂಗಾತನುಜ ಚಾರನೊಳೆಂದ |
ಘನವೇಗ ಬರಹೇಳೆಂದೆನುತ ಕಳುಹಿಸಲು ||
ವಿನಯದಿಂದಲೆ ನಮಿಸಿ ಒಳಗೆ ಚಿತ್ತೈಸಿರೆನೆ |
ಚಿನುಮಯನು ಕೌಂತೇಯರೊಡನೆ ತೆರಳಿದನು || ೩೮೦ ||

ಮಿಸುನಿ ಪೀಠವನಿತ್ತು ಹರಿಚರಣಪಂಕಜಕೆ |
ವಸುಧೆಯೊಳಗೆರಗುತ್ತಲಿರುವ ಭೀಷ್ಮನನು ||
ಕುಶಲದಿಂ ಕರವಿಡಿದು ಕುಳ್ಳಿರಿಸಿ ಕೇಶವನು |
ಶಶಿಕುಲಾನ್ವಯರೈವರನು ಕೆಡಹಿ ಪದಕೆ || ೩೮೧ ||

ಪೊರೆದಿಹಿರಿ ಬಾಲಾಪ್ಯದಿಂದಿವರನೈವರನು |
ಕರುಣದೊಳು ರಕ್ಷಿಪುದು ನಿಮ್ಮ ನಂಬಿಹರು ||
ಭರವಸೆಯನೀಯಬೇಕೆಂದು ನರಹರಿನುಡಿಯೆ |
ಶಿರವನೊಲೆದಾಡುತ್ತ ಭೀಷ್ಮನಿಂತೆಂದ || ೩೮೨ ||

**ರಾಗ ಜಂಜೂಟಿ ಅಷ್ಟತಾಳ**

ಜಲಚರಾವಳಿ ತೋರಿ ಜಲದಿ | ಮತ್ತೆ | ಮುಳುಗುವಂದದ ಮಾಯಾಸ್ಪದದಿ ||
ಹೊಳೆದು ಮಿಂಚುವ ಬ್ರಹ್ಮಾಂಡಕೋಟಿಯು ಮತ್ತೆ |
ವಿಲಯವಾಪುದು ನಿನ್ನ ದೇಹದಿ | ಸುಲಭದಿಂದಲೆ ಮತ್ತೆ ಜನಿಪುದು || ೩೮೩ ||

ಆರು ಬಲ್ಲರು ಮಹಿಮೆಯನು | ಮತ್ತಿ | ನ್ನಾರು ನಿನ್ನಯ ಮಾಯವನು ||
ಪಾರುಗಂಡವರಿಲ್ಲ ಮನು ಮುನಿ ದಿಕ್ಪಾಲ |
ನಾರದಾದಿಗಳಿಂಗಗೋಚರ | ವಾರಿಜಾಂಬಕನೇಕೆ ನುಡಿಯುವೆ || ೩೮೪ ||

ಹರಿಯೆ ನಿನ್ನಂಶದಿ ಜನಿಸಿ | ಕುರು | ಧರೆಯಧಿಪರ ಕೀರ್ತಿ ಮೆರೆಸಿ ||
ಪರಿಭವಗಳ ಕಾಂಬ ಯೋಗ್ಯತೆಯೆನಗಿಲ್ಲ |
ಒರೆದೆ ನಾನಾತೆರದ ನೀತಿಯ | ಮರುಳ ಕೌರವ ಮನಕೆ ತಾರನು || ೩೮೫ ||

ಪರಮ ಸಜ್ಜನರನ್ನು ಭರದಿ | ಜಯ | ಸಿರಿಯು ಕೈಪಿಡಿವಳು ದಯದಿ ||
ದುರುಳರ ತೊರೆವಳು ದಿಟವಿದು ಧರ್ಮಜ |
ಪರಮ ಸಾತ್ವಿಕ ಸದ್ಗುಣಾಕರ | ಕುರುಧರೆಯ ಪಾಲಿಪನು ವಿಭವದಿ || ೩೮೬ ||

**ವಾರ್ಧಕ**

ಇಷ್ಟಮಿತ್ರಾನುಜಾತ ಬಾಂಧವರು ಸಹಿತಾಗಿ |
ಕೆಟ್ಟನಿಂದಿಗೆ ಕೌರವೇಂದ್ರನಿಗೆ ನೀತಿಯ |
ನ್ನೆಷ್ಟು ಪೇಳ್ದರು ಮನಕೆ ತರನು ವಿಧಿವಶದಿಂದ ಚಿಂತೆ ಪಡುತಿಹುದೇತಕೆ ||
ಸೃಷ್ಟಿಪತಿ ಬಾರೆನ್ನ ಕಂದ ಧರ್ಮಜನೆನುತ |
ತಟ್ಟನಪ್ಪುತ ಭೀಷ್ಮನೆಂದನೆಲೆ ಸುಕುಮಾರ |
ದುಷ್ಟಮರ್ದನ ನಿನ್ನ ರಕ್ಷಿಪನು ಸಂತಸದಿ ಕೊರತೆಯೊಂದಿದೆ ಪೇಳುವೆ || ೩೮೭ ||

**ಭಾಮಿನಿ**

ತರಳ ಕೇಳಾನಿರಲು ಜೀವದಿ |
ಕುರುಬಲವ ಗೆಲಲರಿದು ನಿಮ್ಮೊಳು ||
ಧರಣಿ ದೊರಕದು ಸಿದ್ಧವೆನ್ನವಸಾನಪರಿಯಂತ ||
ಧುರದಿ ಮಡುಹಿದರೆನ್ನನಂದಿಗೆ |
ಕುರುಪತಿಯು ಬಲಸಹಿತಲಳಿವನು |
ಮರೆಯ ಮಾತುಗಳೇತಕಿದು ದಿಟವೆನಲು ಧರ್ಮಜನು || ೩೮೮ ||

**ರಾಗ ಮಧುಮಾಧವಿ ಏಕತಾಳ**

ಸುರನದೀಸುತ ಕೇಳು ನಿನ್ನ ಸಂಹರಿಸಿ | ಬರುವ ರಾಜ್ಯದೊಳೇನು ಫಲವಿದೆ ಸಹಸಿ ||
ಪರಿ ಪರಿ ತೊಳಲಿಸಿ ಭ್ರಾತೃವರ್ಗವನು | ತರುಣಿಸಹಿತ ವಿಪಿನದಿ ಬಳಲಿದೆನು || ೩೮೯ ||

ತಿಳಿದಿಲ್ಲಿಗಯ್ತಂದು ಬೇಡಿಕೊಂಡಿಹೆನು | ಒಲವಿಂದ ವಿಪಿನಕೆ ಪೋಗುವೆ ನಾನು ||
ಸಲಹಿದಿರೆಮ್ಮನು ಬಾಲಾಪ್ಯದಿಂದ | ಕೊಲಲು ನಮ್ಮನು ಭೂಮಿ ಹೊರಳು ಖತಿಯಿಂದ || ೩೯೦ ||

**ರಾಗ ಕೇದಾರಗೌಳ ಏಕತಾಳ**

ನುಡಿಯ ಕೇಳುತ ಭೀಷ್ಮನೆಂದ ಕೇಳೆಲೊ ಬಾಲ | ನುಡಿಯೆ ನಾ ಪರರೊಳಗೆ ||
ಪೊಡವಿಯೊಳಿರಲಾರೆ ಸಮರಮುಖದೊಳೆನ್ನ | ತುಡುಕಲಿ ಪಾರ್ಥನಾಳೆ || ೩೯೧ ||

ಗೆಲುವನು ಖಾಡಾಖಾಡಿಯೊಳೆನ್ನ ಸರಸದಿ | ಎಲೆ ಧರ್ಮಜಾತ ಕೇಳು ||
ಕಳೆಯಬಾರದು ವೇಳೆ ಫಲವೇನುಪಾಯದಿ | ಹಳಚಲಿ ಸಮ್ಮುಖದಿ || ೩೯೨ ||

**ರಾಗ ಸಾಂಗತ್ಯ ರೂಪಕತಾಳ**

ಕರುಣವಾರಿಧಿ ತಾತ ನಿನ್ನ ಗೆಲ್ಲುವುದೆಂತು | ಒರೆಯಬೇಹುದು ಯುಕ್ತಿಗಳನು ||
ಧುರದೊಳು ಪ್ರಳಯಭೈರವನೆಂದು ತಿಳಿದಿರ್ಪೆ | ತರಳರೆಮ್ಮನು ಸಲಹೆಂದ || ೩೯೩ ||

ನರನೊರ್ವ ಮತ್ತೆ ಶ್ರೀಹರಿಯೊರ್ವನಲ್ಲದೆ | ಧುರದೊಳೆನ್ನನು ಬಯಸುವರು ||
ಧರೆಯೊಳಿಲ್ಲಲೆ ಕಂದ ಶಸ್ತ್ರವ ಪಿಡದುರೆ | ಬರರು ಮಿಕ್ಕಿನ ಮಹಾರಥರು  || ೩೯೪ ||

ಮಾಡಿದೆ ಶಪಥ ಶಸ್ತ್ರಾಸ್ತ್ರಶೂನ್ಯಕರನ್ನು | ಓಡುತಿಹರ ವಂದಿಸುವರ ||
ಮೂಢರ ಸತಿಯರ ಮತ್ತೇಕಪುತ್ರರ | ಕೂಡೆಶಸ್ತ್ರವ ಧರಿಸೆ ನಾನು || ೩೯೫ ||

ಸತಿರೂಪದೊಳು ಪುಟ್ಟಿ ಮತ್ತೆ ಪುಂಸತ್ವವ | ನತಿಶಯದೊಳು ಪಡೆದಿರುವ ||
ಸತಿಪೂರ್ವನಾದ ಶಿಖಂಡಿಯ ಮುಂದಿಟ್ಟು | ಖತಿಯೊಳಸ್ತ್ರವ ಬಿಡೆ ಪಾರ್ಥ  || ೩೯೬ ||

ತೊರೆಯುವೆ ಸಮರವ ಕಡೆಯೊಳ್ ದೇಹ ನೀಗಿ | ತೆರಳುವೆ ಸುರಪುರಕಾನು ||
ತ್ವರಿತದೊಳೆತ್ನಗೆಯ್ಯಲು ಬೇಕು ಎನ್ನಯ | ತರಳ ಧರ್ಮಜ ಸದ್ಗುಣಾಢ್ಯ || ೩೯೭ ||

**ಭಾಮಿನಿ**

ತೆರಳಿರೀ ಕ್ಷಣ ನೀವು ಬಂದುದ |
ನರಿತನಾದಡೆ ಕೌರವೇಂದ್ರನು |
ಬರಿದೆ ನಿಂದಿಪನೆನಲು ಪದಕಭಿನಮಿಸಿ ಪಾಂಡವರು ||
ಭರದೊಳಪ್ಪಣೆಗೊಳಲು ಕೃಷ್ಣನ |
ಚರಣಕೊಂದಿಸಿ ಕಳುಹೆ ಭೀಷ್ಮನು |
ತೆರಳಿ ಬಂದುದನೆಲ್ಲ ಯೋಚಿಸುತೆಂದ ಶ್ರೀಹರಿಯು || ೩೯೮ ||

**ರಾಗ ಕೇದಾರಗೌಳ ಅಷ್ಟತಾಳ**

ಕೇಳು ಧರ್ಮಜ ಭೀಷ್ಮನಿರನಿನ್ನು ಭುವನದಿ | ನಾಳಿನ ಧುರದೊಳಗೆ ||
ಪೇಳಿದ ತೆರದಿ ಶಿಖಂಡಿಯ ಮುಂದಿಟ್ಟು | ಕೋಳುಗೊಂಬುದು ವೇಗದಿ || ೩೯೯ ||

ಆತನ ಮಡುಹದಿರ್ದಡೆ ಮತ್ತೆ ಕೌರವ | ವ್ರಾತವಳಿಯಲಾರದು ||
ಭೂತಳದಾಸೆಯು ನಿಮಗಿಲ್ಲವೆಂಬುವ | ಮಾತು ನಿಶ್ಚಯವೆಂದನು || ೪೦೦ ||

**ಕಂದ**

ನುಡಿಯಂ ಕೇಳುತ ಪಾರ್ಥನು |
ಗಡಗಡ ನಡುಗುತಲಾ ಕ್ಷಣ ಮರುಕದಿ ಬಳಲುತೆ ||
ಪೊಡವಿಯು ಬೇಡೆಮಗಿಂದಿಗೆ |
ಕಡುವಿಪಿನಾಂತರವಾಸವೆ ಲೇಸೆನುತಾಗಳ್ || ೪೦೧ ||

**ರಾಗ ಸಾವೇರಿ ಆದಿತಾಳ**

ಪರಮಜ್ಞಾನಿಯು ಭೀಷ್ಮನು | ಸುರಲೋಕಕೀಗ | ತೆರಳಲೆತ್ನವಗೆಯ್ದನು ||
ಧುರದೊಳೆನ್ನಯ ಶರದಿ | ಹರಣವನಳಿವ | ತೆರನ ಪೇಳಿದ ದಯದಿ || ೪೦೨ ||

ತರಳತನದೊಳೆನ್ನನು | ಮರುಕದೊಳೆತ್ತಿ | ಪೊರೆದಿಹ ಮಮ ತಾತನು ||
ಕರೆದು ಕರೆದು ಭಕ್ಷ್ಯವ | ಮೆಲುವರೆ ಇತ್ತು | ಹರುಷದಿ ಮುದ್ದಿಸುವ || ೪೦೩ ||

ತರಳರೊಳಾಡಿ ಮಣ್ಣನು | ಮೈಯೊಳು ಮೆತ್ತು | ತಿರಲದ ಮುತ್ತಯ್ಯನು ||
ಸೆರಗಿಂದೊರಸುವನು | ಪೊರೆದನು ಪಿತ | ನಿರದಿರಲೆಮ್ಮ ಪ್ರೇಮನು || ೪೦೪ ||

ಬರದು ಎನ್ನಯ ಕರಗಳು | ಮಹಿಮನಕೊಂದು | ಇರುವುದಿನ್ನೇಕೆ ಬಾಳು ||
ಧುರಕೆ ನಿಲ್ಲೆನು ಸರ್ವಥಾ | ಭೀಷ್ಮನೊಳಾನು | ಶರವ ಕೀಲಿಸೆ ಶ್ರೀನಾಥ || ೪೦೫ ||

**ರಾಗ ಭೈರವಿ ಝಂಪೆತಾಳ**

ಯಾತಕೀ ನುಡಿ ಪಾರ್ಥ | ಭೂತಳೇಶರ ಮುಂದೆ | ನೋತು ಶಪತಥವ ಗೆಯ್ದೆ ಹಿಂದೆ ||
ಘಾತಿಸುವೆ ಭೀಷ್ಮನನು | ನಾನೆಂದು ನುಡಿದಿರುವೆ | ಮಾತಮೀರುವುದುಂಟೆ ಜಗದಿ || ೪೦೬ ||

ಪುಟ್ಟಿರುವೆ ಕ್ಷತ್ರಿಯೊಳು | ತೊಟ್ಟ ಛಲ ತ್ಯಜಿಸಿದರೆ | ಸೃಷ್ಟಿಭಾರಕನಾದೆ ನೀನು ||
ಶ್ರೇಷ್ಠನೆನ್ನುತ ಬಿಡಲು | ಬಾರದೈ ಧುರಕೆ ಮುಂ | ದಟ್ಟಿ ಬಂದರನರಿಯಬಹುದು || ೪೦೭ ||

**ವಾರ್ಧಕ**

ಜಡಜಲೋಚನನೆಂದ ನುಡಿ ಕೇಳಿ ಫಲುಗುಣಂ |
ಕಡು ಬಲಾಢ್ಯ ಶಿಖಂಡಿ ಭೀಷ್ಮನಿಂಗಿದಿರಾಗೆ |
ತುಡುಕಲೆತ್ನವ ಗೆಯ್ದು ಹಿಂದೆ ಬೆಂಬಲಕಾನು ಒದಗಿ ಸಮರವ ಗೆಯ್ವೆನು ||
ನುಡಿಯುತಿರಲನ್ನೆಗಂ ದ್ಯುಮಣಿಯುದ್ಭವನಾಗೆ |
ಸಡಗರದಿ ನಿತ್ಯಕರ್ಮವ ಗೆಯ್ದು ಪಾಂಡವರು |
ನಡೆತಂದು ರಣಭೂಮಿಯಂ ಪೊಕ್ಕು ವಾದ್ಯಗಳ ನಾದದಿಂ ಭೋರ್ಗುಡಿಸಲು || ೪೦೮ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುರನದೀಸುತನೆದ್ದು ವಿಭವದಿ | ವಿರಚಿಸುತ ಜಪತಪಗಳೆಲ್ಲವ |
ಕರದಿ ಧನುಶರವಾಂತು ಪೊರಡಲು | ಕಾಣುತಾಗ || ೪೦೯ ||

ಕರಿ ತುರಗ ರಥಪತ್ತಿ ಸಕಲವು | ಪರುಠವಿಸಿ ಬಳಸಿರುವ ಕುರುಪತಿ |
ಚರಣಕೊಂದಿಸುತೆಂದ ಭೀಷ್ಮಗೆ | ಮರುಕದಿಂದ || ೪೧೦ ||

ಸಂತು ದಿನವೊಂಭತ್ತು ನಿಮ್ಮೊಳ | ಗೆಂತು ಪಾಂಡವರಲ್ಲಿ ಕರುಣವ |
ನಂತರಂಗದೊಳಿರಿಸಿಯೆಮ್ಮನು | ಕೊಲಿಸುತಿಹಿರೊ || ೪೧೧ ||

ಹತಿಸಿಹುದು ಬಹು ಸೇನೆಯೆನ್ನಯ | ವ್ಯಥೆಯ ಪೇಳಲಸಾಧ್ಯ ಮನದೊಳು |
ಖತಿಯ ತಾಳಲು ಬಾರದಿಂದಿಗೆ | ಕರವ ಮುಗಿವೆ || ೪೧೨ ||

ಧುರಕೆ ಕರ್ಣನಿಗಾಜ್ಞೆಯಾದರೆ | ಪರಿಕಿಸಲು ಬೇಕೆಮ್ಮ ರಿಪುಗಳ |
ಶಿರವ ಚೆಂಡಾಡುವನು ಶೂರನು | ಬಾಹುಬಲನು || ೪೧೩ ||

ಬಳಲಿದಿರಿ ಸಾಕೀಗ ಸಂಗರ | ನಿಳಯದೊಳು ಸುಖದಿಂದಲಿರ್ದರೆ |
ಹಳಚುವೆವು ಮತ್ತುಣ್ಯದಂದದೊ | ಳಹುದು ಮುಂದೆ || ೪೧೪ ||

**ರಾಗ ಕೇದಾರಗೌಳ ಝಂಪೆತಾಳ**

ಎಂದ ಮಾತನು ಕೇಳುತ | ಗಾಂಗೇಯ | ನಂದು ರೋಷವ ತಾಳುತ ||
ಹಿಂದೆ ನಾ ಪೇಳ್ದ ತೆರದಿ | ಪಟುಭಟರ | ಕೊಂದಿಹೆನು ನೋಡು ರಣದಿ || ೪೧೫ ||

ಪುರುಷನೊರ್ವನೆ ಕರ್ಣನು | ನಾನಲ್ಲ | ಧುರಗೆಯ್ಯೆ ಕಡುವೃದ್ಧನು ||
ಕರುಣವಿದೆ ಪಾಂಡವರಲಿ | ಉಭಯರಿಗು | ಹಿರಿಯನಾದೆನು ಕುಲದಲಿ || ೪೧೬ ||

ಯಾತಕೀ ಪರಿ ನುಡಿಯುವೆ | ರಿಪುಸೈನ್ಯ | ಘಾತಗಳ ನೋಡಿಲ್ಲವೆ ||
ಮಾತನಾಡಿದರೇನಿದೆ | ರಣದಿ ಪೆಣ | ವ್ರಾತ ಮುಂದೆಸೆ ಬಿದ್ದಿದೆ || ೪೧೭ ||

**ಭಾಮಿನಿ**

ಗಜಘಟೆಯ ನಕ್ರದಲಿ ತುರಗ |
ವ್ರಜದ ಮತ್ಸ್ಯದಿ ವೀರವರ್ಗದ |
ಭುಜ ಮಹೋರಗದಿಂದ ವಿಶಿಖಾವಳಿಯ ಗುಲ್ಮದೊಳು ||
ನಿಜ ಕರಾಗ್ರದಿ ಪಿಡಿದ ಕಾರ್ಮುಕ |
ವ್ರಜ ತರಂಗಗಳಿಂದ ಕಾಲನ |
ವಿಜಯಸಾಗರ ನೋಡು ಕೌರವ ಏಕೆ ನಿಂದಿಸುವೆ || ೪೧೮ ||

**ವಾರ್ಧಕ**

ತರಣಿಯಸ್ತಾಚಲವ ಸಾರ್ವವರೆಗೀ ದಿನಂ |
ಧುರದೊಳೆನ್ನಯ ಶೌರ್ಯ ವೈರಿ ಮೋಹರದೊಳಗೆ |
ಮೆರೆಸಿಕೊಂಬೆನು ಶಕ್ತಿಮೀರಿ ಹೆಣಗಾಡುತಿಹೆ ಹರಿಯು ಪಾಂಡವಪಕ್ಷದಿ ||
ಇರುವ ಕಾರಣವೆನಗೆ ವಿಜಯಮೆಂತಾಗುವುದೊ |

ದೊರೆ ನಿನ್ನ ಪುಣ್ಯದಿಂದಪಜಯವ ಪೊಂದಿದರೆ |
ಶರವ ತೊಡೆನಾ ಮೇಲೆ ಕರ್ಣ ಶಕುನಿಗಳಿಂದ ಮನ ಬಂದ ತೆರ ಗೆಯ್ವುದು || ೪೧೯ ||

**ರಾಗ ಮಾರವಿ ಏಕತಾಳ**

ಎನುತಲೆ ಗಂಗಾತನಯನನೀಕಿಯ | ಕಣನೊಳು ನಿಲಿಸುತಲಿ ||
ಮಣಿಮಯ ಸ್ಯಂದನವೇರುತ ಕರದಲಿ | ಧನುಶರಗಳನಾಂತು || ೪೨೦ ||

ನಡೆಸುತ ರಿಪುಮೋಹರದೊಳು ರಥಗಳ | ತುಡುಕುತ ಶರಗಳನು ||
ಹೊಡಕರಿಸುತ ಕರಿಘಟೆ ಕಾಲ್ಬಲಗಳ | ಕಡಿದೊಟ್ಟುತ ಛಲದಿ || ೪೨೧ ||

ಇರಿದನು ಶೂಲದಿ ತರಿದನು ಶರದಲಿ | ಕೊರೆದನು ಖಡ್ಗದೊಳು ||
ಮೆರೆದನು ರಿಪುಮೋಹರದೊಳಗೆತ್ತಲು | ಸುರನದಿನಂದನನು || ೪೨೨ ||

ಇತ್ತ ಶಿಖಂಡಿಯು ಕೇಶವನಾಜ್ಞೆಯ | ಪೊತ್ತಡರುತ ರಥವ ||
ಚಿತ್ತದಿ ಖತಿಮಸಗುತ್ತಲೆ ಗಂಗಾ | ಪುತ್ರನನರಸುತಲಿ || ೪೨೩ ||

**ಭಾಮಿನಿ**

ಪರಿಕಿಸುತಲಾ ಕೌರವೇಂದ್ರನು |
ಒರೆದಿಹನು ಗಾಂಗೇಯನೆನ್ನೊಳು |
ಮರಣವೆನಗೆ ಶಿಖಂಡಿಮುಖದೊಳಗೆಂದು ಪೂರ್ವದಲಿ ||
ಧುರದಿ ಮುಂದರಿದೀಗ ದುರುಳನ |
ಶಿರವರಿಯಬೇಕೆನುತ ಗುರುಕೃಪ |
ಗುರುಜ ಮುಖ್ಯರೊಳುಸಿರಿ ಕೌರವ ಬಂದು ಮಾರ್ಮಲೆಯೆ || ೪೨೪ ||

**ರಾಗ ಶಂಕರಾಭರಣ ಮಟ್ಟೆತಾಳ**

ಕಿಡಿಯ ಸೂಸುತಾ ಶಿಖಂಡಿ | ಧಡಿಗತನದಿ ವಿಶಿಖಗಳನು |
ತುಡುಕಿ ಬಿಟ್ಟ ಕೌರವೇಂದ್ರ | ಗಾಗಲಾ ಕ್ಷಣ || ೪೨೫ ||

ಕುರುಕುಲೇಂದ್ರ | ತರಿದು ಮತ್ತೆ | ಉರುತರಾಸ್ತ್ರವೆಸೆಯಲಾಗ |
ತರಿದನೊಂದೆಯಲಗಿನಿಂದ | ಕಲಿ ಶಿಖಂಡಿಯು || ೪೨೬ ||

ಗುರಿಯ ನೋಡುತಾ ಶಿಖಂಡಿ | ಕುರುಪತಿಯ ಧನುವ ಕಡಿಯೆ ||
ಭರದೊಳನ್ಯಚಾಪಗೊಳಲು | ತುಂಡುಗೆಯ್ದನು || ೪೨೭ ||

ಶಕ್ತಿಯಿಂದ ಕೌರವೇಂದ್ರ | ಮತ್ತೆ ಗದೆಯ ತೂಗಿ ಬಿಡಲು |
ಕಿತ್ತು ಶಿರಕೆ ಬಡಿಯೆ ಮೂರ್ಛೆ | ತಳೆದನಾ ಕ್ಷಣ || ೪೨೮ ||

**ಭಾಮಿನಿ**

ತ್ವರಿತದಿಂದೇಳುತ್ತ ಕೌರವ |
ಪರಮ ರೋಷವ ತಳೆದು ಬರುತಿರ |
ಲರಿತು ಮುಂದಡಗಟ್ಟಿಯಗ್ರಜನಡಿಗೆ ವಂದಿಸುತ ||
ಪರುಠವಿಸಿ ದುಶ್ಯಾಸ ಸಮರಕೆ |
ತೆರಳುವೆನು ನಾನೆನುತ ಬರುತಿರೆ ||
ಕೆರಳಿದನು ಝೇಂಕರಿಸಿ ದ್ರುಪದಕುಮಾರನಾ ಕ್ಷಣದಿ || ೪೧೯ ||

**ರಾಗ ಮಾರವಿ ಮಟ್ಟೆತಾಳ**

ಯಾತಕೆನ್ನ ಧುರವು ಬೇಡ | ಸೋತು ಪೋಪೆಯ ||
ಪಾತಕಿಯೆ ಎನ್ನ ಭಗಿನಿ | ಮಾನ ಕಳೆದೆಯ || ೪೨೦ ||

ಪಾಪಿ ನಾನಲ್ಲ ಪರರ | ಕೊಲಲು ಜನ್ಮವ ||
ಈ ಪರಿಯೊಳೆತ್ತಿ ಬಂದ | ಕಡು ನರಾಧಮ || ೪೨೧ ||

ತೊಟ್ಟ ಛಲವ ಬಿಡುವದುಂಟೆ ಶೂರಜನಗಳು ||
ಕುಟ್ಟಿ ಕೊಲುವ ಭೀಮ ನಾಳೆ | ಪರಿಕಿಸಾಗಳು || ೪೨೨ ||

ಬರಿಯ ಮಾತಿದೇಕೆ ಧನುವ | ತಾಳು ತಾಳೆಲ ||
ಶರವನಿದರ ಮುರಿಯೆ ಶೂರ | ನೆಂಬೆ ನೋಡೆಲ || ೪೨೩ ||

**ರಾಗ ಭೈರವಿ ಏಕತಾಳ**

ಕೆರಳಿ ಶಿಖಂಡಿಯು ಬೇಗ | ಬಹ | ಶರವನು ತುಂಡಿಸಲಾಗ ||
ಗುರಿಯೊಳಗೆಂಟಸ್ತ್ರವನು | ಖತಿ | ವೆರಸುತ ಬಿಡೆ ಕಂಡದನು || ೪೨೪ ||

ಮುರಿದೊಟ್ಟುತ ಚಾಪವನು | ತುಂ | ಡರಿಯಲ್ಕಾಗಸಿಯನ್ನು ||
ತಿರುಹುತ ಬರೆ ಸೆಳೆಯುತ್ತ | ಧರೆ | ಗಿರಿಸೆ ಶಿಖಂಡಿಯು ನಗುತ || ೪೨೫ ||

ತೋರೋ ಸಹಸಗಳೀಗಾ | ಮಹ | ಶೂರಾಗ್ರಣಿ ನೀ ಬೇಗ |
ಭಾರಿಯ ಪೌರುಷವೇಕೊ | ಕಡು | ಕ್ರೂರ ದುಷ್ಕರ್ಮಿಯೆ ಸಾಕೊ || ೪೨೬ ||

**ವಾರ್ಧಕ**

ನುಡಿಯ ಕೇಳುತಲಾಗ ಕಿಡಿಗೆದರಿ ದುಶ್ಯಾಸ |
ಘುಡುಘುಡಿಸುತಯ್ತುಂದು ಭುಜವ ಚಪ್ಪರಿಸುತಂ |
ಧಡಿಗತನದಿಂ ಮಲ್ಲಯುದ್ಧಕೊದಗೆ ಶಿಖಂಡಿ ಪಿಡಿದು ಶರಮಂ ವೇಗದಿ ||

ಕಡು ದುರುಳ ನಿನ್ನ ನಾ ಕೊಲೆನೆಂದು ಮೀಸೆಯಂ |
ಖಡುಗದಿಂ ಕತ್ತರಿಸೆ ಪಾಂಡವಾನೀಕಗಳ್ |
ಬಡಿದು ಕರಚಪ್ಪಳೆಯನಿಕ್ಕಿ ಖೋಯೆಂದೆನಲ್ ಕಡು ನಾಚಿ ಪಿಂತಿರುಗಿದ || ೪೩೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚಂಡಭೈರವನಂತೆ ರಿಪುಗಳ | ತಂಡದಲಿ ಹೊಕ್ಕಾ ಶಿಖಂಡಿಯು |
ದಿಂಡುದರಿದನು ಪ್ರತಿಭಟರ ಮುಂ | ಕೊಂಡು ರಣದಿ || ೪೩೮ ||

ಕಕ್ಕುಲತೆ ಬೇಡೀಗ ನಿಮ್ಮನು | ಮುಕ್ಕುವೆನು ಧುರಧೀರರಿಲ್ಲವೆ |
ಪೊಕ್ಕು ಹೆಣಗುವ ಬನ್ನಿರೀ ಕ್ಷಣ | ವೆಂದು ಕರೆದ || ೪೩೯ ||

ಬಹೆನು ತಡೆತಡೆಯೆನುತ ಶಲ್ಯನು | ಮಹಬಲಾನ್ವಿತನಹುದೊ ಎನ್ನನು |
ವಿಹಿತದಿಂ ಗೆಲಬಹುದುಯೆನ್ನುತ | ಮುಂದೆ ನಿಲಲು || ೪೪೦ ||

ಎಲವೊ ಬಿಲುಗೊಳ್ಳೀಗ ಬೇಗದಿ | ಗಳಿಗೆಯೊಂದರೊಳೀಗ ನಿನ್ನ |
ಗ್ಗಳಿಕೆಯನು ತೋರುವೆನೆನುತ್ತಲೆ | ದ್ರುಪದತನಯ || ೪೪೧ ||

ಎಚ್ಚನಾ ಕ್ಷಣ ಬಾಣಮಯವನು | ಕಿಚ್ಚು ಕಿಡಿಕಿಡಿಗೆದರಿ ದ್ರುಪದಜ |
ಮುಚ್ಚಿ ಮುಸುಕಿದ ಶಲ್ಯನಂಗವ | ನೇನನೆಂಬೆ || ೪೪೨ ||

**ರಾಗ ಮಾರವಿ ಏಕತಾಳ**

ತರಿತರಿದೊಟ್ಟುತ ಶರಗಳ ಶಲ್ಯನು | ಪರುಠವಿಸುತ ಬರಲು ||
ಕೆರಳಿ ಶಿಖಂಡಿಯು ಸಾರಥಿಯನು ಬಡಿ | ದುರುಳಿಸೆ ನೆಲನೊಳಗೆ || ೪೪೩ ||

ಮತ್ತೊರ್ವನ ಕರೆದೇರಿಸಿ ರಥದೊಳು | ಶಕ್ತಿಯೊಳಾ ಶಲ್ಯ ||
ಬಿತ್ತರಿಸುತ ಶರವೃಷ್ಟಿಯ ಕರೆಯಲು | ಪೃಥ್ವಿಗೆ ಮುರಿದೊಟ್ಟಿ || ೪೪೪ ||

ವಿರಥನ ಗೆಯ್ಯುತ ಶಲ್ಯನ ಧರಣಿಯೊ | ಳುರುಳಿಸಿ ಮೂರ್ಛೆಯಲಿ ||
ಅರಿಮೋಹರವನು ಮುರಿಮುರಿದಿಕ್ಕುತ | ತಿರುಗಿದ ನಾಲ್ದೆಸೆಗೆ || ೪೪೫ ||

**ಭಾಮಿನಿ**

ಹರಿಯು ಕರೆತಂದಾ ಶಿಖಂಡಿಯ |
ನಿರಿಸಿ ಪಾರ್ಥನ ರಥದಿ ಬೇಗನೆ |
ನರನೊಳೆಂದನು ಭೀಷ್ಮಸಮ್ಮುಖವಯ್ದಿ ಸಮರವನು ||
ಸುರನರರು ಭಾಪೆನುವ ಪರಿಯಲಿ |

ಧುರವೆಸಗಬೇಕೆನುತ ರಥವನು |
ತೆರಳಿಸಲು ಫಲುಗುಣನು ಭೀಷ್ಮನೊಳೆಂದ ತವಕದಲಿ || ೪೪೬ ||

**ರಾಗ ಕೇದಾರಗೌಳ ಅಷ್ಟತಾಳ**

ಅರಿತುದಿಲ್ಲವೊ ತಾತ ಭರತಪರಂಪರೆ | ದೊರೆಗಳನ್ವಯದಿ ಹಿಂದೆ ||
ಸರಿಸಮ ನಿನ್ನಂಥ ಪ್ರಾಜ್ಞ ಸತ್ಯಾನ್ವಿತ | ಛಲವಂತರಿಲ್ಲವೆಂದು || ೪೪೭ ||

ಕರುಣ ನಿಧಿಯೆ ಧುರಧೀರಾಗ್ರಗಣ್ಯನೆ | ತರಳರ ಶ್ರೇಯಸ್ಸನ್ನು |
ನಿರತ ಹಾರೈಸುವ ಗಳಿತಿಹ ತನುವಿಗೆ | ಶರಗಳೆಂತೆಸೆಯುವೆನು || ೪೪೮ ||

ಫಲುಗುಣ ಕ್ಷತ್ರಿಧರ್ಮಕೆ ಹಾನಿ  ತರಬೇಡ | ಹಳಚುವ ಪ್ರತಿಭಟನ ||
ಗೆಲುವುದೊಂದೇ ಮನವಿರಿಸಬೇಕಲ್ಲದೆ | ಕರುಣಗಳಿಡಬಾರದು || ೪೪೯ ||

ಕುರುಪತಿವೈರಿಯಾತನ ಸೇನಾಪತಿ ನಿನ್ನ | ಧುರದಿ ಕೊಲ್ಲುವುದೆನ್ನಯ |
ನಿರತ ಪ್ರಯತ್ನವೆಂದೆನಲಾಗ ಭೀಷ್ಮನು | ಕಿರುನಗು ನಗುತಲೆಂದ || ೪೫೦ ||

ಕುವರ ಕೇಳ್ ನಿನ್ನಿಂದಲಾಗದು ಹರಿಹರ | ಪರಮೇಷ್ಠಿಯಯ್ತುಂದರು ||
ಬವರದಿ ಸಾಯುವನಲ್ಲ ಜಯದ ಮಾತು | ವಿಧಿವಶವಾಗಿಹುದು || ೪೫೧ ||

**ರಾಗ ಮಾರವಿ ಏಕತಾಳ**

ಕೊಲ್ಲುವ ಮನವೆನಗಿಲ್ಲೈ ನಿನ್ನನು | ಗೆಲ್ಲುತ ಕಡೆಯೊಳಗೆ ||
ಖುಲ್ಲ ಸುಯೋಧನವಾಹಿನಿ ಸಹಿತಲೆ | ತಲ್ಲಣಗೊಳಿಸುವೆನು || ೪೫೨ ||

ಹರಿಕಿಂಕರ ತ್ರೈಭುವನವ ಗೆಲುತಿಹೆ | ಸಿರಿಯರಸಗೆ ನಾನು ||
ಶರಣನು ವಿಜಯವ ಪಡೆವುದಸಾಧ್ಯವು | ಭರವಸೆಯಿಲ್ಲೆನಗೆ || ೪೫೩ ||

ಕೊಡುವೆನು ತಾತನೆ ನಿನ್ನೊಳು ವಿಶಿಖವ | ತೊಡೆಯಲು ನೇಮವನು ||
ನುಡಿಯೊಳಗೇನಿದೆ ಫಲಗಳು ಸಮರದಿ | ಸಡಗರ ಕಾಂಬುವುದು || ೪೫೪ ||

ಇಂದಿರೆಯರಸನ ಪ್ರಾರ್ಥಿಸು ರಣದಲಿ | ಹೊಂದಲು ಜಯಗಳನು |
ಕಂದನೆ ಎನ್ನೊಳಗೇಕೆ ವಿಚಾರಿಪೆ | ಸಂಧಿಸು ಶರಗಳನು || ೪೫೫ ||

**ರಾಗ ಶಂಕರಾಭರಣ ಮಟ್ಟೆತಾಳ**

ನರನು ಗಾಂಡೀವಧನುವ | ನೆಗಹಿ ವಿಜಯಶಿಖರಿ ಶರವ |
ಭರದಿ ಪೂಡಿ ಬಿಟ್ಟನಾಗ | ಗುರಿಯ ನೋಡುತ || ೪೫೬ ||

ಶಂತಸುತನು ಕೋಪದಿಂದ | ಹೊಂತಕಾರಿ ಭಳಿರೆಯೆನುತ |
ಪಂಥದಿಂ ಪ್ರದೀಪಶರದಿ | ಮುರಿದು ಕೆಡಹಿದ  || ೪೫೭ ||

ಕೆರಳಿ ಜಂಭಭೇದಿಸುತ ಪ್ರ | ಚಂಡ ಭೈರವಾಸ್ತ್ರವೆಸೆಯೆ |
ತರಿದ ನದರ ಘೋರ ಪರ್ಜ | ನ್ಯಾಸ್ತ್ರದಿಂದಲೆ || ೪೫೮ ||

ಹರಿಹಯಾತ್ಮಭವನು ಕೋಟಿ | ಶರವನೊಂದೆ ಕಾಲದೊಳಗೆ |
ಭರಿತ ಪಂಜರವನು ಗೆಯ್ದು | ಭೀಷ್ಮನಂಗಕೆ  || ೪೫೯ ||

ಯೋಗತಿಮಿರಶರದಿ ಭೀಷ್ಮ | ಬೇಗದಿಂದ ಚೂರ್ಣಗೆಯ್ಯ |
ಲಾಗ ಮುಸುಕಲಂಧಕಾರ | ಕಂಡು ಪಾರ್ಥನು || ೪೬೦ ||

ಚಂಡಮಾರ್ತಾಂಡ ಶರದಿ | ದಿಂಡುಗೆಯ್ಯೆ ಭೀಷ್ಮತೋಷ |
ಗೊಂಡು ಪೂತು ಮಝುರೆ ಪಾರ್ಥ | ಸಹಸಿಯೆಂದನು || ೪೬೧ ||

**ರಾಗ ಭೈರವಿ ಅಷ್ಟತಾಳ**

ಜ್ವಾಲಾಗ್ನಿಶಿಖಿಯಸ್ತ್ರವ | ಪೂಡಿಹೆನಿದ | ತಾಳಿಕೊಂಡರೆ ಶೌರ್ಯವ ||
ಪೆಳುವುದೇನಿನ್ನು ಧೀರ ನೀನಹೆಯೆಂದು | ಕೀಲಿಸುತೆಚ್ಚ ಪಾರ್ಥ || ೪೬೨ ||

ಕಿಡಿಯ ಸೂಸುತ ಬರುವ | ಜ್ವಾಲಾಗ್ನಿಯ | ನೊಡನೆ ಕಾಣುತ ಚಾಪವ ||
ತುಡುಕಿ ಝೇಂಕರಿಸಿ ಮಹೇಂದ್ರಾವರುಣಿಯನ್ನು | ಬಿಡುತದ ಶಮೆಯಗೆಯ್ದು || ೪೬೩ ||

ಪಾಶುಪತಾಸ್ತ್ರದಿಂದ | ಭೀಷ್ಮನ ಚಾಪ | ರೋಷದಿ ಕಡಿದುನಿಂದ |
ಭಾಸುರಮಾಗಿಹ ಧನುವನ್ಯ ಪಿಡಿಯಲು | ವಾಸವಾತ್ಮಜ ಮುರಿದ  || ೪೬೪ ||

ಮತ್ತನ್ಯಚಾಪವನ್ನು | ಕೊಳ್ಳುತ ಭೀಷ್ಮ | ನೆತ್ತುತ ಧ್ವನಿಗೆಯ್ದನು ||
ಪೃಥ್ವಿಪ ದ್ರುಪದನ ತನಯ ಶಿಖಂಡಿಯು | ಕತ್ತರಿಸಿದನದನು || ೪೬೫ ||

**ಭಾಮಿನಿ**

ನೋಡಿದನು ಕಲಿಪಾರ್ಥನುಬ್ಬಟೆ |
ಪಾಡಿದನು ಗಾಂಗೇಯ ಶಿರವೊಲೆ |
ದಾಡಿದನು ತನ್ನಾತ್ಮದೊಳು ಪ್ರಾಚೀನ ದುಷ್ಕೃತಿಯ ||
ಆಡಿ ಫಲವೇನಿನ್ನು ದೈವದ |
ಘಾಡಣೆಗಳೆಂತಿಹುದೊ ಶಿವ ಶಿವ |
ಖೋಡಿತನಕಿದಿರಿಲ್ಲ ಧರೆಯೊಳಗಖಿಳಜನ್ಮದೊಳು || ೪೬೬ ||

**ರಾಗ ಬೇಗಡೆ ಆದಿತಾಳ**

ಹಿಂದೆ ಕಾಶೀಪತಿಯ ಸುತೆಯರನು | ತಂದಿರ್ಪನನುಜಗೆ |
ಅಂದಗೆಡಿಸುತ ಸಕಲ ಭೂಪರನು ||
ಮಂದಮತಿಯೊಳಗಂಬೆಯೆನ್ನನು | ಚಂದದಿಂವರಿಸೆನಲು ಪೇಳಿದೆ |
ತಂದೆಗೋಸುಗ ಬ್ರಹ್ಮಚರ್ಯವ | ಪೊಂದಿಹೆನು ನಾನೆನಲು ಸುದತಿಯು || ೪೭೭ ||

ಮನವನಿರಿಸಿಹೆ ಸಾಲ್ವನೊಳು ನಾನು | ತೆರಳುವೆನೆಂದು |
ವನಿತೆ ಪೊರಡಲು ಕಳುಹಿಕೊಟ್ಟಹೆನು ||
ದನುಜನುಲ್ಲಂಘಿಸಲು ಸುದತಿಯು | ಘನತೆಯೊಳು ವರಿಸೆಂದು ಕಾಡಲು |
ಮನದ ನಿಶ್ಚಯ ಬಿಡೆನು ವ್ರತವೆನೆ | ವನಕೆ ಪೋದಳು ಶಪಥಗೈಯ್ಯುತ || ೪೭೮ ||

ದುರುಳೆ ತನ್ನಭಿಮತವ ನಡೆಸೆಂದು | ಭೃಗುಜಾತನಾಗಿಹ |
ಪರಶುರಾಮಗೆ ನಮಿಸಿ ಬಲವಂದು ||
ಕರೆದು ತಂದಳು ಧುರಕೆ ಮಹಿಮನ | ನಿರತವೀ ಕ್ಷೇತ್ರದಲಿ ಹಳಚುತ |
ತೆರಳಿತಿಪ್ಪತ್ತೊಂದು ದಿವಸವು | ಗುರುವರೇಣ್ಯನ ಗೆಲಿದೆನಂತ್ಯದಿ ||೪೭೯||

**ಭಾಮಿನಿ**

ಎರಡನೆಯ ಜನ್ಮದಲಿ ನಿನ್ನಯ |
ಕೊರಳ ಕೊಯ್ಯುವೆನೆನುತ ದುರುಳೆಯು |
ಭರದಿ ಪಾವಕನೊಳಗೆ ತನ್ನಯ ತನುವ ನೀಗಿದಳು ||
ತರುಣಿಯೇ ಬಂದೀಗ ದ್ರುಪದನ |
ತರಳೆಯಾಗುದ್ಭವಿಸಿ ಕಡೆಯೊಳು |
ಧರಿಸಿದಳು ವಿಧಿ ವಶದಿ ಪುಂಸತ್ವವನು ಕಡು ದುರುಳೆ || ೪೮೦ ||

**ರಾಗ ಕೇದರಾಗೌಳ ಅಷ್ಟತಾಳ**

ಅವಸಾನಕಾಲದಿಚ್ಛೆಗಳಂತೆ ಪ್ರಾಣಿಗೆ | ಭವಗಳು ನಿಶ್ಚಯವು |
ಯುವತಿಯೆನಗೆ ಮೃತ್ಯುವಾಗಿ ಶಿಖಂಡಿಯು | ಬವರಕೆ ನಿಂದಿಹಳು || ೪೮೧ ||

ತರುಣಿಯರಿದಿರಸ್ತ್ರ ಪೂಡೆನೆಂಬುವ ಭಾಷೆ | ಧರಿಸಿಹೆನದರಿಂದಲಿ ||
ಶರವ ಪೂಡೆನು ದೇಹ ತ್ಯಜಿಸಿ ಪೋಪೆನು ಸುರ | ಪುರಕೆಂದು ನೆನೆಯೆ ಭೀಷ್ಮ || ೪೮೨ ||

ಅನಿತರೊಳಂಬರದೊಳಗಷ್ಟವಸುಗಳು | ಘನತರ ಘೋಷದಿಂದ ||
ಮನದಿ ನಿಶ್ಚಯಿಸಿದಂದದಿ ಬೇಗ ಬಾರೆಂದು | ಸುರಿದರು ಸುಮಮಳೆಯ || ೪೮೩ ||

ಹರುಷದಿಂದಂತರಿಕ್ಷವ ನೋಡಿ ಭೀಷ್ಮನು | ಸುರರಿಷ್ಟದಂತೆ ನಾನು ||
ತೆರಳುವುದೊಳ್ಳಿತು ಹರಿಯ ಮೂರ್ತಿಯನೊಮ್ಮೆ | ಪರಿಕಿಪೆನೆಂದೆನುತ || ೪೮೪ ||

**ರಾಗ ಜಂಜೂಟಿ ಅಷ್ಟತಾಳ**

ಮುರಹರ ಕುಳಿತಿಹನಿಲ್ಲಿ | ಪುರಂ | ದರನಾತ್ಮಭವರಥದಲ್ಲಿ ||
ಕೊರಳ ಕೌಸ್ತುಭ ವೈಜಯಂತಿವಿರಾಜಿತ |
ವರಚತುರ್ಭುಜಶಂಖಚಕ್ರಾಂ || ಬುರುಹಗದೆ ಸರಸಿರುಲೋಚನ || ೪೭೫ ||

ಕಸ್ತೂರಿತಿಲಕಲಲಾಟ | ಭಕ್ತ | ಚಿತ್ತಾಪಹರಣನೋಟ |
ಮುಕ್ತಿದಾಯಕ ದೇವ ಧನ್ಯನಾದೆನು ಪಾರ್ಥ |
ನಸ್ತ್ರದೊಳಗೆನಗಿತ್ತು ಮುನ್ನಿನ | ಕೃತ್ಯದೊಳು ನೆಲೆಗೊಳಿಸು ಬೇಗನೆ || ೪೭೬ ||

ಶರಧಿಶಯನ ದೇವದೇವ | ಪರ | ತರವಸ್ತು ಕಾರುಣ್ಯಭಾವ |
ಶರಣರಂತರ್ಯಾಮಿ ಭವರೋಗಭಂಜನ |
ಪರಮಮಹಿಮನೆ ಜಯ ಜಯೆನ್ನುತ | ಸುರನದೀಸುತನೆಂದ ಪಾರ್ಥಗೆ || ೪೭೭ ||

**ಭಾಮಿನಿ**

ತರುಣ ಕೇಳ್ಕೈ ಪಾರ್ಥ ನಿನ್ನಯ |
ಹಿರಿಯ ತಾತನ ಮೇಲೆ ಕರುಣಗ |
ಳಿರಲು ಶರಪುಷ್ಪಕದೊಳಂಬರಗತಿಗೆ ಕಳುಹೀಗ ||
ನೆರೆದ ರಾಯರ ಮುಂದೆ ಭೀಷ್ಮನ |
ತರಿವೆ ನಾನೆಂದನುತ ಪೂರ್ವದೊ |
ಳೊರೆದ ಭಾಷೆಗಳೆಲ್ಲಿ ಕ್ಷಾತ್ರಿಯೊಳಧಮನಾಗದಿರು || ೪೭೮ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದ ಮಾತನು ಕೇಳಿ ಮರುಕವ | ಕೊಂಡು ಪಾರ್ಥನು ಶಿರವ ತಗ್ಗಿಸಿ |
ನಿಂದಿರಲು ಮುರಹರನು ಪೇಳಿದ | ನೆಲವೊ ಮರುಳೆ || ೪೭೯ ||

ಮರುಕವಿರೆ ನಿನಗೀಗ ಭೀಷ್ಮನೊ | ಳರುಹು ಪಿಡಿದಿಹ ಚಕ್ರಮುಖದಲಿ |
ಕೊರಳನರಿದೀ ಕ್ಷಣವೆ ಕುರುಕುಲ | ದಹಿಪೆ ನೋಡು || ೪೮೦ ||

ಸ್ಥಿರಗೊಳಿಪೆ ಧರ್ಮಜಗೆ ಧರಣಿಯ | ತೆರಳುವೆನು ಶಿರವೆತ್ತಿ ನಿನ್ನನು |
ಪರಿಕಿಸೆನು ಗೆಯ್ದಿರ್ದ ಶಪಥಕೆ | ಹಿಂದೆ ಸರಿದೆ || ೪೮೧ ||

ಮೂರು ಲೋಕದಿ ಕೀರ್ತಿ ಪಡೆದಿಹ | ಧೀರನೆಂಬುವ ಬಿರುದದೆಲ್ಲಿದೆ |
ಧಾರಿಣೀಶರು ನಗರೆ ನಾಚಿಕೆ | ಬಾರದೇಕೊ || ೪೮೨ ||

**ರಾಗ ಘಂಟಾರವ ಏಕತಾಳ**

ಎಂದ ಮಾತನು ಕೇಳುತ್ತ ಪಾರ್ಥನು |
ಅಂಧಕಾರಿಯ ತೆರದಿ ಖತಿಯೊಳು | ಸಂಧಿಸಿದ ಕೂರ್ಗಣೆಯನು || ೪೮೩ ||

ಭರದಿ ಭೀಷ್ಮನು ಪರಶುವನೆಗಹುತ್ತ |
ತಿರುಹಿ ಬರೆ ಖಂಡಿಸಿದ ಪಾರ್ಥನು | ಪರಮ ರೋಷಾವೇಶದಿ || ೪೮೪ ||

ಕೆರಳಿ ತೋಮರ ಭಿಂಡಿವಾಲಗಳನ್ನು |
ಸುರನದೀಸುತನೆತ್ತಿ ಪೊಯ್ಯುವ | ಭರಕೆ ಮುರಿದನು ಪಾರ್ಥನು || ೪೮೫ ||

ಕೆರಳುತಕ್ಷಯಶರವಭಿಮಂತ್ರಿಸಿ |
ನರನೆಸೆಯೆ ಗಾಂಗೇಯನಂಗವು | ಶರದ ಪಂಜರವಾಯಿತು || ೪೮೬ ||

ಬಂದನಾಗ ಶಿಖಂಡಿಯು ಭೀಷ್ಮನ |
ಮುಂದೆ ನಿಲ್ಲುತ ಶರವನೆಸೆಯಲು | ನೊಂದು ವ್ಯಾಕುಲದಿಂದಲಿ || ೪೮೭ ||

**ಭಾಮಿನಿ**

ಸುರತರಂಗಿಣಿತನಯ ಯೋಚಿಸಿ |
ತರುಣಿಜನ್ಮ ಶಿಖಂಡಿಯಸ್ತ್ರಗ |
ಳೆರಗಿದಾ ಕ್ಷಣ ತೊಡುವೆ ಶರಸಂನ್ಯಾಸವೆಂದೆನುತ ||
ವಿರಚಿಸಿದ ಶಪಥಂಗಳಂದದಿ |
ನಿರತವೊದಗಿತು ಪಾರ್ಥನಸ್ತ್ರವು |
ಕೊರೆವುತಿದೆ ರೋಮಾಂಚನಂಗಳನಿರೆನು ಧರಣಿಯಲಿ || ೪೮೮ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದು ನಿಶ್ಚಯಿಸುತ್ತ ಭೀಷ್ಮನು | ಸ್ಯಂದನದಿ ಶಸ್ತ್ರಗಳ ಧರಿಸದೆ |
ನಿಂದನದ ಕಾಣುತ್ತ ಕುರುಪತಿ | ದ್ರೋಣಕೃಪರು || ೪೮೯ ||

ಕೆರಳಿ ವಮ್ಮಡಿಯಾಗಿ ಪ್ರಾರ್ಥನ | ಪರಿಘದೊಳು ಮಾರ್ಮಲೆಯುತಯ್ತರೆ |
ಶರಮಯವ ತೂರಿದನು ಘೋರ್ಗರೆ | ದಾ ಕಿರೀಟಿ || ೪೯೦ ||

ನಿಲ್ಲಲಾರೆವೆನುತ್ತ ದಿಗ್ದೆಸೆ | ಗೆಲ್ಲ ಧನುಶರ ಬಿಸುಡುತೋಡಲು |
ಮೆಲ್ಲನಸ್ತಾಚಲಕೆ ಭಾಸ್ಕರ | ತೆರಳಲಾಗ || ೪೯೧ ||

ಅರಿತು ತನ್ನೊಳು ಭೀಷ್ಮನೀ ದಿನ | ಶರಶಯನಕುತ್ತರೆಯ ಫಲ್ಗುಣಿ |
ಪರಮಮಾರ್ಗಶಿರಾಚ್ಚ ಸಪ್ತಮಿ | ಯೊಳ್ಳಿತೆನುತ || ೪೯೨ ||

ನರನ ಶರ ಸರ್ವಾಂಗ ಜರ್ಝರಿ | ಕರಿಸುತಿದೆ ಹರಿಯೆಂದು ಧರೆಯೊಳು |
ಶಿರವು ಪ್ರಾಙ್ಮುಖವಾಗಿ ಭೀಷ್ಮನು | ಪವಡಿಸಿದನು || ೪೯೩ ||

**ವಾರ್ಧಕ**

ಸುರಿವ ನೇತ್ರೋದಕದಿ ಗುರುಕೃಪಾಶ್ವತ್ಥಾಮ |
ಕುರುರಾಯ ದುಶ್ಶಾಸನಾದಿಗಳ್ ಮೊರೆಯಿಡುತ |
ತೆರಳಿಸುತೆ ಸಕಲ ಸೇನೆಯನೆಲ್ಲ ಬಿಡದಿಗಂ ಧನುಶರಾವಳಿ ಬಿಸುಡುತ ||
ಶರತಲ್ಪದೆಡೆಗಾಗಿ ಬರಲಿತ್ತ ಯಮಜಾತ |
ವರವೃಕೋದರ ಪಾರ್ಥ ಮಾದ್ರೇಯರಾ ಕ್ಷಣದಿ |
ಮರುಗುತಾನೀಕಮಂ ಕಳುಹಿ ಪಿಂದಕೆ ಭೀಷ್ಮನಿರುವಲ್ಲಿಗಯ್ತಂದರು || ೪೯೪ ||

**ಭಾಮಿನಿ**

ಸುರಿವ ಕಣ್ಣೀರಿನಲಿ ಧರ್ಮಜ |
ನೆರಗಿ ತಾತನೆ ಎಮ್ಮ ಸಲಹುವ |
ಕರುಣನಿಧಿ ನಿನ್ನಗಲಿ ನಾವಿನ್ನೆಂತು ಬಾಳುವೆವು ||
ಒರೆಯುವವರಾರೆಮಗೆ ಬುದ್ಧಿಯ |
ತೊರೆದು ಪೋಪೆಯ ಪ್ರಾಜ್ಞ ಗುಣನಿಧಿ |
ಧರಣಿಯಾಸೆಗೆ ನಿನ್ನ ನೀಗಿದೆವಕಟ ನಾವೆಂದ || ೪೯೫ ||

**ರಾಗ ಕಾಂಭೋಜಿ ಝಂಪೆತಾಳ**

ಮೊರೆಯ ಕೇಳುತಲಾಗ | ಸುರನದಿಜ ಪೇಳಿದನು |
ತೊರೆವುದಿಲ್ಲೀ ದೇಹ ದಕ್ಷಿಣಾಯನದಿ |
ಬರಲು ಪೂಷನುದೀಚಿ ಸಮಯವನು ನಿರುಕಿಸುತ |
ಶರತಲ್ಪದೊಳಗಿರುವೆ ಮರುಗದಿರಿ ನೀವು || ೪೯೬ ||

ಬನ್ನಿರೈ ಪಾಂಡವರು ಬನ್ನಿರೀ ಕಡೆಗೀಗ |
ಬನ್ನಿರೈ ದ್ರೋಣ ಕೃಪ ಶಲ್ಯಾದಿ ಭಟರು |
ಬನ್ನಿರೈ ಗಾಂಧಾರಿತನಯರೆಲ್ಲರು ನೀವು |
ಬನ್ನಿ ನಿಮ್ಮನು ನೋಳ್ಪ ತವಕವಿಹುದೆನಗೆ || ೪೯೭ ||

ದೂರದಲಿ ನಿಂತಿರುವುದೇಕೆ ಬಾರೆಲೊ ಕರ್ಣ |
ಶೂರಾಗ್ರಗಣ್ಯಬಾರಿತ್ತ ಸುಕುಮಾರ |
ವೀರ ಪಾರ್ಥನ ಶರವು ತಲ್ಪವಾಯಿತು ಎನಗೆ |
ಧಾರಿಣಿಗೆ ಜೋಲುತಿದೆ ಶಿರಕೆ ದಿಂಬಿಲ್ಲ || ೪೯೮ ||

ಕುರುಪತಿಯೆ ರಚಿಸಯ್ಯ ತಲೆದಿಂಬ ದಯದಿಂದ |
ಶಿರವೆತ್ತಿ ನಿಮ್ಮನುರೆ ಪರಿಕಿಪೆನು ನಾನು ||
ಒರೆಯಲಂಜುವೆ ನಿನಗೆ ಧುರದಿ ಜಯಪೊಂದಿಸದೆ |
ಒರಗಿದೆನು ನರನಸ್ತ್ರಪರ್ಯಂಕದೊಳಗೆ || ೪೯೯ ||

**ರಾಗ ರೇಗುಪ್ತಿ ಅಷ್ಟತಾಳ**

ಕುರುಕುಲಾಧಿಪನದ ಕೇಳಿ | ಪದ | ಕೆರಗಿ ಮನದಿ ಶೋಕತಾಳಿ |
ತರಿಸಿದ ಪಟ್ಟೆಪೀತಾಂಬರದೊಳು ಗೆಯ್ದು | ಸುರುಚಿರವಾದ ದಿಂಬುಗಳನ್ನು ವೇಗದಿ || ೫೦೦ ||

ನೋಡಿ ಗಾಂಗೇಯನಾ ಕ್ಷಣದಿ | ಬೇಡ | ಬೇಡಿದು ಯೋಗ್ಯವೆ ಧುರದಿ |
ಮಾಡಿರುತಿಹ ವೀರಶಯನಕ್ಕೆ ಸರಿಯಲ್ಲ | ಗಾಢದಿ ಫಲುಗುಣ ರಚಿಸು ದಿಂಬುಗಳೀಗ || ೫೦೧ ||

ಎನೆ ಹಸಾದಗಳೆನ್ನುತಾಗ | ತನ್ನ | ಧನುವೆತ್ತಿ ಶರಗಳ ಬೇಗ |
ಕ್ಷಣದೊಳು ಧರಣಿಗೆ ಪೂಡಿ ದಿಂಬನುಗೆಯ್ದು | ವಿನಯದಿ ಭೀಷ್ಮನ ಶಿರವೆತ್ತಿ ನಿಲಿಸಿದ || ೫೦೨ ||

ಪರಿತೋಷವಾಯಿತೆಂದೆನುತ | ಗಂಗಾ | ತರಳ ನಿಂದಿಹರ ನೋಡುತ್ತ ||
ನರನಸ್ತ್ರದುರಿಯಿಂದಲೊಣಗಿತು ಜಿಹ್ವೆಯು | ಕುರುರಾಯ ತರಿಸೀಯಬೇಕು ಗಂಗೋದಕ || ೫೦೩ ||

**ರಾಗ ಶಂಕರಾಭರಣ ತ್ರಿವುಡೆತಾಳ**

ತರಿಸಿದನು ಎಳೆನೀರು ಶರ್ಕರೆ | ಮಿಶ್ರದಮೃತದ ಪಾನಕ ||
ಭರಿತ ಕ್ಷೀರದ ಭಾಂಡಭಾಂಡವ | ನಿರುಕಿಸುತ ನದಿತನಯನು || ೫೦೪ ||

ಬೇಡ ಬೇಡೆನಗಿಂಥ ಭೋಗವು | ರೂಢಿಪಾಲರಿಗ್ಯೋಗ್ಯವು ||
ಮಾಡಿಹೆನು ಪ್ರಾಯೋಪವೇಶವ | ಮೂಢತನಗಳಿದೇತಕೊ || ೫೦೫ ||

ತರಳ ತರಿಸೈ ಪಾರ್ಥ ವೇಗದಿ | ಭರಿತ ತೃಷೆಯಾಗಿರ್ಪುದು ||
ತ್ವರಿತವೆನೆ ವಂದಿಸುತಲೇರಿದ | ನಿರದೆ ಅನಲನ ರಥವನು || ೫೦೬ ||

ಹೂಡಿದನು ಗಾಂಡೀವಕಸ್ತ್ರವ | ನೋಡಿಭುವನಕೆ ಸೆಳೆಯುತ ||
ಗಾಢದಿಂ ಬಿಡಲಾಗ ಗಂಗೆಯು | ಓಡಿ ಬಂದಳು ಮೇಲಕೆ || ೫೦೭ ||

ವದನವನು ತೆರೆದಾಗ ಭೀಷ್ಮನು | ಮುದದಿ ಪಾನವ ಗೆಯ್ಯುತ ||
ಸದಮಲಾತ್ಮಕ ತೃಪ್ತಿಪಡುತಲೆ | ತಿರುಗಿ ನೋಡಿದ ಕುರುಪನ || ೫೦೮ ||

**ರಾಗ ಸಾಂಗತ್ಯ ರೂಪಕತಾಳ**

ಪರಿಕಿಸು ಕೌರವ ನರನ ಸಾಹಸಗಳ | ನರಿತು ಮೂರ್ಖತೆಯಾಕೊ ನಿನಗೆ ||
ಧುರದ ಬುದ್ಧಿಯು ಬೇಡ ಸಾರಿದೆ ಸುರನರ | ಗರುಡರೊಳಿವಗೆಣೆಗಾಣೆ || ೫೦೯ ||

ನಿಮ್ಮ ದ್ವೇಷವ ಬಿಟ್ಟು ಸಮ್ಮತಿಯೊಳು ರಾಜ್ಯ | ಧರ್ಮಜಂಗರ್ಧವನಿತ್ತು ||
ಒಮ್ಮನದೊಳಗಿರೆ ಕುರುರಾಜ್ಯಕೀರ್ತಿಯು | ಬ್ರಹ್ಮಾಂಡ ತುಂಬುವುದಯ್ಯ || ೫೧೦ ||

ದುರುಳರ ಬೋಧೆಯೊಳಿರಿಸುತ್ತ ಚಿತ್ತವ | ಕುರುಕುಲೇಂದ್ರನೆ ಕೆಡಬೇಡ ||
ಹರಿಯು ಪಾಂಡವಪಕ್ಷಕಿಹನು ಸಾರಿದೆನೀಗ | ಧುರ ಬೇಡ ತ್ಯಜಿಸೆನ್ನ ಮುಂದೆ || ೫೧೧ ||

ಕ್ಷಿತಿಯ ಬಿಟ್ಟಯ್ದಿದರಲ್ಲೆನ್ನ ಮನಕಿದು | ವ್ಯಥೆಯಾಪುದದಕೆ ಜೀವನದಿ ||
ಸತತ ನಾನಿರಲಿಂದೆ ನಿಮ್ಮ ವೈರಗಳನ್ನು | ಹಿತದಿ ಬಿಟ್ಟರೆ ಲೇಸು ಮನಕೆ || ೫೧೨ ||

**ಭಾಮಿನಿ**

ಎಷ್ಟು ಪೇಳಿದರಾನು ಪೊಡವಿಯ |
ಕೊಟ್ಟು ಸಂಗರ ಬಿಡೆನು ಜಗದೊಳು |
ದುಷ್ಟನೆಂದೆನಲೆನಗೆ ಚಿಂತೆಗಳಿಲ್ಲ ಕಾಡದಿರು ||
ತೊಟ್ಟ ಕ್ಷತ್ರಿಯ ಛಲವ ತ್ಯಜಿಸೆನು |
ಸೃಷ್ಟಿಯೊಳು ಋಣವಿರಲು ಬಾಳುವೆ |
ಬಿಟ್ಟರಸುವನು ಪಡೆವೆ ವೀರಸ್ವರ್ಗಸಂಪದವ || ೫೧೩ ||

**ರಾಗ ಕೇದಾರಗೌಳ ಅಷ್ಟತಾಳ**

ಕುರುರಾಯ ನಿನ್ನೊಳಗೇನೆಂಬೆ ಮನಬಂದ | ತೆರನ ಮಾಡುವುದೊಳ್ಳಿತು ||
ಅರಿಗಳೊಡನೆ ಸತ್ಯಯುದ್ಧ ಗೆಯ್ದರೆ ಮನ | ಹರುಷಗೊಂಬುದು ಎನಗೆ || ೫೧೪ ||

ವಂದಿಸುತಾಗ ಸುಯೋಧನನೆಂದನು | ಮುಂದೆನ್ನ ಸೇನೆಯನ್ನು ||
ಚಂದದಿ ರಕ್ಷಿಸಿಕೊಂಬರ್ ಯಾರಿಗೆ ಪಟ್ಟ | ವಿಂದು ನಾನೆಸಗುವುದು || ೫೧೫ ||

ಸುರನದಿಸುತನಾಗಲೆಂದನು ದ್ರೋಣಗೆ | ಹರುಷದಿ ಪಟ್ಟಗಟ್ಟು ||
ನರನಿದಿರೊಳು ಕಾದಲರಿವಾತನವನೆನೆ | ಚರಣಕೆ ನಮಿಸಿದನು || ೫೧೬ ||

ದೂರ ಪೋಗಿ ಸ್ವಲ್ಪ ನೀವೆಂದು ಕಳುಹುತ್ತ | ಸೂರಿಯಾತ್ಮಜನ ನೋಡಿ ||
ಪಾರಮಾರ್ಥದಿ ಭೀಷ್ಮನಪ್ಪಿ ವ್ಯಾಮೋಹವ | ಬೀರುತಿಂತೆಂದನಾಗ || ೫೧೭ ||

**ರಾಗ ರೇಗುಪ್ತಿ ಅಷ್ಟತಾಳ**

ಮಾತ ಕೇಳೆಲೊ ಕರ್ಣ ನೀನು | ಕುಂತಿ | ಜಾತ ಮಾರ್ತಾಂಡಸಂಭವನು ||
ಖ್ಯಾತನಾಗಿಹೆ ಕೃಷ್ಣಪಾರ್ಥರ ಸರಿಸಮ | ಪ್ರೀತಿಯನೆಸಗಲುಬೇಕು ಪೇಳುವೆನೊಂದ || ೫೧೮ ||

ಅನುಜಾತ ಕೌಂತೇಯರನ್ನು | ನೀನು | ಘನತೆಯೊಳ್ ಕೂಡಿ ಕೀರ್ತಿಯನು ||
ದಿನದಿನಕಭಿವೃದ್ಧಿಗೊಳಿಸು ಕೌರವರೊಳು | ಸನುಮತವಲ್ಲ ಸೌಹಾರ್ದದೊಳಿಹುದಿನ್ನು || ೫೧೯ ||

ನುಡಿ ಕೇಳಿ ಕರ್ಣನಾ ಕ್ಷಣದಿ | ಭೀಷ್ಮ | ನಡಿಗೆರಗುತ ಪೇಳ್ದ ಮುದದಿ ||
ಪೊಡವಿಪ ಕೌರವನೊಳು ಜೀವ ಪೊರೆದಿಹೆ | ಬಿಡೆ ನಿಂದ್ಯವಾಪುದು ಕಡೆಗೆ ದುರ್ಗತಿಯಹುದು || ೫೨೦ ||

ಹರಿಸಹಾಯದಿ ಕೌಂತೇಯರಿಗೆ | ಜಯ | ವಿರುವುದಲ್ಲದೆ ಮಿಕ್ಕಾದರಿಗೆ ||
ಸರುವಥಾ ಗೆಲುವಿಲ್ಲ ಹುಟ್ಟಿದವಗೆ ಮೃತ್ಯು | ಬರದೆ ನಿಲ್ಲವುವುದುಂಟೆ ತೊರೆಯೆ ಕೌರವನನ್ನು || ೫೨೧೦ ||

ಪುಟ್ಟಿದೆ ಕ್ಷತ್ರಿಯಾನ್ವಯದಿ | ಛಲ | ವಿಟ್ಟು ಕಾದಲು ದಿವಂಗತದಿ |
ಶ್ರೇಷ್ಠವಾಗಿಹ ವೀರ ಸ್ವರ್ಗ ಕೈಗೊಂಬೆನು | ಥಟ್ಟನೀ ಕ್ಷಣ ಧುರಕಪ್ಪಣೆ ಕೊಡುವುದು || ೫೨೧೧ ||

**ವಾರ್ಧಕ**

ತರಣಿಸುತ ಕೇಳ್ ನೀನು ವ್ಯರ್ಥ ಕಲಹವನಿಕ್ಕಿ |
ಧುರವೆಸಗುವಂದಮಂ ಗೆಯ್ದುದಕೆ ಕೋಪಿಸಿದೆ |
ನಿರತ ಸತ್ಯದಿ ಕಾದಿ ಸತ್ಕೀರ್ತಿ ಪಡೆಯೆನುತ ಕಳುಹಿಯಮಜನೊಳೆಂದನು ||
ತರಳ ಕೇಳೈ ನಿನಗೆ ಪರಮಾತ್ಮನನುಗ್ರಹದಿ |
ಧುರದಿ ಜಯವೊದಗುವುದು ವ್ಯಥಿಸದಿರು ಪೋಗೀಗ |
ಬರುವ ಮಾಘದ ಶುಕ್ಲವಷ್ಟಮಿಯೊಳೀ ತನುವನುಳಿದುಪೋಗುವೆ ಸ್ವರ್ಗಕೆ || ೫೨೧೨ ||

**ರಾಗ ಕಾಂಭೋಜಿ ಝಂಪೆತಾಳ**

ಧರಣಿಪಟ್ಟವನೆಸಗಿ ಕೊಂಡೆನ್ನ ಬಳಿಗಾಗ | ಬರೆ ಧರ್ಮಬೋಧೆಗಳ ತಿಳಿದುದನು ಪೇಳ್ವೆ ||
ಮುರಹರನು ಕಾಯುವನು ಪೋಗು ಧರ್ಮಜಯೆನುತ | ತೆರಳಿಸಿದ ಸಕಲರನು ಹರಿಯ ನೆನೆನೆನೆದು || ೫೨೧೪||

ಪರಮತೇಜಃ ಪುಂಜಮೂರುತಿಯ ನಾಸಾಗ್ರ | ವಿರಿಸಿ ನಿರ್ಮಲಮನದೊಳುಪನಿಷತ್ತುಗಳ ||
ಹರುಷದಿಂದಲೆ ಪಠಿಸುತಿರ್ದ ಶರತಲ್ಪದಲಿ | ಕುರುರಾಯ ಮುಂತಾಗಿ ಶಿಬಿರಸಾರಿದರು || ೫೨೧೫ ||

**ವಾರ್ಧಕ**

ವೀರಪಾಂಡವರೆಲ್ಲ ಜಯನಿನಾದದ ವಾದ್ಯ |
ಭೋರಿಡುತಲಯ್ತಂದು ಶಿಬಿರಮಂ ಪೊಕ್ಕಾಗ |
ವಾರಿಜಾಕ್ಷಗೆ ನಮಿಸಿ ನಿನ್ನ ಕಾರುಣ್ಯದೊಳ್ ಧೀರ ಭೀಷ್ಮನ ಗೆಲಿದೆವು ||
ಭಾರತೇಯರ ಪೊರೆವ ದ್ವಾರಕಾವಾಸಿ ಹರಿ |
ಶ್ರೀ ರಮಣ ಜಯ ಜಯಾ ಜಯತೆಂದು ಸೌಖ್ಯದೊಳ್ |
ಶೂರ ಪಾಂಡವರಿತ್ತ ಬಂಧುಬಾಂಧವರೊಡನೆ ಶಿಬಿರದೊಳ್ ನೆಲಸಿರ್ದರು || ೫೨೧೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಭಾರತಕಥೆಯ ಮುನಿಪತಿ | ಸಂತಸದಿ ಜನಮೇಜಯಾಖ್ಯಗೆ |
ಪಿಂತೆಯುಸಿರಿದ ತೆರದಿ ಕೃತಿಗಳ | ಗೆಯ್ದೆ ನಾನು || ೫೨೧೭ ||

ಪರಿಸಮಾಪ್ತಿಯು ಸೌಮ್ಯವತ್ಸರ | ಶರಧಿಸಖಸುತವಾರ ಶ್ರಾವಣ |
ಪರಮ ಶುಕ್ಲತೃತೀಯವೇಕಾ | ದಶಿಯ ಕೃತಿಯು || ೫೨೧೮ ||

ಪರಮತುಂಗಾತೀರ ಪನಸಾ | ಪುರದ ನಾಗೇಂದ್ರಾಖ್ಯತನುಜನು |
ನರಹರಿಯ ನಾಮಕನು ಗೆಯ್ದಿಹ | ಕೃತಿಗಳಿದನು || ೫೧೯ ||

ಒಪ್ಪುತಪ್ಪುಗಳಿರಲು ವಿಬುಧರು | ಒಪ್ಪದಿಂದಲೆ ತಿದ್ದಿ ಮನಸಿನೊ |
ಳಿಪ್ಪ ದೋಷವ ಮಾಜದೆನ್ನೊಳು | ತಿಳುಹಿ ದಯದಿ || ೫೨೦ ||

**ಮಂಗಲ**

**ರಾಗ ಢವಳಾರ ಆದಿತಾಳ**

ಮಂಗಲಂ | ಜಯ | ಮಂಗಲಂ || ಪ ||

ಮಂಗಲ ಕಸ್ತುರಿ ತಿಲಕನಿಗೆ | ಜಯ
ಮಂಗಲ ವೇಣುವಿನೋದನಿಗೆ ||
ಮಂಗಲ ಅಘಹರಪುರದ ನಿವಾಸಿಗೆ |
ಮಂಗಲ ಶ್ರೀಗೋಪಾಲನಿಗೆ ||
ಮಂಗಲಂ | ಜಯ | ಮಂಗಲಂ || ೫೨೧ ||

ಮಂಗಲಂ ಮತ್ಸ್ಯವತಾರ ಕಚ್ಛಪಗೆ |
ಮಂಗಲ ವರಹ ಶ್ರೀನರಸಿಂಹಗೆ |
ಮಂಗಲ ವಾಮನ ಭಾರ್ಗವ ರಾಮಗೆ |
ಮಂಗಲ ಕೃಷ್ಣ ಬೌದ್ಧ ಕಲ್ಕ್ಯರಿಗೆ ||
ಮಂಗಲಂ | ಜಯ | ಮಂಗಲಂ || ೫೨೨ ||

ತರಳ ಪ್ರಹ್ಲಾದನ ಪೊರೆದವಗೆ |
ದುರುಳ ಹಿರಣ್ಯನ ತರಿದವಗೆ ||
ನರಕೇಸರಿಯವತಾರ ಸ್ತಂಭೋದ್ಭವ |
ಸಿರಿಯರಸಗೆ ಶ್ರೀನರಸಿಂಹಗೆ ||
ಮಂಗಲಂ | ಜಯ | ಮಂಗಲಂ || ೫೨೩ ||

*ಯಕ್ಷಗಾನ ಭೀಷ್ಮಾರ್ಜುನರ ಕಾಳಗ ಮುಗಿದುದು*

# ಯಕ್ಷಗಾನ ಕೃಷ್ಣಸಂಧಾನ (ಭೀಷ್ಮಪರ್ವ ಸಹಿತ)

## ಪಾತ್ರಗಳು

| | | | | | |
|---|---|---|---|---|---|
| ಪಾಂಡವರು | ದ್ರೌಪದಿ | ದ್ರುಪದನ ಪುರೋಹಿತ ಶತಾನಂದ (ಕಾಶ್ಯಪ) | | | ದುರ್ಯೋಧನ |
| ಶ್ರೀ ಕೃಷ್ಣ | ಶ್ರೀ ಕೃಷ್ಣನ ಮಡದಿಯರು | | ಬಲರಾಮ | ಚಾರಕರು | ದ್ರೋಣ ಕೃಪರು |
| ಕರ್ಣ | ಸಂಜಯ | ವಿರಾಟ | ದ್ರುಪದ | ಧೃತರಾಷ್ಟ್ರ | ವಿದುರ |
| ಸನತ್ಕುಮಾರ | ಭಗದತ್ತ | ಭಟರು | ಭೀಷ್ಮ | ಸಾತ್ಯಕಿ | ಪರಶುರಾಮ |
| ಕಣ್ವಾದಿಗಳು | ವಿದುರನ ಪತ್ನಿ (ಆರುಣಿ) | | ಕುಂತಿ | ಗಾಂಧಾರಿ | ಭಾನುಮತಿ |
| ಸೂರ್ಯ | ಗಂಗೆ | ಧೃಷ್ಟಕೇತು ಮುಂತಾದ ರಾಜರು | | ಘಟೋತ್ಕಚ, ಸೇನೆ | |
| ಹನುಮಂತ | ಶಲ್ಯ | ಉಲೂಕ | ಯುಯುತ್ಸು | ಶಿಖಂಡಿ, ನಾರಿಯರು | ದೂತ |

# ಯಕ್ಷಗಾನ ಕೃಷ್ಣಸಂಧಾನ (ಭೀಷ್ಮಪರ್ವ ಸಹಿತ)

**ಶಾರ್ದೂಲವಿಕ್ರೀಡಿತಂ**

ಶ್ರೀಲಕ್ಷ್ಮೀವರಮಂಬುಜಾಸನಪಿತಂ ಬಾಲಾರ್ಕಕೋಟಿಪ್ರಭಂ
ಲೋಲಾಕ್ಷಂ ಪರಮೇಶ ಮಾಸುರುಚಿರಂ ದೇವಂ ಜಗದ್ವಲ್ಲಭಮ್ ||
ನೀಲಾಂಗಂ ಪವಮಾನಜಾತನಮಿತಂ ಭರ್ಗಪ್ರಿಯಂ ಚಿನ್ಮಯಂ
ತ್ರೈಲೋಕ್ಯಾರ್ಚಿತಪಾದಪದ್ಮಯುಗಳಂ ಶ್ರೀವೇಂಕಟೇಶಂ ಭಜೇ || ೧ ||

**ವಾರ್ಧಕ**

ಪದುಮಬಾಣವಿಭಂಗನಂ ವೃಷತುರಂಗನಂ |
ತ್ರಿದಶನಿಕರಸ್ತೋತ್ರನಂ ಪಂಚವಕ್ತ್ರನಂ ||
ಮದನಪಿತಸುಪ್ರೀತನಂ ಭೂತನಾಥನಂ ದೇವಮುನಿ ಸಂಗೀತನಂ ||
ಉದಧಿಸಮಗಂಭೀರನಂ ಭಯವಿದೂರನಂ |
ಕದನಕರ್ಕಶ ಭೀಮನಂ ಪೂರ್ಣಕಾಮನಂ |
ಉದಯಭಾಸ್ಕರಭಾಸನಂ ಮಹೋಲ್ಲಾಸನಂ ಧ್ಯಾನಿಸುವೆ ಕುಡುಮೇಶನಂ || ೨ ||

**ಭಾಮಿನಿ**

ಅಂಬುರುಹದಳನೇತ್ರೆ ಶ್ರೀದು |
ರ್ಗಾಂಬಿಕೆಯ ಬಲಗೊಂಡು ಭಕ್ತಿಯೊ |
ಳಂಬಿಕಾಸುತ ವಿಘ್ನರಾಜನ ಪಿರಿದು ಸಂಸ್ತುತಿಸಿ ||

ಅಂಬುನಿಧಿಯಾತ್ಮಜೆಗೆ ಕೈಮುಗಿ |
ದಂಬುಜಾಸನ ವಾಣಿಯರ ಪಾ |
ದಾಂಬುಜಕೆ ಪೊಡಮಡುತ ವರ್ಣಿಪೆನೀ ಕಥಾಮೃತವ || ೩ ||

**ದ್ವಿಪದಿ**

ಮುನಿಪ ವೈಶಂಪಾಯಗಭಿನಮಿಸಿ ಸುರರ |
ನೆನೆದು ನುತಿಗೆಯ್ವೆ ಸದ್ಗುರು ಕವೀಶ್ವರರ || ೪ ||

ಭಾರತದ ಕಥೆಯೊಳುದ್ಯೋಗಪರ್ವದಲಿ |
ಶ್ರೀರಮಣ ಕುರುವರನ ಬಳಿಗೆ ನಲವಿನಲಿ || ೫ ||

ಸಂಧಾನಕೆಂದೆನುತ ಬಂದ ಚರಿತವನು |
ಚಂದದಿಂ ಯಕ್ಷಗಾನದಲಿ ವಿರಚಿಪೆನು | || ೬ ||

ಶ್ರುತಿಶಾಸ್ತ್ರ ಪೌರಾಣ ಸಕಲ ವಿದ್ಯೆಗಳ |
ಸ್ಥಿತಿಯರಿತು ಪೇಳ್ವೆನಿಲ್ಲೀ ಕವಿತ್ವಗಳ || ೭ ||

ಒಡೆಯ ವೆಂಕಟರಮಣ ನುಡಿಸಿದಂದಲಿ |
ದೃಢದಿಂದಲೊರೆವೆನೀ ಕೃತಿಯ ಭಕ್ತಿಯಲಿ || ೮ ||

ವರಪ್ರಾಜ್ಞರಾಲಿಸುತ ವಿಷಮವಿರಲದನು |
ಪರಿಹರಿಸಿ ಕೊಂಡಾಡಿ ಪುಣ್ಯಚರಿತೆಯನು || ೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕ್ಷಿತಿಪ ಜನಮೇಜಯಗೆ ಭಾರತ | ಕಥೆಯ ವೈಶಂಪಾಯಮುನಿಪನು ||
ಶ್ರುತಗೊಳಿಸುತಿರಲೆಂದನಾ ಋಷಿ | ಪತಿಗೆ ನಮಿಸಿ || ೧೦ ||

ಕುರುಪತಿಯ ಬಳಿಗೇಕೆ ಧರ್ಮಜ | ಹರಿಯ ಕಳುಹಿದನಲ್ಲಿ ಲಕ್ಷ್ಮೀ ||
ವರನದೇತಕೆ ವಿಶ್ವರೂಪವ | ಧರಿಸಿ ತೋರ್ದ || ೧೧ ||

ಆ ಮಹಾ ಸತ್ಕಥೆಯ ಪೇಳೆಂ | ದಾ ಮಹಿಪ ಬೆಸಗೊಳಲುಸಿರ್ದನು ||
ಶ್ರೀಮನೋಹರನಡಿಯ ಧ್ಯಾನಿಸು | ತಾ ಮುನೀಂದ್ರ || ೧೨ ||

**ಭಾಮಿನಿ**

ಕೇಳು ಜನಮೇಜಯನೆ ಮತ್ಸ್ಯನೃ |
ಪಾಲನರಮನೆಯಲ್ಲಿ ಪಾಂಡವ |
ಬಾಲರೈವರು ಹರಿಯ ಕರುಣದಿ ದ್ರುಪದಸುತೆ ಸಹಿತ ||

ಖೂಳ ಕೌರವಗೆಂದ ಭಾಷೆಯ |
ಬೀಳುಗೊಟ್ಟಭಿಮನ್ಯುವಿಗೆ ಸ ||
ಲ್ಲೀಲೆಯಿಂದುತ್ತರೆಯ ಮದುವೆಯ ವಿರಚಿಸಿದರೊಲಿದು || ೧೩ ||

**ವಾರ್ಧಕ**

ಪರಿಣಯದ ನೆವದಿ ಬಂದಸುರಾರಿ ಪಾಂಡವರ |
ಪಿರಿದು ಸಂತಯಿಸುತ ವಿವೇಕಿಯೋರ್ವನನಟ್ಟಿ |
ಕುರುರಾಯನೊಳು ಕ್ಷಿತಿಯ ಕೇಳಿಸುವುದಾತನನುವಾಗದಿರಲಯ್ದೆ ರಣಕೆ |
ಕರೆಸಲಾಕ್ಷಣ ತಾನು ಬರುವೆನೆಂದಚ್ಯುತಂ |
ತೆರಳಲಿತ್ತಾ ಭೀಮ ಪಾರ್ಥ ಮಾದ್ರೇಯರೊಡ |
ವೆರಸಿ ದ್ರುಪದ ವಿರಾಟ ಮುಖ್ಯರಿಂ ಯಮಜನೋಲಗವಿತ್ತನುತ್ಸಹದೊಳು || ೧೪ ||

**ರಾಗ ಭೈರವಿ ಝಂಪೆತಾಳ**

ಕ್ಷಿತಿಪ ದ್ರುಪದನ ಪುರೋ | ಹಿತನ ಕರೆದು ಕೃತಾಂತ ||
ಸುತನೆಂದ ನೀನು ಕುರು | ಪತಿಯ ಬಳಿಗಯ್ದಿ || ೧೫ ||

ಅವನಿಯೊಳಗರ್ಧರಾ | ಜ್ಯವನು ಕೊಡುವುದೆನುತ್ತ ||
ಸುವಿವೇಕದಿಂ ಕೇಳಿ | ಜವದಿ ಬಹುದೆಂದು || ೧೬ ||

ಮಹಿಪನಾಜ್ಞೆಯೊಳಾತ | ವಿಹಿತದಿಂ ಬರಲಿತ್ತ ||
ಲಹಿತರುಗಳಿರದೆ ಗೋ | ಗ್ರಹಣಮುಖದಿಂದ || ೧೭ ||

ಪೊರೆಗೈವರಿನ್ನು ಸಂ | ಗರಮುಖದೊಳಲ್ಲದಡೆ ||
ಧರೆಯ ನಾ ಕೊಡೆನೆಂದು | ಕುರುರಾಯನಿರಲು || ೧೮ ||

ಆ ಸಮಯದೊಳಗೀತ | ನಾಸಭೆಯ ಪೊಗಲು ಕಂ ||
ಡಾ ಸುಯೋಧನನವನ | ತೋಷಗೊಳಿಸುತಲಿ || ೧೯ ||

ಬಂದ ಕಾರ್ಯವ ಬೆಸಸಿ | ರೆಂದಡರುಹಿದ ಯಮನ ||
ಕಂದ ನಿನ್ನೆಡೆಗೆನ್ನ | ಸಂಧಿಗಟ್ಟಿಹನು || ೨೦ ||

ಇನ್ನಾದರರ್ಧರಸೆ | ಯನ್ನಿತ್ತು ಕರುಣದಲಿ ||
ಮನ್ನಿಸುವುದೆಂದೆನಲು | ಅನ್ನೆಗವ ನುಡಿದ || ೨೧ ||

**ವಾರ್ಧಕ**

ಧರಣಿಯಂ ಪಾರ್ಥಿವರ್ ಸೋತಮೇಲರಿಗಳಂ ||
ಧುರದೊಳಂ ಜೈಸಿಕೊಂಬುದು ಧರ್ಮಮೆಂದಾತ |
ಗರುಹೆನುತಲಾಪ್ತರೊಡನಾಲೋಚಿಸುತ ಹರಿಯ ತನ್ನೊಳಗೆ ಮಾಳ್ಪ ಮನದಿ ||
ಪೊರಮಡಲ್ ಕಂಡೀತ ಭರದಿ ಬಂದಾ ಯುಧಿ |
ಷ್ಠಿರಗೆ ಸೂಚಿಸಲಟ್ಟಿದಂ ನರನನಾ ಪಾರ್ಥ |
ಬರುತ ಮಂಗಲಶಕುನಮಂ ಪಥದೊಳೀಕ್ಷಿಸುತ ನಡೆದನಚ್ಯುತನ ಬಳಿಗೆ || ೧೧ ||

**ಭಾಮಿನಿ**

ಪರಮಷಡುರಸ ಭೋಜನವ ಮುರ |
ಹರನು ಭುಂಜಿಸಿ ಸವಿದು ವರ ಕ |
ರ್ಪುರದ ವೀಳ್ಯವ ರತುನಮಂಚದಿ ಶಯನಗೆಯ್ದಿರಲು ||
ತರುಣಿಯರು ಸಿರಿಚರಣಸೇವೆಯ |
ವಿರಚಿಸಲು ತೆರೆದರೆನಯನ ಭಾ |
ಸುರದ ವದನದೊಳಿರ್ದ ನಿದ್ರಾಂಗನೆಯ ಕೇಳಿಯಲಿ || ೧೩ ||

**ರಾಗ ಸಾಂಗತ್ಯ ರೂಪಕತಾಳ**

ಚರಣಾಬ್ಜದೆಡೆಯಲ್ಲಿ ನರನು ಕೈಮುಗಿದು ನಿಂ | ದಿರಲು ಗೋವಳ ರಾಯನೀತ ||
ಅರಸುಗಳ್ ತಾವೆಂದು ಮೌಳಿಯ ಬಳಿಯಲ್ಲಿ | ಕುರುಭೂಪ ಕುಳ್ಳಿರ್ದನಾಗ || ೧೪ ||

ಹರಿಯು ಮೈಮುರಿದೆದ್ದು ಕಂಡಾಗ ನರನ ಪಿಂ | ತಿರುಗಿ ಕೌರವನನೀಕ್ಷಿಸುತ ||
ಹರಹರಾ ನೀವಿಬ್ಬರೊಂದಾಗಿ ಬಂದುದ | ಚ್ಚರಿಯೆಂದು ತೋರ್ಪುದಿಂದಿನಲಿ || ೧೫ ||

ನೂತನವಿದು ನಮ್ಮ ಹಿರಿಯ ಭಾವಯ್ಯ ನೀ | ವೈತಂದುದಪರೂಪ ಸ್ವಾರಿ ||
ಸಾತಿಶಯದೊಳಿರ್ದಪರೆ ನಿಮ್ಮವರು ಪಾಂಡು | ಜಾತರೊಳ್ ನಿಮಗಾಯ್ತೆ ಕರುಣ || ೧೬ ||

ಅಡವಿಗಟ್ಟಿದರೇನು ಸಹಜಾತರಿವರೆಂಬ | ಒಡಲುರಿ ತಾನಡಗುವುದೆ ||
ಕಡುಹಿತದಲಿ ನೀವನ್ಯೋನ್ಯರಾದರೆ ಬಲು | ಬೆಡಗು ರಂಜಿಪುದು ರಾಜ್ಯದಲಿ || ೧೭ ||

ಚೆನ್ನಾಯ್ತು ನೀವ್ ಬಂದ ಕಾರ್ಯವೇನೆನೆ ಪೇಳ್ದ | ದುರ್ನೀತಿವಂತನಾ ಕ್ಷಣದಿ ||
ಚಿನ್ಮಯ ಕೇಳು ಯಾದವರು ಕೌರವರಲ್ಲಿ | ಭಿನ್ನಭೇದಗಳುಂಟೇನಯ್ಯ || ೧೮ ||

ಯಾರಿಗಿಷ್ಟುಪಚಾರ ನೀ ಮಾಳ್ಪೆ ನಾವಿತ್ತ | ಸಾರಿದುದಪರೂಪವೇನೈ ||
ಶೌರಿ ಕೇಳ್ ದಾಯಾದ್ಯವಿಷಯದೊಳ್ ಪಾಂಡು ಕು | ಮಾರರು ನಾವು ನಮ್ಮೊಳಗೆ || ೧೯ ||

ಇಳೆಗಾಗಿ ಪಾರ್ಥಿವಪಂಥಕೋಸುಗ ನಿಂದು | ಕಲಹಗೆಯ್ವೆವು ಭೂದೇವತೆಯು ||
ಬಳಿಕಾರ ಕೈಸೇರುವಳೊ ನೀನೇ ಬಲ್ಲೆಯ | ಬಲವಾಗಬೇಕುಭಯರಿಗೆ || ೨೦ ||

**ಭಾಮಿನಿ**

ಧರಣಿಗೋಸುಗವಿಂದು ನಿಜಸೋ |
ದರರು ಹಳಚುವಿರೇಕೆ ಭೂಮಿಯು ||
ಸ್ಥಿರವದಾರಿಗೆ ನೀವು ಪಾಂಡವರೆರಕವಿರೆ ನಾವು ||
ಹರುಷಗೊಂಬೆವು ಸರ್ವಥಾ ಸಂ |
ಗರವು ಬೇಡೈ ನಿನಗೆ ಸಾರಿದೆ ||
ಮರಳಿ ಹರಿಹಂಚಾದರೆಂಬಪಕೀರ್ತಿ ಬಹುದೆಂದ || ೩೧ ||

**ರಾಗ ಮಾರವಿ ಏಕತಾಳ**

ಹರಿ ನಿನ್ನೊಳು ಧಮಶ್ರವಣವ ಕೇ | ಳ್ವರೆ ಬಂದಿಹೆವೇನೈ ||
ನೆರೆ ಪಾರ್ಥಿವ ಪಂಥದಿ ಕಾದುವೆವೀ | ರ್ವರ ಪಕ್ಷಕೆ ನೀನು || ೩೨ ||

ಬಲವಾಗೆನುವರೆ ಬಂದಿಹೆವೆನಲಾ | ಜಲಜಾಕ್ಷನು ನಗುತ ||
ಫಲುಗುಣ ನಿನ್ನಯ ಮತವೇನೆನೆ ಕೈ | ಗಳ ಮುಗಿದುರೆ ನುಡಿದ || ೩೩ ||

ನಮ್ಮಯ ಮತ ಕೇಳಣ್ಣನ ಮತವಿದು | ಸಮ್ಮತವುಭಯರಿಗು ||
ನಿಮ್ಮನುನಯವೇ ನಯವು ಸ್ವತಂತ್ರಗ | ಳೆಮ್ಮೊಳಗಿಲ್ಲೆನಲು || ೩೪ ||

ಚಿನುಮಯನುಸಿರಿದನಂದಿಂದಿಗು ಖಳ | ರನು ಕೊಲುವರೆ ರಣದಿ ||
ಸೆಣಸಿದು ನಿಶ್ಚೈತನ್ಯದೊಳಿಹೆ ಕಾ | ಮಿನಿಯರ ಕೈಗುಣದಿ || ೩೫ ||

ಭಂಡಾರಿಸಿತು ಸುದರ್ಶನ ಹರೆಯದ | ದಿಂಡೆಯರೂರೊಳಗೆ ||
ಉಂಡಾಡುವ ಭಟನೆನ್ನುವ ಪೆಸರಿಟ್ಟು | ಕೊಂಡಿಹರೈ ಎನಗೆ || ೩೬ ||

ಆದರೆ ನಾನಿಹೆನೊಬ್ಬನ ಸಹಯಕೆ | ಕಾದಲಿಕಸದಳವು ||
ಯಾದವರೊಂದೆಸೆಯಿದರೊಳು ಮನಕೊ | ಪ್ಪಾದುದ ಬೇಡೆನಲು || ೩೭ ||

ಧರಣಿ ಧನಾದಿಗಳಗ್ರಜಗಾದುವು | ತಿರಿದುಂಬೆವು ನಾವು ||
ವರ ಯದುಸೈನಿಕ ಶರಧಿಯನೆಂತಾ | ದರಿಸುವುದೈ ತಿಳುಹು || ೩೮ ||

ಬಡವರು ನಾವೈ ನೀನೇ ನಮ್ಮಯ | ಕಡೆಗಿರಬೇಕೆನಲು ||
ಪೊಡವಿಪ ಕೌರವ ಮಗುಳಿಂತೆಂದನು | ಜಡರುಹನಾಭನೊಳು || ೩೯ ||

**ಭಾಮಿನಿ**

ಹರಿಯೆ ನೀ ಪಾಂಡವರ ಪಕ್ಷವೆ |
ಹೊರತು ನಮ್ಮೊಳಗಾಗುವೆಯ ಹೊ ||

ಕ್ಕಿರಿಯಲಾಗದು ರಣದಿ ನೀನೆಂದೆನುತ ಬೀಳ್ಗೊಂಡು ||
ಭರದಿ ಹಲಧರನೆಡೆಗೆ ಕೌರವ |
ಮರಳಿ ಬರಲಾ ರಾಮ ಮನ್ನಿಸು ||
ತಿರಲು ಕುರುಪತಿ ನಯದಿ ಬಿನ್ನವಿಸಿದನು ಬಲನೊಡನೆ || ೪೦ ||

**ರಾಗ ಕಾಂಭೋಜ ಝಂಪೆತಾಳ**

ಕೇಳು ಯದುಕುಲಚಂದ್ರ ನಿನ್ನೊಡನೆ ನಾ ಬಂದ | ಊಳಿಗವ ಪೇಳ್ವೆ ಲಾಲಿಪುದು ||
ಖೂಳಪಾಂಡವರೊಡನೆ ಕದನಗೆಯ್ವರೆ ನಮ್ಮ | ಪಾಳೆಯಕೆ ಕೃಷ್ಣ ಬಹನೆನುತ || ೪೧ ||

ಇಂದು ನಿಮ್ಮನುಜನಿದ್ದೆಡೆಗೆ ನಾ ಬರೆ ಪಾರ್ಥ | ಬಂದು ವಂದಿಸೆ ನಮ್ಮೀರ್ವರನು ||
ಮಂದಹಾಸದಿ ಕಂಡು ನುಡಿದ ನಾ ಪಾಂಡವರಿ | ಗಿಂದು ಹಲಧರನು ನಿನಗೆನುತ || ೪೨ ||

ಎನಲು ಪಾರ್ಥನು ಒಪ್ಪುತಿರಲಾಗ ನೀವು ನಮ | ಗೆನುತ ನಿಮ್ಮೆಡೆಗೆ ನಲವಿನಲಿ ||
ವನಜಾಕ್ಷ ಬಂದೆ ಕೇಳೆನ್ನ ಪಕ್ಷವನು ನೀ | ನನುಮಾನಿಸದೆ ಪಾಲಿಸುವುದು || ೪೩ ||

**ಭಾಮಿನಿ**

ಎಂದು ಈ ಪರಿಯಿಂದಲಂಧಕ |
ನಂದನನು ಪದಕೆರಗಲಾ ಯದು |
ವಂದಿತನು ಮಗುಳೆದ್ದು ದುರ್ಯೋಧನನ ಮನ್ನಿಸುತ ||
ಎಂದನೆಲೆ ಕುರುಪತಿಯೆ ನಾನಿರೆ |
ಬಂದ ಭಯವೇನೆನುತ ಬಹುಪರಿ |
ನಿಂದಿಸುತ ಮಧುವೈರಿ ಕೃಷ್ಣನ ಕೌರವನಿಗೆಂದ || ೪೪ ||

**ರಾಗ ಮಾರವಿ ಏಕತಾಳ**

ಬಿಡು ಬಿಡು ಶೋಕವ ನುಡಿಯನು ಲಾಲಿಸು | ಪೊಡವಿಪ ಕೌರವನೆ ||
ಹುಡುಗನು ಪಾಂಡವರೊಡಗೂಡಲು ನಾ | ಬಿಡೆ ನಿನ್ನಯ ಪಡೆಯ || ೪೫ ||

ಉದ್ಧವ ಸಾತ್ಯಕಿ ಮೊದಲಾದ್ಯದುವರ | ರಿದ್ದರೆ ಭಯವೇನೈ ||
ಸದ್ದಡಗಿಸುವೆನು ಪಾಂಡವರನು ನಾ | ಯುದ್ಧದೊಳಿದು ದಿಟವು || ೪೬ ||

ಚೋರತನದಿ ನಮ್ಮನುಜೆ ಸುಭದ್ರೆಯ | ಪೋರ ವಿಜಯನೊಯ್ದ ||
ತೀರಿಸುವೆನು ಮನವೈರವ ನೋಡಿಂ | ದೀ ರಣಮಂಡಲದಿ || ೪೭ ||

**ರಾಗ ಭೈರವಿ ಏಕತಾಳ**

ಹಲಧರನೆಂದುದ ಕೇಳಿ | ಕುರು | ಕುಲಪತಿ ಸಂಶಯ ತಾಳಿ ||
ಬಲರಾಮನೊಳರುಹಿದನು | ಮನ | ವೊಲಿಸುತ ಕೌರವ ತಾನು || ೪೮ ||

ನಿಮ್ಮಯ ನುಡಿಯನು ಕೇಳಿ | ನಾ | ಧಿಮ್ಮನೆ ಬರೆ ಮುದ ತಾಳಿ ||
ತಮ್ಮನ ಒಳವಿಲಿ ಶಚಿಯ | ಪತಿ | ಮೊಮ್ಮನಿಗಿತ್ತಿರಿ ಸುತೆಯ || ೪೯ ||

ಎಂದಾ ಕುರುಪತಿ ನುಡಿಯೆ | ಬಲ | ನೆಂದನು ಕೇಳ್ ಕುರುದೊರೆಯೆ ||
ಸಂದೇಹವು ನಿನಗೇಕೆ | ನಾ | ನಿಂದಯ್ತುಹೆ ತವ ಬಲಕೆ || ೫೦ ||

**ಭಾಮಿನಿ**

ನುಡಿಗೆ ತಪ್ಪುವನಲ್ಲ ನೀನೆ |
ನ್ನೊಡನೆ ಬಹುಮಾತುಗಳನಾಡದೆ ||
ನಡೆಯೆನುತ ಕರವಿಡಿದು ನಂಬುಗೆಯಿತ್ತು ಹಲಧರನು ||
ಪೊಡವಿಪನ ಮುಂದಟ್ಟಿ ಯಾದವ |
ಪಡೆಸಹಿತ ಪೊರಮಡಲಿಕಿತ್ತಲು ||
ಜಡಜನಾಭನು ತನ್ನ ಮನದೊಳಗಾಗ ಯೋಚಿಸಿದ || ೫೧ ||

**ವಾರ್ಧಕ**

ಧುರಕೀಗಲಣ್ಣಯ್ಯ ಕುರುಪತಿಯ ಬಲಕೆ ತಾ |
ತೆರಳಿದರೆ ಮತ್ಕಾರ್ಯ ಭಂಗಹೊಂದುವುದೆನುತ |
ಲರಿತಾಗ ಮಾಧವಂ ಜರಡು ಸುರಭಿಯ ಮುಸಲಧರನೆಡೆಗೆ ಕಳುಹಿಸಲ್ಕೆ ||
ಹರುಷದಿಂ ಯಾದವರನೊಡಗೊಂಡು ಸಂಗರಕೆ |
ಬರಲಾಗ ಪಥದೊಳಾ ಸುರಭಿಯಡ್ಡೈಸಲದ |
ಚರರು ತಡೆಯಲು ತಿರುಗಿ ಪೋಗದಿರೆ ಹಲಧರನು ಕರದಿಂದಲದ ಪಿಡಿಯಲು || ೫೨ ||

ಅಸುವಿಲ್ಲದಾ ಸುರಭಿ ವಸುಧೆಯೊಳು ಬೀಳಲಾ |
ವಸುದೇವಸುತ ರಾಮ ಬಸವಳಿದು ಮಾನಸದೊ |
ಳುಸಿರಿದಂ ವಿಧಿವಶದೆ ಪಶುಹತ್ಯಪಾಪ ಸಂಭವಿಸಿತಿನ್ನೇಂಗೆಯ್ವೆನು ||
ಉಸಿರುತಿರಲೀ ತೆರದಿ ಕುಸುಮಾಂಬುಪಿತನಲ್ಲಿ |
ನಸುನಗುತ ಬಂದು ಶೋಕಿಸುತಿರ್ಪ ಬಲನನೀ |
ಕ್ಷಿಸುತೆಂದ ಮಾನಸದಿ ವ್ಯಸನಮೇನೆನಲಾಗ ಅಸುರಾರಿಯೊಡನರುಹಿದ || ೫೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕಪಟನಾಟಕ ಕೇಳು ಕೌರವ | ನೃಪನ ಬಲಕಾನಂದದಿಂದಲಿ |
ವಿಪುಳಬಲ ಕೂಡುತ್ತ ನಾನ | ಯ್ದಪೆನು ಎನುತ || ೫೪ ||

ಕುರುಪತಿಯು ಕಳುಹುತಲಿ ಹಸ್ತಿನ | ಪುರಕೆ ನಾ ಯಾದವರ ಕೂಡುತ |
ಭರದಿ ಪೊರಮಡಲಾಗ ಮಾರ್ಗದಿ | ಜರಡು ಸುರಭಿ || ೫೫ ||

ಬರಲು ಚರರದ ತಡೆಯೆ ಹಿಂದಕೆ | ತೆರಳದಿರಲಾ ವೇಳೆಯಲಿ ನಾ ||
ಕರದಿ ಪಿಡಿಯಲು ಮಡಿದ ಹತ್ಯವು | ದೊರಕಿತನುಜ || ೫೬ ||

ಬಂದ ಪಾತಕ ತೆರಳುವುದು ಹೇ | ಗೆಂದು ಬಲ ಮಾಧವನ ಬೆಸಗೊಳೆ ||
ಮಂದಹಾಸದಿ ನುಡಿದ ಶ್ರೀಗೋ | ವಿಂದ ನಗುತ || ೫೭ ||

**ಭಾಮಿನಿ**

ಸುರಭಿಹತಪಾತಕವು ಭೂಮಿಯ |
ಚರಿಸಿ ಬಲು ತೀರ್ಥಗಳ ಸ್ನಾನವ ||
ವಿರಚಿಸಲು ಪರಿಣಾಮಹೊಂದುವುದೆನಲು ಹಲಧರನು ||
ಹರ ಹರಾ ಎಂದೆನುತ ಕದನವ |
ಮರೆತು ವಿಷಯಾಂತರಕೆ ತೆರಳಲು ||
ಗರುಡವಾಹನನಿತ್ತ ಪಾರ್ಥನೊಳೆಂದನೊಲವಿನಲಿ || ೫೮ ||

**ರಾಗ ಕಾಂಭೋಜ ಝಂಪೆತಾಳ**

ನರನೆ ನೀನೇಕೆ ಮರುಳಾದೆ ಸುರಗಿಯ ಬಿಸುಟು | ಒರೆಯನಂಗೀಕರಿಸಿದಂತೆ ||
ಧುರಧೀರ ರಾಮಾದಿ ಯದುಬಲವನುಳಿದೀಗ | ಬರಿದೆ ನಂಬಿದೆಯೆನ್ನ ಬಿಡದೆ || ೫೯ ||

ನಾವು ಬರಿಗಯ್ಯೊಳೇಂಗೆಯ್ವೆವೀಹದನ ಕೇ | ಳ್ದೇವೇಳುವನೊ ಯುಧಿಷ್ಠಿರನು ||
ದೇವರೆನ್ನುವರೆನ್ನ ನಿಮ್ಮುವರು ನಡೆವುದೇ | ದೇವತನ ಪಗೆಗಳಿದಿರಿನಲಿ || ೬೦ ||

ನರನೆಂದ ನೀನೆಂಬ ಕೌತುಕವ ಬಲ್ಲೆ ಮೃಗ | ಧರ ಕಿರಣದಿಂದಲೀ ಕ್ಷಿತಿಯ ||
ಮೆರೆವುದಗಣಿತ ತಾರೆಗಳಲೇನು ಫಲವು ನೃಪ | ನರಿಯನೇ ನಿಮ್ಮ ಮಹಿಮೆಯನು || ೬೧ ||

ಪರಮೇಶ ಸುಪ್ರೀತ ಪಂಕಜೋದ್ಭವತಾತ | ಸುರಪಾಲನಮಿತ ಶ್ರೀನಾಥ ||
ಶರಣ ನಾ ನಿನಗೆಂಬ ಕರುಣವಿರಲೀಗಲನು | ಕರಿಸು ಸಾರಥಿತನವನೆಂದ || ೬೨ ||

[ಏನೆಂಬೆ ನಾ ನಿನ್ನ ಸೇವಕನೊ ಮರುಳೆಲಾ | ಮಾನಹೀನರ ಮಾತ ಪೇಳ್ದೆ ||
ಮಾನನಿಧಿ ಬಲರಾಮ ಏನ ಪೇಳ್ವನೊ ಇಂಥ | ಹೀನ ಕೆಲಸವ ಪೇಳ್ದೆಯಲ್ಲ || ೬೩ ||

ಕೆಟ್ಟವರು ನೀವೆನುತ ಸಿಟ್ಟಿನಲಿ ಕೌರವನು | ಅಟ್ಟಿರುವ ವನಕೆ ಕೇಳ್ ಸಹಜ ||
ಕೆಟ್ಟು ಹೋಗುವಿರೆಂದು ದೃಷ್ಟಿಸಿಯೆ ನೋಡಿದರೆ | ಇಷ್ಟನಾಡಿದೆಯಲ್ಲ ಪಾರ್ಥ || ೬೪ ||

ಅತ್ತೆಯಣುಗರು ಎನುತಲೆತ್ತಿ ಸಲಹಿದಕೆ ನೀ | ಹತ್ತಿದೆಯಲಾ ಶಿರದ ಮೇಲೆ ||
ಭಕ್ತಿಯಿಂದಲಿ ಹಯದ ಕಾಸಗಾರಿಕೆಯ ತಂ | ದಿತ್ತೆಯಲ್ಲಾ ದೇವನೆನುತ || ೬೫ ||

ಒಮ್ಮೆ ಸೈರಿಸಿದೆ ನೀ ಹೆಮ್ಮೆಯಿಂದಾಡಿದರು | ನಮ್ಮ ತಂಗಿಯ ಗಂಡನೆನುತ ||
ಸಮ್ಮತವಿದಲ್ಲ ನಡೆಯೆಂದು ಮೊಗದಿರುಹಿದ ನ | ಮ್ಮಿಂದಲಾಗುವುದಿಲ್ಲವೆನುತ || ೬೬ ||

ಹರಿಯು ಗರ್ಜಿಸಿ ಮೊಗವ ತಿರುಹಲೀಕ್ಷಿಸಿ ಪಾರ್ಥ | ಮರುಗಿ ಮನದೊಳು ಭೀತಿ ತಾಳ್ದು ||
ಪೊರೆವರಾರೆಮ್ಮುವನು ನೀನಲ್ಲದೆಂದೆನುತ | ಚರಣಕೆರಗಿದನು ಗೋಳಿಡುತ || ೬೭ ||]

**ರಾಗ ನೀಲಾಂಬರಿ ಏಕತಾಳ**

[ದೇವ ನೀ ದಯದೊಳು ನಮ್ಮ | ರಕ್ಷಿಪೆಯೆಂದು | ನಾವು ನಂಬಿಹೆವು ನಿಮ್ಮ ||
ಆ ವಿಪಿನದೊಳ್ ಪಿತನು | ಮಡಿಯಲಿತ್ತೆ | ದೇವ ನೀನಭಯವನು || ೬೮ ||

ಬಂಧುಬಾಂಧವರೆಲ್ಲರು | ವೈರಿಗಳು ಮು | ಕುಂದ ನೀ ದಯವ ತೋರು ||
ಧಾರಿಣಿ ಧನ ಸೈನ್ಯವು | ಕುರುಪತಿಯೊಳು | ಸೇರಿತಿನ್ನೆಂತು ಕಾಂಬೆವು || ೬೯ ||

ಗುರುಭೀಷ್ಮರಿದಿರು ನಿಂತು | ಜಯವಹುದೆಂತು | ಧರೆಯ ಪಾಲಿಸಿದಂತಾಯ್ತು ||
ನಿರತಾರಣ್ಯದೊಳಿಹರೆ | ನಪುಂಸಕರೆಂದು | ಸರಿಯರು ನಗದಿಹರೆ || ೭೦ ||

ಧುರದೊಳು ನಿಂತು ಕಾದಲು | ಸಾಮರ್ಥ್ಯವುಂಟೆ | ಹರಿಯೆ ನೀನರಿತು ಪೇಳು ||
ಶರಣರಾಧೀನನೆಂದು | ಸ್ಮೃತಿಯೊಳ್ ಪೇಳು | ತಿರಲು ಸುಳ್ಳಹುದೆ ಎಂದು || ೭೧ ||

ಚರಿಸಿ ಕಾಂತಾರದೊಳಗೆ | ಬಳಲಿದೆವು | ಪರರ ಸೇವೆಯೊಳ್ ಕಡೆಗೆ ||
ಅರಿಗಳೊಳ್ ಸೋಲುವುದರಿಂದ | ಪ್ರಾಣವನಿಲ್ಲಿ | ತೊರೆವುದೊಳ್ಳಿತು ಗೋವಿಂದ || ೭೨ ||]

**ರಾಗ ಕಾಂಭೋಜ ಝಂಪೆತಾಳ**

[ಎಂದು ಸಾಷ್ಟಾಂಗದಿಂದೆರಗಿ ದುಃಖಿಸಿ ಚರಣ | ದ್ವಂದ್ವದಲಿ ಬಿದ್ದು ನುತಿಸುತಿರೆ ||
ಇಂದ್ರಜಾತನ ನೋಡಿ ಮನಮರುಗಿ ವಸುದೇವ | ನಂದನನು ಕರುಣದಿಂದೊಲಿದು || ೭೩ ||]

[ನರ ನಿನ್ನ ಧೈರ್ಯ ಸಾಹಸ ಪರೀಕ್ಷಿಸಲಾನು | ಒರೆದುದಲ್ಲದೆ ಬೇರೆಯುಂಟೆ ||
ಬರಿದೆ ಬೆದರದಿರು ಶುಕ ನಿಮಗೆ ಪಂಜರನೆಂಬ | ಪರಿಯನರಿಯದೆ ಬೆಚ್ಚಿದೆಯಲಾ ||] || ೭೪ ||

ಪಾದಾಂಬುರುಹಕೆ ಪೊಡಮಟ್ಟು ನುತಿಸುವ ನರನ | ಮಾಧವನು ಸಂತಯಿಸಿ ನುಡಿದ ||
ನೀ ಧೈರ್ಯ ತಾಳು ಸಾರಥಿತನವ ಮಾಳ್ಪೆನೆಂ | ದಾ ಧನಂಜಯನೊಡನೆ ಪೊರಟ || ೭೫ ||

**ಭಾಮಿನಿ**

ಅರಸ ಕೇಳ್ ಬ್ರಹ್ಮಾಡಕೋಟಿಯ |
ಧರಿಸಿ ಗರ್ಭದಿ ಮೆರೆವ ಚಿನ್ಮಯ |
ನರನ ಸಾರಥಿಯಾದಮೇಲುಳಿದವರಪಾಡೇನು ||
ಹರ ಹರಾ ಮನುಜಾತರಲಿ ಸಿತ |
ತುರಗ ತಾನಿನ್ನೇಸು ಧನ್ಯನೊ |
ಶರಣರಲಿ ಮಗುಳೆಂತು ದಯವೋ ಭಕ್ತವತ್ಸಲಗೆ || ೭೬ ||

**ರಾಗ ಭೈರವಿ ತ್ರಿವುಡೆತಾಳ**

ಈ ತೆರದೊಳಸುರಾರಿ ದಿವ್ಯ ವ | ರೂಥವಡರಿದು ಗಾಯಕರ ಸಂ ||
ಗೀತ ಪೊಗಳಿಕೆ ವಾದ್ಯನಿನದದಿ | ಜಾತಿಗಣಿಕೆಯರುಗಳ ನಾಟ್ಯದೊ ||
ಳೋತು ಮನಿವಿಟ್ಟಂಬುಜಾಸನ | ತಾತ ಕಂಸವಿಘಾತ ಲಕ್ಷ್ಮೀ ||
ನಾಥ ಸಾತ್ಯಕಿಸಹಿತ ಯಮಸಂ | ಜಾತನೆಡೆಗೆಯ್ತಂದನತ್ಯಾ ||
ನಂದಕರದಿ | ನರನೊಡ | ನಂದು ಭರದಿ || ೭೭ ||

ವರ ಯುಧಿಷ್ಠಿರನಿತ್ತ ಮುರಹರ | ನರನಿಗೊಲಿದನೊ ಕೌರವೇಂದ್ರಗೆ |
ಕರುಣವಾದನೊ ಎನುತ ಚಿಂತಿಸು | ತಿರಲು ಚಾರಕ ಬಂದು ಪೇಳ್ದನು ||
ಹರಿ ಕಿರೀಟಿಗೆ ಸೂತನಾಗಿಯೆ | ತೆರಳಿ ಬಹನಿನ್ನಾರು ಲೋಕದಿ ||
ಸರಿಸಮಾನರು ನಿನ್ನ ಭಾಗ್ಯಕೆ | ಸರಸಿಜಾಕ್ಷನನಿದಿರುಗೊಳ್ಳೆಂ ||
ದೆರಗಿ ನಿಂದ | ಭೂಪಗೆ | ಹರುಷದಿಂದ || ೭೮ ||

**ವಾರ್ಧಕ**

ಕೇಳ್ದವನಿಪಂ ಚಿಂತೆಯನ್ನುಳಿದು ಧೈರ್ಯಮಂ |
ತಾಳ್ದಾ ವಿರಾಟ ದ್ರುಪದಾದ್ಯರೊಡಗೊಂಡು ಸಿರಿ |
ಯಾಳ್ದಿಹನ ಬಳಿಗೆ ಪೊಂದಳಿಗೆಯಂ ದರ್ಪಣವ ಪಿಡಿದವರ ಶೋಭಾನದಿ ||
ಪೋಲ್ದಪ್ಸರಾಂಗನೆಯರಿಂ ನರ್ತಿಸುವ ಪೆಣ್ಗ |
ಳೋಳ್ದಿವ್ಯತರವಾದ ಬಿರುದಿನಿಂ ವಾದ್ಯರವ |
ದೋಳ್ದಾನವಾರಿಯಂ ಕರೆತಂದು ಕಾಂಚನದ ಪೀಠವನ್ನೇರಿಸಿದನು || ೭೯ ||

**ಕಂದ**

ಅಚ್ಯುತನಂ ಅತಿಭಕ್ತಿಯೊ |
ಳರ್ಚಿಸಿ ಪದತೀರ್ಥವ ತಾ ಶಿರದೊಳಗಾಂತಂ ||
ಸಚ್ಚಿನ್ಮಯನಂಪ್ರಿಯೊಳಂ |
ಸಚ್ಚರಿತಂ ಪೊಡಮಡುತಿಂತೆಂದಂ ನಯದಿಂ || ೮೦ ||

**ರಾಗ ಮಧ್ಯಮಾವತಿ ಏಕತಾಳ**

ದೇವ ನೀ ಚಿತ್ತೈಸಿದೇನಯ್ಯ ನಿನ್ನ | ಸೇವಕರ್ಮೇಲಾಯ್ತೆ ಪೂರ್ಣ ಕಾರುಣ್ಯ ||
ನಾವೆ ಧನ್ಯರು ನಮಗಿನ್ನಾವ ಭವದ | ನೋವಿಲ್ಲವೆನಲೆಂದ ಸಾಮಜವರದ || ೮೧ ||

ದೇವತನವು ನಮಗಿನ್ನೆಲ್ಲಿ ನರಗೆ | ನಾವೆ ಸಾರಥಿಯಾದ ಮೇಲಿನ್ನು ನಿಮಗೆ ||
ಭೂವಳಯದೊಳೆಣೆಯಾರೆಂದಚ್ಯುತನು | ಕೇವಲ ಕೃಪೆಯೊಳಪ್ಪಿದ ಕಾಲಜನನು || ೮೨ ||

ದೇವರ ದೇವ ನೀನಹುದು ಮೂಜಗದಿ | ದೈವ ಬೇರಿನ್ನುಂಟೆ ಭಕ್ತರ ಮುದದಿ ||
ಆವಾವ ರೀತಿಯೊಳ್ ಪೊರೆವೆಯೊ ಎಂದು | ಪಾವನಚರಿತನ ನುತಿಸಿದನಂದು || ೮೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳಿತ್ತಲು ಸುಯೋಧನ | ಕರೆಸಿ ಗುರು ಗಾಂಗೇಯ ಕೃಪರೊಡ ||
ನಿರದೆ ಮನದಾಲೋಚನೆಯ ತಾ | ನೊರೆದನಾಗ  || ೮೪ ||

ಬಿಡಲಿ ರಾಜ್ಯವನೆಂದಹಿತ ನ | ಮ್ಮೆಡೆಗೆ ಕಳುಹಲು ನಾ ರಣಾಗ್ರದಿ ||
ಕೊಡುವೆನೆಂದಚ್ಯುತಸಹಾಯವ | ಪಡೆಯಲಾಗಿ  || ೮೫ ||

ಘೋರನೊದಗಲು ಪಾರ್ಥ ಮುಂಬರಿ | ದಾ ರಮೇಶನನೊಯ್ದ ನಮಗಾ ||
ಧೀರ ಬಲರಾಮಾದಿ ಯದುಪರಿ | ವಾರವಾಯ್ತು  || ೮೬ ||

ಇನ್ನು ಭಯವೇನವರು ಭೂತಳ | ವನ್ನು ಸೋತಿಹರೈಸೆ ಮತ್ತಾ ||
ರಣ್ಯವಾಸಿಗಳೊಡನೆ ಜಗಳವ | ಹಣ್ಣಿದಿಂದು  || ೮೭ ||

ರಸೆಯನಿತ್ತರೆ ಪಾರ್ಥಿವರ ಪೌ | ರುಷಕೆ ಬಹುದಪಕೀರ್ತಿ ಮಗುಳನಿ ||
ಮಿಷರು ನಗುವರು ಜರೆವರೈ ನಾ | ಲ್ದೆಸೆಯಧಿಪರು  || ೮೮ ||

**ಭಾಮಿನಿ**

ಪಾಂಡುಜಾತರನೈದೆ ಸಮರದಿ |
ಭಂಡುಮಾಡಿಯೆ ನಮ್ಮ ಭೃತ್ಯರ ||
ತಂಡದಲಿ ಸೇರಿಸದಿರಲ್ಕಿದು ಮೀಸೆಯಲ್ಲೆಂದು ||
ಗಂಡುಗಲಿ ತಾ ನುಡಿಯೆ ಗುರುಕೃಪ |
ರಂಡಲೆದು ನೀತಿಗಳ ಪೇಳಿದ ||
ರಂಡಜಾಧಿಪರಥನ ಭಕ್ತರೊಳಹಿತ ಬೇಡೆಂದು  || ೮೯ ||

**ರಾಗ ಕೇದಾರಗೌಳ ಅಷ್ಟತಾಳ**

ಎಲೆ ಭೂಪ ಕೇಳ್ ಪಾಂಡುಜಾತರೊಡನೆ ನೀನು | ಗಳಿಸದಿರಹಿತವನು ||
ನಳಿನಾಕ್ಷನಾ ಕಡೆಗಾದಮೇಲ್ ಜಯದ ಹಂ | ಬಲು ಬೇಡ ಸಾರ್ದೆವಿನ್ನು || ೯೦ ||

ತಿಳಿದು ನೋಡವರ ನೀ ಹಳುವಕಟ್ಟಿದರೂ ಶ್ರೀ | ನಿಳಯನ ಕರುಣದಲಿ ||
ಕಳೆದು ವಿವೇಕದೊಳಿಳೆಯೆ ಕೇಳ್ದರೆ ನಿನ | ಗಳಲೇನು ಸಹಜರಲಿ || ೯೧ ||

ಆರಿಗವನಿ ಸ್ಥಿರ ಸಾಮ್ರಾಜ್ಯ ಮರುಳೆ ಕೇಳ್ | ಮೂರು ದಿನದ ಬಾಳ್ವೆಗೆ ||
ಮೀರಿದೆ ಸತ್ಯವನೆನಿಸಿಕೊಳ್ಳಲು ಬೇಡ | ಧಾರಿಣಿ ಕೊಡಿಸವರ್ಗೆ || ೯೨ ||

ನೀತಿಯ ಪೇಳ್ದರೆ ನಾವೀಗ ಮನಕೆ ಸಂ | ಪ್ರೀತಿಯಪ್ಪುದೆ ನಿನಗೆ ||
ಸೂತಜಾದಿಗಳಾಪ್ತರವರ ಬಿಟ್ಟಂತರ್ಯ | ವೇತಕೆ ನಮ್ಮೊಳಗೆ || ೯೩ ||

ಕಂಡಕಂಡವರ ಬೋಧೆಯ ಕೇಳಿ ಕುಣಿದಾಡಿ | ಭಂಡಾಗಬೇಡ ನೀನು ||
ಪಾಂಡುಜಾತರನೊಡಗೂಡಿ ಸ್ವಾಮಿಯ ಮರೆ | ಗೊಂಡೀಗ ಬದುಕೆಂದನು || ೯೪ ||

**ವಾರ್ಧಕ**

ಕೋವಿದರ ನುಡಿಗೆಂದ ಕನಲುತ್ತ ಪ್ರಾಜ್ಞರೆಂ |
ದೀ ವಿಬುಧರೊಡನೆ ನಮ್ಮಂತರ್ಯಮಂ ಪೇಳ್ದ |
ಡಾ ವೈರಿಗಳ ಪೊಗಳ್ವ ಜಾತಿಸ್ವಭಾವಮಂ ಬಿಡುವರೇನೀ ಪಾರ್ವರು ||
ದೇವ ಬಲಭದ್ರಾದಿ ಯದುಬಲದ ಮುಂದೆ ತುರು |
ಗಾವವನ ವಿಪಿನವಾಸಿಗಳಿಂದಲಪ್ಪುದೇ |
ನೀ ವಿಷಯಕೆಂದು ಜರೆದಾ ಕರ್ಣನಾನನವನೀಕ್ಷಿಸಲು ವಿವರಿಸಿದನು || ೯೫ ||

**ರಾಗ ಮಾರವಿ ಏಕತಾಳ**

ಲಾಲಿಸು ಕೌರವ ವಿಪ್ರರ ಪೌರುಷ | ದೇಳಿಗೆ ಭೋಜನದಿ ||
ಲೀಲೆಗಳಲ್ಲದೆ ಮೆರೆವುದೆ ರಿಪುಸ | ಮ್ಮೇಳದ ಸಮ್ಮುಖದಿ || ೯೬ ||

ಇವರೆಂದೆಂದಿಗು ಪಾಂಡುಸುತರ ಪೊಗ | ಳುವರೈ ಕ್ಷಿಪ್ರದಲಿ ||
ಇವರತ್ತಲು ಹೊರಡಿಸು ನಾನಿಹೆನಾ | ಹವಕೆ ಸರಾಗದಲಿ || ೯೭ ||

ರಕ್ಷಿಪಂಗಹಿತವಪೇಕ್ಷಿಸುವರಮೊಗ | ವೀಕ್ಷಿಸಬಹುದೇನೈ ||
ಈಕ್ಷಣ ಕಳುಹಿಸೆನಲೀಕ್ಷಿಸುತೆಂದರು | ಪೇಕ್ಷೆಯೊಳರ್ಕಜಗೆ || ೯೮ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ಸೂತನ ಮಗನೆ ನಿನ್ನಯ | ಬಲವ ಪೂರ್ವದೊಳರಿತು ಬಲ್ಲೆವು ||
ಲಲನೆಯರ ಸಮ್ಮುಖದಿ ವಿಟರ | ಗ್ಗಳಿಕೆಯಂತೆ || ೯೯ ||

ಧೀರನಹುದಾಗಿರಲು ಖೇಚರ | ವೀರನೀತನನೊಯ್ವ ಸಮಯದೊ ||
ಳಾರ ಮರೆಯಲಿ ಸೇರಿ ಬದುಕಿದೆ | ನಾರಿಯಂತೆ || ೧೦೦ ||

ತುರುವಿಗೋಸುಗ ಬಂದು ಪಾರ್ಥಿವ | ರೆರೆಯ ಫಲುಗುಣ ನಿಲ್ಲಲಾತನ ||
ಹೊರೆಯೊಳೀ ಪೌರುಷವ ಮೆರೆಸದೆ | ಮರಳಿದೇಕೈ || ೧೦೧ ||

ಮೂಢರಿಗೆ ಬಹು ನೀತಿಮಾರ್ಗವ | ನಾಡಿ ಫಲವೇನೊದಗಿ ಬರುತಿಹ ||
ಕೇಡನರಿಯದೆ ಬಗುಳುತಿಹೆ ರಣ | ಹೇಡಿಯಂತೆ || ೧೦೨ ||

ನೋಡದಿರು ನೀನೆಮ್ಮ ವದನವ | ನೀಡಿಸೈ ವೀಳೆಯವ ರಿಪುಗಳ ||
ಕೂಡುವೆವು ತೋರಲ್ಲಿ ಶೌರ್ಯಸ | ಗಾಢಿಕೆಯನು || ೧೦೩ ||

**ಭಾಮಿನಿ**

ಕೇಳುತಲಿ ಕಲಿ ಕರ್ಣ ಕಲ್ಪದ |
ಶೂಲಿಯಂತಾರ್ಭಟಿಸುತವದಿರ |
ಕೋಳುಗೊಂಬೆನೆನುತ್ತ ಖಡ್ಗವ ಜಡಿದು ಮುಂಬರಿಯೆ ||
ಮೇಲುವರಿದುದು ಕಾರ್ಯವೆಂದು ನೃ |
ಪಾಲನುಭಯರ ಮನದ ರೋಷವ ||
ಬೀಳುಗೊಳಿಸಿದ ನಿಮ್ಮೊಳಗೆ ಕಡಿದಾಟ ಬೇಡೆಂದು || ೧೦೪ ||

**ವಾರ್ಧಕ**

ಅರಸ ಕೇಳನಿಬರಂ ಕೌರವನೊಡಂಬಡಿಸಿ |
ಕರೆದು ಸಂಜಯನ ಧರ್ಮಜನಲ್ಲಿಗಂ ಪೋಗಿ |
ಧರೆಯ ಸೋತವರಿಗಂ ಮಗುಳೆ ಯುದ್ಧದಿ ಸೋಲುಗೆಲವರಿಯದಿತ್ತರಿಳೆಯ ||
ಹರುಷಗೊಳ್ಳದು ಪಾರ್ಥಿವರಿಗೆ ಯೋಗ್ಯವಿದಲ್ಲ |
ಹರಿಬದೊಳು ಸತ್ಯದಿಂ ಕಾದಲನುವಾಗಲೆಂ |
ದರುಹಿ ಬಾರೆನಲಾತನಯ್ದಿದಂ ತವಕದಿಂದಂತಕಾತ್ಮಜನ ಬಳಿಗೆ || ೧೦೫ ||

**ಭಾಮಿನಿ**

ಜನಪನಾ ಸಂಜಯನ ಕಾಣುತ |
ಸನುಮತದೊಳುಪಚರಿಸುತಿರಲಾ |
ವನಜಸಖನಪರಾಬ್ಧಿಗಿಳಿಯಲು ಕಳೆದು ಯಾಮಿನಿಯ ||
ದಿನಪ ಮೂಡಣ ಗಿರಿಯೊಳೆಸೆಯಲು |
ದನುಜದಲ್ಲಣನಾಜ್ಞೆಯಲಿ ಯಮ |
ತನುಜನೋಲಗವಿತ್ತನಿಂದ್ರನ ಸಭೆಗೆ ಮಿಗಿಲೆನಿಸಿ || ೧೦೬ ||

**ರಾಗ ಕೇದಾರಗೌಳ ಅಷ್ಟತಾಳ**

ಕರೆಸಿ ಸಂಜಯನ ಕುಳ್ಳಿರಿಸಿ ಧರ್ಮಜ ಕೇಳ್ದ | ಗುರುಭೀಷ್ಮ ಮುಂತಾಗಿರ್ದ ||
ಹಿರಿಯಯ್ಯ ಗಾಂಧಾರಿಯಣುಗರ ಕ್ಷೇಮವ | ಸರಸಿಜಾಂಬಕನುಸಿರ್ದ || ೧೦೭ ||

ಕೃತ್ರಿಮದಲಿ ಪಾಂಡುಪುತ್ರರ ಸೋಲಿಸಿ | ಧಾತ್ರಿಯನೆಲ್ಲವನು ||
ಶತ್ರುಗಳಿಲ್ಲವೆಂದಾಳುವ ಭೂಪಗೆ ಸ್ವಸ್ಥವೇನುಸಿರೆಂದನು || ೧೦೮ ||

ಬಳಿಕನಿಲಜನೆಂದ ನಿಮ್ಮೊಡೆಯನ ತೊಡೆ | ಗಳಿಗೆ ಸುಖವೆ ನಿರತ ||
ಬಲವಂತ ದುಶ್ಯಾಸನಾದ್ಯರ ಕಾಯ ಕೋ | ಮಲತರವೇನೆನುತ || ೧೦೯ ||

ಬೆಸಗೊಂಡನರ್ಜುನ ಗೋಗ್ರಹಣದಿ ಮೊನ್ನೆ | ವಸುಧೀಶ ಕರ್ಣಾದ್ಯರು ||
ಬಸವಳಿದಿಹ ತಾಪವಡಗಿಯೆ ಗಾತ್ರದಿ | ಕುಶಲರೆ ಪೇಳೆಂದನು || ೧೧೦ ||

ತರುಣಿ ಪೇಳ್ದಳು ಭಾವನವರನುಜರು ಸಹ | ಶರಕೇಳಿಗಯ್ದಾಗಲು ||
ವರಚಿತ್ರಸೇನ ಬಂಧಿಸಿದ ನೇಣಿನ ನೋವು | ಸರಿದೀಗ ಸುಖವೆ ಪೇಳು || ೧೧೧ ||

**ಭಾಮಿನಿ**

ಎನಲು ಸಂಜಯ ನುಡಿದ ತನ್ನೊಳ |
ಗಿನಿತು ವೈರಾಗ್ಯಗಳು ಏತಕೆ |
ಜನಪನವನಿಯ ಸೋತಮೇಲನುವರದೊಳಾಯುಧದ ||
ಮೊನೆಯೊಳೀವುದು ಕ್ಷಾತ್ರವಂಶದ |
ಗುಣದ ಪದ್ಧತಿ ಸತ್ಯದಿಂದಲೆ |
ಸೆಣಸಲನುವಾಗಿರಲಿ ಪೇಳೆನಲೈದೆ ತಾನೆಂದ || ೧೧೨ ||

**ರಾಗ ಕಾಂಭೋಜ ಝಂಪೆತಾಳ**

ಅನಘ ಕೇಳ್ದಾಗ ಕಾನನವಾಸಿಗಳಿಗೆ ಕುಂ | ಭಿನಿಯಾಳ್ವ ಕಡುಬಲಾಢ್ಯರಲಿ ||
ಸೆಣಸುವ ಪರಾಕ್ರಮಗಳುಂಟೆ ವನವೇ ಸೌಖ್ಯ | ರಣದಿ ಸೋಲ್ವುದರಿಂದಲೆನಲು || ೧೧೩ ||

ನಳಿನಾಕ್ಷ ನಗುತ ಕೌರವ ಜಾತಿವಾತ್ಸಲ್ಯ | ಗಳ ತಪ್ಪಿ ನಡೆವನಲ್ಲೆಂಬ ||
ನೆಲೆಯರಿತೆವಂತಿರಲಿ ಸತ್ಯವಿದ್ದರೆ ಸೋತ | ನೆಲನ ಜೈಸುವರನಿಬರೆಂದ || ೧೧೪ ||

ಮರುತಸಂಭವ ಗದೆಯನಾಡಿಸುತಲಂತಕನ | ಪುರದಿ ಠಾಣ್ಯಗಳನ್ನು ನೋಡಿ ||
ತರುಣಿ ತನಯರಿಗೆ ಗರಳವನಿತ್ತು ನಿಮ್ಮವರ | ಧುರಕೆ ಬರಹೇಳೆಂದ ನಗುತ || ೧೧೫ ||

ಇಂದ್ರಸುತನೆಂದ ಜೂಜಿನ ಸಭೆಯೊಳಾಡಿದುದ | ನೊಂದ ಮರೆಯದೆ ಸೆರಗಿಲದನು ||
ಚಂದದಲಿ ಗಂಟಿಕ್ಕಿಕೊಂಡು ತೀರ್ಚಲಿ ರಣದೊ | ಳಂದು ಪೇಳ್ದಿಹ ಭಾಷೆಗಳನು || ೧೧೬ ||

ತರುಣಿ ದ್ರೌಪದಿ ಪೇಳ್ದಳಂದು ಬಿಡಿಸಿದ ಮುಡಿಯ | ಮರಳಿ ಬಂಧಿಸಲಿಲ್ಲವೆನುತ ||
ಮರುಗುತಿಹಳಿನ್ನು ಕಟ್ಟಿಸುವಂತೆ ಪೇಳ್ದಳೆಂ | ದರುಹು ದುಶ್ಯಾಸನನೊಳೆನುತ || ೧೧೭ ||

ವೈರಾಟ ಪಾಂಚಾಲ ಮಾದ್ರೇಯರಾಗ ಖತಿ | ಯೇರಿ ಕುರುಬಲವನಸಿಯರೆದು ||
ಈ ರಸೆಯ ಧರ್ಮಜಗೆ ಮಾಳ್ಪೆವೆಂದಾರ್ಭಟಿಸ | ಲಾ ರವಿಜಸುತ ಸೈರಿಸಿದನು || ೧೧೮ ||

**ಭಾಮಿನಿ**

ಕೆಡಿಸದಿರಿ ಕಾರ್ಯವನು ರೋಷವ |
ಬಿಡಿರಿ ಗುಣ ಮುಂದಿರ್ಪುದೆನುತಾ |
ಕಡುವಿರೋಧವ ನಿಲಿಸಿ ಸಂಜಯಗೆಂದ ನಾಳಿನಲಿ ||
ಖಡುಗವಾಗಲಿ ನೀತಿಯಾಗಲಿ |
ಒಡೆಯ ಲಕ್ಷ್ಮೀರಮಣನಯ್ತಹ |
ಪೊಡವಿಪಗೆ ಪೇಳೆನಲು ನಡೆದ ಮುರಾರಿಗಭಿನಮಿಸಿ || ೧೧೯ ||

**ವಾರ್ಧಕ**

ಅರಸ ಕೇಳ್ ಸಂಜಯಂ ಗಜನಗರಮಂ ಪೊಕ್ಕು |
ಧರಣೀಶ ಧೃತರಾಷ್ಟ್ರಗೀಪರಿಯ ಸೂಚಿಸಲ್ |
ಮರುಗುತಾ ರಾತ್ರಿಯಲಿ ನಿದ್ರೆ ಬಾರದೆ ವಿದುರನಂ ಕರೆಸುತವನಿಂದಲಿ ||
ವರನೀತಿತತ್ತ್ವ ಧರ್ಮಂಗಳ ರಹಸ್ಯಮ |
ನ್ನರಿತು ಪೇಳಿನ್ನು ತನಗಾತ್ಮವಿದ್ಯೆಯ ನೆಲೆಯ |
ಪರಮ ಮಂತ್ರಾಕ್ಷರದ ಬೀಜವನೆನಲ್ಕೆ ಕೈಮುಗಿದೆಂದನಂಧನೃಪಗೆ || ೧೨೦ ||

**ಭಾಮಿನಿ**

ಅರಸ ಕೇಳ್ ಪರತತ್ತ್ವವಿದ್ಯೆಯ |
ನರುಹಿಸುವಡೆ ಸನತ್ಕುಮಾರನೆ |
ಹೊರತು ಮಿಕ್ಕಾದವರಿಗಸದಳವಾ ಮುನೀಶ್ವರನ ||
ಸ್ಮರಿಸೆನಲು ಮಾನಸದಿ ನೆನೆದರೆ |
ಕರುಣದಿಂದಯ್ತರಲಿಕಾತನ |
ಚರಣಪೂಜೆಯ ಮಾಡಿ ಬಲಬಂದೆರಗುತಿಂತೆಂದ || ೧೨೧ ||

**ರಾಗ ಸಾಂಗತ್ಯ ರೂಪಕತಾಳ**

ಮುನಿಪ ಕೇಳ್ ಕರುಣದಿ ಬ್ರಹ್ಮೋಪದೇಶವ | ನೆನಗೆ ನೀ ಶ್ರುತಗೊಳಿಸಯ್ಯ ||
ಎನಲಾಗ ಪರತತ್ತ್ವವಿದ್ಯಾತಿಶಯಗಳ | ನನುಕರಿಸಿದು ಬಳಿಕೆಂದ || ೧೨೨ ||

[ತೋರುವ ಸಕಲ ಪ್ರಪಂಚವೆಲ್ಲವು ಮಾಯೆ | ತೋರುವುದಕೆ ನಾಶವುಂಟು ||
ತೋರದಿರುವ ವಸ್ತುವಿಗೆ ನಾಶವಿಲ್ಲ ಕೇಳ್ | ತೋರದಿರ್ಪುದೇ ಪರಬ್ರಹ್ಮ || ೧೨೩ ||

ಮೂರು ತನುವು ಮೂರು ಗುಣವು ಕಾಲಂಗಳು | ಮೂರವಸ್ಥೆಯು ಮೂರೀಷಣವು ||
ಮೂರು ಶಕ್ತಿಯು ತೊಂಭತ್ತಾರು ತತ್ತ್ವಂಗಳ | ಮೀರಿರ್ಪುದೇ ಪರಬ್ರಹ್ಮ || ೧೨೪ ||

ಮರೆವುದಾ ಸಕಲವ ಮನದಲ್ಲಿ ಮನವನ್ನು | ಮರೆವುದಾ ಮತಿಯಿಂದ ಮತಿಯ ||
ಮರೆವುದಾತ್ಮಾನಂದದೊಳಗಾತ್ಮಾನಂದವ | ಮರೆವುದು ಬರಿಯರಿವಾಗಿ || ೧೨೫ ||

ಮನವಳಿದೇಕತ್ವವಾಗಿರಲದು ಮುಕ್ತಿ | ಯೆನುತ ಬೋಧಿಸುತಂಧನೃಪನ ||
ಮನದ ಸಂದೇಹವನೆಲ್ಲ ಬೀಳ್ಕೊಳಿಸುತ್ತ | ಪುನರಪಿ ಪೇಳ್ದನಾ ನೃಪಗೆ || ೧೨೬ ||]

ಜನಪ ಕೇಳ್ ನಿನ್ನ ನಂದನರು ಪಾಂಡವರೊಳು | ರಣಕೆ ಸನ್ನಹ ಗೆಯ್ವರಂತೆ ||
ಘನತೆಯಲ್ಲನಿಬರ ತನುವಿಗೆ ಹೊಣೆಯಾಗಿ | ದನುಜಾರಿ ಕಾಯ್ದುಕೊಂಡಿಹನು || ೧೨೭ ||

ದೇಶಕೋಶವನೆಲ್ಲ ಸೆಳೆಕೊಂಡು ಕಾಂತಾರ | ವಾಸಕಟ್ಟಿದರಿನ್ನವರ್ಗೆ ||
ವಾಸುದೇವನ ಕೃಪೆಯಿಲ್ಲದಿರ್ದಡೆ ಮತ್ತೆ | ಲೇಸಾಗಲುಂಟೆ ನೀ ನೋಡೈ || ೧೨೮ ||

ಕ್ಷೆಣಿಭಾರಕರ ನೀನೇಸು ಮಕ್ಕಳ ಪೆತ್ತ | ರೇನಂಗವಾಯ್ತಯ್ಯ ಜಗದಿ ||
ವಾನರಧ್ವಜನೊಬ್ಬ ನಿಲಲಾತನುರುಬೆಗಿ | ನ್ನಾನುವರುಂಟೆ ತ್ರೈಜಗದಿ || ೧೨೯ ||

ಇನ್ನಾದರೊಮ್ಮೆ ನಿನ್ನುಣುಗರ್ಗೆ ಬುದ್ಧಿಯ | ಚೆನ್ನಾಗಿ ತಿಳುಹಿ ಧರ್ಮಜನ ||
ಮನ್ನಿಸಿ ಕೃಷ್ಣನ ಮರೆ ಹೊಕ್ಕು ಬದುಕುವು | ದನ್ಯೋನ್ಯವೆಂದನಾ ಮುನಿಪ || ೧೩೦ ||

**ಭಾಮಿನಿ**

ಇನಿತು ನಾನಾ ವಿಧದ ಬೋಧೆಗ |
ಳನು ಧರಾಧಿಪಗೊಲಿದು ಪೇಳ್ದಿರ |
ಲನಿತರಲಿ ದಿನಮಣಿಯುದಯಿಸಲು ನೃಪನ ಸಂತಯಿಸಿ ||
ಮುನಿಪ ತನ್ನಾಶ್ರಮಕೆ ತೆರಳಲು |
ಜನಪನಿತ್ತಲು ನಂದನರ ದು |
ರ್ಗುಣಗಳನು ನೆನೆನೆನೆದು ಚಿಂತಿಸುತಿರ್ದ ದುಗುಡದಲಿ || ೧೩೧ ||

**ರಾಗ ನೀಲಾಂಬರಿ ಆದಿತಾಳ**

ಅಕಟ ನಾನೇನೆಂಬೆ ಮಮ ಬಾ | ಲಕರ ದುರ್ಬುದ್ಧಿಯನು ||
ರಕುತಮದದಿ ಪಿತನಿಲ್ಲದ | ಸುಕುಮಾರಕರನ್ನು || ೧೩೨ ||

ಸಕಲ ಬಗೆಯೊಳಳಲಿಸುವುದ | ಪ್ರಕಟಿಸಲೇಕಿನ್ನು ||
ಸುಕೃತಿಗಳಾದುದರಿಂದ ಕಾಯ್ದ | ವಿಕಸಿತಾಕ್ಷ ತಾನು || ೧೩೩ ||

ದೇಶಕೋಶಾದಿಗಳ ಬಿಡಿಸಿ | ಮೋಸದಿ ಕಾನನದ ||
ವಾಸಕಟ್ಟಿದರು ಸತ್ಯ | ದಾಸೆಯೊಳು ನಡೆದ || ೧೩೪ ||

ಭಾಷೆ ಕಳೆದ ಮೇಲೆ ತಪ್ಪೇ | ನಾ ಸೂನುಗಳಿಂದ ||
ನಾಶವಹರು ಇಳೆಯ ನೆವದೊ | ಳೀ ಸುತರಿನ್ನೆಂದ || ೧೩೫ ||

**ಭಾಮಿನಿ**

ಏಕೆ ತನಗವಸಾನ ಬಾರದು |
ಆ ಕಮಲಸಂಭವನ ಬರಹವು |
ಏಕವಾದುದೆ ಫಣೆಯೊಳಕಟಾ ಸುತರ ದುರ್ಗುಣರ ||
ಲೋಕಲೋಕ ಪ್ರಸಿದ್ಧವಾಯ್ತು ಪು |
ರಾಕೃತದ ಫಲ ಮುಪ್ಪಿನಲಿ ಮೈ |
ಸೋಕಿತಕಟೆನ್ನಂತ ಪಾಪಿಗಳಾರು ಎನುತಿರ್ದ || ೧೩೬ ||

**ವಾರ್ಧಕ**

ರಾಜಕುಲತಿಲಕ ಕೇಳಿತ್ತಲು ಸುಯೋಧನಂ |
ರಾಜೀವಮಿತ್ರನುದಯದೊಳೋಲಗಂಗೊಟ್ಟು |
ರಾಜಪತಿ ಧೃತರಾಷ್ಟ್ರ ಗುರು ಭೀಷ್ಮ ಶಕುನಿ ಕೃಪ ಕರ್ಣಾದಿ ಭಟರು ಸಹಿತ ||
ರಾಜಿಸುವ ಛತ್ರ ಚಾಮರ ಗೀತ ವಾದ್ಯದಿ ವಿ |
ರಾಜಿಪ ಸಭಾಸ್ಥಳಕೆ ಸಂಜಯನ ಕರೆದು ಯಮ |
ರಾಜನಣುಗನ ವಾರ್ತೆಯಂ ಪೇಳ್ವುದೆನಲಾಗ ಬಿನ್ನವಿಸಿದಂ ಭರದೊಳು || ೧೩೭ ||

**ರಾಗ ತೋಡಿ ಅಷ್ಟತಾಳ**

ಲಾಲಿಸು | ಭೂಪ | ಲಾಲಿಸು ||ಪ||

ಲಾಲಿಸು ಕುರುಭೂಪಾಲಕ ಚಿತ್ತವಿಟ್ಟು |
ಶೀಲ ಧರ್ಮಜನ ವಾರ್ತೆಯ ಕಿವಿಗೊಟ್ಟು || ಲಾಲಿಸು ||ಅ||

ಶಿವ ಶಿವ ಯಮಜನೋಲಗಸಿರಿಯನ್ನು |
ವಿವರಿಸಲರಿದು ಫಣೀಶ್ವರಗಿನ್ನು ||
ಹವಣವಲ್ಲೆನಗೆ ಕೇಳ್ ಹರಿಯ ಕಾರುಣ್ಯ |
ಭವನವಾಗಿಹುದನಿಬರ್ಗೆ ಸಂಪನ್ನ || ಲಾಲಿಸು || ೧೩೮ ||

ನಿಮ್ಮ ಸರ್ವರ ಕುಶಲವ ಕೇಳ್ದ ನೃಪನು |
ನಮ್ಮಯ ಬರವೇನೆನಲು ನೀನೆಂದುದನು ||
ಧರ್ಮಜಗುಸಿರಲು ವನವಾಸಿಗಳಿಗೆ |
ಮರ್ಮವೇತಕೆ ಭೂಪರೊಳಗೆಂದ ಕಡೆಗೆ || ಲಾಲಿಸು || ೧೩೯ ||

ಶ್ರೀಲೋಲನೆಂದ ಪಾಂಡವರ ಕೃತ್ರಿಮದಿ |
ಸೋಲಿಸಿ ಪಗೆಯಿಲ್ಲೆಂದಿಹ ಭೂಪ ಸುಖದಿ ||
ಬಾಳಿಕೊಂಡಿರ್ಪನೆ ಸತ್ಯಗಳಿರಲು |
ಆಳುವರಿಳೆಯ ಸೋತವರೆಂದು ಕೇಳು || ಲಾಲಿಸು || ೧೪೦ ||

ಮಿಗೆ ಭೀಮ ಕೇಳ್ದ ನಿನ್ನೂರುಗಳ್ಸುಖವ |
ಮಗುಳೆ ದುಶ್ಯಾಸನಾದ್ಯರ ಕಾಯದೊಲವ ||
ಖಗಜಪುರದೊಳಿಂಬ ನೋಡಿ ಸಂಗರವ |
ನೆಗಳಲೆಂದನು ಸತಿಯರಿಗಿತ್ತು ಗರವ || ಲಾಲಿಸು || ೧೪೧ ||

ನರನುಸಿರಿದನು ಗೋಗ್ರಹಣದಿ ನೊಂದ |
ಧುರಪರಿಶ್ರಮವಡಗಿತೆ ಕೌರವೇಂದ್ರ ||
ತರಣಿಜಾದ್ಯರು ದ್ಯೂತಸಭೆಯೊಳ್ ತಾವೆಂದ |
ವರಭಾಷೆಯನು ಮರೆಯದೆ ತೀರ್ಚಲೆಂದ || ೧೪೨ ||

ಶರಕೇಳಿಯಲಿ ಬಳಲಿದ ಭಾವಂದಿರಿಗೆ |
ಹರುಷವೇನ್ನೈ ಎಂದು ಪಾಂಚಾಲೆ ಕಡೆಗೆ ||
ತುರುಬ ಬಂಧಿಸಲಿಲ್ಲವೆಂದು ದುಃಖಿಪಳು |
ಭರದಿ ಬಂಧಿಸಹೇಳೆಂದಳು ದುಶ್ಯಾಸನೊಳು || ಲಾಲಿಸು ||೧೪೩||

ಮಗುಳೆ ನಕುಲ ಸಹದೇವಾದಿ ಭಟರ |
ದುಗುಡವೇನೆಂದಿರುತಿರಲಾ ಯಮಕುವರ ||
ಜಗಳವಾಗಲಿ ನೀತಿಯಾಗಲಿ ಕಡೆಗೆ |
ನಗಧರನಯ್ದುವನೆಂದ ನಿನ್ನೆಡೆಗೆ || ಲಾಲಿಸು ||೧೪೪||

**ಭಾಮಿನಿ**

ವ್ಯಾಕುಲವ ಬಿಡು ನೃಪತಿಯವರೊಳು |
ನೀ ಕಲಹಕನುವಾಗದಿರು ಜಯ |
ಸೋಕಲರಿಯದೆನಲ್ಕೆ ಕೌರವ ನುಡಿದನಬ್ಬರಿಸಿ ||
ನೂಕಿರೋ ಸಂಜಯನ ನಮ್ಮಿದಿ |
ರಾ ಕುಚೇಷ್ಟರ ಪೊಗಳುತಿಹನು |
ದ್ರೇಕವಾಯ್ತರಿಗಳು ಭಯಂಕರವೀತಗೆಂದೆನುತ || ೧೪೫ ||

**ವಾರ್ಧಕ**

ಖೂಳನೀ ಸಂಜಯನ ಮಾತೇನು ಕೌಂತೇಯ |
ರಾಳುತನವಂತಿರಲಿ ಶಿವನನೊಮ್ಮೆಗೆ ಗೆಲುವ |
ತೋಳಬಲುಹೆನಗುಂಟು ಜೀಯ ಬೆದರದಿರೆಂದು ಕನಲಿದಂ ಕಲಿ ಕರ್ಣನು ||
ಖೂಳನೇ ಸಂಜಯನು ಭರ್ಗನೊಳು ಕಾದುವ ಸು |
ಶೀಲ ಸಾಹಸಿಯಹುದೆಲೈ ರವಿಜ ಬಲ್ಲೆವು ನೃ |
ಪಾಲ ನಿನಗೇಕೆ ಭಯ ಮೈಗೊಬ್ಬಿನುತ್ತರವಿದೆಂದರಾ ಗುರು ಭೀಷ್ಮರು || ೧೪೬ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಆ ಸಮಯದೊಳಗಂಧನೃಪ ತ | ಕ್ಕೈಸಿ ಕೌರವಗೆಂದ ಮಗನೇ ||
ಈ ಶಕುನಿ ಕರ್ಣಾದಿಗಳ ಸಹ | ವಾಸ ನಿನಗವಸಾನವು || ಕಂದ ಕೇಳು || ೧೪೭ ||

ನೀನವರಿಗಪರಾಧಿಯಾದರು | ಮಾನನಿಧಿಗಳು ನಿನಗೆ ಬಂದಪ ||
ಮಾನಗಳ ಕಾಯ್ದುದನು ಮರೆತೆಯ | ಹೀನಬುದ್ಧಿಗಳಿಂದಲಿ || ತರುಣ ಕೇಳು || ೧೪೮ ||

ಒಡೆಯ ಕೃಷ್ಣನ ಪಾದಸೇವಕ | ರೊಡನೆ ನಿನ್ನಯ ಛಲವು ಕೊಳ್ಳದು ||
ಬಿಡುಬಿಡಿನ್ನಾ ಕುಟಿಲವಿದ್ಯೆಯ | ಕೊಡಿಸು ರಾಜ್ಯವನವರಿಗೆ || ಚಂದದಿಂದ || ೧೪೯ ||

**ಕಂದ**

ತಂದೆಯ ನುಡಿಯಂ ಕೇಳ್ದಾ |
ನಂದನನುರುಕೋಪದೊಳಾರ್ಭಟಿಸುತ್ತಂ ||
ಮುಂದಿಹ ರವಿಜನನೀಕ್ಷಿಸು |
ತೆಂದನು ಘರ್ಜಿಸಿ ಕರ್ಣೊಳ್ ಕಿಡಿಗೆದರುತ್ತಂ || ೧೫೦ ||

[ತಾತನ ನುಡಿಯಂ ಕೇಳುತ |
ಜಾತನು ಕಡುಕೋಪದಿಂದಲಾರ್ಭಟಿಸುತ್ತಂ ||
ಸೂತಜನಾನನವೀಕ್ಷಿಸು |
ತೀ ತೆರದೊಳಗೆಂದನೊಡನೆ ಬಲುಗಜರುತ್ತಂ || ೧೫೧ ||]

**ರಾಗ ಮಾರವಿ ಏಕತಾಳ**

ನಿಮ್ಮನು ನುಡಿಸಿದರ್ಯಾರೈ ಪಿತ ಬೇ | ಡೆಮ್ಮೊಳಗತಿಕರುಣ ||
ಪರ್ಮದಿ ನಾವಳಿದರೆ ನಿಮಗಾಗದು | ನಮ್ಮ ದೆಸೆಯ ಮರಣ || ೧೫೨ ||

ಅರಿತಿಹೆ ಭೂಭಾರವಿಳುಹಲ್ಕವ | ತರಿಸಿಹ ಹರಿಯೆಂದು ||
ಹರಣವ ಕೊಡುವೆ ರಣಾಗ್ರದೊಳಿಳೆಗೋ | ಸ್ಕರ ಮಾಧವಗಿಂದು || ೧೫೩ ||

ಈ ಗಂಗಾ ಸುತನೀ ಕೃಪ ಸಂಜಯ | ನೀ ಗುರು ಸಹಿತಾಗಿ ||
ಬೇಗದಿ ಯಮಜನ ಕಂಡುರೆ ಬದುಕಿ ಸ | ರಾಗದಿ ನೀವ್ ಪೋಗಿ || ೧೫೪ ||

**ವಾರ್ಧಕ**

ರಾಯ ಕೇಳೆಲ್ಲರಂ ಕೌರವಂ ಜರೆದು ರಿಪು |
ರಾಯನೊಳ್ ಧುರವ ನಿಶ್ಚಯಿಸಿರ್ದನಿತ್ತಯಮು |
ರಾಯನಂದನ ದೇವಕೀಜಾತನಂಘ್ರಿಗಭಿನಮಿಸಿ ಕೈಮುಗಿದು ನಿಂದು ||
ದಾಯಭಾಗದೊಳೈದು ಗ್ರಾಮವಂ ತನಗೆ ಕುರು |
ರಾಯ ಸುವಿವೇಕದಿಂ ಕೊಡುವಂದದಲಿ ಕೃಷ್ಣ |
ರಾಯ ಸಂಧಾನಮಂ ಮಾಡಿ ಬರಬೇಕು ನೀನೆನಲೆಂದನಾ ಮಹಿಮನು || ೧೫೫ ||

**ಭಾಮಿನಿ**

ನೀತಿಯೇ ಕರುಣಾಳು ನಿನಗೆ ವಿ |
ಘಾತವೆಣಿಸಿದ ದುಷ್ಟನಲಿ ಸಂ |
ಪ್ರೀತಿಯೇ ಸಂಧಾನಕನುವಾಗುವರೆ ಪೇಳೆನಲು ||
ಖ್ಯಾತ ಧರ್ಮಜ ನುಡಿದನನಿಬರ |
ಪಾತಕವು ಮಗುಳವರ ಪೊರ್ದುವು |
ದಾತನಲಿ ಸಂಧಿಯ ಪ್ರಯತ್ನವ ಮಾಡಿ ಬಹುದೆಂದ || ೧೫೬ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸನಿಂತೆನಲಾ ರಮಾಧವ | ಕಿರುನಗೆಯ ಕೇವಣಿಸಿ ಭೀಮನ |
ಕರೆದು ಧರ್ಮಜನಿಂದು ಕುರುಭೂ | ವರನ ಬಳಿಗೆ || ೧೫೭ ||

ಪೋಗಿ ತನಗೈದೂರನಿನ್ನುಸ | ರಾಗದಲಿ ಕೊಡುವಂತೆ ಸಂಧಿಯ |
ಸಾಗಿಸೆಂದನು ಪೇಳು ನಿನ್ನೊಳ | ವೀಗಲೆನಲು || ೧೫೮ ||

ಅಣ್ಣನವರಿಗೆ ನೀತಿಯಾದರೆ | ನಿನ್ನ ಮನಕೊಪ್ಪಿದರೆ ಭೂತಳ |
ವನ್ನು ಕೌರವನಿತ್ತರೆನಗೇ | ನಿನ್ನು ದುಗುಡ || ೧೫೯ ||

ಎನಲು ಪಾರ್ಥಗೆ ಮಾದ್ರಿಯಣುಗರಿ | ಗನುವರಿಸಲರುಹಿದರು ಮೂವರ |
ಮನವೆ ನಮ್ಮಯ ಚಿತ್ತವೆಂದ | ರ್ಜುನ ನಕುಲರು || ೧೬೦ ||

ಉಸುರಿದನು ಸಹದೇವ ಸಂಧಿಯ | ಬೆಸುಗೆ ಹತ್ತದು ಕೌರವನು ಕ |
ಲ್ಮಷವ ಬಿಡನಿದ ಮರೆಯಬೇಡೆಂ | ದಸುರಹರಗೆ || ೧೬೧ ||

**ಭಾಮಿನಿ**

ಅನಿಬರಿಂತೆನಲಾ ದ್ರುಪದನಂ |
ದನೆಯ ಕೇಳುವೆವೆನುತ ಚರರನು |
ಕ್ಷಣದೊಳಟ್ಟಲು ಬಂದು ಸೂಚಿಸಲತಿವಿಲಾಸದಲಿ ||
ರಣವ ಗಂಟಿಕ್ಕುವನೆ ಮುರರಿಪು |
ಸನುಮತವಿದೆಂದಬಲೆ ಹೊನ್ನಂ |
ದಣವನೇರಿಯೆ ಪೊರಟಳಬುಜಾಕ್ಷಿಯರ ಗಡಣದಲಿ || ೧೬೨ ||

**ವಾರ್ಧಕ**

ಅರವಿಂದಮುಖಿ ತಳೆದು ಹರುಷಮಂ ಸರಸಮಂ |
ತರುಣಿಯರೊಳಾಡುತಂದಣದೊಳಂ ಘನದೊಳಂ |
ಶರದಿಂದು ಕೋಟಿಭಾಸುರವಂತೆ ಸಿರಿವಂತೆ ಮುಗುಳಂಬನಂಬಿನಂತೆ ||
ವರದಿವ್ಯಭೂಷಣಗಳುಡೆಗೆಯಿಂ ತೊಡುಗೆಯಿಂ |
ಮೆರೆವ ಮಂಗಲವಾದ್ಯರಾವದಿಂ ಭಾವದಿಂ |
ತುರುಬ ಕಟ್ಟುವೆನೆಂಬ ಗೆಲವಿನಿಂ ನಲವಿನಿಂ ಬಂದಳಾ ಭೀಮನೆಡೆಗೆ || ೧೬೩ ||

**ಕಂದ**

ಇಂತಾನಂದದೊಳಾ ಸಿರಿ |
ವಂತೆಯು ಬಂದಂದಣವಿಳಿದನಿಲಜಗೆರಗಲ್ ||
ಕಂತುವಿನರಗಿಣಿಯಂ ಕಂ |
ಡಂತಃಕರಣದಿ ತಳ್ಕಿಸುತೆಂದಂ ಸತಿಯೊಳ್ || ೧೬೪ ||

**ರಾಗ ಸುರುಟಿ ಏಕತಾಳ**

ಕೋಮಲಾಂಗಿ ಕೇಳೆ | ಮದಗಜ | ಗಾಮಿನಿ ಪಾಂಚಾಲೆ ||
ಕಾಮುಕ ಕುರು ನೃಪನಾಮಹನಿಲಯಕೆ |
ಸ್ವಾಮಿಯ ಧರ್ಮಜ | ಸಂಧಿಗೆ ಕಳುಹುವ || ಕೋಮಲಾಂಗಿ || ೧೬೫ ||

ಆತನ ದುಷ್ಕೃತ್ಯವು | ಮಗುಳಿ | ನ್ನಾತನ ಪೊದ್ದುವುವು ||
ಆತನೊಳನುವರವೇತಕೆ ನಮಗೆಂ |
ದಾತನೊಳ್ಳೈದೂರೀತನು ಬೇಡುವ || ಕೋಮಲಾಂಗಿ || ೧೬೬ ||

ನಾವೆಲ್ಲವರಿದಕೆ | ಒಪ್ಪಿಹೆ | ವೀ ವಿಷಯೋತ್ಸವಕೆ ||
ಭಾವಕಿ ನಿನ್ನಯ ಭಾವಗಳೇನೆನ |
ಲಾ ವನಿತೆಯ ಮೊಗದಾವರೆ ಕಂದಿತು || ಕೋಮಲಾಂಗಿ || ೧೬೭ ||

**ಭಾಮಿನಿ**

ಸಂಧಿಯೇ ಕಲಿಭೀಮ ನಿನಗಾ |
ನಂದವೇ ಕುರುಭೂಪನೊಳು ಹಿತ |
ಬಂದುದೇ ಧರ್ಮಜಗೆ ಪಾರ್ಥಗೆ ಹರಿಗೆ ಸನುಮತವೆ ||
ಚಂದದೊಳಗಿನ್ನೊಮ್ಮೆ ನುಡಿ ಮೊದ |
ಲೆಂದ ವಚನವ ಶಿವ ಶಿವಾ ನೀ |
ವಿಂದು ಕೈಗೊಂಡಿರೆ ಯತಿತ್ವವನೆಂದು ಹೊರಳಿದಳು || ೧೯೮ ||

**ರಾಗ ಸಾವೇರಿ ಆದಿತಾಳ**

ಏನಯ್ಯ ಪವನಜನೆ | ಕೌರವನಿಗೆ | ನಾನೆ ದುರ್ಜನಳಾದೆನೆ ||
ಹೀನವೃತ್ತಿಯ ತಾಳ್ದಿರಿ | ನೀವೈವರೆನ್ನ | ಪ್ರಾಣಕ್ಕೆ ಪಗೆಯಾದಿರಿ || ೧೯೯ ||

ಮೊದಲಾದ ಭವದೊಳಗೆ | ಶಿವನ ಭಜಿಸಿ | ಮದುವೆಯಾದೆನೊ ನಿಮಗೆ ||
ಸುದತಿಯರೆನ್ನ ತೆರದಿ | ಪಾಪಿಗಳುಂಟೆ | ಹದಿನಾಲ್ಕು ಲೋಕಮಧ್ಯದಿ || ೧೭೦ ||

ತರುಣಿಯೋರ್ವಳಿಗೋರ್ವನು | ವಲ್ಲಭನಾಗೆ | ಕರುಣದಿ ಸಲಹುವನು ||
ಪುರುಷರೆನ್ನಯ ಬಾಳ್ವೆಗೆ | ನೀವೈವರಿದ್ದು | ಮರಣವ ನೋಳ್ಪಿರೆನಗೆ || ೧೭೧ ||

ಮುಂದಲೆಯನು ಪಿಡಿದು | ನಿಮ್ಮಯ ಕಣ್ಣ | ಮುಂದೆ ಸೀರೆಯನೆಳೆದು ||
ಬಂಧಿಸಿರುವ ಮುಡಿಯ | ಸುಲಿದುದ ಕಂಗ | ಳಿಂದ ನೋಡಿದಿರರ್ತಿಯ || ೧೭೨ ||

ಆ ನಾಯಿಗಳ್ಗೆ ಬೆದರಿ | ನಿಶ್ಚಯ ಹೆಣ್ಣು | ಪ್ರಾಣಿಯಗಳ ಕೊಯ್ದಿರಿ ||
ಶ್ರೀನಾಥ ಕರುಣದಲಿ | ಸಲಹಿದನೆನ್ನ | ಮಾನವನಂದಿನಲಿ || ೧೭೩ ||

ಸತ್ಯವ ಮೀರಬಾರದು | ಎಂದಡವಿಯೊಳು | ಸುತ್ತಿರ್ದ ದುಗುಡವಿಂದು ||
ಚಿತ್ತದಿ ಮರೆತು ಹೀಗೆ | ಸಂಧಿಯ ಮಾಳ್ಪ | ದುತ್ತಮವಾಯ್ತೆ ನಿಮಗೆ || ೧೭೪ ||

**ಭಾಮಿನಿ**

ಲಲನೆ ತಾನತಿ ಮರುಗುತಿರಲಾ |
ಕಲಿ ಮರುತ್ಸುತ ನುಡಿದ ತನ್ನಿದಿ |
ರಳಲದಿರು ನಾ ಮಾಳ್ಪುದೇನರಿಭಟರ ಮುಂದಿನಲಿ ||
ತಿಳುಹು ಯಮಜಗೆ ನರಗೆ ಕೃಷ್ಣಗೆ |
ಒಲಿಸಿ ನಕುಲಾದಿಗಳನುರೆ ಮೂ |
ದಲಿಸಿ ರೋಷವನೇಳಿಸೆನಲೆಂದಳು ಸರೋಜಾಕ್ಷಿ || ೧೭೫ ||

**ರಾಗ ಯರಕಲಕಾಂಭೋಜ ಅಷ್ಟತಾಳ**

ಆರು ಸುಪ್ರೀತರು | ನೀ ಹೊರತೆನ್ನ | ಆರು ಕಾಯ್ವುವರು ||
ಆರು ಕಾಯ್ವರು ಹೆಣ್ಣುಜನ್ಮವ ಸುಡಲಿನ್ನು | ಭೂರಿ ಬಾಧೆಗೆ ಸಂದೆನು | ಇನ್ನೇನು ||ಪ||

ಧರ್ಮಸಂಭವನು | ಶಾಸ್ತ್ರಾರ್ಥ ಸ | ದ್ಧರ್ಮದಿಂದಿರುತಿಹನು ||
ನಿಮ್ಮನುಜರು ಯಮಜನ ಮಾತ ಮೀರರು | ಮರ್ಮವಿಲ್ಲನಿಬರಿಗೆ | ಈ ಬಗೆಗೆ || ಆರು || ೧೭೬ ||

ಮೊನ್ನೆ ಸೈಂಧವನು | ಕೊಂಡೊಯ್ಯೆ ಮೋ | ಹನ್ನಶಾಲಿ ನೀನು ||
ಎನ್ನ ಮಾನವ ಕಾಯಲೆನ್ನುತ್ತ ಕೀಚಕ | ನನ್ನು ರಣದೊಳಿರಿದೆ | ನೀ ಮರೆದೆ || ಆರು || ೧೭೭ ||

ಪ್ರೀಯರೈವರಲಿ | ನೀನೆನಗೆ ಸು | ಪ್ರೀಯನಿಂದಿನಲಿ ||
ನೋಯಿಸಿದಧಮರ ಕೊಂದೆನ್ನ ಭಾಷೆಯ | ವಾಯುಜ ಸಲಿಸೆಂದಳು | ಮತ್ತವಳು || ಆರು || ೧೭೮ ||

**ರಾಗ ಕೇದಾರಗೌಳ ಅಷ್ಟತಾಳ**

ಮರುಗುತ್ತ ಭೀಮನ ಕೊರಳಪ್ಪಿ ನಯನದ | ಶರದೊಳಂಗವ ತೊಳೆದು ||
ವರಭಾಷೆಗಳ ತೀರ್ಚದಿರೆ ಪ್ರಾಣ ಬಿಡುವೆನೆಂ | ಬರಸಿಗೆ ನಗುತೆಂದನು || ೧೭೯ ||

ವನಿತೆ ಕೇಳ್ ಜನನಿಯ ಬಸಿರಿಂದಿಳಿದ ಮೇಲೆ | ದಿನವೊಂದಾದರು ಸುಖವ ||
ಕನಸಿಲಿ ಕಂಡವ ನಾನಲ್ಲ ಕಷ್ಟವ | ನುಣುತ ನೂಕಿದೆ ಜನ್ಮವ || ೧೮೦ ||

ಅಣ್ಣನೊಡನೆ ವಿಪಿನದಿ ಸುತ್ತಿ ಹಸಿತೃಷೆ | ಯನ್ನು ತೊರೆದು ಜೀವದಿ ||
ಕನ್ನೆ ನಾ ನಿನಗಾಗಿ ಕೀಚಕಾದ್ಯರ ಕೊಂದು | ಬಣ್ಣಗುಂದಿದೆನಬಲೆ || ೧೮೧ ||

ಭಾರವಾಯಿತು ಗದೆ ಧೈರ್ಯ ಹಿಂಗೊಳಿಸಿತು | ನಾರಿ ನೀನೇನೆಂದರು ||
ಕೌರವಾದ್ಯರ ಕೊಲಲಾರೆನೆನಲು ರೋಷ | ವೇರಿ ಗರ್ಜಿಸುತೆಂದಳು || ೧೮೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಹಹ ಪವನಜ ಗಂಡುಗಲಿ ನೀ | ನಹುದಲ್ಲೈ ಖಳ ಕುರುನೃಪಾಲನ ||
ಸಹಜನೆನ್ನಯ ತುರುಬನೆಳೆವು | ತ್ತಿಹುದ ನೋಡಿ || ೧೮೩ ||

ಮಡುಹಿ ಮಗುಳವನುದರರಕ್ತದಿ | ಮುಡಿಯ ಮುಳುಗಿಸುತೆಳೆಕರುಳ್ಗಳ ||
ಮುಡಿಸದಿರೆನೆಂದೊರೆದ ಭಾಷೆಗ | ಳಡಗೀತೇನೈ || ೧೮೪ ||

ಸೆಳೆದು ಸೀರೆಯನುಟ್ಟು ಕರದಲಿ | ಬಳೆಯ ತೊಡು ನಾ ಪುರುಷವೇಷವ ||
ತಳೆವೆನನಿತರ ಮೇಲೆ ನೋಡೆ | ನ್ನಳವಿಯನ್ನು || ೧೮೫ ||

**ಭಾಮಿನಿ**

ಎನಗೆ ಬಲ ಸಹದೇವ ಪಾರ್ಥಿಯು |
ತನಯರೈವರು ಕಲಿ ಘಟೋತ್ಕಚ |
ಜನಕ ದ್ರುಪದಂಗಿಹುದು ಮೂರಕ್ಷೆಹಿಣೀ ಬಲವು ||
ಅನಿಬರಿಂದರಿಗಳ ವಿಭಾಡಿಸಿ |
ಘನವ ಪಡೆವೆನು ಕಾಂತ ಕೊಡಿಸೈ |
ಎನಗೆ ವೀಳ್ಯವ ನಿಮ್ಮ ಹಂಗೇನೆಂದಳಬುಜಾಕ್ಷಿ || ೧೮೬ ||

**ವಾರ್ಧಕ**

ವನಿತೆಯ ಕಠೋರನುಡಿಯಂ ಕೇಳ್ದು ಪವನಜಂ |
ಘನರೌದ್ರವೆತ್ತು ಗದೆಯಂ ತಿರುಹುತೆಂದ ಕಾ |
ಮಿನಿಯೆ ಸೈರಿಸು ಸೈರಿಸೆಲೆ ನಿನ್ನ ನಯನಾಂಬುಕಣಮದೊಂದಕೆ ರಿಪುಗಳ ||
ವನಿತೆಯರ ಕಂಗಳೊಳು ಶತಸಾವಿರಂ ಕೆಡಪಿ |
ನಿನಗೆಂದ ಭಾಷೆಯಂ ತೀರ್ಚಿಸುವೆನೆಂದೆನುತ |
ಲಿನಿಯಳನೊಡಂಬಡಿಸಿ ಕೃಷ್ಣನ ಪದಾಂಬುಜಕೆ ತಲೆವಾಗುತಿಂತೆಂದನು || ೧೮೭ ||

**ರಾಗ ಭೈರವಿ ಏಕತಾಳ**

ಎಲವೋ ಕಂಸಾಂತಕನೆ | ಆ | ಖಳ ದುರ್ಯೋಧನನೊಡನೆ ||
ಕೊಳುಗುಳದೆತ್ನವ ಬಲಿದು | ಮಾ | ಡಳುಕದೆ ಸಂಧಿಯ ಮುರಿದು || ೧೮೮ ||

ಧರಣಿಪಗಾತನೊಳಿನ್ನು | ಹಿತ | ವಿರೆ ಸೀಮೆಯ ಮೂರನ್ನು ||
ಮರೆಹೊಕ್ಕವನಲಿ ಕೊಳಲಿ | ನಾ | ನೆರಡೂರ್ಕೊಂಬೆ ರಣದಲಿ || ೧೮೯ ||

ಈಶನ ಮರೆ ಹೊಗಲಿನ್ನು | ಬಿಡ | ದಾ ಸಮರದಿ ರಿಪುಗಳನು |
ನಾಶವ ಮಾಡುವೆನಯ್ಯ | ವರ | ಭಾಷೆಯ ಸಲಿಸುವೆ ಸತಿಯ || ೧೯೦ ||

**ಭಾಮಿನಿ**

ಕ್ಷೆಣಿಪತಿ ಕೇಳ್ ಭೀಮನಿಂತೆನ |
ಲಾ ನರೇಶ್ವರಗೆಂದ ನಗುತಲಿ |
ದೇನು ಪವನಜ ದ್ರುಪದಸುತೆಯರ ಮತವು ಬೇರಾಯ್ತು ||
ಮಾನನಿಧಿ ನಿಜವಾಗಿ ನುಡಿ ಸಂ |
ಧಾನವೋ ಸಂಗ್ರಾಮವೋ ಮಗು ||
ಳೇನೆನುತ್ತಸುರಾರಿ ಬೆಸಗೊಳಲೆಂದ ಯಮಸೂನು || ೧೯೧ ||

**ರಾಗ ಮಧುಮಾಧವಿ ಏಕತಾಳ**

ದಾನವಾಂತಕ ಕೇಳಿನ್ನೇನೆಂಬೆ ಬಗೆಗೆ | ಮಾನಿನಿಯನಿಲಜರಾಡುವ ನುಡಿಗೆ || ದಾನ ||ಪ||

ಆವ ಜನ್ಮದಿ ಗೆಯ್ದ ಪಾಪದ ಫಲದಿ | ಭೂವಲಯವನು ಬಿಟ್ಟಲೆದೆವೊ ವನದಿ ||
ಭಾವಜಪಿತ ನಿನ್ನ ದಯದಿ ಬದುಕಿದೆವು | ನಾವು ಕೌರವಗೆಂದ ಭಾಷೆ ತೀರ್ಚಿದೆವು || ದಾನ ||೧೯೨||

ಪರದೇಶಿಗಳಿಗೇಕೆ ಬವರ ಭೂಪರೊಳು | ಕರುಣದಿ ಜಯಲಕ್ಷ್ಮಿ ಯಾರಿಗೊಲಿವಳೊ ||
ಧರೆಯ ನೆವದಿ ಸೋದರರೊಳು ಹೊಯ್ದಾಡಿ | ದುರಿತಾತ್ಮರೆನಿಸಿಕೊಳ್ಳುವುದೇನು ಪ್ರೌಢಿ || ದಾನ ||೧೯೩||

ದೊರೆತನ ಸುಡಲಿನ್ನು ಬಡತನವೆಮಗಕ್ಕು | ಕುರುರಾಯ ಸುಖಿಯೆಂದು ಕೇಳ್ದರೆ ಸಾಕು ||
ವರಸಂಧಿ ಲೇಸು ತೋರ್ಪುದು ಎನ್ನ ಮನದಿ | ವಿರಚಿಸರ್ಜುನ ಭೀಮಾದಿಗಳೆಂದ ತೆರದಿ || ದಾನ ||೧೯೪||

**ರಾಗ ಮಾರವಿ ಏಕತಾಳ**

ಫಲುಗುಣನುಸಿರಿದನಳಲುತ ವಿಪಿನದಿ | ತೊಳಲಿದ ದುಗುಡವನು ||
ಕಳೆವೆನು ರಿಪುಗಳೊಳಳವಿಯೊಳಲ್ಲದೆ |
ಅಳುಕುವುದುಂಟೇ ನಳಿನಜ ಬರೆದೋಲ್ |
ಫಲಿಸುವುದೆಮಗೆನುತಿರ್ದನಾಗ || ೧೯೫ ||

**ಭಾಮಿನಿ**

ಕಲಿಕಿರೀಟಿಯ ನುಡಿಗೆ ಧರ್ಮಜ |
ನೊಲಿದು ಕೃಷ್ಣನೊಳೆಂದ ಕುರು ಕುಲ |
ತಿಲಕ ಸಂಧಿಯ ಮುರಿದನಾದರೆ ಕಳೆದು ಮಾತುಗಳ ||
ಕಲಹವನು ನಿಶ್ಚಯಿಸಿ ಬಾರೆನ |
ಲಳುತ ದ್ರುಪದಜೆ ಬಂದು ಮಣಿದಳು |
ಸಲಹೊ ಲಕ್ಷ್ಮೀರಮಣ ತನ್ನನೆನುತ್ತಲಂಘ್ರಿಯಲಿ || ೧೯೬ ||

**ರಾಗ ಸಾಂಗತ್ಯ ರೂಪಕತಾಳ**

ಚರಣದಿ ಪೊರಳುವ ತರಳೆಯ ಪಿಡಿದೆತ್ತಿ | ಕರುಣಾಳು ನುಡಿದ ದ್ರೌಪದಿಗೆ ||
ಸಿರಿವಂತೆ ದುಃಖಿಸಬೇಡೇಳು ತಾಯೆ ನಿ | ನ್ನಿರವೇನು ಪೇಳು ಪೇಳೆನಲು || ೧೯೭ ||

ಹರಿಯೆ ಚಿತ್ತಯಿಸೆನ್ನ ಮನದೊಳಗಿರ್ಪುದ | ನರಿಯೆಯ ಪೇಳ್ವುದಿನ್ನೇನು ||
ತುರುಬ ಕಟ್ಟಿಸುವೆ ನೀನೆಂದೆನುತುಸಿರಿದ | ವರಭಾಷೆ ನಡೆಯಲಿಲ್ಲೆನುತ || ೧೯೮ ||

ಮರುಗುವೆನೆನಲೆಂದ ತಂಗಿ ನೀನಳಲದಿರ್ | ತರಳೆ ನಾ ನಿನಗಾಗಿ ಪೋಗಿ ||
ಧುರವ ಗಂಟಿಕ್ಕಿ ನಿನ್ನವರಿಂದ ಖಳರ ಸಂ | ಹರಿಸುವಂತೆಸಗುವೆನವ್ವ || ೧೯೯ ||

ಪುಸಿಯಲ್ಲ ದಿಟವಿದು ನಂಬಿಕೋ ಮುಡಿಯ ಕ | ಟ್ಟಿಸಿ ನಿನ್ನ ಭಾಷೆ ತೀರ್ಚದಡೆ ||
ವಸುದೇವನಾಣೆ ದೇವಕಿಯಾಣೆ ತನಗೆಂದು | ಬಸಿವ ಕಂಬನಿಯೊರಸಿದನು || ೨೦೦ ||

**ವಾರ್ಧಕ**

ದನುಜಾರಿ ದ್ರೌಪದಿಯ ಸಂತವಿಸಲನ್ನೆಗಂ |
ಮಣಿಮಯವರೂಥಮಂ ದಾರುಕಂ ತರಲು ದು |
ರ್ಜುನರೆಡೆಗೆ ಪೋಪುದೆಂದಗಣಿತಾಯುಧವ ಸಾತ್ಯಕಿ ತುಂಬಿದಂ ರಥದೊಳು ||
ಅನಿಮಿಷರು ಜಯವೆನಲು ಮಂಗಲಮುಹೂರ್ತದಲಿ |
ವನಜಾಕ್ಷನೇರ್ದನಾ ಸ್ಯಂದನವನಾ ಪಾಂಡು |
ತನಯರನ್ನುಳಿದಿರಲ್ ಸೂತನಾ ಹಯಗಳಂ ಬೋಳಯ್ಸಿದಂ ಭರದೊಳು || ೧೦೧ ||

ಆ ರಥ ಸಮೀರಗತಿಯಂ ಮೀರುತಯ್ದುತಿರೆ |
ದಾರಿಯೊಳು ಶುಭ ಶಕುನವಾಗಲುತ್ತಮಮೆನುತ |
ಭೂರಿತಪಗೆಯ್ವ ಭಾರ್ಗವರಾಮ ಕಣ್ವ ನಾರದ ಕಾಶ್ಯಪಾದ್ಯತಿಗಳ ||
ವಾರಮಿಹ ಬಳಿಗಾಗಿ ಮುರಹರಂ ನಡೆತರ |
ಲ್ಕಾ ಋಷಿಗಳೀ ಮಹಿಮನಂ ಕಂಡು ಬಪ್ಪೆವೆಂ |
ದಾ ರಮಾಧವನೊಡನೆ ತೆರಳಿದರ್ ಗಜಪುರದ ಶೃಂಗಾರತೋಟದೆಡೆಗೆ || ೧೦೨ ||

ಬಗೆಬಗೆಯ ವೃಕ್ಷಸಂತತಿಗಳಿಂ ಲತೆಗಳಿಂ |
ಚಿಗುರೆಲೆಯ ಚೂತ ದಾಳಿಂಬದಿಂ ರಂಭದಿಂ |
ಮಘಮಘಿಪ ವರಸುಮಾವಳಿಗಳಿಂ ಫಲಗಳಿಂ ಸವಿವ ಶುಕಪಿಕಗಳಿಂದ ||
ಸೊಗಸಿನಿಂ ಪಾಡುತಿಹ ಸ್ವರಗಳಿಂ ಹರಿಗಳಿಂ |
ಸುಗುಣತರಮಾದ ಸುಸ್ಥಳಗಳಿಂ ಜಲಗಳಿಂ |
ಸೊಗಸಾದ ಸರಸಿಜದ ಗಂಧಮಂ ಚಂದಮಂ ಕಂಡರತ್ಯಾನಂದದಿ || ೧೦೩ ||

ಆ ವನದ ಸಂಭ್ರಮವನಾ ಮುನಿಗಳೊಡನೆ ರಾ |
ಧಾವರಂ ನೋಡುತಂ ಹಸ್ತಿನಾಪುರದ ನಾ |
ನಾ ವಿಚಿತ್ರವ ಕಾಣುತಾಶ್ಚರ್ಯಮಂ ತಾಳುತಾ ಪುರವನುಂ ಪೊಕ್ಕನು ||
ರಾವಣವಿರೋಧಿ ಬಪ್ಪಾನಂದಮಂ ಕೇಳು |
ತಾ ವಿದುರ ಗುರು ಭೀಷ್ಮ ವರಕೃಪಾದಿಗಳಖಿಳ |
ಭಾವಭಕ್ತಿಯೊಳಬ್ಜಲೋಚನಗೆ ನಮಿಸಲು ಕೃಪಾಳು ಪರಸಿದನವರನು || ೧೦೪ ||

ಮುರಹರಂ ಬರುವನಾರೋಗಣೆಗೆ ತಮ್ಮ ಮಂ |
ದಿರಕೆಂದು ಗುರುಭೀಷ್ಮ ವರಕೃಪಾದಿಗಳು ತರ |
ತರ ಸುವಸ್ತುವ ಕೂಡಿಕೊಂಡಿರಲ್ ಕೌರವಂ ಬರುವನಚ್ಯುತನೆನುತಲಿ ||
ವರದಿವ್ಯರಸಭರಿತದಡುಗೆಯಂ ಮಾಡಿಸಲ್ |
ಕುರುರಾಯನುಳಿದೆಲ್ಲರಾಲಯವ ಪೊಕ್ಕು ಸ |
ತ್ಕರುಣದಿಂ ಕುಶಲಮಂ ಬೆಸಗೊಳುತ ವಿದುರನರಮನೆಗಯ್ದಿದಂ ಕೃಷ್ಣನು || ೧೦೫ ||

ನೋಡಿದಂ ಕಣ್ದಣಿಯೆ ಚಿನ್ಮಯನ ಮೂರ್ತಿಯಂ |
ಮಾಡಿದಂ ನಿಯತ ಸಂಸ್ತುತಿಗಳಂ ಪಿರಿದು ಕೊಂ |
ಡಾಡಿದಂ ತನಗೆ ಲಕ್ಷ್ಮೀರಮಣ ದಯವಾದನೆನುತಲಾ ವಿದುರನಂದು ||
ಪಾಡಿದಂ ಗುಣಗಣವ ಬೇಕಾದ ವರಗಳಂ |
ಬೇಡಿದಂ ಮನದೊಳಾನಂದಸಾಗರದೊಳೋ |
ಲಾಡಿದಂ ಕೈಮುಗಿದು ನಿಂದಿರಲ್ಕವನ ತಕ್ಕಯ್ಸಿ ಮುರಹರನೆಂದನು || ೧೦೬ ||

**ಭಾಮಿನಿ**

ನಿನ್ನ ಭಕ್ತಿಗೆ ಮೆಚ್ಚಿದೆನು ಎನ |
ಗಿನ್ನು ತೀರದು ನಿನ್ನ ಪೊಗಳಲಿ |
ಕನ್ನಪಾನಗಳಿಲ್ಲದೇ ಬಳಲಿರ್ಪೆ ತಾನೆಂದ ||
ಧನ್ಯನಾದೆನು ದೇವ ಚಿತ್ತವಿ |
ಸಿನ್ನೆನುತ ಕರೆದೊಯ್ದು ಭವನಕೆ |
ಬಣ್ಣಿಸುವಡಚ್ಯುತನ ಮಹಿಮೆಗಳಾರಿಗರಿದೆಂದ || ೧೦೭ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಮಗುಳೆ ಪುರುಷೋತ್ತಮನ ಸುಪ್ಪ | ತ್ತಿಗೆಯನೇರಿಸಿ ಸಿರಿಪದಾಂಬುಜ ||
ಯುಗಳವರ್ಚಿಸಿ ನಮಿಸಿ ಪೇಳ್ದನು | ನಗುತ ತನ್ನಯ ಸತಿಯೊಳು | ತೋಷದಿಂದ || ೧೦೮ ||

ಶ್ರೀರಮಣ ದಯವಾದನೆಮಗಿ | ನ್ನಾರು ಲೋಕದೊಳೆಣೆಯು ನೀ ಕ |
ಣ್ಣಾರೆ ನೋಡಿದು ತೀರ್ಚು ಪಿಂದಣ | ಘೋರದುರಿತವನೆಂದನು | ಸತಿಯೊಳಂದು || ೧೦೯ ||

ಸ್ವರ್ಣಕುಂಭದೊಳ್ಕೈದೆ ಕ್ಷೀರವ | ಚಿನ್ಮಯಂಗೆ ಸಮರ್ಪಿಸಲು ಕಾ ||
ರುಣ್ಯವಾರಿಧಿ ಸೇವಿಸಿದ ಪರಿ | ಪೂರ್ಣಸಂತಸದಿಂದಲಿ | ಶರಧಿಶಯನ || ೧೧೦ ||

ಕುಡುತೆಯೊಂದರ ಪಾಲಿನಲಿ ಹಸಿ | ವಡಗಿತಾ ಕ್ಷೀರಾಬ್ಧಿಶಯನಗೆ |
ದೃಢವ ತೋರಿಸಲಾಗಿ ಬಿಂದುವ | ಕೆಡಹಿದನು ಕಟವಾಯಲಿ | ಚಂದದಿಂದ || ೧೧೧ ||

ತುಂಬಿತಾ ಪುರವೆಲ್ಲ ವರಕ್ಷೀ | ರಾಂಬುನಿಧಿಮಯವಾಗಲಚ್ಚರಿ ||
ಯಿಂ ಭ್ರಮಿಸಿ ನೋಡಿದರು ಜನರುಗ | ಳಂಬುಜಾಕ್ಷನ ಮಹಿಮೆಯ | ಕೇಳು ಭೂಪ || ೧೧೨ ||

**ವಾರ್ಧಕ**

ಅರಸ ಕೇಳಾ ಪುರದ ನಾರಿಯರು ಕಾಣುತ |
ಚ್ಚರಿಗೊಂಡು ತಮ್ಮ ತಮ್ಮಾಲಯದ ಪಾಲ್ಗಡಿಗೆ |
ಜರಿದವೀ ತೆರನೆಂದು ಕೌತುಕದ ಗಮನದಿಂದೀಕ್ಷಿಸುತಲಿರೆ ವಿದುರನು ||
ಮುರಹರನಪಾರಮಹಿಮೆಗೆ ವಿಸ್ಮಯಂಗೊಳುತ |

ಕರಗಳಂ ಮುಗಿದು ಜಯವೆನಲವನ ಮೈದಡವಿ |
ಶರಣರಲಿ ಶ್ರೇಷ್ಠ ನೀನೆಂಬಾಗ ಬಂದಳಾ ಪಾಂಡುನೃಪನರಸಿ ಬಳಿಕ || ೧೧೩ ||

**ರಾಗ ಕಾಂಭೋಜ ಝಂಪೆತಾಳ**

ಅರಸ ಕೇಳೈ ಕುಂತಿದೇವಿ ಬರಲವಳನುಪ | ಚರಿಸಿ ಕಂಸಾರಿ ಕೈ ಮುಗಿದು ||
ಪರಿಣಾಮವೇನವ್ವ ನಿಮಗೆನಲು ನುಡಿದಳಾ | ತರುಣಿ ದಾಮೋದರಗೆ ಮಣಿದು || ೧೧೪ ||

ದೇವ ತವ ಕರುಣದಿಂ ಸುಖವೆನಗೆ ವಸುದೇವ | ದೇವಕಿಯು ಮೊದಲಾದ ಜನರು ||
ಕೋವಿದರೆ ವನವಾಸಕಯ್ದ ಮತ್ಸುತರು ಮ | ತ್ತಾವ ಪಾಡಾದರೆಂದುಸಿರು || ೧೧೫ ||

ನೇತ್ರಾಂಬುಗರೆಯಲರುಹಿದ ತಾಯೆ ಮರುಗದಿರಿ | ಧೂರ್ತರಿಗೆ ನುಡಿದ ಭಾಷೆಯನು ||
ಸತ್ಯದಿಂದಲಿ ನಿಮ್ಮವರು ಸಲಿಸಿಕೊಂಡರೀ | ಹೊತ್ತಿಗಿನ್ನವರು ಪದುಳಿಗರು || ೧೧೬ ||

ಇನ್ನಾದರೀ ಕೌರವನೊಳು ಕೂಡಿರ್ಪೆವೆಂ | ದೆನ್ನ ಸಂಧಾನ ಕಟ್ಟೆಹರು ||
ಮನ್ನಿಸಿದರೊಳಿತು ಮಗುಳಲ್ಲದಿರಲೀ ಖಳರ | ಮಣ್ಣಗೂಡಿಸದೆ ಬಿಡರವರು || ೧೧೭ ||

ಚಿಂತಿಸದಿರವ್ವ ನಾ ಕಾದಿರ್ಪೆ ನಿಮ್ಮವರ | ಮುಂತೆ ಭಯವಿಲ್ಲವೆನುತವಳ ||
ಸಂತಯಿಸಿ ವಿದುರನೊಳು ಕೌರವನ ಸಮಯಗಳ | ನೀಂ ತಿಳಿದು ಬಾರೆಂದ ನಗುತ || ೧೧೮ ||

ಪರಮಾತ್ಮನಾಜ್ಞೆಯಿಂ ಪೋಗಿ ಭೂಪನೊಳೆಂದ | ಅರಸ ನಿನ್ನೆಡೆಗಸುರಹರನು ||
ಎರಡು ಮಾತುಗಳಾಡ್ವ ಕಾರ್ಯವಿಹುದಂತೆ ಮ | ತ್ತರಿತು ಬಾರೆಂದ ಸಮಯವನು || ೧೧೯ ||

ಎಂದಡುಸಿರಿದ ಗೋಪನಂದನಂಗೆನ್ನೆಡೆಯೊ | ಳಿಂದೇನು ಕಜ್ಜ ನಾಳಿನಲಿ ||
ಬಂದರಯ್ತುರಲಿ ಪೇಳೆನುತವನ ಕಳುಹಿಸಿದ | ನಂಧನೃಪನಣುಗನಂದಿನಲಿ || ೧೨೦ ||

**ಭಾಮಿನಿ**

ಧರಣಿಪತಿ ಕೇಳಾ ದಿನವನು |
ತ್ತರಿಸಿ ಮರುದಿನದಲಿ ಸುಯೋಧನ |
ಕರೆಸಿದನು ಶತಸೋದರರ ಕರ್ಣಾದಿ ಶಕುನಿಗಳ ||
ವರಸಚಿವರತಿರಥ ಜಯದ್ರಥ |
ಗುರು ಕೃಪರು ವರಭೀಷ್ಮರುಗಳನು |
ಪರಮಮಿತ್ರಸುಪುತ್ರ ಮುಂತಾದವರನೋಲಗಕೆ || ೧೨೧ ||

**ವಾರ್ಧಕ**

ಕುರುಭೂಪ ದಿವ್ಯಭೂಷಣ ತೊಟ್ಟು ಸುವಿಚಿತ್ರ |
ತರಮಾದ ಗದ್ದುಗೆಯನೇರಲಿತ್ತಟದ ವಿ |

ಷ್ಟರಗಳೊಳ್ ಸಕಲ ನಾಯಕವಾಡಿಗಳ್ ಕುಳ್ಳಿರಲ್ಕವರ ಮಣಿಮಕುಟದ ||
ವರರತ್ನಪಂಕ್ತಿಗಳ ಕಾಂತಿಯಿಂದುಜ್ವ ಲಿಸು |
ತ್ತುರುವಾದ್ಯಘೋಷದಿಂ ಪೊಗಳಿಕೆಯ ಪಾಠಕರ |
ತುರಗ ಸಾಮಜಗಳಂ ಕುಣಿಸುವ ವಿಲಾಸಗಳನೇನೆಂಬೆನಚ್ಚರಿಯನು || ೧೧೧ ||

**ಭಾಮಿನಿ**

ಮನುಜಪತಿ ಧೃತರಾಷ್ಟ್ರ ತನ್ನಯ |
ವನಿತೆಯಳ ಸಮ್ಮೇಳದಿಂ ಬರ |
ಲಣುಗನೆದ್ದಡಿಗೆರಗಿ ಕುಳ್ಳಿರಿಸಿದನು ಪೀಠದಲಿ ||
ಜನಪನಾಜ್ಞೆಯೊಳಾಗಗಣಿಕಾಂ |
ಗನೆಯರಂಗಜನುರುಕಠಾರಿಗ |
ಳೆನಲು ತಾಳ ಮೃದಂಗ ಶ್ರುತಿಗತಿಯಿಂದ ನಟಿಸಿದರು  || ೧೧೩ ||

**ರಾಗ ರೇಗುಪ್ತಿ ಏಕತಾಳ**

ಆಡಿದರಂಗನೆಯರು ನಗುತ | ಪಾಡುತ ಗೀತವನಭಿನಯದೋರುತ || ಲಾಡಿದ | || ಪ ||

ರಂಗುದುಟಿಯ ಸನ್ಮಂಗಳವದನೆಯರು |
ಭೃಂಗಾಳಕಿಯರು ಶೃಂಗಾರದ ಸೊಬಗಿಯರು ||
ತುಂಗಕುಚದ ಮಾ | ತಂಗಗತಿಯ ಸ್ವ |
ರ್ಣಾಂಗರುಚಿಯ ಸಾ | ರಂಗನಿಭಾಕ್ಷಿಯ || ರಾಡಿದ  || ೧೧೪ ||

ಮನಸಂಭವ ನೂತನದಲಿ ಬರೆದಿರುವ |
ಘನತರ  ಬೊಂಬೆಗಳೆನಬಹುದವದಿರ ಚೆಲುವ ||
ಝುಣಝುಣರೆನೆ ಕಂ | ಕಣ ತೋಳ್ಬಳೆ ಸರ |
ಪಣಿ ಕಂಚುಕಿಗಳ್ | ಮಿನುಗುವ ಕುಟಿಲೆಯ || ರಾಡಿದ  || ೧೧೫ ||

ಸರಸ ಸುಮೋಹನ ನವರಸ ತೋರಿಸುತ |
ವರತನುಗಂಧದ ಪರಿಮಳಗಳ ಪಸರಿಸುತ ||
ಕಿರುನಯನಾಗ್ರದ | ಸರಳಲಿ ರಸಿಕರ |
ನಿರಿಯುತಲಪ್ಸರ | ತರುಣಿಯರಂದದೊ || ಳಾಡಿದ  || ೧೧೬ ||

**ಭಾಮಿನಿ**

ಅರಸ ಕೇಳಾ ದಿನದ ಕುರುಭೂ |
ವರನ ಒಡ್ಡೋಲಗದ ಘನಸಿರಿ |
ಮೆರೆವ ಸಭೆಗೇನೆಂಬೆ ಸುರಪನ ಸಭೆಯ ನಿಂದಿಸಿತು ||

ಕರೆದು ಕೌರವ ದೂತನೊಳು ಮುರ |
ಹರನ ಬರಹೇಳೆನಲು ಬಂದವ |
ನೆರಗುತೇಳ್ಕೆ ಕೃಷ್ಣ ಭೂಪನನುಜ್ಞೆಯಾಯ್ತೆಂದ || ೧೧೭ ||

**ವಾರ್ಧಕ**

ಮುರಹರನು ನಸುನಗುತ ಕೃತವರ್ಮಸಾತ್ಯಕಿ ವಿದುರ |
ಪರಶುರಾಮಾದಿ ಮುನಿನಿಕರಮನ್ನೊಡಗೊಂಡು |
ಹೊರಟನಂತಃಪುರದ ಸಜ್ಜನರು ಬರುತಿರ್ದರಚ್ಯುತನ ಬಳಸಿನಿಂದ ||
ಸರಸಿಜಾಸನಪಿತನು ಕೌರವರ ಸಭೆಗಾಗಿ |
ತೆರಳಲಲ್ಲಿಹ ಸಾಧುಗಳು ಬಂದು ನಮಿಸಿರಲು |
ಪರಮ ಕರುಣಾರಸದೊಳೆಲ್ಲರನುಪಚರಿಸಿ ಕೃಪಾಳು ಪರಸಿದನವರನು | || ೧೧೮ ||

**ರಾಗ ಮಧ್ಯಮಾವತಿ ಏಕತಾಳ**

[ಮುರಹರನು ನಸುನಗುತಲೊರೆದನೇನಿದು ನಮ್ಮ | ಕರೆಯಕಳುಹಿದನು ವಿಚಿತ್ರ ||
ಕರುಣವಾಯಿತೆ ನಮ್ಮ ಮೇಲೀಗ ದೊರೆಗಳಿಗೆ | ತೆರಳಬೇಕೆಂದಸುರಹನು || ೧೧೯ ||

ಪರಶುರಾಮಾದಿ ಮುನಿನಿಕರಗಳನೊಡಗೊಂಡು | ಪೊರಟನಾ ವಿದುರ ಸಹಿತಾಗ ||
ಸರಸಿಜಾಸನಪಿತನು ಕೌರವನ ಸಭೆಯನುರೆ | ಹರುಷದಲಿ ಕಂಡೆಂದ ನಗುತ || ೧೨೦ ||

ನೋಡಿದೆಯ ವಿದುರ ಕೌರವ ಮಾಡಿದೋಲಗವ | ಓಡಿಹೋಗಲಿ ಕೃಷ್ಣನೆನುತ ||
ಗಾಢಗರ್ವದಲಿ ಕುಳಿತಿರುವನೀ ಭೂವರನು | ಕೇಡಿಗರ ಒಡನಾಡಿ ಕೆಟ್ಟ || ೧೨೧ ||

ನೋಡು ನೀನವನ ಮಾತಾಡಿಸುವ ಪರಿಗಳನು | ರೂಢಿಯೊಳಗರ್ಧರಾಜ್ಯವನು ||
ಬೇಡುವೆನು ಕೊಡದಿರಲು ಸಂಪದವು ಸ್ಥಿರವಹುದೆ | ನಾಡಮಾತಲ್ಲ ಕೇಳೆಂದ || ೧೨೨ ||

ಎನುತ ಮಾತಾಡುತಯ್ತರಲಲ್ಲಿ ಸಾಧುಗಳು | ಘನ ಮಹಿಮನಂಘ್ರಿಗಭಿನಮಿಸೆ ||
ಚಿನುಮಯನು ಪಿಡಿದೆತ್ತಿ ಕರುಣದಲಿ ಮನ್ನಿಸಲು | ದನುಜಾರಿ ಬರಲೆಂದ ನೃಪತಿ || ೧೨೩ ||]

**ರಾಗ ಸೌರಾಷ್ಟ್ರ ತ್ರಿವುಡೆತಾಳ**

[ನೋಡಿರೈ ಕುಲಹೀನನೊಳು ಮಾ | ತಾಡಿ ಬಹ ಗೋವಳನ ಠೀವಿಯ ||
ನಾಡೊಳರ್ಧವನೊಯ್ವೆನೆಂಬ ಸ | ಗಾಢದಿಂದ || ೧೨೪ ||

ಅರಸು ಮಕ್ಕಳ ಸಭೆಯನಿವ ಹೊ | ಕ್ಕರಿಯನಾ ಠೀವಿಗಳ ಮಾತಿನೊ ||
ಳಿರುವುದಿತ್ತಲು ತಿರುಗಿ ಕಂಡರೆ | ಜರಿವುದೆದೆಯು || ೧೨೫ ||

ಮಾತನಾಡಿಸನೆನುತ ಗಣಿಕಾ | ವ್ರಾತವನು ಕುಣಿಸುತ್ತ ಕುಳಿತಿಹ ||
ಭೂತಳೇಶನ ಸಭೆಗೆ ದೈತ್ಯವಿ | ಘಾತಿ ಬಂದ || ೧೩೭ ||]

**ಭಾಮಿನಿ**

ಘನಮದೋನ್ಮತದಿಂದ ಕುಳಿತಿಹ |
ಬಣಗುರಾಯನ ಗರ್ವವಿಳಿಸುವೆ |
ನೆನುತಲೊತ್ತಿದ ಸಿರಿಚರಣದುಂಗುಟದೊಳವನಿಯನು ||
ಜನಪ ಕೇಳಿಳೆ ಮಗುಚಲಂಧಕ |
ನಣುಗ ಪೀಠಸಮೇತ ಹರಿಪದ |
ವನಜದಲಿ ಕೆಡೆದಿರಲು ಕಂಡಿತೆಂದನಸುರಾರಿ || ೧೩೭ ||

**ರಾಗ ತೋಡಿ ಅಷ್ಟತಾಳ**

ಏನಯ್ಯ | ಇಂಥಾ | ದ್ದೇನಯ್ಯ || ಪ ||

ಏನಯ್ಯ ನಮ್ಮ ಬರವ ಕಂಡು ನಿನಗೆ | ಜ್ಞಾನ ತಪ್ಪಿತೆ ಬಹಳಾನಂದದೊಳಗೆ || ಏನಯ್ಯ || ಅ ||

ವರಗದ್ದುಗೆಯನಿಳಿವುದು ತಡವೆನುತ | ಭರದಿಂದೇಕೋಭಾವದಲಿ ಪೀಠ ಸಹಿತ ||
ಚರಣದೊಳುರುಳುವುದುಂಟೆ ನಾ ನಿನ್ನ | ಸರಿಸಕೆ ಬರುತಿರ್ದನಲ್ಲೊ ಸಂಪನ್ನ || ಏನಯ್ಯ || ೧೩೮ ||

ಭಾವಗಳ್ನೆಂಟಗೆ ಮರ್ಯಾದೆಯನ್ನು | ಠೀವಿಯಿಂ ಮಾಡಿದಿರಲ್ಲ ಮತ್ತಿನ್ನು ||
ನೀವು ಕೋವಿದರಯ್ಯ ಮಾನವುಳ್ಳವರು | ಗೋವಳರಿಗೆ ನಮಿಸುವುದುಂಟೆ ನೃಪರು || ಏನಯ್ಯ || ೧೩೯ ||

ಚರಣವೆನಗೆ ಬಲು ನೋವಾಯಿತಯ್ಯ | ಅರಸ ನೀನತಿಸುಖವಂತನಲ್ಲಯ್ಯ ||
ಹರ ಹರಾ ತನುವೇಸು ನೊಂದಿತೊ ನಿನಗೆ | ಪೊರಳ ಬೇಡೇಳೆಂದನಾ ಸಭೆಯೊಳಗೆ || ಏನಯ್ಯ || ೧೪೦ ||

**ವಾರ್ಧಕ**

ಹರಿಯ ನಿಂದ್ಯಸ್ತುತಿಯನುಂ ಕೇಳ್ದು ಕೌರವಂ |
ಸೆರಗಿಂದ ವದನಮಂ ಮರೆಮಾಡಿ ಗದ್ದುಗೆಯೊ |
ಳಿರದೆ ಮಂಡಿಸಲಾಗ ಬೆರಗಾಗಿ ಸಭೆಯೊಳಂ ತಮ್ಮೊಳಗೆ ನಗುತಿರ್ದರು ||
ಗುರುಭೀಷ್ಮರಸುರಾರಿಗೆರಗಿ ಕೈ ಮುಗಿದು ಮೃದು |
ತರದ ಸಿಂಹಾಸನಮನೇರಿಸಿ ತಪೋಧನರ |
ನಿರದೆ ಸತ್ಕರಿಸಲಚ್ಯುತ ನುಡಿಸಿದಂ ಕಪಟಹೃದಯನ ವಿಲಾಸದಿಂದ || ೧೪೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಮುನಿದಿಹೆಯೇಕೆ ನನ್ನಲಿ | ಕುರಣವಿಲ್ಲವೆ ನಿನಗೆ ಸತಿಯರ ||
ತೆರದಿ ಮಂಡೆಯ ತಗ್ಗಿಸದೆ ಕ | ಣ್ದೆರೆದು ನೋಡೈ || ೧೪೧ ||

ಎನಲು ಕೋಪವ ತಾಳುತಾ ಕುರು | ಜನಪ ಗರ್ಜಿಸಿ ನುಡಿದ ಗೋಪನೊ ||
ಳೆನಗೆ ಮಾತುಗಳೇಕೆ ನೋಡಿದೆ | ಗುಣಗಳೆಲ್ಲ || ೧೪೩ ||

ನಿನಗೆ ನಮ್ಮರಮನೆಯೊಳಾರೋ | ಗಣೆಗೆ ಮನವಾಗದಿರೆ ಗಂಗಾ ||
ತನುಜ ಗುರು ಕೃಪರಾಲಯದಿ ಭೋ | ಜನವನುಳಿದು || ೧೪೪ ||

ಮಗುಳೆ ತೊತ್ತಿನ ಮಗನ ಮನೆಯಲಿ | ಸೊಗಸಿನಿಂದಲಿ ಹಸಿವ ನೀಗಿದೆ ||
ಪಗೆಗಳಲ್ಲಾ ಪಾಂಡವರು ನೀ | ನಗಡು ಎನಗೆ || ೧೪೫ ||

ಕುಲವಿಹೀನನು ವಿದುರ ನೀ ಗೋ | ವಳನು ನಿನಗವನಲ್ಲಿ ವರ ಸ ||
ಮ್ಮಿಳಿತ ಲೇಸೈ ನಿನ್ನ ಬರವೇ | ನಳುಕದುಸಿರು || ೧೪೬ ||

**ಕಂದ**

ಇಂತೆನೆ ಕೇಳ್ದಾ ವಿದುರಂ |
ತಾಂ ತವಕದೊಳೆದ್ದಕ್ಷಿಯೊಳುರಿಗೆದರುತ್ತಂ ||
ಅಂತಕನೆಂಬೊಲ್ ಗರ್ಜಿಸು |
ತಿಂತೆಂದನು ಕುರುಜನಪಾಲನೊಡನಾಗಳ್ || ೧೪೭ ||

[ಕುರುಪತಿಯಿಂತೆನೆ ವಿದುರಂ |
ಉರುತರ ಕೋಪವನು ತಾಳುತೆರಡಕ್ಷಿಯೊಳಂ ||
ಉರಿಸೂಸುತ ಕಡೆಗಾಲದ |
ಪುರಹರನಂದದಲಿ ನುಡಿದನಾ ದುಷ್ಟನೊಳುಂ] || ೧೪೮ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲವೊ ಕೌರವ ಮದಗರ್ವದಿ | ಮುಂದ | ಣೊಲವ ನೀನರಿಯದೆ ಶೌರ್ಯದಿ ||
ಕುಲಹೀನನೆನುತೆನ್ನ ಜರೆದೆಯ | ಗೋ | ವಳನೆಂದು ಹರಿಯ ನಿಂದಿಸಿದೆಯ || ೧೪೯ ||

ಎನ್ನ ಕುಲವನ್ನೆಲ್ಲ ಬಲ್ಲರು | ಮೂಢ | ನಿನ್ನ ದುರ್ಗುಣವನಾರರಿಯರು ||
ಮುನ್ನ ನೀನಜಪುತ್ರ ಕಾಣೆಲೊ | ಪೋಗಿ | ನಿನ್ನ ತಾಯೊಡನೀಗ ಕೇಳೆಲೊ || ೧೫೦ ||

ಚಿನ್ಮಯಮೂರುತಿ ಬಲ್ಲನು | ನಿನ್ನ | ಎನ್ನಂತರಂಗದ ಪರಿಯನು ||
ನಿನ್ನ ತೊಡೆಯ ಗದೆಯಿಂದಲಿ | ವಾಯು | ಚೆಣ್ಣ ಮುರಿವ ತತ್‌ಕ್ಷಣದಲಿ || ೧೫೧ ||

ಕದನದಿ ತಲೆಗಾಯ್ವೆನೆನುತಲಿ | ಚಾಪ | ವಿದ ನಾನು ಧರಿಸಿಹೆ ಕರದಲಿ ||
ಅದ ಗ್ರಹಿಸದೆ ನಿಂದಿಸಿದ ಮೇಲೆ | ಚಾಪ | ವಿದ ಮುರಿದಿಕ್ಕುವೆನೀಗಲೆ || ೧೫೧ ||

ಎನುತಲಾ ಚಾಪವ ಮುರಿಯುತ್ತ | ಇನ್ನು | ತನಗಸ್ತ್ರಸಂನ್ಯಾಸವೆನ್ನುತ್ತ ||
ಕನಲುತಿರಲು ದ್ರೋಣ ಭೀಷ್ಮರು | ಕಂಡು | ಘನಚಿಂತಾಬ್ಧಿಯೊಳಾಳುತಿರ್ದರು || ೧೫೩ ||

**ಭಾಮಿನಿ**

ದನುಜರಿಪು ನಗುತೆಂದ ರಾಯರ |
ಮನೆಗಳಲಿ ಗೋಪಾಲರಾರೋ |
ಗಣೆಗೆ ಯೋಗ್ಯತರಲ್ಲ ಮಗುಳಾ ಪಾಂಡುತನಯರಿಗೆ ||
ಘನವಿರೋಧಿಗಳ್ಳೆಸೆ ನೀವಿಂ |
ದನಿಬರಲಿ ಬಂಧುತ್ವವಾದುದು |
ತನಗೆ ಕೇಳ್ಳೆ ಪೇಳ್ವೆ ನಾ ಬಂದೊಲವ ನಿನಗೆಂದ || ೧೫೪ ||

**ರಾಗ ಕೇದಾರಗೌಳ ಝಂಪೆತಾಳ**

ಆದರಾ ಪಾಂಡುಸುತರು | ಜೂಜಿನಲಿ | ಮೇದಿನಿಯನುರೆ ಸೋತರು ||
ಆದಿಯಲಿ ನಿನಗೆ ಪೇಳ್ದ | ಭಾಷೆ ಸರಿ | ಯಾದುದೀವರೆಗೆ ಸಿದ್ಧ || ೧೫೫ ||

ಇನ್ನಾದರವರು ಬಂದು | ನಿಮ್ಮೊಡನೆ | ಮುನ್ನಿನಂತಿರ್ಪವೆಂದು ||
ಎನ್ನನಿಲ್ಲಿಗೆ ಸಂಧಿಗೆ | ಕಳುಹಿದರು | ಮನ್ನಿಸೈ ಕರುಣದೊಳಗೆ || ೧೫೬ ||

ನೀ ಮಾಡಿದಪರಾಧವ | ಕ್ಷಮಿಸುತಾ | ರಾಮದಲಿ ತಾಳ್ದ ದಣುವ ||
ತಾ ಮರೆತು ನಿಮ್ಮೊಳಿನ್ನೂ | ಕೂಡಿರ್ಪ | ರಾ ಮಹಿಮರೆನಲೆಂದನು || ೧೫೭ ||

ಅಹಹ ಕೇಳಿದೆಯ ಕರ್ಣ | ಜೂಜಿನಲಿ | ಮಹಿಯ ಸೋತವರಿಗೆನ್ನ ||
ಸಹವಾಸವೇನು ಕಡೆಗೆ | ನಮ್ಮೊಳಳು | ಕಿಹರಯ್ಯ ಸಂಧಾನಕೆ || ೧೫೮ ||

ಅಟ್ಟಿರುವರೀ ಚೋರನ | ಬಂಧ್ಯಮಜ | ಕೆಟ್ಟೆನೆಂದೆರಗಲವನ ||
ಶ್ರೇಷ್ಠದಿಂಪೊರೆವೆನೆನುತ | ಸಖನ ಕೈ | ತಟ್ಟಿ ಪೇಳಿದನು ನಗುತ || ೧೫೯ ||

**ಭಾಮಿನಿ**

ಕುರುಪತಿಯ ಪೌರುಷಕೆ ನುಡಿದರು |
ಪರಶುಧರ ಕಣ್ವಾದಿ ಋಷಿಗಳು |
ಮರುಳಲಾ ದಶಕಂಠ ಸೀತೆಯನೊಯ್ದು ರಾಘವನ ||
ಶರದೊಳಳಿದಂತಿಳೆಯ ಗೋಷ್ಠಿಗೆ |

ಶಿರವನೀಗದೆ ಕುಂತಿಯಣುಗರ |
ವೆರಸಿ ಸುಖದಲಿ ರಾಜ್ಯವಾಳ್ವುದು ನಿನಗೆ ಲೇಸೆನುತ || ೧೬೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

[ಕುರುಪತಿಯ ಪೌರುಷವ ಕೇಳುತ | ಪರಶುಧರನಿಂತೆಂದ ಪೂರ್ವದಿ |
ಧರಣಿಜೆಯ ಕದ್ದೊಯ್ದ ದಶಕಂ | ಧರನ ಪರಿಯ || ೧೬೧ ||

ಆತಗಾದಂದದಲಿ ನೀನೀ | ಭೂತಳವ ಕೊಡದಿರಲಿಕಪ್ಪುದು |
ಮಾತ ನೀನೆಂತರಿವೆ ದೈತ್ಯವಿ | ಘಾತಿ ಪರಿಯ || ೧೬೨ ||

ಮರುಳುತನ ಬೇಡಿನ್ನು ಪಾಂಡವ | ತರಳರಿಗೆ ಈ ಧರೆಯೊಳರ್ಧವ ||
ನಿರದೆ ಕೊಟ್ಟಿರು ವೈರಬುದ್ಧಿಯ | ಮರೆದು ಸುಖದಿ] || ೧೬೩ ||

**ರಾಗ ಪಂತುವರಾಳಿ ಮಟ್ಟೆತಾಳ**

[ಎನಲು ಕೇಳ್ದು ಕೌರವೇಂದ್ರ ಕಿನಿಸಿನಿಂದಲಿ |
ದನುಜವೈರಿ ರಾಮನೆಂಬ ಗರುವ ಮೊದಲಲಿ ||
ಮುನಿಯೆ ನಿನಗೆ ತಗಲಿತೆಂಬ ಪರಿಯ ಬಲ್ಲೆನು |
ಅನುವುಗೊಳಿಸಬೇಡ ರಾವಣನ್ನ ಪರಿಯನು || ೧೬೪ ||

ಗಂಡುಗಲಿಯೆ ಪಾಂಡವರಿಗೆ ಧರೆಯನಿತ್ತರೆ |
ಮಂಡಲೀಕರೆಲ್ಲ ನಗರೆ ಛಲವ ಬಿಟ್ಟರೆ ||
ಉಂಡುಬುತ್ತಿಕೂಳ ತಿಂದ ಲಂಡ ಕೃಷ್ಣನ |
ಕಂಡಿರುವೆನು ಹೀನಜಾತಿ ಕರಡಿಯಳಿಯನ || ೧೬೫ ||

ಧುರದೊಳಲ್ಲದೊಮ್ಮೆ ಸೋತ ಪಾಂಡುಸುತರಿಗೆ |
ಧರೆಯ ಕೊಡೆನು ಕೊಡೆನು ನಿಮ್ಮ ಬರಿಯ ಮಾತಿಗೆ ||
ಕರಕರಿಸಬೇಡಿ ತಪಕೆ ಪೋಗಿರೆನ್ನುತ |
ಕುರುಕುಲೇಂದ್ರ ಜರೆದ ಕೋಪದಿಂದ ಗಜರುತ] || ೧೬೬ ||

**ಸಾಂಗತ್ಯ ರೂಪಕತಾಳ**

[ಎಂದ ಮಾತಿಗೆ ನಾರದಾದ್ಯರು ಕುರುಭೂಪ | ಗೆಂದರು ಇಳೆಯ ಭಾರಕರ ||
ಹೊಂದಿಸಲೆಂದವತರಿಸಿ ಬಂದಿಹ ನಂದ | ನಂದನ ಶ್ರೀಕೃಷ್ಣನೆನುತ || ೧೬೭ ||

ಪಿಂದೊಬ್ಬ ಗರ್ವದೈತ್ಯನ ವಧೆಗೆಂದೀತ | ನಿಂದಿರಿಸಿದ ಛಾಯೆ ಪಾರ್ಥ ||
ಹಿಂದುಮುಂದರಿಯದೆ ಕಲಹಗೆಯ್ದರೆ ಪಾಂಡು | ನಂದನರನು ಬಿಡನೀತ || ೧೬೮ ||

ಧರಣಿಯೊಳರ್ಧ ರಾಜ್ಯವನ್ನಿತ್ತು ಸುಖದಿಂದ | ಲಿರದೆ ನೀ ಛಲವ ತಾಳಿರಲು ||
ವರಪುತ್ರಮಿತ್ರ ಬಾಂಧವಜಾಲವು ಸಹ | ಸಿರಿಸಂಪದವು ಲಯವಕ್ಕು || ೧೯೯ ||

**ರಾಗ ಭೈರವಿ ಅಷ್ಟತಾಳ**

[ಕಲಿತ ಮಾತಾಡದಿರಿ | ಎನ್ನೊಳು | ಸಲುಗೆಯೆ ನಿಮಗೀಪರಿ ||
ಇಳೆಯ ಭಾರಕರ ಸಂಹರಿಸುವ ಕೃಷ್ಣನೆಂ | ಬೊಲವ ಬಲ್ಲೆನು ತಾನೀಗ || ೧೭೦ ||

ಕೊಡೆನು ಈ ರಸೆಯವರ್ಗೆ | ಎನ್ನೊಳು ರಾಜ್ಯ | ಕೊಡು ಎಂಬರುಂಟೆ ಹೀಗೆ ||
ಕಡುಪರಾಕ್ರಮಿಗಳಾದರೆ ಬಂದು ಧುರದೊಳು | ಬಿಡಿಸಿಕೊಳ್ಳಲಿ ರಾಜ್ಯವ || ೧೭೧ ||]

**ರಾಗ ಮಧ್ಯಮಾವತಿ ತ್ರಿವುಡೆತಾಳ**

[ಎನಲು ಪೇಳ್ದನು ಭೀಷ್ಮ ಮಗನೇ | ಚಿನುಮಯನು ಪೊತ್ತಿರಲು ಪಾಂಡವ ||
ಜನಪರಿಗೆ ರಾಜ್ಯವನು ಕೊಡದಿರೆ | ಘನತೆಯಹುದೇ ಲೋಕದಿ  || ೧೭೨ ||

ತಂದೆಯಿಲ್ಲದ ಸುತರ ನಾವೇ | ತಂದು ರಕ್ಷಿಸಿದಾಗ ರಾಜ್ಯವ ||
ನಂದು ವಿಂಗಡಿಸಿದಕೆ ಇನಿತಾ | ಯ್ತೆಂದು ಮನದಲಿ ಮರುಗಿದ  || ೧೭೩ ||

ಅರಗಿನಾಲಯವನ್ನು ಮಾಡಿದೆ | ಬಳಿಕ ತರುಣಿಯ ಮಾನಹಾನಿಯ ||
ನಿರದೆ ಕೊಂಡು ಅರಣ್ಯವಾಸಕೆ | ತೆರಳಿಚಿದೆ ನೀ ಕಪಟದಿ  || ೧೭೪ ||

ಸತ್ಯದಲಿ ತಾವ್ ನುಡಿದ ಭಾಷೆಯ | ನುತ್ತರಿಸೆ ಧರೆಯನ್ನು ಕೊಡದಿರೆ ||
ಪಥ್ಯವಪ್ಪುದೆ ಕೊಡದಿರಲು ಹರಿ | ಪೊತ್ತಿರಲು ಪಾಂಡವರನು  || ೧೭೫ ||]

**ರಾಗ ರೇಗುಪ್ತಿ ಅಷ್ಟತಾಳ**

[ಮರುಳಾದಿರಿ ಈ ಸಿರಿಸಂಪತ್ತನು | ಪರಿಕಿಸಿ ಮುತ್ತಯ್ಯ ||
ಹಿರಿಯರ ಬಯಕೆಯೆ ಪಾಂಡವರಿಗೆ ಈ | ಧರೆಯನು ಕೊಡಿಸುವರೆ || ೧೭೬ ||

ಶಾಂತಭೂಪಗೆ ನೀವ್ ಪೇಳಿದ ಮಾತನು | ಭ್ರಾಂತಿಲಿ ಮರೆತಿರಲ್ಲಾ ||
ಎಂತೀ ಧರೆಯನು ಕೊಡಿಸುವಿರೈ ನೀವ್ | ನಾಂ ತಿಳಿಯದಾದೆನಲ್ಲಾ || ೧೭೭ ||

ಭೋಜನವೆಂಬುದು ಸಹಜವು ನಿಮಗಿದು | ಮೂಜಗಕರಿತಿಹವು ||
ತ್ರೈಜಗ ನಗುವುದು ಈ ಮಾತಾಡಲು | ರಾಜಿಸದೆನ್ನೊಡನೆ  || ೧೭೮ ||]

**ಭಾಮಿನಿ**

[ಈ ಪರಿಯೊಳೆಲ್ಲವರು ಕುರುಕುಲ |
ಭೂಪನಿಗೆ ಬುದ್ಧಿಯನು ಪೇಳ್ದರೆ |

ಕೋಪದಿಂದವರವರ ಜರೆದನು ಬಹಳ ರೋಷದಲಿ ||
ಪಾಪಿಗಳ ತೆರದಿಂದ ಶಶಿಕುಲ |
ದೀಪನಿಂತೆನೆ ಕೇಳ್ದು ಬಳಿಕಾ |
ತಾಪಸೋತ್ತಮರಿತ್ತ ತೆರಳಲಿಕೆಂದ ಹರಿ ನಗುತ || ೧೭೯ ||]

**ವಾರ್ಧಕ**

ತಾಪಸೋತ್ತಮರಿಂತೆನಲ್ ಕೇಳ್ದು ಕಿನಿಸಿನಿಂ |
ದೀಪರಿಯ ಭೋಧಾವಲಂಬನವ ಬಲ್ಲೆನೆಂ |
ದಾ ಪಾರ್ವರಂ ಜರೆಯಲನ್ನೆಗಂ ಧೃತರಾಷ್ಟ್ರ ಕುಂಭಸುತ ಗಾಂಗೇಯರು ||
ಭೂಪಗೆ ವಿವೇಕ ಬುದ್ಧಿಯನ್ನೆದೆ ಪೇಳಿದುರೆ |
ಕೋಪದಿಂದಾಲಿಸದಿರಲ್ ನುಡಿದರೀ ದುಷ್ಟ |
ಭೂಪನೋಲಗ ಸಲ್ಲದೆನುತ ಸರಿಯಲ್ಕಿತ್ತ ಕೃಷ್ಣ ಕೌರವಗೆಂದನು || ೧೮೦ ||

**ಭಾಮಿನಿ**

ಪೊಡವಿಗೋಸುವ ಬಳಗ ಸಹಿತಲಿ |
ನಡೆಯಬೇಡ ಕೃತಾಂತನಲ್ಲಿಗೆ |
ಕೊಡು ಕುಶಸ್ಥಳ ವರವೃಕಸ್ಥಳ ವಾರಣಾವತಿಯ ||
ಬಿಡು ಬಿಡೆಲೊ ಆವಂತಿನಗರವ |
ನೊಡನೆ ಶಕ್ರಪ್ರಸ್ಥವನು ಸಹ |
ತಡೆಯದೇ ಧರ್ಮಜಗೆ ಸಾಮದೊಳೆಂದನಸುರಾರಿ || ೧೮೧ ||

**ರಾಗ ನಾದನಾಮಕ್ರಿಯೆ ಆದಿತಾಳ**

[ಇಂದ್ರಪ್ರಸ್ಥವನ್ನು ಗುರುವಿ | ಗೆಂದಿತ್ತೆ ನಾ ಮೊದಲೇ |
ಸಂದಿತು ವಿಜಯಂತಿ ಭಾನು | ನಂದನಗಂದು || ೧೮೨ ||

ಧರೆಯೊಳು ವೃಕಸ್ಥಳಿಯ ಗ್ರಾಮ | ದಿರವು ಕೃಪನಿಗಾಯ್ತು ಮೊದಲೆ ||
ವರಕುಶಸ್ಥಳಿಯ ಗುರುವಿನ | ತರಳಗಿರಿಸಿದೆ || ೧೮೩ ||

ಭೂರಿ ಹಿರಿಯ ಮುತ್ತಯ್ಯಗೆ | ವಾರಣನಗರದೊಳಿರಲು |
ದಾರಿಗಿಲ್ಲ ಸುಂಕವು ಕಂ | ಸಾರಿ ಪೋಗಯ್ಯ || ೧೮೪ ||

ನೊಂದರು ಕಾಂತಾರದೊಳ | ಗೆಂದು ನಾನ್ನೆದೂರ ಕೇಳ್ದ |
ರಿಂದು ಹೀಗೆ ಪೇಳ್ವುದಿದು | ಚಂದವೇನಯ್ಯ || ೧೮೫ ||

ಮೂರು ಗ್ರಾಮವನ್ನು ನಾ | ಕಾರುಣ್ಯದಿ ಕೊಟ್ಟಿರುವೆ ಮೊದಲೆ |
ಪಾರುಪತ್ಯ ಬೇಡ ನಿನಗೆ | ಊರವಿಚಾರ || ೧೮೬ ||

ಮೂರು ಗ್ರಾಮವಾಯ್ತು ಮತ್ತೆರ | ಡೂರು ತಾವೆ ಆಳ್ವರಂತೆ |
ಬೇರೆ ಬೇರೆ ನಾವು ಕೇಳ್ದೈ | ದೂರು ಕೊಡಿಸಯ್ಯ || ೧೮೭ ||

ಧಾರಿಣಿಯೊಳಗೆ ಸೂಚಿ | ಯೂರುವ ಜಾಗವ ಕೊಡೆನು |
ವೀರರಾದರವರು ಧುರದೊ | ಳೂರ ಕೊಳ್ಳಲಿ || ೧೮೮ ||

ನರನು ತಾನೈಸೆಂಬ ನಿಮ್ಮ | ಧುರದೊಳಗೆ ಕೆಡಹಿ ಮತ್ತೆ |
ಧರಣಿಯ ಕೈ ಹಿಡಿವೆನೆನ್ನು | ತೊರೆವನಾತನು || ೧೮೯ ||

ತರುಣಿಯ ಸಂತಯಿಸದವನು | ಹಿರಿಯರು ಕಿರಿಯರಿಗೇಕೋ |
ಧುರದಿ ನಮ್ಮ ಗೆಲಿದು ಧರಣಿ | ಸಿರಿಯನಾಳ್ವನೆ || ೧೯೦ ||

ಮರುತಜನಿಂತೆಂಬ ತನ್ನ | ತರುಣಿಗೆ ತಾನೊರೆದ ಭಾಷೆ |
ಧುರದೊಳಗಲ್ಲದೆ ಸಲದೆಂ | ದೊರೆವನಾತನು || ೧೯೧ ||

ಭಂಡಿ ಕೂಳ ತಿಂದ ಲಜ್ಜೆ | ಭಂಡ ಮಾಳ್ಪ ಪರಿಯ ಬಲ್ಲೆ |
ಹೆಂಡತಿಯ ಮುಂದೈಸೆ ಕೇಳ್ | ಖಂಡಿತವಿದು || ೧೯೨ ||

ಧರಣಿಗಳೀರೇಳರಲಿ | ಇರುವೆ ನಾನು ತೃಣದೊಳೆಲ್ಲ |
ಮರುಳೆ ಕೇಳ್ ಸ್ವತಂತ್ರ ಎನ್ನೊ | ಳಿರುವುದೈ ಕೇಳು || ೧೯೩ ||

ಹರಿಯೆ ನೀ ಸ್ವತಂತ್ರನೆನ್ನು | ತೊರೆದೆಯಲ್ಲ ಪಾಂಡುಸುತರ |
ಕರೆಸುವ ಬುದ್ಧಿಯನೇಕೆ | ಕರುಣಿಸೆ ಹೇಳು || ೧೯೪ ||

ಕರೆಸು ನೀ ಪಾಂಡವರನಿನ್ನು | ಧರೆಯೊಳರ್ಧವಿತ್ತರೇ ನೀ |
ಸ್ಥಿರದಿ ರಾಜ್ಯವಾಳ್ವೆಯಲ್ಲ | ದಿರಲು ಲಯವೆಂದ || ೧೯೫ ||

ಮುನ್ನ ಅವರನಡವಿಗಟ್ಟಿ | ಇನ್ನು ಧರೆಯ ಕೊಡಲು ನಾನು |
ಕನ್ಯೆಯೆಂದು ತಿಳಿಯಬೇಡ | ಮುನ್ನ ನೋಡೆಂದ || ೧೯೬ ||

**ಭಾಮಿನಿ**

[ಕೇಳು ಕೌರವ ನೀನು ಪಾಂಡವ |
ಬಾಲರಿಗೆ ರಾಜ್ಯವನು ಕೊಡದಿರೆ ||
ಮೇಲೆ ಸುರಕುಲ ನಗದೆ ಸುಮ್ಮನೆ ಪೋಗುವೆವೆ ನಾವು ||
ಲೀಲೆಯಲಿ ತೋರುವೆವು ನಮ್ಮಯ |
ಜಾಲವನು ಕೇಳೈ ಕುರುಕ್ಷಿತಿ |
ಪಾಲಕನೆ ನಿಜವಾವುದೆಂದೆನಲೆಂದ ಕ್ರೋಧದಲಿ || ೧೯೭ ||]

**ರಾಗ ಪಂತುವರಾಳಿ ಮಟ್ಟೆತಾಳ**

ನಡೆಯೆಲೋ ಮುರಾರಿ ಸುಖದೊಳು | ಸಲುಗೆ ಮಾತ ||
ನುಡಿದು ಪೆಟ್ಟ ತಿನ್ನದೆನ್ನೊಳು || ನಡೆ ||ಪ||

ನೀನು ಬೇಡಿದ್ಧೈದು ಗ್ರಾಮದಿ | ಒಂದನಾದ | ರಾನು ಕೊಡುವನಲ್ಲ ಸಾಮದಿ ||
ಕ್ಷೆಣಿಯ ತ್ರಿಪಾದ ಗೆಯ್ದು | ಜಾಣತನವಿದೆಲ್ಲ ಗೋಪ |
ರಾಣಿಯರಲಿ ತೋರು ನಮ್ಮ | ಸ್ಥಾನದಲ್ಲಿ ಮೆರೆಯಲರಿದು || ನಡೆ || ೧೯೮ ||

ಹಲವು ತೆರದಿ ಬಟ್ಟಕುಚೆಯರ | ಒಲಿಸಿ ರಮಿಸಿ | ಕಳವಿನಿಂದ ಪೊಕ್ಕು ಗೊಲ್ಲರ ||
ನಿಳಯದಲ್ಲಿ ಪಾಲು ಮೊಸರ | ಗಡಿಗೆಯೊಡೆದು ಬೆಣ್ಣೆ ಸವಿದು |
ಕೊಳಲ ನುಡಿಸಿ ತುರುವಕಾವ | ಕುಲವಿಹೀನ ಕುಟಿಲಗಾರ || ನಡೆ || ೧೯೯ ||

ಎಂದು ಧಿಮ್ಮನೆದ್ದು ಬರುತವ | ವರ ದುಶ್ಶಾಸ | ಗೆಂದನವರನೀತ ಕುಣಿಸುವ ||
ಇಂದಿಗಿವನ ತೋಳ್ಗಳನ್ನು | ಬಂಧಿಸಿಟ್ಟು ಪಾಂಡುಸುತರ |
ತಂದು ಸೆರೆಯೊಳಿಡಲು ನಮಗೆ | ಮುಂದೆ ಪಗೆಗಳಿಲ್ಲವೆನುತ || ನಡೆ || ೨೦೦ ||

**ಭಾಮಿನಿ**

ಹರಿಯ ಕಟ್ಟುವೆನೆಂಬ ವಚನವ |
ನರಿತು ಗಂಗಾತರಳನುಸಿರಿದ ||
ಹರ ಹರಾ ಮುರಹರನ ಕಟ್ಟುವ ಸತ್ತ್ವ ನಿಮಗಿಹುದೆ ||
ಮರಣವನು ಬಯಸಿದಿರಲಾ ದಶ |
ಶಿರನ ಸೋದರರೈಸೆ ಇವರೆಂ ||
ದಿರದೆ ಧೃತರಾಷ್ಟ್ರಂಗೆ ತಿಳುಹಲು ಬಂದನಾಕ್ಷಣದಿ || ೨೦೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶಿವ ಶಿವಾ ಮಾಧವನ ಕಟ್ಟುವ | ಕುವರರಂದವನೀಕ್ಷಿಸಲು ಪೆ ||
ತ್ತವಳ ಬರಹೇಳೆನುತ ಪೊರಳಿದ | ಬವಣೆಗೊಳುತ || || ೨೦೨ ||

ಬಂದಳಾ ಗಾಂಧಾರಿಯಳಲುತ | ನಂದನರ ದುರ್ಬುದ್ಧಿಯನು ನೆನೆ ||
ದಂದು ಬೈವುತ ತನ್ನ ಪತಿಯೊಡ | ನೆಂದಳಾಗ || ೨೦೩ ||

ಪುಟ್ಟಿದಾಕ್ಷಣದಲ್ಲಿ ಬಿಸುಡದೆ | ದುಷ್ಟರೀ ಬಾಲಕರ ಸಲಹಿದೆ ||
ಕೆಟ್ಟೆವಕಟೆಂದೆನುತಲಾ ಧೃತ | ರಾಷ್ಟ್ರನರಸಿ || || ೨೦೪ ||

ಮರುಗುತಿರಲಾ ದ್ರೋಣ ಗಂಗಾ | ತರಳರರುಹಿದರೆಲೆಗೆ ಲಕ್ಷ್ಮೀ ||
ವರನ ಬಂಧಿಸಲಾರಳವು ನೀ | ಮರುಳೆನುತಲಿ || ೨೦೫ ||

ತಿಳಿದು ವರಕೃತವರ್ಮ ಸಾತ್ಯಕಿ | ತಳುವದಾಯುಧ ರಥಪದಾತಿಯ ||
ನೊಳಗು ಮಾಡೈ ಮೋಸವಾದುದು | ಕೆಲಸವೆನುತ || ೩೦೬ ||

ಬೆರಳ ಸನ್ನೆಯೊಳವರ ನಿಲಿಸುತ | ಲಿರಲು ಮುರಹರನಿತ್ತ ಕೌರವ ||
ಹರಿಯ ಬೆಂಗಡೆಯಲ್ಲಿ ನೇಣ್ಗಳ | ಧರಿಸಿ ನಿಂದ || ೩೦೭ ||

**ಭಾಮಿನಿ**

ಮರುಳುಗೊಂಡಾಗಲೆ ಸುಯೋಧನ |
ಮುರವಿರೋಧಿಯ ತುಡುಕಲೀಕ್ಷಿಸಿ |
ಕರದ ನೇಣ್ಗಳಿದೇತಕೇನಿದು ಜನಪ ನಿನಗಿನ್ನು ||
ಅರಿಗಳಾ ಪಾಂಡವರು ಕಳುಹಿದ |
ಚರನ ಕಟ್ಟುವುದಾವ ಧರ್ಮವು |
ಹರ ಹರಾ ಎಂದೆನುತ ತೋರಿದ ತನ್ನ ಮಹಿಮೆಯನು || ೩೦೮ ||

**ವಾರ್ಧಕ**

ಹರಿಯ ಮಹಿಮೆಯ ಪೊಗಳಲರಿದು ಮತ್ತಾ ಸಭೆಯೊ |
ಳಿರುವನಚ್ಚುತನೋರ್ವ ನೋಳ್ಪ ಜನರಕ್ಷಿಗಾ |
ಪುರವರದೊಳೆಲ್ಲ ಶ್ರೀಕೃಷ್ಣ ಮಯಮಾಗಿ ಗೋಚರಿಸಿದಂ ಮನೆಮನೆಯಲಿ ||
ಪುರುಷರಂ ಧಿಕ್ಕರಿಸಿ ಪಾಲ್ಮೊಸರ ಗಡಿಗೆಯಂ |
ಜರಿದು ಬೆಣ್ಣೆಯ ಮೆಲುತಲೆಳೆವೆಣ್ಗಳಂ ಪಿಡಿದು |
ಕರಗಳಿಂದಪ್ಪಿ ಮುದ್ದಾಡಿ ಚುಂಬಿಸುತಧಿಕತರ ಲೀಲೆಯಂ ತೋರ್ದನು || ೩೦೯ ||

**ರಾಗ ಮಾರವಿ ಏಕತಾಳ**

ಹರಿಯ ವಿಲಾಸವ ತಾಳಲಾರದೆ ಹೊಸ | ಹರೆಯದ ಚದುರೆಯರು ||
ಮರುಗುತ ನಾಚುತ ಮಂಡೆಯ ಮುಸುಕಿನ | ಸೆರಗಿನ ದುಗುಡದೊಳು || || ೩೧೦ ||

ಬಂದು ಕುರುಕ್ಷಿತಿಪಾಲಗೆ ದೂರಿದ | ರಂದಂಗಜಪಿತನು ||
ಚಂದದಿ ತಮಗೆಸಗಿದ ಸ್ಮರಚೇಷ್ಟೆಯ | ನಂದವನೆಲ್ಲವನು || || ೩೧೧ ||

ಗೋಪಾಲಕ ನಮ್ಮಿದಿರೊಳು ತನ್ನ ಪ್ರ | ತಾಪವ ತೋರುವನೆ ||
ತಾ ಪಿಡಿಸುವೆನೀಕ್ಷಣ ಶತಸಾವಿರ | ರೂಪಾದರು ಬಿಡದೆ || ೩೧೨ ||

ನಿಲ್ಲಿರೆನುತಲಾ ಶೂರರು ಮನೆಗಳ | ನೆಲ್ಲವ ಪೊಗುತಂದು ||
ಅಲ್ಲಿಹ ಪಿಡಿ ನೋಡಿಲ್ಲಿಹನ್ನಸಲೆ | ಕಳ್ಳನ ಕಟ್ಟೆಂದು || ೩೧೩ ||

ಓಡುವನಿದಕೋ ಒಳಗಿಹ ಸತಿಯರ | ಪೀಡಿಸುತಿಹನೊರ್ವ ||
ನೋಡಿರಿ ಬೆಣ್ಣೆಯ ತಾ ಮೆಲುವನು ಕೈ | ಮಾಡಿರಿ ಬೇಗೆನುತ || || ೩೧೪ ||

ಬಾಧಿಸಿದವರನು ಭಂಗಿಸಿ ತಾಪಸ | ಮಾಧಿಗೆ ಕಾಣಿಸದ ||
ಶ್ರೀಧರ ಸಭೆಯೊಳು ವಿಶ್ವಾಕಾರವ | ತಾ ಧರಿಸುತ ನಿಂದ || ೩೧೫ ||

**ವಾರ್ಧಕ**

ಚರಣದಂಗುಷ್ಠದೊಳ್ ದೇವನದಿ ಸುರರು ಕಿಂ |
ಪುರುಷ ವಿದ್ಯಾಧರರು ಯಕ್ಷ ಗಂಧರ್ವ ಕಿ |
ನ್ನರ ಗರುಡ ವಸುಗಳಾದಿತ್ಯರು ಭುಜಂಗಮರು ಸನಕಾದಿ ಸಂಯಮಿಗಳು ||
ವರರೋಮರೋಮಕೂಪದ ಚೌಕದೊಳ್ ಮೆರೆಯೆ |
ಸರಸಿಜಭವಾಂಡ ಗರ್ಭದಿ ಕಂಗಳೊಳ್ ಚಂದ್ರ |
ತರಣಿ ತಾರಾಳಿಗಳ ಕಾಂತಿಯೊಳ್ ತೋರಿಸುತ ವೈಕುಂಠನೆಸೆದಿರ್ದನು || ೩೧೬ ||

ಬಲದ ಭುಜದಲಿ ಪಾರ್ಥನೆಡದಿ ಹಲಧರ ಯಮಜ |
ಕಲಿಭೀಮ ನಕುಲರುಗಳಂಘ್ರಿಯೊಳಗೆಯ್ದೆ ಸ |
ಲ್ಲಲಿತ ಹಸ್ತದಿ ಶಂಖ ಚಕ್ರಾಬ್ಜ ಗದೆಯಿಂದಲುರದಿ ಶ್ರೀರಮಣಿ ಸಹಿತ ||
ಬಳಿಕನ್ಯಮಿಲ್ಲ ಸಕಲವು ತನ್ನೊಳೈಕ್ಯಮೆಂ |
ದೊಲಿದು ವರ ವಿಶ್ವರೂಪವ ಸುಯೋಧನಗಲ್ಲ |
ದುಳಿದರ್ಗೆ ತೋರಲು ಕೃತಾರ್ಥರಾವೆನುತೆಲ್ಲರಡಗೆಡೆದರಾನಂದದಿ || ೩೧೭ ||

ಜಯ ಜಯ ಶತಾದಿತ್ಯಧಾಮ ಸೀತಾರಾಮ |
ಜಯ ಜಯ ಸುರೋತ್ತುಂಗ ರಂಗ ನೀಲನಿಭಾಂಗ |
ಜಯ ಜಯ ನಮೋ ವಿಕಸಿತಾಕ್ಷ ಪಾಂಡವಪಕ್ಷ ಜಯ ಜಯತು ಶಿಕ್ಷ ರಕ್ಷ ||
ಜಯ ಜಯತು ಶಿವಪ್ರಿಯಾನಂತ ಲಕ್ಷ್ಮೀಕಾಂತ |
ಜಯ ಜಯತು ವೈಕುಂಠವಾಸ ವೇಂಕಟಧೀಶ |
ಜಯ ಜಯತು ಗುಣವೃಂದ ನತಜನಾಪ್ತ ಮುಕುಂದ ಜಯವೆಂದರಂದದಿಂದ || ೩೧೮ ||

**ಭಾಮಿನಿ**

ಸಕಲ ಲೋಕಾಧೀಶ ನೀನೇ |
ಸಕಲ ಕಲ್ಮಷನಾಶ ನೀನೇ |
ಸಕಲ ಶ್ರುತಿ ಪೌರಾಣ ಶಾಸ್ತ್ರದ ಬೀಜ ನೀನೆ ಕಣಾ ||
ಸಕಲ ಜೀವಿಗಳಾತ್ಮ ನೀನೇ |
ಸಕಲ ಸಿರಿಸಾಮ್ರಾಜ್ಯ ನೀನೇ |
ಸಕಲರಿಗೆ ಕೈವಲ್ಯ ನೀನೆಂದೆನುತ ನುತಿಸಿದರು || ೩೧೯ ||

**ರಾಗ ಕಾಂಭೋಜ ಝಂಪೆತಾಳ**

ಎನುತ ಗಾಂಗೇಯ ಕೃಪ ಕುಂಭಸುತ ಕಣ್ವಾದಿ | ಮುನಿಗಳಾ ಮಹಿಮನಂಘ್ರಿಯಲಿ ||
ಮಣಿದಬ್ಧಿಘೋಷದಿಂ ಪೊಗಳುತಿರೆ ಸೂಸಿದರು | ಅನಿಮಿಷರು ಕುಸುಮವೃಷ್ಟಿಗಳ || ೩೧೦ ||

ಕಂಗಳುದಿಸಿದವಂಧನೃಪಗೆ ಶ್ರೀ ಹರಿಯ ದಿ | ವ್ಯಾಂಗವನು ನೋಡಿ ಕೈಮುಗಿದು ||
ಮಂಗಳಾತ್ಮಕ ನಿನ್ನ ದರುಶನದ ಮೇಲೆ ಪಾ | ಪಂಗಳೀಕ್ಷಿಸಬಾರದಿನ್ನು || ೩೧೧ ||

ನೇತ್ರವಡಗಲಿ ತನಗೆನಲ್ ಮುನ್ನಿನಂತಾಗೆ | ಮತ್ತೆ ಗಾಂಧಾರಿ ನಡೆತಂದು ||
ಭಕ್ತಿಯಲಿ ಶ್ರೀ ಮನೋಹರಗೆರಗಿ ಬೇಡಿದಳು | ಮುಕ್ತಿಯನು ಕರುಣಿಸೆನಗೆಂದು || ೩೧೨ ||

ಮುತ್ತೈದೆಯಾಗಿ ಮಂಗಲದಿಂದಲಿರಿ ನೀವು | ಮತ್ತೆ ಮುಕ್ತಿಯ ಕರುಣಿಸುವೆನು ||
ಸತ್ಯನಿಧಿ ಪಾಂಡವರ ಕೂಡಿ ಬದುಕಿರಿಯೆಂದು | ಚಿತ್ತಜನ ತಾತ ಹರಸಿದನು || || ೩೧೩ ||

ಭಾನುಮತಿ ಮುಂತಾದ ನಾರಿಯರು ನುತಿಸುತಿರ | ಲಾನಂದಮಯನು ಕರುಣದಲಿ ||
ತಾನವರ ಸಂತಯಿಸುತಿರೆ ಬಳಿಕ ಕೇಳಿದಳು | ಭಾನುಮತಿ ಮುತ್ತೈದೆತನವ || ೩೧೪ ||

ಹರಿಯು ನಸುನಗುತೆಂದ ಮರುಗಬೇಡಬಲೆ ಕೇಳ್ | ಕುರುರಾಯನೊಡನೆ ನೀ ಪೋಗಿ ||
ಕರುಣಿಸೈ ಮುತ್ತೈದೆತನವೆಂದು ಕೇಳಿದರೆ | ಕರುಣದಿಂ ಪೇಳ್ವ ಮನದಿರವ || ೩೧೫ ||

ನೀಲಗಾತ್ರನು ಮುನ್ನಿನಂಗವನು ತಾಳೆ ಭೂ | ಪಾಲ ಕೌರವನರಸಿ ಬಂದು ||
ಹೇಳಿದಳು ಪ್ರಾಣಕಾಂತನನಪ್ಪಿ ದೈನ್ಯದಲಿ | ಓಲೆಭಾಗ್ಯವನುಳುಹಿಸೆಂದು || ೩೧೬ ||

**ರಾಗ ನೀಲಾಂಬರಿ ಏಕತಾಳ**

ಪುರುಷರತ್ನವೆ ಲಾಲಿಸು | ನಾನೆಂಬ ಮಾತ | ಕರುಣದಿಂದಲಿ ನಡೆಸು ||
ವರಪಾಂಡುಸುತರೊಳಿನ್ನು | ಸಂಗರ ಬೇಡ | ಸೆರಗೊಡ್ಡಿ ಬೇಡುವೆನು || ೩೧೭ ||

ಕಂತುಪಿತನ ಮಹಿಮೆಯ | ಕಣ್ಣಾರೆ ನೋಡಿ | ಮುಂತೆ ಯುದ್ಧವ ಮಾಳ್ಪೆಯ ||
ಕುಂತಿಯಾತ್ಮಜರುಗಳು | ಶಿವನೊಲು ಶಕ್ತಿ | ಯಂತೆ ದ್ರೌಪದಿಯೆಂಬಳು || ೩೧೮ ||

ಅವರಿವರೊಂದಾಗಿಹರು | ಭೂಭಾರವಿಳು | ಹುವ ಯತ್ನ ಮಾಡುವರು ||
ಅವರೊಳ್ ಕಷ್ಟವ ಗಳಿಸಿ | ಕೆಡಬೇಡ ಪಾಂ | ಡವರ ಮನ್ನಿಸು ಕರೆಸಿ || ೩೧೯ ||

ಸೀತಾದೇವಿಯ ಕದ್ದೊಯ್ದು | ದಶಕಂಠಗಾದ | ರೀತಿಯ ನೆರೆ ತಿಳಿದು ||
ಭೂತಳಕಾಗಿ ಕುಂತಿಯ | ಸುತರೊಳು ವಿ | ಘಾತವೆಣ್ಣುವರೆ ಪ್ರಿಯ || ೩೨೦ ||

ಮುತ್ತಯ್ಯ ದ್ರೋಣರಾಡಿದ | ಬೋಧೆಯ ಮೀರಿ | ಮಿತ್ರಜಾದ್ಯರು ಪೇಳಿದ ||
ಸತ್ಯವೆಂದಂಬು ಕೇಳಿಗೆ | ಪೋಗಲು ನಿಮಗ | ನರ್ಥವಾದುದು ಕಡೆಗೆ || ೩೨೧ ||

**ಭಾಮಿನಿ**

ಕ್ಲೇಶಗೊಳುತಿಂತೆನಲು ಕೇಳ್ದವ |
ನೀಶನುಸಿರಿದನೆಲೆಗೆ ನೀನಿ |
ನ್ನೇಸು ನುಡಿದರು ಪಾಂಡವರನೊಡಗೊಂಬನಲ್ಲೆಂದ ||
ಆಸೆ ಬೇಡೆಲೆ ನಿನಗೆ ಮಗುಳೀ |
ದ್ವೇಷದಲಿ ಮಡಿದರೆ ಸುಪರ್ವಸು |
ವಾಸಿನಿಯರುಗಳೊಲಿವರೆನಲೆಂದನು ಮುರಧ್ವಂಸಿ || ೩೩೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಂಧಿಗಾನಯ್ತಂದರೆಮ್ಮನು | ಬಂಧಿಸುವ ಯತ್ನಗಳ ಮಾಡಿದೆ |
ಇಂದು ಸೊಗಸದೆ ನೀತಿ ಕೇಳ್ಕೈ | ಮುಂದಿನನುವ || ೩೩೩ ||

ಎಲವೊ ಪಾತಕಿ ಬರಿದೆ ಸಾಯದಿ | ರೊಲಿದು ಪಾಂಡವರುಗಳ ಕೂಡಿಕೊ |
ಕೊಲಿಸಲಾರೆನು ಸರ್ವಥಾ ಕೊಳು | ಗುಳದಿ ನಿನ್ನ || ೩೩೪ ||

ಆರಿಹರು ಭೂತಳದಿ ನಿನ್ನಯ | ಭೂರಿ ಭಾಗ್ಯದ ಹೋಲುವೆಗೆ ನಾ |
ಸಾರಿದೆನು ಬಿಡು ಮನದ ಭ್ರಮಿತಾ | ಕಾರವನ್ನು || ೩೩೫ ||

ಎನೆ ಧರಾಧಿಪ ನುಡಿದನರಿತಿಹೆ | ದನುಜರಿಪು ನೀನಿಳೆಯ ಭಾರವ |
ನೊನೆಯಲವತರಿಸಿರುವ ಮಾಯಾ | ಮನುಜನೆಂದು || ೩೩೬ ||

ಹಿಂದೆ ರಾವಣ ಕಂಸ ಮುಖ್ಯರ | ಕೊಂದು ಮುಕ್ತಿಯ ಕರುಣಿಸಿದೆ ನೀ ||
ನೆಂದರಿತು ವೈರದಿ ತವಾಂಘ್ರಿಯ | ಹೊಂದುತಿಹೆನು || ೩೩೭ ||

ಧುರಕೆ ಬೆದರುವನಲ್ಲ ರಿಪುಗಳ | ಕರೆಸಿ ಕೊಡುವವನಲ್ಲ ರಾಜ್ಯವ |
ಹರಣದಾಸೆಗಳಿಲ್ಲ ತನಗೆಂ | ದರಸ ನುಡಿದ || ೩೩೮ ||

**ಭಾಮಿನಿ**

ಎಲೆ ಮುರಾಂತಕ ಲಾಲಿಸೈ ಬೆಂ |
ಬಲಕೆ ಭೂಪರ ನೆರಹಿ ಕುರುಮಂ |
ಡಲಕೆ ಸನ್ನಹಮಾಗಿ ಸಮರಕೆ ಬರಲಿ ಪಾಂಡವರು ||
ಕಲಹದಲಿ ನಿನ್ನಡಿಯೊಳೆನ್ನಯ |
ತಲೆಯನೈದೆ ಸಮರ್ಪಿಸುವೆನಿದ |
ಕಳುಕೆ ದಿಟವೆಂದೆನುತ ವೀಳ್ಯವನಿತ್ತನಚ್ಯುತಗೆ || ೩೩೯ ||

**ವಾರ್ಧಕ**

ನಗುತಲಾ ಮಾಧವಂ ದ್ರೋಣ ಕೃಪ ಗಾಂಗೇಯ |
ರಿಗೆ ಪೇಳ್ದ ಮರಣಮಂ ಬಯಸಿರ್ಪನೀ ಖಳಂ |
ಮಗುಳೆನ್ನ ದೂರದಿರಿ ತಿಳುಹಿ ನೀತಿಯನೆನುತ ಬಂದು ಕುಂತಿಯ ಕರ್ಣದಿ ||
ಖಗಜನೊಳು ಸರಳಬೇಡೆನುತ ರಥವೇರಲಾ |
ನಗಧರನ ಕೂಡೆ ಸಜ್ಜನರು ಬರುತವರು ಕೈ |
ಮುಗಿಯಲವರೆಲ್ಲರನ್ನುಪಚರಿಸಿ ಬೀಳ್ಗೊಟ್ಟು ಕರೆದರ್ಕಸುತಗೆಂದನು || ೩೪೦ ||

**ರಾಗ ಕೇದಾರಗೌಳ ಅಷ್ಟತಾಳ**

ತರಣಿಜ ಲಾಲಿಸು ಕೌಂತೇಯರೈವರ್ಗೆ | ಹಿರಿಯಾತನೈಸೆ ನೀನು ||
ದುರುಳ ಕೌರವನನೋಲೈಸುವ ಹೀನತ್ವ | ತರವೆ ನಿನ್ನಂಗಕಿನ್ನು || ೩೪೧ ||

ಕುಲದಿ ಮಿತ್ರಜ ಶಕ್ತಿ ಶೌರ್ಯಗುಣದಿ ರಘು | ಕುಲಜಾತಗೆಣೆಯು ನೀನು ||
ನೆಲನೊಡೆತನಕೆ ತಕ್ಕವನಾಗಿ ನೃಪನ ತಂ | ಬುಲಕೆ ಕೈಗೊಡುವರೇನೈ || ೩೪೨ ||

ದೃಢದಿ ಬಾರೆನ್ನೊಳು ಸಲಹುವೆ ನಿನ್ನನು | ಪೊಡವಿಯ ನೀನೆ ಆಳು ||
ಎಡದಲ್ಲಿ ಕುರುಸೇನೆ ಬಲದಿ ಪಾಂಡವರಿರಲ್ | ನಡುವೆ ಗದ್ದುಗೆಯನೇರು || ೩೪೩ ||

ಏನು ನಿನ್ನಂತರ್ಯವೆನಗರುಹೆನಲೆಂದ | ಭಾನುಜ ಕೈಮುಗಿದು ||
ಕ್ಷೆಣಿಪ ಕೌರವಗಳಿವು ಬಂತೆಂದು ನಿ | ಧಾನಿಸಿ ತಾ ತಿಳಿದು || ೩೪೪ ||

ಹರಿಯೆ ನೀನೆಂದುದು ಶ್ರುತಿವಚನಗಳೆಂಬು | ದರಿತೆ ನಾನೆಲ್ಲವನು ||
ವರ ರಾಮದೇವರಿಗೆಣೆಮಾಡಬೇಡೆನ್ನ | ನೆರೆ ವಿಹೀನನು ಕುಲದಿ || ೩೪೫ ||

ಪರಮ ದೂರ್ವಾಸಯತೀಶನಿತ್ತಿಹ ಮಂತ್ರೋ | ಚ್ಚರಣೆಯ ಗೆಯ್ದವಳು ||
ತರಣಿಧ್ಯಾನದಿ ನಿನ್ನ ಪಡೆದು ಭೀತಿಯಲಿ ಸ | ಚ್ಚರಿತೆ ಜಾಹ್ನವಿಗಿತ್ತಳು || ೩೪೬ ||

ಆ ಸಮಯದಿ ನಿನ್ನನಂಬಿಗ ಪಿಡಿದು ಭೂ | ಮೀಶ ಕೌರವಗಿತ್ತನು ||
ದೇಶದ ಜನರರಿಯದೆ ಸೂತಸುತನೆಂಬ | ರೈಸೆ ಸತ್ಕುಲಜ ನೀನು || || ೩೪೭ ||

ತಂದೆನ್ನ ಸಲಹಿದ ದಾತನಿಗೆರಡ ನಾ | ನಿಂದು ಯೋಚನೆಗೆಯ್ಯಲು ||
ಕುಂದಳೆ ಜಯಸಿರಿ ಮೆಚ್ಚುವಳೇ ರೂಢಿ | ವೃಂದಾರಕರು ನಗರೆ || ೩೪೮ ||

**ಭಾಮಿನಿ**

ಸರಸಿಜಾಂಬಕ ಕೇಳು ನಾಳಿನ |
ಧುರದೊಳೆನ್ನಯ ಶೌರ್ಯವೀಕ್ಷಿಸು |
ಹರುಷಗೊಳಿಸುವೆ ಮಾರಿಗೌತಣವಿತ್ತು ತೃಪ್ತಿಯಲಿ ||
ಶರಜ ಬಾಂಧವನಾಣೆ ನಿನ್ನೈ |

ವರನು ಕೊಲ್ಲದೆ ತವ ಪದಾಬ್ಜಕೆ |
ಹರಣಕಾಣಿಕೆ ಕೊಡುವೆ ಪ್ರತಿಮತವಿಲ್ಲ ತೆರಳೆಂದ || ೩೪೯ ||

**ವಾರ್ಧಕ**

ವೀರ ಕರ್ಣನ ನುಡಿಗೆ ಮೆಚ್ಚಿ ಭಾಪೆನುತಲಸು |
ರಾರಿ ಗಮಿಸಲ್ಕಿತ್ತಲಿನಜ ಮಂದಿರಕೆ ಬಂ |
ದಾ ರಾತ್ರಿಯಲಿ ನಿದ್ರೆಬಾರದತಿ ವ್ಯಸನದಲಿ ಕೌರವನ ಗುಣವ ನೆನೆದು ||
ಧೀರನಾ ಮರುದಿವಸ ರವಿವಾರದುದಯದಲಿ |
ಸಾರಿ ಗಂಗಾನದಿಯ ತಟಕೆ ಸ್ನಾನಾಂತರದಿ |
ಸೂರ್ಯಮಂತ್ರವ ಜಪಿಸುತರ್ಘ್ಯಮಂ ಪಿಡಿಯಲನಿತರೊಳಿಳಿದನಾದಿತ್ಯನು || ೩೫೦ ||

**ಕಂದ**

ಜನಕನನೀಕ್ಷಿಸುತಣುಗಂ |
ಘನತರ ಭಯಭಕ್ತಿಯಿಂದ ವಂದಿಸಲಾಗಂ ||
ಹಣೆಯಂ ತಾ ಪಿಡಿದೆತ್ತುತ |
ದಿನಪಂ ನಿಜಜಾತಗೆಂದನೀ ತೆರದೊಳಗಂ || ೩೫೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತರುಣ ಕೇಳ್ ನಿನ್ನವ್ವೆ ಕುಂತಿಯು | ಬರುವಳಸ್ತ್ರವ ಬೇಡುವರೆ ಸುರ |
ವರಗೆ ಕವಚವ ಹಿಂದೆ ಕೊಟ್ಟಿಹ | ತೆರದಿ ನೀನು || ೩೫೨ ||

ಭ್ರಾಂತಿಗೊಳಬೇಡೆನುತ ಕುವರನ | ಸಂತವಿಸಿ ರವಿ ಮರಳಲಿತ್ತಲು ||
ಕುಂತಿ ಬಂದಳು ಮಗನ ಬಳಿಗ | ತ್ಯಂತ ಮುದದಿ || ೩೫೩ ||

ಕಂಡು ನಮಿಸಿದ ತಾಯಿಯಂಘ್ರಿಗೆ | ದಂಡದಂತಿರೆ ಮಗನೆ ಬಾ ಬಾ ||
ಗಂಡುಗಲಿ ಬಾರೆನುತಲೆತ್ತಿದಳ್ | ಮಂಡೆಯನ್ನು || ೩೫೪ ||

ಹಣೆಯೊಳಾಸ್ಯವನಿರಿಸಿ ತಳ್ಕಿಸ | ಲನಿಬರಿಗೆ ನಯನಾಂಬು ತುಳುಕಲು ||
ವನಿತೆವೇಷದಿ ಗಂಗೆ ಬರಲಾ | ಕ್ಷಣದಿ ಕಂಡು || ೩೫೫ ||

ಅಘವಿನಾಶೆಗೆ ನಮಿಸಲೀರ್ವರ | ನೆಗಹಿ ಪಾಂಡವ ಜನನಿ ಹಸ್ತದಿ |
ಮಗನನೊಪ್ಪಿಸಿಕೊಟ್ಟು ನುಡಿದಳು | ಸುಗುಣೆಯೊಡನೆ || ೩೫೬ ||

**ಭಾಮಿನಿ**

ಕುಂತಿ ಕೇಳೌ ನಿನ್ನ ಪುತ್ರನ |
ನಿಂತುದಿನ ಕಾದಿರ್ದನಿಂದಿಗೆ |
ಸಂತು ನಾ ನಿನಗೆಂದ ಭಾಷೆಗಳೀ ಕುಮಾರಕನ ||
ಮುಂತೆ ಸಲಹಿಕೊಳೆನುತ ತೆರಳೆ ಕೃ |
ತಾಂತಸಹಜನುಸಿರ್ದ ನೀವ್ ಬಂ |
ದಂತರಂಗವಿದೇನು ಬೆಸಸೆಲೆ ತಾಯೆ ತನಗೆಂದ || ೩೫೭ ||

**ರಾಗ ಸಾಂಗತ್ಯ ರೂಪಕತಾಳ**

ಚೆಣ್ಣ ಕೇಳೆನಗೆ ನೀ ಹಿರಿಯ ನಂದನನಾಗಿ | ನಿನ್ನನುಜರಿಗರಿಯಾದ ||
ದುರ್ನೀತಿವಂತನ ಮರೆಹೊಕ್ಕು ಬದುಕುವು | ದಿನ್ನಾವ ನೀತಿಯೊ ಕಂದ || || ೩೫೮ ||

ಬಲು ಪರಾಕ್ರಮಶಾಲಿಯಾಗಿ ನೀನನ್ಯರಿ | ಗಳುಕುವ ವಿಧಿಯು ತಾನೇಕೆ ||
ಇಳೆಯಾಧಿಪತ್ಯವ ಕೈಗೊಂಡು ಸಹಜರ | ಸಲಹಿಕೋ ನೀನೆಂದಳಾಕೆ || ೩೫೯ ||

ಎನಲು ಮಿತ್ರಜನೆಂದ ನಿಮಗೆ ನಾ ಚೊಚ್ಚಲ | ತನಯನಹುದು ತಾಯೆ ನಿಮ್ಮ ||
ತನುಜರ್ಗೆ ಜ್ಯೇಷ್ಠನಾಗಿಹೆ ಪರರೋಲಗ | ವನುಕರಿಸಲು ಬಾರದಮ್ಮ || ೩೬೦ ||

ನಿನ್ನಣುಗರು ಪಗೆಗಳು ತನಗಹಿತರು | ಎನ್ನುವ ನುಡಿಯು ವಿವೇಕ ||
ಭಿನ್ನವಿಲ್ಲದೆ ರಾಜ್ಯವಾಳುವೆನೆಂದರೆ | ಎನ್ನ ನಿಂದಿಪುದು ಮೂರ್ಲೋಕ || ೩೬೧ ||

ಪೋಷಿಸಿದಧಿಪಗಾಪತ್ತಿನ ವೇಳೆಲಿ | ಮೋಸವ ಮಾಡಿ ನಾನಿನ್ನು ||
ಏಸು ದಿನವು ಬಾಳಿಕೊಂಡಿರಬೇಕವ್ವ | ಹೇಸಳೆ ಜಯಲಕ್ಷ್ಮಿ ತಾನು || ೩೬೨ ||

**ಭಾಮಿನಿ**

ಕಾಡಲಾಗದು ಎನ್ನೊಳೀ ನುಡಿ |
ಯಾಡಲಾಗದು ತಾಯೆ ಖತಿಯನು |
ಮಾಡಲಾಗದು ತಿಳುಹು ನೀ ನಡೆತಂದುದೇನೆನಲು ||
ನೋಡಿದಳು ಬಾಲಕನ ಗುಣಗಳ |
ಬಾಡಿದಳು ಹೃದಯಾಗ್ನಿತಾಪದಿ |
ಬೇಡಿದಳು ತೊಟ್ಟಂಬ ತೊಡದಿರು ಮಗನೆ ನೀನೆನುತ || ೩೬೩ ||

**ವಾರ್ಧಕ (ಅರ್ಧ)**

ಹರಿಯ ಮಾಯದಿ ಮಿತ್ರ ಸೂಚನೆಯ ಗೆಯ್ದುದಂ |
ಮರೆತು ನಂಬುಗೆ ಕೊಟ್ಟು ಕರ್ಣ ನಿಜಜನನಿಯಂ |
ತೆರಳಿಸಿ ನಿಜಾಲಯಕೆ ಬರಲಿತ್ತ ಕಾಂಚನಮಹಾರಥದಿ ಕಂಸಾರಿಯು || ||೩೬೪||

**ರಾಗ ಕಾಂಭೋಜ ಝಂಪೆತಾಳ**

[ಕುರುಪತಿಯ ಬಳಿಗಾಗಿ ಹರಿಯ ಕಳುಹಿದೆನಲ್ಲ ||
ಬರಲಿಲ್ಲ ಈವರೆಗೆಯೆನುತ ಧರ್ಮಜನು || ೩೬೫ ||

ಒಪ್ಪಿದನೊ ಕುರುವರನು ಇಲ್ಲ ಎಂಬುದ ಕೇಳಿ |
ಇಪ್ಪ ಬಗೆಯನು ಕಾಂಬೆನೆನುತ ತನ್ಮನದಿ || ೩೬೬ ||

ಅಗ್ರಜನ ನುಡಿ ಕೇಳಿ ಕಲಿಧನಂಜಯನೆಂದ |
ಶೀಘ್ರದಲಿ ಶ್ರೀಹರಿಯು ಬರುವನೆಂದೆನುತ || || ೩೬೭ ||

ತಮ್ಮನಾಡಿದ ನುಡಿಗೆ ತಾನೊಪ್ಪಿ ಬಹಳ |
ಹುಮ್ಮನಸಿನಿಂದಲಿರಲಿತ್ತ ಶ್ರೀಹರಿಯು || ೩೬೮ ||]

**ವಾರ್ಧಕ (ಅರ್ಧ)**

ತರಣಿತೇಜವ ನಿಲಿಸುತಂ ಬರೆ ಯುಧಿಷ್ಠಿರಂ |
ಪರಮ ಹರುಷವನಾಂತು ಸಹಜರಿಂದೊಡಗೂಡಿ |
ಚರಣಕೆರಗಲು ರಮಾರಮಣ ರಥವಿಳಿದು ಸಭೆಗಯ್ದಿ ಪದುಳದೊಳೆಂದನು || ||೩೬೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕುಮತಿ ಕೌರವ ರಣದಿ ರಾಜ್ಯವ | ನಿಮಗೆ ಕೊಡುತಿಹನಂತೆ ಸುಪರಾ |
ಕ್ರಮಿಗಳಾದರೆ ನೀವು ಕೊಂಬುದು | ಸಮರಮುಖದಿ || ೩೭೦ ||

ಆ ನರಾಧಿಪನೋಲಗದೊಳಪ | ಮಾನ ತನಗಾಯ್ತೆನಲು ತರಣಿಜ |
ಸೂನು ಮರುಗಲು ನುಡಿದನಾ ಪವ | ಮಾನಸುತನು || ೩೭೧ ||

ಶೌರಿಗಾದಪಮಾನಗಳು ಹೆ | ಮ್ಮಾರಿಗೌತಣವಾಯ್ತು ಮುಂದಿನ |
ಭಾರತದೊಳೆಂದಾಡುತಿರೆ ಕಂ | ಸಾರಿ ನುಡಿದ || || ೩೭೨ ||

ಅವಧಿವತ್ಸರವಿಲ್ಲ ನಾಳಿನ | ದಿವಸದೊಳಗೀ ಪೌರುಷವ ಕೌ |
ರವನ ಸರಿಸದಿ ತೋರಬಹುದೆಲೆ | ಪವನಜಾತ || ೩೭೩ ||

ಕಳುಹು ಲಿಖಿತವ ಭೂಪರಿಗೆ ಬೆಂ | ಬಲಕೆ ನಾನಿಹೆನ್ಯೆಸೆಕುರು ಮಂ |
ಡಲಕೆ ಪಯಣವ ಮಾಡಿ ನೀವಿ | ನ್ನಳುಕದೆನಲು || ೩೭೪ ||

**ಭಾಮಿನಿ**

ಬರೆಸಿ ಲಿಖಿತವ ಕೃಷ್ಣನಪ್ಪಣೆ |
ವೆರಸಿ ಮಣಿಹಾರರ ಯುಧಿಷ್ಠಿರ |
ಕರೆಸಿ ಕಳುಹಲು ತೋರ್ದರೋಲೆಯನಖಿಳ ರಾಯರಿಗೆ ||
ಧುರಕೆ ತುರಗ ವರೂಥ ಗಜ ಮೋ |
ಹರಕೆ ಕಟ್ಟಾಳುಗಳು ಸಹಿತಂ |
ಬರಕೆ ಕೆಂಧೂಳಡರಲಯ್ದಿದರಖಿಳ ಭೂಭುಜರು || ೩೭೫ ||

**ವಾರ್ಧಕ**

ವೀರ ದ್ರುಪದ ಶಿಖಂಡಿ ಸೃಂಜಯ ಶತಾನೀಕ |
ವೈರಾಟ ಕೇಕಯ ನೃಪಾಲ ಕುಂತೀಭೋಜ |
ಭೂರಮಣ ಕಾಶಿಪತಿ ಚೈದ್ಯ ಸಾತ್ಯಕಿ ಧೃಷ್ಟಕೇತು ಸೋಮಕಭೂಪರು ||
ಸೂರ್ಯಪೌತ್ರಗೆ ಮಿತ್ರರಾದರಸುಗಳ್ ತಮ್ಮ |
ವಾರಣ ತುರಂಗ ಸ್ಯಂದನ ಪದಾತಿಗಳ್ವೆದೆ |
ತೋರಲಾಹವಕಾಗಿ ಪೊಕ್ಕರೇಳಕ್ಷೋಹಿಣೀಸೈನ್ಯವಾಯ್ತೆಣಿಕೆಗೆ || ೩೭೬ ||

**ಭಾಮಿನಿ**

ಜನಪ ಕೇಳಿನ್ನುಳಿದ ಕಾಲಾ |
ಳೆಣಿಸಲೇತಕೆ ಕೃಷ್ಣರಾಯಗೆ |
ಮಣಿದ ನಾಯಕವಾಡಿಗಳನುಪಚರಿಸುತಿರಲಾಗ ||
ದನುಜರುಗಳಾರ್ಭಟೆಯೊಳಂದು |
ಬ್ಬಣವ ತಿರುಹುತ ಘೋರ ರೂಪದಿ |
ರಣಭಯಂಕರ ಕಲಿಘಟೋತ್ಕಚ ಬಂದು ಕಾಣಿಸಿದ || ೩೭೭ ||

**ರಾಗ ಅಷ್ಟಪದಿ ಮಾರವಿ ಏಕತಾಳ**

ಮಾರುತಜಾತಕು | ಮಾರಕ ಘೋರಾ ಕಾರದ ಕೌಣಪ | ವಾರವ ನೊಡಗೊಂ |
ಡಾರುಭಟಿಸುತಸು | ರಾರಿಯ ಯಮಜ ಸ |
ಮೀರಜ ಪಾರ್ಥರ ದೂರದಿ ಕಂಡಡ || ಗೆಡೆದನಾಗ || ೩೭೮ ||

ಆ ಕೌರವ ಭೂ | ಲೋಕವ ಸಾಮದಿ | ತಾ ಕೊಡದಿಹನವಿ | ವೇಕಗಳಾಯ್ತುರೆ |
ನೂಕುವೆ ಯಮಪುರ | ಕಾ ಕುಜನರ ಕರು |
ಣಾಕರನೊಲುಮೆಯೊ | ಳೀ ಕಲಹದೊಳೆಂ || ದಾಡುತಿರ್ದ || ೩೭೯ ||

ದಾನವನುಗ್ರವ | ಕ್ಷೆಣಿಪ ಕಾಲಜ | ಕಾಣುತವನ ಸ | ನ್ಮಾನಿಸಿ ತಮ್ಮಯ |
ಸೇನೆಗೆ ಧೊರೆಯಹ | ಜಾಣರಾರೆನಲು ನಿ |
ಧಾನಿಸಿ ದ್ರುಪದನ | ಸೂನುವ ನಿಶ್ಚಯ || ಗೆಯ್ದನು ಪಾರ್ಥ || ೩೮೦ ||

**ಭಾಮಿನಿ**

ಹರಿಯ ನೇಮದಿ ದ್ರುಪದಸುತಗನು |
ಕರಿಸಿದರು ದಳದೊಡೆತನವ ಭೂ |
ಸುರರ ಮಂತ್ರದಿ ಸತಿಯರಾರತಿ ಬೆಳಗಲುತ್ಸಹದಿ ||
ನೆರವಿಯಲಿ ಸಾರಿದರು ಭಟರಿಗೆ |
ಧುರದಿ ಧೃಷ್ಟದ್ಯುಮ್ನನಾಜ್ಞೆಯೊ |
ಳಿರವೆನುತ ನಿಸ್ಸಾಳ ತಂಬಟೆ ಪಟಹರಭಸದಲಿ || ೩೮೧ ||

ಕ್ಷೆಣಿಪತಿ ಕೇಳಾಗ ರಾಮ | ಧ್ಯಾನದಲಿ ನಡೆತಂದು ಮುಖ್ಯ |
ಪ್ರಾಣ ಕಮಲಾಧವಗೆ ಮೈಯಿಕ್ಕಿರಲು ಪದುಳಿಸುತ ||
ನೀನು ಪಾರ್ಥನ ತೇರಸಿಂಧದಿ | ಸಾನುರಾಗದಿ ಮಂಡಿಸೆಂದಾ |
ಸೇನೆ ತೆರಳಲೆನಲ್ಕೆ ಪೊರಟಯ್ದಿತು ಸುಲಗ್ನದಲಿ || ೩೮೨ ||

**ರಾಗ ಸುರುಟಿ ಮಟ್ಟೆತಾಳ**

ಬಂದರು ರಣಕೆ | ಸಮರಾಂಗಣಕೆ || ಪ ||

ಅನಿಲಗತಿಯ ಮೀರುವ ಹಯ | ಕುಣಿವ ಮದೇಭಗಳ ||
ನಿನದದಿ ಪೊಂದೇರ್ಗಳ ಸಂ | ದಣಿಗಳ ಕಾಲಾಳ || ಬಂದರು || ೩೮೩ ||

ಚಿಮ್ಮುತ ಖಡ್ಗ ಸರಳ್ಗಳ | ಮುಮ್ಮೊನೆಗಳ ಮಾಡಿ ||
ಕಾರ್ಮುಕಗಳನುರೆ ತಿದ್ದುತ | ತಮ್ಮೊಳು ಮಾತಾಡಿ || ಬಂದರು || ೩೮೪ ||

ಸ್ವಾಮಿಯ ರಥದಪರಾಂಗದಿ | ಭೂಮಿಪ ಧರ್ಮಜನ ||
ಸಾಮಜವರದರಿಕ್ಕೆಲ ನರ | ಭೀಮಾದ್ಯರ ಗಡಣ || ಬಂದರು || ೩೮೫ ||

ಬೀಸುವ ಚಾಮರ ವಾದ್ಯದ | ಘೋಷದಿ ನರ್ತಿಸುತ ||
ವೇಶ್ಯೆಯರಯ್ತರೆ ನೋಡಿ ವಿ | ಲಾಸದಿ ಮನವಿಡುತ || ಬಂದರು || ೩೮೬ ||

ಮಾರ್ಬಲವೀಪರಿಯಲಿ ನಡೆ | ವಾರ್ಭಟೆಗಿಳೆಬಿರಿಯೆ ||
ಉರ್ಬಸವಾಯಿತು ಕಮಠಗೆ | ಪರ್ವತಗಳು ಜರಿಯೆ || ಬಂದರು || ೩೮೭ ||

**ಭಾಮಿನಿ**

ಎಲೆ ಧರಾಧಿಪ ಕೇಳು ಕುರುಮಂ |
ಡಲದಿ ಪಶ್ಚಿಮದೆಸೆಯೊಳ್ ಯಮಜನ |
ಬಲಸಮುದ್ರಕೆ ಬೇರೆಬೇರೆಸಗಿದರು ಮಂದಿರವ ||
ನಳಿನಭವಪಿತ ಭಕ್ತವತ್ಸಲ |

ಕಲುಷಹರ ಶ್ರೀವೆಂಕಟೇಶನ |
ನೊಲಿದು ಪೂಜಿಸುತಿರ್ದರವನಿಪರೆಂದನಾ ಮುನಿಪ || ೩೮೮ ||

**ಶ್ರೀಕೃಷ್ಣಸಂಧಾನ ಸಂಪೂರ್ಣ**